॥ ಓಂ ॥

# ಶ್ರೀಗುರುಚರಿತಾಮೃತ

## ಶ್ರೀಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳವರ ಜೀವನಚರಿತ್ರೆ



ಶ್ರೀಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳವರು

ಹುಟ್ಟಿದ್ದು : ೫-೧-೧೮೮೦ ಹೊಳೆನರಸೀಪುರ ಮಹಾಸಮಾಧಿ : ೫-೮-೧೯೭೫

## ಶ್ರೀ ಶ್ರೀ ಸಚ್ಚಿದಾನಂದೇಂದ್ರಸರಸ್ವತಿಸ್ವಾಮಿಗಳವರು
## ಕನ್ನಡಕ್ಕೆ ಭಾಷಾಂತರಿಸಿದ ಮತ್ತು ಸ್ವತಂತ್ರರಚಿತ ಕೆಲವು ಪುಸ್ತಕಗಳ ವಿವರ

| ಕನ್ನಡ: | ಬೆಲೆ |
| --- | --- |
| ದಶೋಪನಿಷದ್ಭಾಷ್ಯಗಳು ಶಂಕರ ಭಾಷ್ಯ, (ಮೂಲ, ಅನುವಾದ, ಟಿಪ್ಪಣಿ, ಸಹಿತ) | - |
| ಶ್ರೀಮದ್ಭಗವದ್ಗೀತಾಭಾಷ್ಯ (ಮುದ್ರಣದಲ್ಲಿದೆ) | ೨೪೦ರೂ. |
| ಬ್ರಹ್ಮಸೂತ್ರಭಾಷ್ಯ (ಬಾದರಾಯಣಕೃತ ವೇದಾಂತಸೂತ್ರಗಳ ಶಂಕರಭಾಷ್ಯ-ಅನುವಾದ ಸಹಿತ ೧-೨ನೆಯ ಭಾಗಗಳು) (ಮುದ್ರಣದಲ್ಲಿದೆ) | |
| ನೈಷ್ಕರ್ಮ್ಯಸಿದ್ಧಿ (ಸುರೇಶ್ವರಾಚಾರ್ಯವಿರಚಿತ) | ೬೫ರೂ. |
| ಉಪದೇಶಸಾಹಸ್ರಿ (ಪದ್ಯ-ವಿವರಣೆ ಸಹಿತ) | ೧೦೦ರೂ. |
| ಪ್ರಕರಣ ಗ್ರಂಥಗಳು (ವಿವೇಕಚೂಡಾಮಣಿ, ವಿಷ್ಣುಸಹಸ್ರನಾಮ ಸ್ತೋತ್ರ, ಸರ್ವವೇದಾಂತ ಸಿದ್ಧಾಂತ ಸಾರ ಸಂಗ್ರಹ, ಸನತ್ಸುಜಾತೀಯ etc.) | - |
| ಪಂಚಪಾದಿಕಾ ೧ ನೆಯ ಭಾಗ (ಕನ್ನಡಾನುವಾದ) | ೫ರೂ. |

## ಸ್ವತಂತ್ರರಚಿತ ಗ್ರಂಥಗಳು

| | |
| --- | --- |
| ಅಧ್ಯಾತ್ಮವೆಂದರೇನು (ಅಧ್ಯಾತ್ಮ-ಎಂಬ ಮಾತಿನ ವಿವರಣೆ) | ೨ರೂ. |
| ವೇದಾಂತ ಬಾಲಬೋಧೆ (ಪ್ರಾತಃಸ್ಮರಣ ಸ್ತೋತ್ರ ವ್ಯಾಖ್ಯಾನ) | ೬ರೂ. |
| ಸದ್ಗುರುವಿನ ಅನುಗ್ರಹ (ಒಂದು ಚಿಕ್ಕ ಪ್ರಬಂಧ) | ೧ರೂ. |
| ಶಂಕರಮಹಾಮನನ (ಶಂಕರವೇದಾಂತದ ಕಿರುಪರಿಚಯ) | ೩ರೂ. |
| ಉಪನಿಷತ್ತುಗಳ ಮೊದಲನೆಯ ಪರಿಚಯ (ಕಥಾಸಂದರ್ಭ ಸಮೇತ) | ೮ರೂ. |
| ವೇದಾಂತ ಪ್ರವೇಶಿಕೆ (ಅದ್ವೈತ ಪಂಚರತ್ನ- ಸ್ತೋತ್ರದ ವ್ಯಾಖ್ಯಾನ) | ೮ರೂ. |
| ವೇದಾಂತ ಕಥಾವಳಿ (ತತ್ತ್ವವಿಚಾರ ಸಹಿತವಾದ ೨೧ ಕಥೆಗಳು) | ೬ರೂ. |
| ಸರ್ವೇಷ್ಟಸಿದ್ಧಿ (ಎಲ್ಲಾ ಕೋರಿಕೆಗಳು ನೆರವೇರುವ ಬಗೆ) | ೬ರೂ. |
| ಅಧ್ಯಾತ್ಮ ಶಾಸ್ತ್ರ ಪರಿಭಾಷೆ (ಪಾರಿಭಾಷಿಕ ಶಬ್ದಗಳ ವಿವರಣೆ) | ೨ರೂ. |
| ವೇದಾಂತವೂ ಆಧುನಿಕಜೀವನವೂ (ಮೂರು ಉಪನ್ಯಾಸಗಳು) | ೬ರೂ. |
| ಬ್ರಹ್ಮವಿದ್ಯೆ (ಬ್ರಹ್ಮವಿದ್ಯೆಯ ಸಾಧನ-ಸಿದ್ಧಾಂತಗಳ ರಹಸ್ಯ) | ೬ರೂ. |
| ಅನುಭವಪರ್ಯಂತವಾದ ಆತ್ಮವಿಚಾರ (ಅವಸ್ಥಾತ್ರಯಪ್ರಕ್ರಿಯೆ) | ೬ರೂ. |
| ಶಂಕರವೇದಾಂತದ ಮೂಲತತ್ತ್ವಗಳು (ಪ್ರಧಾನಪ್ರಕ್ರಿಯೆಯ ೨೧ ಉಪನ್ಯಾಸಗಳು) | ೧೫ರೂ. |
| ಶಂಕರಭಗವತ್ಪಾದರ ಸರ್ವಸಮ್ಮತೋಪದೇಶಗಳು (೫೪ ಉಪನ್ಯಾಸಗಳು) | ೪೦ರೂ. |

(ಮುಂದುವರೆದಿದೆ)

ಅಧ್ಯಾತ್ಮಗ್ರಂಥಾವಳಿ

# ಶ್ರೀಗುರುಚರಿತಾಮೃತ


ಲೇಖಕರು:

ಅಧ್ಯಾತ್ಮವಿದ್ಯಾಪ್ರವೀಣ

**ಹೆಚ್. ಎಸ್. ಲಕ್ಷ್ಮೀನರಸಿಂಹಮೂರ್ತಿ**


**ಕ್ರಮಾಂಕ ೧೬೦**


ಪ್ರಕಾಶಕರು:

**ಅಧ್ಯಾತ್ಮಪ್ರಕಾಶಕಾರ್ಯಾಲಯ**

ಹೊಳೆನರಸೀಪುರ

1997

ಒಂದನೆಯ ಮುದ್ರಣ, 1973
1000 ಪ್ರತಿಗಳು

ಎರಡನೆಯ ಮುದ್ರಣ, 1997
2000 ಪ್ರತಿಗಳು

ಮುದ್ರಣಕಾರರು :
ಲೇಸರ್ ಗ್ರಾಫಿಕ್ಸ್
ನಂ.280, ಚೆಂಗಯ್ಯ ಲೇಔಟ್
ಒಂದನೇ ಮುಖ್ಯರಸ್ತೆ, ತ್ಯಾಗರಾಜನಗರ
ಬೆಂಗಳೂರು - 28. ದೂರವಾಣಿ: 6675369

# ಮುನ್ನುಡಿ

ಪರಮಪೂಜ್ಯ ಬ್ರಹ್ಮೀಭೂತ ಶ್ರೀಶ್ರೀಸಚ್ಚಿದಾನಂದೇಂದ್ರಸರಸ್ವತೀಮಹಾಸ್ವಾಮಿಗಳು, **ಅಧ್ಯಾತ್ಮಪ್ರಕಾಶಕಾರ್ಯಾಲಯ, ಹೊಳೆನರಸೀಪುರ** – ಈ ಮಹನೀಯರ ಜೀವನಚರಿತ್ರೆಯನ್ನು **'ಕಾರ್ಯಾಲಯದ ಇತಿಹಾಸ'** ಎಂಬ ಹೆಸರಿನಿಂದ 1973ರಲ್ಲಿ ಕಾರ್ಯಾಲಯದವರು ಪ್ರಕಾಶಗೊಳಿಸಿದ್ದರು. ಅನಂತರ 1975ನೇ ಆಗಸ್ಟ್ ಮಾಹೆಯಲ್ಲಿ ಶ್ರೀಶ್ರೀಗಳವರು ಬ್ರಹ್ಮೀಭೂತರಾದರು. ಅವರ ಮಹಾಸಮಾಧಿಯನ್ನು ಅಧ್ಯಾತ್ಮಪ್ರಕಾಶಕಾರ್ಯಾಲಯದ ಆವರಣದಲ್ಲಿರುವ ಶ್ರೀದಿಗ್ವಿಜಯರಾಮದೇವರ ದೇವಾಲಯದ ಪಕ್ಕದಲ್ಲಿಯೇ ಮಾಡಲಾಯಿತು. ಶ್ರೀಶ್ರೀಗಳವರು ತಮ್ಮ ಜೀವಿತಕಾಲದಲ್ಲಿಯೇ ಈ ಉದ್ದೇಶವನ್ನು ಶಿಷ್ಯವೃಂದದಲ್ಲಿ ಪ್ರಕಟಿಸಿದ್ದರು. ಅದರಂತೆ ಮಹಾಸಮಾಧಿಯನ್ನು ನಿರ್ಮಿಸಿ ಪ್ರತಿನಿತ್ಯವೂ ಪೂಜಾದಿಗಳನ್ನೂ ಪ್ರತಿವರ್ಷವೂ ಆಷಾಢ ಬಹುಳ ತ್ರಯೋದಶೀ ದಿನ ಆರಾಧನೆಯನ್ನೂ ಕಳೆದ 22 ವರ್ಷಗಳಿಂದಲೂ ನೆರವೇರಿಸಿಕೊಂಡು ಬರಲಾಗುತ್ತಿದೆ.

ಈ ಹಿಂದೆ ಪ್ರಕಟಿಸಿದ್ದ **'ಕಾರ್ಯಾಲಯದ ಇತಿಹಾಸ'** ಗ್ರಂಥದ ಪ್ರತಿಗಳೆಲ್ಲವೂ ಮಾರಾಟವಾಗಿದ್ದು ಭಕ್ತರುಗಳು ಶ್ರೀಶ್ರೀಗಳವರ ಜೀವನಚರಿತ್ರೆಯ ಪುಸ್ತಕವನ್ನು ಕೇಳುತ್ತಿದ್ದುದರಿಂದ ಈಗ ಗ್ರಂಥದ ಹೆಸರನ್ನು ಬದಲಾಯಿಸಿ ಹಾಗೂ ಶ್ರೀಶ್ರೀಗಳವರ ಮಹಾಸಮಾಧಿಯವರೆಗಿನ ವೃತ್ತಾಂತಗಳನ್ನೂ ಅಳವಡಿಸಿ **'ಶ್ರೀಗುರುಚರಿತಾಮೃತ'** ವೆಂಬ ಹೆಸರಿನಿಂದ ಈಗ ಪ್ರಕಟಿಸಲಾಗಿದೆ. ಇದರೊಡನೆಯೇ ಕಾರ್ಯಾಲಯದ ಇತಿಹಾಸವೂ ಬೆರೆತುಕೊಂಡಿದೆ. ಹಿಂದಿನ ಮುದ್ರಣ ಗ್ರಂಥವನ್ನು ಮತ್ತೊಮ್ಮೆ ಶೋಧಿಸಿ ನ್ಯೂನಾತಿರೇಕಗಳನ್ನು ಸರಿಪಡಿಸಿ ಸಾಧ್ಯವಾದಮಟ್ಟಿಗೂ ಸಂಸ್ಕರಿಸಿ ಈ ಮುದ್ರಣವನ್ನು ಹೊರತರಲಾಗಿದೆ. ಮಹಾಜನರು ಎಂದಿನಂತೆ ಪ್ರೋತ್ಸಾಹಿಸಬೇಕಾಗಿ ಸವಿನಯಪ್ರಾರ್ಥನೆಗಳು.

ಶ್ರೀಶ್ರೀಗಳವರನ್ನು ಕುರಿತ ಈ ಗ್ರಂಥದಲ್ಲಿ ಯಾವದೇ ಮಹಿಮೆ-ಪವಾಡ-ಸಿದ್ಧಿಗಳ ಪ್ರಸ್ತಾಪವಿರುವದಿಲ್ಲ. ಅವರು ಎಲ್ಲರಂತೆಯೇ ಸಾಮಾನ್ಯಮನುಷ್ಯರಾಗಿ ಬಾಳಿದರೂ ಜೀವನದ ಬಹುಭಾಗವನ್ನು ಅಧ್ಯಾತ್ಮ ವಿಚಾರಕ್ಕಾಗಿಯೇ ವಿನಿಯೋಗಿಸಿ ಭಗವದನುಗ್ರಹದಿಂದ ಆಯಾ ಕಾಲಕ್ಕೆ ಒದಗಿದ ಘಟನೆಗಳನ್ನೆಲ್ಲ ಅಧ್ಯಾತ್ಮ ಸಾಧನೆಗೇ ಪರಿವರ್ತಿಸಿಕೊಂಡು ಕನ್ನಡ ನಾಡಿನ ಜನರ ಕಲ್ಯಾಣಕ್ಕಾಗಿ ಕನ್ನಡ ಭಾಷೆಯಲ್ಲಿಯೇ ಸುಮಾರು 160 ಅಧ್ಯಾತ್ಮಗ್ರಂಥಗಳನ್ನು ವಿರಚಿಸಿ ಪ್ರಕಟಿಸಿದರು. **'ಅಧ್ಯಾತ್ಮಪ್ರಕಾಶ'** ವೆಂಬ ಮಾಸಪತ್ರಿಕೆಯನ್ನು 45 ವರ್ಷಗಳ ಕಾಲ ನಿರಂತರವಾಗಿ ನಡೆಯಿಸಿದರು. ಅವರ ಅನುಗ್ರಹಾಶೀರ್ವಾದಗಳಿಂದ ಪತ್ರಿಕೆಯು ಈಗಲೂ

ಪ್ರಕಟವಾಗುತ್ತಿದ್ದು ಅಧ್ಯಾತ್ಮ ವಿಚಾರಪ್ರಿಯರ ಮೆಚ್ಚುಗೆಯನ್ನು ಗಳಿಸಿದೆ. ಕಾರ್ಯಾಲಯವು ಅವರ ಕೃತಿಗಳನ್ನು ಮತ್ತೆಮತ್ತೆ ಪ್ರಕಟಿಸುತ್ತಿದೆ. ಶ್ರೀಶ್ರೀಗಳವರು ಸಂಸ್ಕೃತ-ಇಂಗ್ಲಿಷ್ ಭಾಷೆಗಳಲ್ಲಿಯೂ ಬರೆದಿರುವ ಸುಮಾರು 40 ಗ್ರಂಥಗಳು ದೇಶ- ವಿದೇಶಗಳಲ್ಲೆಲ್ಲ ಪ್ರಚಾರವಾಗಿದ್ದು ಅಧ್ಯಾತ್ಮವಿಚಾರಕರ ಹಸಿವನ್ನು ಅಡಗಿಸಿವೆ. ಹೀಗೆ ಸರಸ್ವತೀಸೇವೆಯನ್ನೇ ಜೀವನದ ತಪಸ್ಸಾಗಿ ಸ್ವೀಕರಿಸಿ ಗ್ರಂಥರಚನೆ, ಪ್ರವಚನ, ಉಪನ್ಯಾಸಾದಿಗಳ ಮೂಲಕ ಮಾಡುತ್ತಾ 96 ವರ್ಷಗಳ ಪೂರ್ಣಜೀವನವನ್ನು ಸಾರ್ಥಕಗೊಳಿಸಿಕೊಂಡಿರುವ ಶ್ರೀಶ್ರೀಗಳವರ ಜೀವನಾದರ್ಶವನ್ನು ವಾಚಕರು ಈ ಗ್ರಂಥವನ್ನು ಓದಿಯೇ ತಿಳಿಯಬೇಕು. ಸುಪ್ರಸಿದ್ಧ ಕನ್ನಡ ಸಾಹಿತಿಗಳಾಗಿದ್ದ **ದಿ|| ಡಿ. ವಿ. ಗುಂಡಪ್ಪನವರು** ಶ್ರೀಶ್ರೀಗಳವರನ್ನು **'ಪುರುಷಸರಸ್ವತಿ'** ಎಂದೇ ಕರೆದಿದ್ದರು. ಇಂಥಮಹನೀಯರ ದಿವ್ಯಚರಿತ್ರೆಯನ್ನು ಓದಿ ವಾಚಕರು ಧನ್ಯರಾಗಬೇಕೆಂದು ಪ್ರಾರ್ಥಿಸಲಾಗಿದೆ.

ಕಾರ್ಯಾಲಯದ ಉಳಿದ ಪ್ರಕಟನೆಗಳಂತೆಯೇ ಈ ಗ್ರಂಥವನ್ನೂ ವಾಚಕರು ಬರಮಾಡಿಕೊಂಡು ಪ್ರೋತ್ಸಾಹಿಸಬೇಕಾಗಿ ಬೇಡಿದೆ.

ಇತಿ-ಸಜ್ಜನ ವಿಧೇಯ,

ಹೊಳೆನರಸೀಪುರ
5.1.1997

**ಹೆಚ್. ಎಸ್. ಲಕ್ಷ್ಮೀನರಸಿಂಹಮೂರ್ತಿ**
ಲೇಖಕ ಹಾಗೂ ಅಧ್ಯಾತ್ಮಗ್ರಂಥಾವಳಿಯ ಸಂಪಾದಕ

ವಿದ್ಯಾಲಂಕಾರ, ಶಾಸ್ತ್ರಚೂಡಾಮಣಿ, ಗಾನಕಲಾರತ್ನ, ವೇದಾಂತನಿಧಿ
**ಪ್ರೊ॥ ಸಾ. ಕೃ. ರಾಮಚಂದ್ರರಾವ್**
305, 6ನೇಕ್ರಾಸ್, 1ನೇ ಬ್ಲಾಕ್, ಜಯನಗರ, ಬೆಂಗಳೂರು - 560 011
ದೂರವಾಣಿ : 6631957

# ಮುನ್ನುಡಿ

ಪರಮಪೂಜ್ಯ **ಶ್ರೀಶ್ರೀ ಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳು** ಶರೀರಧಾರಣೆ ಮಾಡಿದ್ದು 1880ರಲ್ಲಿ; ಕೀರ್ತಿಶೇಷರಾದದ್ದು 1975ರಲ್ಲಿ. ಇನ್ನು ನಾಲ್ಕು ವರ್ಷಗಳಿದ್ದಿದ್ದರೆ ಶತಾಯುಷಿಗಳಾಗುತ್ತಿದ್ದರು. ಇಷ್ಟು ದೀರ್ಘವಾದ ಜೀವಿತಾವಧಿಯಲ್ಲಿ ಆತ್ಮೋದ್ಧಾರವನ್ನೂ ಲೋಕೋದ್ಧಾರವನ್ನೂ ಸಾಧಿಸಿಕೊಂಡು ಕೃತಾರ್ಥರಾದರು. "**ಆ ಸುಪ್ತೇರಾ ಮೃತೇಃ ಕಾಲಂ ನಯೇದ್ವೇದಾಂತಚಿಂತಯಾ**" ಎನ್ನುವ ಮಾತಿಗೆ ಪ್ರತ್ಯಕ್ಷನಿದರ್ಶನವಾಗಿ ಬದುಕಿನ ಎಲ್ಲ ಕಾಲವನ್ನೂ ಕಳೆದರು. ಆತ್ಮೋದ್ಧಾರವೆನ್ನುವುದು ಪಾರಮಾರ್ಥಿಕವಾದ ಅರ್ಥದಲ್ಲೇ! ಬದುಕಿನುದ್ದಕ್ಕೂ ಕಷ್ಟಕಾರ್ಪಣ್ಯಗಳೇ, ಎಡರು ತೊಡರುಗಳೇ. ಆದರೆ ಇವೆಲ್ಲವನ್ನೂ ಮೆಟ್ಟಿನಿಂತು, ಯಾರ ವಿರೋಧಕ್ಕೂ ಮಣಿಯದೆ, ಹಿಡಿದ ಪಟ್ಟು ಬಿಡದೆ, ಅಂಜದೆ ಅಳುಕದೆ ಗುರಿಯನ್ನು ಸಾಧಿಸಿದ ಧೀರಚೇತನ ಅವರದ್ದು. ಅವರು ತಮ್ಮೆದುರು ಇರಿಸಿಕೊಂಡ ಗುರಿಯೂ ಆಧ್ಯಾತ್ಮಿಕವಾದುದೇ, ಲೋಕಹಿತೈಷಿಯಾದದ್ದೇ.

ಅವರ ಆತ್ಮೋದ್ಧಾರದ ವಿಚಾರವಾಗಿ ಇತರರು ಹೇಳಬಹುದಾದುದೇನು? ಅವರನ್ನು ಬಲ್ಲವರಿಗೆ ಅವರು **ಋಷಿಸದೃಶರೇ.** ಗೃಹಸ್ಥಜೀವನದಲ್ಲೂ ಪರಿಶುದ್ಧರು, ಉಪಶಾಂತರು; **ಸಂನ್ಯಾಸಿಗಳಾದಮೇಲಂತೂ** ದಿಟವಾಗಿ **ಪರಮಹಂಸಸ್ವರೂಪರೇ.** ಬದುಕಿನ ಆರಂಭದಿನಗಳಿಂದಲೂ ಅವರಿಗೆ ಸಾಧುಸಜ್ಜನರ ಸಹವಾಸ, ಸಂಪರ್ಕಗಳು ಒದಗಿದವು; ಮುಂದೆ ವಿಚಾರಶೀಲವೇದಾಂತಿಗಳೂ ಸದಾಚಾರಸಂಪನ್ನರೂ ಆಗಿದ್ದ **ವಿ. ಸುಬ್ರಹ್ಮಣ್ಯಯ್ಯರ್** ಮತ್ತು **ಕೆ. ಎ.** ಕೃಷ್ಣಸ್ವಾಮಿ ಅಯ್ಯರಂಥವರ ಮಾರ್ಗದರ್ಶನ ದೊರಕಿತು. **ಹೊಸಕೆರೆ** ಚಿದಂಬರಯ್ಯನವರ ಗೆಳೆತನದಿಂದಾಗಿ **ಕುರ್ತುಕೋಟಿ ಮಹಾಭಾಗವತರ** ಸೇವೆಯೂ, **ಗೋಂದಾವಳಿ ಶ್ರೀ ಬ್ರಹ್ಮಚೈತನ್ಯಸದ್ಗುರುಮಹಾರಾಜರಿಂದ** ಮಂತ್ರೋಪದೇಶವೂ ದೊರೆತವು. **ಹಾನಗಲ್ಲು ವಿರೂಪಾಕ್ಷಶಾಸ್ತ್ರಿಗಳಂಥ** ಪಂಡಿತರ ಬಳಿ ಶಾಸ್ತ್ರಪಾಠಮಾಡುವ ಅವಕಾಶವೂ ಸಿಕ್ಕಿತು. ಇವೆಲ್ಲ ದೈವಾನುಕೂಲದ ನಿದರ್ಶನಗಳೇ. ದೊರೆತ ಅವಕಾಶಗಳನ್ನೆಲ್ಲ ಸದುಪಯೋಗಪಡಿಸಿಕೊಂಡುದು ಇವರ ಪುರುಷಕಾರ.

ಇನ್ನು ಇವರ ಲೋಕೋದ್ಧಾರದ ಸಾಧನೆಯಲ್ಲಿ ಎದ್ದುಕಾಣುವ ವಿವರಗಳು ಎರಡು. **ಅಧ್ಯಾತ್ಮಪ್ರಕಾಶಕಾರ್ಯಾಲಯದ ಸ್ಥಾಪನೆ** ಒಂದು; ಕನ್ನಡದಲ್ಲಿ ವಿಪುಲವಾದ **ವೇದಾಂತವಾಙ್ಮಯದ ನಿರ್ಮಾಣ** ಎರಡನೆಯದು. ಅಧ್ಯಾತ್ಮ ಮತ್ತು ಅಧಿಭೂತ ಇವೆರಡರ ಸೆಣಸಾಟದಲ್ಲಿ ಅಧ್ಯಾತ್ಮ ಸೋತಿರುವುದನ್ನು ಅವರು ಮನಗಂಡು, ಅಧ್ಯಾತ್ಮದ ಸ್ವಾರಸ್ಯವನ್ನೂ ಅಗತ್ಯವನ್ನೂ ಜನರಿಗೆ ಮನಗಾಣಿಸಲು, ಅಧ್ಯಾತ್ಮಪ್ರಕಾಶನಕ್ಕಾಗಿ ಕಾರ್ಯಾಲಯವೊಂದನ್ನು ಏರ್ಪಡಿಸಿದರು. 1920 ರಷ್ಟು ಹಿಂದೆ ಮೈದಳೆದ ಈ ಸಂಸ್ಥೆ ಇಂದಿಗೂ ಕಾರ್ಯಪ್ರವೃತ್ತವಾಗಿರುವುದು ಸದ್ಯದ ಪರಿಸ್ಥಿತಿಯಲ್ಲಿ ಸೋಜಿಗವೆಂದೇ ಹೇಳಬೇಕು. ಹೊಳೆನರಸೀಪುರ ಮತ್ತು ಬೆಂಗಳೂರುಗಳಲ್ಲಿ ಈ ಸಂಸ್ಥೆಯ ಶಾಖೆಗಳು ಮಾಡುತ್ತಿರುವ ಕೆಲಸದ ಹೆಗ್ಗಳಿಕೆಯನ್ನು ಎಲ್ಲರೂ ಬಲ್ಲರು. ಇವು ಎಷ್ಟು ಜನಪ್ರಿಯವಾಗಿವೆಯೆಂಬುದನ್ನಾಗಲಿ, ವೇದಾಂತದ ಪ್ರಚಾರಕಾರ್ಯದಲ್ಲಿ ಎಷ್ಟು ನಿಷ್ಠೆಯಿಂದ ತೊಡಗಿವೆಯೆಂಬುದನ್ನಾಗಲಿ ಬೇರೆ ಹೇಳಬೇಕಾಗಿಯೇ ಇಲ್ಲ. ಸ್ಥಾಪಕರ ಸಂಕಲ್ಪಶುದ್ಧಿಗೆ ಬೇರೊಂದು ನಿದರ್ಶನವೂ ಬೇಕಾಗಿಲ್ಲ. ಅವರ ಸಾಕ್ಷಾತ್ ಶಿಷ್ಯರೇ ಆಗಿರುವ ಹೆಚ್. ಎಸ್. ಲಕ್ಷ್ಮೀನರಸಿಂಹಮೂರ್ತಿಗಳು ಹೊಳೆನರಸೀಪುರದಲ್ಲೂ, ಕೆ.ಜಿ. ಸುಬ್ರಾಯ ಶರ್ಮರು ಬೆಂಗಳೂರಿನಲ್ಲೂ ಗುರುಗಳ ಕೆಲಸವನ್ನು ಅಚ್ಚುಕಟ್ಟಾಗಿ ನಿರ್ವಹಿಸುತ್ತಿದ್ದಾರೆ.

ಈ ಕಾರ್ಯಾಲಯದ ಆಶ್ರಯದಲ್ಲಿ ಶ್ರೀಗಳವರು **ಅಧ್ಯಾತ್ಮಪ್ರಕಾಶ** ಮಾಸಪತ್ರಿಕೆಯೊಂದನ್ನೂ ಹೊರತರುವ ಕೆಲಸವನ್ನು 1923 ರಲ್ಲಿಯೇ ಕೈಗೊಂಡರು. ಅಧ್ಯಾತ್ಮವಿದ್ಯೆಯೆಂಬ ಹೆಮ್ಮರದ ತಾಯಿಬೇರು ವೇದಾಂತ; ವೇದಾಂತದ ನೆಲೆಮನೆ ಉಪನಿಷತ್ತುಗಳು. ಉಪನಿಷತ್ತುಗಳ ಆಧಾರದ ಮೇಲೆ ಸಿದ್ಧವಾಗಿರುವ ಶಾಸ್ತ್ರಪ್ರಕ್ರಿಯೆಯ ಮೂಲ ಮತ್ತು ಪ್ರಮೇಯಗಳನ್ನೆಲ್ಲ ಕನ್ನಡಜನಕ್ಕೆ ಪರಿಚಯಮಾಡಿಕೊಡುವ ಉದ್ದೇಶ ಈ ಪತ್ರಿಕೆಯದು. ನಡುನಡುವೆ ಆಗಾಗ ನಿಂತರೂ, ಮತ್ತೆ ಚೇತರಿಸಿಕೊಂಡು ಈ ಪತ್ರಿಕೆಯು ಇಂದಿಗೂ ಉಳಿದುಕೊಂಡು ಬಂದಿದೆ. ಈಗ ಅದರ **ಅರವತ್ತಾರನೆಯ** ಸಂಪುಟ ನಡೆಯುತ್ತಿದೆ. ಅಧ್ಯಾತ್ಮವಿಚಾರಗಳಿಗೇ ಮೀಸಲಾದ ಒಂದು ಪತ್ರಿಕೆ ಹೀಗೆ ತಲೆಯೆತ್ತಿ ನಿಂತಿರುವುದು ಪತ್ರಿಕಾಪ್ರಪಂಚದಲ್ಲೊಂದು ಪವಾಡವೇ ಎನ್ನಬಹುದು.

ಅಧ್ಯಾತ್ಮಪ್ರಕಾಶಕಾರ್ಯಾಲಯವನ್ನು ಶ್ರೀ ಶ್ರೀಗಳವರು ಮೊದಲು ಸ್ಥಾಪಿಸಿದ್ದು ಬೆಂಗಳೂರಿನಲ್ಲೇ; ಸುಮಾರು ಹದಿನೆಂಟು ವರ್ಷಗಳ ತರುವಾಯ ಹೊಳೆನರಸೀಪುರಕ್ಕೆ ಸಂದಿತು. ಬೆಂಗಳೂರು ಮೊದಲಿನಿಂದಲೂ ರಾಜಕೀಯ, ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಕೇಂದ್ರವೇ; ಇಡೀ ನಾಡಿನಲ್ಲಿನ ಪ್ರಮುಖನಗರಗಳಲ್ಲಿ ಇದೊಂದು. ಇಲ್ಲಿನ ಅಗತ್ಯವನ್ನು ಮನಗಂಡು ಶ್ರೀಗಳವರು ಮತ್ತೆ 1969ರಲ್ಲಿ ಬೆಂಗಳೂರಿನಲ್ಲಿಯೂ ಅಧ್ಯಾತ್ಮಪ್ರಕಾಶಕಾರ್ಯಾಲಯದ ಶಾಖೆಯೊಂದನ್ನು ಏರ್ಪಡಿಸಿದರು. ಮುಂದೆ ಇದರ ಅಂಗವಾಗಿ ಈಗ್ಗೆ ಒಂಬತ್ತು ವರ್ಷಗಳ ಹಿಂದೆ ಪ್ರಾರಂಭಗೊಂಡು 1988ರಲ್ಲಿ

'ಶಂಕರಭಾಸ್ಕರ'ವೆಂಬ ಹೆಸರಿನಿಂದ ಆಧ್ಯಾತ್ಮಿಕ ತ್ರೈಮಾಸಿಕಪತ್ರಿಕೆಯೊಂದು ಪ್ರಕಟವಾಗುತ್ತಿದೆ. ಇದರ ಸೂತ್ರಧಾರಿಗಳು ಶ್ರೀ ಶ್ರೀಗಳವರ ಸಾಕ್ಷಾಚ್ಛಿಷ್ಯರೂ ಕಾರ್ಯಾಲಯದ ಪಂಡಿತರೂ ಕಾರ್ಯದರ್ಶಿಗಳೂ ಆದ ಕೆ. ಜಿ. ಸುಬ್ರಾಯಶರ್ಮರು. ಈ ಪತ್ರಿಕೆಯ ಪ್ರಸಿದ್ಧಿ, ಪ್ರಚಾರಗಳಂತೂ ಅನ್ಯಾದೃಶವಾಗಿವೆ. ಕನ್ನಡಭಾಷೆಯಲ್ಲೇ ಇದ್ದರೂ, ವೇದಾಂತವೇ ವಸ್ತುವಾದರೂ ಪತ್ರಿಕೆಯು ವಿಶ್ವವ್ಯಾಪಿಯಾಗಿದೆ, ವಿಶೇಷವಾಗಿ ಜನಪ್ರಿಯವಾಗಿದೆ. ಶ್ರೀಗಳವರ ಸತ್ಯಸಂಕಲ್ಪ, ತಪಸ್ಸಿದ್ಧಿಗಳ ಪ್ರಭಾವವೇ ಇದು. ಶ್ರೀಶ್ರೀಗಳವರ ವಿಚಾರಧಾರೆಯು ಪುನರುಜ್ಜೀವನಗೊಳ್ಳುತ್ತಿರುವ ಸಂದರ್ಭ ಒದಗಿರುವುದು ಈ ಪತ್ರಿಕೆಯ ಕೈಂಕರ್ಯದಿಂದಲೇ.

ಶ್ರೀಶ್ರೀಗಳವರ ಲೋಕೋದ್ಧಾರಸಾಧನೆಯಲ್ಲಿ ಇದು (ಕಾರ್ಯಾಲಯ, ಪತ್ರಿಕೆ) ಮೊದಲನೆಯ ವಿವರವಾಗಿದೆ; ಎರಡನೆಯದು ಅವರು ಇಂಗ್ಲೀಷಿನಲ್ಲೂ, ಸಂಸ್ಕೃತದಲ್ಲೂ, ಕನ್ನಡದಲ್ಲೂ ರಚಿಸಿರುವ ಗ್ರಂಥಗಳು. ಕನ್ನಡದಲ್ಲಿ ಒಂದು ನೂರು ಅರವತ್ತಕ್ಕೂ ಮೀರಿ ಪುಸ್ತಕಗಳಿವೆ; ಸಂಸ್ಕೃತ ಇಂಗ್ಲೀಷು ಭಾಷೆಗಳಲ್ಲಿ ಮತ್ತೆ ನಲವತ್ತು ಪುಸ್ತಕಗಳು. ಇವೆಲ್ಲವೂ ವೇದಾಂತದ ಸಂಪ್ರದಾಯವನ್ನು ಮನವರಿಕೆ ಮಾಡಿಕೊಡುವ ಉದ್ದೇಶದಿಂದಲೇ ಸಿದ್ಧವಾದುವು. ಅದರಲ್ಲೂ ಶಾಂಕರಸಿದ್ಧಾಂತದಲ್ಲಿ ಸಲ್ಲದ ಹಲವಾರು ಸೇರ್ಪಡೆಗಳೊದಗಿ, ಸಿದ್ಧಾಂತದ ಸ್ವಾರಸ್ಯವೇ ಮರೆಯಾಗುತ್ತಿರುವಾಗ, ಸ್ವಭಾವವೇ ಅರಿಯದಂತಾಗಿರುವಾಗ, ಪರಿಶುದ್ಧವೇದಾಂತದ ಪ್ರಕ್ರಿಯೆಗಳೇನೆಂಬುದನ್ನು ತಿಳಿಯಪಡಿಸುವ ಸಾಹಸಕ್ಕೆ ಕೈಹಾಕಿದರು. ವೇದಾಂತವಿಚಾರಪ್ರಪಂಚದಲ್ಲಿ ಇದು ತೀರ ಅಗತ್ಯವಾಗಿದ್ದಿತು. ಶ್ರೀಗಳವರ ಬರಹಗಳಿಂದ ಆಚಾರ್ಯರ ಭಾಷ್ಯಗಳಿಗೂ ಅನಂತರ ಒದಗಿಬಂದ ವ್ಯಾಖ್ಯಾನಗಳಿಗೂ ಇರುವ ಅಂತರ ಸ್ಪಷ್ಟವಾಯಿತು, ಆಚಾರ್ಯರ ಅಭಿಪ್ರಾಯಗಳನ್ನು ಗೊಂದಲವಿಲ್ಲದೆ ಅರಿತುಕೊಳ್ಳುವುದು ಸಾಧ್ಯವಾಯಿತು. ನಡುವೆ ಮೂಡಿಕೊಂಡಿದ್ದ ಗ್ಲಾನಿಯನ್ನು ಪರಿಹರಿಸಿ ಶುದ್ಧಶಾಂಕರವೇದಾಂತದ ಅಭ್ಯುತ್ಥಾನವನ್ನು ಸಾಧಿಸಿದರಾಗಿ ಅವರನ್ನು **'ಕನ್ನಡನಾಡಿನ ಕನ್ನಡ ಶಂಕರರು', 'ಅಭಿನವಶಂಕರರು'** ಎಂದೆಲ್ಲ ಕರೆಯುವುದು ಸೋಜಿಗವೇನಲ್ಲ.

ಹೀಗೆ ತಮ್ಮ ಇಡೀ ಜೀವಿತವನ್ನು ಸ್ವಾಧ್ಯಾಯ-ಪ್ರವಚನಗಳಲ್ಲೇ ಸವೆಯಿಸಿ, ತಮ್ಮ ಆತ್ಮೋದ್ಧಾರವನ್ನೂ ಮಾಡಿಕೊಂಡು, ಲೋಕಸಂಗ್ರಹದ ಅಪೇಕ್ಷೆಯಿಂದ ಸತತವೂ ಕಾರ್ಯತತ್ಪರರಾಗಿದ್ದುಕೊಂಡು, ಅಧ್ಯಾತ್ಮದ ಕೆಲಸವನ್ನು ಜನರ ನಡುವೆ ಕೈಗೂಡಿಸಿದ ಈ ಮಹಾತ್ಮರನ್ನು ಕುರಿತಾದ ಒಂದು ಸ್ವತಂತ್ರಗ್ರಂಥವನ್ನು ನಾವೆಲ್ಲರೂ ಎದುರುನೋಡುತ್ತಿದ್ದೆವು. ಹಿಂದೆ ಅಧ್ಯಾತ್ಮ ಪ್ರಕಾಶ ಕಾರ್ಯಾಲಯದ ಹುಟ್ಟು, ಬೆಳವಣಿಗೆ, ಸಾಧನೆ, ಸಿದ್ಧಿಗಳನ್ನು ಕುರಿತಾದ ಒಂದು ಸಣ್ಣ ಪುಸ್ತಕ ಹೊರಬಂದಿದ್ದಿತು. ಈ ಕಾರ್ಯಾಲಯಕ್ಕೂ ಶ್ರೀಗಳವರಿಗೂ ಅವಿನಾಭಾವಸಂಬಂಧವೆಂಬುದು ದಿಟ. ಕಾರ್ಯಾಲಯದ ಬದುಕೂ ಅವರ ಬದುಕೂ ಹೆಚ್ಚೂ ಕಡಮೆ ಒಂದೇ ಎನ್ನಬಹುದು.

ಅವರ ಸಾಧನೆ ನಡೆದದ್ದೆಲ್ಲ ಕಾರ್ಯಾಲಯದ ಮೂಲಕವೇ. ಆದರೂ ವ್ಯಕ್ತಿಜೀವನದ ವಿವರಗಳನ್ನು ಅರಿತುಕೊಳ್ಳುವ ಕುತೂಹಲ ಅಭಿಮಾನಿಗಳಿಗಿರುತ್ತದೆ. ಶ್ರೀಶ್ರೀಗಳವರ ಜೀವನಚರಿತ್ರೆಯನ್ನು ಈಗ ಪ್ರಕಟಿಸಿ ಲಕ್ಷ್ಮೀನರಸಿಂಹಮೂರ್ತಿಯವರು ನಮಗೆಲ್ಲ ಉಪಕಾರ ಮಾಡಿದ್ದಾರೆ. ಶ್ರೀಶ್ರೀಗಳವರ ಚೇತನ ಅನುಕ್ರಮವಾಗಿ ವಿಕಾಸಗೊಂಡ ಬಗೆ, ಅವರಿಗೆ ನೆರವಾದ ಮಹನೀಯರ ಉಲ್ಲೇಖ, ಅವರ ಸಾಧನೆಗಳಿಗೆ ಸ್ಫೂರ್ತಿಯನ್ನೊದಗಿಸಿ ಒತ್ತಾಸೆಯನ್ನು ನೀಡಿದ ಹಿರಿಯರ ಎಣಿಕೆ, ಆಚಾರ್ಯರ ನಿಲುವನ್ನು ಸೋಪಾನಪದ್ಧತಿಯಲ್ಲಿ ಗುರುತಿಸಿಕೊಂಡ ಕ್ರಮ, ಅದರ ಪ್ರಚಾರಕ್ಕಾಗಿ ಹಾಕಿಕೊಂಡ ಸಂವಿಧಾನ, ಕಾಲಕಾಲಕ್ಕೆ ಅವರು ಕೈಗೊಂಡ ಪ್ರಕಟನೆಗಳು ಇವೆಲ್ಲವನ್ನೂ ಇಲ್ಲಿ ಸರಳವಾಗಿ ಸ್ವಾರಸ್ಯವಾಗಿ ನಿರೂಪಿಸಿದ್ದಾರೆ. ಶ್ರೀಗಳವರು ಅಧ್ಯಾತ್ಮಪ್ರಕಾಶದ ಕೆಲಸವನ್ನು ಹಚ್ಚಿಕೊಂಡಾಗ, ಅವರ ಪ್ರಭಾವದೊಳಗೆ ಬಂದು ಅವರ ಕೈಂಕರ್ಯವನ್ನು ತಮ್ಮದಾಗಿಸಿಕೊಂಡ ಹಲವರು ಇಲ್ಲಿನ ನಿರೂಪಣೆಯಲ್ಲಿ ಕಾಣಿಸಿಕೊಳ್ಳುತ್ತಾರೆ. ಪ್ರಸ್ತುತ ಪ್ರಕಟಣೆಯಲ್ಲಿ, ಕಾರ್ಯಾಲಯದ ಇತಿಹಾಸವೂ ಅನಿವಾರ್ಯವಾಗಿಯೇ ಸೇರಿಕೊಳ್ಳುತ್ತದೆ; ಆದರೆ ಶ್ರೀಶ್ರೀಗಳವರ ಚರಿತ್ರೆಯ ಅಂಗವಾಗಿ, ಸ್ವತಂತ್ರವಾಗಲ್ಲ. ಹೀಗಾಗಿ ಈ ಪುನರ್ಮುದ್ರಣ ಅಥವಾ ಎರಡನೆಯ ಪ್ರಕಟಣೆ ಸಮಗ್ರವಾಗುತ್ತದೆ, ಸಂಗ್ರಾಹ್ಯವಾಗುತ್ತದೆ, ನೂತನವೇ ಆಗುತ್ತದೆ.

ಶ್ರೀಶ್ರೀಗಳವರ ಬದುಕು ಸದ್ದುಗದ್ದಲವಿಲ್ಲದೆ, ಹಳ್ಳದಿಣ್ಣೆಗಳಿಲ್ಲದ ಸಮತಲದಲ್ಲಿ ಹರಿಯುವ ತಿಳಿನೀರಿನ ಹೊಳೆಯಂತೆ ಸಾಗಿತು. ಕಣ್ಣುಕೋರೈಸುವಂಥ ಘಟನೆಗಳೇನು ನಡೆಯಲಿಲ್ಲ. ಮೂಲಾವಿದ್ಯಾನಿರಾಸವೆಂಬ ಸಂಸ್ಕೃತ ಗ್ರಂಥವೊಂದನ್ನು ಬಿಟ್ಟರೆ (ಅದು 1929ರಲ್ಲಿ ಪ್ರಕಟವಾಯಿತು), ಅವರ ಯಾವ ಗ್ರಂಥವೂ ಕ್ರಾಂತಿಕಾರಿಯೆನಿಸಿಕೊಳ್ಳಲಿಲ್ಲ. ಮೂಲಾವಿದ್ಯಾನಿರಾಸದ ವಿಚಾರವಾಗಿಯೂ ಮೊದಲಲ್ಲಿ ಸ್ವಲ್ಪ ಖಂಡನ-ಮಂಡನಗಳು (ಮಂಡನಕ್ಕಿಂತ ಖಂಡನವೇ ಹೆಚ್ಚೆನ್ನಿ) ನಡೆದು ಕಾವೇರಿದ್ದುಂಟು; ಆದರೆ ಇದೂ ಅದೇನು ಕಾರಣವೋ ತಣ್ಣಗಾಯಿತು. ಪಂಡಿತರ ಸಮುದಾಯದಲ್ಲಿ ಯಾವ ಹೊಸ ಅಲೆಯನ್ನೂ ಇದು ಎಬ್ಬಿಸಲಿಲ್ಲ. ಪಟ್ಟಭದ್ರವೇದಾಂತವಿದ್ವಾಂಸರು ಶ್ರೀಗಳವರ ಚಿಂತನೆಯ ಕಡೆಗೆ ಕಡೆಗಣ್ಣಿನ ನೋಟವನ್ನೂ ಹರಿಸಲಿಲ್ಲ; ' **ಮೊದಲು ಭಾಷ್ಯಗಳನ್ನೇ ನೋಡಿ, ಆಮೇಲೆ ಬೇಕಾದರೆ ವ್ಯಾಖ್ಯಾನಗಳನ್ನೂ ನೋಡಿ**' ಎಂದು ಶ್ರೀಗಳವರು ಮಾಡಿದ ಕರೆಗೆ ಯಾರೂ ಓಗೊಡಲಿಲ್ಲ. ಭಾಷ್ಯದಲ್ಲಿರುವ ನಿಲುವು ಏನೆಂಬುದನ್ನು ಸ್ವತಂತ್ರವಾಗಿ ಅರಿತುಕೊಳ್ಳಬೇಕೆಂಬ ಕಾತರವಾಗಲಿ ಕುತೂಹಲವಾಗಲಿ ಎಲ್ಲಿಯೂ ಕಾಣಿಸಿಕೊಳ್ಳಲಿಲ್ಲ.

ಶ್ರೀಶ್ರೀಗಳವರು ರಚಿಸಿದ ಎಲ್ಲ ಗ್ರಂಥಗಳಲ್ಲೂ, ಮಾಡಿದ ಎಲ್ಲ ಪ್ರವಚನಗಳಲ್ಲೂ ದಿಟವಾಗಿ ಹೊಸ ಚಿಂತನೆಯ ನೆಲೆಯಿದೆ. ಪ್ರಸ್ತುತ ಪ್ರಸಿದ್ಧವಾಗಿರುವ ಶಾಂಕರಸಿದ್ಧಾಂತವು ಸರಿಯಲ್ಲ, ಅದು ವ್ಯಾಖ್ಯಾನಗಳನ್ನವಲಂಬಿಸಿದ್ದು, ಭಾಷ್ಯದಲ್ಲಿರುವ ಸಿದ್ಧಾಂತಕ್ಕೆ ವಿರುದ್ಧವಾದುದು ಎಂಬುದು ಶ್ರೀಗಳವರ ಚಿಂತನೆ. ಇದನ್ನು ಗಾಢವಾದ ಅಭ್ಯಾಸದಿಂದ,

ನಿರಂತರವಾದ ಅಧ್ಯಯನದಿಂದ, ಶಾಸ್ತ್ರಶುದ್ಧವಾದ ಮನನದಿಂದ ಅವರು ದೃಢಪಡಿಸಿದರು; ಆಕರಗಳನ್ನು ಕಾಣಿಸಿದರು, ಯುಕ್ತಿಗಳನ್ನು ತೋರಿಸಿದರು. ಸಂಸ್ಕೃತ, ಕನ್ನಡ, ಇಂಗ್ಲೀಷ್ ಭಾಷೆಗಳಲ್ಲಿ ಖಚಿತವಾಗಿ ತಮ್ಮ ಚಿಂತನೆಗೆ ರೂಪು ಕೊಟ್ಟರು. ಗ್ರಂಥಗಳನ್ನು ಒಂದಾದಮೇಲೊಂದರಂತೆ ಬರೆದು ಪ್ರಕಟಿಸಿದರು. ಎಲ್ಲ ಗ್ರಂಥಗಳಲ್ಲೂ ತಮ್ಮ **ಶುದ್ಧಶಾಂಕರಸಿದ್ಧಾಂತದ** ಚಿಂತನೆಯನ್ನು ಮೈದುಂಬಿಸಿದರು. ವಾಸ್ತವವಾಗಿ ಇದೊಂದು ಆಂದೋಲನವನ್ನೇ ಮೊದಲು ಮಾಡುವಂಥ ಚಿಂತನೆ. ಆದರೂ ಆ ಕಾಲದ ಅರಮನೆ-ಗುರುಮನೆಗಳ ವಿದ್ವಾಂಸರು, ಬಿರುದುಬಾವಲಿಗಳನ್ನು ಹೊತ್ತ ಪಂಡಿತರು, ಶಾಸ್ತ್ರಪ್ರಪಂಚದಲ್ಲಿ ಪ್ರಸಿದ್ಧರು ಇದರತ್ತ ಒಂದಿಷ್ಟೂ ಗಮನವನ್ನು ಹರಿಸಲಿಲ್ಲ. ಅವರ ಜೀವಿತಕಾಲದಲ್ಲಿ ಅವರ ಮೇರುಕೃತಿಯಾದ **'ವೇದಾಂತಪ್ರಕ್ರಿಯಾಪ್ರತ್ಯಭಿಜ್ಞಾ'** (ಸಂಸ್ಕೃತ, 1964) ಎಂಬ ಗ್ರಂಥಕ್ಕೆ ಯಾವ ಆದರವೂ ದೊರೆಯಲಿಲ್ಲ. ಜಿಜ್ಞಾಸುಗಳನ್ನೂ ಪಂಡಿತರನ್ನೂ ನಿದ್ರೆಯಿಂದ ತಿವಿದೆಬ್ಬಿಸುವುದು ಸಾಧ್ಯವಾಗಲಿಲ್ಲ. ಇದರ ಅರ್ಥ ನಿದ್ರೆಯ ಮಂಪರ ಅಷ್ಟು ಘನವಾಗಿದ್ದಿತೆಂದಷ್ಟೆ; ಗ್ರಂಥದ ಘನತೆಗೇನೂ ಊನವಿಲ್ಲ. ಈಗೀಗ ಮಂಪರ ಸ್ವಲ್ಪ ಹರಿಯುತ್ತಿದೆಯೆನ್ನಿ. ಈ ಗ್ರಂಥ ಈಗ ಇಂಗ್ಲೀಷ್ ಭಾಷೆಯಲ್ಲೂ ಬೆಳಕು ಕಂಡು, ವ್ಯಾಸಂಗ ಮಾಡುವವರ ಸಂಖ್ಯೆ ಬೆಳೆಯುತ್ತಿದೆ. ಶ್ರೀಗಳವರ ಉದ್ದೇಶ ಸಫಲವಾಗುವ ಸಾಧ್ಯತೆ ಕಾಣತೊಡಗಿದೆ. ಆಚಾರ್ಯರ ಮೂಲಸಿದ್ಧಾಂತವೇನು? ವ್ಯಾಖ್ಯಾನಕಾರರು ಅದರಲ್ಲಿ ಒದಗಿಸಿದ ವಿಕಾರಗಳು ಯಾವುವು? ಎಂಬುದರ ಕಡೆ ಪ್ರಪಂಚದ ಜಿಜ್ಞಾಸುಗಳು ಗಮನ ಹರಿಸತೊಡಗಿದ್ದಾರೆ.

ಇಂಥ ಸಂದರ್ಭದಲ್ಲಿ **'ಶ್ರೀಗುರುಚರಿತಾಮೃತ'**ವು ಸ್ವಾಗತಾರ್ಹವಾದ ಪ್ರಕಟಣೆ. ಶ್ರೀಗಳವರ ಚಿಂತನೆಗೆ ಸಮರ್ಪಕವಾದ ಹಿನ್ನೆಲೆಯನ್ನು ಇದು ಒದಗಿಸುತ್ತದೆ. ಅವರ ಗ್ರಂಥವನ್ನೋದುವವರಿಗೆ, ಗ್ರಂಥಕರ್ತರ ಆಶಯವನ್ನು ಅರಿತುಕೊಳ್ಳಲು ನೆರವಾಗುವ ವಿವರಗಳು ಇಲ್ಲಿವೆ. ಒಂದು ನೂರು ವರ್ಷಗಳ ಹಿಂದೆ ನಮ್ಮ ನಾಡಿನಲ್ಲಿದ್ದ ಸಂಸ್ಕೃತಿಯ ಪರಿಚಯವನ್ನೂ ಒದಗಿಸಿಕೊಡುತ್ತದೆ. ಶ್ರೀಗಳವರ ಬಾಯಿಂದಲೇ ಕೇಳಿ ತಿಳಿದುಕೊಂಡವರು ಶ್ರೀ ಲಕ್ಷ್ಮೀನರಸಿಂಹಮೂರ್ತಿಗಳು; ಅದನ್ನು ಯಥಾವತ್ತಾಗಿ ಇಲ್ಲಿ ಬರಹಕ್ಕಿಳಿಸಿದ್ದಾರೆ. ಯಾವ ಅತ್ಯುಕ್ತಿ, ಉತ್ಪ್ರೇಕ್ಷೆ, ಊಹೆಗಳೂ ಇಲ್ಲದಂತೆ ಸರಳವಾಗಿರುವ, ಸುಬೋಧವಾಗಿರುವ ಬರಹ ಇದು. ತಮ್ಮ ಗುರುಗಳ ಚರಿತ್ರೆಯು ಅಮೃತದಂತೆ ಆಪ್ಯಾಯಮಾನವಾದುದು, ಉಜ್ಜೀವಕವಾದುದು ಎಂಬ ಶ್ರದ್ಧೆಯಿಂದ ಮೈದುಂಬಿಬಂದ ಪುಸ್ತಕ ಇದು. ಶ್ರೀಗಳವರ ಸಾರಸ್ವತಸಾಧನೆಯಿಂದ ಉಪಕೃತರಾದ, ಅವರ ವಿಚಾರವಾಗಿ ಭಕ್ತ್ಯಾದರಗಳನ್ನು ಮೂಡಿಸಿಕೊಂಡಿರುವ ನನ್ನಂಥ ಎಲ್ಲರಿಗೂ ಇದು ಅಮೃತೋಪಮವಾಗುವುದರಲ್ಲಿ ಸಂಶಯವಿರದು.

**14.12.1996** **ಸಾಲಿಗ್ರಾಮ ಕೃಷ್ಣ ರಾಮಚಂದ್ರರಾವ್**

## ಈ ಗ್ರಂಥ ಪ್ರಕಟನೆಗೆ
## ಧನ ಸಹಾಯ ಮಾಡಿರುವ ಮಹನೀಯರುಗಳು

| | ಮೊಬಲಗು |
|---|---|
| 1. ಶ್ರೀಮತಿ ನಾಗಮ್ಮ ಎನ್. ಶಂಕರರಾವ್ ಜಯಲಕ್ಷ್ಮೀಪುರಂ, ಮೈಸೂರು. | ರೂ. 2,000-00 |
| 2. ಶ್ರೀ. ಎಸ್. ಪಿ. ಚಂದ್ರಶೆಟ್ಟರು ಎಂಜಿನಿಯರ್ ಮತ್ತು ಕಂಟ್ರಾಕ್ಟರ್, ಯಾದವಗಿರಿ, ಮೈಸೂರು. | ರೂ. 1,001-00 |
| 3. ಶ್ರೀ ಟಿ.ಎಸ್. ವೆಂಕಟಾಚಲಪತಿ ಜೋಯಿಸ್ ಜ್ಯೋತಿಷ್ಕರು, ಚಿಕ್ಕಪೇಟೆ, ತುಮಕೂರು. | ರೂ. 0500-00 |
| 4. 1996ನೇ ನವೆಂಬರ್‌ನಲ್ಲಿ ನಡೆದ ವೇದಾಂತ ಸಪ್ತಾಹಕಾಲಕ್ಕೆ ಗುರುದಕ್ಷಿಣಾ ರೂಪದಲ್ಲಿ ಭಕ್ತರುಗಳು ಸಮರ್ಪಿಸಿದ ಕಾಣಿಕೆ | ರೂ. 1,170-00 |
| ಒಟ್ಟು | ರೂ. 4,671-00 |

ಮೇಲ್ಕಂಡ ಭಕ್ತಮಹಾಶಯರುಗಳಿಗೆ ನಮ್ಮ ಕೃತಜ್ಞತಾಪೂರ್ವಕವಾದ ಅಭಿನಂದನೆಗಳನ್ನು ಈ ಮೂಲಕ ಸಮರ್ಪಿಸಲಾಗಿದೆ.

# ವಿಷಯಾನುಕ್ರಮಣಿಕೆ


| | | ಪುಟ |
|---|---|---|
| ೧. | ಗ್ರಂಥ ಪ್ರವೇಶ | 1 |
| ೨. | ಬಾಲ್ಯ-ಯಳ್ಳಂಬಳಸೆ | 3 |
| ೩. | ವಿದ್ಯಾಭ್ಯಾಸ-ಉಪನಯನ | 8 |
| ೪. | ಪರಸ್ಥಳಗಳಲ್ಲಿ ವಿದ್ಯಾಭ್ಯಾಸ-ವಿವಾಹಾದಿಗಳು | 13 |
| ೫. | ಉಪಾಧ್ಯಾಯವೃತ್ತಿಯಲ್ಲಿ ರಾಯರು | 38 |
| ೬. | ಭಾಷ್ಯಶಾಂತಿಪಾಠಮಹೋತ್ಸವ | 46 |
| ೭. | ಭಾಷ್ಯಪಾಠಾಭ್ಯಾಸ | 58 |
| ೮. | ಗೋಂದಾವಳಿಮಹಾರಾಜರ ಅನುಗ್ರಹ | 61 |
| ೯. | ಸತ್ಸಂಗದ ಔತ್ಸುಕ್ಯ | 68 |
| ೧೦. | ಬೆಂಗಳೂರು ನಗರದಲ್ಲಿ ವಾಸ | 77 |
| ೧೧. | ಅಧ್ಯಾತ್ಮಪ್ರಕಾಶಕಾರ್ಯಾಲಯದ ಉದಯ | 87 |
| ೧೨. | ಕ್ರಮಬದ್ಧ ಚಟುವಟಿಕೆಗಳು | 104 |
| ೧೩. | ಹೊಳೆನರಸೀಪುರದಲ್ಲಿ ಕಾರ್ಯಾಲಯದ ಮುನ್ನಡೆ | 114 |
| ೧೪. | ಹೊಸ ಚಟುವಟಿಕೆಗಳು | 121 |
| ೧೫. | ಮೈಸೂರು ಶ್ರೀಮನ್ಮಹಾರಾಜರವರ ಕೃಪಾದೃಷ್ಟಿ | 131 |
| ೧೬. | ಕಾರ್ಯಾಲಯದ ಪುರೋಭಿವೃದ್ಧಿ | 139 |
| ೧೭. | ರಾಯರ ತುರೀಯಾಶ್ರಮಸ್ವೀಕಾರ | 141 |
| ೧೮. | ಪುರೋಭಿವೃದ್ಧಿಯ ಹಾದಿಯಲ್ಲಿ | 145 |
| ೧೯. | ಪ್ರಗತಿಯ ಪಥದಲ್ಲಿ | 161 |
| ೨೦. | ವಿಶೇಷಾಭಿವೃದ್ಧಿಯ ಮಾರ್ಗದಲ್ಲಿ | 179 |
| ೨೧. | ಮುನ್ನಡೆಯ ಹಾದಿಯಲ್ಲಿ | 203 |
| ೨೨. | ಉಪಸಂಹಾರ | 216 |

## ಗುರುಸ್ತುತಿಃ

ಶ್ರೀಶಂಕರಾರ್ಯಪಾದಾಬ್ಜಸ್ಮರಣಾಪ್ತಾತ್ಮಬೋಧಕಃ ।
ವೇದಾನ್ತಾಬ್ಜಸಹಸ್ರಾಂಶುಃ ಜ್ಞಾನವೈರಾಗ್ಯಭೂಷಣಃ ॥

ಅಧ್ಯಾತ್ಮವಿದ್ಯಾಶ್ರೀಯುಕ್ತಃ ಸಚ್ಚಿದಾನಂದನಾಮಕಃ ।
ಯತಿವರ್ಯಃ ಕೃಪಾಸಿಂಧುಃ ನೈಕಪುಸ್ತಕಲೇಖಕಃ ॥

ಕಾರ್ಯಾಲಯವಿನಿರ್ಮಾತಾ ಶಿಷ್ಯಾನುಗ್ರಹತತ್ಪರಃ ।
ಕರ್ಣಾಟದೇಶರತ್ನೋಽಸೌ ಸದಾ ವಿಜಯತೇತಮಾಮ್ ॥

॥ ಓಮ್ ॥
॥ ಶ್ರೀ ಗಣೇಶಶಾರದಾಸದ್ಗುರುಭ್ಯೋ ನಮಃ ॥

# ಶ್ರೀಗುರುಚರಿತಾಮೃತ

## ೧. ಗ್ರಂಥಪ್ರವೇಶ

### ಗ್ರಂಥದ ಉದ್ದೇಶ

'ಶ್ರೀಲಕ್ಷ್ಮೀನಾರಾಯಣಾಭ್ಯಾಂ ನಮಃ' ಎಂದು ಉಪಕ್ರಮಿಸಿ ಅಧ್ಯಾತ್ಮಪ್ರಕಾಶ ಕಾರ್ಯಾಲಯದ ಸಂಸ್ಥಾಪಕರಾದ ಶ್ರೀಶ್ರೀಸಚ್ಚಿದಾನಂದೇಂದ್ರ ಸರಸ್ವತೀ ಮಹಾಸ್ವಾಮಿಗಳ ಚರಿತ್ರೆಯನ್ನು ಬರೆಯಲು ಪ್ರಾರಂಭಿಸುತ್ತೇನೆ. ಹೊಳೆನರಸೀಪುರದಲ್ಲಿರುವ ಅಧ್ಯಾತ್ಮಪ್ರಕಾಶ ಕಾರ್ಯಾಲಯವು ಶ್ರೀಶ್ರೀಗಳವರೇ ತಮ್ಮ ಪೂರ್ವಾಶ್ರಮದಲ್ಲಿಯೇ ಸ್ಥಾಪಿಸಿರುವ ಧಾರ್ಮಿಕ ಸಂಸ್ಥೆಯಾಗಿದೆ. ಇದು 1920ರಲ್ಲಿ ಶ್ರೀಗಳವರು ತಮ್ಮ ಪೂರ್ವಾಶ್ರಮದಲ್ಲಿ ಬೆಂಗಳೂರಿನಲ್ಲಿದ್ದಾಗಲೇ ಪ್ರಾರಂಭವಾಯಿತು. ಅನಂತರ ಹೊಳೆನರಸೀಪುರಕ್ಕೆ ಬಂದ ಮೇಲೂ 1945 ರವರೆಗೆ ಗುರುಗಳ ಮನೆಯೇ ಇದಕ್ಕೆ ಆವಾಸಸ್ಥಾನವಾಗಿತ್ತು. ಆದ್ದರಿಂದ ಸದ್ಗುರುಗಳ ಪೂರ್ವಾಶ್ರಮದ ಚರಿತ್ರೆಯನ್ನು ವಾಚಕರಿಗೆ ನಿವೇದಿಸಿ ಅನಂತರ ಅವರೇ ಕಟ್ಟಿ ಬೆಳೆಯಿಸಿರುವ ಕಾರ್ಯಾಲಯದ ಇತಿಹಾಸವನ್ನೂ ಪ್ರಸ್ತಾಪಿಸಲಾಗುವದು.

ಈ ಚರಿತ್ರೆಯ ನಾಯಕರೇ ತಿಳಿಸುವಂತೆ ಇವರ ಬಾಲ್ಯದಿಂದಲೂ ನಡೆದಿರುವ ಘಟನೆಗಳು ಹೇಗೆ ಇವರಿಗೆ ಅಧ್ಯಾತ್ಮ ಮಾರ್ಗದಲ್ಲಿಯೇ ನಡೆಯಲು ದಾರಿದೀಪವಾಗಿ ಪರಿಣಮಿಸಿ ಕಡೆಗೆ ಇಡಿಯ ಜೀವನವನ್ನೆಲ್ಲ ಅಧ್ಯಾತ್ಮವಿದ್ಯಾಪ್ರಚಾರಕ್ಕೇ ಮೀಸಲಾಗಿಡುವಂತೆ ರೂಪಿತವಾಯಿತೆಂಬುದನ್ನೂ ಮತ್ತು ಭಗವಂತನ ಸಂಕಲ್ಪದಲ್ಲಿ ಪ್ರಪಂಚದಲ್ಲಿ ನಡೆಯುತ್ತಿರುವ ಅತ್ಯಲ್ಪವಾದ ಘಟನೆಗಳಿಗೆ ಕೂಡ ಎಂಥ ಮಹತ್ವವಿರುತ್ತದೆ ಎಂಬುದನ್ನೂ ತಿಳಿಯಪಡಿಸುತ್ತದೆ. ಆದರೆ ಜೀವನದಲ್ಲಿ ಸಂಭವಿಸುವ ಇಂಥ ದೈವಿಕ ಘಟನೆಗಳನ್ನು ಅಧ್ಯಾತ್ಮಮಾರ್ಗಕ್ಕೆ ಹೊಂದಿಸಿಕೊಂಡು ಆತ್ಮಕಲ್ಯಾಣ ಲೋಕಕಲ್ಯಾಣಗಳನ್ನು ಸಾಧಿಸುವವರು ತೀರ ವಿರಳವಾಗಿರುತ್ತಾರೆ. ಈ ಚರಿತ್ರೆಯ ನಾಯಕರು ಇಂಥ ಮಹನೀಯರಲ್ಲಿ ಒಬ್ಬರು.

ಇವರೇನೂ ಅವತಾರ ಪುರುಷರಲ್ಲವಾದರೂ ಭಗವಂತನು ಈ ವ್ಯಕ್ತಿಯ ಮೂಲಕ ಜಗತ್ತಿಗೆ ನೀಡಿರುವ ಅಧ್ಯಾತ್ಮ ವಿದ್ಯೆಯ ಪ್ರಕಾಶವನ್ನು ನೋಡಿದರೆ ಆ ಭಗವಂತನಿಗೆ ಮುಮುಕ್ಷುಗಳ ಮೇಲೆ ಎಂಥ ಕರುಣೆಯಿದೆ-ಎಂಬುದು ಸ್ಪಷ್ಟವಾಗುತ್ತದೆ. ಒಂದು ರೀತಿಯಲ್ಲಿ ಜಗದ್ಗುರುವಾದ ಆ ಪರಮಾತ್ಮನೇ ತನ್ನ ಅಂಶದಿಂದ ಧರೆಗೆ ಇಳಿದು ಬಂದು ಇಂಥ ಮಹತ್ಕಾರ್ಯ ಸಾಧನೆಮಾಡಿ ವೇದಾಂತಜಿಜ್ಞಾಸುಗಳನ್ನು ಉದ್ಧಾರಮಾಡಿರುತ್ತಾನೆ ಎಂದರೂ ಅತಿಶಯೋಕ್ತಿಯಾಗಲಾರದು. ಆದ್ದರಿಂದ ಭಗವದಂಶಭೂತರಾದ ಸದ್ಗುರುಗಳ ಚರಿತ್ರೆಯು ಮುಮುಕ್ಷುಗಳಿಗೆಲ್ಲ ಪೂಜ್ಯವೂ ಅಮೂಲ್ಯವೂ ಆಗಿದೆ. ಬ್ರಹ್ಮವಿದ್ಯೆಯು ಶಾಸ್ತ್ರಾಚಾರ್ಯರ ಉಪದೇಶಗಳ ಮೂಲಕವೇ ದೊರಕಬೇಕಾಗಿದ್ದು ಅದರಲ್ಲಿಯೂ ಶಾಸ್ತ್ರವನ್ನು ಆಗಮವಿದರಾದ ಆಚಾರ್ಯರು ಉಪದೇಶಿಸಿದಾಗಲೇ ಫಲಕಾರಿಯಾಗುವದು ಕಂಡು ಬಂದಿದೆ. ಈ ಸಂದರ್ಭದಲ್ಲಿ ಮುಮುಕ್ಷುಗಳಿಗೆ ಸದ್ಗುರುಗಳ ಚರಿತ್ರೆಯ ಪಠನವೂ ಅಧ್ಯಾತ್ಮಗ್ರಂಥಪಠನದಷ್ಟೇ ಮುಖ್ಯವಾಗಿರುತ್ತದೆ ಎಂದು ತಿಳಿಸಲು ಇಚ್ಛಿಸುತ್ತೇನೆ.

ಇಂಥ ಸದ್ಗುರುಚರಿತ್ರೆಯು ಯಾವದೇ ಪವಾಡ-ಮಾಹಾತ್ಮ್ಯಗಳ ಗಡಿಬಿಡಿಯಿಲ್ಲದೆ ಸರಳವಾಗಿ ನಿರೂಪಿತವಾಗಿದ್ದು ಪಠಿಸುವವರಿಗೆ ವೇದಾಂತಶಾಸ್ತ್ರದ ಅಧ್ಯಯನಕ್ಕೆ ತಕ್ಕ ಕುತೂಹಲವನ್ನೂ ಯೋಗ್ಯತೆಯನ್ನೂ ಉಂಟುಮಾಡುತ್ತದೆ. ಅನಂತರ ಈ ಸದ್ಗುರುಗಳೇ ರಚಿಸಿರುವ ಸುಮಾರು ಎರಡು ನೂರಕ್ಕೂ ಮೇಲ್ಪಟ್ಟ ಕನ್ನಡ-ಸಂಸ್ಕೃತ-ಇಂಗ್ಲೀಷು ಗ್ರಂಥಗಳನ್ನೂ ವ್ಯಾಸಂಗಮಾಡಬೇಕೆಂಬ ಹಸಿವನ್ನುಂಟು ಮಾಡುತ್ತದೆ. ಇಲ್ಲಿ ವಿವರಿಸಿರುವ ವಿಷಯಗಳೆಲ್ಲವೂ ಸದ್ಗುರುಗಳೇ ಸಾಕ್ಷಾತ್ತಾಗಿ ತಿಳಿಸಿರುವ ಘಟನೆಗಳಾಗಿದ್ದು ಸಂಪೂರ್ಣವಾಗಿ ಐತಿಹಾಸಿಕವಾಗಿವೆ. ಈಗ ಸದ್ಗುರುಗಳ ಪೂರ್ವಿಕರಿದ್ದ ಸ್ಥಳಪರಿಚಯದಿಂದಾರಂಭವಾಗುವ ಪುಣ್ಯಚರಿತ್ರೆಯನ್ನು ಪಠನಮಾಡೋಣ.

# ೨. ಬಾಲ್ಯ-ಯಳ್ಳಂಬಳಸೆ

## ಯಳ್ಳಂಬಳಸೆ :

ಯಳ್ಳಂಬಳಸೆಯೆಂಬುದು ಕರ್ನಾಟಕರಾಜ್ಯದ ಚಿಕ್ಕಮಗಳೂರು ಜಿಲ್ಲೆಯ ಕಡೂರು ತಾಲ್ಲೂಕಿಗೆ ಸೇರಿದ ಒಂದು ಸಣ್ಣಹಳ್ಳಿ. ಹಿಂದಿನ ಕಾಲದ ಹಳ್ಳಿಗಳೆಂದರೆ ಈಗಿನ ಈ ನವನಾಗರಿಕತೆಯಿಂದ ದೂರವಾಗಿದ್ದು ಆದಷ್ಟು ಮಟ್ಟಿಗೂ ಧರ್ಮಜೀವನದ ವಾತಾವರಣವನ್ನೂ ಶಾಂತಿಸುಖಗಳನ್ನೂ ಉಂಟುಮಾಡುತ್ತಿದ್ದ ಸ್ಥಳಗಳಾಗಿರುತ್ತಿದ್ದವು. ರಾಯರು* ಜನ್ಮವನ್ನು ಸ್ವೀಕರಿಸುವ ಕಾಲಕ್ಕೆ ನವನಾಗರಿಕತೆಯು ದೇಶದಲ್ಲಿ ಈಗಿನಷ್ಟು ಹರಡಿರಲಿಲ್ಲವಾದ್ದರಿಂದ ಹಳ್ಳಿಯ ಸನ್ನಿವೇಶವು ಅಧ್ಯಾತ್ಮಜೀವನಕ್ಕೆ ಪ್ರಚೋದಕವಾಗಿಯೇ ಇತ್ತು. ಕೆಲವೇ ಮಾತುಗಳಲ್ಲಿ ವಾಚಕರಿಗೆ ಬೇಸರವಾಗದಂತೆ ಈ ಹಳ್ಳಿಯ ಪರಿಚಯವನ್ನು ಕೊಡುವೆನು. ಯಳ್ಳಂಬಳಸೆಗೆ ಕಡೂರಿನಿಂದ ಸುಮಾರು ಹತ್ತು ಮೈಲಿಗಳಾಗಬಹುದು. ಆಗ್ಗೆ ಅದಕ್ಕೆ ಯಾವ ರಸ್ತೆಯ ಸಂಬಂಧವೂ ಇರಲಿಲ್ಲ. ಊರ ಮುಂದೆ ಹೆಬ್ಬಾಗಿಲು. ಊರ ಹೆಬ್ಬಾಗಿಲನ್ನು ದಾಟಿದರೆ ಎಡಕ್ಕೆ ದನಗಳ ದೊಡ್ಡಿ, ಬಲಕ್ಕೆ ಮಸೀದಿ, ಊರಮುಂದೆ ಕೆಲವು ಅರಳಿ ಮರಗಳು, ಅತ್ತಿಯಮರ, ನೀರಿನ ಕಟ್ಟೆ, ಹನುಮಂತರಾಯನಗುಡಿ, ಅದಕ್ಕೂ ಆಚೆಗೆ ಒಂದು ಕೆರೆ, ಕೆರೆಯ ಹಿಂದೆ ತೋಟಗಳು, ಗದ್ದೆಗಳು - ಇದು ಊರಿನ ಹೊರಗಿನ ಚಿತ್ರ. ಊರಿನ ಒಳಕ್ಕೆ ಬಂದರೆ ಎಡಕ್ಕೆ ಚಾವಡಿ, ಬಲಕ್ಕೆ ನಾಡಿಗರ ಮನೆ, ಕೆಲವು ಬ್ರಾಹ್ಮಣರ ಮನೆಗಳು, ಒಂದು ಬಸವನಗುಡಿ-ಇಷ್ಟು ಕಾಣಿಸುವ ಒಂದು ಚಿಕ್ಕಬೀದಿ, ಆದಕ್ಕೆ ಸಮಾನಾಂತರವಾಗಿ ಅಕ್ಕಸಾಲಿಗರು, ಲಿಂಗಾಯಿತರು-ಮುಂತಾದವರಿರುವ ಇನ್ನೊಂದು ಬೀದಿ- ಹೀಗಿತ್ತು. ಇವೆರಡರ ಮುಂದಕ್ಕೆ ಸೋಮೇಶ್ವರನಗುಡಿ, ಅದರ ಹಿಂದಕ್ಕೆ ಪಶ್ಚಿಮಕ್ಕೆ ಹೊನ್ನಾಲದಮ್ಮನಗುಡಿ, ಬೀರದೇವರಗುಡಿ, ನೈಋತ್ಯಕ್ಕೆ ಚೆನ್ನಕೇಶವದೇವಾಲಯ ಹೀಗಿತ್ತು. ಸೋಮೇಶ್ವರಗುಡಿಯ ಹಿಂಭಾಗದಲ್ಲಿ ಕುರುಬರು, ಕುಂಬಾರರು, ಅಗಸರು-ಮುಂತಾಗಿ ಬ್ರಾಹ್ಮಣೇತರರ ಮನೆಗಳೇ ಕಾಣಬರುತ್ತಿದ್ದವು. ಈ ಹಳ್ಳಿಯಲ್ಲಿ ಹಿಂದೂಗಳೇ ಅಲ್ಲದೆ ಕೆಲವು ಮುಸಲ್ಮಾನರೂ ಇದ್ದರು. ಒಂದು ಸಣ್ಣ ಹಳ್ಳಿಯಲ್ಲಿ ಇಷ್ಟೊಂದು ದೇವರ ಗುಡಿಗಳು ಇರುವದನ್ನು ನೋಡಿದರೆ ನಮ್ಮ ಪೂರ್ವಿಕರಿಗೆ ದೇವರಲ್ಲಿ ಎಂಥ ಭಕ್ತಿಶ್ರದ್ಧೆಯಿತ್ತು- ಎಂಬುದು ವ್ಯಕ್ತವಾಗುತ್ತದೆ.

## ರಾಯರ ವಂಶಪರಿಚಯ :

ಈ ಹಳ್ಳಿಯಲ್ಲಿ ಸುಂಕದ ನರಸಪ್ಪನವರೆಂಬ ಸದ್ವಂಶೀಯರಾದ ಬಬ್ಬೂರು ಕಮ್ಮೆಪಂಗಡದ ಒಬ್ಬ ಸ್ಮಾರ್ತಬ್ರಾಹ್ಮಣ ಗೃಹಸ್ಥರಿದ್ದರು. ಇವರ ವಿಷಯವಾಗಿ ಹೆಚ್ಚು ತಿಳಿದುಬಂದಿಲ್ಲ. ನರಸಪ್ಪನವರ ಮಗ ನಂಜುಂಡಯ್ಯನವರೇ ನಮ್ಮ ಕಥಾನಾಯಕರ ತಂದೆಯವರು. ಇವರಿಗೆ

---

* ಇಲ್ಲಿಂದ ಮುಂದೆ ಶ್ರೀ ಶ್ರೀಗಳವರನ್ನು 'ರಾಯರು' ಎಂದು ಕರೆಯಲಾಗುವದು. ಅವರ ಸಂನ್ಯಾಸಸ್ವೀಕಾರವು ಅವರ ೬೮ ನೆಯ ವಯಸ್ಸಿನಲ್ಲಾದ್ದರಿಂದ ಅಲ್ಲಿಯವರೆಗೂ 'ರಾಯರೆಂದೇ' ವ್ಯವಹರಿಸಿರುತ್ತದೆ.

ತಂದೆ ತಾಯಿಗಳು ಇಟ್ಟಹೆಸರು "ನಾರಾಯಣ" ಎಂದು ಇದ್ದಿತು. ಇವರು ದೊಡ್ಡವರಾದಮೇಲೆ ಸರ್ಕಾರದ ರಿಕಾರ್ಡುಕೀಪರ್ ಕೆಲಸದಲ್ಲಿದ್ದು ಆಮೇಲೆ ಶೇಕದಾರರಾಗಿ ಕೆಲಸಮಾಡಿ ವಿಶ್ರಾಂತಿಯನ್ನು ಪಡೆದರು. ಆದ್ದರಿಂದ ಇವರನ್ನು 'ರಿಕಾರ್ಡುಕೀಪರು ನಂಜುಂಡಯ್ಯ' ನವರೆಂದೇ ವ್ಯವಹಾರದಲ್ಲಿ ಜನರು ಕರೆಯುತ್ತಿದ್ದರು. ನಂಜುಂಡಯ್ಯನವರ ಧರ್ಮಪತ್ನಿ ಲಕ್ಷ್ಮೀದೇವಿ. ಇವರನ್ನು ಅಚ್ಚಣ್ಣಮ್ಮನವರೆಂದು ಅಡ್ಡ ಹೆಸರಿನಿಂದ ಕರೆಯುತ್ತಿದ್ದರು. ಹೀಗೆ ಸದ್ಗುಣಶಾಲಿಗಳೂ ಆದರ್ಶದಂಪತಿಗಳೂ ಆದ ಲಕ್ಷ್ಮೀನಾರಾಯಣರಿಗೆ ಹದಿನಾರು ಸಂತಾನಗಳಾದವು. ಅವರಲ್ಲಿ ಮೂರುಜನ ಹೆಣ್ಣು ಮಕ್ಕಳು ನಾಲ್ಕು ಗಂಡುಮಕ್ಕಳು ಮಾತ್ರ ದೀರ್ಘಕಾಲ ಬದುಕಿಕೊಂಡರು. ಶ್ರೀ ನಂಜುಂಡಯ್ಯನವರಿಗೆ ಉಳಿದುಕೊಂಡ ಏಳುಜನ ಮಕ್ಕಳಲ್ಲಿ ಆರನೆಯವರೇ ನಮ್ಮ ಕಥಾನಾಯಕರಾದ ಶ್ರೀ ವೈ. ಸುಬ್ಬರಾಯರು.

### ರಾಯರ ಜನ್ಮಕಾಲ :

ಹುಟ್ಟಿದ ಹಲವು ಮಕ್ಕಳು ಅಕಾಲಮೃತ್ಯುವಿಗೆ ತುತ್ತಾಗುತ್ತಿದ್ದುದನ್ನು ಕಂಡು ನಂಜುಂಡಯ್ಯನವರು ಬಹಳ ನೊಂದಿದ್ದರು. ಆದಕ್ಕಾಗಿ ಮುಂದೆಯಾದರೂ ಭಗವದನುಗ್ರಹದಿಂದ ದೀರ್ಘಾಯುಷ್ಮಂತರಾದ ಮಕ್ಕಳು ಉಂಟಾಗಲೆಂದು ರಾಯರು ಹುಟ್ಟುವ ಮುಂಚೆ ಅವರು ಕೆಲವು ವ್ರತಾನುಷ್ಠಾನಗಳನ್ನು ಕೈಗೊಂಡಿದ್ದರು. ತಾಯಿಯಾದ ಲಕ್ಷ್ಮೀದೇವಮ್ಮನವರು ಸಹ ವ್ರತೋಪವಾಸನಿಷ್ಠರಾಗಿದ್ದು ಗರ್ಭದಲ್ಲಿರುವ ಮಗುವಿಗೆ ಸಕಲಸನ್ಮಂಗಳಗಳೂ ಉಂಟಾಗಲೆಂದು ದೇವರನ್ನು ಪ್ರಾರ್ಥಿಸುತ್ತಿದ್ದರು. ಅನಂತರ ಒಂದು ಶುಭಮುಹೂರ್ತದಲ್ಲಿ-ಎಂದರೆ ಶಾಲಿವಾಹನಶಕ ೧೮೦೨ನೆಯ ಪ್ರಮಾಥಿ ಸಂವತ್ಸರದ ಮಾರ್ಗಶೀರ್ಷ ಬಹುಳ ಅಷ್ಟಮೀ ಸೋಮವಾರ (ತಾ. 5-1-1880) ಹಸ್ತನಕ್ಷತ್ರದಲ್ಲಿ ಸೂರ್ಯೋದಯ ಕಾಲಕ್ಕೆ ಸೌ|| ಲಕ್ಷ್ಮೀದೇವಮ್ಮನವರು ಚಿಕ್ಕಮಗಳೂರಿನ ಕೋಟೆಯ "ಹೊಸಮನೆ" ಎಂಬ ಬಡಾವಣೆಯ ಒಂದು ಮನೆಯಲ್ಲಿ ಒಂದು ಗಂಡುಶಿಶುವನ್ನು ಪ್ರಸವಿಸಿದರು.

ರಾಯರ ಜಾತಕದ ನಕಲನ್ನು ಈಚೆಗೆ ವೇ|| ಬ್ರ|| ಶ್ರೀ|| ಮತ್ತೂರು ಸುಬ್ರಾಯಾವಧಾನಿಗಳು ತಯಾರಿಸಿ ಕಳುಹಿಸಿದ್ದಾರೆ. (ಮೂಲಪ್ರತಿ ಈಗ ಕಳೆದುಹೋಗಿದೆ). ಆದ್ದರಿಂದ ಕುಂಡಲಿಯನ್ನು ವೇ|| ಅವಧಾನಿಗಳವರ ಗಣಿತದಂತೆ ಮುಂದಿನ ಪುಟದಲ್ಲಿ ಕೊಡಲಾಗಿದೆ. ಜ್ಯೋತಿಷ್ಯಶಾಸ್ತ್ರದ ಪ್ರಕಾರ ಫಲಾಫಲಗಳು ಹೇಗೇ ಇರಲಿ, ರಾಯರು ಹುಟ್ಟಿದ್ದು ಸೋಮವಾರ. ವಾರಾಧಿಪತಿಯಾದ ಚಂದ್ರನಂತೆ ಅಧ್ಯಾತ್ಮಜ್ಞಾನದ ಬೆಳದಿಂಗಳನ್ನು ಮಗುವು ಹರಡುತ್ತಾನೆಂದು ಸೂಚಿಸುವಂತಿತ್ತು. ಮತ್ತು ಪರಮೇಶ್ವನ ಅಂಶಭೂತರಾದ ಶ್ರೀಶಂಕರಭಗವತ್ಪಾದರ ವೇದಾಂತ ಭಾಷ್ಯಸಮುದ್ರವನ್ನುಕ್ಕಿಸುವ ಪೂರ್ಣಚಂದ್ರ ನಾಗುವನೆಂಬುದನ್ನೂ ನೆನಪಿಗೆ ತರುವಂತಿತ್ತು. ಮಾಸವು ಮಾರ್ಗಶೀರ್ಷವಾಗಿದ್ದು "ಮಾಸಾನಾಂ ಮಾರ್ಗಶೀರ್ಷೋಽಹಂ" ಎಂಬ ಭಗವಂತನ ವಚನದಂತೆ ಪರಮಾತ್ಮನ ವಿಭೂತಿವಿಶಿಷ್ಟಮಾಸದಲ್ಲಿ ಜನಿಸಿದ ಮಗುವು

ಮುಂದೆ ಗೀತಾಶಾಸ್ತ್ರೋಕ್ತ ಪ್ರವೃತ್ತಿ-ನಿವೃತ್ತಿಧರ್ಮಗಳಿಗೆ ಆದರ್ಶವಾಗುತ್ತದೆಯೆಂದು ಸಾರುವಂತ್ತಿತ್ತು.

| | | | |
|---|---|---|---|
| ಶನಿ ೮ | ಖುಜ್ವೀ ಕುಜಃ ೮ | | ಕೇತು ೨ |
| ಗುರು ೧೨ | ಶ್ರೀ॥ ಶ್ರೀಸಚ್ಚಿದಾನಂದೇಂದ್ರ ಸರಸ್ವತೀಸ್ವಾಮಿನಾಂ ಜನ್ಮಪತ್ರಿಕಾ | | |
| | | | |
| ರಾಹು ೮ ರವಿ ೭ ಲಗ್ನ ೯ | ಬುಧ ೧೨ ಶುಕ್ರ ೫ | | ಚಂದ್ರ ೪ |

ಜನ್ಮನಕ್ಷತ್ರವಾದ ಹಸ್ತವು ದೇವಗಣಕ್ಕೆ ಸೇರಿದ್ದು ಸವಿತೃದೇವತಾಧಿಷ್ಠಿತವಾದದ್ದಾದ್ದರಿಂದ ಮುಂದೆ ಅಧ್ಯಾತ್ಮವಿಚಾರಸೂರ್ಯನಂತಿರುವ ಕಾರ್ಯಾಲಯಕ್ಕೆ ಈತನು ಮೂಲವೆಂದು ತೋರಿಸುತ್ತಿತ್ತು ಮತ್ತು ಸೂರ್ಯವಂಶೋತ್ಪನ್ನನಾದ ಶ್ರೀರಾಮನ ಪರಮಭಕ್ತನಾಗುವನೆಂದೂ ದಿಗ್ವಿಜಯರಾಮದೇವರ ಪ್ರತಿಷ್ಠಾತೃವಾಗುವನೆಂದೂ ಸೂಚಿಸುತ್ತಿತ್ತೆಂದೂ ಹೇಳಿದರೆ ತಪ್ಪಾಗಲಾರದು. ಜನ್ಮಲಗ್ನವಾದ ಧನುರ್ಲಗ್ನವು ಕೋದಂಡರಾಮನನ್ನೇ ಈತನು ಉಪಾಸನೆ ಮಾಡಬಹುದೆಂಬುದಕ್ಕೆ ಸೂಚಕವೊ, ಎಂಬಂತಿತ್ತು. ಅಂತೂ ಇಂಥ ಶುಭಮುಹೂರ್ತದಲ್ಲಿ ಮಹಾಸಾಧ್ವೀ ಶಿರೋಮಣಿಯಾದ ಸೌ॥ ಲಕ್ಷ್ಮೀದೇವಿಯವರು ನಮ್ಮ ಕಥಾನಾಯಕನನ್ನು ಪಡೆದರು.

ಮಾತಾಪಿತೃಗಳು ತುಂಬ ಸಂತೋಷಯುಕ್ತರಾಗಿ ಮಗುವಿಗೆ ಸಕಾಲದಲ್ಲಿ ಜಾತಕರ್ಮಾದಿಗಳನ್ನು ನೆರವೇರಿಸಿ ಮಗುವಿಗೆ ಸುಬ್ರಹ್ಮಣ್ಯ (ಸುಬ್ಬರಾಯ)ನೆಂದು ನಾಮಕರಣ ಮಾಡಿದರು. ಹುಡುಗನು ತನ್ನ ಆಟಪಾಟಗಳಿಂದ ತಾಯಿ ತಂದೆಗಳನ್ನು ಸಂತೋಷಪಡಿಸುತ್ತಾ ಬಾಲಚಂದ್ರನಂತೆ ಬೆಳೆಯುತ್ತಿದ್ದನು.

## ತಂದೆತಾಯಿಗಳ ಸಂಸ್ಕೃತಿ, ರಾಯರ ಬಾಲ್ಯ :

ರಿಕಾರ್ಡುಕೀಪರು ನಂಜುಂಡಯ್ಯನವರು ಶಿಥಿಲವಾಗಿದ್ದ ತಮ್ಮ ಪೂರ್ವಿಕರ ಮನೆಯನ್ನು ಹೊಸದಾಗಿ ಕಟ್ಟಿಸಿಕೊಂಡಿದ್ದರು. ಮನೆಯು ಸಾಕಷ್ಟು ಸೌಕರ್ಯಗಳಿಂದ ಕೂಡಿತ್ತು. ರಾಯರಿಗೆ ಸ್ವಲ್ಪ ತಿಳಿವಳಿಕೆಯು ರೂಪಿಸಿಕೊಳ್ಳುವ ಹೊತ್ತಿಗೆ ಅವರ ತಂದೆಯವರು ಮುದುಕರಾಗಿದ್ದರು. ಅವರನ್ನು ನೇರಾಗಿ ಮಾತನಾಡಿಸುವಷ್ಟು ಧೈರ್ಯವು ಯಾರಿಗೂ ಸಾಲದು. ಆದರೂ ಅವರು

ಉಗ್ರಸ್ವಭಾವದವರಲ್ಲ. ಬೆಳಗಿನ ಝಾವದಲ್ಲಿಯೇ ಏಳುವದು, ಬೆಳಕು ಹರಿಯುತ್ತಲೂ ಒಂದು ಬಾರಿ ತೋಟಕ್ಕೆ ಹೋಗಿಬರುವದು. ಹತ್ತು ಘಂಟೆಯ ವೇಳೆಗೆ ಸ್ನಾನ ಮಾಡಿ ಆಹ್ನಿಕ, ದೇವರಪೂಜೆ, ವಿಷ್ಣುಸಹಸ್ರನಾಮಪಾರಾಯಣ- ಇವುಗಳನ್ನು ಪೂರೈಸಿಕೊಂಡು ಹನ್ನೊಂದು ಘಂಟೆಯ ಮೇಲೆ ಭೋಜನಮಾಡುವದು, ಬಿಸಿಲು ತಂಗುತ್ತಲೂ ಇನ್ನೊಂದು ಬಾರಿ ತೋಟಕ್ಕೆ ಹೋಗಿಬರುವದು, ಸಾಯಂಕಾಲ ಮನೆಯನ್ನು ಸೇರಿ ಹುಡುಗರಿಗೆ ಬಾಯಿಪಾಠ ಹೇಳಿಕೊಟ್ಟು ಅನಂತರ ಸಂಧ್ಯಾವಂದನೆ, ದೇವರಿಗೆ ಮಂಗಳಾರತಿ - ಇವುಗಳನ್ನು ಮುಗಿಸಿ ಊಟಮಾಡಿದ ಅನಂತರ ವಿಶ್ರಾಂತಿ - ಇಷ್ಟು ಅವರ ದಿನಚರಿಯಾಗಿತ್ತು. ಕೆಲಸಗಳನ್ನೆಲ್ಲ ಕಾಲಕ್ಕೆ ಸರಿಯಾಗಿ ಮಾಡುತ್ತಿದ್ದರು. ರಹಸ್ಯವೆಂಬುದು ಅವರಿಗೆ ತಿಳಿಯದು. ಅವರು ಎಂದೂ ಸಾಲವನ್ನು ತರುತ್ತಿರಲಿಲ್ಲ. ಮತ್ತೊಬ್ಬರಿಗೆ ಸಾಲಕೊಟ್ಟಾಗ ಮಿತವಾದ ಬಡ್ಡಿಯನ್ನು ಅಥವಾ ಕೆಲವು ವೇಳೆ ಸೋಡಿಯನ್ನು ಕೊಟ್ಟು ಲೆಕ್ಕವನ್ನು ಪೂರೈಸುತ್ತಿದ್ದರು. ಎಂದೂ ಕೋರ್ಟಿಗೆ ಹೋದವರಲ್ಲ. ಸಾಕ್ಷಿ ಹೇಳಿದವರಲ್ಲ. ಯಾವ ಪಕ್ಷಕ್ಕೂ ಸೇರದೆ ಉದಾಸೀನರಾಗಿಯೇ ಇರುತ್ತಿದ್ದರು.

ನಂಜುಂಡಯ್ಯನವರಿಗೆ ಧರ್ಮಾನುಷ್ಠಾನವಿಚಾರದಲ್ಲಿ ಮಿತಿಮೀರಿದ ಶ್ರದ್ಧೆ ಇರಲಿಲ್ಲವಾದರೂ ಗೃಹಸ್ಥಧರ್ಮಗಳನ್ನು ತಪ್ಪದೆ ಪಾಲಿಸುತ್ತಿದ್ದರು. ಹಬ್ಬ ಹರಿದಿನಗಳು, ಪಿತೃಕಾರ್ಯಗಳು - ಇವುಗಳನ್ನು ಎಚ್ಚರಿಕೆಯಿಂದಲೂ ಪೂಜ್ಯ ಬುದ್ಧಿಯಿಂದಲೂ ನಡೆಸುತ್ತಿದ್ದರು. ಮನೆಗೆ ಬಂದ ವೈದಿಕಬ್ರಾಹ್ಮಣರನ್ನು ಗೌರವಿಸಿ ದಾನಮಾಡುತ್ತಿದ್ದರು. ಬಟ್ಟೆ ಬರೆಗಳಲ್ಲಿ ಆಡಂಬರವೇನೂ ಇರಲಿಲ್ಲ. ದೊಡ್ಡ ಕುಟುಂಬಿಗಳಾದ್ದರಿಂದ ಪ್ರತಿವರ್ಷವೂ ಮನೆಯಲ್ಲಿ ಬಾಣಂತಿತನ, ಉಪನಯನ, ಮದುವೆ, ಚೂಡಾಕರ್ಮ - ಮುಂತಾದ ಶುಭಕಾರ್ಯಗಳು ನಡೆಯುತ್ತಲೇ ಇದ್ದವು. ಇದೆಲ್ಲವನ್ನೂ ನಡೆಯಿಸಿಕೊಂಡು ಕುಟುಂಬದ ಎಲ್ಲಾ ಜನರನ್ನೂ ಪ್ರೀತಿವಿಶ್ವಾಸಗಳಿಂದ ಕಾಣುತ್ತಾ ಸಕಲರ ಗೌರವಕ್ಕೂ ಪಾತ್ರರಾಗಿದ್ದ ಆದರ್ಶಗೃಹಸ್ಥರಾಗಿದ್ದ ನಂಜುಂಡಯ್ಯನವರು ಮುಂದೆ ರಾಯರು ಉತ್ತಮಸಂಸ್ಕಾರವಂತರಾಗುವದಕ್ಕೆ ತಕ್ಕ ತಂದೆಯೇ ಆಗಿದ್ದರು.

ತಾಯಿಯವರಾದ ಲಕ್ಷ್ಮೀದೇವಮ್ಮನವರದು ಹಾಸನಜಿಲ್ಲೆ ಚೆನ್ನರಾಯಪಟ್ಟಣ ತಾ॥ 'ಅಣತಿ' ಎಂಬ ಗ್ರಾಮ. ಆಕೆಯೂ ಕುಲಶೀಲಸಂಪನ್ನರಾದವರ ವಂಶದಿಂದಲೇ ಬಂದವರು. ಅವರ ಪೂರ್ವಿಕರ ಪರಿಚಯ ಅಷ್ಟಾಗಿ ತಿಳಿದುಬಂದಿಲ್ಲ. ಅವರು ಮನೆಗೆ ಗೃಹಲಕ್ಷ್ಮಿಯೇ ಆಗಿದ್ದರು ಎಂದರೆ ಅತಿಶಯೋಕ್ತಿಯಾಗಲಾರದು. ಬೆಳಗ್ಗೆ ಎದ್ದಕೂಡಲೆ ಉದಯರಾಗವನ್ನು ಹಾಡುತ್ತಿದ್ದರು. ಅನಂತರ ದನಕರುಗಳಿಗೆ ಮೇವುಹಾಕಿ ತುಳಸೀಕಟ್ಟೆ ಹಾಗೂ ಮನೆಬಾಗಿಲನ್ನು ಸಾರಿಸಿ ರಂಗವಲ್ಲ್ಯಾದಿಗಳಿಂದ ಅಲಂಕರಿಸುತ್ತಿದ್ದರು. ಅನಂತರ ಮಡಿಯುಟ್ಟು ಗೌರಿಪೂಜೆಯನ್ನು ಮಾಡಿ ಅಡಿಗೆ ಕೆಲಸದಲ್ಲಿ ನಿರತರಾಗುತ್ತಿದ್ದರು. ಮಧ್ಯಾಹ್ನದ ಮೇಲೆ ಎಲ್ಲರ ಊಟವೂ ಆದ ನಂತರ ತಾವೂ ಊಟಮಾಡಿ ಮನೆಗೆಲಸಗಳನ್ನು ಮಾಡಿಕೊಳ್ಳುತ್ತಿದ್ದರು. ಮನೆಗೆ ಬೇಕಾದ

ಸಾಮಾನುಗಳನ್ನೆಲ್ಲ ತಾವೇ ಸಿದ್ಧಪಡಿಸಿಕೊಳ್ಳುತ್ತಿದ್ದರು. ಮನೆಯ ಕೆಲಸವಾದ ಬಳಿಕ ಅಕ್ಕಪಕ್ಕದ ಮನೆಯ ಹೆಂಗಸರನ್ನು ಸೇರಿಸಿಕೊಂಡು ಯಕ್ಷಗಾನದ ಪದಗಳನ್ನು ಹೇಳಿಸುತ್ತ ಅಲ್ಲಲ್ಲಿ ಅರ್ಥವನ್ನು ವಿವರಿಸುತ್ತಿದ್ದರು. ಇದರಿಂದ ಮನೆಯು ಒಂದು ಮಹಿಳಾಸಮಾಜದಂತೆ ಇರುತ್ತಿತ್ತು. ರಾಯರಿಗೆ ದೇವರಲ್ಲಿ ಭಕ್ತಿಯಿರಬೇಕೆಂಬುದು ತಾಯಿಯವರ ಪಾಠದಿಂದಲೇ ಪ್ರಾರಂಭವಾಯಿತು. ರಾಯರಿಗೆ ಆಗಾಗ್ಗೆ ಏನಾದರೊಂದು ರೋಗವು ಕಾಣಿಸಿಕೊಳ್ಳುತ್ತಿತ್ತಾದರೂ ತಾಯಿಯವರ ಉಪಚಾರದಿಂದ ಅವರು ಇಷ್ಟು ದೀರ್ಘಕಾಲ ಬಾಳುವದು ಸಾಧ್ಯವಾಯಿತು. ರಾಯರಿಗೆ ತಂದೆಗಿಂತ ತಾಯಿಯವರಲ್ಲಿಯೇ ಪ್ರೀತಿಯು ಹೆಚ್ಚಾಗಿತ್ತು. ಕರ್ತವ್ಯತತ್ಪರತೆ, ಓದುಬರಹದಲ್ಲಿ ಆಸೆ, ಧರ್ಮದಲ್ಲಿ ಪ್ರೀತಿ, ಇಂಥ ಗುಣಗಳು ತಾಯಿಯವರಿಂದಲೇ ಬಂದಿವೆ ಎಂದು ರಾಯರು ಹೇಳಿಕೊಳ್ಳುತ್ತಾರೆ. ಇರಲಿ. ಲಕ್ಷ್ಮೀದೇವಮ್ಮನವರು ರಾಯರಿಗೆ ಮಾತ್ರವಲ್ಲದೆ ಬಡಬಗ್ಗರಿಗೂ ಒಂದರ್ಥದಲ್ಲಿ ತಾಯಿಯಾಗಿಯೇ ಇದ್ದರು. ಏನಾದರೂ ಕೇಳಿದವರನ್ನು ಎಂದೂ ಬರಿಗೈಯಲ್ಲಿ ಕಳುಹಿಸುತ್ತಿರಲಿಲ್ಲ. ಜೊತೆಗೆ ಕೆಲವು ಅನುಭವವೈದ್ಯದ ತಿಳಿವಳಿಕೆಯಿಂದ ಬಸುರಿ ಬಾಣಂತಿಯರಿಂದ ರೋಗಿಗಳವರೆಗೂ ಸಮಯಾನುಸಾರ ಔಷಧಿಗಳನ್ನು ಕೊಡುತ್ತಿದ್ದರು. ಪರೋಪಕಾರವೆಂಬುದು ಅವರ ಜೀವನದಲ್ಲಿ ಹಾಸುಹೊಕ್ಕಾಗಿತ್ತು. ಇಂಥ ತಾಯಿ ತಂದೆಯವರನ್ನು ಪಡೆದಿದ್ದ ರಾಯರು ಉಪನಿಷತ್ತಿನಲ್ಲಿ ಹೇಳಿರುವಂತೆ **'ಯಥಾ ಮಾತೃಮಾನ್ ಪಿತೃಮಾನ್'**- ಎಂಬ ಉಕ್ತಿಗೆ ಉದಾಹರಣೆಯಾಗಿದ್ದಾರೆ.

ರಾಯರ ಬಾಲ್ಯದಲ್ಲಿ ಹತ್ತಿರವಿದ್ದ ಮತ್ತೊಬ್ಬ ವ್ಯಕ್ತಿಯೆಂದರೆ ಅವರ ಅಕ್ಕ ರಂಗಮ್ಮನವರು. ಅವರ ಯಜಮಾನರು ಗುಂಡಪ್ಪ ಭಾವನವರು ರಾಯರಿಗೆ ತಕ್ಕಮಟ್ಟಿಗೆ ಗೊತ್ತು. ರಂಗಕ್ಕನವರು ಹೆಚ್ಚುಕಾಲ ತೌರುಮನೆಯಲ್ಲಿರುತ್ತಿದ್ದರು. ಇದರಿಂದ ರಾಯರಿಗೆ ಅವರ ಸಹವಾಸವು ಲಭಿಸಿತ್ತು. ಅವರು ಯಕ್ಷಗಾನಪದಗಳನ್ನು ರಾಗವಾಗಿ ಹೇಳುತ್ತಿದ್ದರು. ಸಂಗೀತದ ಅಭಿರುಚಿ ಅವರಿಂದಲೇ ರಾಯರಿಗೆ ಬಂದಿರಬೇಕು. ಇದರಿಂದ ಮುಂದೆ ಭಜನೆಯಲ್ಲಿ ಆದರವುಂಟಾಗಲು ಅವಕಾಶವಾಯಿತು. ಇನ್ನೊಬ್ಬ ಅಕ್ಕನವರು ಲಕ್ಷ್ಮಕ್ಕನವರು. ಇವರ ಯಜಮಾನರು ವೈದಿಕಸಂಪ್ರದಾಯದವರು. ಈ ಅಕ್ಕನವರು ರಾಯರ ಬಾಲ್ಯದಲ್ಲಿ ಅಷ್ಟು ಜೊತೆಯಲ್ಲಿರದಿದ್ದರೂ ಆಮೇಲೆ ಅವರ ಸಂಬಂಧವು ಅತ್ಯಂತ ನಿಕಟವಾಗಿತ್ತು - ಎಂಬುದು ಮುಂದಿನ ಕಥೆಯಲ್ಲಿ ಗೊತ್ತಾಗುವದು. ಹಿರಿಯಕ್ಕ ನಂಜಮ್ಮನವರು, ಹಿರಿಯಣ್ಣ ಶ್ರೀಕಂಠಯ್ಯನವರು, ಇನ್ನೊಬ್ಬ ಅಣ್ಣ ಶಿವರಾಮಯ್ಯನವರು, ತಮ್ಮ ಕೃಷ್ಣಸ್ವಾಮಿ - ಇಷ್ಟು ಜನರು ಮತ್ತೆ ಕೆಲವರು ಬಂಧುಗಳು. ಈ ಮಹಾಶಯರುಗಳು ಅಲ್ಲಲ್ಲಿ ಮುಂದೆ ಕಥಾಸಂದರ್ಭದಲ್ಲಿ ಬೇಕಾದವರಾದ್ದರಿಂದ ಇಲ್ಲಿ ಸೂಚಿಸಿದೆ.

# ೩. ವಿದ್ಯಾಭ್ಯಾಸ - ಉಪನಯನ

**ಬಾಲ್ಯದ ಆಟಪಾಠಗಳು :**

ರಾಯರು ಚಿಕ್ಕವಯಸ್ಸಿನಲ್ಲಿ ಯಳ್ಳಂಬಳಸೆಯನ್ನು ಬಿಟ್ಟು ಎಲ್ಲಿಗೂ ಹೋದಂತೆ ಕಾಣಲಿಲ್ಲ. ಯಾವಾಗಲೋ ಒಂದು ಬಾರಿ ಮಾವಿನಕೆರೆ ಬೆಟ್ಟಕ್ಕೂ ರಾಮನಾಥಪುರಕ್ಕೂ ಹೋಗಿ ಗೋಗರ್ಭದಲ್ಲಿ ನುಸುಳಿದ ನೆನಪು ಇದೆ - ಎಂದು ತಿಳಿಸಿದ್ದಾರೆ. ಇಷ್ಟುಮಾತ್ರ ಬಾಲ್ಯದ ಪ್ರವಾಸಗಳು. ಮುಂದೆ ಮಗುವಿಗೆ ಏಳನೆಯ ವರ್ಷದಲ್ಲಿ ಚೌಲವೂ ಅಕ್ಷರಾಭ್ಯಾಸವೂ ನಡೆಯಿತು. ಆಗಿನ ಕಾಲಕ್ಕೆ ಇನ್ನೂ ಸ್ಕೂಲುಗಳು ಇರಲಿಲ್ಲವಾದ್ದರಿಂದ **ಚರಂತರ ಮಠದಲ್ಲಿ** ರಾಯರ ಬಾಲ್ಯವಿದ್ಯಾಭ್ಯಾಸವು ಪ್ರಾರಂಭವಾಯಿತು. ಇದನ್ನು **ಕೂಲಿಮಠ** ಎಂದೂ ಕರೆಯುತ್ತಿದ್ದರು. **ಚರಂತರ ಮನೆಯ ಜಗುಲಿಯೇ** ಆಗ್ಗೆ ಪಾಠಶಾಲೆ, ಒಬ್ಬರೇ ಉಪಾಧ್ಯಾಯರು; ಹಲವು ವಿದ್ಯಾರ್ಥಿಗಳಿದ್ದರು. ಅಯ್ಯನವರ ಮಠದಲ್ಲಿ ಬೆಳಗಿನಿಂದ ಸಂಜೆಯವರೆಗೂ ಪಾಠಗಳೇ, ಕಾಲನಿಯಮವೇನೂ ಇರಲಿಲ್ಲ. ಅಯ್ಯನವರು ಬೇಕಾದಾಗ ಹೊರಕ್ಕೆ ಹೋಗಿಬರುತ್ತಿದ್ದರು. ಅವರಿಲ್ಲದಾಗ ಹುಡುಗರು ಗಲಾಟೆ ಮಾಡುವದು, ಬಂದಮೇಲೆ ಅವರು ಹೊಡೆದ ಏಟಿನಿಂದ ಗೋಳಿಡುವದು - ಇವು ಸಾಮಾನ್ಯದೃಶ್ಯಗಳು. ಬೆಳಗ್ಗೆ ಉದಯರಾಗ, ಬಾಯಿಪಾಠ, ಮಳಲುತರಗತಿಗಳು - ಹೀಗೆ ನಡೆಯುತ್ತಿದ್ದವು. ಓದುವದಕ್ಕೆ ಹೆಚ್ಚಾಗಿ ಅಚ್ಚಿನ ಪುಸ್ತಕಗಳಿರಲಿಲ್ಲ. ಆಗ ಸಾಮಾನ್ಯವಾಗಿ ಗೋವಿನ ಕಥೆ, ವಿಭೀಷಣಬುದ್ಧಿ, ಕಪೋತನ ಚರಿತ್ರೆ- ಇವೇ ಹುಡುಗರಿಗೆ ಕಲಿಸುತ್ತಿದ್ದ ಪಾಠಗಳು. ಓದುವ ಪಾಠವನ್ನು ಮೊದಲೇ ಒಂದು ಪುಸ್ತಕದಲ್ಲಿ ಬರೆದಿಟ್ಟುಕೊಳ್ಳಬೇಕಾಗಿತ್ತು. ಬರೆಯುವದಕ್ಕೆ ಕರಡುಕಾಗದ, ಬಗಿನೆಕಡ್ಡಿಯ ಲೇಖನಿ- ಇವು ಸಾಧನಗಳು. ಬಹಳಮಟ್ಟಿಗೆ ಬರೆದುಕೊಂಡೇ ಪಾಠಗಳನ್ನು ಕಲಿಯಬೇಕಾಗಿದ್ದದ್ದರಿಂದ ಬರವಣಿಗೆಗೆ ಹೆಚ್ಚು ಬೆಲೆ ಇತ್ತು.

ಹುಡುಗರ ಆಟಗಳು ಆಗಿನ ಕಾಲಕ್ಕೆ ಚೆಂಡು, ಬುಗುರಿ, ಚಿಣ್ಣಿ, ಗಜ್ಜುಗ ಇವುಗಳನ್ನು ಪ್ರಧಾನವಾಗಿ ಒಳಗೊಂಡಿದ್ದವು. ಗಾಳಿಪಟದ ಆಟವೂ ಇರುತ್ತಿತ್ತು. ದೊಡ್ಡ ದೊಡ್ಡ ಹುಡುಗರು ಮರಹತ್ತುವದು, ಈಜುವದು- ಮುಂತಾದ ಸಾಹಸಗಳನ್ನೂ ತೋರಿಸುತ್ತಿದ್ದರು. ಆದರೆ ರಾಯರಿಗೆ ಮಾತ್ರ ಈಜುವದಕ್ಕೆ ಬರುತ್ತಿರಲಿಲ್ಲ. ಮಠದಲ್ಲಿ ಕೆಲವು ವೇಳೆ ಚರಂತಯ್ಯನವರು ವೀರಭದ್ರದೇವರ ಲೀಲೆಗಳನ್ನೂ ಯಕ್ಷಗಾನದ ಕೆಲವು ಅಭಿನಯಗಳನ್ನೂ ಹುಡುಗರಿಂದ ಮಾಡಿಸುತ್ತಿದ್ದರು. ಈ ಬಗೆಯ ವಿನೋದವು ರಾಯರ ನಡೆನುಡಿಗಳ ಮೇಲೂ ಸ್ವಲ್ಪ ಪರಿಣಾಮವನ್ನು ಉಂಟುಮಾಡುತ್ತಿತ್ತು.

**ಸರ್ಕಾರಿಸ್ಕೂಲು :**

ರಾಯರು ಒಂದುವರ್ಷ ಚರಂತರ ಮಠದಲ್ಲಿ ವಿದ್ಯಾಭ್ಯಾಸಮಾಡುವದರೊಳಗಾಗಿ ಯಳ್ಳಂಬಳಸೆಗೆ ಸರ್ಕಾರಿಸ್ಕೂಲು ಬಂದಿತು. ಇದರಲ್ಲಿ ಹಳೆಯ ಮಠದ ಪದ್ಧತಿಗಳೆಲ್ಲ ಮಾಯವಾದವು. ಬೆಳಗ್ಗೆ ೭ ರಿಂದ ೧೦ ಘಂಟೆಯವರೆಗೆ ಮತ್ತು ಮಧ್ಯಾಹ್ನ ೩ ರಿಂದ ೫ ರವರೆಗೆ ಪಾಠ, ಆಗಾಗ್ಗೆ ರಜಾದಿನಗಳು, ಭಾನುವಾರ ಪೂರ್ತರಜ- ಇವೆಲ್ಲ ವಾಡಿಕೆಗೆ ಬಂದವು. ಓದುವದಕ್ಕೆ ಅಚ್ಚಾದ ಪುಸ್ತಕಗಳು, ಸ್ಲೇಟು, ಬಳಪ, ಬಿಳಿಯಕಾಗದ, ಪೆನ್ಸಿಲು- ಎಲ್ಲವೂ ಚಾಲ್ತಿಗೆ ಬಂದವು. ತರಗತಿಗಳ ವಿಂಗಡನೆ, ವೇಳಾಪತ್ರಿಕೆ ಎಲ್ಲವೂ ಕಾಣಿಸ ತೊಡಗಿದವು. ಮೊದಮೊದಲು ಈ ಮಾರ್ಪಾಡು ರಾಯರಿಗೆ ಹಿಡಿಸಲಿಲ್ಲವಾದರೂ ಕಾಲಕ್ರಮದಲ್ಲಿ ಸರಿಯಾಯಿತು. ಆಗ ಕಥಾಸ್ತುತಿ, ಕಥಾಮಂಜರಿ, ಪದ್ಯಸಾರ, ವಾಗ್ವಿಧಾಯಿನಿ, ಭೂವಿವರಣೆ ಮುಂತಾದ ಪಾಠಗಳನ್ನು ಹುಡುಗರಿಗೆ ಬೋಧಿಸುತ್ತಿದ್ದರು. ಭೂಗೋಳಪಾಠಕ್ಕೆ ಒಂದು ಮ್ಯಾಪ್ ಸಹ ಇತ್ತು. ಪದ್ಯಸಾರದಲ್ಲಿನ **'ದುರ್ಜನರ ಸಂಗವನು ತ್ಯಜಿಸು ಮನವೆ, ಸಾಧುಸಜ್ಜನರ ಸಂಗವನು ಭಜಿಸು'** ಇಂಥ ಪದ್ಯಗಳನ್ನು ರಾಯರು ಬಾಯಿಪಾಠ ಮಾಡಿದ್ದರೂ ಪ್ರತಿಪದಾರ್ಥವನ್ನು ಏಕೆ ಹೇಳಬೇಕೆಂದು ಆಗ ಗೊತ್ತಾಗಿರಲಿಲ್ಲವಂತೆ. ಅಕ್ಷರಗಳನ್ನು ಕ್ರಮಪಡಿಸಿ ಬರೆಯಲು 'ಕಾಪಿ' ಬರೆಯುವ ಪದ್ಧತಿ ಇತ್ತು. ಮೇಷ್ಟರು 'ಸುಳ್ಳು ಹೇಳಬಾರದು', ' ಗುರುಹಿರಿಯರಲ್ಲಿ ಭಕ್ತಿಯಿಡಬೇಕು', 'ಯಾವಾಗಲೂ ಆಡುತ್ತಿರಬಾರದು' ಮುಂತಾದ ನೀತಿವಾಕ್ಯಗಳನ್ನು ಮೇಲುಪಂಕ್ತಿ ಹಾಕಿಕೊಡುತ್ತಿದ್ದರು. ಮೇಷ್ಟರು ಸ್ಲೇಟಿನ ಮೇಲೆ ಉಕ್ತ ಲೇಖನಗಳನ್ನು ಬರೆಸುವಾಗ ಅವರು ಬೇಗ ಬೇಗ ಹೇಳುತ್ತಿದ್ದುದರಿಂದಲೂ ಕೈ ಬೆವರುತ್ತಿದ್ದುದರಿಂದಲೂ ಬರೆಯುವದು ಸ್ವಲ್ಪ ಕಷ್ಟವಾಗುತ್ತಿತ್ತಂತೆ. ತಪ್ಪಿದ್ದರೆ ಮೇಷ್ಟರು ಹೊಡೆಯುವದು ಖಂಡಿತ.

**'ತಸ್ಮಾತ್ ಪುತ್ರಂ ಚ ಶಿಷ್ಯಂ ಚ ತಾಡಯೇತ್ ನ ತು ಲಾಲಯೇತ್'** ಎಂಬಂತೆ ಹಿಂದಿನ ಕಾಲಕ್ಕೆ ಹುಡುಗರಿಗೆ ಶಿಕ್ಷೆ ಹೆಚ್ಚಾಗಿಯೇ ಆಗುತ್ತಿತ್ತು. ಲೆಕ್ಕದಲ್ಲಿ ಮಾತ್ರ ರಾಯರಿಗೆ ತೊಂದರೆಯಾಗುತ್ತಿತ್ತಂತೆ. ಬಸಪ್ಪನೆಂಬ ವಿದ್ಯಾರ್ಥಿಯು ಮಾತ್ರ ಲೆಕ್ಕವನ್ನು ಬೇಗಮಾಡಿ ಅಚ್ಚಿನ ಪುಸ್ತಕದಲ್ಲಿದ್ದ ಉತ್ತರಕ್ಕೆ ಹೋಲಿಸಿ ರೈಟು ಹಾಕಿಸಿಕೊಳ್ಳುತ್ತಿದ್ದನಂತೆ. ಲೆಕ್ಕವನ್ನು ವಿವರಿಸಲು ಏನಾದರೂ ವಿವರಣೆ ಬರೆದಿದ್ದರೆ ರಾಯರಿಗೆ ಲೆಕ್ಕಕ್ಕಿಂತ ವಿವರಣೆಯನ್ನು ಕುರಿತೇ ಹೆಚ್ಚಾಗಿ ಯೋಚಿಸುವಂತಾಗುತ್ತಿತ್ತು. ಅಂತೂ ಸ್ಕೂಲು ವಿದ್ಯಾಭ್ಯಾಸವು, ಚರಂತರ ಮಠಕ್ಕಿಂತ ತುಂಬ ವ್ಯವಸ್ಥೆಯಿಂದ ಸಾಗಿತ್ತು- ಎನ್ನಬಹುದು.

**ಉಪನಯನ :**

ರಾಯರಿಗೆ ಹನ್ನೊಂದನೆಯ ವರ್ಷದಲ್ಲಿ ಉಪನಯನವಾಯಿತು. ಆಗ್ಗೆ ಅದು ಒಂದು ಉತ್ಸವದಂತೆ ರಾಯರಿಗೆ ಕಂಡುಬಂತು. ಪುರೋಹಿತರಿಗೆ ದೊರೆತ ಗೌರವಸ್ಥಾನವು ರಾಯರಿಗೆ

ಆಗಲೇ ಗೊತ್ತಾದದ್ದು. ಗಾಯತ್ರಿಯ ಉಪದೇಶ, ಸಂಧ್ಯಾವಂದನೆ, ಅಗ್ನಿಕಾರ್ಯ- ಇವು ಕ್ರಮವಾಗಿ ನಡೆದವು. ಉಪನಯನಕ್ಕಾಗಿ ಸೇರಿದ್ದ ಬ್ರಾಹ್ಮಣಸಭೆಯಲ್ಲಿ ಗಾಯತ್ರಿಯ ಅಂಗವಾದ ಮುದ್ರಾದಿಗಳು, ಸಂಧ್ಯಾವಂದನೆಯ ಉಪಸ್ಥಾನಮಂತ್ರಗಳು - ಮುಂತಾದವುಗಳನ್ನು ಕುರಿತ ಚರ್ಚೆಗಳಾಗುತ್ತಿದ್ದವಂತೆ.

ಇದರಿಂದ ಇನ್ನು ಮುಂದೆ ಶಾಸ್ತ್ರವಿಷಯವಾಗಿ ಕಂಡುಕೊಳ್ಳತಕ್ಕದ್ದು ಏನೋ ಇದೆ -ಎಂದು ರಾಯರಿಗೆ ಗೊತ್ತಾಯಿತು. ಅಂತೂ ಉಪನಯನದಿಂದ ರಾಯರ ಮನಸ್ಸಿನ ಮೇಲೆ ಒಳ್ಳೆಯ ಪರಿಣಾಮವಾಯಿತು. ತಂದೆಯವರೇ ಮುಂದೆ ಸಂಧ್ಯಾವಂದನೆಯ ಮಂತ್ರಗಳು, ಕೆಲವು ಸ್ತೋತ್ರಗಳು, ಕೃಷ್ಣಾಷ್ಟೋತ್ತರ, ಶಿವಾಷ್ಟೋತ್ತರ, ಇಂದ್ರಾಕ್ಷಿ, ಶಿವಕವಚ- ಮುಂತಾದವುಗಳನ್ನು ಹೇಳಿಕೊಟ್ಟರು. ಊಟದ ಕಾಲಕ್ಕೆ ಹರೇರಾಮಮಂತ್ರ, ವಿಷ್ಣುಸಹಸ್ರನಾಮ -ಇವುಗಳನ್ನು ಹೇಳಿಕೊಡುತ್ತಿದ್ದರು. ದೇವರ ಪೂಜೆಯನ್ನು ಮಾಡುವದೂ ಮುಂದೆ ಅಭ್ಯಾಸವಾಯಿತು. ಶಿವರಾತ್ರಿ ಮುಂತಾದ ವಿಶೇಷದಿನಗಳಲ್ಲಿ ತಂದೆಯವರೇ ದೇವರ ಪೂಜೆ ಮಾಡಿ ತೆಲುಗು ಅಕ್ಷರದ ಪುಸ್ತಕದಿಂದ ಸಹಸ್ರನಾಮವನ್ನು ರಾಯರಿಂದ ಓದಿಸುತ್ತಿದ್ದರು. ಇದರಿಂದ ರಾಯರಿಗೆ ತೆಲುಗುಲಿಪಿಯ ಪರಿಚಯವಾಯಿತು. ಇದು ಮುಂದೆ ಸಂಸ್ಕೃತ ಗ್ರಂಥಗಳನ್ನು ಓದಲು ಸಹಾಯವಾಯಿತು.

## ಊರಿನ ಸ್ಥಿತಿ : ಊರಿನ ಕೆಲವು ಪ್ರಮುಖರು :

ಆಗ್ಗೆ ದುಡ್ಡಿನ ಚಲಾವಣೆ ಹೆಚ್ಚಾಗಿರಲಿಲ್ಲ. ಬೆಳೆದವರು ಪದಾರ್ಥಗಳನ್ನು ಪರಸ್ಪರ ವಿನಿಮಯ ಮಾಡಿಕೊಳ್ಳುತ್ತಿದ್ದರು. ಬಡವರಿಗೆ ಐಶ್ವರ್ಯವಂತರು ಸಹಾಯಮಾಡುವದು ಸ್ವಾಭಾವಿಕವಾಗಿತ್ತು. ದಾನಧರ್ಮಗಳು ಧಾರಾಳವಾಗಿ ನಡೆಯುತ್ತಿದ್ದವು. ಕೆಲಸಗಳಲ್ಲಿ ನೆರೆಹೊರೆಯವರು ಅನ್ಯೋನ್ಯವಾಗಿ ಸಹಾಯಕರಾಗುತ್ತಿದ್ದರು. ಹೂ, ಹಣ್ಣು, ತರಕಾರಿ, ಹಾಲುಮೊಸರು - ಇಂಥವುಗಳನ್ನು ಮಾರುವದು ನಾಚಿಕೆಗೇಡೆಂಬ ಭಾವನೆ ಜನರಲ್ಲಿತ್ತು. ಇವುಗಳನ್ನು ತಮಗೆ ಹೆಚ್ಚಾದದ್ದನ್ನು ಹಾಗೆಯೇ ಮತ್ತೊಬ್ಬರಿಗೆ ಕೊಡುತ್ತಿದ್ದರು. ಹೊಲಗದ್ದೆಗಳು ಫಲವತ್ತಾಗಿದ್ದು ಚೆನ್ನಾಗಿ ಬೆಳೆ ಆಗುತ್ತಿತ್ತು. ಎಲ್ಲ ಜಾತಿಯವರೂ ಪರಸ್ಪರ ಸೌಹಾರ್ದದಿಂದ ಇರುತ್ತಿದ್ದರು. ಜನರಿಗೆ ಆಶೋತ್ತರಗಳು ಹೆಚ್ಚಾಗಿರಲಿಲ್ಲ. ಊರಿಗೆ ಆಗಾಗ್ಗೆ ಬಯಲಾಟದವರು, ಬೊಂಬೆಯಾಟದವರು, ಪೈಲುವಾನರು, ಯಕ್ಷಿಣೀವಿದ್ಯೆಯವರು - ಮುಂತಾದವರು ಬಂದು ಒಂದೆರಡು ಆಟಗಳನ್ನಾಡಿ ಸಂಭಾವನೆಯನ್ನು ಪಡೆದುಕೊಂಡು ಹೋಗುತ್ತಿದ್ದರು. ಊರಿನಲ್ಲಿ ಒಂದು ಗರಡಿ ಮನೆಯೂ ಇತ್ತು. ರಾಯರೂ ಅಲ್ಲಿಗೆ ಹೋಗುತ್ತಿದ್ದುದುಂಟು.

ಊರಿನ ಕೆಲವು **ಗಣ್ಯ**ಜನರ ಸೂಕ್ಷ್ಮಪರಿಚಯವು ಇಲ್ಲಿ ಅವಶ್ಯವಾಗಿದೆ. ಮೊದಲನೆಯದಾಗಿ ಎಡಗಡೆ ಮನೆಯ **ನಾಡಿಗ ಅಶ್ವತ್ಥನಾರಾಯಣಯ್ಯನವರು**. ಆಗಿನ ಕಾಲಕ್ಕೆ ನಾಡಿಗರ ಮನೆ ಎಂದರೆ ಕಚೇರಿ ಇದ್ದಹಾಗೆ. ಇವರಿಗೆ ಊರಿನಲ್ಲಿ ಹೆಚ್ಚಿನ

ಮರ್ಯಾದೆಯಿತ್ತು. ವಿನಾಯಕನ ಮಂಗಳಾರತಿ ಮೊದಲು ಇವರ ಮನೆಯಿಂದಲೇ ಪ್ರಾರಂಭವಾಗುತ್ತಿತ್ತು. ಎರಡನೆಯದಾಗಿ ಬಲಗಡೆಯ ಮನೆಯಲ್ಲಿದ್ದ ಅವರ ಬೀಗರು ಲಕ್ಷ್ಮಯ್ಯನವರು. ನಾಡಿಗರಂತೆಯೇ ದೊಡ್ಡ ಮನುಷ್ಯರು. ಬೆಂಗಳೂರಿನವರೆಗೂ ನೆಂಟಸ್ತನವೂ ಪರಿಚಯವೂ ಇವರಿಗೆ ಇತ್ತು. ಹೊಸ ನಾಗರಿಕತೆಯ ಗುರುತುಗಳು ಇವರ ಮನೆಯಲ್ಲಿ ಮೊದಲು ತೋರಿಕೊಳ್ಳುತ್ತಿದ್ದವು. ಕಾಫಿಕುಡಿಯುವ ಪದ್ಧತಿ, ಮಕ್ಕಳಿಗೆ ಇಂಗ್ಲಿಷು ವಿದ್ಯಾಭ್ಯಾಸ, ಪೆಟ್ಟಿಗೆಗಾಡಿಯ ಪ್ರಯಾಣ, ಪಿಟೀಲು ಮುಂತಾದ ಸಂಗೀತವಾದ್ಯಗಳ ಧ್ವನಿ ಇವೆಲ್ಲ ಅಲ್ಲಿ ಕಂಡುಬರುತ್ತಿದ್ದವು. ಇವರ ಮನೆಯಲ್ಲಿ ಆಗಾಗ್ಗೆ ಹರಿಕಥೆ, ಸಂಗೀತಗಳು ನಡೆಯುತ್ತಿದ್ದವು. ಕೋರ್ಟು ಕಚೇರಿ ಪ್ರಸಂಗಗಳೂ ಇವರಲ್ಲಿ ಉಂಟು. ಇನ್ನೊಬ್ಬರು ನಾರಾಯಣಭಟ್ಟರು. ಇವರು ವೈದಿಕರಾದರೂ ಲೌಕಿಕ ನಡತೆಯವರು. ಇವರ ತಮ್ಮಂದಿರಾದ ಪುರಾಣಿಕ ನರಸಿಂಹಭಟ್ಟರು ವೈದಿಕವೃತ್ತಿಯವರು. ಲಕ್ಷ್ಮಯ್ಯನವರು ಮತ್ತು ನಾರಾಯಣಭಟ್ಟರು ಇವರಿಬ್ಬರ ಜಗಳವು ಊರಿಗೇ ಒಂದು ಕಳಂಕಪ್ರಾಯವಾಗಿತ್ತು. ನಾರಾಯಣಭಟ್ಟರ ಪಕ್ಕದ ಮನೆಯಲ್ಲಿ ಅಯ್ಯನವರ ವೆಂಕಟಸುಬ್ಬಯ್ಯನವರು ಮತ್ತು ಕೃಷ್ಣಭಟ್ಟರು ಇವರುಗಳಿದ್ದರು. ವೆಂಕಟಸುಬ್ಬಯ್ಯನವರು ಮಿತಭಾಷಿಗಳು, ಯುಕ್ತಿವಂತರು. ಯಾರ ತಂಟೆಗೂ ಹೋಗುತ್ತಿರಲಿಲ್ಲ. ಇವರು ರಾಮಾಯಣಪಾರಾಯಣವನ್ನು ಭಕ್ತಿಯಿಂದ ಮಾಡುತ್ತಿದ್ದರು. ಆಗಿನ ಕಾಲಕ್ಕೆ ಹಬ್ಬದಲ್ಲಿ ಗಣಪತಿಯನ್ನು ಅವರವರ ಮನೆಯವರೇ ಮಾಡಿಕೊಳ್ಳುತ್ತಿದ್ದರು. ಇದರಿಂದ ಒಬ್ಬೊಬ್ಬರ ಮನೆ ಗಣಪತಿ ಒಂದೊಂದು ವಿಧವಾಗಿರುತ್ತಿತ್ತು. ಅಯ್ಯನವರ ಕೃಷ್ಣಭಟ್ಟರ ಮನೆಯು ಒಂದು ವೇದಗೃಹವಾಗಿತ್ತು. ಅವರು ಋಗ್ವೇದವನ್ನು ಅಧ್ಯಯನ ಮಾಡಿದ್ದು ಮಕ್ಕಳಿಗೂ ಹೇಳಿ ಕೊಡುತ್ತಿದ್ದರು. ಅವರು ಕೃಷ್ಣಯೋಗೀಶ್ವರರ ಮನೆತನದವರೆಂದೂ ಅರಸೀಕೆರೆ ಬಳಿಯ ಮಾಲೆಕಲ್ಲು ತಿರುಪತಿ ದೇವಸ್ಥಾನದಲ್ಲಿ ಅಗ್ರತೀರ್ಥ ಮರ್ಯಾದೆ ಇತ್ತೆಂದೂ ತಿಳಿದು ಬಂದಿದೆ. ಅವರ ಮನೆಯ ರಾಮಪಟ್ಟಾಭಿಷೇಕವು ರಾಯರ ಮೇಲೆ ಹೆಚ್ಚು ಪ್ರಭಾವ ಬೀರಿತ್ತು. ಪುರಾಣಿಕ ಸುಬ್ಬಾಭಟ್ಟರು, ಅವರ ತಮ್ಮ ರಂಗಾಭಟ್ಟರು ರಾಯರ ಮನೆಗೆ ಬಹಳವಾಗಿ ಬರುತ್ತಿದ್ದವರು. ಸುಬ್ಬಾಭಟ್ಟರು ಶೀಘ್ರಕೋಪಿಗಳು; ಸ್ವಲ್ಪ ಕುಚೇಷ್ಟೆಯವರು. ಪುರಾಣಿಕ ರಂಗಾಭಟ್ಟರು ಕಾಶೀಯಾತ್ರೆ ಮಾಡಿದ್ದರು. ಅವರು ಕಾಶೀಯಾತ್ರೆಯಿಂದ ಹಿಂತಿರುಗಿದಾಗ ಊರಿನವರು ಎದುರುಗೊಂಡು ಗೌರವಿಸಿದ್ದು, ಅವರು ಸಣ್ಣ ಭಾಷಣಮಾಡಿದ್ದು ರಾಯರಿಗೆ ಆಶ್ಚರ್ಯಕರವಾಗಿ ಕಂಡಿತ್ತು. ಮತ್ತೊಬ್ಬ ಗೌರವಯುತ ವ್ಯಕ್ತಿಗಳೆಂದರೆ ಜೋಯಿಸ ಸುಬ್ಬಾಭಟ್ಟರು. ಇವರು ಸ್ವಲ್ಪವೂ ಗದ್ದಲವಿಲ್ಲದೆ ವಿನಯದಿಂದಿರುತ್ತಿದ್ದರು. ಇವರ ಮಾತಿಗೆ ಎಲ್ಲರೂ ಕಟ್ಟು ಬೀಳುತ್ತಿದ್ದರು. ಇವರು ಯಾರೊಬ್ಬರ ಪಕ್ಷವನ್ನೂ ವಹಿಸುತ್ತಿರಲಿಲ್ಲ. ಇವರೇ ಊರ ಜೋಯಿಸರು.

ಇವರು ಒಮ್ಮೆ ಸಂಸ್ಕೃತಭಾರತದಲ್ಲಿ ಯಾವದೋ ಒಂದು ಭಾಗವನ್ನು ಪುರಾಣ ಹೇಳಿದ್ದು ರಾಯರಿಗೆ ನೆನಪಿದೆ. ಕನ್ನಡಭಾರತವನ್ನು ರಾಯರಿಂದ ತಂದೆಯವರು ಓದಿಸಿದಾಗ

ಹೆಚ್ಚಿನ ಕುತೂಹಲವಾಗುತ್ತಿತ್ತು. ಸ್ತ್ರೀಪರ್ವ ಓದುವಾಗ ರಾಯರು ಅಳುತ್ತಿದ್ದುದೂ ಉಂಟು. ಮೈಲಾರಯ್ಯನವರ ರಾಮಣ್ಣನೆಂಬುವರು ಇನ್ನೊಬ್ಬ ವೃದ್ಧರು. ಇವರು ರಾಯರಿಂದ ಎಣ್ಣೆಒತ್ತಿಸಿಕೊಳ್ಳುತ್ತಿದ್ದರು. ಮಧ್ಯೆ ಬೇಜಾರಾಗದಂತೆ ಬೇರೆ ಬೇರೆ ತಾಳದ ವರಸೆ ಹಾಕಿ ತೋರಿಸಿಕೊಟ್ಟು ಎಣ್ಣೆ ಒತ್ತಿಸಿಕೊಳ್ಳುತ್ತಿದ್ದರು. ಇದರಿಂದ ರಾಯರಿಗೆ ತಾಳಜ್ಞಾನವಾಗಲು ಕಾರಣವಾಯಿತು. ದೊಡ್ಡಹಂಪೆಯ ಲಿಂಗಣ್ಣ, ಸಣ್ಣ ಹಂಪೆಯ ಲಿಂಗಣ್ಣ - ಇವರಿಬ್ಬರು ಲಿಂಗಾಯಿತ ಸಹೋದರರು. ಇವರನ್ನು ಸಾಹುಕಾರರೆಂದು ಜನರು ಕರೆಯುತ್ತಿದ್ದರು. ದೊಡ್ಡಹಂಪೆ ಲಿಂಗಣ್ಣನಿಗೆ ಬಾಯಲ್ಲಿ ಹಲ್ಲು ಇರಲಿಲ್ಲ. ರಾಯರು “ಹರಿವ ಹಳ್ಳದ ನೀರು ತೆಳ್ಳಗೆ, ಬರುವ ಮುದುಕನ ಗಡ್ಡ ಬೆಳ್ಳಗೆ, ಇರುವ ಮುದುಕಿಯ ಕಾಲು ಸಣ್ಣಗೆ, ಬೋಡುಹಂಪೆಯ ಲಿಂಗಣ್ಣ ಕೇಳೆಂದ ”- ಎಂದು ಯಾರೋ ಹೇಳಿಕೊಟ್ಟಿದ್ದ ಪದವನ್ನು ಹೇಳಿದರೆ ಎಲೋ, ಏನೋ (ಸುಬ್ರಾಯ!) - ಎಂದು ಆತನು ಗರ್ಜಿಸುತ್ತಿದ್ದನಂತೆ! ಸಣ್ಣ ಹಂಪೆ ಲಿಂಗಣ್ಣನು ಸತ್ಯವಾದಿ, ಉದಾರಿ; ಲೇವಾದೇವಿಯನ್ನು ಇಟ್ಟುಕೊಂಡಿದ್ದನು. ಬಡಬಗ್ಗರು ಕೃತಜ್ಞತೆಯಿಂದ ಈತನನ್ನು ಕೊಂಡಾಡುತ್ತಿದ್ದರು.

ರಾಯರ ಜೀವನದಲ್ಲಿ ಅಧ್ಯಾತ್ಮವಿಚಾರಗಳ ಬೀಜಾವಾಪವಾಗಲು ತಕ್ಕ ಸನ್ನಿವೇಶಗಳು ಆ ಊರಿನಲ್ಲಿತ್ತೆಂದು ಈವರೆಗಿನ ವರ್ಣನೆಯಿಂದ ವಾಚಕರು ತಿಳಿಯಬಹುದಾಗಿದೆ.

# ೪. ಪರಸ್ಥಳಗಳಲ್ಲಿ ವಿದ್ಯಾಭ್ಯಾಸ-ವಿವಾಹಾದಿಗಳು

**ಮೂಡಗೆರೆ :**

ರಾಯರ ದೊಡ್ಡಣ್ಣನವರು ಮುಂದೆ ಇವರನ್ನು ಮೂಡಗೆರೆಗೆ ಕರೆದುಕೊಂಡು ಹೋಗಿ ತಮ್ಮ ಮನೆಯಲ್ಲಿಟ್ಟುಕೊಂಡುರು. ರಾಯರು ಯಳ್ಳಂಬಳಸೆಯನ್ನು ಬಿಟ್ಟಿದ್ದು ಇದೇ ಮೊದಲು. ಮೂಡಗೆರೆಯಲ್ಲಿ ಅಣ್ಣನವರು ರಿಜಿಸ್ಟ್ರೇಷನ್ ಗುಮಾಸ್ತರಾಗಿದ್ದರು. ಮನೆಯಲ್ಲಿದ್ದಾಗ ಬೆಳಗ್ಗೆ ಅಥವಾ ರಾತ್ರೆ ಸ್ವಲ್ಪಹೊತ್ತು ಇಂಗ್ಲಿಷುಪಾಠ ಹೇಳಿಕೊಡುತ್ತಿದ್ದರು. ಅಕ್ಷರಗಳ, ಮಾತುಗಳ, ವಾಕ್ಯಗಳ ಪರಿಚಯವಾಗುತ್ತಾ ಬಂತು. ಆದರೆ ಸ್ಕೂಲಿಗೆ ಹೋಗುವ ಕೆಲಸವಿರಲಿಲ್ಲವಾದ್ದರಿಂದ ಹಗಲು ವಿರಾಮಕಾಲದಲ್ಲೆಲ್ಲ ಊರಿನ ಹೊರನೋಟಗಳನ್ನು ನೋಡುವದೇ ರಾಯರ ಕೆಲಸವಾಯಿತು. ಮಲೆನಾಡಿನ ಗುಡ್ಡಬೆಟ್ಟಗಳು, ಗಿಡಮರಗಳು, ತೋಟಗಳು, ಬಗೆಬಗೆಯ ವನಸೌಂದರ್ಯಗಳು-ರಾಯರಿಗೆ ಒಂದು ಆನಂದವನ್ನೇ ತರುತ್ತಿದ್ದವು. ಕಾಡುಮರಗಳ ಹಣ್ಣು ತಿನ್ನುವ ಅಭ್ಯಾಸವೇ ವಿದ್ಯಾಭ್ಯಾಸಕ್ಕಿಂತ ಹೆಚ್ಚಾಯಿತೆನ್ನಬಹುದು. ಆ ಪ್ರಕೃತಿಸೌಂದರ್ಯವು ರಾಯರ ಮನಸ್ಸನ್ನು ಸೆರೆಹಿಡಿದಿತ್ತು. ಕೆಲವು ತಿಂಗಳಾದ ಮೇಲೆ ಅಣ್ಣನವರು ಒಂದುದಿನ ರಾಯರನ್ನು ಕಚೇರಿಗೆ ಕರೆದುಕೊಂಡು ಹೋದರು. ಅಲ್ಲಿನ ಸನ್ನಿವೇಶ, ಸಾಮಾನುಗಳು, ಅಧಿಕಾರಿಗಳು, ಜವಾನರು, ಅರ್ಜಿದಾರರು-ಮುಂತಾದ ದೃಶ್ಯಗಳ ಹೊಸ ಪ್ರಪಂಚವೊಂದು ರಾಯರಿಗೆ ಪರಿಚಯವಾಯಿತು. ಅಣ್ಣನವರು ಸ್ವಲ್ಪ ಕಾಗದವನ್ನು ಕೊಟ್ಟು 'ಕಾಪಿ' ಬರೆಯುವಂತೆ ಹೇಳುತ್ತಿದ್ದರು. ಒಂದು ದಿನ ಹಳೇ ಊರಿನ ಭಾಗದಲ್ಲಿ ನಡೆದ ಪೈಲುವಾನರ ಆಟವು ರಾಯರಿಗೆ ಬಹಳ ಚೆನ್ನಾಗಿ ಕಂಡಿತಂತೆ. ಆ ಪೈಲುವಾನರುಗಳು ತೋರಿದ ಅದ್ಭುತ ಸಾಧನೆಗಳು ರಾಯರಿಗೆ ಇನ್ನೂ ನೆನಪಿವೆ. ಹೀಗೆ ಕೆಲವು ಕಾಲ ಕಳೆದಮೇಲೆ ಅಣ್ಣನವರು ಇವರನ್ನು ವಾಪಸು ಊರಿಗೆ ಕಳುಹಿಸಿಬಿಟ್ಟರು.

**ಚಿಕ್ಕಮಗಳೂರು ವಾಸ :**

ಮುಂದೆ ಯಳ್ಳಂಬಳಸೆಯಲ್ಲಿ ಕೆಲವು ತಿಂಗಳಿದ್ದು 1891ನೆಯ ಇಸವಿಯ ಕೊನೆಯಭಾಗದಲ್ಲಿ ರಾಯರು ಚಿಕ್ಕಮಗಳೂರಿನಲ್ಲಿ ತಮ್ಮ ಭಾವನ ಮನೆಗೆ ಬಂದರು. ಆಗ್ಗೆ ಅವರ ಭಾವನವರು ಪೋಟರ್‌ಪೇಟೆ ಎಂಬ ಭಾಗದ ಒಂದು ಮನೆಯಲ್ಲಿದ್ದರು. ಮನೆಯು ಚಿಕ್ಕದು. ಅದರ ಇನ್ನೊಂದು ಭಾಗದಲ್ಲೇ ಒಬ್ಬ ಪೋಲೀಸು ಜಮೇದಾರರಿದ್ದರು. ಅವರ ಮಗ ತಮ್ಮಯ್ಯನೇ ಮುಂತಾದವರು ಬಹಳ ಗದ್ದಲದ ಸ್ವಭಾವದವರು. ರಾಯರ ಭಾವಂದಿರು ತುಂಬ ಮೃದು. ತಮ್ಮಯ್ಯನು ಆಗಾಗ್ಗೆ ತನ್ನಲ್ಲೇತಾನು ಮಾತನಾಡಿಕೊಳ್ಳುತ್ತಾ ಪ್ರಶ್ನೋತ್ತರಗಳನ್ನು ತಾನೇ ಹೇಳಿಕೊಳ್ಳುವದು, ಹೊಗಳಿಕೊಳ್ಳುವದು ಅಥವಾ ತೆಗಳಿಕೊಳ್ಳುವದು-ಹೀಗೆ ಮಾಡುತ್ತಿದ್ದನು. ರಾಯರು ಇದನ್ನು ಹೇಗೋ ನೋಡಿಕೊಂಡಿದ್ದು ಅವನಂತೆಯೇ ಏಕಾಂತದಲ್ಲಿ

ತಾನು ಮಾಡಿದ್ದು ಸರಿಯೆ ತಪ್ಪೆ?- ಎಂದು ಆತ್ಮಪರೀಕ್ಷೆ ಮಾಡಿಕೊಳ್ಳಬೇಕಾದದ್ದು ಅಗತ್ಯವೆಂದು ತಿಳಿದುಕೊಂಡರು. ಹೀಗೆ ಆತನ ವಿಲಕ್ಷಣ ನಡೆವಳಿಕೆಯೂ ರಾಯರಿಗೆ ಒಂದು ಪಾಠವೇ ಆಯಿತು.

ರಾಯರು ಮುಂದೆ ಒಂದನೆಯ ಕ್ಲಾಸಿಗೆ ಸ್ಕೂಲಿಗೆ ಸೇರಿದರು. ಸ್ಕೂಲು ಕಟ್ಟಡ ಸುಮಾರಾಗಿತ್ತು. ಮೂಡಗೆರೆಯಲ್ಲಿ ರಾಯರಿಗೆ ಸ್ವಲ್ಪ ಇಂಗ್ಲಿಷು ಪಾಠಗಳು ಪರಿಚಯವಾಗಿತ್ತಷ್ಟೆ? ಇಲ್ಲಿಯೂ ಅದೇ ಮದ್ರಾಸ್ ರೀಡರ್, ರಾಯಲ್ ಪ್ರಿಮರ್ - ಎಂಬ ಪುಸ್ತಕಗಳಿದ್ದವು. ಕಾಂತಯ್ಯ ಮೇಷ್ಟರು ರಾಯರ ಕ್ಲಾಸು ತೆಗೆದುಕೊಳ್ಳುತ್ತಿದ್ದರು. ಇವರು ಹುಡುಗರಿಗೆ ಪ್ರಶ್ನೆಗಳನ್ನು ಹಾಕಿ ತಾವು ಉತ್ತರ ಹೇಳದೆ ಉತ್ತರಕೊಟ್ಟವರನ್ನು ಮಾತ್ರ ಮೇಲುಮೇಲಕ್ಕೆ ಕೂರಿಸುತ್ತಿದ್ದರಂತೆ. ಇದರಿಂದ ಯಾವ ಪ್ರಶ್ನೆಯನ್ನೂ ಕೇಳಿಸಿಕೊಳ್ಳದ ನಡುವಿನ ಹುಡುಗರು ವಿನಾಕಾರಣವಾಗಿ ಕೊನೆಗೆ ಬರುತ್ತಿದ್ದರು. ಇದು ರಾಯರಿಗೆ ಸರಿಯಲ್ಲವೆಂದು ತೋರಿದರೂ ಅಲ್ಲಿ ಮೇಷ್ಟರದೇ ಕಾನೂನು. ಇರಲಿ, ಕಾಂತಯ್ಯ ಮೇಷ್ಟರು ಅಂಕೆಗಳ ಸ್ಥಾನವನ್ನು ಮನದಟ್ಟುಮಾಡಿಸಲು ಬೋರ್ಡ್‌ಮೇಲೆ ಚೌಕವಾಗಿ ಗೆರೆಗಳನ್ನು ಹಾಕಿ ಅಂಕೆಗಳನ್ನು ಬರೆಯುತ್ತಿದ್ದರು. ನಡುನಡುವೆ ಹೆಡ್‌ಮಾಸ್ಟರು (ಸಿ. ಕೃಷ್ಣರಾಯರು) ಬಂದು ಕೆಲವು ಪಾಠಗಳನ್ನು ಹೇಳಿ ಕೊಡುತ್ತಿದ್ದರು. ರಾಯರು ಎರಡನೆಯ ತರಗತಿಗೆ ಪಾಸಾದರು. ಆಗ ಮಲ್ಲಪ್ಪಮೇಷ್ಟರ ಪರಿಚಯವಾಯಿತು. ಇವರು ಹುಡುಗರಿಗೆ ಬರವಣಿಗೆಯ ಕ್ರಮವನ್ನು ಚೆನ್ನಾಗಿ ಕಲಿಸುತ್ತಿದ್ದರು. ಅವರ ಅಕ್ಷರಗಳು ಮುದ್ದಾಗಿರುತ್ತಿದ್ದವು. ಅದನ್ನು ಕಂಡಾಗ ರಾಯರಿಗೆ ಪೂಜ್ಯಬುದ್ಧಿಯೂ ಒಳ್ಳೆಯ ಅಕ್ಷರವನ್ನು ಬರೆಯಲು ಕಲಿಯಬೇಕೆಂಬ ಮನಸ್ಸೂ ಉಂಟಾಯಿತು. ಇವರು ಬಹಳ ಗಂಭೀರಸ್ವಭಾವದವರು. ಅವರು ಹಾಸ್ಯದ ಮಾತುಗಳನ್ನಾಡಿ ಹುಡುಗರನ್ನು ನಗಿಸಿದರೂ ಗಟ್ಟಿಯಾಗಿ ನಗುವಷ್ಟು ಧೈರ್ಯ ಹುಡುಗರಿಗೆ ಇರುತ್ತಿರಲಿಲ್ಲ. ಅವರ ವಿದ್ಯಾರ್ಥಿಗಳು ದೊಡ್ಡವರಾದಮೇಲೂ ಅವರನ್ನು ಹೆಚ್ಚಿನ ಗೌರವದಿಂದಲೇ ಕಾಣುತ್ತಿದ್ದರು. ಆ ಊರಿನಲ್ಲಿ ಅಸಿಸ್ಟೆಂಟ್ ಕಮೀಷನರಾಗಿದ್ದ ಒಬ್ಬ ದೊಡ್ಡ ಮನುಷ್ಯರು ನಶ್ಯಹಾಕುವಾಗ 'ಮಲ್ಲಪ್ಪಮೇಷ್ಟರು ಬರುತ್ತಾರೆ!' ಎಂದು ತಿಳಿದಕೂಡಲೆ ಮರೆಯಲ್ಲಿ ನಶ್ಯಹಾಕುತ್ತಿದ್ದರಂತೆ. ಇಂಥ ಪ್ರಭಾವ ಶಾಲಿಗಳಾದ ಮೇಷ್ಟರು ಈಗ ಅಪರೂಪವೆಂದರೆ ತಪ್ಪಾಗಲಾರದು.

ಮನೆಯಲ್ಲಿ ರಾಯರಿಗೆ ಭಾವನವರು ಒಂದು ಶಬ್ದದ ಪುಸ್ತಕವನ್ನು ಕೊಟ್ಟು ದಿನವೂ ಒಂದೊಂದು ಸಂಸ್ಕೃತಶಬ್ದವನ್ನು ಗಟ್ಟಿಮಾಡುವಂತೆ ಕಟ್ಟುಮಾಡಿದ್ದರು. ಆದರೆ ರಾಯರಿಗೆ ಆಗ್ಗೆ ಅದು ರುಚಿಸಿರಲಿಲ್ಲ. ಮನೆಗೆ ಹತ್ತಿರದಲ್ಲಿದ್ದ ಗೌರಶೆಟ್ಟಿಯ ಅಂಗಡಿಯಿಂದ ರಾಯರು ಮನೆಗೆ ಕೆಲವು ಸಾಮಾನುಗಳನ್ನು ತಂದುಕೊಡುತ್ತಿದ್ದರು. ಇದರಿಂದ ಗೌರಶೆಟ್ಟಿಯ ಪರಿಚಯವಾಯಿತು. ಅವನು ರಾಯರಿಗೆ ಕೆಲವು ಕಥೆಯ ಪುಸ್ತಕಗಳನ್ನು ಓದುವದಕ್ಕೆ ಕೊಡುತ್ತಿದ್ದನು; ಮತ್ತು ಕೆಲವು ಕಥೆಗಳನ್ನೂ ಹೇಳುತ್ತಿದ್ದನು. ಇದರಿಂದ ರಾಯರಿಗೆ ಕಲ್ಪನಾಶಕ್ತಿಯು ಬೆಳೆಯಲು ಸಹಾಯವಾಯಿತು. ಮುಂದೆ ಕೆಲವು ದಿನಗಳಲ್ಲೇ ರಾಯರ ಆರೋಗ್ಯವು

ಕೆಟ್ಟದ್ದರಿಂದ ಆಗ್ಗೆ ಬಂದಿದ್ದ ಅವರ ತಾಯಿಯವರು ಅವರನ್ನು ವಾಪಸು ಊರಿಗೆ ಕರೆದುಕೊಂಡು ಹೋಗಿಬಿಟ್ಟರು.

## ತರೀಕೆರೆಯಲ್ಲಿ ವಿದ್ಯಾಭ್ಯಾಸ :

ಅಷ್ಟುಹೊತ್ತಿಗೆ ರಾಯರ ದೊಡ್ಡಣ್ಣ ಶ್ರೀಕಂಠಯ್ಯನವರಿಗೆ ರೆವೆನ್ಯೂ ಗುಮಾಸ್ತೆಯ ಕೆಲಸವಾಗಿ ತರೀಕೆರೆಗೆ ವರ್ಗವಾಗಿತ್ತು. ರಾಯರು ಮತ್ತೆ ದೊಡ್ಡಣ್ಣನವರು ಮನೆಗೆ ಬಂದುಸೇರಿದರು. ತರೀಕೆರೆಯಲ್ಲಿ ಸ್ಕೂಲುವಿದ್ಯಾಭ್ಯಾಸವು ಮುಂದುವರಿಯಿತು. ಆಗ ಸ್ಕೂಲು-ಕನ್ನಡ, ಇಂಗ್ಲಿಷ್ - ಎಂದು ಎರಡು ಭಾಗವಾಗಿತ್ತು. ಕನ್ನಡ ಸ್ಕೂಲಿಗೆ ರಾಮಸ್ವಾಮಯ್ಯಂಗಾರ್ಯರೂ ಇಂಗ್ಲಿಷು ಸ್ಕೂಲಿಗೆ ವೆಂಕಟರಾಮಯ್ಯನವರೂ ಹೆಡ್‌ಮಾಸ್ಟರುಗಳಾಗಿದ್ದರು. ಎರಡು ಮೂರನೆಯ ತರಗತಿಗಳಿಗೆ ವೆಂಕಟಾಚಾರ್ ಎಂಬುವರು ಉಪಾಧ್ಯಾಯರು. ಇವರು ತುಂಬಾ ಬಿಗಿ; ತರಗತಿಯನ್ನು ಕಟ್ಟಿನಲ್ಲಿಟ್ಟಿದ್ದರು. ಗಣಿತದ ಪಾಠವನ್ನು ಇವರು ಹೇಳುತ್ತಿದ್ದರು. ಆಗಿನ ಕಾಲಕ್ಕೆ ಕೇವಲ ಮೂರನೆಯ ತರಗತಿಗೇ ಬರ್ನಾರ್ಡ್ ಸ್ಮಿತ್ಸ್ ಆರ್ತ್‌ಮೆಟಿಕ್ ಎಂಬ ಪುಸ್ತಕದಲ್ಲಿ ಭಿನ್ನರಾಶಿಯ ಸುಲಭರೂಪಗಳು-ಮುಂತಾದ ಲೆಕ್ಕಗಳನ್ನು ಇಂಗ್ಲಿಷಿನಲ್ಲೇ ಬೋಧಿಸುತ್ತಿದ್ದರು. ರಾಯರಿಗೆ ಲೆಕ್ಕವು ಬೇಗ ಹಿಡಿಯುತ್ತಿತ್ತು. ಅವರ ಸ್ನೇಹಿತನಾದ ಲಚ್ಚಿ (ಲಕ್ಷ್ಮೀನಾರಾಯಣರಾವ್) ಎಂಬುವನು ಕುಚೋದ್ಯಗಾರ. ಕೆಲವು ವೇಳೆ ಲೆಕ್ಕದ ಕ್ಲಾಸಿನಲ್ಲಿ ತಮಾಷೆಮಾಡಿ ಹುಡುಗರಿಗೆ ಮೇಷ್ಟರ ಏಟುಗಳನ್ನು ತಪ್ಪಿಸಿದ್ದೂ ಉಂಟು. ಹೆಡ್‌ಮಾಸ್ಟರು ವೆಂಕಟರಾಮಯ್ಯನವರು ಇಂಗ್ಲಿಷನ್ನು ಬೋಧಿಸುತ್ತಿದ್ದರು. ಅವರು ಮನೆಯಲ್ಲಿ ಮೇಕೆಗಳನ್ನು ಸಾಕಿದ್ದರು. ಆದ್ದರಿಂದ 'ಮೇಕೆಮೇಷ್ಟರು' ಎಂಬ ಅಡ್ಡಹೆಸರೂ ಅವರಿಗೆ ಬಂದಿತ್ತು. ಇವರು ಪಾಠಗಳನ್ನು-ಅಭಿನಯಾದಿಗಳಿಂದ ಕೂಡಿ-ಚೆನ್ನಾಗಿ ನಡೆಯಿಸುತ್ತಿದ್ದರು. ಹುಡುಗರಿಗೆ ಇವರ ಪಾಠವೆಂದರೆ ತುಂಬ ಇಷ್ಟ. ಆದರೆ ಪಾಠಗಳನ್ನು ಮಾರನೆಯ ದಿನ ಒಪ್ಪಿಸದೆ ಇದ್ದರೆ ಬೀಳುತ್ತಿದ್ದ ಏಟುಗಳು ರಾಯರಿಗೆ **"ಸುಖಸ್ಯಾನಂತರಂ ದುಃಖಮ್"** ಎಂಬ ಮಾತನ್ನು ನೆನಪಿಗೆ ತರುತ್ತಿದ್ದವು. ಆಗ ಲಚ್ಚಿಯು `Hop', `Hop!' ಎಂದು ಪಠ್ಯಪುಸ್ತಕದ ಶಬ್ದಗಳನ್ನು ಉಚ್ಚರಿಸಿ ಹಾರೊ! ನೆಗೆಯೊ!-ಎಂಬ ಮೇಷ್ಟರ ಅನುವಾದವನ್ನು ಪಿಸುಮಾತಿನಲ್ಲಿ ಅಣಕಿಸುತ್ತಾ ಹಾಸ್ಯಮಾಡುತ್ತಿದ್ದುದೂ ತಮಾಷೆಯಾಗಿರುತ್ತಿತ್ತು. ರಾಮಸ್ವಾಮಿ ಅಯ್ಯಂಗಾರ್ಯರು ಶಿಸ್ತಿನ ಉಪಾಧ್ಯಾಯರು. ಕನ್ನಡ ಸ್ಕೂಲನ್ನು ಚೆನ್ನಾಗಿ ನಡೆಸುತ್ತಿದ್ದರು. ಪಾಠವನ್ನು ಹೇಳುವದರಲ್ಲಿಯೂ ಗಟ್ಟಿಗರು. ಅಪ್ಪಣ್ಣ ಪಂಡಿತರೆಂಬವರು ಸಂಸ್ಕೃತ ಉಪಾಧ್ಯಾಯರು. ರಾಯರಿಗೆ ಇವರ ಮನೆಯಲ್ಲಿ ಸಂಸ್ಕೃತಪಾಠವನ್ನು ಅಣ್ಣನವರು ಏರ್ಪಡಿಸಿದ್ದರು. ಆದರೆ ಅವರು ಹಳೆಯ ಪದ್ಧತಿಯಂತೆ ಹೇಳಿಕೊಡುತ್ತಿದ್ದ ಈ ಪಾಠವು ಅಷ್ಟೇನೂ ರುಚಿಸುತ್ತಿರಲಿಲ್ಲ. ಆದರೂ ಒಂದು ವರ್ಷ ಕಳೆಯುವ ಹೊತ್ತಿಗೆ ಸಂಸ್ಕೃತ ಅಕ್ಷರಗಳೂ ಶಬ್ದಗಳೂ ಸ್ವಲ್ಪಮಟ್ಟಿಗೆ ಬಂದಿದ್ದವು. ಆದ್ದರಿಂದ

ಅವರನ್ನು ಸಂಸ್ಕೃತತರಗತಿಗೆ ಸೇರಿಸಿಕೊಂಡರು. ಹಿತೋಪದೇಶವನ್ನು ಆಗ ಓದಿದ ನೆನಪು ರಾಯರಿಗೆ ಇದೆ. ಮುಂದೆ ಕನ್ನಡ-ಇಂಗ್ಲಿಷು ಎರಡು ಸ್ಕೂಲುಗಳೂ ಸರ್ಕಾರದ ಆಜ್ಞೆಯಂತೆ 'ಆಂಗ್ಲೋವರ್ನಾಕ್ಯುಲರ್ ಸ್ಕೂಲ್' ಎಂಬ ಹೆಸರಿನಿಂದ ಒಂದಾದವು. ಆಗ ಮೇಕೆಮೇಷ್ಟರೇ ಒಟ್ಟು ಸ್ಕೂಲಿಗೆ ಹೆಡ್‌ಮಾಸ್ಟರಾದ್ದರಿಂದ ರಾಮಸ್ವಾಮಯ್ಯಂಗಾರ್ಯರಿಗೆ ಅಪಮಾನ ವಾದಂತಾಯಿತು. ಹುಡುಗರೆಲ್ಲ ಸೇರಿ ಇದನ್ನು ಪ್ರತಿಭಟಿಸಿ ಅರ್ಜಿಯನ್ನು ಬರೆದಾಗ ರಾಯರೂ ರುಜು ಹಾಕಿದ್ದರು. ಅನಂತರ ವಿಚಾರಿಸಲಾಗಿ ಹಾಕಿಲ್ಲವೆಂದು ಸುಳ್ಳುಹೇಳಿದರಂತೆ. ಆದರೆ ಅಕ್ಷರಗಳ ಹೋಲಿಕೆಯನ್ನು ಪರೀಕ್ಷಿಸಿದಾಗ ರಾಯರು ಸಿಕ್ಕಿಬಿದ್ದರು. ಆದರೂ ಹೆಡ್‌ಮೇಷ್ಟರು ಕ್ಷಮಿಸಿದರು. ರಾಯರಿಗೆ ಆಗ ಬಹಳ ಪಶ್ಚಾತ್ತಾಪವಾಯಿತಂತೆ.

1894ರಲ್ಲಿ ರಾಯರು ಲೋಯರ್ ಸೆಕೆಂಡರಿ ಪರೀಕ್ಷೆಗೆ ಕುಳಿತರು. ಭೂಗೋಳಪಾಠವು ತಿಳಿಯುವದು ಸ್ವಲ್ಪ ಕಷ್ಟವಾಯಿತು. ಆದಗೂ ಪರೀಕ್ಷೆಗೆ ಸಿದ್ಧರಾದರು. ಚಿಕ್ಕಮಗಳೂರಿಗೆ ಪರೀಕ್ಷೆಗೆ ಹೋದದ್ದೂ ಆಯಿತು. ಗಣಿತದ ಪ್ರಶ್ನಪತ್ರಿಕೆಯು ತೊಡಕಾಗಿದ್ದುದರಿಂದ ರಾಯರ ಕೆಲವು ಲೆಕ್ಕಗಳು ತಪ್ಪಾಗಿದ್ದವು. ಆದರೆ ಪ್ಯಾಸಾಗುವದಕ್ಕೆ ಅಡ್ಡಿಯಾಗುವಂತಿರಲಿಲ್ಲ. ಪರೀಕ್ಷೆಯನ್ನು ಮುಗಿಸಿಕೊಂಡು ರಾಯರು ತರೀಕೆರೆಗೆ ಬಂದರು. ರಜದಲ್ಲಿ ತರೀಕೆರೆಯಲ್ಲಿ ರಾಯರು ಕಳೆದ ದಿಗಳು ಬಹಳ ಉತ್ತಮವಾಗಿದ್ದವು. ಲಚ್ಚಿಯ ತಂದೆಯವರಿಂದ ಕೆಲವು ಸ್ತೋತ್ರಗಳನ್ನು ಬರೆದುಕೊಂಡು ಕಲಿತರು. ತರೀಕೆರೆಯಲ್ಲಿ ಯಕ್ಷಗಾನಪ್ರಸಂಗಗಳು ಬಹಳವಾಗಿರುತ್ತಿದ್ದವು. ಪ್ರತಿ ಏಕಾದಶಿಯ ರಾತ್ರೆ ಸಾಮಾನ್ಯವಾಗಿ ಪ್ರಸಂಗಗಳ ಮಾತುಗಾರಿಕೆ ಅಭ್ಯಾಸಗಳು ಮನೆಗಳಲ್ಲಿ ಜರುಗುತ್ತಿದ್ದವು. ಇದರಿಂದ ರಾಯರಿಗೆ ಸಂಗೀತದಲ್ಲಿ ಅಭಿರುಚಿಯೂ ಹಾಗೂ ರಾಮಾಯಣಭಾರತಾದಿಗಳಲ್ಲಿ ಭಕ್ತಿಯೂ ಉಂಟಾಗುವದಕ್ಕೆ ಅವಕಾಶವಾಯಿತು. ಇದರ ಜೊತೆಗೆ ಹರಿಕಥೆಯ ಸನ್ನಿವೇಶವೂ ಇರುತ್ತಿತ್ತು. ಹಾವೇರಿ **ಪೀತಾಂಬರಭಟ್ಟರೆಂಬುವರು** ಆಗಾಗ್ಗೆ ತರೀಕೆರೆಗೆ ಬಂದು ಕಥಾಶ್ರವಣವನ್ನು ಮಾಡಿಸುತ್ತಿದ್ದರು. ಅವರು ಬಹಳ ಸ್ವಾರಸ್ಯವಾಗಿ ಹಾಸ್ಯಭಕ್ತಿರಸಪ್ರಧಾನವಾಗಿ ಹರಿಕಥೆಗಳನ್ನು ನಡೆಸುತ್ತಿದ್ದರು. ಜನರು ಅವರನ್ನು ಬಹಳ ಗೌರವಿಸುತ್ತಿದ್ದರು. ಉಪಕಥೆಗಳ ಸಂಗ್ರಹಕ್ಕಾಗಿ 'ಚಿತ್ರಕಥಾ ಲಹರಿ' ಎಂಬ ಪುಸ್ತಕವನ್ನು ಅವರು ರಾಯರಿಂದ ಓದಿಸಿ ಕೇಳುತ್ತಿದ್ದರು. ತರೀಕೆರೆಯಲ್ಲಿ ದೊಡ್ಡವರು ರಾಮಧ್ಯಾನ ಮಾಡುವದನ್ನು ಹುಡುಗರೂ ಅನುಕರಿಸುತ್ತಿದ್ದರು. ಹುಡುಗರಿಗೆ ದೊಡ್ಡವರಿಂದ ಪ್ರೋತ್ಸಾಹವೂ ದೊರೆಯುತ್ತಿತ್ತು. ರಾಯರಿಗಂತೂ ಇದರಿಂದ ಹೆಚ್ಚಿನ ಪ್ರಯೋಜನವೇ ಆಯಿತು. ಪರೀಕ್ಷೆಯಲ್ಲಿ ರಾಯರಿಗೆ ತೇರ್ಗಡೆಯಾಯಿತು.

## ಮದುವೆ :

ಹಿಂದಿನ ಕಾಲದಲ್ಲಿ ಮಕ್ಕಳಿಗೆ ಬಹಳ ಚಿಕ್ಕವಯಸ್ಸಿನಲ್ಲೇ ಮದುವೆ ಮಾಡುವ ಪದ್ಧತಿಯು ಇದ್ದಿತಾದ್ದರಿಂದ ರಾಯರಿಗೆ ಹದಿನಾಲ್ಕನೆಯ ವರ್ಷದಲ್ಲೇ ಮದುವೆಯು

ಏರ್ಪಾಡು ನಡೆಯಿತು. ಅರಸೀಕೆರೆಯ ಮೈಲಾರಜೋಯಿಸರ ಪುತ್ರಿ ಸೌ॥ ವೆಂಕಟಲಕ್ಷ್ಮಮ್ಮ ಎಂಬ ಹುಡುಗಿಯನ್ನು ಕೊಟ್ಟು ಕಡೂರಿನಲ್ಲಿ ಮದುವೆಯು ವಿಜ್ರಂಭಣೆಯಿಂದ ನೆರವೇರಿತು. ಆಗ್ಗೆ ನೆರೆದಿದ್ದ ಬಂಧುವರ್ಗದವರು, ಮದುವೆಯ ಹೊಸ ಹೊಸ ದೃಶ್ಯಗಳು, ಮೆರವಣಿಗೆ, ವೇದೋಕ್ತಕರ್ಮಗಳು, ಸಭಾಪೂಜೆಯಲ್ಲಿ ದಕ್ಷಿಣೆಯನ್ನು ಕೊಡುವದು-ಮುಂತಾದವುಗಳ ಪರಿಚಯ ರಾಯರಿಗೆ ಅಷ್ಟೊಂದು ಇರಲಿಲ್ಲವಂತೆ. ಇನ್ನೂ ಚಿಕ್ಕವಯಸ್ಸಾದದ್ದರಿಂದ ಇದೆಲ್ಲ ಒಂದು ಆಟವೇ ಎನಿಸಿರಬೇಕು. ಆದರೆ ಸಂಸಾರವನ್ನು ಹೆಗಲಿಗೇರಿಸುವ ಕಾರ್ಯವದು-ಎಂದು ಮುಂದೆ ಗೊತ್ತಾಯಿತಂತೆ. ಹೀಗೆ ಏನೂ ಅರಿವಿಲ್ಲದೆ ರಾಯರಿಗೆ ವಿವಾಹವು ನೆರವೇರಿಬಿಟ್ಟಿತು.

## ಇಂಗ್ಲಿಷು ವಿದ್ಯಾಭ್ಯಾಸ :

ಲೋಅರ್ ಸೆಕೆಂಡರಿ ಆದಮೇಲೆ ರಾಯರು ಇಂಗ್ಲಿಷು ಐದನೆಯ ತರಗತಿಗೆ ಸೇರಿದರು. ವಿದ್ಯಾಭ್ಯಾಸವು ತರೀಕೆರೆಯಲ್ಲಿಯೇ ಮುಂದುವರಿಯಿತು. ಆಗ್ಗೆ ಪಾಠಕ್ರಮದಲ್ಲಿ ನಿಯಮಿಸಿದ್ದ ಇಂಗ್ಲಿಷ್ ಪುಸ್ತಕಗಳು ಕಠಿನವಾಗಿಯೇ ಇದ್ದವು. ಆದರೂ ಕುತೂಹಲದಿಂದ ರಾಯರು ಎಲ್ಲವನ್ನೂ ಗಟ್ಟಿಮಾಡುತ್ತಿದ್ದರು. ಮೆಕಮಾರ್ಡಿಯ, ಮ್ಯಾನ್ಯುಯಲ್ ಆಫ್ ಗ್ರಾಮರ್-ಮುಂತಾದವುಗಳ ಇಂಗ್ಲಿಷು ಭಾಷೆಯ ಬೆಡಗುಗಳ ಪಾಠವು ರಾಯರಿಗೆ ಮೊದಮೊದಲು ಕಷ್ಟವಾಯಿತು. ಇಂಗ್ಲಿಷು ಪದ್ಯಗಳನ್ನು ಗಟ್ಟಿಮಾಡುವದು ಬೇಜಾರಾಗಿರಬೇಕು. ಆಗ ಏಟುತಡೆಯಲಾರದೆ ಸ್ಕೂಲಿಗೆ ತಪ್ಪಿಸಿಕೊಳ್ಳಬೇಕೆಂದಿರುವಾಗ ಅಣ್ಣಂದಿರು ಮೇಷ್ಟರನ್ನೇ ಸಮಾಧಾನಪಡಿಸಬೇಕಾಗಿ ಬಂತು. ಗಣಿತದಲ್ಲಿ ರಾಯರಿಗೆ ಬಹಳ ಪ್ರೀತಿ. ಯೂಕ್ಲಿಡ್, ಆಲ್‌ಜೀಬ್ರಾಗಳನ್ನು **ಗುಂಡೇರಾಯರೆಂಬುವರು** ಬೋಧಿಸುತ್ತಿದ್ದರು. ಅಂತೂ ಕೊನೆಗೆ 1895ನೇ ಇಸವಿಗೆ ರಾಯರು ಪರೀಕ್ಷೆಗೆ ಸಿದ್ಧರಾದರು. ಪರೀಕ್ಷೆಗೆ ಶಿವಮೊಗ್ಗಾಕ್ಕೆ ಹೋಗಿದ್ದರು. ತಕ್ಕಮಟ್ಟಿಗೆ ಉತ್ತರವನ್ನು ಬರೆದಿದ್ದರಾದ್ದರಿಂದ ಇಂಗ್ಲಿಷ್ ಲೋಅರ್ ಸೆಕೆಂಡರಿ ಪರೀಕ್ಷೆಯಲ್ಲೂ ತೇರ್ಗಡೆಯಾಯಿತು. ಪರೀಕ್ಷೆಯ ಫಲಿತಾಂಶದ ಸಂತೋಷಕ್ಕಾಗಿ ನಡೆದ ಸಮಾರಂಭದಲ್ಲಿ ಒಂದಾನೊಂದು ಗದ್ಯವನ್ನು ಕಂಠಪಾಠವಾಗಿ ಹೇಳಿದ್ದಕ್ಕೆ **'ಚಂಪೂಭಾಗವತ'** ಎಂಬ ಗ್ರಂಥವು ಪಾರಿತೋಷಕವಾಗಿ ಬಂತು.

ರಾಯರು ಮುಂದಿನ ವಿದ್ಯಾಭ್ಯಾಸಕ್ಕಾಗಿ ಗುಂಡಪ್ಪಭಾವನವರ ಮನೆಯಲ್ಲಿದ್ದುಕೊಂಡು ಹಾಸನದಲ್ಲಿ **ಹೈಸ್ಕೂಲಿಗೆ** ಸೇರಬೇಕೆಂದು ನಿಶ್ಚಯವಾಯಿತು. ಅದರಂತೆ ತರೀಕೆರೆಯಿಂದ ಅರಸೀಕೆರೆಮಾರ್ಗವಾಗಿ ಹೊರಟು ರಾಯರು ಮಧ್ಯೆ ಮಾವನವರ ಮನೆಯಲ್ಲಿ 8-10 ದಿನಗಳು ತಂಗಿದ್ದರು. ಅವರ ಮನೆಯಲ್ಲಿದ್ದ ಐಯ್ಯಂಗಾರ ಯೋಗೀಶ್ವರರೊಬ್ಬರ ಪರಿಚಯವು ರಾಯರಿಗೆ ಆಯಿತು. **'ಯೋಗ'**ವೆಂಬ ರಹಸ್ಯಸಾಧನವಿದೆ ಎಂಬುದು ಆಗಲೇ ರಾಯರ ಕಿವಿಗೆ ಬಿದ್ದದ್ದು. ಮುಂದೆ ಹಾಸನಕ್ಕೆ ಬಂದು ಹೈಸ್ಕೂಲಿಗೆ ಸೇರಿದರು. ಆಗ ಕೈಯಲ್ಲಿ ಹಣವಿಲ್ಲದೆ ಪುಸ್ತಕವಿಲ್ಲದೆ ತೊಂದರೆಯಾಗಿ ಸ್ವಲ್ಪ ಕಾಲವನ್ನು ತಳ್ಳಿದ್ದಾಯಿತು. ಪಾಠಗಳೆಲ್ಲ ಇಂಗ್ಲಿಷ್

ಮಾಧ್ಯಮದಿಂದಲೇ ನಡೆಯುತ್ತಿದ್ದುದರಿಂದ ಪುಸ್ತಕವಿಲ್ಲದೆ ಓದುವದು ಸಾಧ್ಯವಿರಲಿಲ್ಲ. ಊಟ, ಪಾಠ-ಎರಡೂ ಹಾಸನದಲ್ಲಿ ಸರಿಹೋಗದೆ ಅನಾರೋಗ್ಯವೂ ಸೇರಿದ್ದರಿಂದ ವಾಪಸು ಅರಸೀಕೆರೆಗೆ ಬಂದರು. ಮುಂದೆ ತರೀಕೆರೆಗೆ ಹೋಗಿ ಅಲ್ಲಿಂದ ಊರಿಗೆ ಪ್ರಯಾಣ ಮಾಡಿದರು. ಹೀಗೆ 1896ನೆಯ ವರ್ಷವು ವ್ಯರ್ಥವಾಗಿ ಕಳೆದುಹೋಯಿತು.

1897ರಲ್ಲಿ ರಾಯರು ತಮ್ಮ ಚಿಕ್ಕ ಅಣ್ಣಂದಿರು ಶಿವರಾಮಯ್ಯನವರು ಚಿಕ್ಕಮಗಳೂರಿನಲ್ಲಿ ಗೊಲ್ಲಿಕೆ ಕೆಲಸದಲ್ಲಿದ್ದುದರಿಂದ ಮತ್ತೆ ಅಲ್ಲಿಗೇ ಬಂದರು. ಅಲ್ಲಿ ಪ್ಲೀಡರ್ ಹರಿಯಪ್ಪನವರ ಮನೆಯಲ್ಲಿ ಒಂದು ಕೋಣೆಯಲ್ಲಿ ಸೋದರರಿಬ್ಬರೂ ವಾಸಮಾಡತೊಡಗಿದರು. ಹರಿಯಪ್ಪನವರು ನಡುನಡುವೆ ಮಾತನಾಡುವಾಗ 'ಕೃಷ್ಣ, ವಾಸುದೇವ'-ಎಂದುಕೊಳ್ಳುತ್ತಿದ್ದರು. ಅವರ ಮನೆಯಲ್ಲಿಯೇ ರಾಯರಿಗೆ ಹೆಚ್ಚಾಗಿ ಊಟ, ಸ್ನಾನ ಮುಂತಾದದ್ದು ಆಗುತ್ತಿತ್ತು. ಹರಿಯಪ್ಪನವರ ಅಕ್ಕಂದಿರೊಬ್ಬರು ಜ್ಞಾನಸಿಂಧು, ಭಗವದ್ಗೀತೆ-ಇವುಗಳನ್ನು ತಾವೂ ಓದುತ್ತಿದ್ದುದಲ್ಲದೆ ರಾಯರಿಂದಲೂ ಆಗಾಗ್ಗೆ ಓದಿಸುತ್ತಿದ್ದರು. ಸ್ಕೂಲಿಗೆ ಸೇರಿದ್ದಾಯಿತು. ಹೈಸ್ಕೂಲು ಪ್ರವೇಶವಾದೊಡನೆ ಹೊಸ ಪುಸ್ತಕಗಳ ರಾಶಿಯೇ ರಾಯರಿಗೆ ಕಂಡುಬಂತು. ಇಂಗ್ಲಿಷನ್ನು ಹೆಡ್‌ಮಾಸ್ಟರ್ ವೆಂಕಟಸ್ವಾಮಿ ಅಯ್ಯರ್‌ರು ಬೋಧಿಸುತ್ತಿದ್ದರು. ಟಿ.ವಿ. ಕೃಷ್ಣರಾಯರೆಂಬುವರು ಗಣಿತದ ಉಪಾಧ್ಯಾಯರು. ಇವರಿಬ್ಬರೂ ಉತ್ತಮಮಟ್ಟದ ಉಪಾಧ್ಯಾಯರುಗಳು. ರಾಯರು ಬೇಗ ಲೆಕ್ಕಮಾಡಿ ಕೃಷ್ಣರಾಯರ ಕೃಪೆಗೆ ಪಾತ್ರರಾಗುತ್ತಿದ್ದರು. ಸ್ನೇಹಿತನಾದ ಲಚ್ಚಿಯೂ ಅಲ್ಲಿಯೇ ಇದ್ದನು. ರಾಯರು ಬಹಳ ಮಟ್ಟಿಗೆ ಎಲ್ಲಾ ಪಾಠಗಳಲ್ಲೂ ಮೊದಲಿಗನಾಗಿರುತ್ತಿದ್ದರು. ಭೂಗೋಳವೊಂದು ಮಾತ್ರ ಕಷ್ಟವಾಗಿತ್ತಂತೆ. ಸಂಸ್ಕೃತದಲ್ಲಿ ರಾಯರಿಗೆ ಆಸ್ಥೆಯಿದ್ದರೂ ಅದು ಬೆಳೆಯಲು ಅವಕಾಶವಾಗಿರಲಿಲ್ಲ. ಕೆಲವು ಕಾರಣಗಳಿಂದ ರಾಯುರು ಕನ್ನಡವನ್ನೇ ದ್ವಿತೀಯ ಭಾಷೆಯಾಗಿ ಮುಂದುವರಿಸಿದರು. ಆಗ ಕೃಷ್ಣಾಚಾರ್ಯರೆಂಬುವರು ಕನ್ನಡ ಪಂಡಿತರು. ಇವರು 'ಕರ್ನಾಟಕ ವ್ಯಾಕರಣಂ' ಎಂಬ ಸ್ವತಂತ್ರಗ್ರಂಥವೊಂದನ್ನು ಬರೆದಿದ್ದರು. ಅದರಲ್ಲಿ ತಾವು ಬರೆದಿದ್ದ ಪ್ರತಿಯೊಂದು ನಿಯಮಕ್ಕೂ ಹಳಗನ್ನಡದ ಕವಿಗಳಿಂದ ಉದಾಹರಣೆಯನ್ನು ಕೊಟ್ಟಿದ್ದರು. ಇದರಿಂದ ರಾಯರಿಗೆ ಹಳಗನ್ನಡದಲ್ಲಿ ಅಭಿರುಚಿಯು ಹೆಚ್ಚಾಗಿ ಆಗಲು ಅವಕಾಶವಾಯಿತು. ಮಾತೃಭಾಷೆಯೂ ಕನ್ನಡವಾದ್ದರಿಂದ ಸಂಸ್ಕೃತಕ್ಕಿಂತ ಕನ್ನಡದ ಮೇಲೆಯೇ ಒಲವು ಹೆಚ್ಚಾಯಿತು. ಹಿಂದೆ ಆಂಗ್ಲೋವರ್ನಾಕ್ಯುಲರ್ ಸ್ಕೂಲಿನಲ್ಲಿ ಓದಿದ್ದ ನೀತಿ ಶತಕವು ರಾಯರಿಗೆ ಅನೇಕ ಹೊಸಶಬ್ದಗಳನ್ನು ಒದಗಿಸಿತ್ತು. ಜೊತೆಗೆ ಆಗಿನ ಬ್ರಾಹ್ಮಣಸಮಾಜದಲ್ಲಿ ಭೋಜನಕಾಲಕ್ಕೆ 'ಚಿದಾನಂದಕೋರಡೆ' ಎಂಬ ಕನ್ನಡಸವಾಯಿಗಳನ್ನು ಹೇಳುವದು ವಾಡಿಕೆಯಾಗಿತ್ತು. 'ಬ್ರಹ್ಮನು ಮಾಡಿದ ಪ್ರತಿಮೆಗಳೆಲ್ಲ ದೇವರು ತಾ ಹ್ಯಾಗಲ್ಲ' ಮುಂತಾದ ಪದಗಳನ್ನು ಹರಿಯಪ್ಪನವರೇ ಮುಂತಾದ ಹಿರಿಯರು ಎಷ್ಟೋಸಲ ರಾಯರಿಂದ ಹೇಳಿಸಿ ಸಂತೋಷಪಟ್ಟಿದ್ದೂ ಉಂಟು. ಪದ್ಯಗಳ ಭಾಷೆಗೆ ಹಳಗನ್ನಡದ ಪರಿಚಯವು ಅವಶ್ಯವೆಂಬುದನ್ನು ಕೃಷ್ಣಾಚಾರ್ಯರು ತಿಳಿಸಿಕೊಟ್ಟರು. ಆ

ಸಮಯಕ್ಕೆ ಸರಿಯಾಗಿ 'ಕರ್ನಾಟಕಕಾವ್ಯ ಕಲಾನಿಧಿ'- ಎಂಬ ಮಾಸಪತ್ರಿಕೆಯೊಂದು ಸ್ಕೂಲಿಗೆ ಬರುತ್ತಿತ್ತು. ರಾಯರೂ ಅದಕ್ಕೆ ಚಂದಾದಾರರಾದರು. ಗಿರಿಜಾಕಲ್ಯಾಣ, ರಾಮಾಶ್ವಮೇಧ-ಮುಂತಾದ ಕಾವ್ಯಗಳೂ ರಾಯರಿಗೆ ತುಂಬ ಪ್ರಿಯವಾದವು. ಒಟ್ಟಿನಲ್ಲಿ ಕೃಷ್ಣಾಚಾರ್ಯರು ಭಾಷೆಯ ತಿಳಿವಳಿಕೆಗೆ ವ್ಯಾಕರಣವು ಅವಶ್ಯವೆಂಬುದನ್ನು ರಾಯರಿಗೆ ಮನಗಾಣಿಸಿದ್ದರು.

ರಾಯರು ನಾಲ್ಕನೆಯ ಫಾರಂನಲ್ಲಿದ್ದಾಗ ಹೆಡ್‌ಮಾಸ್ಟರ್ ವೆಂಕಟಸ್ವಾಮಯ್ಯರ್‌ರವರಿಗೆ ವರ್ಗವಾಗಿ ಅವರ ಸ್ಥಾನಕ್ಕೆ ಶಿವಮೊಗ್ಗ ಕಾಲೇಜಿನಿಂದ ವಿ. ಸುಬ್ರಹ್ಮಣ್ಯ ಅಯ್ಯರ್‌ರವರು ಬಂದರು. ಈ ನಡುವೆ ತತ್ಕಾಲದ ಹೆಡ್‌ಮಾಸ್ಟರಾಗಿದ್ದ ಸುಬ್ರಹ್ಮಣ್ಯಶಾಸ್ತ್ರಿಗಳು ತುಮಕೂರಿಗೆ ವರ್ಗವಾಗಿ ಹೊರಟು ಹೋದರು. ಸುಬ್ರಹ್ಮಣ್ಯಶಾಸ್ತ್ರಿಗಳು ಬಲುಬಿಗಿಯಾಗಿ ದರ್ಪದಿಂದ ಸ್ಕೂಲನ್ನು ಆಳುತ್ತಿದ್ದರು. ಕ್ರಿಕೆಟ್‌ನಲ್ಲಿ ಅವರಿಗೆ ಬಹುಪ್ರೀತಿ. ರಾಯರಿಗೆ ಕ್ರಿಕೆಟ್ ಆಟ ಅಷ್ಟಕ್ಕಷ್ಟೇ ಬರುತ್ತಿತ್ತು. ಆದರೂ ಪಾಠಗಳಲ್ಲಿ ಮೊದಲನೆಯವರಾಗಿದ್ದದ್ದರಿಂದ ಮೇಲಿನ ಸ್ಥಾನವೇ ರಾಯರಿಗೆ ಸಿಗುತ್ತಿತ್ತು. ಅಂತೂ ಸುಬ್ರಹ್ಮಣ್ಯಶಾಸ್ತ್ರಿಗಳಿಗೆ ವರ್ಗವಾದದ್ದೇನೂ ದುಃಖಕರವಾಗಲಿಲ್ಲ. ಈ ನಡುವೆ ಭೌತಿಕವಿಜ್ಞಾನದ ಪಾಠಕ್ಕೆ ಭೀಮರಾಯರೆಂಬ ಉಪಾಧ್ಯಾಯರು ನಿಯಮಿತರಾಗಿದ್ದರು. ಇವರಿಗೆ ಪ್ರಯೋಗ (Experiment) ಎಂದರೆ ಅಂಜಿಕೆ. ಆದ್ದರಿಂದ ವಿಜ್ಞಾನಪಾಠಗಳನ್ನು ಬರೀ ಚಿತ್ರಗಳ ಹಾಗೂ 'ನೋಟ್ಸು'ಗಳಿಂದಲೇ ಸಾಗಿಸುತ್ತಿದ್ದರು. ರಾಯರಿಗೆ ಇದರಲ್ಲಿ ಕುತೂಹಲ ಕಡಿಮೆಯಾಗಲು ಇದೇ ಕಾರಣವಾಯಿತು. ಅಷ್ಟುಹೊತ್ತಿಗೆ ಹೆಡ್‌ಮಾಸ್ಟರಾಗಿ ಬಂದ ವಿ. ಸುಬ್ರಹ್ಮಣ್ಯ ಅಯ್ಯರು ಸ್ಕೂಲಿಗೇ ಒಂದು ವರಪ್ರಸಾದವೆನ್ನುವಂತಿದ್ದರು. ಇವರ ಜೊತೆಗೆ ಹೊಸದಾಗಿ ಕೆಲಸಕ್ಕೆ ಸೇರಿದ ತಿರುಮಲಾಚಾರ್ ಎಂಬುವರು ಚರಿತ್ರೆ, ಭೂವಿವರಣೆಗಳನ್ನು ಉತ್ತಮರೀತಿಯಿಂದ ಹೇಳಿಕೊಡುತ್ತಿದ್ದರು. ಪಾಠಮಾಡುವದಕ್ಕೆ ಮೊದಲೇ ಟಿಪ್ಪಣಿಗಳನ್ನು ಸಿದ್ಧಪಡಿಸಿಕೊಳ್ಳುತ್ತಿದ್ದರು. ಇದರಿಂದ ರಾಯರಿಗೆ ಅವರಲ್ಲಿ ಪೂಜ್ಯಬುದ್ಧಿಯುಂಟಾಯಿತು. ಟಿ.ವಿ.ಕೃಷ್ಣರಾಯರು ಬೀಜಗಣಿತ, ರೇಖಾಗಣಿತ, ಅಂಕಗಣಿತಗಳಲ್ಲಿ ದಿನ ದಿನವೂ ಹೊಸಹೊಸ ಭಕ್ಷ್ಯಗಳ ಸಮಾರಾಧನೆಯನ್ನೇ ಮಾಡಿಸುತ್ತಿದ್ದರು. ಸುಬ್ರಹ್ಮಣ್ಯ ಅಯ್ಯರ್‌ರವರು ಸ್ಕೂಲನ್ನು ಶ್ರುತಿಮಾಡಿದ ವೀಣೆಯಂತೆ ಸಮರಸವಾಗಿ ನಡೆಸುತ್ತಾ ಎಲ್ಲಾ ಬಗೆಯಿಂದಲೂ ವಿದ್ಯಾರ್ಥಿಗಳಿಗೂ ಮಹಾಜನರಿಗೂ ಮೆಚ್ಚಿನಿಸಿದರು. ರಾಯರಿಗೆ ನೆಸ್‌ಫೀಲ್ಡ್ ಗ್ರಾಮರ್ ಎಂಬ ವ್ಯಾಕರಣವು ಹೃದ್ಗತವಾಗಿತ್ತು. ಇದರಿಂದಲೂ ಅಯ್ಯರಿಗೆ ರಾಯರಮೇಲೆ ಪ್ರೀತಿಯುಂಟಾಗಲು ಕಾರಣವಾಯಿತು. ಮುಂದೆ ರಾಯರಿಗೆ ಪ್ಲೀಡರ್ ಹರಿಯಪ್ಪನವರ ಮನೆಯ ರೂಮಿನ ವಾಸವು ತಪ್ಪಿತು. ಅಷ್ಟುಹೊತ್ತಿಗೆ ಅದೇ ಊರಿಗೆ ದೊಡ್ಡಣ್ಣನವರು ವರ್ಗವಾಗಿ ಬಂದದ್ದರಿಂದ ರಾಯರು ಅವರ ಮನೆಯಲ್ಲೇ ನಿಂತರು. ಆದರೆ ವಿದ್ಯಾಭ್ಯಾಸಕ್ಕೆ ಮನೆಯಲ್ಲಿ ಹೆಚ್ಚು ಅನುಕೂಲವಾಗಲಿಲ್ಲ. ವಾರಮಾಡಿಕೊಂಡಿರಬೇಕೆಂದು ಪ್ರಯತ್ನಪಟ್ಟರೂ ಸಫಲವಾಗಲಿಲ್ಲ. ಇಷ್ಟರಲ್ಲಿ ಚಿಕ್ಕಮಗಳೂರಿಗೆ

ಪ್ಲೇಗುಬಂದದ್ದರಿಂದ ಜನರೆಲ್ಲ ಹೆದರಿಕೆಯಿಂದ ಚೆಲ್ಲಾಪಿಲ್ಲಿಯಾದರು. ರಾಯರು ಊರಿಗೆ ಹೊರಡಬೇಕೆಂದಿದ್ದಾಗ ಕೃಷ್ಣಾಚಾರ್ಯರ ಶಿಫಾರಸ್ಸಿನಿಂದ ಶ್ರೀ ವಿ. ಸುಬ್ರಹ್ಮಣ್ಯ ಅಯ್ಯರ್‌ರವರ ಮನೆಯಲ್ಲೇ ರಾಯರಿಗೆ ಊಟದ ಏರ್ಪಾಡಾಯಿತು. ಆಗ ರಾಯರ ಸಂತೋಷಕ್ಕೆ ಪಾರವೇ ಇರಲಿಲ್ಲ.

## ವೇದಾಂತದ ಸುಳಿಗಾಳಿ :

ಮುಂದಿನ ವಿಷಯವನ್ನು ರಾಯರ ವಾಣಿಯಿಂದಲೇ ಕೇಳಿರಿ: "ಸುಬ್ರಹ್ಮಣ್ಯ ಅಯ್ಯರ್‌ರವರ ಮನೆಯಲ್ಲಿ ನನಗೆ ಸ್ಥೂಲದೇಹಕ್ಕೆ ಮಾತ್ರ ಅನ್ನವು ದೊರೆಯಲಿಲ್ಲ. ಅವರ ನಡೆನುಡಿಗಳಿಂದ ನನ್ನ ತಿಳಿವಳಿಕೆಯೂ ಹಿಗ್ಗಿತು. ನಡೆವಳಿಕೆಯೂ ತಿದ್ದಿತು. ಅಯ್ಯರ್‌ರವರು ಮುಂಚಿತವಾಗಿ ಎದ್ದು ಚಟುವಟಿಕೆಯಿಂದ ಎಲ್ಲಾ ಕೆಲಸಗಳನ್ನೂ ಮಾಡುತ್ತಿದ್ದುದನ್ನೂ ಸ್ಕೂಲಿನಲ್ಲಿಟ್ಟುಕೊಂಡಿದ್ದ ಪರಮಾಸಕ್ತಿಯನ್ನೂ ಬಡಹುಡುಗರಲ್ಲಿ ತೋರಿಸುತ್ತಿದ್ದ ಕರುಣೆಯನ್ನೂ ಕಂಡು ನನಗೆ ಅವರು ಸಾಧಾರಣಪುರುಷರಲ್ಲ- ಎನ್ನಿಸಿತು. ಅವರು ಆರೋಗ್ಯಕ್ಕಾಗಿ ಡೆಂಬೆಲ್ಸ್ ಎಂಬ ಕಬ್ಬಿಣದ ಕೈಗುಂಡುಗಳನ್ನು ಹಿಡಿದು ವ್ಯಾಯಾಮಮಾಡುತ್ತಿದ್ದರು. ಜಲಚಿಕಿತ್ಸೆಯಿಂದ ಶರೀರಕ್ಕೆ ಆರೋಗ್ಯವನ್ನುಂಟುಮಾಡಿಕೊಳ್ಳುತ್ತಿದ್ದರು. ಆಹಾರವಿಹಾರಗಳಲ್ಲಿ ಹಿತಮಿತವಾಗಿರುತ್ತಿದ್ದರು. ಇದೆಲ್ಲಕ್ಕಿಂತಲೂ ಮುಖ್ಯವಾಗಿ **ನನಗೆ ಅನಿರೀಕ್ಷಿತ ರೀತಿಯಿಂದ ಅಯ್ಯರ್‌ರವರ ಮನೆಯಲ್ಲಿಯೇ ವೇದಾಂತದಲ್ಲಿ ಮೊಟ್ಟಮೊದಲನೆಯ ಪ್ರವೇಶವುಂಟಾಯಿತು.** ಅದೇನು ಜನ್ಮಾಂತರ ಸಂಸ್ಕಾರದ ಕಾರಣವೊ, ಪರಮೇಶ್ವರನ ಅನುಗ್ರಹದ ಗುರುತೊ, ಸ್ವಪ್ರಯತ್ನವು ಅಷ್ಟಾಗಿ ಇಲ್ಲದಿದ್ದರೂ ನನಗೆ ಸಂಸ್ಕೃತಭಾಷೆಯ ಮತ್ತು ಈಶ್ವರಭಕ್ತಿಯ ಪರಿಚಯವು ಆಗಾಗ್ಗೆ ಆಗುತ್ತಲೇಇದ್ದಿತು. ಈಗ ಬಸವನಹಳ್ಳಿಯಲ್ಲಿದ್ದ ತಿಮ್ಮಪ್ಪಯ್ಯನೆಂಬವನ ಸ್ನೇಹದಿಂದ ಸಂಸ್ಕೃತದ ಅಭಿರುಚಿ ಮತ್ತೆ ಮೊಳೆತುಕೊಂಡಿತು. ಅಯ್ಯರ್‌ರವರ ಮನೆಯಲ್ಲಿ ಆಗಾಗ್ಗೆ ಕೆಲವು ದೊಡ್ಡಮನುಷ್ಯರು ಸೇರಿ 'ಸಾಂಖ್ಯ', 'ವೇದಾಂತ' ಎಂಬ ಶಬ್ದಗಳನ್ನು ಬೆರಸಿಕೊಂಡು ಚರ್ಚೆ ಮಾಡುತ್ತಿದ್ದರು. ಅಯ್ಯರ್‌ರವರಿಗೆ ಅರ್ಥಶಾಸ್ತ್ರ ಹಾಗೂ ತತ್ತ್ವಶಾಸ್ತ್ರದಲ್ಲಿ ತುಂಬ ಅಕ್ಕರೆ.* ನನಗೆ ಅವರುಗಳ ಚರ್ಚೆಯು ಆಗ ಬಹಳ ಕುತೂಹಲವನ್ನು ಕೆರಳಿಸಿರುತ್ತಿತ್ತು. ಒಂದು ದಿನ ಅವರು ಬಸವನಹಳ್ಳಿಯಲ್ಲಿದ್ದ ಒಬ್ಬ ಅಸಿಸ್ಟೆಂಟ್‌ಮಾಸ್ಟರ ಮನೆಗೆ ನನ್ನನ್ನು ಏತಕ್ಕೋ ಕಳುಹಿಸಿದಾಗ ಅಲ್ಲಿ ಒಂದು ಪುಸ್ತಕವು ಕಣ್ಣಿಗೆ ಬಿತ್ತು. ಅದರಲ್ಲಿ ಒಂದುಕಡೆ Heat, cold, etc., and the causes thereof, which are (no doubt) perceived through the organs of perception, are not absolutely real *(Vastu-sat)* for they are effects or changes *(Vikara)* and every change is temporary' ಎಂದು ಬರೆದಿತ್ತು.

---

* ಈಚೆಗೆ ಅಯ್ಯರರವರ The Philosophy of Truth or Tattvagyana ಎಂಬ ಹೆಸರಿನ ಒಂದು ಪುಸ್ತಕವು ನಮ್ಮ ಲೈಬ್ರರಿಗೆ ಬಂದಿದೆ.

ಆ ಪುಸ್ತಕದ ಹೆಸರು ಭಗವದ್ಗೀತೆ ಎಂದು ಇಂಗ್ಲಿಷಿನಲ್ಲಿ ಅಚ್ಚಾಗಿತ್ತು. ಆದರೆ ನನಗೆ 'ಭಗವದ್ಗೀತೆ ಎಂದರೆ ಯಾವ ಪುಸ್ತಕವೊ? ಅದರಲ್ಲಿ ಶೀತ, ಉಷ್ಣ-ಇವುಗಳೆಲ್ಲ ಬರಿಯ ವಿಕಾರಗಳೆಂದು ಬರೆದಿದೆಯಲ್ಲ! ಇಂಥ ಸೈನ್ಸುವಿಚಾರ ನಮ್ಮ ಪೂರ್ವಿಕರಿಗೆ ತಿಳಿದಿರಲಿಲ್ಲವೆಂದು ಇಂಗ್ಲಿಷ್ ಸೈನ್ಸ್‌ಬುಕ್‌ನಲ್ಲಿದೆ. ಆದರೆ ಇಲ್ಲಿ ಸ್ಪಷ್ಟವಾಗಿ ಶೀತೋಷ್ಣಗಳು ವಿಕಾರವೆಂದೇ ಇದೆಯಲ್ಲ!' ಎಂಬುದೇ ಮುಂತಾದ ಯೋಚನೆಗಳು ತಲೆಯಲ್ಲಿ ಎದ್ದುಕೊಂಡವು. ಆಗ ನಾನು ನೋಡಿದ ಪುಸ್ತಕವು ಶಾಂಕರಭಾಷ್ಯಸಮೇತವಾದ ಭಗವದ್ಗೀತೆ ಎಂಬುದು ಮೂರುವರ್ಷಗಳ ಮೇಲೆ ತಿಳಿಯಿತು".

ಹೀಗೆ ರಾಯರಿಗೆ ದೈವಾನುಗ್ರಹದಿಂದ ವೇದಾಂತದ ಸುಳಿಗಾಳಿಯು ಮನಸ್ಸಿನಲ್ಲಿ ಬೀಸಲು ಆರಂಭಿಸಿತು. ಶ್ರೀ ಅಯ್ಯರ್‌ರವರ ಮನೆಯಲ್ಲಿ (ಅವರ ತಮ್ಮ) ಗಣೇಶನ್ ಎಂಬ ವಿದ್ಯಾರ್ಥಿಯೊಬ್ಬನೂ ಸೇರಿಕೊಂಡಿದ್ದನು. ರಾಯರೂ ಅವನೂ ಸ್ನೇಹಿತರಾದರು. ವಾಕಿಂಗ್ ಹೋಗುವಾಗ ರಾಯರು ಪರೀಕ್ಷಾಪತ್ರಿಕೆಯೊಂದರಲ್ಲಿದ್ದ ಬೀಜಗಣಿತದ ಲೆಕ್ಕವನ್ನು ಸುಲಭವಾಗಿ ಬಿಡಿಸಿ ಬಾಯಲ್ಲಿಯೇ ಮಾಡಿದ್ದರಿಂದ ಅವನಿಗೆ ಆಶ್ಚರ್ಯವಾಗಿತ್ತು. ಅವನು ದಿನವೂ ಮಡಿಯಲ್ಲಿ ಸಂಧ್ಯಾವಂದನೆ ಮಾಡುತ್ತಿದ್ದನು. ರಾಯರಿಗೂ ಅವನ ಸಹವಾಸದಿಂದ ಮಡಿ ಮೈಲಿಗೆಗಳ ಆಚರಣೆ ಮತ್ತೆ ಪ್ರಾರಂಭವಾಯಿತು. ಆಗಾಗ್ಗೆ ರಾಯರು ಬಸವನ ಹಳ್ಳಿಯಲ್ಲಿದ್ದ ಮಲ್ಲಣ್ಣಭಾವನವರ ಮನೆಗೂ ಹೋಗಿಬರುತ್ತಿದ್ದರು. ಅವರು ದಬ್ಬೆ ಸುಬ್ಬಾಶಾಸ್ತ್ರಿಗಳೆಂಬವರಿಂದ ದೇವೀಪುರಾಣ, ತೈತ್ತಿರೀಯೋಪನಿಷತ್ತು-ಇವುಗಳನ್ನು ಶ್ರವಣ ಮಾಡುತ್ತಿದ್ದರು. ಪ್ರತಿಯೊಂದು ಶ್ರವಣವೂ ಮುಗಿದಾಗ ಮಂಗಳವನ್ನು ಮಾಡುತ್ತಿದ್ದರು. ಒಂದು ದಿನ ಆ ಶಾಸ್ತ್ರಿಗಳು 'ಯತೋ ವಾಚೋ....' ಎಂಬ ಮಂತ್ರದ ಅರ್ಥವನ್ನು ಅಭಿನಯಪೂರ್ವಕವಾಗಿ ವಿವರಿಸುತ್ತಿದ್ದರು. ರಾಯರಿಗೆ ಅದನ್ನು ಕೇಳಿ 'ಬ್ರಹ್ಮವೆಂದರೆ ಯಾವ ಪದಾರ್ಥವೊ! ಮನಸ್ಸೂ ವಾಕ್ಕುಗಳೂ ಅದನ್ನು ಹಿಡಿಯಲಾರದೆ ಹಿಂದಕ್ಕೆ ಬಂದವೆಂದರೇನು?' ಎಂಬುದು ತಿಳಿಯಲಿಲ್ಲವಂತೆ. ಕೇಳಲು ಹೆದರಿಕೆಯಿಂದ ಹಿಂಜರಿದರು. ವಾಸಿಷ್ಠ ರಾಮಾಯಣ, ತೈತ್ತಿರೀಯೋಪನಿಷತ್ತು-ಇವು ಮಲ್ಲಣ್ಣಭಾವನವರ ಮನೆಯಲ್ಲಿದ್ದ ಇನ್ನೆರಡು ಗ್ರಂಥಗಳು. ಇದನ್ನು ಹಿರಿಯರ ಕಣ್ಣು ತಪ್ಪಿಸಿ ತೆಗೆದು ನೋಡಬೇಕಾದರೆ ರಾಯರಿಗೆ ಬಹಳ ಶ್ರಮವಾಯಿತಂತೆ. ಅಂತೂ ಇಲ್ಲೂ ವೇದಾಂತದ ಸುಳಿಗಾಳಿಯು ಬೀಸಿದಂತೆ ಆಯಿತು-ಎನ್ನಬಹುದು.

## ರಾಯರ ಕೆಲವು ಸ್ನೇಹಿತರು :

ಗಣೇಶನ್‌ನ ಹೆಸರು ಹೇಳಿದೆ; ತಿಮ್ಮಪ್ಪಯ್ಯನು ಮತ್ತೊಬ್ಬ ಸ್ನೇಹಿತನು. ಇವನ ಅಣ್ಣಂದಿರು ಔಪಾಸನಾಗ್ನಿಯನ್ನು ಇಟ್ಟಿದ್ದರು. ತಿಮ್ಮಪ್ಪಯ್ಯನೂ ಆಚಾರವಂತನೇ ಹೌದು.

ಅಕ್ಷರಗಳು ದುಂಡಾಗಲು ಗಾಯತ್ರೀಮಂತ್ರವನ್ನು ಪುಸ್ತಕದಲ್ಲೆಲ್ಲ ಬರೆಯುತ್ತಿದ್ದನು. ಅವನು ಯೂಕ್ಲಿಡ್ ಎಂಬಾತನ ರೇಖಾ ಗಣಿತದ ಪ್ರತಿಜ್ಞೆಗಳ ಕ್ರಮದಲ್ಲಿ 'ದೇವರಿಲ್ಲ'-ಎಂದು ರುಜುವಾತು ಮಾಡಿದ್ದನ್ನು ನೋಡಿ ರಾಯರಿಗೆ ಬಹಳ ಆಶ್ಚರ್ಯವೂ ಖೇದವೂ ಆಯಿತು. ಅವನಿಗೆ ಪ್ರತ್ಯುತ್ತರ ಹೇಳುವದು ಆಗ ರಾಯರಿಗೆ ಸಾಧ್ಯವಾಗಲಿಲ್ಲವಂತೆ. ಮುಸಲ್ಮಾನಮತದ ತತ್ತ್ವಗಳನ್ನು ಅವನು ಮೆಚ್ಚಿಕೊಂಡಿದ್ದನಲ್ಲದೆ ಯಕ್ಷಿಣೀವಿದ್ಯೆ, ವಶೀಕರಣ- ಇವುಗಳ ಬಗೆಗೂ ಕೊಚ್ಚಿಕೊಳ್ಳುತ್ತಿದ್ದನು. ರಾಯರಿಗೆ ಇವನ ಸಹವಾಸದಿಂದ ಈ ವಾಸನೆಗಳು ಎದ್ದವಾದರೂ ನಿಲ್ಲಲಿಲ್ಲ. ಇದರ ಬದಲು ತಿಮ್ಮಪ್ಪಯ್ಯನಲ್ಲಿದ್ದ ಇಂಗ್ಲಿಷುಭಾಷಾಂತರ ಸಹಿತವಾದ ರಘುವಂಶಕಾವ್ಯವು ರಾಯರ ಕೈಗೆ ಸಿಕ್ಕಿತು. ವಿರಾಮಕಾಲದಲ್ಲಿ ಅದನ್ನು ರಾಯರು ಓದಲಾರಂಭಿಸಿದರು. ಅಷ್ಟುಹೊತ್ತಿಗೆ ಮೆಕ್ಡಾನಲ್ಸ್ ಸಂಸ್ಕೃತ-ಇಂಗ್ಲಿಷು ನಿಘಂಟುವೊಂದನ್ನು ರಾಯರು ಕೊಂಡುಕೊಂಡರು. ಇದರಿಂದ ಸಂಸ್ಕೃತಾಭ್ಯಾಸಕ್ಕೆ ಅಮೋಘ ಸಹಾಯವು ದೊರಕಿತು. ಲಚ್ಚಿ, ವೆಂಕಟಸಾಮಿ ಅಯ್ಯರ್, ನರಸಿಂಹಯ್ಯಂಗಾರ್, ಶ್ರೀನಿವಾಸಾಚಾರ್, ಪುಟ್ಟಣ್ಣಶಾಸ್ತ್ರಿ, ಲಕ್ಷ್ಮಣಶಾಸ್ತ್ರಿ, ರಂಗರಾವ್-ಇವರುಗಳು ಮತ್ತೆ ಕೆಲವು ಸ್ನೇಹಿತರು. ಕೆ. ವೆಂಕಟಸಾಮಿ ಅಯ್ಯರ್ ಚುರುಕುಬುದ್ಧಿಯವನು. ಅವನ ಸಹವಾಸದಿಂದ ರಾಯರಿಗೆ ಓದುವದರಲ್ಲಿ ಹುರುಪುಂಟಾಯಿತು. ನರಸಿಂಹಯ್ಯಂಗಾರ್ ಕ್ರಿಕೆಟ್‌ನಲ್ಲಿ ಗಟ್ಟಿಗ, ಪಾಠಗಳಲ್ಲಿ ಸುಮಾರಾಗಿದ್ದನು. ಶ್ರೀನಿವಾಸಾಚಾರ್ ಮಧ್ಯಮದರ್ಜೆಯ ವಿದ್ಯಾರ್ಥಿ. ರಂಗರಾವ್ ಬುದ್ಧಿವಂತ, ದೊಡ್ಡಮನುಷ್ಯರ ಮಗ; ಸ್ಫುರದ್ರೂಪಿಯೂ ಮಾತಿನಲ್ಲಿ ಚತುರನೂ ಆಗಿದ್ದನು. ಇಂಗ್ಲಿಷು, ವಾಕ್ಯರಚನೆ, ರೇಖಾಗಣಿತಗಳಲ್ಲಿ ಜಾಣನಾಗಿದ್ದನು. ಪುಟ್ಟಣ್ಣಶಾಸ್ತ್ರಿ ಮಧುರಕಂಠದವನು. ಒಂದು ಸಮಾರಂಭದಲ್ಲಿ ಮಹಾರಾಜರ ಸಮ್ಮುಖದಲ್ಲಿ ಮಧ್ಯಮಾವತಿರಾಗದಲ್ಲಿ ಕೆಲವು ಪದ್ಯಗಳನ್ನು ಹಾಡಿದ್ದನು. ಒಂದುಬಾರಿ ಕ್ಲಾಸಿನ ಬೋರ್ಡಿನ ಮೇಲೆ ಅವನು ಮೇಷ್ಟರಿಗೆ ತಿಳಿಯದಂತೆ ಬರೆದಿದ್ದ A wise man turneth away from wrath (ವಿವೇಕಿಯು ಕ್ರೋಧದಿಂದ ನಿವೃತ್ತನಾಗುತ್ತಾನೆ)- ಎಂಬ ವಾಕ್ಯವನ್ನು ನೋಡಿ ಉಪಾಧ್ಯಾಯರು ಸ್ಥಾನೇಕೋಪವು (ಗುಪ್ತಸ್ಥಳದಲ್ಲಿ ಮಾಡುವ ಕೋಪ) ಸೂಕ್ತವಾದದ್ದೆಂದೇ ಸಮರ್ಥನೆಮಾಡಿ ಒಂದು ಉಪನ್ಯಾಸವನ್ನೇ ಮಾಡಿದ್ದರಂತೆ! ಲಕ್ಷ್ಮಣಶಾಸ್ತ್ರಿಯು ಸುಂದರವಾದ ಅಕ್ಷರಗಳನ್ನು ಬರೆಯುತ್ತಿದ್ದನು. ಇನ್ನೊಬ್ಬ ಸ್ನೇಹಿತ ರಾಮರಾವ್ ಪ್ರಾಯಶಃ ಎಲ್ಲಾ ಪಾಠಗಳಲ್ಲೂ ಹಿಂದಿರುತ್ತಿದ್ದನು. ಆದರೂ ಹೆಡ್‌ಮಾಸ್ಟರು ಅವನಿಗೇ ಪ್ರಶ್ನೆಗಳನ್ನು ಹಾಕಿ ಉತ್ತೇಜನವನ್ನು ಕೊಡುತ್ತಲೇ ಇದ್ದರು. ಹುಡುಗರೆಲ್ಲ ಸೇರಿ ರಾಯರಿಗೆ ಒಬ್ಬೊಬ್ಬರು ಒಂದೊಂದು ವಿಷಯದಲ್ಲಿ ಹಿಂದೆ ಹಾಕಲು ಪ್ರಯತ್ನಮಾಡಿ ಸರದಿಯ ಪ್ರಕಾರ ರಾಯರ ಬಳಿಗೆ ಬಂದು ಹರಟೆಹೊಡೆದು ಕಾಲಹರಣಮಾಡಿಸುತ್ತಿದ್ದರಂತೆ. ಅದರ ಗುಟ್ಟು ಆಮೇಲೆ ರಾಯರಿಗೆ ಗೊತ್ತಾಯಿತು. ಆದರೂ ರಾಯರೇ ಎಲ್ಲಾ ಪಾಠವಿಷಯಗಳಲ್ಲಿಯೂ ಮೊದಲಿಗರಾಗಿರುತ್ತಿದ್ದರು.

## ವಿದ್ಯಾರ್ಥಿಗಳ ಚರ್ಚಾಕೂಟ :

ಸ್ಕೂಲಿನಲ್ಲಿ ವಿದ್ಯಾರ್ಥಿಗಳ ಚರ್ಚಾಕೂಟವೊಂದು ಸ್ಥಾಪಿತವಾಗಿದ್ದು ನಡೆಯುತ್ತಿತ್ತು. ರಾಯರು ಮಾತ್ರ ಅದರಲ್ಲಿ ಭಾಗವಹಿಸಿದ್ದು ಕಡಿಮೆಯೇ. ಗೊತ್ತಿದ್ದ ವಿಷಯದಲ್ಲೇ ಹತ್ತು ಹತ್ತು ವಾಕ್ಯಗಳನ್ನು ಹೇಳಬೇಕೆಂದು ಉಪಾಧ್ಯಾಯರು ಹೇಳುತ್ತಿದ್ದರೂ ಇಂಗ್ಲಿಷ್‌ನಲ್ಲಿ ಮಾತನಾಡುವದು ಹುಡುಗರಿಗೆ ಕಷ್ಟವಾಗುತ್ತಿತ್ತು. ಕೆಲವು ಹುಡುಗರು ಅದಕ್ಕಾಗಿ ವಿಷಯಸಂಗ್ರಹ ಮಾಡಿಕೊಂಡು ತಯಾರಾಗಿ ಬರುತ್ತಿದ್ದರು. ರಾಯರಿಗೆ ಶಬ್ದಭಂಡಾರವೂ ವಿಷಯ ಸಂಗ್ರಹವೂ ಸಾಲದೆ ಅವರು ಅದರಲ್ಲಿ ಹೆಚ್ಚಾಗಿ ಭಾಗವಹಿಸುತ್ತಿರಲಿಲ್ಲ. ಒಂದು ಕೂಟದಲ್ಲಿ ಅಧ್ಯಕ್ಷರಾಗಿದ್ದ ಒಬ್ಬ ಪಾದ್ರಿಗಳು ಕ್ರಿಸ್ತಿಯನ್‌ಮತವನ್ನು ಹೊಗಳಿದ್ದು ರಾಯರಿಗೆ ಅದರ ಪರಿಚಯವು ಸ್ವಲ್ಪಮಟ್ಟಿಗೆ ಆಗಲು ಅವಕಾಶವಾಯಿತು. ತರೀಕೆರೆಯಲ್ಲಿ ಒಂದುಸಾರಿ ಒಬ್ಬ ಪಾದ್ರಿಗಳು ಉಪದೇಶಮಾಡುತ್ತಾ ಅದ್ವೈತಮತವನ್ನು ದೂಷಿಸಿದ್ದರಂತೆ. ಅದು ರಾಯರಿಗೆ ಸುಮಾರಾಗಿ ತಿಳಿಯಿತಾದರೂ ಕ್ರಿಸ್ತಿಯನ್‌ಮತದ ವಿಚಾರವೇನೂ ಅವರಿಗೆ ಗೊತ್ತಾಗಲಿಲ್ಲ. ರಾಯರ ತಂದೆಯವರು ಹರಾಜಿನಲ್ಲಿ ತಂದಿದ್ದ ಬೈಬಲ್‌ಪುಸ್ತಕವು ಮನೆಯಲ್ಲಿದ್ದರೂ ಅದು ತಲೆದಿಂಬಾಗಿಯೋ ಆಟದ ವಸ್ತುವಾಗಿಯೋ ಉಪಯೋಗವಾಗುತ್ತಿತ್ತಂತೆ. ಆದರೆ ಮೇಲೆ ಹೇಳಿದ ಪಾದ್ರಿಗಳ ಭಾಷಣವು ಕ್ರಿಸ್ತಿಯನ್ನರು ತಮ್ಮ ಮತದ ಕಡೆಗೆ ಹಿಂದುಗಳನ್ನು ಎಳೆಯುವದಕ್ಕೆ ಮಾಡಿರುವ ಉಪಾಯ-ಎಂದು ರಂಗರಾವ್‌ನಿಂದ ರಾಯರಿಗೆ ತಿಳಿಯಿತು. ಮತ್ತೊಂದು ಚರ್ಚೆಯಲ್ಲಿ ರಾಯರು 'ಔರಂಗಜೇಬ್ ಹಾಗೂ ಶಿವಾಜಿ ಇಬ್ಬರೂ ತಂತ್ರಿಗಳೇ ಮೋಸಗಾರರೇ; ಹೀಗಿರುವಲ್ಲಿ ಶಿವಾಜಿಯನ್ನು ಹೊಗಳಿ ಔರಂಗಜೇಬನನ್ನು ನಿಂದಿಸುವದಕ್ಕೆ ಕಾರಣವೇನು? ಇದನ್ನು ಚರ್ಚೆಗಾರರು ಯಾರೂ ಹೇಳಿಲ್ಲ!' ಎಂದು ಸ್ವತಂತ್ರಯುಕ್ತಿಗಳಿಂದ ವಾದಿಸಿದರಂತೆ. ಇದು ಆಗ್ಗೆ ಹೆಡ್‌ಮಾಸ್ಟರಿಗೆ ಮೆಚ್ಚಾಯಿತಂತೆ.

## ಸ್ಕೂಲುಜವಾನನ ಮಹತ್ತ್ವ :

ರಾಯರು ಓದುತ್ತಿದ್ದಾಗ ಸ್ಕೂಲಿನಲ್ಲಿ ಮಾದೆಹಳ್ಳಿ ಎಂಬ ಜವಾನನಿದ್ದನು. ಇವನು ಬಹಳ ದಿನಗಳಿಂದ ನೌಕರಿಯಲ್ಲಿದ್ದನು. ವಿದ್ಯಾರ್ಥಿಗಳೆಲ್ಲ ಇವನಿಗೆ ಹೆದರುತ್ತಿದ್ದರು. ಸ್ಕೂಲುಕೆಲಸವನ್ನು ಬಹುಅಚ್ಚುಕಟ್ಟಾಗಿಯೂ ಶ್ರದ್ಧೆಯಿಂದಲೂ ಮಾಡುತ್ತಿದ್ದನು. ನಡುವೆ ವಿರಾಮವು ದೊರೆತಾಗ ಕನ್ನಡಗದ್ಯ ಮಹಾಭಾರತವನ್ನು ಓದುತ್ತಿದ್ದನು. ಇವನಿಗೆ ಒಂದುಸಲ ಮೈಮೇಲೆ ಎಚ್ಚರವಿಲ್ಲದಂತಾಗಿದ್ದು ಸತ್ತನೆಂದೇ ತಿಳಿದು ದೇಹವನ್ನು ಮನೆಯವರು ಹೊರಗಿಟ್ಟಿದ್ದರಂತೆ; ಬೆಳಗಾಗುತ್ತಲೂ ಮತ್ತೆ ಎಚ್ಚತ್ತನಂತೆ. ಆಗ ತಾನು ಯಮಲೋಕಕ್ಕೆ ಹೋಗಿಬಂದ ವೃತ್ತಾಂತವನ್ನೆಲ್ಲ ಜನರಿಗೆ ಕುತೂಹಲವುಂಟಾಗುವಂತೆ ಹೇಳಿದನಂತೆ! ಅಂತೂ ಈತನು ಬಹುಕಾಲ ಬದುಕಿದ್ದನು. ಆದ್ದರಿಂದ ಇವನನ್ನು 'ಚೀಟಿ ಹಿಂದಕ್ಕೆಹಾಕಿದವನು'- ಎಂದು ಜನರು ಅನ್ನುತ್ತಿದ್ದರು.

## ಅಯ್ಯರ್‌ರವರ ಆದರ್ಶಬೋಧಕತ್ವ :

ಹೆಡ್‌ಮಾಸ್ಟರು ಶ್ರೀ ವಿ. ಸುಬ್ರಹ್ಮಣ್ಯ ಅಯ್ಯರ್‌ರು ಸ್ಕೂಲಿನ ಮುಖ್ಯ ಪ್ರಾಣದಂತಿದ್ದರು. ಬೆಳಗಿನಹೊತ್ತು ಸ್ಕೂಲಿಗೆ ಬಂದವರು ಕೆಲವು ಪಾಠಪ್ರವಚನಗಳನ್ನು ನಡೆಸಿ ಊಟಮಾಡಿಕೊಂಡು ಮಧ್ಯಾಹ್ನದ ಮೇಲೆ ಕೆಲವು ಪಾಠಗಳು, ಸ್ಕೂಲಿನ ಲೆಕ್ಕಪತ್ರಗಳು-ಮುಂತಾದವುಗಳನ್ನು ನೋಡಿಕೊಂಡು ಹುಡುಗರು ಸಾಯಂಕಾಲ ಕ್ರಿಕೆಟ್ ಮುಂತಾದ ಆಟಗಳನ್ನು ಆಡುವಾಗ, ಡ್ರಿಲ್‌ಮಾಡುವಾಗ-ಎಲ್ಲೆಲ್ಲೂ ಕಾಣಿಸಿಕೊಳ್ಳುತ್ತಿದ್ದರು. ಅವರು ಸ್ಕೂಲಿನಲ್ಲಿ ನಡೆಸದೆ ಇದ್ದ ಪಾಠವಿಲ್ಲ; ಭಾಗವನ್ನು ತೆಗೆದುಕೊಳ್ಳದೆ ಇದ್ದ ಆಟವಿಲ್ಲ. ಇಂಗ್ಲೆಂಡ್ ದೇಶದ ಇತಿಹಾಸವನ್ನು ಹೇಳಿದರೆ ಆಯಾ ಕಾಲದ ಕಾಲಸ್ಥಿತಿಯನ್ನು ಕಣ್ಣಿಗೆ ಕಟ್ಟಿದಂತೆ ಚಿತ್ರಿಸುತ್ತಿದ್ದರು. ರೇಖಾಗಣಿತದ ಸಮಸ್ಯೆಗಳನ್ನು ಬಿಡಿಸಿದರೆ ತಮ್ಮದೇ ಆದ ಹೊಸದೊಂದು ರೀತಿಯಿಂದ ಉಪಪಾದನೆ ಮಾಡುತ್ತಿದ್ದರು; ಭೌತಿಕವಿಜ್ಞಾನವನ್ನು ತೆಗೆದುಕೊಂಡಾಗ ಆಯಾ ಪ್ರಯೋಗವನ್ನು ಮಾಡಿತೋರಿಸಿ ವಿಜ್ಞಾನವೆಂಬುದೊಂದು ಯಕ್ಷಿಣೀವಿದ್ಯೆಯೊ!-ಎಂಬ ಭಾವನೆಯನ್ನು ತಂದುಕೊಡುತ್ತಿದ್ದರು. ಇಂಗ್ಲಿಷುಪಾಠಗಳಲ್ಲಿ ವಿಷಯವ್ಯಾಖ್ಯಾನವನ್ನು ಮನಮೋಹಕವಾಗಿ ಮಾಡುತ್ತಿದ್ದರು. ಆಟದಲ್ಲಿ ಎರಡು ಕೈಗಳಿಂದಲೂ ಬೌಲಿಂಗ್‌ಮಾಡುವದು, ಹೈಜಂಪ್ ಲಾಂಗ್‌ಜಂಪ್‌ಗಳನ್ನು ತಾವು ಮಾಡಿತೋರಿಸುವದು-ಇವೇ ಮುಂತಾದ ರೀತಿಗಳಿಂದ ಹುಡುಗರಿಗೆ ಆಗಾಗ್ಗೆ ಆಶ್ಚರ್ಯವನ್ನುಂಟುಮಾಡುತ್ತಿದ್ದರು. ಸ್ವಲ್ಪದರಲ್ಲಿ ಹೇಳಿದರೆ ಆಗ್ಗೆ ರಾಯರ ಭಾಗಕ್ಕೆ ಅವರೊಬ್ಬರು ಸರ್ವಜ್ಞರಾಗಿ ತೋರುತ್ತಿದ್ದರು.

ಇಂಗ್ಲಿಷುಭಾಷೆಯನ್ನು ಒಳಹೊಕ್ಕುನೋಡುವ ಅಭ್ಯಾಸವು ರಾಯರಿಗೆ ಅಯ್ಯರವರಿಂದಲೇ ಬಂದದ್ದು. ಅಯ್ಯರ್‌ರವರು ಅಭ್ಯಾಸಗಳನ್ನು ತರಗತಿಯಲ್ಲಿ ಓದಿಸಿ ಹುಡುಗರಿಂದಲೇ ತಿದ್ದಿಸುತ್ತಿದ್ದರು. ತಪ್ಪುಗಳನ್ನು ಕಂಡುಹಿಡಿದು ಅದಕ್ಕೆ ಕಾರಣವನ್ನೂ ಹುಡುಗರು ಕೊಡಬೇಕಾಗುತ್ತಿತ್ತು. Hodgson's Errors in English ಎಂಬ ಪುಸ್ತಕದಲ್ಲಿ ಲೇಖಕರು ಸಹ ಮಾಡಬಹುದಾದ ತಪ್ಪುಗಳನ್ನು ತಿದ್ದುವದಕ್ಕಾಗಿ ಉದಾಹರಣೆಯಾಗಿ ಕೊಟ್ಟಿರುತ್ತಿತ್ತು. ಅಯ್ಯರ್‌ರವರು ಅಂಥವುಗಳನ್ನೆಲ್ಲ ತಿಳಿಸಿಕೊಡುತ್ತಿದ್ದರು. Murison's Synthesis, Grahams Synonyms ಎಂಬ ಮತ್ತೆರಡು ಗ್ರಂಥಗಳ ಅಭ್ಯಾಸವೂ ಇಂಗ್ಲಿಷುಭಾಷೆಯ ವಿಷಯಕ್ಕೆ ಒಳ್ಳೆಯ ಪುಷ್ಟಿಯನ್ನು ರಾಯರಿಗೆ ಉಂಟುಮಾಡಿದವು. ಒಟ್ಟಿನಲ್ಲಿ ಅಯ್ಯರ್‌ರವರ ಬೋಧನಪದ್ಧತಿಯೂ ಪ್ರೋತ್ಸಾಹವೂ ಹುಡುಗರಿಗೆ ಮನನಶಕ್ತಿಯು ಬೆಳೆದುಕೊಳ್ಳಲು ಉತ್ತೇಜಕವಾಗಿರುತ್ತಿದ್ದವು. ಈ ನಡುವೆ Citizen of India ಎಂಬ ಪುಸ್ತಕವೊಂದನ್ನು ಆಗಿನ ಬ್ರಿಟಿಷ್ ಸರ್ಕಾರದವರು ಬರೆಯಿಸಿ ಹುಡುಗರಿಗೆ ಓದಿಸುತ್ತಿದ್ದರು. ಇದರಿಂದ ದೇಶಭಕ್ತಿಯ ಅಂಕುರವು ಉಂಟಾಗಲು ಅವಕಾಶವಾಯಿತು. ಮತ್ತು ಎಪಿಫೆನಿ ಎಂಬ ಕ್ರಿಸ್ತಿಯನ್ ವಾರಪತ್ರಿಕೆಗೆ ರಾಯರು ಕೆಲವು ಆಕ್ಷೇಪಗಳನ್ನು ಬರೆದುಕಳುಹಿಸುತ್ತಿದ್ದರು. ಪತ್ರಿಕೆಯವರು ಅದಕ್ಕೆ ಸಂಕ್ಷೇಪವಾಗಿ ಉತ್ತರವನ್ನು ಕೊಡುತ್ತಿದ್ದರು. ಇದರಿಂದ ಕ್ರಿಸ್ತಿಯನ್ ಮತದ ಅರಿವು

ಉಂಟಾಗಲು ಹೆಚ್ಚು ಅವಕಾಶವಾಯಿತು. ಅಯ್ಯರ್‌ರವರ ಕಾಲಕ್ಕೆ ಟರ್ಮಿನಲ್ ಪರೀಕ್ಷೆಯ ಕ್ರಮವು ಮಾರ್ಪಾಡಾಗಿ ಆಕಸ್ಮಿಕವಾದ ಪರೀಕ್ಷೆಗಳಿಗೆ ಹುಡುಗರು ಸಿದ್ಧರಾಗಬೇಕಾದ ಪದ್ಧತಿಯು ಬಂತು. ಇದರಿಂದ ಜೀವನದಲ್ಲಿ ಯಾವಾಗಲೆಂದರೆ ಆವಾಗ ಪರೀಕ್ಷೆಯಾಗಬಹುದೆಂಬುದೂ ಅದಕ್ಕೆ ಆಗಲೆ ಸಿದ್ಧರಾಗಿರಬೇಕೆಂಬುದೂ ಓದುವ ಗ್ರಂಥಗಳಲ್ಲಿರುವ ವಿಷಯಗಳನ್ನೆಲ್ಲ ಸಮಪ್ರಧಾನವಾಗಿ ಕಾಣಬೇಕೆಂಬುದೂ ರಾಯರ ಮನಸ್ಸಿನಲ್ಲಿ ಮೂಡಿಕೊಂಡಿತು.

## ಯೂನಿವರ್ಸಿಟಿ ಪರೀಕ್ಷೆ :

ರಾಯರು ಕೊನೆಯ ಪರೀಕ್ಷೆಗೆ ಸಿದ್ಧರಾಗುವ ಕಾಲವು ಬಂದಿತು. ಆಗಿನ ಕಾಲಕ್ಕೆ ಇನ್ನೂ ಮೈಸೂರು ಯೂನಿವರ್ಸಿಟಿ ಇರಲಿಲ್ಲವಾದ್ದರಿಂದ ಮದ್ರಾಸ್ ಯೂನಿವರ್ಸಿಟಿಯವರೇ ಮೆಟ್ರಿಕ್ಯುಲೇಷನ್ ಪರೀಕ್ಷೆಯನ್ನು ನಡೆಸುತ್ತಿದ್ದರು. ಹಾಸನಕೇಂದ್ರವನ್ನು ರಾಯರು ಆರಿಸಿಕೊಂಡಿದ್ದರು. ಆ ಸಂವತ್ಸರದಲ್ಲಿ ಪ್ಲೇಗಿನ ಹಾವಳಿ ಇತ್ತು. ಆದರೂ ಇನಾಕ್ಯುಲೇಷನ್ ಮಾಡಿಸಿಕೊಂಡರೆ ಬಹಳ ತೊಂದರೆಯಾಗುವದೆಂತ ತಿಳಿದಿತ್ತಾದ್ದರಿಂದ ರಾಯರೂ ಮತ್ತು ಅವರ ಸ್ನೇಹಿತರೂ ಅದನ್ನು ಮಾಡಿಸಿಕೊಳ್ಳಲಿಲ್ಲ. ಪರೀಕ್ಷೆಗೆ ರಂಗರಾವ್ ಎಂಬ ಸ್ನೇಹಿತನ ಪೆಟ್ಟಿಗೆಗಾಡಿಯಲ್ಲಿ ರಾಯರು ಇನ್ನಿಬ್ಬರು ಮಿತ್ರರೊಡನೆ ಹಾಸನಕ್ಕೆ ಪ್ರಯಾಣಸನ್ನದ್ಧರಾದರು. ಹೊರಡುವಾಗ ಅಯ್ಯರ್‌ರವರು ಹುಡುಗರಿಗೆ ಕೆಲವು ಬುದ್ಧಿವಾದಗಳನ್ನು ಹೇಳಿಕಳುಹಿಸಿದರು. ಅಯ್ಯರ್‌ರವರ ಅಪ್ಪಣೆಯಂತೆ ರಾಯರ ಎಲ್ಲಾ ಖರ್ಚುಗಳನ್ನು ರಂಗರಾಯನೇ ನೋಡಿಕೊಂಡನು. ದಾರಿಯಲ್ಲಿ ಬೇಲೂರು ಹಳೇಬೀಡುಗಳನ್ನು ನೋಡಿಕೊಂಡು ಹಾಸನಕ್ಕೆ ಬಂದರು. ಅಂತೂ ಪರೀಕ್ಷೆಯು ಪೂರೈಸಿತು. ರಾಯರು ಚೆನ್ನಾಗಿ ಬರೆದಿದ್ದರಾದ್ದರಿಂದ ಪ್ರಥಮ ಶ್ರೇಣಿಯಲ್ಲಿಯೇ ಪಾಸಾಗಬಹುದೆಂದು ತಿಳಿದುಕೊಂಡು ಪರೀಕ್ಷೆಯಾದನಂತರ ವಾಪಸ್ಸು ಚಿಕ್ಕಮಗಳೂರಿಗೆ ಬಂದರು. ರಜದಲ್ಲಿ ರಂಗರಾಯನು ರಾಯರನ್ನು ತಮ್ಮ ಕಾಫಿತೋಟವಿದ್ದ ಹಿರೇಕೊಳಲೆ ಎಸ್ಟೇಟ್‌ಗೆ ಕರೆದುಕೊಂಡು ಹೋದನು. ರಾಯರಿಗೆ ಆಗ ಕಾಫಿತೋಟದ ಪರಿಚಯವೆಲ್ಲ ಆಯಿತು. ರಂಗರಾವ್‌ನ ತಂದೆಯವರು ಸಹ ರಾಯರನ್ನು ಪ್ರೀತಿಯಿಂದ ನೋಡಿಕೊಳ್ಳುತ್ತಿದ್ದರು. ಬೇಜಾರಾದಾಗ ನಡುವೆ ರಾಯರು ಕೆಲವು ಇಂಗ್ಲಿಷು ಕಾದಂಬರಿಗಳನ್ನು ಓದುತ್ತಿದ್ದರು. ಕಾದಂಬರಿಯ ಅಭಿರುಚಿ ರಾಯರಿಗೆ ಎಷ್ಟಿತ್ತೆಂದರೆ Solider's Wife ಎಂಬುದೊಂದು ಕಥೆಯನ್ನು ತಮಗೆ ಅರಿವಿಲ್ಲದೆ ರಾತ್ರಿಯೆಲ್ಲ ನಿದ್ದೆಗೆಟ್ಟು ಓದಿದರಂತೆ! ಆಗಾಗ್ಗೆ ರಂಗರಾಯನ ತಮ್ಮನಿಗೆ ರಾಯರು ಬೀಜಗಣಿತವನ್ನು ಹೇಳಿಕೊಡುತ್ತಿದ್ದರು. ಹೀಗೆ 1½ ತಿಂಗಳು ಕಳೆದರು. ಅನಂತರ ಹೆಡ್‌ಮಾಸ್ಟರು ಊರಿಗೆ ಬರಲು ಹೇಳಿಕಳುಹಿಸಿದರು. ಅದರಂತೆ ಬಂದು ಅಯ್ಯರನ್ನು ಭೇಟಿಮಾಡಲಾಗಿ ಅವರು "ಈ ಬಾರಿಯ ಕೆಲವು ಪ್ರಶ್ನಪತ್ರಿಕೆಗಳು ಬಹಿರಂಗವಾಗಿಬಿಟ್ಟಿದ್ದರಿಂದ ಪುನಃ ಪರೀಕ್ಷೆಮಾಡುತ್ತಾರಂತೆ ನೀವೇಕೆ ಹೀಗೆ ಓದದೆ ಕಾಲಹರಣಮಾಡುತ್ತಿರುವಿರಿ? ಈಗಲಾದರೂ ಮತ್ತೆ ಓದಿಕೊಂಡು ಸಿದ್ಧರಾಗಿರಿ"

ಎಂದುಬಿಟ್ಟರು! ರಾಯರಿಗೆ ಮತ್ತೆ ಯೋಚನೆಗೆ ಇಟ್ಟುಕೊಂಡಿತು. ಏಕೆಂದರೆ ಅವರು ಪರೀಕ್ಷೆಯಲ್ಲಿ ಪ್ಯಾಸಾಗಿಯೇತೀರುವೆನೆಂಬ ಧೈರ್ಯದಿಂದ ಪುಸ್ತಕಗಳನ್ನೆಲ್ಲ ಕೆಳಗಿನ ಕ್ಲಾಸಿನ ಹುಡುಗರಿಗೆ ಮಾರಿಬಿಟ್ಟಿದ್ದರು. ಆದರೂ ಅಯ್ಯರ್‌ರವರು ಪ್ರೋತ್ಸಾಹಿಸಿ ಮುಂದೆ ಬೆಂಗಳೂರಿನಲ್ಲಿ ಓದುವದನ್ನು ಮುಂದುವರಿಯಿಸಬೇಕೆಂದೂ ಪರೀಕ್ಷೆಗೂ ಸಿದ್ಧರಾಗಬೇಕೆಂದೂ ತಿಳಿಸಿದರು. ರಾಯರಿಗೆ ತುಂಬ ಸಂತೋಷವಾಯಿತು. ಪರೀಕ್ಷೆಗೆ ಇನ್ನೂ ಕಾಲಾವಕಾಶವಿದ್ದದ್ದರಿಂದ ಅಯ್ಯರ್‌ರವರು ರಾಯರನ್ನು ತಮ್ಮ ಮನೆಯಲ್ಲಿರುವಂತೆ ತಿಳಿಸಿ ಶೃಂಗೇರಿಗೆ ಹೋದರು. ಆ ಸಮಯದಲ್ಲಿ ರಾಯರು ಅಯ್ಯರ್ ಮನೆಯಲ್ಲಿದ್ದ ಗಣೇಶನ ಸಹಾಯದಿಂದ ತಮಿಳುಲಿಪಿ ಹಾಗೂ ಭಾಷೆಗಳನ್ನು ಕೊಂಚ ಅಭ್ಯಾಸಮಾಡಿದರು. ಮುಂದೆ ಅಯ್ಯರ್‌ರವರು ಶೃಂಗೇರಿಯಿಂದ ವಾಪಸ್ ಬಂದಮೇಲೆ ರಂಗರಾವ್‌ನ ಜೊತೆಯಲ್ಲಿ ರಾಯರು ಬೆಂಗಳೂರಿಗೆ ಪ್ರಯಾಣವನ್ನು ಬೆಳಸಿದರು.

### ಬೆಂಗಳೂರಿನಲ್ಲಿ ವಿದ್ಯಾಭ್ಯಾಸ :

ರಾಯರು ಸದ್ಯಕ್ಕೆ ಬೆಂಗಳೂರಿನಲ್ಲಿ ರಂಗರಾವ್‌ನ ಅಣ್ಣಂದಿರು ನಾರಾಯಣರಾಯರ ಮನೆಯಲ್ಲೇ ಉಳಿದುಕೊಂಡರು. ಬೆಂಗಳೂರು ರಾಯರಿಗೆ ಹೊಸ ಸ್ಥಳವಾಗಿತ್ತು. ಇಷ್ಟು ದೊಡ್ಡಪಟ್ಟಣವನ್ನು ಅವರು ಕಂಡದ್ದು ಇದೇ ಮೊದಲು. ಕೂಡಲೆ ಸೆಂಟ್ರಲ್ ಕಾಲೇಜಿಗೆ ಸೇರಬೇಕಾಗಿತ್ತು. ಹಿಂದಿನ ಪರೀಕ್ಷೆಯಲ್ಲಿ ಓದಿ ಪ್ಯಾಸಾದರೆಂದು ಗಣಿಸಲಾದವರಿಗೆ ಕೂಡಲೆ ಕಾಲೇಜಿಗೆ ಸೇರಿಕೊಳ್ಳಬೇಕೆಂಬ ಪರಿಪತ್ರವೊಂದನ್ನು ಕಾಲೇಜಿನ ಪ್ರಿನ್ಸಿಪಾಲರಾದ ಕುಕ್ ಸಾಹೇಬರು ಹೊರಡಿಸಿದ್ದರು! ರಾಯರನ್ನು ಆಗ ಎಫ್.ಎ. ಕ್ಲಾಸಿಗೆ ಸೇರಿಸಿದರು. ಆದರೆ ಪರೀಕ್ಷೆಯಲ್ಲಿ ನಿಶ್ಚಿತವಾಗಿ ಕೊನೆಗೂ ಪ್ಯಾಸಾಗದ ಹುಡುಗರಿಗೆ ಹೊಸ ಪಾಠವು ರುಚಿಸುತ್ತಿರಲಿಲ್ಲ. ಅಂತೂ ಪರೀಕ್ಷೆಯ ದಿನಗಳು ಬಂದವು. ಈ ಸಲದ ಪೇಪರುಗಳು ಬಹಳಕಷ್ಟವಾಗಿದ್ದವು. ಲೆಕ್ಕ, ಚರಿತ್ರೆ, ಇಂಗ್ಲಿಷ್- ಎಲ್ಲಾ ವಿಷಯಗಳಲ್ಲೂ ರಾಯರಿಗೆ ಈ ಬಾರಿ ಒಂದಲ್ಲ ಒಂದು ರೀತಿಯಲ್ಲಿ ತಪ್ಪುಗಳು ಸಂಭವಿಸಿದ್ದವು. ಕೆಲವು ಸಂದರ್ಭಗಳಲ್ಲಿ ಪ್ರಶ್ನೆಯ ಅರ್ಥವೇ ತಿಳಿದಿರಲಿಲ್ಲವಂತೆ. ಅಂತೂ ಸುಮಾರಾಗಿ ಮಾಡಿದ್ದರು. ಆದರೂ ಫಸ್ಟ್ ಕ್ಲಾಸ್‌ನಲ್ಲಿಯೇ ಮೆಟ್ರಿಕ್ಯೂಲೇಷನ್ ಪರೀಕ್ಷೆಯಲ್ಲಿ ತೇರ್ಗಡೆಯಾಯಿತು.

ಇನ್ನು ಎಫ್.ಎ. ಕ್ಲಾಸುಗಳ ಗಡಿಬಿಡಿ. ಇದುವರೆಗೂ ಸುಗಮವಾಗಿದ್ದ ಪಾಠಗಳು ಈಗ ರಾಯರಿಗೆ ಕಷ್ಟವಾಗಿ ತೋರುತ್ತಿದ್ದವು. ಲೆನರ್ಡ್‌ಸಾಹೇಬರು ಇಂಗ್ಲಿಷ್ ಪ್ರೋಸನ್ನೂ ಟೇಟ್‌ಸಾಹೇಬರು ಪೊಯಟ್ರಿಯನ್ನೂ ಕುಕ್‌ಸಾಹೇಬರು ಆಲ್‌ಜೀಬ್ರಾ ಜಾಮೆಟ್ರಿಗಳನ್ನೂ ಬೋಧಿಸುತ್ತಿದ್ದರು. ವೆಂಕಟನಾರಣಪ್ಪನವರೂ ವಿಜಯರಾಘವಾಚಾರ್ಯರೂ ಫಿಸಿಯಾಲಜಿ ಯನ್ನು ಹೇಳಿಕೊಡುತ್ತಿದ್ದರು. ದಿನಗಳು ಉರುಳಿದಂತೆ ಪಾಠಗಳು ನಾಗಾಲೋಟದಿಂದ ಸಾಗುತ್ತಿದ್ದವು. ರಾಯರಿಗೆ ಕೆಲವು ಪಠ್ಯಪುಸ್ತಕಗಳು ಕೈಯಲ್ಲಿಲ್ಲದ್ದರಿಂದಲೂ ಅವರು

ನೋಟ್ಸ್‌ವಿಷಯಕ್ಕೆ ಅನಾದರಮಾಡಿದ್ದರಿಂದಲೂ ಪಾಠಗಳು ಕಷ್ಟತರವಾದವು. ಇದರ ಜೊತೆಗೆ ಮನೆಯಲ್ಲಿ ಊಟದ ಸೌಕರ್ಯವು ತಪ್ಪಿತು. ವಾರವನ್ನು ಮಾಡಿಕೊಳ್ಳಲು ಮಾಡಿದ ಪ್ರಯತ್ನವು ವ್ಯರ್ಥವಾಯಿತು. ಶ್ರೀ ವಿ. ಸುಬ್ರಹ್ಮಣ್ಯ ಅಯ್ಯರ್‌ರವರು ಕೊಟ್ಟಿದ್ದ ಕಾಗದದ ಪರಿಚಯದಿಂದ ಶ್ರೀ ಕೆ. ಎ. ಕೃಷ್ಣಸ್ವಾಮಿ ಅಯ್ಯರ್‌ರವರನ್ನು ರಾಯರು ಮೊದಲಬಾರಿಗೆ ಕಂಡರು. ಆಗ ಅಯ್ಯರ್‌ರವರು ಪಿಟೀಲನ್ನು ಬಾರಿಸುತ್ತಿದ್ದರು. 'ನಮ್ಮ ಮನೆಗೂ ಒಂದುವಾರ ಬಾರಪ್ಪ' ಎಂದು ಮಾತ್ರ ಹೇಳಿದರು. ಆದರೆ ಉಳಿದ ವಾರಗಳು ಸಿಕ್ಕದೆಹೋದದ್ದರಿಂದ ರಾಯರಿಗೆ ಇದರ ಪ್ರಯೋಜನವು ಸದ್ಯಕ್ಕೆ ದೊರಕಲಿಲ್ಲ. ಇಷ್ಟರೊಳಗಾಗಿ ರಾಯರಿಗೆ ಎರಡು ರೂಪಾಯಿಗಳ ಸ್ಕಾಲರ್‌ಷಿಪ್ಪು ಮತ್ತು ನಾಲ್ಕುರೂಪಾಯಿಗಳ ಒಂದು ಪ್ರೈವೆಟ್ ಟ್ಯೂಷನ್ ಸಹ ದೊರೆತವು. ಅದರ ಬಲದಿಂದ ರಾಯರು ಮಾಮೂಲುಪೇಟೆಯಲ್ಲಿ ಒಂದು ಕೊಠಡಿಯನ್ನು ಬಾಡಿಗೆಗೆ ತೆಗೆದುಕೊಂಡು ಹೋಟಲಿನಲ್ಲಿ ಊಟವನ್ನು ಏರ್ಪಡಿಸಿಕೊಂಡು ತಮ್ಮ ವಿದ್ಯಾಭ್ಯಾಸವನ್ನು ಮುಂದುವರಿಸತೊಡಗಿದರು.

## ಸಂಸ್ಕೃತಾಭ್ಯಾಸ :

ಈ ನಡುವೆ ಬರುವ ಹಣವೆಲ್ಲ ಊಟ ಹಾಗೂ ಬಾಡಿಗೆಗೆ ಸರಿಯಾಗುತ್ತಿತ್ತಾದ್ದರಿಂದ ಮೇಲಿನ ಖರ್ಚಿಗೆ ರಾಯರಿಗೆ ಹಣವು ಬೇಕಾಯಿತು. ಅದಕ್ಕಾಗಿ ಒಬ್ಬ ಸ್ನೇಹಿತನ ಸೂಚನೆಯಂತೆ ಸ್ಕಾಲರ್‌ಷಿಪ್ ಬರುತ್ತದೆಯೆಂಬ ಆಶೆಯಿಂದ ರಾಯರು ಸಂಸ್ಕೃತಪಾಠಶಾಲೆಗೆ ಸೇರಿದರು. ಅಲ್ಲಿ ಕಾವ್ಯತರಗತಿಗೆ ಇವರನ್ನು ಸೇರಿಸಿಕೊಂಡರು. ಆ ತರಗತಿಗೆ **ಕರಿಗಿರಿಯಾಚಾರ್ಯರು** ಉಪಾಧ್ಯಾಯರು. ಅವರು ವ್ಯಾಕರಣ ವಿದ್ವಾಂಸರಾದ್ದರಿಂದ ಸಾಹಿತ್ಯ ಪಾಠಗಳನ್ನು ಹೇಳಲು ಅವರಿಗೆ ಬರುವುದಿಲ್ಲವೆಂಬ ಪ್ರತೀತಿ ವಿದ್ಯಾರ್ಥಿಗಳಲ್ಲಿತ್ತು. ಆದರೆ ಅದು ಸರಿಯಲ್ಲವೆಂದು ರಾಯರಿಗೆ ಅನಂತರ ತಿಳಿಯಿತು. ಆಚಾರ್ಯರು ಕಿರಾತಾರ್ಜುನೀಯ, ದಶಕುಮಾರಚರಿತಗಳನ್ನು ಪಾಠಹೇಳುತ್ತಿದ್ದರು. ಆ ತರಗತಿಯಲ್ಲಿ ಈ ಮೊದಲು ಯಾರೂ ಹುಡುಗರಿಲ್ಲವಾಗಿದ್ದು ಈಗ ರಾಯರೊಬ್ಬರೇ ವಿದ್ಯಾರ್ಥಿಗಳಾದರು. ಪಾಠ ಹೇಳುವಾಗ ಆಚಾರ್ಯರು ಬಹಳ ಆದರಿಂದ ಶ್ಲೋಕಗಳನ್ನು ಓದಿಸಿ ಪದಚ್ಛೇದಮಾಡಿಸಿ ಶಬ್ದಗಳನ್ನು ಹೇಳಿಸುವದು, ಅರ್ಥವನ್ನು ವಿವರಿಸುವದು, ಅಭಿಪ್ರಾಯವನ್ನೂ ಭಾವಾರ್ಥವನ್ನೂ ತಿಳಿಸುವದು-ಇಷ್ಟೇ ಅಲ್ಲದೆ **ಮಲ್ಲಿನಾಥನ** ವ್ಯಾಖ್ಯಾನವನ್ನು ಓದಿಸಿ ಅದಕ್ಕೂ ಅರ್ಥವನ್ನು ವಿವರಿಸುವದು, ಅದರಲ್ಲಿ ಬರುವ ವ್ಯಾಕರಣಸೂತ್ರಗಳು, ಕೋಶವಾಕ್ಯಗಳು-ಇವುಗಳನ್ನೂ ಬಿಡದೆ ವಿಸ್ತರಿಸುವದು-ಹೀಗೆ ಹೇಳುತ್ತಾ ವ್ಯುತ್ಪತ್ತಿಯಾಗುವಂತೆ ಬೋಧಿಸುತ್ತಿದ್ದರು. ಇದರಿಂದ ರಾಯರಿಗೆ ಸಂಸ್ಕೃತಕಾವ್ಯಗಳನ್ನು ಹೇಗೆ ಓದಬೇಕೆಂಬುದರ ಅರಿವಾಯಿತು. ಈ ಮಹಾಶಯರು ಹೇಳಿಕೊಟ್ಟ ಸ್ವಲ್ಪ ಪಾಠದ ಬಂಡವಾಳದಿಂದಲೇ ಮುಂದೆ ರಾಯರ ಸಂಸ್ಕೃತಜ್ಞಾನವು ವಿಕಾಸವಾಗುವದಕ್ಕೆ ಸಾಧ್ಯವಾಯಿತು.

ಮುಂದೆ ಸೀನಿಯರ್ ಎಫ್.ಎ. ಕ್ಲಾಸಿಗೆ ಪ್ರಮೋಷನ್ ದೊರೆಯಿತು. ಆಗ್ಗೆ ಆ ತರಗತಿಯಲ್ಲಿದ್ದ 94 ಜನ ವಿದ್ಯಾರ್ಥಿಗಳಲ್ಲಿ ರಾಯರು ನಾಲ್ಕನೆಯವರಾಗಿದ್ದರು. ವಿದ್ಯಾಭ್ಯಾಸವನ್ನು ಮುಂದುವರಿಸುವ ಆಶೆಯಿತ್ತಾದರೂ ರಾಯರಿಗೆ ಅನಾರೋಗ್ಯ ಹಾಗೂ ಇತರ .ಕೆಲವು ಅನಿವಾರ್ಯವಾದ ತೊಂದರೆಗಳಿಂದ ಸಾಧ್ಯವಾಗದೆ ಊರಿಗೆ ವಾಪಸು ಬರಬೇಕಾಯಿತು.

## ರಾಮಭಕ್ತಿಯ ಪ್ರವೇಶ :

ಈ ಸಂದರ್ಭದಲ್ಲಿ ರಾಯರಿಗೆ ಒಂದು ಸುಯೋಗವು ಒದಗಿತು. ಬೀರೂರು ರಾಮಣ್ಣನವರೆಂಬ ರಾಮಭಕ್ತರೊಬ್ಬರು ಆಗ ಯಳ್ಳಂಬಳಸೆಗೆ ಬಂದು ರಾಯರ ಮನೆಯಲ್ಲೇ ಬಿಡಾರಮಾಡಿದ್ದರು. ಅವರು ಹನುಮಂತನ ಉಪಾಸನೆಯಿಂದ ಕೆಲವು ದಿವ್ಯಶಕ್ತಿಗಳನ್ನು ಸಂಪಾದಿಸಿಕೊಂಡಿರುತ್ತಾರೆಂದು ಜನರು ಆಡಿಕೊಳ್ಳುತ್ತಿದ್ದರು. ಶಾಸ್ತ್ರಪರಿಚಯವಿಲ್ಲದಿದ್ದರೂ ಅವರು ಭವಿಷ್ಯತ್‌ಫಲಗಳನ್ನು ಹೇಳುವದು, ಜಾತಕಗಳನ್ನು ಗುಣಿಸುವದು-ಮುಂತಾದವುಗಳಲ್ಲಿ ಅಸಾಧಾರಣ ಪ್ರತಿಭಾವಂತರಾಗಿದ್ದರು. ಅದಕ್ಕಿಂತ ಹೆಚ್ಚಾಗಿ ಅವರು ನಿತ್ಯವೂ ಸೂರ್ಯ ನಮಸ್ಕಾರಮಾಡುವದು, ಸುಂದರಕಾಂಡ ರಾಮಾಯಣವನ್ನು ಪುಸ್ತಕದ ಸಹಾಯವಿಲ್ಲದೆಯೇ ಪಾರಾಯಣಮಾಡುವದು, ಅಖಂಡವಾಗಿ ರಾಮಮಂತ್ರವನ್ನು ಜಪಿಸುವದು-ಇವುಗಳನ್ನು ನಿತ್ಯಾಹ್ನಿಕವಾಗಿ ಮಾಡಿಕೊಂಡಿದ್ದರು. ಕೆಲವು ಭವಿಷ್ಯದ್‌ಘಟನೆಗಳ ಬಗ್ಗೆ ಅವರು ಹೇಳುತ್ತಿದ್ದ ಫಲಗಳು ನಿಜವಾದದ್ದು ರಾಯರಿಗೆ ಅನುಭವಕ್ಕೆ ಬಂದಿತ್ತು. ಅವರು ರಾಮೋತ್ಸವಕ್ಕಾಗಿ ಮಹಾಜನರಿಂದ ಕಾಣಿಕೆಗಳನ್ನು ಸಂಗ್ರಹಿಸಲು ಬಂದಿದ್ದರು. ಜನರು ಭಕ್ತಿಯಿಂದ ಅವರು ಹೇಳಿದಷ್ಟು ಕಾಣಿಕೆಗಳನ್ನು ಕೊಡುತ್ತಿದ್ದರು. ಅವರು ರಾಯರನ್ನು ನೋಡಿ 'ಇವನಿಗೆ ಬುಧದಶೆ ನಡೆಯುತ್ತಿದೆ, ಮುಂದೆ ಒಳ್ಳೆ ವಿದ್ವಾಂಸನಾಗುವ ಯೋಗವಿದೆ. ಆದರೆ ಹೆಂಡತಿಯ ಮೇಲಿನ ಮಮತೆಯಿಂದ ಓದನ್ನು ಬಿಟ್ಟುಬಂದಿರುತ್ತಾನೆ' ಎಂದಾಗ ರಾಯರಿಗೆ ನಾಚಿಕೆಯೂ ಆಶ್ಚರ್ಯವೂ ಆಯಿತಂತೆ. 'ನನಗೆ ಓದಲು ದುಡ್ಡಿನ ಸಹಾಯವಿಲ್ಲ, ನೀವು ಮಾಡುತ್ತೀರೊ!' ಎಂದು ರಾಯರು ಕೇಳಿದ್ದಕ್ಕೆ 'ಒಳ್ಳೆಯದು, ಹೋಗು, ರಾಮ ಕೊಡಿಸುತ್ತಾನೆ' ಎಂದರಂತೆ.

ಆ ವರ್ಷದ ರಾಮೋತ್ಸವವು ಬೀರೂರಿನಲ್ಲಿ ವಿಜೃಂಭಣೆಯಿಂದ ನಡೆದಿತ್ತು. ರಾಯರು ಅದರಲ್ಲಿ ಭಾಗವಹಿಸಿದ್ದರು. ಅದರ ವರ್ಣನೆಯನ್ನು ವಾಚಕರು ಸ್ವಲ್ಪ ಕೇಳಬೇಕಾದದ್ದು ಅಗತ್ಯ. ನಡುವೆ ರಾಮದೇವಸ್ಥಾನ; ಅದರ ಸುತ್ತಲೂ ನಾಲ್ಕು ಕಡೆಗೂ ಬಿದಿರಿನ ಚಾಪೆಗಳಿಂದ ಭಜನಮಂದಿರಗಳನ್ನು ನಿರ್ಮಿಸಿದ್ದರು. ರಾಮಭಜನೆ, ರಾಮಾಯಣಪಾರಾಯಣ, ಮಂತ್ರಜಪಾದಿಗಳು ನಾಲ್ಕು ಕಡೆಯಲ್ಲಿಯೂ ನಡೆಯುತ್ತಿದ್ದವು. ಬೆಳಗ್ಗೆ ಬಂದವರಿಗೆ ಫಲಾಹಾರದ ಏರ್ಪಾಡು ಇರುತ್ತಿತ್ತು. ಮಧ್ಯಾಹ್ನದ ವೇಳೆಗೆ ಮಂಗಳಾರತಿಯಾಗುತ್ತಲೂ ಸಾವಿರಾರು ಜನಗಳಿಗೆ ಭೋಜನವಾಗುತ್ತಿತ್ತು. ಅಡುಗೆಯ ಪಾತ್ರೆಗಳು ಸಣ್ಣಬಾವಿಗಳಂತೆ ಇರುತ್ತಿದ್ದವು. ಸಮಾರಂಭಕ್ಕೆ ಬೇಕಾದ ಸಾಮಾನುಗಳು ರೈಲುಮೂಲಕ ಬಂದು ಬೀಳುತ್ತಿದ್ದವು. ದೊಡ್ಡದೊಡ್ಡ

ಸಾಹುಕಾರರುಗಳು ಬೆಳ್ಳಿಯ ತಟ್ಟೆಗಳಲ್ಲಿ ತಾವು ಕೊಡುವ ಕಾಣಿಕೆಗಳನ್ನು ತುಂಬಿಕೊಂಡು ಓಲಗವಾದ್ಯಗಳ ಸಮೇತ ತಂದು ರಾಮದೇವರ ಪಾದದಲ್ಲಿ ಸುರಿಯುತ್ತಿದ್ದರು. ರಾಮಣ್ಣನವರು ನಿಯಮನಿಷ್ಠರಾಗಿ ಮೌನವಾಗಿ ಮಿತಾಹಾರದಿಂದ ಕೂಡಿ ದೀಕ್ಷೆಯನ್ನು ವಹಿಸಿ ದೇವಸ್ಥಾನದಲ್ಲಿ ಕುಳಿತಿರುತ್ತಿದ್ದರು. ಹಗಲೂರಾತ್ರೆ ಅಖಂಡಭಜನೆಯಾಗುತ್ತಾ ಇರುತ್ತಿತ್ತು. ಮಧ್ಯಾಹ್ನದಮೇಲೆ ಹರಿಕಥೆ, ಪುರಾಣಶ್ರವಣ-ಮುಂತಾದವು ನಡೆಯುತ್ತಿದ್ದವು. ಶೃಂಗೇರಿಯ ಜಗದ್ಗುರುಗಳು ಈ ಸತ್ಕಾರ್ಯವನ್ನು ಪ್ರೋತ್ಸಾಹಿಸಿ ಕಳುಹಿಸಿಕೊಟ್ಟಿದ್ದ ಒಂದು ಆನೆಯೂ ಉತ್ಸವದಲ್ಲಿ ಭಾಗವಹಿಸುತ್ತಿತ್ತು. ರಾಯರು ಉಗ್ರಾಣದ ಕೋಣೆಯಲ್ಲಿ ಮಲಗಿದ್ದವರು ಸರಿಹೊತ್ತಿನಲ್ಲಿ ಎಚ್ಚತ್ತುನೋಡಿದರೆ ಎಲ್ಲೆಲ್ಲೂ ರಾಮಭಜನೆಯೇ ಕೇಳಬರುತ್ತಿತ್ತಂತೆ.

ಆ ಕಾಲಕ್ಕೆ ಅದೊಂದು ಅಯೋಧ್ಯಾನಗರಿಯೇ ಆಗಿತ್ತು-ಎಂಬ ಭಾವನೆ ರಾಯರಿಗೆ ಉಂಟಾಗಿತ್ತು. ಉಗ್ರಾಣದಲ್ಲಿ ತಂಗಿದ್ದ ರಾಯರಿಗೆ ಅಚ್ಚಿನ 'ಭಕ್ತಿವಿಜಯ'ವೆಂಬ ಪುಸ್ತಕವೊಂದು ದೊರಕಿತು. ಅದರ ಕೆಲವು ಪ್ರತಿಗಳನ್ನು ಧರ್ಮಾರ್ಥವಾಗಿ ಹಂಚಲು ಯಾರೋ ಕೊಟ್ಟಿದ್ದರು. ಇದರ ಪಠನದಿಂದ ರಾಯರಿಗೆ ಭಕ್ತಿಮಾರ್ಗದ ಒಂದು ಝಳುಕು ಮನದಲ್ಲಿ ಮಿಂಚಿತೆಂದು ಹೇಳಬಹುದು. ಕೆಲವು ರಾಮಭಜನೆಯ ಪದಗಳೂ ಆಗ ರಾಯರಿಗೆ ಕಂಠಪಾಠವಾಗಿದ್ದು ಮನಸ್ಸಿನಮೇಲೆ ಪರಿಣಾಮವನ್ನು ಉಂಟುಮಾಡಿದವು. ಇದು ಮುಂದೆ ಹೇಗೆ ಬೆಳೆಯಿತೆಂಬುದನ್ನು ಮುಂದಿನ ಕಥಾಭಾಗದಲ್ಲಿ ವಾಚಕರು ಕಾಣಲಿದ್ದಾರೆ. ರಾಯರ ಭಾವ ಮಲ್ಲಣ್ಣಯ್ಯನವರ ಸಹೋದರರೇ ರಾಮಣ್ಣನವರು ಎಂದು ರಾಯರಿಗೆ ಆಗ ತಿಳಿಯಿತಾದರೂ ನೆಂಟಸ್ತನಕ್ಕಿಂತ ರಾಮಣ್ಣನವರ ರಾಮಭಕ್ತಿಯ ಮಹಿಮೆಯೇ ಅವರಲ್ಲಿ ರಾಯರು ಪೂಜ್ಯಬುದ್ಧಿಯನ್ನಿಡಲು ಮುಖ್ಯಕಾರಣವಾಯಿತು.

## ಮೇಷ್ಟರಾಗುವ ಕುತೂಹಲ :

ಯಲ್ಲಂಬಳಸೆಯಲ್ಲಿದ್ದಾಗ ರಾಯರಿಗೆ ಮುಂದಿನ ಜೀವನಕ್ರಮವು ಉಪಾಧ್ಯಾಯ ವೃತ್ತಿಯಿಂದ ಆಗಬೇಕೆಂದು ದೈವೇಚ್ಛೆಯಿಂದ ಅಂಕುರಿಸಿತು. ಆ ಊರಿನಲ್ಲಿದ್ದ ಸುಬ್ಬಾಭಟ್ಟರ ಮಗನಿಗೆ ರಾಯರು ಸಂಸ್ಕೃತವನ್ನು ಹೇಳಿಕೊಡಲು ಪ್ರಾರಂಭಿಸಿದರು. ಅದೇ ಸಮಯಕ್ಕೆ ಊರಿನಲ್ಲಿದ್ದ ಒಬ್ಬ ಹಳೆಯ ಸ್ನೇಹಿತರಾದ ಉಪಾಧ್ಯಾಯರಿಂದ ಕೆಲವು ಬೋಧನಾಪದ್ಧತಿಯ ಗ್ರಂಥಗಳೂ ದೊರೆತವು. ಆ ಮೇಷ್ಟರು ತಮ್ಮ ಸ್ವಂತ ಕೆಲಸಗಳಿಗಾಗಿ ಪರಸ್ಥಳಕ್ಕೆ ಹೋಗಿ ಬರಬೇಕಾಗಿದ್ದಾಗ ತಮ್ಮ ಗೈರುಹಾಜರಿಯಲ್ಲಿ ರಾಯರನ್ನು ಪಾಠಹೇಳಲು ಗೊತ್ತುಮಾಡಿದ್ದರು. ಇದರಿಂದ ರಾಯರಿಗೆ ಉಪಾಧ್ಯಾಯವೃತ್ತಿಯ ಪ್ರಥಮಪರಿಚಯವಾಯಿತು. ಆ ಮೇಷ್ಟರು ಸಂಭಾವನೆಯಾಗಿ ಕೊಟ್ಟ ಹಣದಿಂದ ರಾಯರು **ಪಂಚೀಕರಣ, ವೇದಾಂತಸಾರ**- ಎಂಬ ಎರಡು ಪುಸ್ತಕಗಳನ್ನು ತರಿಸಿಕೊಂಡರು. ಅಂತೂ ಈ ಸಂದರ್ಭವು ರಾಯರಿಗೆ ಮುಂದೆ ಉಪಾಧ್ಯಾಯವೃತ್ತಿಯನ್ನವಲಂಬಿಸಲು ಪೂರ್ವರಂಗವಾಯಿತೆನ್ನಬಹುದು.

## ಟೌನ್ ಓವರ್ಸಿಯರ್ ಕೆಲಸ, ಅದರಿಂದ ನಿವೃತ್ತಿ :

ಮುಂದೆ ರಾಯರು ಚಿಕ್ಕಮಗಳೂರಿಗೆ ಬಂದು ತಾಲ್ಲೂಕು ಕಚೇರಿಯಲ್ಲಿ ಬದಲಿ ಹೆಡ್‌ಮುನಷಿ ಕೆಲಸದಲ್ಲಿ ತರಬೇತಿಯನ್ನು ತೆಗೆದುಕೊಳ್ಳುತ್ತಿದ್ದರು. ಇಷ್ಟರಲ್ಲೇ ಇವರಿಗೆ ಕಡೂರಿನಲ್ಲಿ ಹನ್ನೆರಡು ರೂಪಾಯಿಗಳ ಸಂಬಳದಮೇಲೆ ಟೌನ್‌ಓವರ್ಸಿಯನ್ (ಈಗಿನ ಸ್ಯಾನಿಟರಿ ಇನ್‌ಸ್ಪೆಕ್ಟರ್) ಕೆಲಸವು ದೊರೆಯಿತು. ಕಡೂರಿಗೆ ಬಂದು ಕೆಲಸಮೇಲೆ ಹಾಜರಾದರು. ಕೆಲಸದ ಅನುಭವವೇನೂ ಇರಲಿಲ್ಲ. ಅಮಲ್ದಾರ್ ಕೃಷ್ಣಶಾಸ್ತ್ರಿಗಳೆಂಬವರು ರಾಯರಿಗೆ ಕೆಲವು ತಿಳಿವಳಿಕೆಗಳನ್ನು ಹೇಳಿ ಕೆಲಸಕ್ಕೆ ನಿಯಮಿಸಿದರು. ಕೃಷ್ಣಶಾಸ್ತ್ರಿಗಳು ಆಚಾರವಂತರೂ, ಸಾತ್ತ್ವಿಕರೂ, ಸಂಸ್ಕೃತವಿದ್ವಾಂಸರೂ ಆಗಿದ್ದರು. ರಾಯರ ತಾಯಿಯವರು ಬಂದು ಮನೆಮಾಡಿ ಸಂಸಾರ ಹೂಡಿಕೊಟ್ಟುಹೋದರು. ಕೆಲಸವು ಹೇಗೋ ಸಾಗುತ್ತಿತ್ತು. ಇಷ್ಟರಲ್ಲಿ ಊರಿಗೆ ಪ್ಲೇಗು ಬಂತು. ಆಗ ಇವರ ಕೆಲಸದ ಜವಾಬ್ದಾರಿ ಹೆಚ್ಚಾಯಿತು. ಖಾಯಿಲೆ ಬಂದವರನ್ನು ಡಾಕ್ಟರಿಗೆ ರಿಪೋರ್ಟು ಮಾಡಬೇಕಾಗಿತ್ತು. ಇದರಿಂದ ಇವರು ಜನಗಳಲ್ಲಿ ಸ್ವಲ್ಪ ಅಪ್ರಿಯರಾದರು. ಪ್ಲೇಗಿನ ಡ್ಯೂಟಿಮಾಡುತ್ತಿರುವಾಗಲೇ ರಾಯರಿಗೆ ಹಿಮ್ಮಡಿಯಲ್ಲಿ ಏನೋ ಹುಣ್ಣು ಆಗಿ ಆಪರೇಷನ್ ಮಾಡಿಸಿದರೂ ವಾಸಿಯಾಗಲಿಲ್ಲ. ಕೊನೆಗೆ ಬೆಂಗಳೂರಿಗೆ ದೊಡ್ಡ ಆಸ್ಪತ್ರೆಗೆ ತೋರಿಸಬೇಕೆಂದು ಡಾಕ್ಟರು ಹೇಳಿದರು. ರಾಯರಿಗೆ ಕೆಲಸವೂ ಬೇಜಾರಾಗಿತ್ತು. ಕೊನೆಗೆ ತಾಯಿಯವರ ಪ್ರೋತ್ಸಾಹದಿಂದ ಕೆಲಸಕ್ಕೆ ರಜಬರೆದು ಬೆಂಗಳೂರಿಗೆ ಪ್ರಯಾಣ ಬೆಳೆಸಿದರು.

## ಬೆಂಗಳೂರಿನಲ್ಲಿ ಮತ್ತೆ ವಿದ್ಯಾಭ್ಯಾಸ :

ರಾಯರು ಬೆಂಗಳೂರಿಗೆ ಬಂದಮೇಲೆ ಹಿಂದೆ ಇದ್ದ ಮಾಮೂಲುಪೇಟೆಯ ರೂಮಿನಲ್ಲಿಯೇ ಮೊದಲು ಉಳಿದುಕೊಂಡರು. ಕಾಲೇಜು ಇನ್ನೂ ಬಾಗಿಲು ತೆರೆದಿರಲಿಲ್ಲ. ಕಾಲುಹುಣ್ಣು ಗುಣವಾಗಿತ್ತು. ರಾಯರು ಇದ್ದ ರೂಮಿನಲ್ಲಿ ರಾತ್ರೆವೇಳೆ ಚೇಳುಗಳು ಮೇಲಿಂದ ಉದುರುತ್ತಿರುವಂತೆ. ಇದರಿಂದ ಹೆದರಿಕೆಯುಂಟಾಗಿ ನಿದ್ರಾಭಂಗವಾಗುತ್ತಿತ್ತು. ಆಗ ಅರ್ಧರಾತ್ರಿಯಲ್ಲಿ ಸ್ಲೇಟಿನ ಮೇಲೆ-ಕನಸಿನಲ್ಲಿ ತಮಗೆ ಹೊಳೆಯುತ್ತಿದ್ದ-ಬೀಜಗಣಿತದ ಕೆಲವು ಕಠಿನ ಸಮಸ್ಯೆಗಳ ಪರಿಹಾರವನ್ನು ಬರೆದಿಟ್ಟು ಪುನಃ ಮಲಗುತ್ತಿದ್ದರಂತೆ. ಬೆಳಗ್ಗೆ ಎದ್ದುನೋಡಲಾಗಿ ಉತ್ತರಗಳು ಸರಿಯಾಗಿರುತ್ತಿದ್ದವು. ಇದೊಂದು ಹೊಸ ಅನುಭವವು ಆ ರೂಮಿನ ವಾಸದಿಂದ ರಾಯರಿಗೆ ಉಂಟಾಯಿತು. ಹಳೆಯ ಪಾಠಗಳನ್ನು ಪುನರಾವರ್ತನೆ ಮಾಡುವಾಗ ಸಂಸ್ಕೃತ ಪುಸ್ತಕವೊಂದನ್ನು ವಿಚಾರಿಸಲು ಅಂಗಡಿಯಲ್ಲಿ ಕೇಳಿದಾಗ ರಾಯರಿಗೆ ಗೀತಾಭಾಷ್ಯವೊಂದು ಸಿಕ್ಕಿತು. ಅದನ್ನೇ ಕೊಂಡರು. ಆದರೆ ರಾಯರಿಗೆ 'ಊಟಕ್ಕೆ ಮುಂದೆ ಗತಿಯೇನು?' ಎಂಬ ಯೋಚನೆ ಬಂತು. ಅಷ್ಟರಲ್ಲಿ ಅವರ ಹಳೆಯ ಸ್ನೇಹಿತನೊಬ್ಬನು ಸದ್ಯಕ್ಕೆ ತಮ್ಮ ಮನೆಯಲ್ಲಿಯೇ

ಊಟಮಾಡುವಂತೆ ಏರ್ಪಡಿಸಿಕೊಟ್ಟನು. ಆದರೆ ರಾಯರಿಗೆ ಹೆಚ್ಚುಕಾಲ ಸರಿಬೀಳಲಿಲ್ಲ. ಬೇರೆ ಏರ್ಪಾಡು ಮಾಡಿಕೊಳ್ಳಲು ಪ್ರಯತ್ನಪಡುತ್ತಿರುವಷ್ಟರಲ್ಲಿ ಆಕಸ್ಮಾತ್ತಾಗಿ ಕೆ.ವಿ. ಕೃಷ್ಣಸ್ವಾಮಿ ಅಯ್ಯರ್‌ರವರ ದರ್ಶನವಾಯಿತು. ಅವರು ರಾಯರ ಯೋಗಕ್ಷೇಮವನ್ನು ವಿಚಾರಿಸಿ ಮಾರನೆಯದಿನ ತಮ್ಮ ಮನೆಗೆ ಬರಹೇಳಿದ್ದಲ್ಲದೆ ಅವರ ಮನೆಯ ಹತ್ತಿರವೇ ಎಲ್ಲಾ ವಾರಗಳನ್ನೂ ಕೊಡಿಸಿಕೊಟ್ಟು ತಮ್ಮ ಮನೆಯಲ್ಲೇ ರೂಮು ಹಾಗೂ ಸ್ನಾನಾದಿ ಸೌಕರ್ಯಗಳಿಗೆ ಏರ್ಪಡಿಸಿಕೊಟ್ಟು ಉಪಕಾರಮಾಡಿದರು. ರಾಯರಿಗೆ ಆಗ ಚಿಕ್ಕಮಗಳೂರಿನ ಶ್ರೀ ವಿ. ಸುಬ್ರಹ್ಮಣ್ಯ ಅಯ್ಯರ್‌ರವರ ನೆನಪಾಯಿತು. ಕೃಷ್ಣಸ್ವಾಮಿ ಅಯ್ಯರ್‌ರವರ ಔದಾರ್ಯದ ಫಲವು ಎಷ್ಟೆಂದರೆ ಪ್ರತಿದಿನ ರಾಯರಿಗೆ ಉಪಹಾರ, ಅಗಸನಿಗೆ ಬಟ್ಟೆಗಳನ್ನು ಒಗೆಯಲು ಕೊಡುವ ಸೌಲಭ್ಯ, ಅವರ ಮಗನಿಗೆ ಪಾಠಹೇಳಿಕೊಡುವದರ ಫಲವಾಗಿ ಪುಡಿಗಾಸು, ದಿನವೂ ಅವರ ಜೊತೆ ಪೆಟ್ಟಿಗೆಗಾಡಿಯಲ್ಲೇ ಕಾಲೇಜಿಗೆ ಹೋಗುವ ಸೌಕರ್ಯ-ಇವೆಲ್ಲ ದೊರಕಿದವು. ಇಂಥ ಆಶ್ರಯದಾತರೂ ವಿದ್ಯಾರ್ಥಿಪ್ರೇಮಿಗಳೂ ಆದ ಸಜ್ಜನರು ಅಪರೂಪವೆಂದರೆ ತಪ್ಪಾಗಲಾರದಷ್ಟೆ!

## ಕಾಲೇಜುವಿದ್ಯಾಭ್ಯಾಸದ ಮುಂದುವರಿಕೆ :

ಈ ಸಲ ರಾಯರು ಕಾಲೇಜು ಸೇರುವ ವೇಳೆಗೆ ಟೇಟ್‌ಸಾಹೇಬರು ಪ್ರಿನ್ಸಿಪಾಲರಾಗಿ ಕೆಲಸ ಮಾಡುತ್ತಿದ್ದರು. ಅವರಿಗೆ ಸಂಸ್ಕೃತದಲ್ಲಿ ತುಂಬ ಪ್ರೀತಿ. ಬ್ರಾಹ್ಮಣವಿದ್ಯಾರ್ಥಿಗಳನ್ನೆಲ್ಲ ಸಂಸ್ಕೃತವನ್ನು ದ್ವಿತೀಯಭಾಷೆಯಾಗಿ ತೆಗೆದುಕೊಳ್ಳುವಂತೆ ಒತ್ತಾಯಮಾಡುತ್ತಿದ್ದರು. ರಾಯರು ಹೋಗಿ 'ನನಗೆ ಸಂಸ್ಕೃತವೇ ದ್ವಿತೀಯ ಭಾಷೆಯಾಗಿ ಬೇಕು' ಎಂದು ಕೇಳಿದಾಗ ಸಾಹೇಬರು 'ಬಹಳ ಸಂತೋಷ, ಹೀಗೆ ಕೇಳಿದವನು ನೀನೊಬ್ಬನೇ' ಎಂದು ಹೊಗಳಿದರಂತೆ. ಮುಂದೆ ರಾಯರು ಕ್ವಾರ್ಟರ್ಲಿ ಪರೀಕ್ಷೆಯಲ್ಲಿ ಸಂಸ್ಕೃತದಲ್ಲಿ ಪ್ರಥಮ ಸ್ಥಾನವನ್ನೇ ಪಡೆದರು. ಟೇಟ್ ಸಾಹೇಬರಿಗಂತೂ ಅತ್ಯಾನಂದವಾಯಿತು.

ಆಗ ಛಪ್ಪಲ್ಲಿ ವಿಶ್ವೇಶ್ವರಶಾಸ್ತ್ರಿಗಳು ಸಂಸ್ಕೃತ ಪಂಡಿತರಾಗಿದ್ದರು. ಮತ್ತೊಬ್ಬ ಪಂಡಿತರೆಂದರೆ ಲೆಕ್ಚರರ್ ನರಸಿಂಹಯ್ಯಂಗಾರ್ ಎಂಬವರು. ಇವರು ಲಘುಕೌಮುದೀ ಪಾಠವನ್ನು ಹೇಳುತ್ತಿದ್ದರು. ಇಬ್ಬರೂ ಘನವಿದ್ವಾಂಸರಾಗಿದ್ದರು. ಛಪ್ಪಲ್ಲಿ ಶಾಸ್ತ್ರಿಗಳ ಮಗನೇ ಯಾವಾಗಲೂ ತರಗತಿಯಲ್ಲಿ ಪ್ರಥಮನಾಗುತ್ತಿದ್ದನು. ಇದರಿಂದ ಇತರ ಹುಡುಗರಿಗೆ ಅವರು ಮಗನ ಮೇಲಿನ ಪ್ರೀತಿಯಿಂದ ಪಕ್ಷಪಾತ ಮಾಡುತ್ತಾರೆಂಬ ಭಾವನೆ ಬಂದಿತ್ತು. ಆದರೆ ರಾಯರ ಉತ್ತರ ಪತ್ರಿಕೆಯನ್ನು ನೋಡಿ ಗುಣಗ್ರಾಹಿಗಳಾದ ಆ ಪಂಡಿತರು ರಾಯರಿಗೇ ಮೊದಲನೆಯ ಸ್ಥಾನವನ್ನು ಕೊಟ್ಟಿದ್ದರಿಂದ ಅವರ ಮೇಲಿದ್ದ ಆ ಅಪವಾದವು ಹೋಯಿತು. ಹೀಗೆ ರಾಯರ ಸಂಸ್ಕೃತಾಭ್ಯಾಸವೂ ಮುಂದುವರಿಯುತ್ತಿತ್ತು.

**ವೇದಾಂತಕ್ಕೆ ಪ್ರೋತ್ಸಾಹ :**

ಕೆ.ಎ. ಕೃಷ್ಣಸ್ವಾಮಿ ಅಯ್ಯರ್‌ರವರ ಸಹವಾಸದಿಂದ ರಾಯರಿಗೆ ಬೆಳಗ್ಗೆ ಮುಂಚೆ ಏಳುವ ಅಭ್ಯಾಸವಾಯಿತು. ಆ ಹೊತ್ತಿನಲ್ಲಿ ಕಾಳೆ ಎಂಬುವರು ಇಂಗ್ಲಿಷಿನಲ್ಲಿ ಬರೆದಿದ್ದ ಸಂಸ್ಕೃತಗ್ರಾಮರ್ ಓದಲು ಮೊದಲು ಮಾಡಿದರು. ಅದರಲ್ಲಿರುತ್ತಿದ್ದ ವ್ಯಾಕರಣ ಸೂತ್ರಗಳನ್ನು ನೋಡಿ ವ್ಯಾಕರಣವನ್ನು ಕಲಿಯುವ ಇಚ್ಛೆಯಿಂದ ತತ್ತ್ವಬೋಧಿನೀ ಸಹಿತ ಸಿದ್ಧಾಂತ ಕೌಮುದೀಗ್ರಂಥವನ್ನು ತರಿಸಿದರು. ಆ ವ್ಯಾಖ್ಯಾನವು ಅವರಿಗೆ ತಿಳಿಯಲಿಲ್ಲವಾಗಿ ಆಶಾಭಂಗವಾಯಿತು. ಆದರೆ ಹೇಗೋ ಆ ವ್ಯಾಖ್ಯಾನದಲ್ಲಿದ್ದ ಕೆಲವು ವೇದಾಂತಶಬ್ದಗಳು ಅವರಿಗೆ ಗೋಚರವಾಗಹತ್ತಿದವು. ಹಿಂದೆ ಸಂಗ್ರಹಿಸಿದ್ದ ಗೀತಾಭಾಷ್ಯದ ಪುಸ್ತಕವೊಂದಿತ್ತಷ್ಟೆ? ಅದನ್ನು ಕುತೂಹಲಕ್ಕಾಗಿ ಓದಲು ತೆಗೆದಾಗ "**ನಾಸತೋ ವಿದ್ಯತೇ ಭಾವಃ**" ಎಂಬ ಶ್ಲೋಕದ ಭಾಷ್ಯದಲ್ಲಿ ಬರೆದಿದ್ದ ವಿಷಯಗಳು ಕಣ್ಣಿಗೆ ಬಿದ್ದವು. ಹಿಂದೆ ಇಂಗ್ಲಿಷು ಅನುವಾದವನ್ನು ನೋಡಿದ್ದಾಗ 'ಶೀತೋಷ್ಣಗಳು ಬರಿಯ ವಿಕಾರಗಳು' ಎಂದಿದ್ದರಿಂದ ಇದು ಯಾವದೋ ಭೌತಿಕವಿಜ್ಞಾನದ ವಿಚಾರವೆಂದು ಹೊಳೆದಿತ್ತು. ಈಗ ಅದು ಹಾಗಲ್ಲ, ಇದು ಯಾವದೋ ಹೊಸವಿಚಾರ, ದಿನವೂ ಮೂರು ಶ್ಲೋಕಗಳನ್ನಾದರೂ ಓದಬೇಕು ಎಂದು ನಿಯಮ ಮಾಡಿಕೊಂಡರು. ಹೀಗೆ ಅತ್ಯಂತವಾಗಿ ಅನಿರೀಕ್ಷಿತವಾದ ದೈವಿಕಘಟನೆಯಿಂದ ರಾಯರಿಗೂ ಅರಿವಿಲ್ಲದೆ ಶಂಕರಾಚಾರ್ಯರ ಗೀತಾಭಾಷ್ಯದಲ್ಲಿ ಪ್ರವೇಶವು ದೊರೆಯಿತು. ದೈವಲೀಲೆಯನ್ನು ಏನೆನ್ನೋಣ!

ಹೀಗೆ ರಾಯರು ಗೀತಾಭಾಷ್ಯವನ್ನು ಓದುತ್ತಿದ್ದುದು ಅಯ್ಯರ್‌ರವರ ದೃಷ್ಟಿಗೆ ಬಿತ್ತು. ಅವರು 'ಸ್ಕೂಲು ಪಾಠಗಳನ್ನು ಓದಬೇಕು. ಈಗ ಇದೆಲ್ಲ ನಿನಗೆ ತಿಳಿಯುತ್ತದೆಯೆ?' ಎಂದು ಬುದ್ಧಿವಾದವನ್ನು ಹೇಳಿದರು. ಆದರೂ ವೇದಾಂತದಲ್ಲಿ ಇವನಿಗೆ ಅಭಿರುಚಿಯಿದೆಯಲ್ಲ!- ಎಂದು ಅವರಿಗೆ ಅನ್ನಿಸಿರಬೇಕು. ಏಕೆಂದರೆ ರಾಯರನ್ನು ಕರೆದು 'ಈ ಶ್ಲೋಕದ ಭಾಷ್ಯವನ್ನು ಓದು!' ಎಂದು '**ನಾಸತೋ ವಿದ್ಯತೇ ಭಾವಃ**' ಎಂಬ ಶ್ಲೋಕವನ್ನೇ ಕೈಗೆ ಕೊಟ್ಟರು. ರಾಯರು ಹೇಳಿದ ಅರ್ಥ ಸರಿಯಾಗಿರಲಿಲ್ಲವಾಗಿ ಅಯ್ಯರ್‌ರವರು ಸರಿಯಾಗಿ ಹೇಳಿ ಕೊಟ್ಟು 'ನಿನ್ನ ಪುಣ್ಯದಿಂದ ಈ ಪುಸ್ತಕ ನಿನ್ನ ಕೈಗೆ ಬಂದಿದೆ; ದಿನವೂ ಸಾಯಂಕಾಲದ ಹೊತ್ತು ಬಾ, ನಾನು ಹೇಳಿಕೊಡುತ್ತೇನೆ' ಎಂದರು. ಆಗ ರಾಯರಿಗೆ ಅಯ್ಯರ್‌ರವರಲ್ಲಿ ಇನ್ನೂ ಪೂಜ್ಯಬುದ್ಧಿಯು ಹೆಚ್ಚಾಯಿತು. ಅಯ್ಯರ್‌ರವರು **ವೇದಾಂತಪರಿಭಾಷೆ**, **ಸೂತಸಂಹಿತಾ**-ಎಂಬ ಗ್ರಂಥಗಳನ್ನು ವಿಶೇಷವಾಗಿ ಓದುತ್ತಿದ್ದರು. ಒಂದು ದಿನ ಅಯ್ಯರ್‌ರವರು ಪರಿಭಾಷೆಯಲ್ಲಿನ 'ವೃತ್ತಿಯು ತನಗೆ ತಾನೇ ವಿಷಯವಾಗುತ್ತದೆ' ಎಂಬ ವಿಷಯವನ್ನು ವಿವರಿಸಿದಾಗ ರಾಯರಿಗೆ ಇದು ಹೇಗಾದೀತು?- ಎಂದು ಯೋಚನೆಯಾಯಿತಂತೆ. ಅಯ್ಯರ್‌ರವರು ಹೇಳಿದ ಸಮಾಧಾನವೂ ಅವರಿಗೆ ತೃಪ್ತಿಯಾಗಲಿಲ್ಲವಂತೆ. ಹೀಗೆ ವೇದಾಂತವಿಚಾರದ ಮಾತುಗಳು ರಾಯರ ಕಿವಿಗೆ

ಆಗಾಗ ಬೀಳುತ್ತಿದ್ದವು. ಕೆಲವು ವೇಳೆ ರಾತ್ರಿಯಲ್ಲಿ ಸೂತಸಂಹಿತೆಯನ್ನು ಪುರಾಣ ರೂಪದಿಂದ ಹೇಳಲು ರಾಯರನ್ನು ಪ್ರೋತ್ಸಾಹಿಸಿ ಇವರಿಗೆ ಅರ್ಥವು ಗೊತ್ತಾಗದೆ ಇದ್ದಾಗ ಅಯ್ಯರ್‌ರವರೇ ವಿವರಿಸಿದ್ದೂ ಉಂಟು. ರಾಯರಿಗೆ ದೊರೆತಿದ್ದ ಕೆಲವು ವಾರದ ಮನೆಗಳ ಸಂಪರ್ಕವೂ ವೇದಾಂತವಿಚಾರಕ್ಕೆ ಪ್ರೋತ್ಸಾಹಕವಾಗಿತ್ತು. ಹೇಗೆಂದರೆ: ವಾಸುದೇವಾಚಾರ್ ಎಂಬ ಮಾಧ್ವಗೃಹಸ್ಥರ ಮನೆಗೆ ರಾಯರು ಊಟಕ್ಕೆ ಹೋದಾಗ ನಡೆಯುತ್ತಿದ್ದ ವೇದಾಂತ ವಿಚಾರವು ಬೆಳೆದು ರಾಯರು ಕೊಡುತ್ತಿದ್ದ ಕೆಲವು ಉತ್ತರಗಳು ಅಯ್ಯರವರಿಗೆ ತಿಳಿದಾಗ ಅವು ಅವರ ಮೆಚ್ಚುಗೆಗೆ ಪಾತ್ರವಾಗುತ್ತಿದ್ದವು. ಮತ್ತೊಬ್ಬ ವಾರದ ಮನೆಯವರು ಜಿ. ಶ್ರೀನಿವಾಸ ಅಯ್ಯರ್ ಎಂಬವರು. ಇವರು ಆಗಾಗ ಧರ್ಮಶಾಸ್ತ್ರದ ಸ್ಮೃತಿಗಳನ್ನು ವಿಮರ್ಶಿಸುತ್ತಿದ್ದರು. ಅವರ ಮನೆಯಲ್ಲಿ ರಾಯರಿಗೆ ಪ್ರೈವೇಟ್‌ಟ್ಯೂಷನ್ ಸಿಕ್ಕಿತ್ತು. ಅದರ ಸಹಾಯದಿಂದ ರಾಯರು ಕೆಲವು ವೇದಾಂತಪುಸ್ತಕಗಳನ್ನು ಕೊಂಡರು. ಇನ್ನೊಂದು ವಾರದ ಮನೆಯವರು ನಂಜುಂಡಯ್ಯನವರೆಂಬವರು. ಮತ್ತೊಬ್ಬರು ವಾರದ ಮನೆಯವರು ಪ್ರೊ. ವಿಜಯರಾಘವಾ ಚಾರ್ಯರು. ಇವರ ಮನೆಯಲ್ಲಿ ಮಡಿ ಹೆಚ್ಚು. ರಾಯರು ಊಟವಾದ ಮೇಲೆ ತಮ್ಮ ಎಲೆಯನ್ನು ತಾವೇ ತೆಗೆದು ಹಾಕಿದ್ದನ್ನು ಅಯ್ಯರ್‌ರು ಹೇಗೋ ತಿಳಿದುಕೊಂಡು ಒಂದು ದಿನ ಆಚಾರ್ಯರನ್ನು 'ಇದೇಕೆ ಹೀಗೆ ಮಾಡುತ್ತೀರಿ?'- ಎಂದು ಕೇಳಿಬಿಟ್ಟರಂತೆ. ಆಗ ಆಚಾರ್ಯರು ಸಂಕೋಚದಿಂದ 'ನಮ್ಮ ಮನೆಯ ಹೆಂಗಸರ ಅತಿಯಾದ ಮಡಿಯ ನಿಮಿತ್ತದಿಂದ ಹೀಗೆ ನಡೆಯಬೇಕಾಗಿ ಬಂತು' ಎಂದರಂತೆ. ಅಯ್ಯರ್‌ರವರು ಸಾಮಾನ್ಯವಾದ ಒಬ್ಬ ವಿದ್ಯಾರ್ಥಿಯ ವಿಷಯದಲ್ಲೂ ಸ್ಥಾನಮಾನಗಳನ್ನೆಣಿಸುವ ಉದಾರಮನಸ್ಸಿನವರೆಂದು ಇದರಿಂದ ರಾಯರಿಗೆ ತಿಳಿಯಿತು.

ಅಯ್ಯರ್‌ರವರು ರಾಯರ ವಿಷಯದಲ್ಲಿ ತೋರಿಸುತ್ತಿದ್ದ ಸಹಾನುಭೂತಿಯನ್ನೂ ಪ್ರೇಮವನ್ನೂ ಎಷ್ಟು ಹೊಗಳಿದರೂ ಸಾಲದು. ಒಂದು ಬಾರಿ ರಾಯರಿಗೆ ಅವರ ಅಣ್ಣಂದಿರು ಸ್ವರ್ಗಸ್ಥರಾದ ವಿಷಯವುಳ್ಳ ಒಂದು ಕಾಗದ ಬಂದಿದ್ದು ಅದು ಅಯ್ಯರ್‌ರವರ ಕೈಗೆ ಸಿಕ್ಕಿತು. ರಾಯರು ಕಾಲೇಜಿನಿಂದ ಬಂದ ಮೇಲೆ ಅಯ್ಯರ್‌ರು ನಿಧಾನವಾಗಿ ಇವರ ಕುಟುಂಬದ ವ್ಯಕ್ತಿಗಳನ್ನೆಲ್ಲ ವಿಚಾರಿಸಿ ಬಟ್ಟೆಗಳನ್ನೆಲ್ಲ ಅಗಸನಿಗೆ ಹಾಕಿಸಿ ಅನಂತರ ಪತ್ರವನ್ನು ಕೈಗೆ ಕೊಟ್ಟರಂತೆ. ಅನಂತರ ರಾಯರಿಗೆ ವಿಷಯವು ತಿಳಿದ ಮೇಲೆ ಸ್ನಾನಮಾಡಿಸಿ 'ಮುಂದಿನ ಕ್ರಮಕ್ಕೆ ಏರ್ಪಾಡು ಏನು? ವಿಚಾರಿಸು' ಎಂದು ತಿಳಿಸಿದರಂತೆ. ಮತ್ತೊಂದು ಸಂದರ್ಭದಲ್ಲಿ ರಾಯರು ಯಾವದೋ ಪತ್ರಿಕೆಯ ಜಾಹಿರಾತು ನೋಡಿ ಗುಮಾಸ್ತೆ ಕೆಲಸಕ್ಕೆ ಅರ್ಜಿ ಹಾಕಿದ್ದಾಗ ಹೊಸಪೇಟೆ ಎಂಬಲ್ಲಿಗೆ ಗುಮಾಸ್ತರಾಗಿ ನೇಮಕ ಮಾಡಿರುವ ಆರ್ಡರು ಬಂತು. ಆಗ ರಾಯರಿಗೆ ಅಯ್ಯರ್‌ರು "ಹೊಸಪೇಟೆಯಲ್ಲಿ ಮಾಧ್ವರು ಹೆಚ್ಚು ಎಂದು ಕೇಳಿದ್ದೇನೆ. ಯಾರಲ್ಲೂ ಹೆಚ್ಚು ಮಾತನಾಡಬೇಡ. ತೆಲುಗು ಕಲಿಯಲು ಪ್ರಯತ್ನಮಾಡು" ಎಂದೆಲ್ಲ ಬುದ್ಧಿವಾದ ಹೇಳಿದರಂತೆ. ರಾಯರು ಕಾರಣಾಂತರಗಳಿಂದ ಹೊಸಪೇಟೆಗೆ ಹೋಗಲಿಲ್ಲ.

## ವಿದ್ಯಾಭ್ಯಾಸದ ಪರಿಸಮಾಪ್ತಿ :

ಅಂತೂ ರಾಯರ ವಿದ್ಯಾಭ್ಯಾಸವು ಪರಿಸಮಾಪ್ತಿಯಾಗುವ ಕಾಲ ಬಂತು. ಅಷ್ಟು ಹೊತ್ತಿಗೆ ಕಡೂರು ಓವರ್ಸಿಯರ್ ಕೆಲಸಕ್ಕೆ ರಜ ಮುಂದುವರಿಸಲಾಗುವದಿಲ್ಲವೆಂದೂ ಕೂಡಲೆ ಬರದಿದ್ದರೆ ಇವರ ಹೆಸರನ್ನು ಉದ್ಯೋಗದಿಂದ ವಜಾ ಮಾಡುವದಾಗಿಯೂ ಹುಕುಂ ಬಂತು. ರಾಯರು ಕಡೂರಿಗೆ ಹೊರಡಲು ಸಿದ್ಧರಾಗಿ ಅಯ್ಯರ್‌ರ ಅನುಮತಿ ಪಡೆದರು. ಚಿಕ್ಕಪೇಟೆಯ ಮಾರ್ಗವಾಗಿ ರೈಲಿಗೆ ಹೊರಟಾಗ ರೈಲಿನಲ್ಲಿ ಬೇಜಾರು ಕಳೆಯಲು ಓದಲು ಒಂದು ಅಗ್ಗವಾದ ಪುಸ್ತಕವನ್ನು ಕೊಡುವಂತೆ ಅಂಗಡಿಯಲ್ಲಿ ಕೇಳಿದಾಗ ಆತನು ವಿವೇಕಚೂಡಾಮಣಿ ಎಂಬ ಪುಸ್ತಕವನ್ನು ಕೊಟ್ಟನು. ರಾಯರು ರೈಲಿನಲ್ಲಿ ಕಡೂರು ತಲುಪುವವರೆಗೂ ಆ ಪುಸ್ತಕವನ್ನು ಓದುವದರಲ್ಲಿಯೇ ಮುಳುಗಿದ್ದದ್ದರಿಂದ ಕಾಲವು ಕಳೆದದ್ದೇ ತಿಳಿಯಲಿಲ್ಲವಂತೆ. ಮಾರನೆಯ ದಿನ ಬೆಳಗ್ಗೆ ಯಲ್ಲಂಬಳಸೆಗೆ ಹೊರಟು ದಾರಿಯಲ್ಲಿ ಹಳ್ಳವು ತುಂಬಿದ್ದರೂ ದಿಟ್ಟತನದಿಂದ ಹಾಗೇ ನಡೆದುಬಿಟ್ಟರು. ರಾಯರಿಗೆ ಈಜು ಬರುತ್ತಿರಲಿಲ್ಲ. ಆದರೂ ದೇವರು ಕಾಪಾಡಿದನು. ಮುಂದೆ ಎರಡು ದಿನ ಊರಿನಲ್ಲಿ ಸುಧಾರಿಸಿಕೊಂಡು ಮತ್ತೆ ಕಡೂರಿಗೆ ಬಂದು ಓವರ್ಸಿಯರ್ ಕೆಲಸಕ್ಕೆ ಹಾಜರಾದರು.

## ಸಂಸ್ಕೃತಭಾಷೆಯ ಅಭ್ಯಾಸದ ಬೆಳವಣಿಗೆ :

ಈಗ ಕಡೂರಿನ ಸನ್ನಿವೇಶ ಸ್ವಲ್ಪ ಬದಲಾಗಿತ್ತು. ಅಮಲ್ದಾರರೂ ಶಿರಸ್ತೇದಾರರೂ ಹೊಸಬರು. ರಾಯರು ಮೆಟ್ರಿಕ್ಯುಲೇಷನ್ ಪಾಸ್ ಮಾಡಿದ್ದರಾದ್ದರಿಂದ ಕಚೇರಿಯ ಇತರ ನೌಕರರು ಇವರು ಬೇಗ ಎಲ್ಲಿ ತಮಗಿಂತ ಮೇಲೆ ಬಂದಾರೋ-ಎಂತ ಅಂಜಿ ಸರಿಯಾಗಿ ಕಚೇರಿಯ ಕೆಲಸವನ್ನು ಕಲಿಸಲಿಲ್ಲವಂತೆ. ಇದರಿಂದ ರಾಯರಿಗೆ ಕೆಲಸವು ಹೆಚ್ಚಾಗಿಲ್ಲದೆ ಬಿಡುವು ದೊರೆಯಿತು. ಆ ಕಾಲವನ್ನು ರಾಯರು ಸಂಸ್ಕೃತಭಾಷೆಯನ್ನು ಕಲಿಯಲು ಉಪಯೋಗಿಸಿಕೊಂಡರು. ಸ್ವಲ್ಪ ಸಂಸ್ಕೃತ ಭಾಷೆಯ ಪರಿಚಯವಿತ್ತಾದ್ದರಿಂದ ಕಡೂರಿನಲ್ಲಿ ಇವರ ನೆಂಟರಾಗಿದ್ದ ಶ್ರೀ ವೆಂಕಟರಾಮಭಟ್ಟರೆಂಬವರ ಮನೆಗೆ ಆಗಾಗ್ಗೆ ಹೋಗುತ್ತಾ ಅವರ ಅಳಿಯನ ಹತ್ತಿರ ಇದ್ದ ಮೇಘಸಂದೇಶ ಕಾವ್ಯವನ್ನು ಮೆಕ್ಡಾನಲ್ ಇಂಗ್ಲಿಷ್-ಸಂಸ್ಕೃತ ನಿಘಂಟಿನ ಸಹಾಯದಿಂದ ಅಭ್ಯಾಸಮಾಡಿದರು. ಕಿರಾತಾರ್ಜುನೀಯಕಾವ್ಯದ ಕೆಲವು ಸರ್ಗಗಳನ್ನೂ ವ್ಯಾಖ್ಯಾನಸಹಿತವಾಗಿ ಓದಿದರು. ಈ ನಡುವೆ ರಾಯರು ವಾಸವಾಗಿದ್ದ ಮುಸಾಫಿರ್‌ಖಾನೆಯಲ್ಲಿ ಇನ್ನು ಕೆಲವು ನೌಕರ ಸ್ನೇಹಿತರಿದ್ದರು. ಅವರ ಪೈಕಿ ಒಬ್ಬ ಟ್ಯಾಂಕ್(?) ಇನಸ್ಪೆಕ್ಟರು ಏನೋ ಕಾರಣದಿಂದ ಹಳೆಯ "ಪ್ರಬುದ್ಧ ಭಾರತ" ಎಂಬ ಇಂಗ್ಲಿಷ್ ಪತ್ರಿಕೆಯ ಕೆಲವು ಸಂಚಿಕೆಗಳನ್ನು ಬಿಸಾಡಿದನಂತೆ. ರಾಯರು ಅವುಗಳನ್ನು ಆರಿಸಿಕೊಂಡು ಓದಿ ಅವುಗಳಲ್ಲಿರುವ ವಿಷಯಗಳನ್ನು ಗ್ರಹಣಮಾಡಿಕೊಂಡರು. ಮತ್ತೊಬ್ಬ

ಮಾಧ್ವಸ್ನೇಹಿತರ ಸಹವಾಸದಿಂದ ದಾಸರ ಪದಗಳಲ್ಲಿ ರಾಯರಿಗೆ ಅಭಿರುಚಿಯುಂಟಾಯಿತು. ಅವರು ಪ್ರತಿ ಗುರು ಶನಿವಾರಗಳಲ್ಲೂ ಮುಸಾಫಿರಖಾನೆಯಲ್ಲಿ ದಾಸರ ಪದಗಳನ್ನು ಹಾಡುತ್ತಿದ್ದರಂತೆ. ಇದರಿಂದಲೂ ರಾಯರಿಗೆ ಪ್ರಯೋಜನವಾಯಿತು.

ವಾಚಕರಿಗೆ ಮೇಲೆ ಪರಾಮರ್ಶಿಸಿದ ವೆಂಕಟರಾಮಭಟ್ಟರ ಪರಿಚಯವನ್ನು ಇಲ್ಲಿ ಸ್ವಲ್ಪ ಮಾಡಿಕೊಡುವದು ಅವಶ್ಯವಾಗಿದೆ. ವೆಂಕಟರಾಮಭಟ್ಟರು ವಿಧುರರು, ಇವರಿಗೆ ಇಬ್ಬರೇ ಹೆಣ್ಣುಮಕ್ಕಳು, ಹಿರಿಯವಳ ಗಂಡನು ಮೃತನಾಗಿದ್ದನು. ಆದ್ದರಿಂದ ಆಕೆಯೇ ಮನೆಯ ಯಜಮಾನಿಕೆಯನ್ನು ವಹಿಸಿದ್ದಳು. ಕಿರಿಯ ಅಳಿಯನೂ ಮಗಳೂ ಇವರ ಜೊತೆಯಲ್ಲೇ ಇದ್ದರು. ವೆಂಕಟರಾಮಭಟ್ಟರು ತಮ್ಮ ದಿನಚರಿಯ ಬಹುಭಾಗವನ್ನು ಜಪ, ಪೂಜೆ, ವೇದಾಂತಗ್ರಂಥಪಠನ-ಇವುಗಳಲ್ಲೇ ಕಳೆಯುತ್ತಿದ್ದರು. ಅವರು ಮೌನವಾಗಿರುವ ಕಾಲವೇ ಹೆಚ್ಚು. ಲೇವಾದೇವಿಯ ನಿಮಿತ್ತ ಬಂದ ರೈತರಿಗೆ ಮಿತವಾಗಿ ಉತ್ತರವನ್ನು ಕೊಡುತ್ತಿದ್ದರು. ಅವರು ರಾತ್ರೆ ಬಹಳ ಹೊತ್ತಿನವರೆಗೂ ಎಚ್ಚರವಾಗಿದ್ದು ಬೆಳಗಿಸ ಜಾವದಲ್ಲಿ ಮುಂಚಿತವಾಗಿಯೇ ಎದ್ದು ಬಿಡುತ್ತಿದ್ದರು. ರಾತ್ರೆಯಲ್ಲಿ ಅವರ ಮನೆಯಲ್ಲೇ ಮಲಗಿಕೊಳ್ಳುತ್ತಿದ್ದ ಒಬ್ಬ ಶಿಷ್ಯನೊಡನೆ ವೇದಾಂತ ಕಥಾಲಾಪವನ್ನು ಮಾಡುತ್ತಿದ್ದರು. ರಾಯರು ಒಂದೆರಡು ದಿನ ಅವರ ಮನೆಯಲ್ಲಿ ಮಲಗುವ ಸಂದರ್ಭವು ಬಂದಾಗ ವೆಂಕಟರಾಮಭಟ್ಟರ ವಿಚಾರಸರಣಿಯನ್ನು ಕೇಳುವ ಅವಕಾಶವು ಒದಗುತ್ತಿತ್ತು. "ಜಗತ್ತು ಪರಮೇಶ್ವರನಿಂದ ಏಕೆ ಸೃಷ್ಟಿಯಾಗಿದೆ? ಮನುಷ್ಯರಲ್ಲಿ ಸುಖದುಃಖಾದಿಗಳ ತಾರತಮ್ಯವೇಕೆ? ಸಾತ್ತ್ವಿಕರಾದ ಬ್ರಾಹ್ಮಣರ ಸೇವೆಯಿಂದಾಗುವ ಫಲವೇನು? ವೇದಾಂತಜ್ಞಾನವು ಸದ್ಗುರುವಿನಿಂದ ದೊರಕುವ ಬಗೆ ಹೇಗೆ?- ಇವೇ ಮುಂತಾದ ವಿಚಾರಗಳನ್ನು ಕುರಿತು ಅವರುಗಳು ಚರ್ಚಿಸುತ್ತಿದ್ದ ಸನ್ನಿವೇಶವು ರಾಯರ ಮೇಲೆ ಪರಿಣಾಮವನ್ನು ಉಂಟುಮಾಡಿತು.

ರಾಯರು ಆಗ ಇನ್ನೂ ಮನೆಯನ್ನು ಮಾಡಿರಲಿಲ್ಲವಾದ್ದರಿಂದ ಹೋಟಲಿನಲ್ಲಿ ಊಟ ಮಾಡುತ್ತಿದ್ದರು. ಅದರ ಯಜಮಾನ ನಾಗಪ್ಪನೆಂಬವನು ಒಳ್ಳೆಯ ಸ್ವಭಾವದವನು. ಒಂದೊಂದು ದಿನ ಅಡಿಗೆ ತಡವಾದಾಗ ಊಟಕ್ಕೆ ಬಂದವರ ಮಧ್ಯೆ ಏನಾದರೊಂದು ಪ್ರಶ್ನೆಹಾಕಿ ಕಾಲಕಳೆಯುವಂತೆ ಮಾಡುತ್ತಿದ್ದನು. ಒಂದು ದಿನ 'ಪ್ರಪಂಚಕ್ಕೆ ಒಬ್ಬ ಸೃಷ್ಟಿಕರ್ತನಾದ ದೇವರಿದ್ದಾನೆಯೊ? ಇಲ್ಲವೊ?'- ಎಂಬ ಬಗ್ಗೆ ಚರ್ಚೆಯಾಯಿತಂತೆ. ಅದರಲ್ಲಿ ರಾಯರು ಭಾಗವಹಿಸಿದ್ದರು. ಬಾದರಾಯಣರು ತಮ್ಮ 'ಜನ್ಮಾದ್ಯಸ್ಯ ಯತಃ' ಎಂಬ ಸೂತ್ರದಲ್ಲಿ ಈ ವಿಚಾರವನ್ನು ಚರ್ಚಿಸಿರುತ್ತಾರೆಂಬುದು ಈಚೆಗೆ ರಾಯರಿಗೆ ತಿಳಿದಿದೆ. ಹೀಗೆ ನಮಗೆ ಅರಿವಿಲ್ಲದೆ ಮಾತನಾಡುವಾಗಲೂ ಎಷ್ಟೋ ಶಾಸ್ತ್ರವಿಚಾರಗಳು ಚರ್ಚಿಸಲ್ಪಡುವದೆಂಬುದನ್ನು ಯಾರು ಬಲ್ಲರು?

## ಹೊಸಕೆರೆ ಚಿದಂಬರಯ್ಯನವರು :

ರಾಯರ ಸಂಸ್ಕೃತಾಭ್ಯಾಸವು ಮುಂದುವರಿಯುವದಕ್ಕೂ ಚಿಗುರಿಕೊಳ್ಳುವದಕ್ಕೂ ಮತ್ತೊಬ್ಬ ಹೊಸ ವ್ಯಕ್ತಿಗಳ ಸಹವಾಸವು ಕೇವಲ ದೈವಿಕವಾಗಿ ಒದಗಿತು. ಒಂದು ದಿನ ರಾಯರು ತಮ್ಮ ಕೆಲಸದ ನಿಮಿತ್ತವಾಗಿ ಸಂಚರಿಸುತ್ತಿದ್ದಾಗ ಕಡೂರಿನಲ್ಲಿದ್ದ ಆಂಗ್ಲೋ-ವರ್ನಾಕ್ಯುಲರ್ ಸ್ಕೂಲನ್ನು ಪ್ರವೇಶಿಸಿದರು. ಅಲ್ಲಿ ಹೆಡ್‌ಮಾಸ್ಟರು ಒಂದು ದೊಡ್ಡ ಪುಸ್ತಕವನ್ನು ತಮ್ಮ ಮುಂದೆ ಇಟ್ಟುಕೊಂಡು ಕುಳಿತಿದ್ದರು. ರಾಯರು ಕುತೂಹಲದಿಂದ 'ಇದೇನು ಪುಸ್ತಕ?' ಎಂದಾಗ 'ಇದು **ಶಬ್ದಾನುಶಾಸನವಂತೆ,** ಏನೂ ಅರ್ಥವಾಗುವದೇ ಇಲ್ಲ'- ಎಂದು ಹೆಡ್‌ಮಾಸ್ಟರು ಅಂದರು. ರಾಯರು ತಾವೇ ಕೈಗೆ ಪುಸ್ತಕವನ್ನೆತ್ತಿಕೊಂಡು ನೋಡಿ, 'ಇದು ವ್ಯಾಕರಣದ ಹಾಗೆ ಕಾಣುತ್ತದೆ. ಲಘುಕೌಮುದಿಯನ್ನು ಓದಿದರೆ ತಿಳಿಯಬಹುದು' ಎಂದರು. 'ನೀವು ಲಘುಕೌಮುದಿಯನ್ನು ಓದಿದ್ದೀರಾ?' ಎಂದು ಹೆಡ್‌ಮಾಸ್ಟರು ಕೇಳಲು ರಾಯರು 'ಇಲ್ಲ'- ಎಂದುತ್ತರ ಕೊಟ್ಟರು. ಹೀಗೆ ಸಂಭಾಷಣೆಯನ್ನು ನಡೆಯಿಸಿದ ವ್ಯಕ್ತಿಯೇ ಹೊಸಕೆರೆ ಚಿದಂಬರಯ್ಯನವರು. 'ಆಗಾಗ್ಗೆ ಬರುತ್ತಿರಿ' ಎಂದು ರಾಯರಿಗೆ ಅವರು ಹೇಳಿ ಕಳುಹಿಸಿದರಂತೆ. ಹೀಗೆ ಪ್ರಾರಂಭವಾದ ಪರಿಚಯವು ಮುಂದೆ ಬೆಳೆಯಲಾರಂಭಿಸಿತು. ಚಿದಂಬರಯ್ಯನವರು ತಮ್ಮ ಮನೆಯ ಸಮೀಪದಲ್ಲೇ ರಾಯರಿಗೆ ಒಂದು ಚಿಕ್ಕಮನೆಯನ್ನು ಗೊತ್ತುಮಾಡಿಕೊಟ್ಟರು. ರಾಯರು ಸಂಸಾರವನ್ನು ಕರೆಯಿಸಿಕೊಂಡರು. ಮುಂದೆ ಜೊತೆಯಲ್ಲಿ **ಪ್ರತಾಪರುದ್ರೀಯ, ಕುವಲಯಾನಂದ-** ಇವುಗಳನ್ನೂ ಶಬ್ದಾನುಶಾಸನವನ್ನೂ ಓದಲು ಮೊದಲು ಮಾಡಿದರು.

## ಲಘುಕೌಮುದಿಯ ಅಭ್ಯಾಸ :

ಆ ಊರಿನ ನಂಜುಂಡಶಾಸ್ತ್ರಿಗಳೆಂಬವರಲ್ಲಿ ಲಘುಕೌಮುದೀ ಎಂಬ ಪುಸ್ತಕವಿದೆ ಎಂದು ರಾಯರಿಗೆ ತಿಳಿಯಿತು. ನಂಜುಂಡಶಾಸ್ತ್ರಿಗಳು ಸಂಸ್ಕೃತ ಪಂಡಿತರಾಗಿದ್ದು ಅನಂತರ ಸ್ಕೂಲು ಉಪಾಧ್ಯಾಯರಾಗಿದ್ದವರು. ಆದರೆ ಅವರ ಹಿಂದಿನ ಸಂಪ್ರದಾಯದ ಪಾಠಬೋಧನಕ್ರಮವು ಅಧಿಕಾರಿಗಳಿಗೆ ಹಿಡಿಸದೆ ಅವರನ್ನು ಆ ಊರಿನಿಂದ ಸಂಸ್ಕೃತವಿದ್ಯಾರ್ಥಿಗಳಿದ್ದ ಕೋಲಾರಕ್ಕೆ ವರ್ಗ ಮಾಡಿದರು. ಆಗ ಅವರು ಹೋಗಲಿಲ್ಲವಾಗಿ 'ಕೆಲಸದಿಂದ ವಜಾಮಾಡಿದೆ' ಎಂದು ಹುಕುಂ ಬಂತು. ಚಿದಂಬರಯ್ಯನವರು ಅದನ್ನು ಸರಿಪಡಿಸಲು ಪ್ರಯತ್ನಿಸಬೇಕೆಂದು ಹೇಳಿದ್ದಕ್ಕೆ ನಂಜುಂಡಶಾಸ್ತ್ರಿಗಳು "ಅವನೇ ಕೆಟ್ಟ, ನಮ್ಮಂಥ ಶಾಸ್ತ್ರಿಗಳು ಅವನಿಗೆ ಯಾರು ಸಿಕ್ಕುತ್ತಾರೆ?" ಎಂದುಬಿಟ್ಟರಂತೆ! ಹಿಂದಿನ ಕಾಲದ ಪಂಡಿತರ ಮನೋಭಾವಕ್ಕೆ ಇದೊಂದು ಉದಾಹರಣೆ. ಇರಲಿ. ರಾಯರು ಶಾಸ್ತ್ರಿಗಳನ್ನು 'ಲಘುಕೌಮುದಿಯು ಬೇಕಾಗಿತ್ತಲ್ಲ!' ಎಂದು ಕೇಳಿದಾಗ ಅವರು "ಅದರಲ್ಲೇನಿದೆ?-

ಹಯವರಟ್" ಎಂದು ಹೆದರಿಸಿ ಬಿಟ್ಟರಂತೆ. ಆಗ ರಾಯರೂ ಚಿದಂಬರಯ್ಯನವರೂ ಕೂಡಿ ಬೇರೆಯ ಸಾಹಿತ್ಯ ಗ್ರಂಥಗಳ ಅಭ್ಯಾಸದಲ್ಲಿ ತೊಡಗಿದರು. ಸ್ವಲ್ಪಕಾಲವು ಕಳೆಯಿತು.

ಮುಂದೆ ಕಡೂರಿನಲ್ಲಿ ಮತ್ತೆ ಪ್ಲೇಗು ಉಪದ್ರವ ಪ್ರಾರಂಭವಾಯಿತು. ರಾಯರು ಚಿದಂಬರಯ್ಯನವರ ಜೊತೆಯಲ್ಲಿ ಷೆಡ್‌ನಲ್ಲಿ ವಾಸಮಾಡಲಾರಂಭಿಸಿದರು. ಅಲ್ಲಿಯೂ ಚಿದಂಬರಯ್ಯನವರು ಸಾಹಿತ್ಯಗ್ರಂಥಗಳನ್ನು ಅಭ್ಯಾಸಮಾಡುತ್ತಲೇ ಇದ್ದರು. ಆ ವರ್ಷ ಅವರು ಪಂಡಿತ ಪರೀಕ್ಷೆಗೆ ಹೋಗಲಾಗಲಿಲ್ಲ. ರಾಯರು ತಮ್ಮ ಸಂಸ್ಕೃತ ವಿದ್ಯಾಭ್ಯಾಸವನ್ನು ಮುಂದುವರಿಸಿದ್ದರು. ಇಷ್ಟರಲ್ಲಿ ರಾಯರಿಗೆ ಉದ್ಯೋಗಕ್ಷೇತ್ರದಲ್ಲಿ ಮೇಲಧಿಕಾರಿಗಳ ಕಿರುಕುಳವು ಹೆಚ್ಚಾಯಿತು. ಇವರ ಕೆಲಸವು ಯಾರಿಗೂ ಮೆಚ್ಚಾಗಲಿಲ್ಲವಂತೆ. ಕೊನೆಗೆ ಇವರಿಗೆ ದನಗಳ ದೊಡ್ಡಿಯ ಮೇಲ್ವಿಚಾರಣೆಯನ್ನು ವಹಿಸಿದರು. ರಾಯರು ಅದರಲ್ಲೂ ಪ್ರಾಮಾಣಿಕರಾಗಿ ನಡೆದದ್ದರಿಂದ ಮೇಲಿನ ಅಧಿಕಾರಿಗಳು ಕೆಲವರಿಗೆ ಒಂದು ವಿರೋಧವೇ ಆಯಿತು. ಆದರೆ ರಾಯರು ಮಾತ್ರ ಬಿಡುವು ದೊರೆತಾಗಲೆಲ್ಲ ಸಂಸ್ಕೃತಾಭ್ಯಾಸವನ್ನು ಮುಂದುವರಿಸಿಯೇ ಇದ್ದರು. ಈ ಅವಧಿಯಲ್ಲಿ ಚಂಪೂರಾಮಾಯಣವನ್ನು ವ್ಯಾಖ್ಯಾನ ಸಮೇತ ಓದಿ ಮುಗಿಸಿದರು. ಭಗವದ್ಗೀತೆಯನ್ನು ಓದುತ್ತಲೇ ಇದ್ದರು. ಈ ನಡುವೆ ಚಿದಂಬರಯ್ಯನವರ ಸ್ನೇಹದಿಂದ ರಾಯರು ಕೆಲವರಿಗೆ ಸಂಬಳವಿಲ್ಲದ ಸಂಸ್ಕೃತ ಮೇಷ್ಟರಾಗಿಯೂ ಪರಿಣಮಿಸಿದ್ದರು. ಆದರೆ ಕಡೂರಿನ ಓವರ್‌ಸಿಯರ್ ಉದ್ಯೋಗವು ಮಾತ್ರ ರಾಯರಿಗೆ ಬೇಸರವಾಗಿತ್ತು. ಅದಕ್ಕೆ ತಕ್ಕಂತೆ ದೈವಯೋಗದಿಂದ ಮುಂದೆ ಹೇಗೆ ವಿದ್ಯಾಭ್ಯಾಸದ ಇಲಾಖೆಗೆ ರಾಯರು ಪ್ರವೇಶಿಸಿದರೆಂಬುದನ್ನು ತಿಳಿಯೋಣ.

< ❖ ❖ ❖ >

# ೫. ಉಪಾಧ್ಯಾಯವೃತ್ತಿಯಲ್ಲಿ ರಾಯರು

## ವಿದ್ಯಾಭ್ಯಾಸದ ಇಲಾಖೆಯಲ್ಲಿ ಪ್ರವೇಶ :

ರಾಯರ ಸ್ನೇಹಿತರಾದ ಚಿದಂಬರಯ್ಯನವರು ರಾಯರ ಸ್ಥಿತಿಯನ್ನು ನೋಡಿ ಕನಿಕರದಿಂದ ಇವರನ್ನು ಮೇಷ್ಟರ ಕೆಲಸಕ್ಕೆ ಸೇರಿಸಲು ಪ್ರಯತ್ನಪಟ್ಟು ತಮ್ಮ ಮೇಲ್ಪಟ್ಟ ಮೂರು ಜನ ಡೆ॥ಇನ್‌ಸ್ಪೆಕ್ಟರುಗಳಿಗೆ ಪತ್ರ ಬರೆದರು. ಮೂವರಿಂದಲೂ ಉತ್ತರ ಬಂದಿದ್ದು ಅದರಲ್ಲಿ ರಾಯರು ಜಗಳೂರು ಸ್ಕೂಲಿಗೆ ಉಪಾಧ್ಯಾಯರಾಗಿ ಹೋಗಲು ನಿಶ್ಚಯಿಸಿದರು. ಓವರ್ಸಿಯರ್ ಕೆಲಸಕ್ಕೆ ರಾಜೀನಾಮೆ ಬರೆದುಕೊಟ್ಟರು. ಆದರೆ ಅಮಲ್ದಾರರು ಅದನ್ನು ಒಪ್ಪದೆ ರಜಾ ಕೊಡಲು ಶಿಫಾರಸು ಮಾಡಿದರಂತೆ. ರಾಯರು ಇನ್ನು ಈ ಕೆಲಸದ ಯೋಚನೆಯನ್ನೇ ಕೈಬಿಟ್ಟು ಜಗಳೂರಿಗೆ ಹೊರಟರು. ಅಲ್ಲಿಯೂ ಪ್ಲೇಗು ಗಲಾಟೆ ಇದ್ದುದರಿಂದ ಹೋದ ಕೂಡಲೆ ರಾಯರಿಗೆ ಸರಿಯಾದ ಪ್ರೋತ್ಸಾಹ ದೊರೆಯಲಿಲ್ಲ. ಆದರೂ ಹೆಡ್‌ಮಾಸ್ಟರು ಡ್ಯೂಟಿ ರಿಪೋರ್ಟನ್ನು ತೆಗೆದುಕೊಂಡು ಕೆಲಸಕ್ಕೆ ಸೇರಿಸಿಕೊಂಡರು. ಷೆಡ್‌ನಲ್ಲಿ ಉಳಿದ ಮೇಷ್ಟರೊಡನೆ ವಾಸಮಾಡುತ್ತಿರಲು 8-10 ದಿನಗಳ ನಂತರ ಒಬ್ಬರು ನೆಂಟರ ಪರಿಚಯವಾಗಿ ಅವರ ಮನೆಯಲ್ಲಿ ರಾಯರಿಗೆ ಆದರಪುರಸ್ಕಾರಗಳು ದೊರೆತವು. ಸ್ಕೂಲು ಕೆಲಸವು ತುಂಬ ಕಡಿಮೆಯಿದ್ದುದರಿಂದ ಆ ಊರಿನಲ್ಲಿದ್ದ ಸುಬ್ಬಾಶಾಸ್ತ್ರಿಗಳೆಂಬ ಕನ್ನಡ ಉಪಾಧ್ಯಾಯರ ಸಹವಾಸದಿಂದ 'ಮಲ್ಲಾರಿಮಾಹಾತ್ಮ್ಯ'ವೆಂಬ ಷಟ್ಪದೀಕಾವ್ಯವನ್ನು ಓದುವ ಅವಕಾಶವು ದೊರೆಯಿತು. ಈ ನಡುವೆ ರಾಯರಿಗೆ ತಮಿಳು ಅಕ್ಷರದ ಒಂದು 'ವಿಚಾರಸಾಗರ' ಪುಸ್ತಕವೂ ಸಿಕ್ಕಿತ್ತು. ಅದನ್ನು ಕಷ್ಟಪಟ್ಟು ಓದಿ ಅರ್ಥಮಾಡಿಕೊಳ್ಳುತ್ತಿದ್ದರು. ಆ ಊರಿನ ರೆಡ್ಡಿ ಜನಾಂಗದವರ ಇಷ್ಟದಂತೆ ನಿತ್ಯವೂ ಭಾರತವನ್ನು ಓದುವ ಕೆಲಸವನ್ನು ರಾಯರು ಅಂಗೀಕರಿಸಿದರು. ಇಷ್ಟರಲ್ಲಿ ರಾಯರು ಇದ್ದ ಕೆಲಸವು ಬದಲಿ ನೌಕರಿಯಾಗಿದ್ದದ್ದರಿಂದ ಆ ಖಾಯಂ ನೌಕರನಿಗೆ ಹೊಳಲ್ಕೆರೆಗೆ ವರ್ಗವಾದದ್ದರ ಫಲವಾಗಿ ರಾಯರೂ ಹೊಳಲ್ಕೆರೆಯಲ್ಲಿ ಮುಂದುವರಿಯ ಬೇಕಾಗಿಬಂತು.

## ಹೊಳಲ್ಕೆರೆಯ ವಾಸ :

ರಾಯರು ಹೊಳಲ್ಕೆರೆಗೆ ಹೋಗುವ ಸುದ್ದಿಯಿಂದ ಅವರ ನೆಂಟರ ಮನೆಯಲ್ಲಿದ್ದ ವೃದ್ಧೆಯೊಬ್ಬಳು ದುಃಖಪಟ್ಟಳು. ಅವರ ಮನೆಯಲ್ಲಿ ಔತಣವನ್ನು ಸ್ವೀಕರಿಸಿ ರಾಯರು ಹೊಳಲ್ಕೆರೆಗೆ ಪ್ರಯಾಣಮಾಡಿದರು. ಪ್ರಯಾಣವು ಬಹುಪ್ರಯಾಸಕರವಾಗಿತ್ತು. ಅಂತೂ ಹೊಳಲ್ಕೆರೆಯನ್ನು ತಲುಪಿದ್ದಾಯಿತು. ಆ ಊರಿನಲ್ಲೂ ಪ್ಲೇಗು ಉಪದ್ರವದ ಅಂಜಿಕೆಯಿದ್ದುದರಿಂದ ಊರಿಗೆ ಕಾವಲುಗಾರನನ್ನು ಹಾಕಿದ್ದರು. ಸರ್ಕಾರಿ ಕೆಲಸದ ಮೇಲೆ ರಾಯರು ಬಂದಿದ್ದುದರಿಂದ ಅವನು ಅವರನ್ನು ಊರೊಳಕ್ಕೆ ಬಿಟ್ಟನು. ಅದೇ ದಿನ ಸ್ಕೂಲಿಗೆ

ಡ್ಯೂಟಿ ರಿಪೋರ್ಟು ಮಾಡಿಕೊಂಡದ್ದಾಯಿತು. ಅಲ್ಲಿನ ಹೆಡ್‌ಮಾಸ್ತರು ಒಳ್ಳೆಯವರು. ಸ್ಕೂಲನ್ನು ವ್ಯವಸ್ಥೆಯಲ್ಲಿಟ್ಟಿದ್ದನು. ರಾಯರನ್ನು ಕಂಡು ಅವರು ಆದರದಿಂದ ಬರಮಾಡಿಕೊಂಡರು. ಹೆಡ್‌ಮಾಸ್ತರಿಗೆ ರಾಯರ ಕೆಲಸವೂ ಮೆಚ್ಚುಗೆಯಾಗಿತ್ತು. ಆದರೆ ಉಳಿದ ಮಾಸ್ತರುಗಳೊಡನೆ ಹೆಚ್ಚು ಸಲುಗೆಯಿಂದ ನಡೆಯಬಾರದೆಂದೂ ಅವರೆಲ್ಲ ಸಣ್ಣ ಬುದ್ಧಿಯವರೆಂದೂ ಹೆಡ್‌ಮಾಸ್ತರು ಸೂಚಿಸಿದ್ದರು. ರಾಯರು ಯಾರ ಗೋಜಿಗೂ ಹೋಗದೆ ಇದ್ದರು. ಒಂದೆರಡು ದಿನಗಳು ಕಳೆದ ನಂತರ ಊರಿಗೆ ಹೋಗಿ ಸಂಸಾರವನ್ನು ಕರೆದುಕೊಂಡು ಬಂದರು. ನಿತ್ಯಗಟ್ಟಲೆಯ ಕೆಲಸವಾದ ಮೇಲೆ ಸ್ಕೂಲಿನ ಲೈಬ್ರರಿಯಲ್ಲಿದ್ದ ಶಬ್ದಾನುಶಾಸನದ ಅಭ್ಯಾಸವನ್ನೂ ಎಫ್.ಎ. ಪರೀಕ್ಷೆಗೆ ಪ್ರೈವೇಟಾಗಿ ಕುಳಿತುಕೊಳ್ಳಲು ಪಾಠಗಳ ಅಭ್ಯಾಸವನ್ನೂ ಮುಂದುವರಿಸಿದರು. ಈ ನಡುವೆ ಚಿತ್ರದುರ್ಗದ ಇನ್‌ಸ್ಪೆಕ್ಟರು ರಾಯರನ್ನು ಆಫೀಸುರ್ರೈಟರ ಕೆಲಸಕ್ಕೆ ಬರಲು ಆಹ್ವಾನಿಸಿದರು. ಆದರೆ ಹೆಡ್‌ಮಾಸ್ತರು ಆ ಕೆಲಸವು ಅಧಿಕಾರಿಗಳ ಮರ್ಜಿ ಅನುಸರಿಸುವದರಲ್ಲಿಯೇ ಆಗಿ ಹೋಗುತ್ತದೆ, ವಿದ್ಯಾಭ್ಯಾಸಕ್ಕೆ ಕುಂದಕವಾಗುತ್ತದೆ- ಎಂದು ಎಚ್ಚರಿಸಿದ್ದರಿಂದ ರಾಯರು ಅದಕ್ಕೆ ಹೋಗಲಿಲ್ಲ. ಮುಂದೆ ನಾಲ್ಕೈದು ತಿಂಗಳಿಗೆ ರಾಯರಿಗೆ ಖಾಯಂ ಅಸಿಸ್ಟೆಂಟ್‌ಮಾಸ್ತರಾಗಿ 12 ರೂ. ಸಂಬಳದ ಮೇಲೆ ಮೊಳಕಾಲ್ಮೂರುವಿಗೆ ವರ್ಗವಾಯಿತು.

## ಮೊಳಕಾಲ್ಮೂರು ವೃತ್ತಾಂತ :

ರಾಯರು ಚಳ್ಳಕೆರೆಯ ಮಾರ್ಗವಾಗಿ ಮೊಳಕಾಲ್ಮೂರುವಿಗೆ ಹೊರಟರು. ಚಳ್ಳಕೆರೆಯಲ್ಲಿ ಶ್ರೀ ಹೆಚ್.ಜಿ. ಕೃಷ್ಣರಾಯರೆಂಬ ಉಪಾಧ್ಯಾಯರ ಪರಿಚಯವಾಯಿತು. ಅವರ ತಾಯಿಯವರು ರಾಯರನ್ನು ಹೊಗಳುತ್ತಾ ಆ ದಿನ ಏಕಾದಶಿಯಾದದ್ದರಿಂದ ಊಟ ಬೇಡವೆಂತ ಅವರು ಅಂದದ್ದನ್ನು ಶ್ಲಾಘಿಸಿದರು. ಆದರೆ ನಿಜವಾಗಿ ರಾಯರು ತಾವು ತಂದಿದ್ದ ಬುತ್ತಿಯನ್ನು ಮೊದಲೇ ತಿಂದು ಬಿಟ್ಟಿದ್ದರಂತೆ! ಆ ದಿನ ಏಕಾದಶೀ ಎಂಬುದರ ಅರಿವಿರಲಿಲ್ಲವಂತೆ. ಆಗ ರಾಯರು ಪಶ್ಚಾತ್ತಾಪ ಪಟ್ಟುಕೊಂಡು ಇನ್ನು ಮುಂದೆ ಎಂದೂ ಏಕಾದಶಿಯ ದಿನ ಊಟ ಮಾಡುವದಿಲ್ಲವೆಂದು ಪ್ರತಿಜ್ಞೆ ಮಾಡಿದರು. ಮಾರನೆಯ ದಿನ ದ್ವಾದಶೀ ಪಾರಣೆಯನ್ನು ಮುಗಿಸಿಕೊಂಡು ಪತ್ನೀಸಮೇತರಾಗಿ ಮೊಳಕಾಲ್ಮೂರುವಿಗೆ ಪ್ರಯಾಣಮಾಡಿದರು.

ಇಲ್ಲಿ ರಾಯರಿಗೆ ಮೊದಲು ವೆಂಕಟರಾಯರೆಂಬ ತಾಲ್ಲೂಕು ಕಚೇರಿಯ ಗುಮಾಸ್ತರ ಪರಿಚಯವಾಯಿತು. ವೆಂಕಟರಾಯರು ಬಹಳ ಒಳ್ಳೆಯವರು. ಅವರು ಥಿಯಾಸಫಿಕಲ್ ಸೊಸೈಟಿಯ ಸೆಕ್ರೆಟರಿಗಳಾಗಿದ್ದರು. ಆಗ್ಗೆ ಆ ಸಮಾಜವು ಉಚ್ಛ್ರಾಯಸ್ಥಿತಿಯಲ್ಲಿದ್ದು ಡಾ॥ಆನಿಬೆಸೆಂಟರೇ ಅದಕ್ಕೆ ಪ್ರೆಸಿಡೆಂಟರಾಗಿದ್ದರು. ಆಕೆಗೆ ಅದ್ವೈತದ ಕಡೆಗೆ ಒಲವು ಹೆಚ್ಚಾಗಿತ್ತು. ಆದರೆ ಆ ಸೊಸೈಟಿಯವರ ಪರಿಭಾಷೆ ಸ್ವತಂತ್ರವಾಗಿಯೇ ಏರ್ಪಟ್ಟಿದ್ದು, ಆಗಿನ ಡೆಪ್ಯುಟಿ ಕಮಿಷನರೂ ಥಿಯಾಸಫಿಸ್ಟ್ ಆಗಿದ್ದರು. ವೆಂಕಟರಾಯರು ತಮ್ಮ ಕಚೇರಿಯ ಕೆಲಸಗಳನ್ನು ಬಲು ಚೆನ್ನಾಗಿ ಮಾಡುತ್ತಿದ್ದು ಎಲ್ಲರ ಗೌರವಕ್ಕೂ ಪಾತ್ರರಾಗಿದ್ದರು. ಅವರು

ಸ್ನಾನಾಹ್ನಿಕಗಳನ್ನು ತಪ್ಪದೆ ಸಕಾಲಕ್ಕೆ ಮಾಡುತ್ತಿದ್ದರು. ರಾಯರಿಗೆ ಅವರ ಸ್ನೇಹದಿಂದ ಬೆಳಿಗ್ಗೆ ಹೊತ್ತಿಗೆ ಮುಂಚೆ ಏಳುವದೂ ಸ್ನಾನಾಹ್ನಿಕಗಳನ್ನು ಕಾಲಕ್ಕೆ ಸರಿಯಾಗಿ ಮಾಡುವದೂ ಅಭ್ಯಾಸವಾಯಿತು. ವೆಂಕಟರಾಯರು ಸಂಜೆಯವೇಳೆ ಥಿಯಾಸಫಿಸ್ಟುಗಳನ್ನೆಲ್ಲ ಒಂದುಕಡೆ ಕೂಡಿಸಿ ತತ್ತ್ವನಿರೂಪಣೆ ಮಾಡುತ್ತಿದ್ದರು. ಅವರುಗಳಲ್ಲಿ ನೇಯ್ಗೆಯವರೇ ಹೆಚ್ಚು. ರಾಯರಿಗೆ ಇವರ ಸಹವಾಸದಿಂದ ವೇದಾಂತದಲ್ಲಿ ಹೆಚ್ಚಿನ ಆಸಕ್ತಿಯುಂಟಾಯಿತು. ಆಗ ರಾಯರಿಗೆ ಒಂದು "ವಿಚಾರಸಾಗರ"ಪುಸ್ತಕದ ಕನ್ನಡದ ಅನುವಾದವೂ ದೊರಕಿತು. ಅದನ್ನು ಓದಿದರು. ಭೀಮಾಚಾರ್ಯರೆಂಬ ಮತ್ತೊಬ್ಬ ಉಪಾಧ್ಯಾಯರು ರಾಯರಿಗೆ ಕೊಟ್ಟ 'ಮಾಯವಾದಖಂಡನ' ಎಂಬ ಪುಸ್ತಕವನ್ನು ರಾಯರು ಓದಿ ಅದಕ್ಕೆ ಆಗ್ಗೆ ತಿಳಿದ ಯುಕ್ತಿಗಳ ಬಲದಿಂದ ಖಂಡನೆಯನ್ನೂ ಬರೆದರಂತೆ. ಈ ನಡುವೆ ಕನ್ನಡ ಪಂಡಿತಪರೀಕ್ಷೆಗೂ ಓದಲು ಪ್ರಾರಂಭಿಸಿದರು. ಪ್ರಾಸಂಗಿಕವಾಗಿ 'ಸಾಹಿತ್ಯದರ್ಪಣ'- ಎಂಬ ಗ್ರಂಥವನ್ನೂ ಓದುತ್ತಿದ್ದರು. ಅದರಲ್ಲಿ 'ರಸವು ಅನಿತ್ಯವೆನ್ನುವವರನ್ನು ವೇದಾಂತಿಗಳೇ ದಂಡಿಸಬೇಕು' ಎಂದಿದ್ದುದನ್ನು ನೋಡಿ ರಸವು ನಿತ್ಯವೆಂದು ವೇದಾಂತಿಗಳು ಹೇಗೆ ಸಿದ್ಧಮಾಡುವರೋ ತಿಳಿಯಬೇಕೆಂದು ರಾಯರಿಗೆ ಕುತೂಹಲವಾಯಿತು. ಮೊದಲಬಾರಿಗೆ ಶ್ರೀ ವೆಂಕಟರಾಯರ ಜೊತೆ ರಾಯರು ಈಶಾವಾಸ್ಯೋಪನಿಷತ್ತನ್ನು ಓದಿದರು; ಭಾಷ್ಯದ ಅಭಿಪ್ರಾಯವನ್ನು ಗ್ರಹಿಸಲು ಬಹಳ ಶ್ರಮಪಡುತ್ತಿದ್ದರು. ಒಂದು ಬಾರಿ ಓದಿ ಪೂರೈಸಿ ಒಂದೊಂದು ಮಂತ್ರದ ಭಾವಾರ್ಥವನ್ನೂ ಒಂದೊಂದು ಕಂದಪಠ್ಯದ ರೂಪದಲ್ಲಿಡಲು ಪ್ರಯತ್ನಿಸುತ್ತಿದ್ದರು. ಅಂತೂ ವೆಂಕಟರಾಯರ ಸ್ನೇಹದಿಂದ ಕ್ರಮಬದ್ಧವಾಗಿ ಆಹ್ನಿಕವನ್ನು ಮಾಡುವದು, ವೇದಾಂತವಿಚಾರವನ್ನು ಮಾಡುವದು-ಎರಡೂ ಮೈಗೂಡಿದವು. ಥಿಯಾಸಫಿಕಲ್‌ಸೊಸೈಟಿಯ ನೆಪದಿಂದ ಕೆಲವು ನೇಯ್ಗೆಯವರ ಪರಿಚಯವೂ ರಾಯರಿಗೆ ಆಯಿತು. ಅವರಲ್ಲಿ ಎಂ. ರಂಗಪ್ಪನವರೆಂಬುವರು ಮುಖ್ಯರಾದವರು. ಅವರೊಡನೆ ರಾಯರು ಆಗಾಗ್ಗೆ ವೇದಾಂತದ ವಿಷಯಕ್ಕೆ ಸಂಭಾಷಣೆಗಳನ್ನು ಮಾಡುತ್ತಿದ್ದರು. ರಂಗಪ್ಪನವರು ರಾಯರ ಸಹಾಯದಿಂದ ಅಪ್ಪರ್‌ಸೆಕೆಂಡರಿ ಪರೀಕ್ಷೆಗೆ ಸಿದ್ಧರಾಗಲು ಪ್ರಯತ್ನಿಸುತ್ತಿದ್ದರು. ರಾಯರು ಪಂಡಿತ ಪರೀಕ್ಷೆಯ ವ್ಯಾಸಂಗವನ್ನೂ ಮುಂದುವರಿಸಿದ್ದರು. ಅಮಲ್ದಾರ್ ಶ್ರೀ ಚೆನ್ನಕೇಶವಯ್ಯನೆಂಬವರು ಏರ್ಪಡಿಸಿದ ಒಂದು ಚರ್ಚಾಕೂಟದಲ್ಲಿ ರಾಯರು ಒಂದು ಸಲ ಇಂಗ್ಲಿಷ್‌ನಲ್ಲಿ ಬೌದ್ಧ, ವೇದಾಂತ ಮತಗಳ ಹೋಲಿಕೆಯ ವಿಚಾರವಾಗಿ ಮಾತನಾಡಿದ್ದರಂತೆ. ಆಗ್ಗೆ ಇವರು ಉಪಯೋಗಿಸಿದ ಯುಕ್ತಿಗಳು ಅನೇಕರಿಗೆ ಮೆಚ್ಚಾದವಂತೆ.

ಇಷ್ಟರಲ್ಲಿಯೇ ರಾಯರಿಗೆ 15 ರೂ. ಸಂಬಳಕ್ಕೆ ಬಡತಿಯಾಯಿತು. ಇನ್‌ಸ್ಪೆಕ್ಟರ್ ಶಾಮರಾಯರೆಂಬುವರು ಬಂದಾಗ ರಾಯರ ಕೆಲಸವನ್ನು ನೋಡಿ ಬಹಳ ಮೆಚ್ಚಿದರು. ಸಿರಿಯಾಳನ ಕಥೆಯನ್ನು ಬಯಲಾಟಕ್ಕಾಗಿ ನಾಟಕ ರೂಪದಲ್ಲಿ ಆಗ್ಗೆ ರಾಯರು ಬರೆದುಕೊಟ್ಟಿದ್ದರು. ಅದರ ಅಭಿನಯದ ಸ್ವಲ್ಪಭಾಗವನ್ನು ಇನ್‌ಸ್ಪೆಕ್ಟರು ಒಂದುಸಲ ನೋಡಿದಾಗ ಅದರಲ್ಲಿದ್ದ

ಮಾತುಗಾರಿಕೆಯ ಬಗ್ಗೆ ತಮ್ಮ ಮೆಚ್ಚುಗೆಯನ್ನು ಸೂಚಿಸಿದರಂತೆ. ಮತ್ತೊಂದು ಸಂದರ್ಭದಲ್ಲಿ ನರಸಿಂಹಶಾಸ್ತ್ರಿಗಳೆಂಬ ವಿದ್ವಾಂಸರು ರಾಯರ ಮನೆಯಲ್ಲಿ ಬಂದು ಇಳಿದಿದ್ದರು. ಅವರು ರಾಯರಿಗೆ ಭಾಷ್ಯವನ್ನು ಓದುವಾಗ ತೊಡಕಾಗಿ ಕಂಡಿದ್ದ "ಕ್ಷುರಾದಿದ್ವಾರೈಃ" ಎಂಬ ತಪ್ಪನ್ನು ತಿದ್ದಿ "ಚಕ್ಷುರಾದಿದ್ವಾರೈಃ" ಎಂದು ಹೇಳಿಕೊಟ್ಟು ಉಪಕಾರಮಾಡಿದರಂತೆ. ಎರಡು ಮೂರು ದಿನಗಳು ಇದ್ದು ಅವರು ಮುಂದಕ್ಕೆ ಪ್ರಯಾಣ ಮಾಡಿದರು. ದೈವವಶಾತ್ ಅದೇ ದಿನ ರಾಯರ ಮಗುವಿನ ಕಾಲುಬಳೆಯು ಕಳೆದುಹೋಗಿದ್ದು ಯಾರೋ ಒಬ್ಬರ ಪ್ರೇರಣೆಯಿಂದ ವಿನಾಕಾರಣವಾಗಿ ರಾಯರು ಶಾಸ್ತ್ರಿಗಳಲ್ಲಿ ಸಂಶಯಪಟ್ಟು ಅವರನ್ನು ಹಿಂಬಾಲಿಸಿ ಕೇಳಿದರು. ಆಗ ಅವರು ಬಹಳ ನೊಂದುಕೊಂಡು 'ನಾನೇನೂ ಕಳ್ಳನಲ್ಲ'- ಎಂದು ತಮ್ಮ ಗಂಟನ್ನು ಬಿಚ್ಚಿತೋರಿಸಿದರು. ಆಗ ರಾಯರಿಗೆ ಬಹಳ ಪಶ್ಚಾತ್ತಾಪವಾಗಿ ಬ್ರಾಹ್ಮಣನನ್ನು ನಿಷ್ಕಾರಣವಾಗಿ ತೇಜೋವಧೆ ಮಾಡಿದೆನಲ್ಲ!-ಎಂದುಕೊಳ್ಳುತ್ತಿರುವಲ್ಲಿ ಹೆಡ್‌ಮಾಸ್ಟರು 'ಆದದ್ದು ಆಗಿಹೋಯಿತು ದುಃಖಪಡಬೇಡಿ, ಇದೊ, ನಿಮಗೆ ಹೊಸದುರ್ಗಕ್ಕೆ ವರ್ಗವಾಗಿದೆ'- ಎಂದು ತಿಳಿಸಿಬಿಟ್ಟರು. ರಾಯರಿಗೆ ವರ್ಗವಾದದ್ದು ರಂಗಪ್ಪನವರಿಗೆ ದುಃಖಕ್ಕೆ ಕಾರಣವಾಯಿತು. ಆದರೂ ರಾಯರು ಹೊರಡಲೇಬೇಕಾಯಿತಾದ್ದರಿಂದ ಅವರಿಗಾಗಿ ಒಂದು ಸತ್ಕಾರವನ್ನು ಊರಿನವರು ಏರ್ಪಡಿಸಿದರು. ಆ ಊರಿನಲ್ಲಿ ಬೇರೆಯ ತರಕಾರಿಗಳು ಸಿಗದೆ ನೀರುಳ್ಳಿಯೊಂದೇ ಪ್ರಧಾನತರಕಾರಿಯಾಗಿತ್ತು. ಸತ್ಕಾರಕೂಟದ ಸಂದರ್ಭದಲ್ಲಿ ವೆಂಕಟರಾಯರು 'ಶಾಸ್ತ್ರಿಗಳ ಎದುರಿಗೆ ನೀರುಳ್ಳಿ ಪಕೋಡವನ್ನು ತಿನ್ನಬಾರದು, ತೆಗೆಯಿರಿ' ಎಂದದ್ದು ರಾಯರಿಗೆ ಒಂದು ಉಪದೇಶವಾಗಿ ಪರಿಣಮಿಸಿತು. 'ಶಿಷ್ಟರಿಗೆ ತ್ಯಾಜ್ಯವಾದದ್ದನ್ನು ನಾನಾದರೂ ತಿನ್ನುವದೇಕೆ?" ಎಂದು ಅಂದಿನಿಂದ ನೀರುಳ್ಳಿಯನ್ನು ತಿನ್ನುವದನ್ನು ಬಿಟ್ಟೇಬಿಟ್ಟರು. ಈ ಸಮಾರಂಭದ ಅನಂತರ ರಾಯರು ಹೊಸದುರ್ಗಕ್ಕೆ ಬಂದರು.

### ಹೊಸದುರ್ಗದಲ್ಲಿ :

ರಾಯರು ಇಲ್ಲಿ ಶಿವರಾಮಯ್ಯನವರೆಂಬ ಹೆಡ್‌ಮಾಸ್ಟರ ಸ್ಥಾನಕ್ಕೆ ವರ್ಗವಾಗಿಬಂದಿದ್ದರು. ಆಗ ಶಿವರಾಮಯ್ಯನವರು ಯಾರಿಗೂ ತಿಳಿಯಿಸದೆ ಇದ್ದಕ್ಕಿದ್ದಂತೆ ಕಾಶೀಯಾತ್ರೆಗೆ ಹೋಗಿದ್ದರು. ಅವರ ಹೆಂಡತಿಯು ಊರಲ್ಲೇ ಇದ್ದು ಸ್ಕೂಲಿನ ಜವಾನನ ಮೂಲಕ ಆಡಳಿತವನ್ನು ನೋಡಿಕೊಳ್ಳುತ್ತಿದ್ದರು. ಮೊಳಕಾಲ್ಮುರುವಿನ ವೆಂಕಟರಾಯರಿಗೆ ಶಿವರಾಮಯ್ಯನವರು ಸಂಬಂಧಿಗಳಾಗಿದ್ದರು. ಆದ್ದರಿಂದ ರಾಯರು ಸ್ಕೂಲುಛಾರ್ಜನ್ನು ತೆಗೆದುಕೊಳ್ಳುವಾಗ ಎಚ್ಚರಿಕೆಯಿಂದಲೇ ಸ್ವೀಕರಿಸಿ ಯಾವ ಹೆಚ್ಚು ಕಡಿಮೆಯೂ ಶಿವರಾಮಯ್ಯನವರಿಂದ ಆಗಿಲ್ಲವೆಂತ ವೆಂಕಟರಾಯರಿಗೆ ಪತ್ರ ಮೂಲಕವಾಗಿ ತಿಳಿಸಿದರು. ಶಿವರಾಮಯ್ಯನವರು ಬಹಳ ಒಳ್ಳೆಯವರು, ಅಧ್ಯಯನ ಸಂಪನ್ನರು. ರಾಯರು ಹೊಸ ಅಧಿಕಾರವನ್ನು ಸ್ವೀಕರಿಸಿದಾಗ ಅವರು ಊರಲ್ಲಿಲ್ಲದುದು ಮಾತ್ರ ರಾಯರಿಗೆ ಪೇಚಾಟಕ್ಕೆ ಕಾರಣವಾಗಿತ್ತು. ಆದರೂ ಸ್ಕೂಲು ಜವಾನನು ಬುದ್ಧಿವಂತನಾಗಿದ್ದರಿಂದಲೂ ಉಳಿದವರ ಸಹಕಾರದಿಂದಲೂ ಸುಲಭವಾಗಿ

ರಾಯರು ಹೆಡ್‌ಮಾಸ್ಟರ್‌ಪದವಿಯ ಕೆಲಸಕಾರ್ಯಗಳನ್ನು ನಿರ್ವಹಿಸಲು ಸಾಧ್ಯವಾಯಿತು. ಹೊಸಕೆರೆ ಚಿದಂಬರಯ್ಯನವರು ಆಗ್ಗೆ ರಾಯರಿಗೆ ಕಡೂರಿನಿಂದ ಅಭಿನಂದನಪತ್ರವನ್ನು ಬರೆದು ಕೆಲವು ತಿಳಿವಳಿಕೆಗಳನ್ನೂ ನೀಡಿದ್ದರು. ರಾಯರು ತಮ್ಮ ಕರ್ತವ್ಯವನ್ನು ಮಾಡಿಕೊಂಡು ಮನೆಯಲ್ಲಿ ಎರಡು ಹೊತ್ತು ಸ್ನಾನ, ಪೂಜೆ, ಶಿವಸ್ತೋತ್ರಪಠನ- ಇತ್ಯಾದಿಗಳನ್ನು ಮಾಡುತ್ತಾ ಕಾಲವನ್ನು ಕಳೆಯುತ್ತಿದ್ದರು. ಈ ನಡುವೆ ರಾಯರಿಗೆ ಪುತ್ರವಿಯೋಗ ದುಃಖವು ಬಂದೊದಗಿತು. ಹೊಸದಾಗಿ ಒದಗಿದ ಆ ದುಃಖದಿಂದ ರಾಯರು ತಪ್ತರಾಗಿರುವಲ್ಲಿ ಆ ಊರಿನ ಜೋಯಿಸರು ಸಮಾಧಾನಗೊಳಿಸಿದರು. ಆದರೂ ಈ ಬೇಜಾರಿನಿಂದ ರಾಯರು ಊರು ಬಿಡಬೇಕೆಂದಿರುವಲ್ಲಿ ಪುನಃ ಎರಡನೆಯ ಬಾರಿಗೆ ರಾಯರಿಗೆ ಹೊಳಲ್ಕೆರೆಗೆ ವರ್ಗವಾಯಿತು.

## ಹೊಳಲ್ಕೆರೆ (1906-1909) :

ಈ ಬಾರಿ ರಾಯರು ಹೊಳಲ್ಕೆರೆಗೆ ಬಂದಾಗ ಹಿಂದೆ ಇದ್ದ ಕೆಲವರು ಮಾಸ್ಟರುಗಳೂ ಇದ್ದರು. ಅವರೆಲ್ಲರೂ ರಾಯರ ಆಗಮನದಿಂದ ಸಂತೋಷವನ್ನೇ ಹೊಂದಿದರು. ರಾಯರು ಆಗಾಗ್ಗೆ ಸತ್ಯನಾರಾಯಣವ್ರತವನ್ನು ಮಾಡುವ ಪದ್ಧತಿಯನ್ನಿಟ್ಟುಕೊಂಡಿದ್ದರು. ಒಂದು ಸಲ ವ್ರತವನ್ನು ಮಾಡಿಸಲು ಆ ಊರಿನ ವೈದಿಕವೃದ್ಧರಾದ ಜೀವಣದೀಕ್ಷಿತರೆಂಬುವರನ್ನು ಆಹ್ವಾನಿಸಿದರು. ಅವರಿಗೂ ರಾಯರಿಗೂ ಅಲ್ಲಿಂದ ಪರಿಚಯವು ಪ್ರಾರಂಭವಾಯಿತು. ಜೀವಣದೀಕ್ಷಿತರು ಕರ್ಮಿಷ್ಠರಾದ ಶುದ್ಧವೈದಿಕ ಬ್ರಾಹ್ಮಣರು. ರಾಯರಿಗೆ ದೇವತಾರ್ಚನೆಯಲ್ಲಿ ವಹಿಸಬೇಕಾದ ಶ್ರದ್ಧೆ, ದ್ರವ್ಯಶುದ್ಧಿ, ಮಡಿಮೈಲಿಗೆ, ಮುಂತಾದ-ಆಚಾರಗಳ ವಿಷಯವಾಗಿ ತಿಳಿವಳಿಕೆಯನ್ನು ಕೊಡುತ್ತಿದ್ದರು. ರಾಯರಿಗೆ ಅವರಲ್ಲಿ ತಂದೆಯಲ್ಲಿರುವಷ್ಟು ಪೂಜ್ಯಭಾವನೆಯಿತ್ತು. ಜೀವಣದೀಕ್ಷಿತರಿಗೆ ದೇಶೀಯಚಳುವಳಿಯಲ್ಲೂ ಪ್ರೇಮವಿತ್ತು. ರಾಯರಿಗೆ ವೇದಾಂತದಲ್ಲಿ ಆಸಕ್ತಿಯಿರುವದನ್ನು ತಿಳಿದು ದೀಕ್ಷಿತರು ಪಂಚದಶಿಯ ಕೆಲವು ಹಾಳೆಗಳನ್ನು ಕೊಟ್ಟರು. ಇದರಿಂದ ರಾಯರಿಗೆ ದೀಕ್ಷಿತರ ಸಹವಾಸದಿಂದ ಹೆಚ್ಚು ಲಾಭವಿದೆ-ಎಂದು ಮನವರಿಕೆಯಾಯಿತು. ಇದೇ ಸಂದರ್ಭದಲ್ಲಿ ರಾಯರಿಗೂ ಶ್ರೀ ಚಿದಂಬರಯ್ಯನವರಿಗೂ ಸಂಪರ್ಕವು ಹೆಚ್ಚಾಗಿ ಬೆಳೆಯುತ್ತಾ ಬಂತು. ಸ್ಕೂಲುವ್ಯವಹಾರದಲ್ಲೂ ವೇದಾಂತ ವಿಚಾರದಲ್ಲಿಯೂ ಇಬ್ಬರು ಪರಸ್ಪರವಾಗಿ ಸಹಕರಿಸಲಾರಂಭಿಸಿದರು. ಕೆಲವು ದಿನಗಳ ಅನಂತರ ಚಿದಂಬರಯ್ಯನವರಿಗೆ ಪತ್ನೀವಿಯೋಗವಾಯಿತು. ಅದು ಇಬ್ಬರ ಸಮಾಗಮವೂ ಹೆಚ್ಚುಹೆಚ್ಚಾಗಿ ಆಗಲು ನಿಮಿತ್ತವಾಯಿತು. ಇಬ್ಬರೂ ಪಂಚದಶಿಯನ್ನು ಓದಿದ್ದಲ್ಲದೆ 'ಗೀತಾತಾತ್ಪರ್ಯಬೋಧಿನೀ' ಎಂಬ ಶಂಕರಾನಂದೀಯ ವ್ಯಾಖ್ಯಾನಸಹಿತವಾಗಿ ಗೀತೆಯನ್ನೂ ಓದಿದರು. ಅದರಲ್ಲಿ 'ಸಂನ್ಯಸ್ಯ ಶ್ರವಣಂ ಕುರ್ಯಾತ್' ಎಂದು ಮತ್ತೆ ಮತ್ತೆ ಬರೆದಿದ್ದ ವಿಷಯವು ಚಿದಂಬರಯ್ಯನವರ ಮನಸ್ಸಿನಲ್ಲಿ ಸಂನ್ಯಾಸವನ್ನು ತೆಗೆದುಕೊಳ್ಳಬೇಕೆಂಬ ಒಲವನ್ನು ಉಂಟುಮಾಡಿತಂತೆ. ಮುಂದೆ ಇಬ್ಬರೂ ಹುಬ್ಬಳ್ಳಿಗೆ ಶಂಕರಜಯಂತೀ ಉತ್ಸವಕ್ಕಾಗಿ ಹೋಗಿದ್ದರು. ಅಲ್ಲಿ ಹಳೆ ಹುಬ್ಬಳ್ಳಿಯಲ್ಲಿ ಸುಪ್ರಸಿದ್ಧ ವೇದಾಂತ ವಿದ್ವಾಂಸರೂ ಕರ್ಮನಿಷ್ಠರೂ

ಆಗಿದ್ದ ಶ್ರೀ ವಿರೂಪಾಕ್ಷಶಾಸ್ತ್ರಿಗಳೆಂಬುವರ ಮನೆಯಲ್ಲಿ ಅವರಿಬ್ಬರೂ ಇಳಿದಿದ್ದರು. ಶಾಸ್ತ್ರಿಗಳವರು ಇವರುಗಳನ್ನು ಆದರದಿಂದ ಬರಮಾಡಿಕೊಂಡು ಸತ್ಕರಿಸಿದರು. ಅವರ ಸಹವಾಸದಿಂದ ರಾಯರಿಗೆ ಆಧ್ಯಾತ್ಮಿಕದೃಷ್ಟಿಯ ಒಲವು ಹೆಚ್ಚಾಗಿ ಉಂಟಾಯಿತು. ಆಗ್ಗೆ ಶಾಸ್ತ್ರಿಗಳ ಮನೆಯಲ್ಲಿದ್ದ ಉತ್ತರ ದೇಶದ ಒಬ್ಬ ಬಾಲಬ್ರಹ್ಮಚಾರಿಯು ಪ್ರಾಣಾಯಾಮಾದಿ ಸಾಧನಗಳಲ್ಲಿ ವ್ಯಗ್ರನಾಗಿದ್ದುದನ್ನು ನೋಡಿ ರಾಯರಿಗೆ "ನನಗೆ ಇನ್ನೂ ವೈರಾಗ್ಯವುಂಟಾಗಲಿಲ್ಲವಲ್ಲ!" ಎನ್ನಿಸಿತಂತೆ. ಒಂದು ದಿನ ಸಂಜೆ ಶ್ರೀ ಶಾಸ್ತ್ರಿಗಳು ರಾಯರಿಗೆ ಹುಬ್ಬಳ್ಳಿಯ ಪ್ರಸಿದ್ಧ ಆರೂಢರ (ಸಿದ್ಧಾರೂಢರ) ದರ್ಶನವನ್ನು ಮಾಡಿಸಿದರು. ಆರೂಢರ ದರ್ಶನವು ರಾಯರಿಗೆ ಒಂದು ಅಪೂರ್ವ ಲಾಭವಾಗಿತ್ತು. ಆಶ್ರಮದ ಪರಿಚಯವನ್ನು ಮಾಡಿಕೊಂಡು ರಾಯರು ಅದೇ ಮಠದಲ್ಲಿದ್ದ ಆರೂಢರ ಪ್ರತಿಮೆಯನ್ನು ನೋಡಿ ಬೆರಗಾದರಂತೆ. ಅದು ಅವರೇ ಧ್ಯಾನಮಗ್ನರಾಗಿ ಕುಳಿತಿರುವರೊ! ಎನ್ನುವಷ್ಟು ಮಟ್ಟಿಗೆ ಅವರ ಪ್ರತಿಕೃತಿಯಾಗಿತ್ತು. ಅದೇ ಹುಬ್ಬಳ್ಳಿಯ ಶಂಕರಜಯಂತಿಯ ಸಂದರ್ಭದಲ್ಲೇ ರಾಯರು ವೇ|| ಹಾ. ವಿರೂಪಾಕ್ಷಶಾಸ್ತ್ರಿಗಳನ್ನು ಕಂಡು ಅವರ ಪ್ರವಚನಗಳನ್ನು ಕೇಳಿದರು. ಆದರೆ ಮುಂದೆ ಆ ಶಾಸ್ತ್ರಿಗಳ ಆಶೀರ್ವಾದಕ್ಕೇ ಪಾತ್ರರಾಗುವ ಯೋಗವು ತಮಗೆ ಇದೆಯೆಂದು ಆಗ್ಗೆ ಹೊಳೆದಿರಲಿಲ್ಲ; ಇರಲಿ. ರಾಯರು ಹುಬ್ಬಳ್ಳಿಯಿಂದ ಹಿಂತಿರುಗಿದ ಮೇಲೆ ಸ್ಕೂಲು ಕೆಲಸಗಳಲ್ಲಿ ಹೆಚ್ಚು ಉತ್ಸಾಹದಿಂದ ಮುಂದುವರಿಯತೊಡಗಿದರು. ಕಡೂರಿನಲ್ಲಿ ಚಿದಂಬರಯ್ಯನವರು ಉಪಾಧ್ಯಾಯರ ಸಂಘವೊಂದನ್ನು ಸ್ಥಾಪಿಸಿ ಉತ್ತಮ ರೀತಿಯಿಂದ ಕೆಲಸಮಾಡುತ್ತಾ ಆಗಿನ ಕಾಲಕ್ಕೆ ವಿದ್ಯಾಭ್ಯಾಸದ ಪ್ರದರ್ಶನವೊಂದನ್ನು ಏರ್ಪಡಿಸಿದ್ದರು. ರಾಯರು ಅದಕ್ಕೆ ಜಾಯಿಂಟ್ ಸೆಕ್ರೆಟರಿಗಳಾಗಿ ಕೆಲಸಮಾಡಿದರು. ಆ ಪ್ರದರ್ಶನದಲ್ಲಿ ಒಬ್ಬ ಹುಡುಗನು ಕಾಲು ಬೆರಳುಗಳಿಂದ ಪೆನ್ಸಿಲನ್ನು ಹಿಡಿದುಕೊಂಡು ವೇಗದಿಂದ ಬರೆಯುವ ಚಮತ್ಕಾರವನ್ನು ಪ್ರದರ್ಶಿಸಿದನು. ಅಂತೂ ಆ ಪ್ರದರ್ಶನವು ಯಶಸ್ವಿಯಾಗಿ ನಡೆಯಿತು. ಈ ರೀತಿ ಚಿದಂಬರಯ್ಯನವರ ಸಹವಾಸದಿಂದ ಸ್ಕೂಲು ಕೆಲಸದ ಉತ್ಸಾಹವು ಹೆಚ್ಚಿದ ಪರಿಣಾಮವಾಗಿ ಅನೇಕ ಹೊಸ ಮಾರ್ಪಾಡುಗಳನ್ನು ರಾಯರು ಮಾಡಿದ್ದು ಹೊಳಲ್ಕೆರೆಯ ಅನೇಕ ಅಸಿಸ್ಟೆಂಟ್ ಮಾಸ್ಟರುಗಳಿಗೆ ಸರಿಬೀಳದೆ ಅವರುಗಳು ಈ ಹೆಚ್ಚಿನ ಚಟುವಟಿಕೆಗಳನ್ನು ವಿರೋಧಿಸಿ ಮೇಲಧಿಕಾರಿಗಳಿಗೆ ರಾಯರ ವಿಷಯಕ್ಕೆ ದೂರಿನ ಅರ್ಜಿಯನ್ನು ಬರೆದು ಅದನ್ನು ಇನ್ಸ್‌ಪೆಕ್ಟರಿಗೆ ಕಳುಹಿಸುವಂತೆ ರಾಯರ ಕೈಗೇ ಕೊಟ್ಟರು. ಆದರೆ ಅದು ರಾಯರ ವಿಷಯಕ್ಕೆ ಶಿಫಾರಸು ಪತ್ರವೆಂಬಂತೆಯೇ ಇತ್ತು. ಆದ್ದರಿಂದ ರಾಯರು ಹೆದರದೆ ಮೇಲಧಿಕಾರಿಗಳಿಗೆ ಅದನ್ನು ರವಾನಿಸಿಯೇಬಿಟ್ಟರು. ಆ ಅರ್ಜಿಯು ವಿಚಾರಣೆ ಮಾಡಲ್ಪಟ್ಟು ತೀರ್ಮಾನವಾಗುವದರೊಳಗಾಗಿ ರಾಯರಿಗೆ ದಾವಣಗೆರೆಗೆ ವರ್ಗವಾಯಿತು. ಅರ್ಜಿಯ ಇತ್ಯರ್ಥದ ಬಗ್ಗೆ ರಾಯರು ಕೇಳಿಕೊಂಡರು. ಮೇಲಧಿಕಾರಿಗಳು ಅದಕ್ಕೂ ನಿಮ್ಮ ವರ್ಗಕ್ಕೂ ಸಂಬಂಧವಿಲ್ಲ- ಎಂದುಬಿಟ್ಟರಂತೆ. ಆ ವಿಷಯವು ಅಷ್ಟಕ್ಕೇ ನಿಂತಿತು.

ರಾಯರು ಹೊಳಲ್ಕೆರೆಯಲ್ಲಿದ್ದಾಗಲೇ-ಯಳ್ಳಂಬಳಸೆಯ ವೇ|| ಜೋಯಿಸ ಸುಬ್ಬಾಭಟ್ಟರು ತಮ್ಮ ಮಗನಾದ ಚಿ|| ಗುಂಡನನ್ನು (ಇವರು 'ವೇದಾಂತಶಿರೋಮಣಿ' ಇತ್ಯಾದಿ ಬಿರುದಾಂಕಿತ ಎಸ್.ವಿಠಲಶಾಸ್ತ್ರಿಗಳೆಂದು ಪ್ರಸಿದ್ಧರಾಗಿದ್ದರು) ಕರೆತಂದು ರಾಯರ ಮನೆಯಲ್ಲಿ ಬಿಟ್ಟರು. ಚಿ. ಗುಂಡನು ಕೆಲವು ದುಷ್ಟ ಹುಡುಗರ ಸಹವಾಸದಿಂದ ಇಸಪೀಟು ಆಟದಲ್ಲಿ ತೊಡಗಿದ್ದವನು ಮುಂದೆ ರಾಯರ ಸತ್ಸಹವಾಸದಿಂದ ಮತ್ತು ವಿದ್ಯಾದಾನದಿಂದ ಜಾಣನಾಗಿ ಸಂಸ್ಕೃತ ಲೋಯರ್‌ಸೆಕೆಂಡರಿ ಪ್ಯಾಸ್‌ಮಾಡಿದನು. ಅನಂತರ ಇಂಗ್ಲಿಷು ಲೋಯರ್ ಸೆಕೆಂಡರಿಯನ್ನೂ ಪ್ಯಾಸುಮಾಡಿ ಮುಂದೆ ಸಂಸ್ಕೃತಕಾಲೇಜಿಗೆ ಸೇರಿ ಓದಿದನು. ಈತನ ವಿಚಾರವು ಸದ್ಯಕ್ಕೆ ಸಾಕು. ಮುಂದೆ ಸಮಯವು ಬಂದಾಗ ಪ್ರಸ್ತಾಪಿಸೋಣ. ರಾಯರು ಹೊಳಲ್ಕೆರೆಯಲ್ಲಿದ್ದಾಗ ಮತ್ತೊಂದು ಘಟನೆಯು ನಡೆಯಿತು. ಅವರ ತಾಯಿಯವರು ಅಲ್ಲಿಗೆ ಬಂದಿದ್ದು ಕೆಲವು ದಿನಗಳಿದ್ದು ಮುಂದೆ ರಾಯರ ಅಣ್ಣನ ಮನೆಗೆ ಚಿಕ್ಕಮಗಳೂರಿಗೆ ಯೋಗಕ್ಷೇಮವನ್ನು ವಿಚಾರಿಸಲು ಹೋದವರು ಅಲ್ಲಿ ಪ್ಲೇಗು ಉಪದ್ರವವಿದ್ದುದರಿಂದ ಷೆಡ್‌ನಲ್ಲಿಯೇ ಕಾಲವಾದರು. ಅವರಿಗೇನೂ ಪ್ಲೇಗು ಅಂಟಿರಲಿಲ್ಲವಾದರೂ ಅನಿವಾರ್ಯ ಸಂದರ್ಭದಲ್ಲಿ ಮಗನ ಮನೆಯಲ್ಲಿ ಮಿತಿಮೀರಿ ಕೆಲಸ ಮಾಡಿದ್ದರಿಂದ ಶೀತವುಂಟಾಗಿ ಮೃತರಾಗಿದ್ದರು. ಗಂಡನ ಮತ್ತು ಮಕ್ಕಳ ಎದುರಿಗೆ ಮುತ್ತೈದೆಯಾಗಿ ಸ್ವರ್ಗಸ್ಥಳಾಗಿದ್ದಾಳೆ, ಪುಣ್ಯವಂತೆ!- ಎಂದು ಜನರು ಅಂದುಕೊಂಡರು. ರಾಯರೇ ಮೊದಲಾಗಿ ಮಕ್ಕಳೆಲ್ಲರೂ ಸೇರಿ ತಾಯಿಯ ಉತ್ತರಕ್ರಿಯೆಗಳನ್ನು ನಡೆಸಿದರು. ಅನಂತರ ಯಳ್ಳಂಬಳಸೆಗೆ ಬಂದು ಉಳಿದ ಕರ್ಮಾಂತರಗಳನ್ನು ಪೂರೈಸಿದರು. ಆಗ್ಗೆ ಕಡೂರಿನ ರಂಗಶಾಸ್ತ್ರಿಗಳೆಂಬವರು ಪ್ರವಚನ ಮಾಡಿದ ಗರುಡಪುರಾಣವನ್ನು ರಾಯರು ಮೊದಲ ಬಾರಿಗೆ ಕೇಳಿದರು. ಪಾಪಿಗಳಿಗೆ ಆಗುವ ನರಕ ಗತಿಯ ವರ್ಣನೆಯೂ ದ್ವಾದಶಾಕ್ಷರಚಿಂತಕರಿಗೆ ಪರಲೋಕದಲ್ಲುಂಟಾಗುವ ಸತ್ಫಲ ವಿಚಾರವೂ ರಾಯರ ಮನಸ್ಸಿನ ಮೇಲೆ ಉತ್ತಮಪರಿಣಾಮವನ್ನೇ ಉಂಟುಮಾಡಿದವು.

ರಾಯರಿಗೆ ಹೊಳಲ್ಕೆರೆಗೆ ವಾಪಸು ಬಂದನಂತರ ಹೆಚ್ಚು ಕಾಲ ಉಳಿಯಲು ಮನಸ್ಸಾಗಲಿಲ್ಲ. ಆ ನಡುವೆ ಮತ್ತೊಂದು ಪುತ್ರವಿಯೋಗ ದುಃಖವನ್ನು ರಾಯರು ಅನುಭವಿಸಿದರು. ಅನಂತರ 1907ನೇ ನವೆಂಬರ್‌ನಲ್ಲಿ ಅವರಿಗೆ ಒಂದು ಗಂಡುಮಗುವಾಯಿತು.* ಕಾರಣಾಂತರದಿಂದ ನಾಮಕರಣವನ್ನು ಮಾಡುವ ಸಂಪ್ರದಾಯವನ್ನು ಆಗತಾನೆ ನಿಲ್ಲಿಸಿದ್ದ ಹಿರಿಯರು ಆ ಮಗುವಿಗೆ ನಾಮಕರಣ ಮಾಡುವದಕ್ಕೆ ಅಂಜಿದರಾದರೂ ಜೀವಣದೀಕ್ಷಿತರ ಬೋಧನೆಯಿಂದ ಅವರನ್ನು ಸಮಾಧಾನಗೊಳಿಸಿ ರಾಯರು ಅರಸೀಕೆರೆಯಲ್ಲಿ ನಾಮಕರಣವನ್ನು ನೆರವೇರಿಸಿದರು. ನಾಮಕರಣ ಮಾಡದೆ ಇದ್ದ ಮಕ್ಕಳೂ ಸಾಯುವದು ಕಂಡು ಬಂದಿರುವುದರಿಂದ

---

* ಇವರೇ ಯ. ನರಸಪ್ಪ ಎಂಬ ನಾಮಧೇಯದಿಂದ ತಂದೆಯವರ ಕಾರ್ಯಗಳಲ್ಲಿ ಸಹಾಯಕರಾಗಿ ಸತತವಾದ ದುಡುಮೆಯಿಂದ ಕಾರ್ಯಾಲಯದ ಪುರೋಭಿವೃದ್ಧಿಗೆ ಅಡಿಗಲ್ಲಾಗಿದ್ದುಕೊಂಡು 1977 ರವರೆಗೂ ಸಂಸ್ಥೆಯ ಅಧ್ಯಕ್ಷರಾಗಿ ಸೇವೆಯನ್ನು ಸಲ್ಲಿಸಿದರು.

ಆ ಸಂಸ್ಕಾರಕ್ಕೂ ಮೃತ್ಯುವಿಗೂ ಏನೂ ಸಂಬಂಧವಿಲ್ಲವೆಂದು ರಾಯರು ಗುರುಹಿರಿಯರ ಬೋಧನೆಯಿಂದ ಅರಿತವರಾಗಿ ತಂದೆಯವರನ್ನು ಸಮಾಧಾನಗೊಳಿಸಿ ಕಾರ್ಯವನ್ನು ನಡೆಯಿಸಿದರಂತೆ. ಅನಂತರ ಕೆಲವೇ ದಿನಗಳಲ್ಲಿ ಅರಸೀಕೆರೆಯಲ್ಲಿ ಪ್ಲೇಗು ಕಾಣಿಸಿದ್ದರಿಂದ ಹೆಂಡತಿ ಮಕ್ಕಳನ್ನು ಹೊಳಲ್ಕೆರೆಗೆ ಕರೆದುಕೊಂಡು ಬಂದರು. ಮನೆಯಲ್ಲಿ ಅನೇಕ ಕಾರಣಗಳಿಂದ ಖರ್ಚು ಹೆಚ್ಚಾಗಿ ಹೆಂಡತಿಯ ಮೈಮೇಲಿದ್ದ ಒಂದು ಒಡವೆಯನ್ನು ಮಾರಲೇಬೇಕಾಗಿ ಬಂತು. ಅಂತೂ ಅನೇಕ ಬೇಜಾರುಗಳಿಂದ ರಾಯರಿಗೆ ಹೊಳಲ್ಕೆರೆ ವಾಸವು ಬೇಡವಾಗಿ ಬೆಂಗಳೂರಿಗಾಗಲಿ ದಾವಣಗೆರೆಗಾಗಲಿ ವರ್ಗಮಾಡಬೇಕೆಂದು ಕೇಳಿಕೊಂಡರು. ಆ ವೇಳೆಗೆ ಚಿದಂಬರಯ್ಯನವರಿಗೆ ದಾವಣಗೆರೆಗೆ ವರ್ಗವಾಗಿತ್ತು. ಅವರ ಸಹವಾಸವು ದೊರಕುವದೆಂಬ ಆಸೆಯಿಂದಲೇ ರಾಯರು ಆ ರೀತಿ ದಾವಣಗೆರೆಯನ್ನು ಕೇಳಿಕೊಂಡಿದ್ದರು.

ಹೊಳಲ್ಕೆರೆಯಲ್ಲಿದ್ದಾಗಿನ ಮತ್ತೊಂದು ವೃತ್ತಾಂತವನ್ನು ಹೇಳಿ ಮುಂದುವರಿಯೋಣ. ರಾಯರು ಜೀವಣದೀಕ್ಷಿತರಿಂದ ಅನೇಕ ವಿಷಯಗಳನ್ನು ಕಲಿತುಕೊಂಡದ್ದರ ಜೊತೆಗೆ ಜೀವಣದೀಕ್ಷಿತರು ಭಾಷ್ಯಶಾಂತಿಯನ್ನು ಮಾಡಿಕೊಂಡು ವೇದಾಂತ ಗ್ರಂಥಗಳನ್ನು ಕ್ರಮವಾಗಿ ಓದಬೇಕೆಂದು ಆಗಿಂದಾಗ್ಗೆ ಹೇಳುತ್ತಿದ್ದರು. ಅವರ ಜೊತೆ ರಾಯರ ಮನೆಗೆ ಬರುತ್ತಿದ್ದ ರಂಗಣ್ಣನವರಿಗೆ ರಾಯರು ಸ್ಕೂಲಿನ ಒಂದು ಕಂಟ್ರಾಕ್ಟು ಕೆಲಸವನ್ನು ಕೊಡಿಸಿದ್ದರಿಂದ ಅವರು ಬಹಳ ತೃಪ್ತರಾಗಿ ರಾಯರಿಗೆ ಏನಾದರೂ ಪ್ರತ್ಯುಪಕಾರ ಮಾಡಬೇಕೆಂಬ ಆಶೆಯಿಂದ ರಾಯರ ವೇದಾಂತವಿಚಾರಾಸಕ್ತಿಯನ್ನು ಸಹ ಕಂಡು ರತ್ನಪ್ರಭಾ, ಭಾಮತೀ, ನ್ಯಾಯನಿರ್ಣಯವ್ಯಾಖ್ಯಾನ ಸಮೇತವಾದ ದೇವನಾಗರೀ ಲಿಪಿಯಲ್ಲಿರುವ ಬ್ರಹ್ಮಸೂತ್ರಭಾಷ್ಯ ಗ್ರಂಥವೊಂದನ್ನು ಬಹುಮಾನವಾಗಿ ತರಿಸಿಕೊಟ್ಟರು. ರಾಯರ ಸಂತೋಷಕ್ಕೆ ಪಾರವೇ ಇಲ್ಲ. ದಿನವೂ ಅದನ್ನು ನೋಡುವದು, 'ಕ್ರಮವಾಗಿ ಭಾಷ್ಯಶಾಂತಿಯನ್ನು ಮಾಡಿಕೊಂಡು ಎಂದಿಗೆ ಇದನ್ನು ಓದಿಯೇನೊ!' ಎಂದು ಹಂಬಲಿಸುವದು - ಇವು ನಿತ್ಯಾಹ್ನಿಕವಾದವು. ಜೀವಣದೀಕ್ಷಿತರು 'ಹಾನಗಲ್ಲು ಸೀತಾರಾಮಶಾಸ್ತ್ರಿಗಳೆಂಬ ವೈದಿಕ ಶಿಷ್ಟಾಚಾರ ಸಂಪನ್ನರಾದ ವಿದ್ವಾಂಸರೊಬ್ಬರಿದ್ದಾರೆ. ಅವರಲ್ಲಿ ಭಾಷ್ಯಶಾಂತಿಯನ್ನು ಮಾಡಿಕೊಳ್ಳಿರಿ' ಎಂದು ತಿಳಿಸಿದರು. ಶ್ರೀ ಸೀತಾರಾಮಶಾಸ್ತ್ರಿಗಳು ನಂಜನಗೂಡಿನ ಕಡೆಗೆ ಹೋಗುವಾಗ ಯಳ್ಳಂಬಳಸೆಗೆ ಅವರನ್ನು ಬರಮಾಡಿಕೊಂಡು ಭೇಟಿಮಾಡಲು ರಾಯರು ಪ್ರಯತ್ನಿಸಿದರು. ಊರಿನಲ್ಲಿ ಚಿದಂಬರಯ್ಯನವರೊಡನೆ ಐತರೇಯ ಭಾಷ್ಯವನ್ನು ಓದುತ್ತಾ ಅವರನ್ನು ನಿರೀಕ್ಷಿಸುತ್ತಿದ್ದರು. ಆದರೂ ಆ ಶಾಸ್ತ್ರಿಗಳ ದರ್ಶನವು ರಾಯರಿಗೆ ಆಗ್ಗೆ ಲಭಿಸಲಿಲ್ಲ. ಹೀಗೆ ವೇದಾಂತಾಭ್ಯಾಸದ ಹಂಬಲ ಹೆಚ್ಚಿದಂತೆಲ್ಲ ಎಫ್.ಎ. ಪರೀಕ್ಷೆಯ ಹಂಬಲ ಕಡಿಮೆಯಾಯಿತು. ಆದರೆ ಅದಕ್ಕಾಗಿ ಮಾಡಿದ ಪ್ರಯತ್ನವು ಮಾತ್ರ ವ್ಯರ್ಥವಾಗದೆ ರಾಯರಿಗೆ ಇಂಗ್ಲಿಷು ಭಾಷೆಯಲ್ಲಿ ಹೆಚ್ಚಿನ ಪ್ರಾವೀಣ್ಯವನ್ನು ಉಂಟುಮಾಡಿತು. ಅಂತೂ ರಾಯರು ಹೊಳಲ್ಕೆರೆಯನ್ನು ಬಿಡುವ ಕಾಲವು ಬಂದಿತು.

# ೬. ಭಾಷ್ಯಶಾಂತಿಪಾಠಮಹೋತ್ಸವ
## (1909-11)

ಹೊಳಲ್ಕೆರೆಯಿಂದ ದಾವಣಗೆರೆಗೆ ವರ್ಗಕ್ಕೆ ಪ್ರಯತ್ನ ಮಾಡಿದಮೇಲೂ ರಾಯರಿಗೆ ಆರ್ಡರು ಬರುವದಕ್ಕೆ ಕೆಲವು ತಿಂಗಳುಕಾಲ ಹಿಡಿಯಿತು. ಹೊಳಲ್ಕೆರೆಯ ಅಸಿಸ್ಟೆಂಟ್‌ಮಾಸ್ತರುಗಳ ಅರ್ಜಿ ಇತ್ಯರ್ಥವಾಗುವವರೆಗೂ ಅಲ್ಲಿರಬೇಕೆಂದು ರಾಯರು ಬಯಸಿದ್ದರು; ಆದರೆ ಅದೇನೂ ನಡೆಯಲಿಲ್ಲ. ವರ್ಗದ ಆರ್ಡರು ಬಂತು; ದಾವಣಗೆರೆಗೆ ಹೊರಡಬೇಕಾಯಿತು. ಈ ಬಾರಿ ರಾಯರು ಒಬ್ಬರೇ ದಾವಣಗೆರೆಗೆ ಹೊರಟರು. ಅಲ್ಲಿ ಚಿದಂಬರಯ್ಯನವರು ಊಟ ಮಾಡುತ್ತಿದ್ದ ಒಬ್ಬರ ಮನೆಯಲ್ಲಿ ಇವರೂ ಸದ್ಯಕ್ಕೆ ಸೇರಿಕೊಂಡರು. ಊರಿಗೆ ಯಾವಾಗಲೋ ಹೋಗಿದ್ದ ಸಂದರ್ಭದಲ್ಲಿ ಕಡೂರಿನಿಂದ ತಂದಿದ್ದ ಬೃಹದಾರಣ್ಯಕ ಭಾಷ್ಯವು ರಾಯರಲ್ಲಿತ್ತು. ಮತ್ತು ಅಲ್ಲಿ ಆಗತಾನೆ ಸಂಸ್ಕೃತ ವಿದ್ಯಾಭ್ಯಾಸವನ್ನು ಮುಗಿಸಿಕೊಂಡು ಬಂದಿದ್ದ ಕೆಲವು ಹುಡುಗರಿಂದ ರಾಯರಿಗೆ 'ಸಿದ್ಧಾಂತಕೌಮುದೀ' ಗ್ರಂಥಕ್ಕೆ 'ಬಾಲಮನೋರಮಾ' ಎಂಬ ವ್ಯಾಖ್ಯಾನವು ಭಾಗಭಾಗವಾಗಿ ಅಚ್ಚಾಗುತ್ತಿರುವದೂ ತಿಳಿಯಿತು. ಅದನ್ನು ತರಿಸಿಕೊಂಡು ಈಗ ವ್ಯಾಕರಣ ಹಾಗೂ ವೇದಾಂತ ಕಾಲಕ್ಷೇಪವನ್ನು ಪ್ರಾರಂಭಿಸಿದರು. ಪ್ರತಿದಿನವೂ ಸ್ನಾನಮಾಡಿ ಆಹ್ನಿಕ ಮಾಡಿಕೊಂಡು ಒಂದು ಗೋಡೆಗೆ ಶಂಕರಾಚಾರ್ಯರ ಪಟವನ್ನು ತಗಲುಹಾಕಿ ಅದರ ಕೆಳಗೆ ಕುಳಿತುಕೊಂಡು ಭಾಷ್ಯವನ್ನು ಓದುತ್ತಿದ್ದರು. ಹಾಗೆ ಮಾಡಿದರೆ ಶಂಕರರ ಅನುಗ್ರಹದಿಂದ ಭಾಷ್ಯವು ಚೆನ್ನಾಗಿ ಅರ್ಥವಾಗುವದೆಂದು ರಾಯರಿಗೆ ನಂಬಿಕೆಯಿತ್ತು.

### ದಾವಣಗೆರೆ ಎ. ವಿ. ಸ್ಕೂಲು :

ಶ್ರೀ ಚಿದಂಬರಯ್ಯನವರ ಆಗಮನದಿಂದ ದಾವಣಗೆರೆ ಎ. ವಿ. ಸ್ಕೂಲು ಹಿಂದಿನ ಹೆಡ್‌ಮಾಸ್ತರ ಕಾಲಕ್ಕಿಂತ ಸ್ವಲ್ಪ ಮಾರ್ಪಾಡಾಗಿತ್ತು. ಇಂಗ್ಲಿಷು ಅಸಿಸ್ಟೆಂಟ್ ಮಾಸ್ತರನ್ನು ಆಗ್ಗೆ 'ಇಂಗ್ಲಿಷು ಹೆಡ್‌ಮಾಸ್ತರು' ಎಂದು ಅಲ್ಲಿಯವರು ಕರೆಯುತ್ತಿದ್ದರು. ಆದ್ದರಿಂದ ವ್ಯವಹಾರ ದೃಷ್ಟಿಯಿಂದ ರಾಯರೂ ಹೆಡ್‌ಮಾಸ್ತರೇ ಆದರು. ರಾಯರು ಅನೇಕ ವಿಷಯಗಳಲ್ಲಿ ಚಿದಂಬರಯ್ಯನವರನ್ನು ಅನುಸರಿಸುತ್ತಿದ್ದರು. ಆಗಾಗ್ಗೆ ಹತ್ತಿರದಲ್ಲಿದ್ದ ಹರಿಹರಕ್ಕೆ ಹೋಗಿ ನದಿಯಲ್ಲಿ ಸ್ನಾನಮಾಡಿಕೊಂಡು ಹರಿಹರೇಶ್ವರನ ದರ್ಶನವನ್ನು ಮಾಡಿಕೊಂಡು ಬರುತ್ತಿದ್ದರು.

### ಮಹಾಭಾಗವತರ ದರ್ಶನ :

ಒಂದ ದಿನ ರಾಯರು ನದೀಸ್ನಾನಕ್ಕೆ ಹರಿಹರಕ್ಕೆ ಹೋದಾಗ ಮಾಗಳದ ರಂಗರಾಯರು ಅಲ್ಲೇ ಇದ್ದಾರೆಂದು ತಿಳಿದು ರಾಯರು ನದಿಯ ಹತ್ತಿರವೇ ಇದ್ದ ಅವರ ಮನೆಗೆ ಹೋದರು. ಈಗ ಅವರು ಬಹಳ ಮಾರ್ಪಾಡಾಗಿದ್ದರು. ಬೆಳಗಿನ ಜಾವದಲ್ಲಿಯೇ ಎದ್ದು ಸ್ನಾನವನ್ನು ಮಾಡಿ ಊರ್ಧ್ವಪುಂಡ್ರವನ್ನು ಧರಿಸಿದ್ದರು; ಕೊರಳಲ್ಲಿ ತುಳಸೀಮಣಿಯನ್ನು ಧರಿಸಿದ್ದರು.

ಅವರ ಮುಖವೂ ಅಧ್ಯಾತ್ಮ ಸಾಧನದಿಂದ ಕಳೆಯೇರಿತ್ತು. 'ಇದೇನು ಹೀಗೆ?' ಎಂದು ರಾಯರು ಕೇಳಲಾಗಿ ಅವರು **ಕುರ್ತುಕೋಟಿಯ ಮಹಾಭಾಗವತರು, ಬೆಳಧಡಿಯ ಬ್ರಹ್ಮಾನಂದರು**, ಅವರ ಗುರುಗಳಾದ **ಗೋಂದಾವಳಿಯ ಶ್ರೀ ಬ್ರಹ್ಮಚೈತನ್ಯ ಮಹಾರಾಜರವರು**- ಇವರುಗಳು ರಾಮನಾಮದ ಭಜನೆ, ಜಪ-ಇವುಗಳ ಪ್ರಚಾರವನ್ನು ಮಾಡುತ್ತಿರುವದನ್ನು ರಾಯರ ಕಿವಿಗೆ ಹಾಕಿದರು. ಸಂಜೀವರಾಯರೆಂಬ ಮತ್ತೊಬ್ಬರೂ ಇದೇ ರೀತಿಯ ಮಾರ್ಪಾಡಾಗಿದ್ದುದು ಕಂಡುಬಂತು. ರಂಗರಾಯರು ಪ್ರಸ್ತಾವ ಕ್ರಮದಿಂದ "ಯಜ್ಞದ ವಿಷಯದಲ್ಲಿ ನಿಮ್ಮ ಅಭಿಪ್ರಾಯವೇನು ?" ಎಂದು ರಾಯರನ್ನು ಕೇಳಲಾಗಿ 'ಹಾಗೆಂದರೇನು? ಶಾಸ್ತ್ರೋಕ್ತವಾದ್ದರಿಂದ ಅದು ಬ್ರಾಹ್ಮಣನಿಗೆ ಕರ್ತವ್ಯವೇ ಸರಿ' ಎಂದರು. ಆಗ ರಂಗರಾಯರು "ನಮ್ಮ ಭಾಗವತರೂ ಅವರ ಗುರುಗಳಾದ ಮಹಾರಾಜರೂ ಯಜ್ಞಪಶುವಿನ ಮೈಮೇಲಿರುವಷ್ಟು ಕೂದಲು ಸಂಖ್ಯೆಯ ಬ್ರಾಹ್ಮಣರಿಗೆ ಅನ್ನದಾನ ಮಾಡಬೇಕು. ಮಂತ್ರಮಹಿಮೆಯಿಂದ ಯಜ್ಞಪಶುವನ್ನು ಸಂಜೀವನಗೊಳಿಸಬೇಕು; ಅದು ಸಾಧ್ಯವಿದ್ದವರು ಮಾತ್ರ ಯಜ್ಞವನ್ನು ಮಾಡಬಹುದು-ಎನ್ನುತ್ತಾರೆ" ಎಂದರು. ರಾಯರಿಗೆ ಭಾಗವತರಾಟ, ಭಾಗವತೈಕಾದಶೀ-ಎಂಬ ಸಂಬಂಧಗಳಿಂದ ಮಾತ್ರ 'ಭಾಗವತ' ಎಂಬ ಶಬ್ದವು ತಿಳಿದಿತ್ತು. ಮಹಾರಾಜರು ಎಂದರೆ ಮೈಸೂರು ಮಹಾರಾಜರೇ ಹೊರತು ಗುರುಗಳನ್ನು 'ಮಹಾರಾಜರು' ಎಂದು ಕರೆಯುವ ಪದ್ಧತಿಯಿದೆ ಎಂಬುದು ಗೊತ್ತೇ ಇರಲಿಲ್ಲ. ಈ ಭಾಗವತರು ಯಾರು? ಮಹಾರಾಜರು ಯಾರು? ವೇದವಿಹಿತವಾದ ಯಜ್ಞದ ವಿಷಯವಾಗಿ ಹೀಗೆಲ್ಲ ಹೇಳುವದಕ್ಕೆ ಇವರಿಗೇನು ಅಧಿಕಾರ?- ಎಂದು ಆಕ್ಷೇಪಿಸಿದರು. ರಂಗರಾಯರು "ಭಾಗವತರು ಇಲ್ಲಿಗೆ ಬರುತ್ತಿರುತ್ತಾರೆ, ಆಗ ನೀವೇ ಬಂದು ಕೇಳಿ ತಿಳಿದುಕೊಳ್ಳಿ" ಎಂದರು. ರಾಯರು ಆಗ್ಗೆ ಔದಾಸೀನ್ಯದಿಂದಲೇ 'ಆಗಲಿ' ಎಂದರಂತೆ.

ಕೆಲವು ದಿನಗಳಾದ ಬಳಿಕ ಮಹಾಭಾಗವತರು ಹರಿಹರಕ್ಕೆ ಬರುವ ಸಮಯವನ್ನು ರಂಗರಾಯರು ರಾಯರಿಗೆ ಕಾಗದ ಮುಖೇನ ತಿಳಿಸಿದರು. ಆ ಪತ್ರದಲ್ಲಿ His Holiness Sri Mahabhagavat ಎಂದು ಬರೆದಿದ್ದುದನ್ನು ನೋಡಿ 'ರಂಗರಾಯರಿಗೆ ಮಹಾಭಾಗವತರಲ್ಲಿ ಎಷ್ಟು ವಿಶ್ವಾಸ!' ಎಂದು ಕೊಂಡರು. ಈ ವಿಶೇಷಣವನ್ನು ಶೃಂಗೇರಿ ಜಗದ್ಗುರುಗಳಿಗೆ ಮಾತ್ರ ಉಪಯೋಗಿಸುತ್ತಿದ್ದುದು ರಾಯರಿಗೆ ತಿಳಿದಿತ್ತು. ಆದ್ದರಿಂದಲೇ ಅವರಿಗೆ ಆಶ್ಚರ್ಯವಾಯಿತು. ಚಿದಂಬರಯ್ಯನವರಿಗೂ ಮೇಲಿನ ವಿಷಯವನ್ನು ತಿಳಿಸಿ ರಾಯರು ಅವರೊಡನೆ ಹರಿಹರಕ್ಕೆ ಹೋದರು. ಸಾಯಂಕಾಲ ಸಂಧ್ಯಾವಂದನೆಯನ್ನು ಮಾಡಿದ ಅನಂತರ ರಂಗರಾಯರ ಮನೆಗೆ ಹೋದರು. ಅಷ್ಟುಹೊತ್ತಿಗೆ ಭಾಗವತರು ಅಲ್ಲಿಗೆ ಬಂದಿದ್ದರು. ನಮಸ್ಕಾರ ಮಾಡಿದವರನ್ನೆಲ್ಲ 'ಸಂಧ್ಯಾವಂದನೆಯಾಯಿತೊ?' ಎಂದು ಅವರು ಕೇಳುತ್ತಿದ್ದುದು ರಾಯರಿಗೆ ಆಶ್ಚರ್ಯವಾಯಿತು. ಮಹಾಭಾಗವತರಾದರೋ ಬಹಳ ಸರಳಪ್ರಕೃತಿಯವರಾಗಿದ್ದರು. ಒಂದು ಪಂಚೆ ಉಟ್ಟು ಒಂದು ಪಂಚೆಯನ್ನು ಹೊದೆದು ಕೊಂಡಿದ್ದರು. ಇಷ್ಟೇ ಅವರ ಉಡುಪು. ಚಿದಂಬರಯ್ಯನವರು

ಗೋಂದಾವಳಿ ಮಹಾರಾಜರ ವಿಷಯವನ್ನು ಪ್ರಸ್ತಾಪಿಸಿ "ಅವರು ನಾಮಸ್ಮರಣೆಯನ್ನೇ ಮುಖ್ಯವಾಗಿ ಹೇಳುತ್ತಾರೆಂದು ಕೇಳಿದ್ದೇನೆ" ಎಂದರು. ಅದಕ್ಕೆ ಮಹಾಭಾಗವತರು "ಹಾಗೇನೂ ಇಲ್ಲ, ನಾಮಸ್ಮರಣೆಯನ್ನು ಎಲ್ಲರಿಗೂ ಹೇಳುತ್ತಾರೆ. ಅಧಿಕಾರಿಗಳಿಗೆ ತಕ್ಕಂತೆ ಯೋಗಾದಿಗಳನ್ನೂ ಹೇಳುತ್ತಾರೆ" ಎಂದರು. ಇದಾದಮೇಲೆ ರಾಮಮಂದಿರದಲ್ಲಿ ಭಜನೆಯಾಯಿತು. ಭಜನೆಗೆ ಮರಾಠಿ ಪದಗಳನ್ನೇ ಹೆಚ್ಚಾಗಿ ಉಪಯೋಗಿಸುತ್ತಿದ್ದರು. ಮಂಗಲಾರತಿಯಾಗುವಾಗ ದೇವರ ಬಳಿಯಿಂದ ಬೀದಿಯ ಬಾಗಿಲವರೆಗೂ ಸಾಲಾಗಿ ಕರ್ಪೂರಗಳನ್ನು ಹೊತ್ತಿಸಿದ್ದನ್ನು ನೋಡಿ ರಾಯರಿಗೆ 'ಇದೆಂಥ ಅತಿರೇಕದ ಭಕ್ತಿ!' ಎನ್ನಿಸಿತಂತೆ. ಅನಂತರ ರಂಗರಾಯರ ಮನೆಯಲ್ಲಿ ಎಲ್ಲರಿಗೂ ಊಟವಾಯಿತು. ಆ ಊಟವು ಬೀಗರಮನೆ ಬಿಸಿಲಡಿಗೆ ಊಟದಂತೆ ಇತ್ತು. ಊಟದ ಕಾಲಕ್ಕೆ ಮಹಾಭಾಗವತರು ಭಕ್ತಿಪರವಾದ ಮಾತುಗಳನ್ನಾಡುತ್ತಾ "ಮನುಷ್ಯನಿಗೆ ತಾನೇ ಸಕ್ಕರೆಯಾಗವದು ಇಷ್ಟವೊ? ಸಕ್ಕರೆಯನ್ನು ತಿನ್ನುವದು ಇಷ್ಟವೊ?" ಎಂದು ಮುಂತಾಗಿ ಕೆಲವು ದೃಷ್ಟಾಂತಗಳಿಂದ ಸಾಯುಜ್ಯ ಮುಕ್ತಿಗಿಂತ ಸಗುಣ ಪರಮೇಶ್ವರನ ಭಕ್ತಿಯ ಸುಖವನ್ನು ಅನುಭವಿಸುವದೇ ಮೇಲು-ಎಂಬ ಭಾವನೆ ಬರುವಂತೆ ಮಾತನಾಡಿದರು. ಚಿದಂಬರಯ್ಯನವರಿಗೂ ರಾಯರಿಗೂ ಮಹಾಭಾಗವತರಲ್ಲಿ ಯಾವದೋ ಒಂದು ಹೆಚ್ಚುಗಾರಿಕೆಯಿರುವಂತೆ ತೋರಿತು. ಗ್ರಂಥಜ್ಞಾನವನ್ನು ಪಡೆದ ಬಳಿಕ ಯೋಗಾದಿಗಳಿಂದ ಅನುಭವವನ್ನು ಹೊಂದಲು ಮಹಾಭಾಗವತರು ಬ್ರಹ್ಮಚೈತನ್ಯರ ಶಿಷ್ಯರಾಗಿರಬಹುದೆಂತ ಚಿದಂಬರಯ್ಯನವರ ಅಭಿಪ್ರಾಯವಿತ್ತು. ಮುಂದೆ ಮಹಾಭಾಗವತರು ಹರಿಹರಕ್ಕೆ ಬಂದಾಗಲೆಲ್ಲ ರಾಯರನ್ನೂ ಚಿದಂಬರಯ್ಯನವರನ್ನೂ ಕರೆಸಿಕೊಳ್ಳುತ್ತಿದ್ದರು. ಭಗವದ್ಗೀತಾಭಾಷ್ಯವೇ ಮುಂತಾದವುಗಳನ್ನು ಮುಂದೆ ಇಟ್ಟುಕೊಂಡು ಉಪಾಸನಾಪ್ರಧಾನವಾದ ನಿರೂಪಣಗಳನ್ನು ಮಾಡುತ್ತಿದ್ದರು. ಅವರಲ್ಲಿ ಶ್ರದ್ಧಾಭಕ್ತಿಗಳು ರಾಯರಿಗೆ ಮೆಲ್ಲ ಮೆಲ್ಲನೆ ಹೆಚ್ಚಿದವು.

### ಪಿತೃವಿಯೋಗ :

1910, 1911 ಈ ವರ್ಷಗಳಲ್ಲಿ ರಾಯರ ಜೀವನದಲ್ಲಿ ಬಹಳ ಮಾರ್ಪಾಡುಗಳಾದವು. ರಾಯರ ತಂದೆಯವರಿಗೆ ಅಸ್ವಸ್ಥತೆಯಾಗಿದೆಯೆಂತ ತಿಳಿದುಬಂದ ಕೂಡಲೆ ನೋಡಿಕೊಂಡು ಬರೋಣವೆಂತ ರಾಯರು ದಾವಣಗೆರೆಯಿಂದ ಯಲ್ಲಂಬಳಸೆಗೆ ಹೊರಟರು. ಇವರು ತಲುಪುವದರೊಳಗೆ ತಂದೆಯವರು ಸ್ವರ್ಗಸ್ಥರಾಗಿದ್ದು ಆ ದಿನವೇ ಶರೀರದಹನವೂ ಆಗಿಬಿಟ್ಟಿತ್ತು. ರಾಯರ ತಂದೆಯವರು ಯಾವಾಗಲೂ ಯಾವ ರೋಗವನ್ನೂ ಅನುಭವಿಸಿದವರೇ ಅಲ್ಲ. ಒಂದು ದಿನ ಜಗಲಿಯ ಮೇಲೆ ಕುಳಿತಿದ್ದವರು ಬೀದಿಯಲ್ಲಿ ಬಿದ್ದಿದ್ದ ಸಗಣೆಯ ತೊಪ್ಪೆಯನ್ನು ತೆಗೆದುಕೊಳ್ಳಬೇಕೆಂದು ತವಕದಿಂದ ಎದ್ದಾಗ ಕಾಲುಜಾರಿ ಬಿದ್ದರಂತೆ. ಜ್ವರಬಂದು ಎರಡು ಮೂರು ದಿನಗಳೊಳಗೇ ದೇಹವನ್ನು ಬಿಟ್ಟರಂತೆ. ಕೊನೆಯಬಾರಿಗೆ ಗಂಗಾಪ್ರಾಶನ ಮಾಡಿ ಕಣ್ಣು ಮುಚ್ಚಿದರಂತೆ. ಹುಡುಗರೆಲ್ಲ ಆಗ್ಗೆ ಭಜಗೋವಿಂದಸ್ತೋತ್ರವನ್ನು ಹೇಳುತ್ತಿದ್ದರಂತೆ.

ಅಂತೂ ರಾಯರಿಗೆ ತಂದೆಯವರ ಅಂತ್ಯಕಾಲದ ದರ್ಶನವೂ ದೊರೆಯಲಿಲ್ಲ. ಅಣ್ಣ ತಮ್ಮಂದಿರುಗಳೆಲ್ಲ ಸೇರಿ ಉತ್ಕೃಷ್ಟರೀತಿಯಿಂದ ತಂದೆಯವರ ಉತ್ತರಕರ್ಮಾದಿಗಳನ್ನು ನೆರವೇರಿಸಿದರು. ಕಡೂರು ರಂಗಶಾಸ್ತ್ರಿಗಳು ಗರುಡಪುರಾಣವನ್ನು ಹೇಳಿದರು. ಅವರಿಗೆ ದಕ್ಷಿಣೆಯೊಡನೆ ರಾಯರು ಶಂಕರಾನಂದೀಯ ಗೀತೆಯ ಪುಸ್ತಕವನ್ನು ಕೊಟ್ಟರು. ಮಾತಾಪಿತೃಗಳನ್ನಗಲಿದ ರಾಯರಿಗೆ ಸ್ವದೇಶದಿಂದ ಎಲ್ಲಿಗೋ ಗಡೀಪಾರಾದಂತೆ ಭಾಸವಾಯಿತಂತೆ. ಅನಂತರ ದಾವಣಗೆರೆಗೆ ಹಿಂತಿರುಗಿದರು.

## ಭಾಷ್ಯಶಾಂತಿಗೆ ಪ್ರಯತ್ನ :

ಮಹಾಭಾಗವತರು ಆಗಾಗ್ಗೆ ಹರಿಹರಕ್ಕೆ ಬರುತ್ತಿದ್ದರು. ರಾಯರಿಗೆ ಭಾಷ್ಯಶಾಂತಿಯನ್ನು ಮಾಡಿಕೊಳ್ಳುವದರಲ್ಲಿ ಆಸಕ್ತಿಯಿದೆ- ಎಂಬುದು ತಿಳಿದು ಅವರು 'ಶೃಂಗೇರಿ ಗುರುಗಳಲ್ಲಿಯೇ ಶಾಂತಿ ಮಾಡಿಕೊಳ್ಳಿರಿ'- ಎಂದು ಬುದ್ಧಿವಾದವನ್ನು ಹೇಳಿದರು. ಆದರೆ ಹಾನಗಲ್ಲು ಸೀತಾರಾಮಶಾಸ್ತ್ರಿಗಳ ಶಿಷ್ಯರಾದ ವೇ।। ವಿರೂಪಾಕ್ಷಶಾಸ್ತ್ರಿಗಳವರಲ್ಲಿಯೇ ಭಾಷ್ಯಶಾಂತಿಯನ್ನು ಮಾಡಿಕೊಳ್ಳಬೇಕೆಂದು ಇಷ್ಟು ಹೊತ್ತಿಗೆ ನಿಶ್ಚಯವಾಗಿತ್ತು. ಈ ನಿರ್ಣಯವನ್ನು ಬದಲಾಯಿಸುವದು ಹೇಗೆ?- ಎಂದು ರಾಯರು ಶಂಕೆಯನ್ನು ಒಡ್ಡಲಾಗಿ ಭಾಗವತರು "ಈ ವಿಷಯಕ್ಕೆ ಗುರುಗಳನ್ನು ತಂದೆಯನ್ನಾಗಿ ಮಾಡಿಕೊಳ್ಳಿರಿ, ವಿರೂಪಾಕ್ಷ ಶಾಸ್ತ್ರಿಗಳು ಅಣ್ಣನಾಗಲಿ, ಮುಂದೆ ಭಾಷ್ಯವನ್ನು ಅವರಲ್ಲಿಯೇ ಓದುವಿರಂತೆ" ಎಂದು ಸಮಾಧಾನವನ್ನು ಹೇಳಿದರು. ಇಷ್ಟರಲ್ಲೇ ಕಾಲಟಿಯಲ್ಲಿ ಶಂಕರಪ್ರತಿಷ್ಠೆಯಾಗಲಿರುವದೆಂದೂ ಅಲ್ಲೇ ಭಾಷ್ಯಶಾಂತಿಯುನ್ನು ಮಾಡಿಕೊಳ್ಳುವದು ಉತ್ತಮವೆಂದೂ ಭಾಗವತರು ಸೂಚಿಸಿದರು. ರಾಯರಿಗೂ ಚಿದಂಬರಯ್ಯನವರಿಗೂ ಇದು ಸೂಕ್ತವೆಂದು ತೋರಿತು. ಆದರೆ ರಾಯರ ತಂದೆಯವರು ಸ್ವರ್ಗಸ್ಥರಾಗಿ ಒಂದು ವರ್ಷವು ಕಳೆದಿರಲಿಲ್ಲವಾದ್ದರಿಂದ ಈ ಕಾರ್ಯವು ಈ ಕಾಲದಲ್ಲಿ ಆಗಬಹುದೆ?- ಎಂಬ ಸಂದೇಹ ಬಂತು. ಆಗ ಮಹಾಭಾಗವತರು ನೇರಾಗಿ ವೇ. ವಿರೂಪಾಕ್ಷಶಾಸ್ತ್ರಿಗಳಿಗೇ ಕಾಗದವನ್ನು ಬರೆಯಿಸಲಾಗಿ 'ಉತ್ಕಟೇಚ್ಛೆಯುಳ್ಳವರಾದರೆ ಈಗಲೇ ಆಗಲಿ!" ಎಂದು ಉತ್ತರವು ಬಂತು.

## ಬಿಟಗೇರಿ ಕೃಷ್ಣಶಾಸ್ತ್ರಿಗಳು:

ಭಾಷ್ಯಶಾಂತಿಯನ್ನು ರಾಯರು ಮಾಡಿಕೊಳ್ಳುವ ಸಂಕಲ್ಪಕ್ಕೆ ಈ ಮಹನೀಯರ ಪ್ರೋತ್ಸಾಹವೂ ಕಾರಣವಾಯಿತು. ಹೇಗೆಂದರೆ ರಾಯರು ಈ ಸಂದರ್ಭದಲ್ಲಿ ಹರಿಹರದಲ್ಲೇ ಸಂಸಾರಸಮೇತವಾಗಿಯೇ ವಾಸಮಾಡಿಕೊಂಡಿದ್ದರು. ದಾವಣಗೆರೆಯಲ್ಲಿ ಪ್ಲೇಗಿನ ಗಲಾಟೆಯಿದ್ದುದರಿಂದ ಸೀಸನ್ ಟಿಕೆಟ್‌ಪಡೆದುಕೊಂಡು ಸ್ಕೂಲಿಗೆ ಹೋಗಿಬರುತ್ತಿದ್ದರು. ಹರಿಹರವು ಕ್ಷೇತ್ರವಾದ್ದರಿಂದ ಅನೇಕ ಸಾಧುಗಳೂ ವೈದಿಕಶ್ರೇಷ್ಠರೂ ವಿದ್ವಾಂಸರೂ ಅಲ್ಲಿಗೆ

ಬಂದು ಹೋಗುತ್ತಿದ್ದರು. ಹಾಗೆಯೇ ಒಮ್ಮೆ ಬೆಟಗೇರಿ ಕೃಷ್ಣಶಾಸ್ತ್ರಿಗಳವರೂ ಅಲ್ಲಿಗೆ ಬಂದರು. ಈ ಮೊದಲೇ ಒಂದೆರಡು ಸಲ ಹರಿಹರಕ್ಕೆ ವಿರೂಪಾಕ್ಷಶಾಸ್ತ್ರಿಗಳು ಬಂದು ಹೋಗಿದ್ದರು. ರಾಯರು ಅವರ ಉಪನ್ಯಾಸಗಳನ್ನೂ ಕೇಳಿದ್ದರು. ಬ್ರ॥ ಶ್ರೀ॥ ಕೃಷ್ಣಶಾಸ್ತ್ರಿಗಳು ಕರ್ಮಶ್ರದ್ಧೆಯುಳ್ಳವರು; ಅವರ ವೇಷವು ತೀರ ಸಾಮಾನ್ಯವಾಗಿತ್ತು. ಕಸೆಅಂಗಿ, ರಾಮನಾಮವನ್ನು ಅಚ್ಚು ಮಾಡಿದ್ದ ರುಮಾಲು-ಇವುಗಳನ್ನು ಅವರು ಧರಿಸಿದ್ದರು. ಒಂದು ಹಸಿಬೆಯ ಚೀಲವೂ ಅವರಲ್ಲಿ ಇತ್ತು. ಸ್ವಲ್ಪ ಹೊತ್ತು ಮಾತನಾಡಿದ ಬಳಿಕ ಅವರೊಬ್ಬ ಗಣ್ಯ ಮಹನೀಯರೆಂಬುದು ರಾಯರಿಗೆ ಹೊಳೆಯಿತು. ಅವರಲ್ಲಿ ಭಾಷ್ಯಶಾಂತಿಯ ಪ್ರಸ್ತಾಪ ಮಾಡಿದ್ದರಲ್ಲಿ 'ಶೃಂಗೇರಿ ಗುರುಗಳಲ್ಲಿ ಶಾಂತಿಮಾಡಿಕೊಂಡು ವೇ॥ ವಿರೂಪಾಕ್ಷಶಾಸ್ತ್ರಿಗಳಲ್ಲಿ ಭಾಷ್ಯಪಾಠ ಮಾಡಿಕೊಳ್ಳುವದರಲ್ಲಿ ಅನೌಚಿತ್ಯವಿಲ್ಲ'- ಎಂದು ತಿಳಿಸಿದರು. ಮತ್ತು ತಾವು ಕಾಲಟಿಗೆ ಹೋಗುವದಾಗಿಯೂ ಜೊತೆಯಲ್ಲಿ ಬಂದರೆ ಭಾಷ್ಯಶಾಂತಿಯ ವಿಚಾರವನ್ನು ಗುರುಗಳಲ್ಲಿ ತಿಳಿಸಿ ಮಾಡಿಸಿಕೊಡುವದಾಗಿಯೂ ಅವರು ವಾಗ್ದಾನಮಾಡಿದ್ದಂತೂ ರಾಯರಿಗೆ ಬಹಳ ಸಂತೋಷಕ್ಕೆ ಕಾರಣವಾಯಿತು. 'ಮನಸ್ಸಿದ್ದಂತೆ ಮಹಾದೇವ'- ಎಂಬಂತೆ ಅನುಕೂಲಗಳೆಲ್ಲ ಒದಗಿಯೇಬಿಟ್ಟವು.

**ಕಾಲಟಿಗೆ ಪ್ರಯಾಣ :**

'ಶುಭಸ್ಯ ಶೀಘ್ರಂ' ಎಂಬಂತೆ ರಾಯರೂ ಚಿದಂಬರಯ್ಯನವರೂ ಕಾಲಟಿ ಪ್ರಯಾಣಕ್ಕೆ ಸಿದ್ಧರಾದರು. ಜೊತೆಗೆ ರಾಯರು ದಾವಣಗೆರೆಯಲ್ಲಿ ಊಟಮಾಡುತ್ತಿದ್ದ ಮನೆಯ ಲಕ್ಷ್ಮೀಬಾಯಿ ಎಂಬುವರ ತಮ್ಮನೂ ಹೊರಟನು. ಮೂವರೂ ಒಂದೇ ಸ್ಕೂಲಿನ ಉಪಾಧ್ಯಾಯರಾಗಿದ್ದುದರಿಂದ ಒಟ್ಟಿಗೆ ರಜಾ ಪಡೆಯುವದು ಸೂಕ್ತವಾಗಿರಲಿಲ್ಲ. ಆದರೂ ಬೆಂಗಳೂರಿನಲ್ಲಿಳಿದು ಸರ್ಕಲ್ ಇನ್‌ಸ್ಪೆಕ್ಟರಿಂದ ಅನುಮತಿ ಪಡೆದು ಹೋಗತಕ್ಕದ್ದೆಂದು ನಿಶ್ಚಯಿಸಿದರು. ಶ್ರೀ ಬೆಟಗೇರಿ ಕೃಷ್ಣಶಾಸ್ತ್ರಿಗಳು ಉಭಯಸಂಧ್ಯಾಕಾಲಗಳಿಗೆ ಹತ್ತಿರವಾಗಿ ಯಾವ ಯಾವ ಸ್ಟೇಷನ್ನುಗಳಲ್ಲಿ ರೈಲು ನಿಲ್ಲುತ್ತದೆ ಎಂದು ಪಟ್ಟಿಮಾಡಿಸಿಕೊಂಡದ್ದು ರಾಯರಿಗೆ ಕುತೂಹಲಜನಕವಾಯಿತು. ಶಾಸ್ತ್ರಿಗಳ ಮನಸ್ಸಿನಲ್ಲಿ ಪ್ರಯಾಣಕಾಲಕ್ಕೆ ಊಟತಿಂಡಿಗಳಿಗಿಂತ ಸ್ನಾನಸಂಧ್ಯೆಗಳೇ ಪ್ರಧಾನವೆಂಬುದು ಇತ್ತೆಂದು ರಾಯರಿಗೆ ಕಂಡುಬಂತು. ಅಂತೂ ಕಾಲಟಿಗೆ ಪ್ರಯಾಣವನ್ನು ಬೆಳಸಿದ್ದಾಯಿತು. ಬೆಂಗಳೂರಿನಲ್ಲಿಳಿದಾಗ ಇನ್‌ಸ್ಪೆಕ್ಟರನ್ನು ಕಾಣಲಾಗಲಿಲ್ಲ. ಮುಂದಕ್ಕೆ ಪ್ರಯಾಣಮಾಡಿದಾಗ ಜೋಲಾರುಪೇಟೆಯಲ್ಲಿ ಪ್ಲೇಗುಕಾಲವಾದ್ದರಿಂದ ಕೆಲವರನ್ನು ಹಿಡಿದು ನಿಲ್ಲಿಸಿದರು. ಗುರ್ವನುಗ್ರಹದಿಂದ ಇವರಿಗೇನೂ ಅಡ್ಡಿಯಾಗಲಿಲ್ಲ. ಅಲ್ಲಿ ಒಂದು ತೋಟದ ಭಾವಿಯಲ್ಲಿ ಸ್ನಾನಮಾಡಿ ಫಲಾಹಾರಮಾಡಿ ಪ್ರಯಾಣವನ್ನು ಮುಂದುವರಿಸಿದರು. ಷೋರನೂರಿನಲ್ಲಿ ಮತ್ತೆ ರೈಲನ್ನು ಬದಲಾಯಿಸಬೇಕಾಯಿತು. ಅಲ್ಲಿ ಮೇಲ್‌ಗಾಡಿಯಲ್ಲಿ ಹೋಗಬೇಕಾಗಿತ್ತಾದ್ದರಿಂದ ಎಕ್ಸೆಸ್ ಟಿಕೆಟ್‌ಕೊಳ್ಳಬೇಕಾಯಿತು. ಆಗ ಅವಸರದಲ್ಲಿ ರಾಯರು

ದುಡ್ಡಿನ ಚೀಲವನ್ನು ಟಿಕೆಟ್‌ಕೊಳ್ಳುವ ಸ್ಥಳದಲ್ಲೇ ಮರೆತುಬಿಟ್ಟಿದ್ದರು. ಅದರಲ್ಲಿ ರಾಯರ ದುಡ್ಡೇ ಅಲ್ಲದೆ ಇನ್ನಿಬ್ಬರ ಹಣವೂ ಇತ್ತು. ಯಾವನೋ ಒಬ್ಬ ಸತ್ಯವಂತನಾದ ರೈಲು ನೌಕರನು ಚೀಲವನ್ನು ವಾಪಸು ತಂದು ಇವರನ್ನು ವಿಚಾರಿಸಿ ರೈಲುಹೊರಡುವದರೊಳಗಾಗಿ ಕೊಟ್ಟನು. ಇದನ್ನು ನೆನೆಸಿಕೊಂಡು ರಾಯರಿಗೆ ರೋಮಾಂಚನವಾಯಿತು. ಹಣದ ಚೀಲವನ್ನು ಕೊಟ್ಟವನಿಗೆ ಪಾರಿತೋಷಿಕವನ್ನು ಕೊಟ್ಟು ಮುಂದಕ್ಕೆ ಪ್ರಯಾಣವನ್ನು ಮಾಡಿದರು. ಕಾಲಟಿಯ ಸಮೀಪದ (ಆಳ್ವಾಯಿ) ಸ್ಟೇಷನ್ನಿಗೆ ಎಲ್ಲರೂ ಬಂದಿಳಿದರು. ಅಲ್ಲಿ ಒಂದು ಗಾಡಿಯನ್ನು ಬಾಡಿಗೆಗೆ ಪಡೆದು ಮುಂದೆ ಹೋಗಬೇಕಾಗಿತ್ತು. ಗಾಡಿಯವನ ಕೊರಳಲ್ಲಿದ್ದ ಕ್ರಾಸ್ (ಸ್ವಸ್ತಿಕ್) ಚಿಹ್ನೆಯನ್ನು ಶಾಸ್ತ್ರಿಗಳು ನೋಡಿ ವಿಚಾರಿಸಿದ್ದರಲ್ಲಿ ಅವನು ಕ್ರಿಸ್ತಿಯನ್ ಆಗಿ ಮತಾಂತರಗೊಳಿಸಲ್ಪಟ್ಟಿದ್ದಾನೆಂದು ತಿಳಿಯಿತು. ಶಾಸ್ತ್ರಿಗಳು ಅವನಿಗೆ 'ನೀನು ಮತ್ತೆ ಹಿಂದೂ ಆಗಬೇಕು. ನಮ್ಮ ಧರ್ಮದಲ್ಲೇನು ಕಡಿಮೆಯಿದೆ?" ಎಂದು ಮುಂತಾಗಿ ಬೋಧಿಸಿದರು. ಹಿಂದೆ ಒಂದುಸಲ ಒಂದು ಗ್ರಾಮದವರೆಲ್ಲ ಕ್ರಿಸ್ತಿಯನ್ನರಾಗಿದ್ದುದನ್ನೂ ಒಬ್ಬ ಮಠಾಧಿಪತಿಗಳ ಅನುಗ್ರಹದಿಂದ ಶಾಸ್ತ್ರಿಗಳು ಅವರನ್ನು ಹಿಂದೂಮತಕ್ಕೆ ತಿರುಗಿಸಿದ ಕಥೆಯನ್ನೂ ಹೇಳಲಾಗಿ ರಾಯರಿಗೆ ಶಾಸ್ತ್ರಿಗಳ ಧರ್ಮಪ್ರಿಯತೆ, ಧೈರ್ಯ- ಮುಂತಾದ ಗುಣಗಳ ಪರಿಚಯವು ಆಯಿತು ಅಂತೂ ಕಾಲಟೀಕ್ಷೇತ್ರವನ್ನು ಎಲ್ಲರೂ ಸುಖವಾಗಿ ಬಂದು ಸೇರಿದರು.

## ಕಾಲಟಿಯ ಪೂರ್ವೇತಿಹಾಸ * :

ಈ ಸಂದರ್ಭದಲ್ಲಿ ಶಂಕರಭಗವತ್ಪಾದರ ಜನ್ಮಸ್ಥಳವಾದ ಕಾಲಟೀಕ್ಷೇತ್ರದ ಪೂರ್ವೇತಿಹಾಸವನ್ನು ಸ್ವಲ್ಪ ಪ್ರಸ್ತಾಪಿಸುವದು ಅಪ್ರಕೃತವೆನಿಸಲಾರದು. ಕಾಲಟಿ ಎಂಬ ಹಳ್ಳಿಯನ್ನು ಕಂಡುಹಿಡಿದು ಅಲ್ಲಿ ಶಂಕರರ ಮೂರ್ತಿಯನ್ನು ಪ್ರತಿಷ್ಠೆಮಾಡಬೇಕೆಂಬ ಇಚ್ಛೆಯು ಶೃಂಗೇರಿಜಗದ್ಗುರುಗಳ ಮನಸ್ಸಿನಲ್ಲಿ ಮೊಳೆತುಕೊಳ್ಳುವ ಕಾಲಕ್ಕೆ ಸರಿಯಾಗಿ ಸರ್.ಕೆ. ಶೇಷಾದ್ರಿಅಯ್ಯರ್‌ರವರು ಶೃಂಗೇರಿಗೆ ಗುರುದರ್ಶನಕ್ಕೆ ಬಂದರಂತೆ. ಈ ಸಮಯದಲ್ಲಿ ಜಗದ್ಗುರು ಪೀಠದಲ್ಲಿ ಶ್ರೀ ಶ್ರೀಸಚ್ಚಿದಾನಂದ ಶಿವಾಭಿನವನೃಸಿಂಹಭಾರತೀಸ್ವಾಮಿಗಳು ವಿರಾಜಮಾನರಾಗಿದ್ದರು. ಶ್ರೀ ಅಯ್ಯರ್‌ರು ಗುರುಗಳ ಆಜ್ಞೆಯನ್ನು ಶಿರಸಾವಹಿಸಿ ಮಲಬಾರ್‌ಪ್ರಾಂತ್ಯಕ್ಕೆ ಹೋಗಿ ವಿಚಾರಿಸುವಲ್ಲಿ ತಿರುವಾಂಕೂರು ಸಂಸ್ಥಾನದ ಕೊಟ್ಟಾಯಂ ಜಿಲ್ಲೆಯಲ್ಲಿದ್ದ ಒಂದು ನಿರ್ಜನಪ್ರದೇಶವೇ ಶಂಕರರ ಜನ್ಮಭೂಮಿಯಾಗಿರಬೇಕೆಂದು ತಿಳಿದುಬಂದಿತು. ಶಂಕರವಿಜಯದಲ್ಲಿ ವರ್ಣಿಸಿದ್ದ ಸ್ಥಳದ ಗುರುತುಗಳೆಲ್ಲ ಅದರಲ್ಲಿದ್ದವು. ಶಂಕರರು ಹುಟ್ಟಿದ ಸ್ಥಳವೆಂದು ಗೊತ್ತಾದ ಭಾಗದಲ್ಲಿದ್ದ ಗಿಡಗಂಟೆಗಳನ್ನು ತೆಗೆಯಿಸಿ ಅಲ್ಲಿ ಒಬ್ಬ ಶಾಸ್ತ್ರಿಗಳ ಮೂಲಕ ಶಂಕರಜಯಂತ್ಯುತ್ಸವವನ್ನು ನಡೆಸಲಾಗುತ್ತಿತ್ತು. ವಿ.ಪಿ. ಮಾಧವರಾಯರು ತಿರುವಾಂಕೂರು ದಿವಾನರಾದ ಸಂದರ್ಭವನ್ನು ಸಾಧಿಸಿ ದಿವಾನ್ ಬಹದ್ದೂರ್ ರಾಮಚಂದ್ರ

---

* ಇಲ್ಲಿಂದ ಕೆಲವು ದೂರದವರೆಗೆ ಶ್ರೀಶ್ರೀಗಳವರ ಬರವಣಿಗೆಯನ್ನೇ ಅಕ್ಷರಶಃ ಅನುಸರಿಸಲಾಗಿದೆ. ಯಾವ ಸಂಕೋಚವನ್ನೂ ಮಾಡಿಲ್ಲ.

ಅಯ್ಯರ್ ಮತ್ತು ಶೃಂಗೇರಿಯ ಮಠದ ಏಜಂಟರು-ಇವರುಗಳನ್ನು ಟ್ರಾವಂಕೂರಿಗೆ ಕಳುಹಿಸಲಾಯಿತು. ವಿ.ಪಿ. ಮಾಧವರಾಯರ ಅನುಮತಿಯನ್ನು ಪಡೆದು ಸ್ಥಲಪರೀಕ್ಷೆಯನ್ನು ಮಾಡಿದ್ದರಲ್ಲಿ ಅಲ್ಲಿ ಪೂರ್ಣಾನದಿ, ಅದರ ಹತ್ತಿರವಿದ್ದ ಕೃಷ್ಣದೇವಾಲಯ-ಇವುಗಳೇ ಅಲ್ಲದೆ ನಂಬೂದ್ರಿ ಸಂನ್ಯಾಸಿಗಳ ಮಠವೂ ಇತ್ತು. ಮಠಕ್ಕೆ ಸುತ್ತಲೂ ಇದ್ದ ಜಮೀನುಗಳಿಂದ ಸ್ವಲ್ಪ ಆದಾಯವೂ ಸಲ್ಲುತ್ತಿತ್ತು. ರೈತರುಗಳ ಹಕ್ಕನ್ನು ತಪ್ಪಿಸುವದು ಸಾಧ್ಯವಿರಲಿಲ್ಲವಾದರೂ ದೈವಯೋಗದಿಂದ ಆಗತಾನೆ ಭಾರತಸರ್ಕಾರದವರು ಪ್ರಾಚೀನ ಸಂಸ್ಥೆಗಳ ಮತ್ತು ಸ್ಮಾರಕಗಳ ಅವಶೇಷಗಳನ್ನು ರಕ್ಷಿಸುವುದಕ್ಕೆಂದು ಆಚರಣೆಗೆ ತಂದಿದ್ದ ಕಾನೂನುಗಳ ಬಲದಿಂದ ಟ್ರಾವಂಕೂರು ಮಹಾರಾಜರು 'ಕಾಲಡಿಸಂಕೇತ'ವೆಂಬ ಹೆಸರಿನಿಂದ ಪ್ರಸಿದ್ಧವಾಗಿದ್ದ ಆ ಭೂಪ್ರದೇಶವನ್ನೆಲ್ಲ ಸ್ವಾಧೀನಪಡಿಸಿಕೊಂಡು ಶೃಂಗೇರಿ ಸ್ವಾಮಿಗಳಿಗೆ ಅರ್ಪಿಸಿದರು. 1907ನೆಯ ಪರಾಭವ ಸಂವತ್ಸರದಲ್ಲಿ ಸ್ವಾಮಿಗಳು ಕಾಲಟಿಯ ಕಡೆಗೆ ಸಂಚಾರ ಹೊರಟರು. ಜಗದ್ಗುರು ಪೀಠದ ಮರ್ಯಾದೆಗೆ ತಕ್ಕಂತೆ ಪಲ್ಲಕ್ಕಿ ಹೊರುವವರು, ಆನೆ, ಕುದುರೆ, ಸವಾರರು, ಪದಾತಿಗಳು, ಹಸುಗಳು, ಎತ್ತುಗಳು, ಸೇವಕರು, ಬ್ರಾಹ್ಮಣ-ಅಬ್ರಾಹ್ಮಣ ಪರಿವಾರದವರು, ಶ್ರೀಮಠದ ರಾಜಮರ್ಯಾದೆಗಳು, ಖಜಾನೆ, ದೇವರು- ಇವುಗಳನ್ನೆಲ್ಲ ತೆಗೆದುಕೊಂಡು ದಾರಿಯಲ್ಲಿ ಅಲ್ಲಲ್ಲಿ ಅಗ್ರಹಾರಗಳಲ್ಲಿ ಎರಡು ಮೂರು ದಿನಗಳವರೆಗಾದರೂ ತಂಗಿ ಕಾಲಟಿಯನ್ನು ಮುಟ್ಟುವದಕ್ಕೆ ಮೂರು ವರ್ಷಗಳಿಗೆ ಕಡಿಮೆಯಿಲ್ಲದೆ ಕಾಲವು ಬೇಕಾಗುವದೆಂದು ನಿರ್ಣಯಿಸಲಾಗಿತ್ತು. ಆದ್ದರಿಂದ ರಿಟೈರ್ಡ್ ಚೀಫ್‌ಕೋರ್ಟು ಜಡ್ಜಿಗಳಾದ ರಾಮಚಂದ್ರಯ್ಯರ್‌ರವರೂ ದಕ್ಷ ಎಂಜನಿಯರಾದ ಶ್ರೀ ಸುಬ್ಬರಾಯಅಯ್ಯರ್‌ರವರೂ 1908 ರಲ್ಲಿ ಮೈಸೂರಿನಿಂದ ಹೊರಟರು. ಕಲ್ಲಾಡಿ, ಕುರುಚಿ ಅಗ್ರಹಾರದ ಕೆಲವು ದೊಡ್ಡ ಮನುಷ್ಯರುಗಳು 300 ಜನ ಕೂಲಿಗಳನ್ನು ಕರೆತಂದರು. ಕಾಲಟಿಪ್ರದೇಶದಲ್ಲಿದ್ದ ಗಿಡಗೆಂಟೆಗಳನ್ನು ತೆಗೆದುಹಾಕಿಸಿ ನಡೆಯುವದಕ್ಕೆ ತಕ್ಕಂತೆ ದಾರಿಗಳನ್ನು ಮಾಡಿಸಿ ಪೂರ್ಣಾನದಿಗೆ ಉತ್ತರದಲ್ಲಿ ದಕ್ಷಿಣಾಭಿಮುಖವಾಗಿ ಎರಡು ಸಣ್ಣ ದೇವಾಲಯಗಳನ್ನು ನಿರ್ಮಿಸಿದರು. ಆಚಾರ್ಯರ ತಾಯಿಯವರ ಅಂತ್ಯಕ್ರಿಯೆ ಆದ ಸ್ಥಳವೆಂದು ಕಿಂವದಂತಿಯಿದ್ದ ಪ್ರದೇಶದ ಹತ್ತಿರ ಶಾರದಾಂಬೆಗೆ ದೇವಾಲಯವನ್ನು ನಿರ್ಮಿಸಲಾಯಿತು. ಪೂರ್ಣಾನದಿಯ ದಂಡೆಯು ಇಲ್ಲಿ ಕಡಿದಾಗಿದ್ದದ್ದರಿಂದ ಮೂವತ್ತೆರಡು ಮೆಟ್ಟಿಲುಗಳ ಸೋಪಾನವನ್ನು ನಿರ್ಮಿಸಿದರು. ದೇವಾಲಯಗಳ ಪೂರ್ವಕ್ಕೆ ಶ್ರೀಶ್ರೀಗಳವರಿಗಾಗಿ ಒಂದು ಮಠವು ಸಿದ್ಧವಾಯಿತು. ಸ್ವಾಮಿಗಳವರು ಅಲ್ಲಲ್ಲಿ ಜನರಿಂದ ಸತ್ಕೃತರಾಗಿ ಚಾತುರ್ಮಾಸ್ಯಕ್ಕೆ ಯೋಗ್ಯವಾದ ಸ್ಥಳಗಳಲ್ಲಿ ನಿಲ್ಲುತ್ತಾ ಕಾಲಟಿಗೆ ಐದುಮೈಲಿಗಳ ದೂರದಲ್ಲಿರುವ ಪೆರಂಬೂರು ಎಂಬ ಸ್ಥಳಕ್ಕೆ ಬಂದು ತಲುಪುವ ಹೊತ್ತಿಗೆ ರಾಮಚಂದ್ರ ಅಯ್ಯರ್‌ರವರೂ ಮಠದ ಏಜಂಟರೂ ಬಂದು ಎಲ್ಲವೂ ಸುಸಜ್ಜಿತವಾಗಿದೆ-ಎಂದು ಬಿನ್ನವಿಸಿದರು. ಉತ್ಸವಕ್ಕೆ ಹತ್ತು ದಿನಗಳ ಮುನ್ನವೇ ಸ್ವಾಮಿಗಳು ಕಾಲಟಿಗೆ ದಯಮಾಡಿಸಿದರು.

**ಕಾಲಟಿದರ್ಶನ :**

ರಾಯರೂ ಚಿದಂಬರಯ್ಯನವರೂ ಕಾಲಟಿಯನ್ನು ಸೇರಿದಾಗ ಶಂಕರಾಚಾರ್ಯರ ಪ್ರತಿಷ್ಠೆಗಾಗಿಯೇ ಸಜ್ಜುಗೊಳಿಸಲ್ಪಟ್ಟಿದ್ದ ಆರುನೂರು ಬಿದಿರುಮನೆಗಳ 'ಕಾಲಟೀನಗರ'ವನ್ನು ಕಂಡರು. ಅನೇಕ ರಾಜಮಹಾರಾಜರುಗಳು ಕೂಡ ಅಲ್ಲಿಗೆ ಬರುವದಕ್ಕೆ ಏರ್ಪಾಡಾಗಿತ್ತು. ಅಂಗಡಿಗಳ ಸಾಲು, ಟ್ರಾವಂಕೂರು ಮಹಾರಾಜರ ಅಪ್ಪಣೆಯಿಂದ ಏರ್ಪಟ್ಟಿದ್ದ ಪೋಸ್ಟಾಫೀಸು, ಆಸ್ಪತ್ರೆ ಮುಂತಾದ ವ್ಯವಹಾರಸ್ಥಳಗಳು, ಒಂದೊಂದು ಮನೆಗೂ ಚೀಟಿ, ಸಂಖ್ಯೆ ಹಾಕಿದ್ದದ್ದು, ಬೀದಿಗಳನ್ನು ಗುಡಿಸುವದಕ್ಕೆ ಏರ್ಪಾಡು, ನಾಲ್ಕು ಕಡೆಗಳಲ್ಲಿಯೂ ಭೋಜನಶಾಲೆಗಳು, ನದಿಗೆ ಸಮೀಪವಾಗಿ ಶಂಕರದೇವಾಲಯ ಶಾರದಾ ದೇವಾಲಯಗಳ ನಡುವೆ ವಿಶಾಲವಾದ ಯಾಗಮಂಟಪ-ಇವೆಲ್ಲ ನೋಡುವಂತೆ ಇದ್ದವು. ಹೊರಗಿನಿಂದ ಬಂದ ವಿದ್ವಾಂಸರು, ದೊಡ್ಡ ಮನುಷ್ಯರು, ನಿಯಮಸ್ಥರು-ಇವರುಗಳಿಗೆ ಯಥಾಯೋಗ್ಯವಾಗಿ ಬೇರೆ ಬೇರೆಯ ಕಡೆಗಳಲ್ಲಿ ಭೋಜನದ ಲವಾಜಮೆ ಸಲ್ಲುತ್ತಿತ್ತು. ತಿರುವಾಂಕೂರು ಸಂಸ್ಥಾನದ ಕೊಟ್ಟಾಯಂ ವಿಭಾಗದ ದಿವಾನ ಪೇಷ್ಕಾರರು ತಮ್ಮ ನೌಕರರೊಡನೆ ಸ್ವತಃ ಸಂನಿಹಿತರಾಗಿದ್ದರು. ರಾಯರು ತಲುಪುವ ವೇಳೆಗೆ ಸಂಜೆಯಾಗಿತ್ತು. ಸ್ನಾನಮಾಡಿ ಶಾಸ್ತ್ರಿಗಳೊಡನೆ ಗುರುಗಳ ದರ್ಶನವನ್ನು ಮಾಡಿದರು. ಗುರುಗಳು ಶಾಸ್ತ್ರಿಗಳನ್ನು ಗುರುತಿಸಿ ಆದರದಿಂದ ಮರಾಠಿಯಲ್ಲಿ ಮಾತನಾಡಿಸಿದರು. ಆಗ ಕಾಲಟಿಯು ಒಂದು ದೊಡ್ಡ ಬ್ರಾಹ್ಮಣರ ನಗರಿಯಂತಿತ್ತು-ಎನ್ನಬಹುದು. ನದಿಯ ತೀರದಲ್ಲಿ ಉದ್ದಕ್ಕೂ ಎಷ್ಟುದೂರ ನೋಡಿದರೂ ಭಸ್ಮದ ಬುರುಡೆಗಳು, ಮಡಿಚೀಲ, ರುದ್ರಾಕ್ಷಿ, ದರ್ಭೆಗಳೇ-ಮುಂತಾದವುಗಳು ಕಾಣಬರುತ್ತಿದ್ದವು. ಉದ್ದಕ್ಕೂ ಜನಗಳು ಪರಶುರಾಮಕ್ಷೇತ್ರ ಸಂಕಲ್ಪವನ್ನು ಹೇಳಿಕೊಂಡು ಸ್ನಾನಮಾಡುತ್ತಿದ್ದರು. ಇಂಥ ದೃಶ್ಯವನ್ನು ರಾಯರು ತಮ್ಮ ಜೀವಮಾನದಲ್ಲಿ ಕಂಡಿರಲೇ ಇಲ್ಲ. ಆ ಬೇಸಗೆಯ ಕಾಲದಲ್ಲಿಯೂ ಒಂದು ಮೊಳದಷ್ಟು ಇಳಿದ ಮಾತ್ರದಿಂದ ನದಿಯ ನೀರು ಎದೆಯಮಟ್ಟಕ್ಕೆ ಬರುತ್ತಿದ್ದು 'ಪೂರ್ಣಾನದಿ'ಯೆಂಬ ಹೆಸರನ್ನು ಅನ್ವರ್ಥಗೊಳಿಸುತ್ತಿತ್ತು. ನದಿಯಮೇಲೆ ದೋಣಿಗಳು ಓಡಾಡುತ್ತಲೇ ಇದ್ದವು. ನದಿಯಲ್ಲಿ ಮೊಸಳೆಗಳೂ ಇದ್ದವು. ಶಿವಗಂಗಾಸ್ವಾಮಿಗಳ ಒಬ್ಬ ಬೋಯಿಯನ್ನು ಒಂದು ಮೊಸಳೆಯು ಎಳೆದುಕೊಂಡೇ ಹೋಯಿತು! ಆಗ ಆಚಾರ್ಯರನ್ನು ನದಿಯಲ್ಲಿ ಒಂದು ಮೊಸಳೆಯು ಹಿಡಿಯಿತೆಂಬ ಶಂಕರವಿಜಯದ ಕಥೆಯು ರಾಯರಿಗೆ ನೆನಪಿಗೆ ಬಂದಿತಂತೆ. ದಡವನ್ನು ಏರಿ ಮೇಲಕ್ಕೆ ಬಂದರೆ ವಿಶಾಲವಾದ ಚಪ್ಪರವೂ ಅದರಲ್ಲಿ ಬೇರೆ ಬೇರೆಯ ಕಡೆಗಳಲ್ಲಿ ವಿದ್ವಾಂಸರುಗಳ ಸಮ್ಮೇಳನಗಳೂ ಭಾಷಣಗಳೂ ಕಾಣಬರುತ್ತಿದ್ದವು. ಶಂಕರರ ವಿಗ್ರಹವು ಪ್ರತಿಷ್ಠೆಯಾಗಲಿದ್ದ ಸಮಯದಲ್ಲಿ ಒಬ್ಬ ಸಂನ್ಯಾಸಿಗಳೊಡನೆ ಶ್ರೀಶ್ರೀಗಳವರು ಭಾಷ್ಯವಿಷಯಕ್ಕೆ ಸಂಭಾಷಣೆಯನ್ನು ನಡೆಯಿಸುತ್ತಿದ್ದರು. ಅಲ್ಲೇ ಮತ್ತೊಂದು ಕಡೆ ಜ್ಯೋತಿಷ್ಕರುಗಳ ಸಮ್ಮೇಳನವೊಂದು ನಡೆದಿತ್ತು. ಅದರಲ್ಲಿ ಒಬ್ಬ ಅಯ್ಯಂಗಾರ್ಯರು ಒಂದು ಕೃತ್ರಿಮಗೋಳವನ್ನಿಟ್ಟುಕೊಂಡು ಭೂಚಕ್ರದ ವಿಷಯವಾಗಿ ಸಂಸ್ಕೃತದಲ್ಲಿ ನಿರರ್ಗಳವಾಗಿ

ಭಾಷಣಮಾಡುತ್ತಿದ್ದುದನ್ನು ಕಂಡು ಸಂಸ್ಕೃತವು ಮೃತಭಾಷೆ-ಎನ್ನುವವರ ಅಜ್ಞಾನವು ಎಷ್ಟರಮಟ್ಟಿನದು!- ಎಂದು ರಾಯರಿಗೆ ಅನ್ನಿಸಿತು. ಬೇರೆ ಬೇರೆಯ ಕಡೆಗಳಲ್ಲಿ ವೇದಾಧ್ಯಯನವು ನಡೆಯುತ್ತಿತ್ತು. ದೇವಸ್ಥಾನಗಳಿಗೂ ಯಾಗಶಾಲೆಗಳಿಗೂ ಶ್ರೀಶ್ರೀಗಳವರು ದಯಮಾಡಿಸಿ ಸ್ತೋತ್ರಾದಿಗಳನ್ನು ಹೇಳಿದ್ದನ್ನು ಅನೇಕರು ಭಕ್ತರುಗಳು ಕೇಳಿ ಎವೆಯಿಕ್ಕದೆ ನೋಡಿ ಸಂತೋಷಪಡುತ್ತಿದ್ದರು. ರಾಯರು ಬರುವದರೊಳಗಾಗಿ ವೇ|| ವಿರೂಪಾಕ್ಷಶಾಸ್ತ್ರಿಗಳು ಕಾಲಟಿಗೆ ದಯಮಾಡಿಸಿದ್ದರು. ರಾಯರು ಭಾಷ್ಯಶಾಂತಿಗೆ ಬಂದಿರುವದನ್ನು ಕೇಳಿ ಅವರೂ ಸಂತೋಷಗೊಂಡರು.

## ಶಾಂತಿಪಾಠಮಹೋತ್ಸವ :

ರಾಯರು ಹಾಗೂ ಚಿದಂಬರಯ್ಯನವರು ಭಾಷ್ಯಶಾಂತಿಯ ಬಗ್ಗೆ ಏಜಂಟರಾದ ಶ್ರೀ ಶ್ರೀಕಂಠಶಾಸ್ತ್ರಿಗಳಲ್ಲಿ ವಿಚಾರಿಸಲಾಗಿ ಅವರು 'ಈಗ ಬಹಳ ಗಲಾಟೆ, ಶ್ರೀಶ್ರೀಗಳವರು ಬೆಂಗಳೂರಿಗೆ ಬಂದಾಗ ನೋಡೋಣ' ಎಂದುಬಿಟ್ಟರಂತೆ. ಇದರಿಂದ ರಾಯರಿಗೆ ಬಹಳ ಆಶಾಭಂಗವಾದಂತಾಯಿತು. ವೇ|| ವಿರೂಪಾಕ್ಷಶಾಸ್ತ್ರಿಗಳನ್ನು ಕೇಳಿದ್ದರಲ್ಲಿ ಪ್ರತಿಷ್ಠೆಯ ಕಾರ್ಯವು ಪೂರೈಸಿದ ಬಳಿಕ ಪ್ರಯತ್ನಿಸುವದಾಗಿ ತಿಳಿಸಿದರು.

ಮಾಘ ಶುಕ್ಲ ದ್ವಾದಶಿಯಂದು ಪ್ರತಿಷ್ಠೆಯ ದಿನವಾಗಿತ್ತು. ಆ ದಿನ ಎಂದಿಗಿಂತ ಎರಡು ಮೂರರಷ್ಟು ಜನಸಂದಣಿ ಸೇರಿದ್ದಿತು. ಐವತ್ತು ಸಾವಿರಕ್ಕೂ ಹೆಚ್ಚು ಜನರು ಇದ್ದಿರಬಹುದು. ಆ ದಿನ ನಡೆದ ವೇದಘೋಷವನ್ನು ಕೇಳಿದವರೇ ಧನ್ಯರು. ಸುಮುಹೂರ್ತದಲ್ಲಿ ಪ್ರತಿಷ್ಠಾಕಾರ್ಯವು ನೆರವೇರಿತು. ಮಧ್ಯಾಹ್ನದ ಮೇಲೆ ಒಂದು ದೊಡ್ಡ ಸಭೆಯಾಯಿತು. ಅಲ್ಲಿ ಬೇರೆ ಬೇರೆಯ ಕಡೆಯಿಂದ ವಿದ್ವಾಂಸರುಗಳು ಸಂಸ್ಕೃತದಲ್ಲಿ ಬರೆದು ತಂದಿದ್ದ ಅಭಿನಂದನಪತ್ರಗಳನ್ನು ಶ್ರೀಶ್ರೀಗಳವರ ಸಮ್ಮುಖದಲ್ಲಿ ಓದಿ ಅರ್ಪಿಸಿದರು. ಶ್ರೀ ಕೃಷ್ಣಶಾಸ್ತ್ರಿಗಳವರು ಗುರುಗಳ ಸಮ್ಮುಖದಲ್ಲಿ ನಿಂತು ಅಪ್ಪಾ ಸಾಹೇಬರು ಬರೆದಿದ್ದ ಕೆಲವು ಸಂಸ್ಕೃತಶ್ಲೋಕಗಳನ್ನು ಓದಿ ಸಮರ್ಪಿಸಿದರು. ಅದರಲ್ಲಿ 'ಪಾವನೀಭಿರ್ಗಿರಾಭಿಃ' ಎಂದು ಪ್ರಯೋಗವಿದ್ದುದನ್ನು ಯಾರೋ ಆಕ್ಷೇಪಿಸಿದರು. ಶ್ರೀಶ್ರೀಗಳವರೇ ಅದಕ್ಕೆ ಸಮಾಧಾನವನ್ನು ಹೇಳಿದರು. ಜನರೆಲ್ಲರೂ ಕರತಾಡನಮಾಡಿದರು. ಶ್ರೀ ಶಾಸ್ತ್ರಿಗಳು ಸಾಮಾನ್ಯ ವ್ಯಕ್ತಿಯಲ್ಲವೆಂಬುದು ಹತ್ತಿರವಿದ್ದ ವಿದ್ವಾಂಸರುಗಳಿಗೂ ತಿಳಿಯಬಂದಿತು. ಆ ಸಭೆಯಲ್ಲಿ ಮೈಸೂರು ದಿವಾನರಾಗಿದ್ದ ವಿ.ಪಿ. ಮಾಧವರಾಯರು, ಟ್ರಾವಂಕೂರಿನ ದಿವಾನರಾಗಿದ್ದ ರಾಜಗೋಪಾಲಾಚಾರಿಯವರು, ಮೈಸೂರು ಕೌನ್ಸಿಲ್‌ಮೆಂಬರಾದ ಹೆಚ್. ವಿ. ನಂಜುಂಡಯ್ಯನವರು ಇವರುಗಳೂ ಉಪಸ್ಥಿತರಾಗಿದ್ದರು. ಅದೇ ಸಭೆಯಲ್ಲಿ ಶ್ರೀಶ್ರೀಗಳವರು ಈ ಕಾರ್ಯದಲ್ಲಿ ಪ್ರಧಾನಪಾತ್ರವನ್ನು ವಹಿಸಿದ ಮುಖ್ಯಸ್ಥರಿಗೆಲ್ಲ ತಕ್ಕ ಬಿರುದುಗಳನ್ನು ದಯಾಪಾಲಿಸಿದರು. ರಾಮಚಂದ್ರ

ಅಯ್ಯರ್‌ರವರಿಗೆ 'ಗುರುಭಕ್ತಕೇಸರಿ' ಎಂಬ ಬಿರುದು ದೊರೆಯಿತು. ಶಂಕರಾಚಾರ್ಯರವರ ಅಮೋಘಕೃತಿಗಳನ್ನೆಲ್ಲ ಸಂಪೂರ್ಣವಾಗಿ ಅಚ್ಚು ಮಾಡಿಸಲು ಪ್ರಯತ್ನಿಸಿ ಆವರೆಗೆ ಸಿದ್ಧವಾಗಿದ್ದ ಹತ್ತು ಸಂಪುಟಗಳನ್ನು ಸಮರ್ಪಿಸಿದ ಶ್ರೀರಂಗಂ ವಾಣೀವಿಲಾಸ ಪ್ರೆಸ್ ಅಧ್ಯಕ್ಷರಾದ ಶ್ರೀಬಾಲಸುಬ್ರಹ್ಮಣ್ಯ ಅಯ್ಯರ್‌ರವರಿಗೆ 'ಗುರುಭಕ್ತಶಿಖಾಮಣಿ' ಎಂಬ ಬಿರುದು ಲಭಿಸಿತು. ದೇವೇಂದ್ರನ ಸಭೆಯಲ್ಲಿ ಪ್ರತಿಯೊಬ್ಬರೂ ತಮ್ಮ ತಮ್ಮ ಯೋಗ್ಯತೆಯನ್ನು ಪ್ರಕಟಿಸುವ ಸೇವೆಯನ್ನು ಮಾಡುವಂತೆ ಆ ಕಾಲಕ್ಕೆ ಓಲಗದವರು ಮುಂತಾದ ವಾದ್ಯಗಾರರು, ಸಂಗೀತಗಾರರು, ವಿದ್ವಾಂಸರುಗಳು, ರಂಗವಲ್ಲಿಯಿಂದ ಚಿತ್ರವಿಚಿತ್ರವಾದ ಪುರಾಣದೃಶ್ಯಗಳನ್ನು ರಚಿಸುವವರು-ಮುಂತಾದವರು ನಾನು ತಾನೆಂದು ಮುಂದೆ ಬರುತ್ತಿದ್ದರು. ಒಬ್ಬ ತೇಜಸ್ವಿಯಾದ ಬಾಲಕನು ಜನಜಂಗುಳಿಯಲ್ಲಿ ಮುನ್ನುಗ್ಗಿ ಬಂದು ಶ್ರೀಶ್ರೀಗಳವರ ಸಾಮೀಪ್ಯವನ್ನು ಹೊಂದಲು 'ನಿನಗೇನು ಬೇಕು?' ಎಂದು ಗುರುಗಳು ಕೇಳಿದಾಗ 'ತಮ್ಮ ಸೇವೆಯು ಬೇಕು' ಎಂದು ತನ್ನ ಉತ್ತರದಿಂದ ಎಲ್ಲರಿಗೂ ಆಶ್ಚರ್ಯವನ್ನುಂಟು ಮಾಡಿದನು. ಶ್ರೀಶ್ರೀಗಳವರು ಆ ಹುಡುಗನನ್ನು ಅನುಗ್ರಹಿಸಿದರು. ಅನಂತರ ಶ್ರೀಶ್ರೀಗಳವರು ಅಲ್ಲಿ ನೆರೆದಿದ್ದ ನಂಬೂದ್ರಿಬ್ರಾಹ್ಮಣರನ್ನು ಕುರಿತು "ಶಂಕರಾಚಾರ್ಯರಿಂದ ಹಿಂದೆ ನಿಮ್ಮ ಪೂರ್ವಿಕರಿಗೆ ಒದಗಿದ್ದ ಶಾಪಕ್ಕೆ ಈಗ ಅವರ ಅನುಗ್ರಹದಿಂದ ವಿಮೋಚನೆಯಾಗಿದೆಯೆಂದು ನೀವುಗಳು ಭಾವಿಸಬೇಕು. ಇಂದಿನಿಂದ ನೀವು ಶುದ್ಧಾಚಾರರತರಾಗಿದ್ದುಕೊಂಡು ಆಚಾರ್ಯರ ಕೃಪೆಗೆ ಪಾತ್ರರಾಗಿ ನಿಮ್ಮಗಳಲ್ಲಿ ಪ್ರಸಿದ್ಧವಾಗಿರುವ ಪಾಂಡಿತ್ಯಕ್ಕೆ ಸಾರ್ಥಕ್ಯವನ್ನು ತಂದುಕೊಳ್ಳಬೇಕು"-ಎಂದು ಮುಂತಾಗಿ ಹಿತೋಪದೇಶವನ್ನು ಮಾಡಿದರು. ಒಟ್ಟಿನಲ್ಲಿ ಆ ದಿನ ರಾಯರಿಗೆ ಯಾವದೋ ಒಂದು ದಿವ್ಯಲೋಕದಲ್ಲಿದ್ದಂತೆ ಭಾಸವಾಗುತ್ತಿತ್ತು; ಮನಸ್ಸಿನಲ್ಲಿ ಆನಂದವು ಉಕ್ಕುತ್ತಿತ್ತು.

ಆ ದಿನ ರಾತ್ರಿ ಶ್ರೀಶ್ರೀಗಳವರಲ್ಲಿ ಬ್ರ|| ಶ್ರೀ|| ಕೃಷ್ಣಶಾಸ್ತ್ರಿಗಳು ಭಾಷ್ಯಶಾಂತಿಯ ವಿಷಯವನ್ನು ಪ್ರಸ್ತಾಪಿಸಿದರು. "ಅನುಕೂಲವಿದ್ದರೆ ಈ ಕ್ಷೇತ್ರದಲ್ಲಿಯೇ ಆಗಬೇಕೆಂದು ಇವರಿಬ್ಬರೂ ತೀವ್ರಾಕಾಂಕ್ಷೆಯುಳ್ಳವರಾಗಿದ್ದಾರೆ"- ಎಂದು ಬಿನ್ನವಿಸಲು ಶ್ರೀಶ್ರೀಗಳವರು "ಅವಶ್ಯವಾಗಿ ಆಗಲಿ, ಇಲ್ಲಲ್ಲದಿದ್ದರೆ ಮತ್ತೆಲ್ಲಿ ಆಗಬೇಕು? ಇನ್ನೂ ಯಾರು ಬೇಕಾದರೂ ಬರಲಿ! ಹೇಳು!" ಎಂದು ಏಜಂಟರಿಗೆ ಅಪ್ಪಣೆಮಾಡಿದರು.

ಮಾರನೆಯ ದಿನ ಶಾರದಾದೇವಿಯ ದೇವಾಲಯದ ಜಗುಲಿಯ ಮೇಲೆ ರಾಯರೂ ಚಿದಂಬರಯ್ಯನವರೂ ಭಾಷ್ಯಶಾಂತಿಗೆ ಸಿದ್ಧರಾದರು. ಆಗ್ಗೆ ನಡೆದುಕೊಳ್ಳಬೇಕಾದ ಕ್ರಮವನ್ನು ಶ್ರೀ ಶಾಸ್ತ್ರಿಗಳು ಇವರುಗಳಿಗೆ ಮೊದಲೇ ತಿಳಿಸಿದ್ದರು. ಆ ಸ್ಥಳದಲ್ಲಿ ಇನ್ನೂ ಎಷ್ಟೋ ಜನರು ಜಗುಲಿಯ ಕೆಳಗೂ ಸೇರಿದ್ದು ಅದೊಂದು ಬ್ರಹ್ಮಸಭೆಯಂತೆ ಭಾಸವಾಯಿತು. ಸಕಾಲದಲ್ಲಿ ಶ್ರೀಶ್ರೀಗಳವರು ಶಾಂತಿಪಾಠಗಳನ್ನು ಒಂದೊಂದಾಗಿ ಉಚ್ಚರಿಸಿದರು. ಅವರನ್ನನುಸರಿಸಿ ರಾಯರೂ ಚಿದಂಬರಯ್ಯನವರೂ ಉಚ್ಚರಿಸಿದರು. ಉಳಿದವರೂ (ಸುಮಾರು ಇಪ್ಪತ್ತು

ಜನರು ಇರಬಹುದು) ಪಠನಮಾಡಿದರು. ಅನಂತರ ಶ್ರೀಶ್ರೀಗಳವರು ಬ್ರಹ್ಮಸೂತ್ರ ಭಾಷ್ಯದಲ್ಲಿ ಅಧ್ಯಾಸಭಾಷ್ಯದ ಅಭಿಪ್ರಾಯವನ್ನು ಹೇಳಲಾರಂಭಿಸಿ "ಭಾಷ್ಯಜನ್ಮಭೂಮೇರ್ಜನ್ಮ ಭೂಮಿರಿಯಮ್" (ಭಾಷ್ಯಕ್ಕೆ ಜನ್ಮಸ್ಥಾನರಾದ ಆಚಾರ್ಯರಿಗೆ ಜನ್ಮಸ್ಥಳವಿದು!) ಎಂದು ಆನಂದಬಾಷ್ಪದೊಡನೆ ಪ್ರಾರಂಭಿಸಿದರು. ಆಮೇಲೆ "ಗೀತೋಪದೇಶವಾಗಿದೆಯೊ?" ಎಂದು ಕೇಳಿ ಮತ್ತೆ ಗೀತೆಯ ಆದ್ಯಂತ ಶ್ಲೋಕಗಳನ್ನೂ ಭಾಷ್ಯದ ಆದ್ಯಂತ ಭಾಗಗಳನ್ನೂ ಹೇಳಿಕೊಟ್ಟು ಆ ಕಾರ್ಯವನ್ನು ಸಮಾಪ್ತಿಗೊಳಿಸಿದರು.

## ಪಂಚಾಕ್ಷರೀಮಂತ್ರೋಪದೇಶ :

ಆ ದಿನ ರಾಯರಿಗೂ ಚಿದಂಬರಯ್ಯನವರಿಗೂ ಆದ ಸಂತೋಷಕ್ಕೆ ಪಾರವೇ ಇಲ್ಲ. "ಒಬ್ಬಾನೊಬ್ಬ ಮಹಾತಪಸ್ವಿಗಳ ಅನುಗ್ರಹಕ್ಕೆ ಪಾತ್ರರಾದಂತಾಯಿತು!" ಎಂದು ರಾಯರು ಹೇಳಿದ್ದಕ್ಕೆ, ಚಿದಂಬರಯ್ಯನವರು "ನಮ್ಮಿಬ್ಬರನ್ನೂ ಗುರುತಿಸಿ ಶ್ರೀಶ್ರೀಗಳವರು ಭಾಷ್ಯಶಾಂತಿಯನ್ನು ಮಾಡಿಸಿದರು-ಎಂದು ನಮಗೆ ತಿಳಿಯಬೇಕಲ್ಲ!" ಎಂದರು. ಆಗ ಶಿವಪಂಚಾಕ್ಷರೀ ಉಪದೇಶವನ್ನು ಪಡೆಯಲು ಇಬ್ಬರೂ ಸಿದ್ಧರಾದರು. ಅಲ್ಲಿಯವರೆಗೆ ರಾಯರಿಗೆ ಗಾಯತ್ರೀಮಂತ್ರ ಹೊರತು ಮತ್ತೇನೂ ಉಪದೇಶವಾಗಿರಲಿಲ್ಲ. ಚಿದಂಬರಯ್ಯನವರಿಗೆ ಪಂಚಾಕ್ಷರಿಯು ಈ ಮೊದಲೇ ಉಪದೇಶವಾಗಿದ್ದಿರಬಹುದು. ಆದರೂ ಅದು ವೀರ್ಯವತ್ತಾಗಲು ದೊಡ್ಡವರಿಂದ ಬರಬೇಕೆಂದು ಅವರು ಬಯಸಿರಬಹುದು. ರಾಯರಿಗೆ ನಾರಾಯಣಾಷ್ಟಾಕ್ಷರಿಯು ಇಷ್ಟವಾಗಿದ್ದರೂ ಒಬ್ಬೊಬ್ಬರು ಒಂದೊಂದನ್ನು ಕೇಳಿದರೆ ಗುರುಗಳು ಇಬ್ಬರಿಗೂ ಅವಕಾಶ ಕೊಡದೆಹೋದಾರು!-ಎಂದು ಭಾವಿಸಿ ರಾಯರು ಚಿದಂಬರಯ್ಯನವರ ಇಷ್ಟದಂತೆಯೇ ಶಿವಪಂಚಾಕ್ಷರೀ ಮಂತ್ರೋಪದೇಶಸ್ವೀಕಾರಕ್ಕೇ ಸಿದ್ಧರಾಗಿದ್ದರು. ಶ್ರೀಶ್ರೀಗಳವರಿದ್ದ ಏಕಾಂತಸ್ಥಳಕ್ಕೆ ಇಬ್ಬರೂ ಹೋಗಿ ನಮಸ್ಕರಿಸಲಾಗಿ ಗುರುಗಳು ಕಮಂಡಲು ಜಲದಿಂದ ಇಬ್ಬರನ್ನೂ ಪ್ರೋಕ್ಷಿಸಿ ಮಂತ್ರೋಪದೇಶವನ್ನು ಮಾಡಿದರು. ಅನಂತರ ಇಬ್ಬರನ್ನೂ ಕುರಿತು "ನೀವು ಭಾಷ್ಯಶಾಂತಿಗೆ ಬಂದಿದ್ದಿರಲ್ಲವೆ? ಭಾಷ್ಯವನ್ನು ನಿಮಗೆ ಮುಂದೆ ಯಾರು ಹೇಳಿಕೊಡುವವರು?" ಎಂದು ಪ್ರಶ್ನಿಸಿದರು. ಚಿದಂಬರಯ್ಯನವರಿಗೆ ಸಂದೇಹವು ತೊಲಗಿ ಪರಮಾನಂದವಾಯಿತು. ಹಾನಗಲ್ಲು ಬ್ರ|| ಶ್ರೀ ವಿರೂಪಾಕ್ಷಶಾಸ್ತ್ರಿಗಳವರಲ್ಲಿ ಭಾಷ್ಯವನ್ನು ಓದಬೇಕೆಂದು ಸಂಕಲ್ಪಿಸಿರುವದಾಗಿ ಚಿದಂಬರಯ್ಯನವರು ಬಿನ್ನವಿಸಲು ಗುರುಗಳು "ಬಹಳ ಸಂತೋಷ, ನಿಮ್ಮ ಕರ್ತವ್ಯಕ್ಕೆ ಲೋಪವಿಲ್ಲದಂತೆ ವೇದಾಂತಕಾಲಕ್ಷೇಪವನ್ನು ಮಾಡುವದು ಒಳ್ಳೆಯದೇ ಸರಿ, ರಜದ ಕಾಲದಲ್ಲೆಲ್ಲ ಧಾರವಾಡಕ್ಕೆ ಹೋಗಿ ಅವರಲ್ಲಿ ಓದಲು ಅನುಕೂಲವಾಗಿದೆಯಷ್ಟೆ!" ಎಂದು ಮುಂತಾಗಿ ವಿಚಾರಿಸಿದರು. ಅವರ ಅಪ್ಪಣೆಯಂತೆ ಸಮೀಪದಲ್ಲಿದ್ದ ಒಬ್ಬ ಬ್ರಾಹ್ಮಣರು ಶಾಂತಿ ಪಾಠಮಂತ್ರಗಳನ್ನೂ ಪಂಚಾಕ್ಷರಿಯ ಧ್ಯಾನಶ್ಲೋಕಾದಿಗಳನ್ನೂ ಬರೆದುಕೊಟ್ಟರು. ರಾಯರೂ ಚಿದಂಬರಯ್ಯನವರೂ ಕೃತಕೃತ್ಯರಾದೆವೆಂದು ಭಾವಿಸಿ ಆನಂದಭರಿತರಾದರು.

### ಶಾಸ್ತ್ರಿದ್ವಯರ ಏಕಾಂತಸಂವಾದ :

ಆ ದಿನ ಬ್ರ॥ ಶ್ರೀ॥ ವಿರೂಪಾಕ್ಷಶಾಸ್ತ್ರಿಗಳೂ ಬ್ರ॥ ಶ್ರೀ॥ ಕೃಷ್ಣಶಾಸ್ತ್ರಿಗಳೂ ಧರ್ಮಶಾಸ್ತ್ರಸಂಬಂಧವಾದ ಅನೇಕ ವಿಷಯಗಳನ್ನು ಕುರಿತು ಒಬ್ಬರೊಡನೊಬ್ಬರು ಮಾತನಾಡುತ್ತಿರುವದನ್ನು ರಾಯರೂ ಚಿದಂಬರಯ್ಯನವರೂ ಹೊರಗಿನಿಂದಲೇ ಕೇಳಿದರು. ಶ್ರೀ ವಿರೂಪಾಕ್ಷಶಾಸ್ತ್ರಿಗಳು ಸಂನ್ಯಾಸದ ವಿಷಯವನ್ನು ಪ್ರಸ್ತಾಪಿಸಿದರು. ಶ್ರೀ ಕೃಷ್ಣಶಾಸ್ತ್ರಿಗಳು "ನನಗೂ ಸಂನ್ಯಾಸಮಾಡಬೇಕೆಂಬ ಇಚ್ಛೆಯುಂಟು; ಆದರೆ ಯಾವ ಮಠಕ್ಕೂ ಅಧಿಪತಿಯಾಗುವದು ನನ್ನ ಮನಸ್ಸಿಗೆ ಬರುವದಿಲ್ಲ!" ಎಂದರು. ಇಬ್ಬರೂ ಶಾಸ್ತ್ರಿಗಳಿಗೂ ಅಂತರಂಗದಲ್ಲಿ ಸಂನ್ಯಾಸದ ಉತ್ಕಟವಾದ ಇಚ್ಛೆಯಿದೆ- ಎಂಬುದು ಇವರಿಗೂ ತಿಳಿದಾಗ ಸಂನ್ಯಾಸದ ಹಂಬಲು ನಮ್ಮಗ್ಗಳಿಗೆ ಇರುವದು ತಪ್ಪೇನೂ ಅಲ್ಲ- ಎಂತ ಅನ್ನಿಸಿತಂತೆ.

### ಕಾಲಟೀಯಾತ್ರೆಯ ಉಪಸಂಹಾರ :

ರಾಯರಿಗೆ ಶಿವಪಂಚಾಕ್ಷರಿಯನ್ನು ಚೆನ್ನಾಗಿ ಜಪಿಸಿ ಸಿದ್ಧಿಯನ್ನು ಪಡೆಯಬೇಕೆಂದು ತವಕವುಂಟಾಯಿತು. ಒಂದು ಸೂತಸಂಹಿತಾಗ್ರಂಥವನ್ನು ಅಲ್ಲಿಯೇ ಕೊಂಡುಕೊಂಡರು. ಆತ್ಮವಿದ್ಯಾವಿಲಾಸ-ಮುಂತಾದ ಕೆಲವು ಪುಟ್ಟ ಪುಸ್ತಕಗಳನ್ನೂ ಸಂಗ್ರಹಿಸಿದರು. ಇನ್ನೂ ಅನೇಕ ಅಮೂಲ್ಯ ಗ್ರಂಥಗಳೂ ಭಾವಚಿತ್ರಗಳೂ ಇದ್ದರೂ ಹಣದ ಅಭಾವದಿಂದ ರಾಯರಿಗೆ ಹೆಚ್ಚು ಕೊಳ್ಳಲಾಗಲಿಲ್ಲ. ಹೀಗೆ ಬಹುಕಾಲದಿಂದ ಮನಸ್ಸಿನಲ್ಲಿ ಹಂಬಲಿಸುತ್ತಿದ್ದ ಭಾಷ್ಯಶಾಂತಿಯ ಕಾರ್ಯವು ಮುಗಿದು ಸಂತೋಷದಿಂದ ಊರಿಗೆ ರಾಯರು ಹಿಂತಿರುಗಿದರು. ಶೃಂಗೇರಿಯ ಜಗದ್ಗುರುಗಳು ಮುಂದೆ ಇನ್ನೂ ಮೂರು ತಿಂಗಳುಗಳವರೆಗೂ ಕಾಲಡಿಯಲ್ಲಿಯೇ ಇದ್ದು ಆ ಬಳಿಕ ಶೃಂಗೇರಿಯ ಕಡೆಗೆ ದಯಮಾಡಿಸಿದರಂತೆ.

ಅಂತೂ ರಾಯರು ಮುಂದೆ ಶಂಕರಭಗವತ್ಪಾದರ ಭಾಷ್ಯಗ್ರಂಥಗಳನ್ನೆಲ್ಲ ಕನ್ನಡಕ್ಕೆ ಅನುವಾದಮಾಡುವ ಮಹಾಕಾರ್ಯಕ್ಕೂ ಆಚಾರ್ಯರ ಸಾಂಪ್ರದಾಯಿಕ ಶುದ್ಧವೇದಾಂತ ಸಿದ್ಧಾಂತದ ಮರ್ಮಗಳನ್ನು ಹೊರಹಾಕಿ ಅದ್ವೈತತತ್ತ್ವಗಳನ್ನು ಪ್ರಚಾರಮಾಡುವದಕ್ಕೂ ಸಂಸ್ಕೃತವ್ಯಾಖ್ಯಾನಗ್ರಂಥಗಳ ಮತ್ತು ಸ್ವತಂತ್ರ ಗ್ರಂಥಗಳ ರಚನೆಯನ್ನು ಮಾಡುವದಕ್ಕೂ ಈಗ ತಳಹದಿಯಾದಂತೆ ಆಯಿತು. ಮಹಾತ್ಮರ ವೀರ್ಯವತ್ತರವಾದ ಉಪದೇಶಗಳು ಸಾಮಾನ್ಯರಿಂದಲೂ ಎಂಥೆಂಥ ಅದ್ಭುತಕಾರ್ಯಗಳನ್ನು ಮಾಡಿಸುತ್ತವೆ!- ಎಂಬುದು ಈ ಸಂದರ್ಭದಿಂದ ಸ್ಫುಟವಾಗುತ್ತದೆ.

≺ ❖ ❖ ❖ ≻

# ೭. ಭಾಷ್ಯಪಾಠಾಭ್ಯಾಸ

# (1911)

**ಭಾಷ್ಯಪಾಠ-ನಿತ್ಯಾನುಷ್ಠಾನ :**

ರಾಯರು ದಾವಣಗೆರೆಗೆ ಹಿಂತಿರುಗಿದ ಮೇಲೆ ಕೊಂಚಕಾಲ ಹರಿಹರದಲ್ಲಿಯೇ ವಾಸವಾಗಿದ್ದು ದಾವಣಗೆರೆಗೆ ಹೋಗೀಬಂದೂ ಮಾಡುತ್ತಿದ್ದರು. ಇದರಿಂದ ಅನುಷ್ಠಾನಕ್ಕೆ ಅನುಕೂಲಿವಾಯಿತು. ಬೆಳಗ್ಗೆ ಸ್ನಾನ, ಆಹ್ನಿಕ ಪೂಜೆಗಳಾದನಂತರ ಪಾರಾಯಣ, ಜಪ-ಇವುಗಳನ್ನು ಬೆಳೆಯಿಸಿದರು. ಪಂಚಾಕ್ಷರೀಮಂತ್ರವನ್ನು ಆದಷ್ಟು ಹೆಚ್ಚಾಗಿಯೇ ಜಪಮಾಡುತ್ತಿದ್ದರು. ಸಾಯಂಕಾಲ ನದಿಯಲ್ಲಿ ಸಂಧ್ಯಾವಂದನೆಯನ್ನು ಮಾಡಿಕೊಂಡು ಹರಿಹರೇಶ್ವರನ ದರ್ಶನಮಾಡಿದ ಬಳಿಕ ಮನೆಯಲ್ಲಿ ದೇವರಿಗೆ ಮಂಗಳಾರತಿಯನ್ನು ಮಾಡಿ ಕೆಲವು ಸ್ತೋತ್ರಪಾಠಗಳನ್ನು ಹೇಳಿಕೊಳ್ಳುತ್ತಿದ್ದರು. ಬೇಸಗೆಯ ರಜದಲ್ಲಿ ಧಾರವಾಡಕ್ಕೆ ಹೋಗಿ ಭಾಷ್ಯವನ್ನು ಓದಬೇಕೆಂದು ಇಬ್ಬರೂ ಸಂಕಲ್ಪಿಸಿದ್ದರು. ಆದರೆ ಶ್ರೀ ವಿರೂಪಾಕ್ಷಶಾಸ್ತ್ರಿಗಳು ಪ್ಲೇಗಿನ ನಿಮಿತ್ತ ಧಾರವಾಡವನ್ನು ಬಿಟ್ಟು ದೇವರಗುಡ್ಡ ಸ್ಟೇಷನ್ ಇರುವ ಖಜ್ಜರಿ ಎಂಬ ಗ್ರಾಮದಲ್ಲಿ ಸಹಸ್ರಬುದ್ಧೆ-ಎಂಬ ಮಾಮಲೇದಾರರ ಮನೆಯಲ್ಲಿ ಕೆಲವು ಶಿಷ್ಯರೊಡನೆ ತಂಗಿದ್ದರು. ರಾಯರೂ ಚಿದಂಬರಯ್ಯನವರೂ ಅಲ್ಲಿಗೆ ಹೋಗಿ ಆ ಸ್ಥಳಕ್ಕೆ ಸ್ವಲ್ಪ ದೂರದಲ್ಲಿರುವ ದೇವರಗುಡ್ಡದಲ್ಲಿ ಒಬ್ಬರ ಮನೆಯಲ್ಲಿ ತಂಗಿದ್ದು ಬೆಳಗಿನ ಹೊತ್ತು ಭಾಷ್ಯಪಾಠಕ್ಕೆ ಕಾಲುನಡಗೆಯಿಂದ ಬರುತ್ತಿದ್ದರು. ಮೊದಮೊದಲು ಪಾಠವು ಗಡುಚಾಗಿ ಕಂಡಿತು. ಬರುಬರುತ್ತಾ ವಿಷಯವು ಸ್ವಲ್ಪಸ್ವಲ್ಪವಾಗಿ ಮನಸ್ಸಿಗೆ ಹಿಡಿಯಲಾರಂಭಿಸಿತು. ಹೀಗೆ ಸ್ವಲ್ಪಕಾಲ ಮುಂದುವರಿಯಿತು. ಇದೇ ಸಮಯದಲ್ಲೇ ಬೆಟಗೇರಿಯ ಕೃಷ್ಣಶಾಸ್ತ್ರಿಗಳೂ ಅಲ್ಲಿಗೆ ದಯಮಾಡಿಸಿ ಮಾನಸಪೂಜೆಯ ಕ್ರಮವನ್ನು ಇಬ್ಬರಿಗೂ ಉಪದೇಶಿಸಿದರು. ಪಾದಾದಿಕೇಶಾಂತವಾಗಿ ಪರಮೇಶ್ವರನ ಮೂರ್ತಿಯನ್ನು ಧ್ಯಾನಿಸುವ ಹಾಗೂ ಪೂಜೆಮಾಡುವ ವಿಧಾನವನ್ನು ತಿಳಿಯಹೇಳಿದರು.

ಮುಂದೆ ಶ್ರೀ ವಿರೂಪಾಕ್ಷಶಾಸ್ತ್ರಿಗಳು ಉದ್ದಗಟ್ಟಿಯಲ್ಲಿ ಅದೇ ಸಹಸ್ರಬುದ್ಧೆಯವರ ಮನೆಯಲ್ಲಿದ್ದಾಗ ಮತ್ತೆ ಭಾಷ್ಯಪಾಠಕ್ಕೆ ರಾಯರು ಹೋಗಿದ್ದರು. ಆದರೆ ನಡುವೆ ರಜಾಕಳೆದು ಸ್ಕೂಲು ಪ್ರಾರಂಭವಾದಾಗ ಭಾಷ್ಯಪಾಠಕ್ಕೆ ವಿಚ್ಛೇದವುಂಟಾಗಿತ್ತು. ಈಗ ಉದ್ದಗಟ್ಟಿಯಲ್ಲಿ ಕೆಲವು ದಿನಗಳು ಪಾಠವು ಮುಂದುವರಿಯಿತು. ಅನಂತರ ಧಾರವಾಡಕ್ಕೂ ಪಾಠಕ್ಕಾಗಿ ಒಂದೆರಡು ಸಲ ರಾಯರು ಹೋಗಿ ಬಂದರು. ಆದರೆ ಧಾರವಾಡದಲ್ಲಿ ಆಗ ಶಾಸ್ತ್ರಿಗಳು ಛಾಂದೋಗ್ಯದ ಆರನೆಯ ಅಧ್ಯಾಯದ ಪಾಠವನ್ನು ಶಿಷ್ಯರಿಗೆ ಹೇಳುತ್ತಿದ್ದರು. ರಾಯರು ಅದನ್ನೇ ಓದುತ್ತಿದ್ದರು. ಹೀಗಾಗಿ ಸೂತ್ರಭಾಷ್ಯಪಾಠವು ಅವಿಚ್ಛಿನ್ನವಾಗಿ ನಡೆಯಲಿಲ್ಲ. ಆದರೂ ಉದ್ದಗಟ್ಟಿಯ ಅಲ್ಪಕಾಲದ ವಾಸವು ರಾಯರಿಗೆ ಕರ್ಮಾನುಷ್ಠಾನ, ಚಿತ್ತಶುದ್ಧಿ, ಏಕಾಂತವಾಸದಿಂದಾಗುವ ಪ್ರತ್ಯಕ್‌ಪ್ರವಣತೆ ಇವುಗಳ ಅನುಭವವನ್ನು ಸಾಕಷ್ಟು ತಂದುಕೊಟ್ಟಿತು.

ಧಾರವಾಡದಲ್ಲಿ ಭಾಷ್ಯಪಾಠಾಭ್ಯಾಸಕಾಲದಲ್ಲಿ ಪರಿಚಿತರಾದ ಶ್ರೀ ಗುರುನಾಥರಾಯರು, ಹಾಗೂ ಉದ್ದಗಟ್ಟಿಯಲ್ಲಿ ಪರಿಚಿತರಾದ ಶ್ರೀ ಸಹಸ್ರಬುದ್ಧೆ-ಇವರುಗಳಿಂದ ರಾಯರಿಗೆ ಕೆಲವು ಆದರ್ಶಗಳು ದೊರೆತವು. ಗುರುನಾಥರಾಯರು ಧಾರವಾಡದ ಸಂಸ್ಕೃತಪಾಠಶಾಲೆಯ ಸ್ಥಾಪಕರು. ವಕೀಲವೃತ್ತಿಯನ್ನು ಸಹ ನಿರ್ಲಕ್ಷಿಸಿ ಪಾಠಶಾಲೆಯ ಪುರೋಭಿವೃದ್ಧಿಗಾಗಿ ದುಡಿದವರು. ಶಾಲೆಯ ಪುಸ್ತಕಭಂಡಾರ, ಕಟ್ಟಡ-ಇವುಗಳಿಗಾಗಿ ಬಹುಶ್ರಮಿಸಿದವರು. ರಾಯರಿಗೆ ಒಂದು ಸಂದರ್ಭದಲ್ಲಿ ಅವರು ದಾರಿಯಲ್ಲಿ ಬಿದ್ದಿದ್ದ ಬಳೆಚೂರನ್ನು ತೆಗೆದುಹಾಕುವ ಸಾಮಾನ್ಯ ರೀತಿಯ ಉದಾಹರಣೆಯೊಂದರಿಂದ ವೇದಾಂತದಂಥ ದೊಡ್ಡವಿಷಯುವನ್ನು ವಿಚಾರಮಾಡುವವರೂ 'ಚುಚ್ಚಿದರೆ ಎಲ್ಲರಿಗೂ ತೊಂದರೆಯಾಗುವಂಥ ಗಾಜಿನ ಚೂರುಗಳನ್ನು ದಾರಿಯಲ್ಲಿ ಕಂಡರೆ ತೆಗೆದು ಅತ್ತ ಎಸೆಯಬೇಕು ಎಂಬುದು ದೊಡ್ಡವಿಷಯವೆಂದೇ ತಿಳಿಯಬೇಕು' ಎಂದು ಹೇಳಿದ್ದರಂತೆ. ಮಾಮಲೇದಾರ ಸಹಸ್ರಬುದ್ಧೆಯವರು ತುಂಬ ಕರ್ಮನಿಷ್ಠರು. ಒಮ್ಮೆ ಒಬ್ಬ ಕಲೆಕ್ಟರ್ ಸಾಹೇಬರು ಕಚೇರಿಯನ್ನು ಸಂದರ್ಶಿಸಲು ಬಂದಾಗ ಮಾಮಲೆದಾರರು ಆಹ್ನಿಕ ಕಾಲವಾದ್ದರಿಂದ ಇನ್ನೂ ಬಂದಿರಲಿಲ್ಲ. ಆದರೂ ಕೆಲಸಗಳೆಲ್ಲ ಸಮರ್ಪಕವಾಗಿದ್ದವು. ಆಗ ವಿದೇಶೀಯರಾಗಿ ಬಂದಿದ್ದ ಕಲೆಕ್ಟರ್‌ರವರು "ಈ ಮಾಮಲೇದಾರರು ಅಗ್ನ್ಯಾರಾಧಕರಿದ್ದು ಮತಾಚಾರ ನಿಮಿತ್ತ ಬೆಳಗಿನ ಹೊತ್ತು ಸ್ವಲ್ಪ ತಡವಾಗಿ ಕಚೇರಿಗೆ ಬರುತ್ತಾರೆಂದು ಕೇಳಿದ್ದೇನೆ. ಆದರೆ ಇವರು ಇಲ್ಲದಿರುವಾಗಲೂ ಕಚೇರಿಯ ಕೆಲಸಗಳು ಶಿಸ್ತಿನಿಂದ ನಡೆಯುತ್ತಿವೆ. ಆದ್ದರಿಂದ ಇವರನ್ನು ಈ ವಿಷಯದಲ್ಲಿ ಯಾರೂ ಆಕ್ಷೇಪಿಸುವದಿಲ್ಲವೆಂದು ನಾನು ನಂಬುತ್ತೇನೆ" ಎಂದು ವಿಸಿಟರ್ಸ್ ಪುಸ್ತಕದಲ್ಲಿ ಬರೆದಿದ್ದರಂತೆ. ಇವರನ್ನು 'ದೇವ-ಮಾಮಲೇದಾರ್' ಎಂದು ಜನರು ಕರೆಯುತ್ತಿದ್ದರು. ಇವರ ಮನೆಯಲ್ಲಿ ಒಂದು ಆರಾಧನೆಯೂ ನಡೆದಿತ್ತು. ಯಾರೋ ಇವರ ಪೂರ್ವಿಕರು ಸಂನ್ಯಾಸಿಗಳಾಗಿ ದೇಹತ್ಯಾಗ ಮಾಡಿರಬೇಕು. ಆರಾಧನೆಗೆ ರಾಯರನ್ನೂ ಆಹ್ವಾನಿಸಿದ್ದರಂತೆ. ಆಗ ರಾಯರು ಇವರ ಕರ್ಮಶ್ರದ್ಧೆಯನ್ನು ಮನಸಾರೆ ಕಂಡು ಸಂತೋಷಗೊಂಡರು. ಅಂತೂ ಸಹಸ್ರಬುದ್ಧೆಯವರ ಕರ್ಮನಿಷ್ಠೆ, ಅತಿಥಿಸತ್ಕಾರ, ವಿದ್ಯಾಪ್ರೇಮ-ಇವುಗಳು ರಾಯರಿಗೆ ಬಹಳ ಹಿಡಿಸಿದವು.

## ವಿರೂಪಾಕ್ಷಶಾಸ್ತ್ರಿಗಳವರ ಗುಣವರ್ಣನೆ :

ಹೀಗೆಯೇ ವೇ।। ವಿರೂಪಾಕ್ಷಶಾಸ್ತ್ರಿಗಳಲ್ಲಿ ಭಾಷ್ಯಪಾಠವು ನಡೆಯುತ್ತಿದ್ದ ಕಾಲದಲ್ಲಿ ವೇ।। ಶಾಸ್ತ್ರಿಗಳರವರ ಅನೇಕ ಸದ್ಗುಣಗಳು, ಸದಾಚಾರಗಳು-ಇವುಗಳು ರಾಯರ ಮೇಲೆ ತುಂಬ ಪರಿಣಾಮವನ್ನುಂಟುಮಾಡಿದವು. ಶ್ರೀ ಶಾಸ್ತ್ರಿಗಳವರಿಗೆ ಪತ್ನೀವಿಯೋಗವಾದ ಮೇಲೆ ಗುರುಗಳು 'ನೀವು ಮತ್ತೂ ಅಗ್ನಿಹೋತ್ರವನ್ನಿಟ್ಟುಕೊಂಡಿರಬೇಕು' ಎಂದು ಹೇಳಿ ಕಳುಹಿಸಿದ್ದಕ್ಕೆ "ಶ್ರೀಗಳ ಸಮ್ಮುಖದಲ್ಲಿ ವೇದಾಂತ ಶ್ರವಣಮಾಡಿದ ಮೇಲೂ ಇನ್ನೂ ಕರ್ಮದಲ್ಲಿ ನಿಂತುಬಿಡುವ ಅಭಿಲಾಷೆ ಉಳಿಯುವದೆ? ಗುರುಗಳು ಮುಂದೆ ನಾನು ವೇದಾಂತನಿಷ್ಠನಾಗಿರುವಂತೆ ಅನುಗ್ರಹಿಸಬೇಕು"- ಎಂದು ವಿಜ್ಞಾಪಿಸಿಕೊಂಡರಂತೆ. ತಾವು ಮನೆಯಲ್ಲಿ ಒಬ್ಬರೇ ಇದ್ದಾಗಲೂ ವ್ಯಾಸಂಗಮಾಡುತ್ತಲೇ ಮನೆಗೆಲಸಗಳನ್ನು ಮಾಡಿ

ಕೊಳ್ಳುತ್ತಿದ್ದರು. ಒಂದುಸಲ ರಾಣೇಬೆನ್ನೂರಿನಲ್ಲಿ ಅವರ ಮಗಳ ಮದುವೆಯಾಯಿತು. ಮದುವೆಯ ನಡುವೆಯೂ ಅವರು ಭಾಷ್ಯ ಪಾಠಹೇಳುತ್ತಿದ್ದರಂತೆ. ಜನರು 'ಈಗಲಾದರೂ ಶಾಸ್ತ್ರಿಗಳಿಗೆ ಈ ಶಿಷ್ಯರು ಬಿಡುವು ಕೊಡಬಾರದೆ?" ಎಂದು ಹಾಸ್ಯಮಾಡಿದರಂತೆ. ಹೀಗಿತ್ತು, ಅವರ ವೇದಾಂತಪ್ರೇಮ! ಮದುವೆಯಲ್ಲೂ ಕೆಲವು ತಿಳಿಯಬೇಕಾದ ವಿಚಾರಗಳಿದ್ದವು. ವೇ|| ಶಾಸ್ತ್ರಿಗಳು ಓಲಗದವರನ್ನು ಕರೆಯಿಸದೆ ಬೀಗರನ್ನು ಉಪಚರಿಸುವಾಗ, ಕರೆಯುವಾಗ-ಕಳುಹಿಸುವಾಗ ಯಾವಾಗಲೂ ವೇದಘೋಷವನ್ನೇ ಮಾಡಿಸುತ್ತಿದ್ದರಂತೆ. ಇಂಥ ಮದುವೆಯನ್ನು ಈಗ ಎಲ್ಲಿ ಕಾಣಲು ಸಾಧ್ಯ? ಒಟ್ಟಿನಲ್ಲಿ ಶಾಸ್ತ್ರಿಗಳವರ ಕರ್ಮಶ್ರದ್ಧೆಯು ಪ್ರತಿಯೊಂದು ಸಂದರ್ಭದಲ್ಲೂ ಎದ್ದು ಕಾಣುತ್ತಿತ್ತು. ಒಂದುಸಲ ಶಾಸ್ತ್ರಿಗಳಿಗೆ ಕಾಲಿನಲ್ಲಿ ಹುಣ್ಣಾದಾಗ ಡಾಕ್ಟರು ನೀರುಹಾಕಬಾರದೆಂದರೂ ಕೇಳದೆ 'ಪ್ರತಿಯೊಂದು ಜನ್ಮದಲ್ಲೂ ಬರುವ ರೋಗಕ್ಕೆ ಡಾಕ್ಟರೇ ಹೊಣೆಯೆ?'· ಎಂದರಂತೆ; ಇಂಥ ದೊಡ್ಡವರು ಶಾಸ್ತ್ರಿಗಳು! ರಾಯರಿಗೆ ಜಗದ್ಗುರುಗಳಲ್ಲಿ ಶಾಂತಿಪಾಠ, ವೇ|| ಶಾಸ್ತ್ರಿಗಳವರಲ್ಲಿ ಭಾಷ್ಯಪಾಠ-ಇವುಗಳು ದೊರಕಿದ್ದು ಅವರ ಜೀವನದಲ್ಲಿ ಕ್ರಾಂತಿಕಾರಕವಾದ ಬದಲಾವಣೆಗಳನ್ನೇ ಉಂಟುಮಾಡಿದವು. ಮುಂದೆ ವೇದಾಂತದಲ್ಲಿಯೇ ಜೀವಮಾನವನ್ನೆಲ್ಲ ಸವೆಯಿಸುವಂಥ ಸುಯೋಗಕ್ಕೆ ಇವು ಪ್ರೇರಕವಾದವು.

## ಗೋಂದಾವಳಿ ಮಹಾರಾಜರ ಪ್ರಸ್ತಾಪ :

ಶಿವಮೊಗ್ಗದಲ್ಲಿ ಶ್ರೀಮಹಾಭಾಗವತರನ್ನು ಜಗದ್ಗುರುಗಳಿಗೆ ಪರಿಚಯಮಾಡಿಸುವ ಸಂದರ್ಭದಲ್ಲಿ ಕಾಫಿಪ್ಲಾಂಟರ್ ಶ್ರೀ ರಾಮಚಂದ್ರರಾಯರು "ಇವರು ಗೋಂದಾವಳಿ ಮಹಾರಾಜರ ಶಿಷ್ಯರು. ಮಹಾರಾಜರಲ್ಲಿ ರಾಮಶಬ್ದವು ಕೂಡ ಇಲ್ಲ. ಹೀಗಿದ್ದರೂ ಇಂಥ ವಿದ್ವಾಂಸರುಗಳೆಲ್ಲ ಅವರ ಶಿಷ್ಯರಾಗಿರುತ್ತಾರೆ" ಎಂದರಂತೆ. ಕೂಡಲೆ ಶ್ರೀಶ್ರೀಗಳವರು "ಅದೇಕೆ, ಹಾಗೆನ್ನುತ್ತೀರಿ? ಅಲ್ಲಿ ಯಾವಾಗಲೂ 'ರಾಮ' ಶಬ್ದವೇ ನಿರಂತರವಾಗಿ ಇದೆಯೆಂದು ಕೇಳಿದ್ದೇನಲ್ಲ!" ಎಂದರಂತೆ. ರಾಮಚಂದ್ರರಾಯರಿಗೆ ತಮ್ಮ ಔದ್ಧತ್ಯದ ಮಾತಿನಿಂದ ನಾಚಿಕೆಯಾಗಿರಬೇಕು. ಗೋಂದಾವಳಿಯ ಮಹಾರಾಜರಿಗೆ ರಾಮಶಬ್ದವನ್ನು ನಡೆಸುವಷ್ಟು ಸಂಸ್ಕೃತವು ಕೂಡ ಬಾರದು-ಎಂದು ಅವರ ಅಭಿಪ್ರಾಯ. ಆದರೆ ಅದೇ ಸಂದರ್ಭವನ್ನು ಶ್ರೀಶ್ರೀಗಳವರು ಪೂಜ್ಯವಾದ ರೀತಿಯಲ್ಲಿಯೇ ಉಪಯೋಗಿಸಿ "ಮಹಾರಾಜರು ಅಖಂಡರಾಮನಾಮಸ್ಮರಣೆಯಿಂದ ಜನಕೋಟಿಯನ್ನು ಉದ್ಧಾರಮಾಡುತ್ತಿರುವ ಮಹಾತ್ಮರಲ್ಲವೆ?" ಎಂದು ತಿಳಿಯಪಡಿಸಿದರು. ಶ್ರೀಜಗದ್ಗುರುಗಳಿಗೆ ದೂರದೇಶವಾದ ಗೋಂದಾವಳಿಯ ವಿಚಾರವೂ ಮಹಾರಾಜರ ಮಹಿಮೆಯೂ ಹೇಗೋ ಗೊತ್ತಾಗಿರಬೇಕು. ಮತ್ತು ಮಹಾರಾಜರ ವಿಷಯದಲ್ಲಿ ಪೂಜ್ಯಬುದ್ಧಿಯೂ ಅವರಿಗೆ ಇದ್ದದ್ದು ರಾಯರಿಗೆ ವ್ಯಕ್ತವಾಯಿತು. ಇದು ಮುಂದೆ ರಾಯರು ಮಹಾರಾಜರನ್ನು ದರ್ಶನ ಮಾಡುವ ಸುಯೋಗಕ್ಕೆ ಪೀಠಿಕೆಯಾಯಿತು.

# ೮. ಗೋಂದಾವಳಿಮಹಾರಾಜರ ಅನುಗ್ರಹ

## ಚಿದಂಬರಯ್ಯನವರು ಮಹಾರಾಜರ ಸೇವೆಗೆ ನಿಂತದ್ದು :

ಶ್ರೀಮಹಾಭಾಗವತರು ಹರಿಹರಕ್ಕೆ ಬಂದಾಗಲೆಲ್ಲ ಅವರು ಗೋಂದಾವಳಿಯ ಮಹಾರಾಜರ ಪ್ರಶಂಸೆಯನ್ನು ಮಾಡುತ್ತಿದ್ದರು. ಚಿದಂಬರಯ್ಯನವರು ಇದರಿಂದ ಪ್ರೇರಿತರಾಗಿ ಭಾಗವತರ ಅಪ್ಪಣೆಯಂತೆ ಗೋಂದಾವಳಿಗೆ ಹೋಗಿ ಮಹಾರಾಜರ ದರ್ಶನವನ್ನು ಪಡೆದುಕೊಂಡರು. ಮಹಾರಾಜರಲ್ಲೇ ಸೇವೆಗೆ ನಿಂತುಬಿಡಲು ಅಪ್ಪಣೆಯನ್ನು ಕೇಳಿದಾಗ ಅವರು "ಆರು ತಿಂಗಳು ಈ ಕ್ರಮದಲ್ಲಿ ನಿತ್ಯಾನುಷ್ಠಾನಮಾಡು, ಆಮೇಲೆ ನೋಡೋಣ!"- ಎಂದರಂತೆ. ಆಗ ಚಿದಂಬರಯ್ಯನವರು ಆರು ತಿಂಗಳವರೆಗೆ ನಿತ್ಯಾನುಷ್ಠಾನ ಮಾಡಿಕೊಂಡಿದ್ದು ಮಹಾರಾಜರಲ್ಲಿ ಪತ್ರಮುಖದಿಂದ ಬೇಡಿಕೊಂಡರು. ಅನುಜ್ಞೆಯೂ ಬಂತು. ಕೂಡಲೆ **"ಯದಹರೇವ ವಿರಜೇತ್ ತರಹರೇವ ಪ್ರವ್ರಜೇತ್"** ಎಂಬಂತೆ ಚಿದಂಬರಯ್ಯನವರು ದಾವಣಗೆರೆಯ ವ್ಯವಹಾರವನ್ನೆಲ್ಲ ಮುಗಿಸಿ ರಜಾಪಡೆದು ಗೋಂದಾವಳಿಗೆ ಹೊರಟೇಬಿಟ್ಟರು!.

ಈಗ ಸ್ಕೂಲಿನಲ್ಲಿ ರಾಯರೇ ಆಕ್ಟಿಂಗ್ ಹೆಡ್‌ಮಾಸ್ಟರಾದರು. ನಿತ್ಯಾಹ್ನಿಕ, ಭಾಷ್ಯವನ್ನು ಓದುವದು-ಇವು ನಡೆದೇ ಇದ್ದವು. ಈ ಕಾಲಕ್ಕೆ ಮತ್ತೆ ಮಹಾಭಾಗವತರು ದಾವಣಗೆರೆಗೆ ದಯಮಾಡಿಸಿದರು. ರಾಯರು ಅವರನ್ನು ತಮ್ಮ ಮನೆಗೆ ಕರೆತಂದು ಪಾದಪೂಜೆಯನ್ನು ಮಾಡಿದರು. ಮಹಾಭಾಗವತರು ಬಹಳ ಪ್ರೇಮದಿಂದ ರಾಯರು ಮಾಡಿದ ಪೂಜೆಯನ್ನು ಸ್ವೀಕರಿಸಿ ಆಶೀರ್ವದಿಸಿದರು. ಇದು ರಾಯರಿಗೆ ಮುಂದೆ ಆಗಲಿರುವ ಮಹಾರಾಜರ ದರ್ಶನವೆಂಬ ಸೂರ್ಯೋದಯಕ್ಕೆ ಮುಂಚಿ ಅರುಣೋದಯದಂತೆ ಸಂಘಟಿಸಿತು. ಭಗವಂತನು ಭಕ್ತಬಂಧುವಲ್ಲವೆ? ಅವನೇ ತನ್ನ ನಾನಾರೂಪಗಳಿಂದ ಹೀಗೆಲ್ಲ ಅನುಗ್ರಹವನ್ನು ಮಾಡುತ್ತಿರುತ್ತಾನೆ. ಮುಂದೆ ಕೆಲವೇ ದಿನಗಳಲ್ಲಿ ಕಡೂರಿನ ರಂಗಾಶಾಸ್ತ್ರಿಗಳೆಂಬುವರು (ಇವರು ರಾಯರ ನೆಂಟರೇ ಆಗಿದ್ದರು) ಬಂದು "ನಾನು ಗೋಂದಾವಳಿಗೆ ಹೋಗಿಬರಬೇಕಾಗಿದೆ, ನೀನೂ ನನ್ನೊಡನೆ ಬರಬೇಕು"- ಎಂದು ರಾಯರನ್ನು ಆಹ್ವಾನಿಸಿದರು. ಆಗ ರಾಯರು ಈಗ ನನಗೆ ರಜಾ ದೊರೆಯುವದಿಲ್ಲವೆಂದು ಹೇಳಿದರು. ಆದರೂ ರಂಗಾಶಾಸ್ತ್ರಿಗಳು ಒತ್ತಾಯವನ್ನು ಬಿಡಲಿಲ್ಲ. 'ಗೋಂದಾವಳಿಯಲ್ಲಿ ನನ್ನನ್ನು ಬಿಟ್ಟು ನೀನು ಹಿಂತಿರುಗಿ ಬರಬಹುದು. ಅಷ್ಟು ಉಪಕಾರವನ್ನು ಮಾಡು' ಎಂದು ಕೇಳಿಕೊಂಡಾಗ ಬಂಧುಗಳೂ ವೈದಿಕರೂ ವಿದ್ವಾಂಸರೂ ಆಗಿದ್ದ ರಂಗಾಶಾಸ್ತ್ರಿಗಳ ಮಾತನ್ನು ಮೀರುವದು ರಾಯರಿಗೆ ಸಾಧ್ಯವಾಗಲಿಲ್ಲ. ರಂಗಾಶಾಸ್ತ್ರಿಗಳು ಇಬ್ಬರು ಹೆಂಡಿರನ್ನು ಕಳೆದುಕೊಂಡು ಮತ್ತೆ ವಿವಾಹವಾಗಲು ಮಹಾರಾಜರ ಅಪ್ಪಣೆಯನ್ನು ಬೇಡಲು ಹೊರಟಿದ್ದರು. ಅವರ ಇಬ್ಬರು ಮೃತಪತ್ನಿಯರೂ ರಾಯರ ಅಕ್ಕನವರ ಹೆಣ್ಣು ಮಕ್ಕಳೇ ಆಗಿದ್ದರು. ಹೀಗೆಲ್ಲ ಸಂದರ್ಭವು ಒದಗಿಬಂದ ಕಾರಣ ರಾಯರಿಗೆ ಗೋಂದಾವಳಿಗೆ ಹೊರಡಲೇಬೇಕಾದ ಪರಿಸ್ಥಿತಿಯು ಒದಗಿತು.

## ಗೋಂದಾವಳಿಗೆ ಪ್ರಯಾಣ; ಶೇಷಾಚಲ ಸಾಧುಗಳ ದರ್ಶನ:

ರಾಯರು ಗೋಂದಾವಳಿಗೆ ಹೊರಡುವ ಸ್ವಲ್ಪ ಮುಂಚೆ ಅವರಿಗೆ ಪರಿಚಿತರಾಗಿದ್ದ ದಾಸಪ್ಪ ಸ್ವಾಮಿಗಳೆಂಬವರು ಬಂದು ಹರಿಹರದಲ್ಲಿ ಚಾತುರ್ಮಾಸ್ಯಕ್ಕೆ ನಿಲ್ಲುವದಾಗಿಯೂ ಆಗ್ಗೆ ಬೇಕಾದ ವಸ್ತ್ರಗಳನ್ನು ಒದಗಿಸಬೇಕೆಂದೂ ಕೇಳಿದರು. ರಾಯರು ಸಂತೋಷದಿಂದ ಒಪ್ಪಿ ತಾವು ಗೋಂದಾವಳಿಗೆ ಹೋಗುವದಾಗಿಯೂ ಒಬ್ಬ ಸ್ನೇಹಿತರ ಕೈಯಲ್ಲಿ ವಸ್ತ್ರಗಳನ್ನು ಕಳುಹಿಸುವದಾಗಿಯೂ ತಿಳಿಸಿ ಅದರಂತೆ ಏರ್ಪಾಡು ಮಾಡಿದರು. ರಂಗಾಶಾಸ್ತ್ರಿಗಳೊಡನೆ ಗೊತ್ತಾಗಿದ್ದ ದಿನವೇ ಪ್ರಯಾಣ ಮಾಡಲು ನಿಶ್ಚಯಿಸಿ ಸ್ಕೂಲಿಗೆ ಕ್ಯಾಜುಯಲ್ ರಜಾ ಬರೆದು ಗೋಂದಾವಳಿಗೆ ಹೊರಟೇಬಿಟ್ಟರು. ಮೊದಲು ಹಾವೇರಿಯನ್ನು ತಲುಪಿದರು. ಅಲ್ಲಿ ಶೇಷಾಚಲಸಾಧುಗಳ ದರ್ಶನವಾಯಿತು.

ರಾಯರೂ ರಂಗಶಾಸ್ತ್ರಿಗಳೂ ಅಲ್ಲಿಗೆ ಹೋದಾಗ ಸಾಧುಗಳು ಊಟದ ಎಲೆಯನ್ನು ಹಚ್ಚುತ್ತಿದ್ದರಂತೆ. 'ಶೇಷಾಚಲ ಸಾಧುಗಳು ಎಲ್ಲಿದ್ದಾರೆ?' ಎಂದು ಅವರನ್ನೇ ಕೇಳಲಾಗಿ ಹತ್ತಿರ ಕುಳಿತಿದ್ದವರು ನಸುನಗೆಯಿಂದ 'ಇವರೇ' ಎಂದು ಸಂಜ್ಞೆಮಾಡಿ ತಿಳಿಸಲು ರಾಯರೂ ಶಾಸ್ತ್ರಿಗಳೂ ಭಯಭಕ್ತಿಗಳಿಂದ ನಮಸ್ಕರಿಸಿದರು. ಸಾಧುಗಳೆಂದರೆ ಇಷ್ಟು ಸುಲಭರಾಗಿರುತ್ತಾರೆಂದೂ ಸರಳರಾಗಿರುತ್ತಾರೆಂದೂ ರಾಯರಿಗೆ ಆಗಲೇ ತಿಳಿದದ್ದು.

ಅಲ್ಲಿಯ ಜನರೆಲ್ಲರೂ ಅತಿಥಿಸತ್ಕಾರದಲ್ಲಿ ನಿರತರಾಗಿದ್ದರು. ಅಲ್ಲಿಯ ಭಕರಿಪ್ರಧಾನವಾದ ಊಟವು ರಾಯರಿಗೆ ಹೊಸದಾಗಿತ್ತು. ಸಾಧುಗಳು ತುಂಬ ಸರಳಸ್ವಭಾವದವರು. ಇಲ್ಲಿ ಕೂತಿದ್ದರೆ ಅಲ್ಲಿ ಜನರಿಗೆ ಹರಿಕಥೆಯ ಶೈಲಿಯಿಂದ ಬೋಧೆಮಾಡುತ್ತಿದ್ದರು. ಭಕ್ತರು ಅವರಿಗೆ ಆರತಿ ಮಾಡುತ್ತಿದ್ದದ್ದು ರಾಯರಿಗೆ ಸ್ವಲ್ಪ ವಿಲಕ್ಷಣವಾಗಿ ತೋರಿತು. ಆ ಸಾಧುಗಳಿಗೆ ಶೃಂಗೇರಿ ಜಗದ್ಗುರುಗಳ ಕೃಪೆಯಿಂದ ಜ್ಞಾನೋದಯವಾಗಿದೆ-ಎಂದೂ ಕೆಲವರು ಹೇಳುತ್ತಿದ್ದರಂತೆ. ಅಂತೂ ಸಾಧುಗಳ ಅಪ್ಪಣೆಯನ್ನು ಪಡೆದು ಇಬ್ಬರೂ ಗೋಂದಾವಳಿಗೆ ಪ್ರಯಾಣವನ್ನು ಬೆಳೆಸಿದರು.

## ಶ್ರೀ ಬ್ರಹ್ಮಚೈತನ್ಯಸದ್ಗುರುಮಹಾರಾಜರ ದರ್ಶನ :

ಕೋರೆಗಾಂವ್ (ಬೆಂಗಳೂರು-ಪುಣೆ ರೈಲುದಾರಿಯಲ್ಲಿರುವ ಒಂದು ಚಿಕ್ಕ ಸ್ಟೇಷನ್) ಸ್ಟೇಷನ್‌ನಲ್ಲಿ ಇಳಿದು ಎತ್ತಿನಬಂಡಿಯ ಮೇಲೆ ರಾಯರೂ ರಂಗಾಶಾಸ್ತ್ರಿಗಳೂ ಗೋಂದಾವಳಿಗೆ ತಲುಪಿದರು. ಗುರುಪೂರ್ಣಿಮೆಯ ಸಂದರ್ಭವಾದ್ದರಿಂದ ಅಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಜನರು ಸೇರಿದ್ದರು. ಚಿದಂಬರಯ್ಯನವರನ್ನು ರಾಯರು ಹುಡುಕಿದರು. ಅವರು ಬಂದು ಇವರುಗಳಿಗೆ ಸ್ನಾನವಸತಿಗಳಿಗೆ ಏರ್ಪಡಿಸಿಕೊಟ್ಟು ಮಹಾರಾಜರ ದರ್ಶನವನ್ನು ಮಾಡಿಸಿದರು. **"ನ ಕರ್ಮಣಾ ನ ಪ್ರಜಯಾ ಧನೇನ"** ಮಂತ್ರವನ್ನು ಪಠಿಸಿ ಇಬ್ಬರೂ ಮಹಾರಾಜರಿಗೆ ನಮಸ್ಕರಿಸಿದರು. ಮಹಾರಾಜರಿಗೆ* ಸ್ವಲ್ಪ ಕನ್ನಡವು ಬರುತ್ತಿತ್ತೆಂದು ಕಾಣುತ್ತದೆ. "ಆರೆ ಮಾತು

* ಇನ್ನು ಮುಂದೆ ಮಹಾರಾಜರು-ಎಂದರೆ ಗೋಂದಾವಳೀ ಬ್ರಹ್ಮಚೈತನ್ಯ ಸದ್ಗುರು ಮಹಾರಾಜರು ಎಂದೇ ತಿಳಿಯಬೇಕು

ಬರ್ತಾವು? ಝುಳಕಮಾಡು" ಎಂದು ಎರಡು ಮಾತನ್ನಾಡಿದರು. ಮಹಾರಾಜರಿಗೆ ಪುನಃ ನಮಸ್ಕರಿಸಿ ರಾಯರು ಚಿದಂಬರಯ್ಯನವರೊಡನೆ ಮಂಗಳಾರತಿಗೆ ಹೋದರು. ಅಲ್ಲಿ ಮರಾಠಿಪದಗಳನ್ನು ಹೇಳಿಕೊಂಡು ಆರತಿ ಮಾಡುತ್ತಿದ್ದರು. ರಾತ್ರೆ ಬಹಳ ಹೊತ್ತಾದ ಮೇಲೆ ಫಲಾಹಾರವಾಯಿತು.

## ಮಹಾರಾಜರ ಸನ್ನಿಧಿಯಲ್ಲಿ ನಿತ್ಯಕಾರ್ಯಕ್ರಮ :

ಬೆಳಗ್ಗೆ ಎದ್ದು ರಾಯರು ಮಾನಗಂಗಾನದಿಯಲ್ಲಿ ಸ್ನಾನಮಾಡಿದರು. ನದಿ ಎಂಬುದು ಹೆಸರಿಗೆ ಮಾತ್ರವಾಗಿತ್ತು. ಅದರಲ್ಲಿಯ ಒರತೆಯ ನೀರಿನಿಂದ ಸ್ನಾನ ಮಾಡಬೇಕಾಗಿತ್ತು. ಶ್ರೀ ಚಿದಂಬರಯ್ಯನವರ ಸೂಚನೆಯಂತೆ ಮೊದಲು ಚಿಕ್ಕರಾಮಮಂದಿರದಲ್ಲಿ ಗಂಧವನ್ನು ತೇಯ್ದುಕೊಂಡು ಪೂಜೆಮಾಡಿ ಆ ಬಳಿಕ ದೊಡ್ಡರಾಮಮಂದಿರಕ್ಕೆ ಪೂಜೆಗೆ ಹೋಗುವ ಪದ್ಧತಿಯಂತೆಯೇ ರಾಯರೂ ಮಾಡಿದರು. ಅನಂತರ ಮಹಾರಾಜರಿಗೆ ಪಾದಪೂಜೆಯನ್ನು ಮಾಡುವದು ಕ್ರಮ. ಬಂದವರನ್ನೆಲ್ಲ ಮಹಾರಾಜರು 'ಯಾ! ಯಾ!' ಎನ್ನುತ್ತಿದ್ದರು. ಭಕ್ತರುಗಳು ಅವರ ಪಾದಾಂಗುಷ್ಠವನ್ನು ತೊಳೆದು ಗಂಧವನ್ನು ಹಚ್ಚಿ ಲಕ್ಕಿಯ ಪತ್ರೆಯನ್ನು ಪೂಜೆಮಾಡಿ ನಮಸ್ಕರಿಸುತ್ತಿದ್ದರು. ರಾಯರೂ ಅದರಂತೆಯೇ ಮಾಡಿದರು. ಅನಂತರ 'ವಿಪ್ರಪಾದೋದಕಂ ಪೀತ್ವಾ ವಿಷ್ಣುಪಾದೋದಕಂ ಪಿಬೇತ್' ಎಂಬ ವಚನದಂತೆ ಗುರುಪಾದ ತೀರ್ಥವನ್ನು ಸ್ವೀಕರಿಸಿದರು. ಮಹಾರಾಜರು ಇವರ ಯೋಗಕ್ಷೇಮವನ್ನು ವಿಚಾರಿಸಿದರು. ಅವರು ಹೋದಲ್ಲೆಲ್ಲ ಜನರ ಗುಂಪು ಇರುತ್ತಿತ್ತು. ರಾಯರೂ ಅವರ ಹಿಂದೆಯೇ ಹೊರಟರು. ಹೋದ ಹೋದ ಕಡೆಗಳಲ್ಲಿ ಜನರು ಮಹಾರಾಜರಿಗೆ ಪಾದಪೂಜೆಯನ್ನು ಮಾಡುತ್ತಿದ್ದರು. ಏನಾದರೂ ಫಲಾಹಾರಕ್ಕೆ ಭಕ್ತರು ಕೊಟ್ಟದ್ದನ್ನು ಮಹಾರಾಜರು ಅಲ್ಲಲ್ಲೇ ಹಂಚಿಬಿಡುತ್ತಿದ್ದರು. ಮಹಾರಾಜರು ಸ್ನಾನವಾದ ಬಳಿಕ ಮಂಗಲಾರತಿಗೆ ಬರುತ್ತಿದ್ದರು. ಅವರ ಸ್ನಾನಕ್ಕೆ ಅನೇಕರು ಸಹಾಯ ಮಾಡುತ್ತಿದ್ದರು. ಕೆಲವರು ಪಂಚಾಮೃತ ಸ್ನಾನವನ್ನು ಮಾಡಿಸುತ್ತಿದ್ದರು. ಅನಂತರ ಮೈಯೊರಸಿ ಕೆನ್ನೆಗೆ ಕೇಸರಿಯನ್ನು ಬಳಿಯುತ್ತಿದ್ದರು. ಸ್ವಭಾವದಿಂದಲೇ ಕೆಂಪಗಿದ್ದ ಅವರ ಮುಖಕ್ಕೆ ಆಗ ಹೆಚ್ಚಿನ ಕಾಂತಿಯು ಬರುತ್ತಿತ್ತು. ಹಣೆಗೆ ನಾಮವನ್ನು ಇಡುತ್ತಿದ್ದರು; ರಾಮಮುದ್ರೆಯನ್ನು ಧರಿಸುತ್ತಿದ್ದರು; ಮೈಗೆ ಕಫನಿಯನ್ನೂ ತಲೆಗೆ ಕುಲಾಯಿಯನ್ನೂ ಧರಿಸುತ್ತಿದ್ದರು. ಆ ದಿನವೂ ಹೀಗೆ ಮಿಂದು ಮಡಿಯುಟ್ಟು ಬಂದು ದೇವರುಗಳಿಗೆಲ್ಲ ಹೂಗಳನ್ನು ಪೂಜಿಸಿದರು; ಮಂಗಲಾರತಿಯಾಯಿತು; ಎಲ್ಲರೂ ನಮಸ್ಕರಿಸಿದರು. ಅನಂತರ ಮಹಾರಾಜರು ತಮ್ಮ ಖೋಲಿಗೆ (ಕೋಣೆಗೆ) ಹೋದರು.

ಮಹಾರಾಜರು ಊಟಕ್ಕೆ ಬರುವರೆಂದು ಎಲ್ಲರೂ ನಿರೀಕ್ಷಿಸುತ್ತಿದ್ದರು. ಆದರೆ ಅವರು ಒಬ್ಬರೇ ರಾಮಮಂದಿರಕ್ಕೆ ಹೊರಟಿದ್ದರು. ವೃದ್ಧರಾದ ಮಹಾರಾಜರು ಎಡಬಲಪಕ್ಕಗಳಲ್ಲಿ

ಜನರ ಹೆಗಲಮೇಲೆ ಕೈಹಾಕಿಕೊಂಡು ಹೋಗುವದು ಪದ್ಧತಿ. ಆಗ ಮಾತ್ರ ಅವರೊಬ್ಬರೇ ಪ್ರಾಯದವರಂತೆ ವೇಗದಿಂದ ನಡೆಯುತ್ತಿದ್ದರು. ಜನರು ಗುಂಪು ಮತ್ತೆ ಹಿಂಬಾಲಿಸಿತು. ಎಲ್ಲರಿಂದಲೂ 'ಜಯ ಜಯ ಶ್ರೀರಾಮ! ಜಯ ಹರಿ ಶ್ರೀರಾಮ!' ಎಂಬ ಭಜನೆಯನ್ನು ಮಾಡಿಸುತ್ತಿದ್ದರು. ಅವರ ಮನೆಯೇ ರಾಮಮಂದಿರವಾಗಿತ್ತು. ಸದಾಕಾಲವೂ ಅದರ ಬಾಗಿಲು ತೆರೆದೇ ಇರುತ್ತಿತ್ತು. ಮಹಾರಾಜರ ಹಿಂದೆ ಮುಂದೆ ನಿರಂತರವಾಗಿ ಭಜನೆಯ ಸದ್ದು ಕೇಳಿಸುತ್ತಿತ್ತು. ನೀರನ್ನು ತರುವ ಹೆಣ್ಣುಮಕ್ಕಳು, ಅಡಿಗೆ ಮಾಡುವವರು ಎಲ್ಲರೂ ರಾಮಭಜನೆಯನ್ನು ಮಾಡುತ್ತಿದ್ದರು. ಕೊನೆಗೆ ಮಹಾರಾಜರು ರಾಮಮಂದಿರದಿಂದ ಮಧ್ಯಾಹ್ನ 1 ಘಂಟೆಯ ವೇಳೆಗೆ ಆ ದಿನ ಊಟಕ್ಕೆ ಬಂದರು. ಊಟಕ್ಕೆ ಎಲ್ಲರಿಗೂ ತಟ್ಟೆಗಳನ್ನು ಹಾಕಲಾಗಿತ್ತು. ಶ್ರೀ ರಂಗಾಶಾಸ್ತ್ರಿಗಳಿಗೆ ಇದು ಒಪ್ಪಿಗೆಯಾಗಲಿಲ್ಲವಾದರೂ ಉಳಿದವರು ಅವರನ್ನು ಸಮಾಧಾನಪಡಿಸಿದರು. ಊಟಕ್ಕೆ ಪ್ರಾರಂಭವಾಗುವ ಮುಂಚೆ ಮಹಾರಾಜರು ತಮ್ಮ ಎಲೆಯಿಂದ ಎತ್ತಿ ಪ್ರಸಾದವನ್ನು ಶಾಸ್ತ್ರಿಗಳಿಗೆ ಕೊಟ್ಟರು. ಊಟದ ನಡುವೆಯೂ ಭಜನೆಯು ನಡೆಯುತ್ತಿತ್ತು. ರಾಯರು ಮತ್ತು ರಂಗಾಶಾಸ್ತ್ರಿಗಳ ಹಿಂದಿನ ಸಾಲಿನಲ್ಲಿ ಕೆಲವು ಅಬ್ರಾಹ್ಮಣರೂ ಊಟಕ್ಕೆ ಕುಳಿತಿದ್ದರು. ಶಾಸ್ತ್ರಿಗಳು ಅತ್ತ ಕಡೆ ತಿರುಗಿಯೂ ನೋಡದೆ "ಇಲ್ಲಿ ಒಂದು ಕಾಂಡವೇ (ಕರ್ಮಕಾಂಡವೇ) ತಪ್ಪಿಸಿಕೊಂಡು ಹೋಗಿರುವಂತೆ ಕಾಣುತ್ತದೆ" ಎಂದು ಸ್ವಗತವಾಗಿ ಗೊಣಗಿಕೊಂಡರು.

ರಾತ್ರೆ ಭಜನೆಯು ಪ್ರಾರಂಭವಾಯಿತು. ಮಧ್ಯೆ ಮಹಾರಾಜರು ದಯಮಾಡಿಸಿದರು. 'ಸೀತಾರಾಮ್! ಸೀತಾರಾಮ್!' ಎಂದು ಹೇಳಿಕೊಡುತ್ತಿದ್ದದ್ದು ಅಜ್ಜಯ್ಯನು ಪ್ರೇಮದಿಂದ ಮೊಮ್ಮಕ್ಕಳಿಗೆ ಹೇಳಿಕೊಡುವ ಬಾಯಿಪಾಠದಂತಿತ್ತು. ಅವರು ಕುಳಿತಿದ್ದಾಗ ಭಕ್ತರು ಕಾಲುಗಳನ್ನು ಒತ್ತುತ್ತಿದ್ದರು. ಅನವಶ್ಯಕವಾಗಿ ಕೆಲವರು ಒತ್ತುತ್ತಿದ್ದುದೂ ಉಂಟು. ಮಂಗಲಾರತಿಯಾದ ಮೇಲೆ ಭಜನೆಯು ಪೂರೈಸಿತು.

### ರಾಮಮಂತ್ರೋಪದೇಶಕ್ಕೆ ಸಿದ್ಧತೆ :

ಮಹಾರಾಜರಿಂದ ರಾಮಮಂತ್ರೋಪದೇಶವನ್ನು ಪಡೆದುಕೊಳ್ಳಬೇಕೆಂದು ರಂಗಾಶಾಸ್ತ್ರಿಗಳು ಬಯಸಿದರು. ರಾಯರಿಗೂ ಅದು ಇಷ್ಟವಾಗಿತ್ತು. ಆದರೆ ಏಕಾಂತದಲ್ಲಿ ಮಹಾರಾಜರಲ್ಲಿ ಈ ವಿಷಯವನ್ನು ಪ್ರಸ್ತಾಪಿಸುವದೇ ಕಷ್ಟವಾಗಿತ್ತು. ಏಕೆಂದರೆ ಯಾವಾಗಲೂ ಮಹಾರಾಜರೊಡನೆ ಜನರು ಇದ್ದೇ ಇರುತ್ತಿದ್ದರು. ದೈವಯೋಗದಿಂದ ಆ ಕಾಲಕ್ಕೆ ಶ್ರೀ ಬೆಟಗೇರಿ ಕೃಷ್ಣಶಾಸ್ತ್ರಿಗಳು ಗೋಂದಾವಳಿಗೆ ಬಂದಿದ್ದರು. ಇದು ರಾಯರ ಪುಣ್ಯವೇ ಸರಿ. ಕೃಷ್ಣಶಾಸ್ತ್ರಿಗಳವರಲ್ಲಿ ವಿಷಯವನ್ನು ಪ್ರಸ್ತಾಪಿಸಿ, "ಶಿವಪಂಚಾಕ್ಷರಿಯ ಉಪದೇಶವಾಗಿದೆ; ರಾಮಮಂತ್ರವನ್ನು ಉಪದೇಶ ತೆಗೆದುಕೊಳ್ಳುವದರ ಔಚಿತ್ಯವನ್ನು ಕುರಿತು ತಾವು ನಮಗೆ ಬುದ್ಧಿಹೇಳಬೇಕು" ಎಂದು ರಾಯರು ಕೇಳಿದರು. ಕೂಡಲೆ ಶಾಸ್ತ್ರಿಗಳು "ಅವಶ್ಯವಾಗಿ

ಉಪದೇಶವನ್ನು ತೆಗೆದುಕೊಳ್ಳಿರಿ. ಮಹಾರಾಜರು ದೊಡ್ಡ ಮಹಾತ್ಮರು. ಅವರ ಅನುಗ್ರಹವೆಂಬುದು ಸಾಮಾನ್ಯವಲ್ಲ. ಒಮ್ಮೆ ವಾತರೋಗದಿಂದ ನರಳುತ್ತಿದ್ದ ನಾನು ಚಿಕ್ಕರಾಮಮಂದಿರದಲ್ಲಿ ಮಲಗಿದ್ದಾಗ ಮಹಾರಾಜರು ಬಂದುಹೋಗುವಾಗ 'ಶಾಸ್ತ್ರಿಗಳಿಗೆ ಕೈಮುಗಿಯಬೇಕೆಂಬ ಇಚ್ಛೆಯಿದೆ. ಶ್ರೀರಾಮನು ನಡೆಯಿಸಿಕೊಡಬೇಕು' ಎಂದು ನುಡಿದು ಹೊರಟುಹೋದರು. ಮಾರನೆಯದಿನ ನನಗೆ ಕೈಜೋಡಿಸಲು ಸಾಧ್ಯವಾಯಿತು. ಮತ್ತೆ ಮರುದಿನ 'ಶಾಸ್ತ್ರಿಗಳು ಎದ್ದು ಕೂತುಕೊಳ್ಳಬೇಕೆನ್ನುತ್ತಾರೆ. ಶ್ರೀರಾಮನ ಕೃಪೆ ಬೇಕು' ಎನ್ನಲು ಮಾರನೆಯ ದಿನ ಅದೂ ಸಾಧ್ಯವಾಯಿತು. ಹೀಗೆಯೇ ಅವರ ಸತ್ಸಂಕಲ್ಪದಿಂದ ನಾನು ಸಂಪೂರ್ಣವಾಗಿ ಸ್ವಾಸ್ಥ್ಯವನ್ನು ಪಡೆದುಕೊಂಡೆನು. ಇದೇ ರೀತಿಯಾಗಿ ಇವರ ಶಿಷ್ಯರಾದ ಬ್ರಹ್ಮಾನಂದರಲ್ಲಿ ಕೆಲವರು ಉಪದೇಶಕ್ಕೆ ಬರಲಾಗಿ ಅವರು ಒಬ್ಬೊಬ್ಬರಿಗೆ ಒಂದೊಂದು ಮಂತ್ರವನ್ನು ಅವರವರಿಗೆ ಉಚಿತವಾದದ್ದನ್ನು ಉಪದೇಶಿಸಿದರು. ಆಗ ಅವರುಗಳು 'ನಮಗೆಲ್ಲರಿಗೂ ರಾಮಂತ್ರವೇ ಬೇಕಾಗಿತ್ತು. ಮಹಾರಾಜರಲ್ಲೇ ಹೋಗಿ ಪ್ರಾರ್ಥಿಸಿಕೊಳ್ಳೋಣ!' ಎಂದು ಬ್ರಹ್ಮಾನಂದರಿಲ್ಲದ ವೇಳೆಯಲ್ಲಿ ಬಂದು ಮಹಾರಾಜರಿಂದ ಉಪದೇಶವನ್ನು ಪಡೆಯಲು ಮಹಾರಾಜರು ಅವರುಗಳಲ್ಲಿ ಯಾರು ಯಾರಿಗೆ ಯಾವ ಯಾವ ಮಂತ್ರವನ್ನು ಬ್ರಹ್ಮಾನಂದರು ಹೇಳಿಕೊಟ್ಟಿದ್ದರೋ ಅದದನ್ನೇ ಉಪದೇಶಿಸಿದರಂತೆ! 'ಈ ಎಲ್ಲಾ ಮಂತ್ರಗಳೂ ಶ್ರೀರಾಮನನ್ನೇ ಹೇಳುತ್ತವೆ ಎಂದು ನಂಬಿರಿ!' ಎಂದು ಸಮಾಧಾನಪಡಿಸಿದರಂತೆ! ಹೀಗಿದೆ ಅವರ ಮಹಿಮೆ! ನೀವು ಏನೂ ಯೋಚನೆ ಮಾಡದೆ ಉಪದೇಶವನ್ನು ಸ್ವೀಕರಿಸಿರಿ. ನಿಮಗೆ ಹಿತವಾದದ್ದನ್ನೇ ಅವರು ಹೇಳುವರು" ಎಂದು ತಿಳಿಸಿದರು.

## ಗುರುಪೂರ್ಣಿಮೆಯ ದಿನದ ಉಪದೇಶ :

ಮಾರನೆಯ ದಿನ ಗುರುಪೂರ್ಣಿಮೆಯಾಗಿತ್ತು. ಮಹಾರಾಜರನ್ನು ಒಂದು ಕುದುರೆಯ ಮೇಲೆ ಕುಳ್ಳಿರಿಸಿ ವಾದ್ಯವೃಂದ ಭಜನೆಗಳೊಡನೆ ಉತ್ಸವ ಮಾಡಿಕೊಂಡು ಹೊರಟರು. ಕುದುರೆಯು ಲಗಾಮು ಇಲ್ಲವಾದರೂ ಗದ್ದಲಕ್ಕೆ ಬೆದರದೆ ಬೇಕಾದಾಗ ಸರಿಯಾಗಿ ನಿಂತುಕೊಳ್ಳುತ್ತಾ ಮುಂದೆ ನಡೆಯುತ್ತಿತ್ತು. ಮಹಾರಾಜರು ರೇಶ್ಮೆಯ ಕಫನಿಯನ್ನು ಹಾಕಿ ತಲೆಗೆ ರುಮಾಲನ್ನು ಸುತ್ತಿದ್ದರು. ಮೊದಲು ಗೋಶಾಲೆಗೂ ಅನಂತರ ಸಭಾಮಂಟಪಕ್ಕೂ ದಯಮಾಡಿಸಿದರು. ಅಲ್ಲಿ ಉಚ್ಚಾಸನದಲ್ಲಿ ಅವರನ್ನು ಕುಳ್ಳಿರಿಸಿ ಎಲ್ಲರೂ ಅವರಿಗೆ ನಮಸ್ಕರಿಸಿದರು. ಒಬ್ಬೊಬ್ಬರಾಗಿ ಫಲ-ದಕ್ಷಿಣೆ ಇವುಗಳನ್ನು ಪಾದದಲ್ಲಿ ಅರ್ಪಿಸುತ್ತಿದ್ದರು. ಭಕ್ತರು ಕೊಡುವ ಕಾಣಿಕೆಯ ಹಣವನ್ನು ಯಾರೋ ಹತ್ತಿರವಿದ್ದವರ ಕೈಗೆ ಮಹಾರಾಜರು ಕೊಟ್ಟುಬಿಡುತ್ತಿದ್ದರು. ಆದರೂ ಪರೋಕ್ಷಜ್ಞಾನಿಗಳಾದ ಮಹಾರಾಜರು ಎಲ್ಲವನ್ನೂ ತಿಳಿದಿರುತ್ತಾರೆಂಬ ಅಂಜಿಕೆಯಿಂದ ಎಲ್ಲರೂ ಸಮಯ ಬಂದಾಗ ಲೆಕ್ಕಾಚಾರವನ್ನು ಸರಿಯಾಗಿಯೇ ಒಪ್ಪಿಸುತ್ತಿದ್ದರು. ಸಭಾಮಂದಿರದಲ್ಲಿದ್ದ ಗುರುಗಳ ಭಾವಚಿತ್ರವನ್ನು ಮಹಾರಾಜರು ಭಕ್ತಿಯಿಂದ

ಪೂಜಿಸಿ ನಮಸ್ಕರಿಸಿದರು. ಗೋಪೂಜೆಯಾದ ಬಳಿಕ ಮಹಾರಾಜರನ್ನು ಮೆರವಣಿಗೆಯಿಂದಲೇ ರಾಮಮಂದಿರಕ್ಕೆ ಕರೆತಂದರು. ಅಲ್ಲಿ ಮರಾಠಿಭಾಷೆಯಲ್ಲಿ ಮಹಾರಾಜರು ಒಂದು ಉಪದೇಶವನ್ನು ಸುಮಾರು ಮುಕ್ಕಾಲುಘಂಟೆಯ ಕಾಲ ಅನುಗ್ರಹಿಸಿದರು. ಅದರ ಅಭಿಪ್ರಾಯವು ಹೀಗಿದೆ; "ನೀವು ಕಾಡಿಗೆ ಹೋಗಿ ತಣ್ಣೀರು ಸ್ನಾನ ಮಾಡಿ ಬಿಸಿಲು ಚಳಿ ಮಳೆಗಳಿಂದಾಗುವ ವ್ಯಥೆಯನ್ನು ತಡೆದುಕೊಂಡು ತಪಸ್ಸುಮಾಡಬೇಕಾದದ್ದೇನೂ ಅವಶ್ಯವಿಲ್ಲ. ಇದ್ದಲ್ಲಿಯೇ ರಾಮನಾಮಸ್ಮರಣೆಯನ್ನು ಮಾಡುತ್ತಿದ್ದರೆ ಸಾಕು. ನಿಮ್ಮ ಮನೆ, ಹೆಂಡಿರು ಮಕ್ಕಳೆಲ್ಲರನ್ನೂ ಶ್ರೀರಾಮನು ನೋಡಿಕೊಳ್ಳುವದಕ್ಕೆಂದು ಕೊಟ್ಟಿರುತ್ತಾನೆಂದೂ, ಕೇಳಿದಾಗ ಆತನಿಗೆ ವಾಪಸು ಎಲ್ಲವನ್ನೂ ಒಪ್ಪಿಸಬೇಕಾಗುವದೆಂದೂ ತಿಳಿದು ನಿರ್ಲಿಪ್ತರಾಗಿರಿ. ನಿರ್ಮಲವಾದ ಭಕ್ತಿಭಾವದಿಂದ ಆರುತಿಂಗಳವರೆಗೆ ರಾಮನಾಮಜಪವನ್ನು ಮಾಡುತ್ತಿರಿ. ಇದರಿಂದ ಶ್ರೀರಾಮನ ಅನುಗ್ರಹವಾಗುವದೆಂಬುದು ನಿಮ್ಮ ಅನುಭವಕ್ಕೇ ಬರುತ್ತದೆ. ಹೀಗೆ ಮಾಡಿದರೂ ಯಾವ ಸತ್ಫಲವೂ ಆಗಲಿಲ್ಲವೆಂದಾದರೆ ಅಂಥವರು ಅವಶ್ಯವಾಗಿ ನಮ್ಮಲ್ಲಿಗೆ ಬಂದು ಕೇಳಿರಿ. ನಾನು ಅದಕ್ಕೆ ಉತ್ತರಕೊಡುತ್ತೇನೆ" ಎಂಬುದು ಉಪದೇಶದ ಒಟ್ಟು ಸಾರವಾಗಿತ್ತು. "ಮಹಾರಾಜರು ಅನೇಕ ವರ್ಷಗಳವರೆಗೆ ನೈಮಿಷಾರಣ್ಯದಲ್ಲಿ ಉಗ್ರತಪಸ್ಸನ್ನು ಮಾಡಿಬಂದವರು. ನಾಮಸ್ಮರಣೆಯ ಬಲದಿಂದ ಭಕ್ತಿಯೋಗದಲ್ಲಿರುವ ಸೌಲಭ್ಯಗಳನ್ನು ಕಂಡುಕೊಂಡವರು. "ಗುರುಪೂರ್ಣಿಮೆಯ ದಿನ ಅವರು ಮಾಡಿರುವ ಈ ಸದುಪದೇಶಗಳನ್ನು ಅಳವಡಿಸಿಕೊಂಡರೆ ನಮಗೆ ಶ್ರೇಯಸ್ಸಾಗುವದರಲ್ಲಿ ಸಂಶಯವಿಲ್ಲ'- ಎಂದು ಶ್ರೀ ಕೃಷ್ಣಶಾಸ್ತ್ರಿಗಳು ತಮ್ಮ ಅಭಿಪ್ರಾಯವನ್ನು ವ್ಯಕ್ತಗೊಳಿಸಿದರು.

## ಮಂತ್ರೋಪದೇಶ :

ಈ ಗಡಿಬಿಡಿಯ ನಡುವೆ ಮಹಾರಾಜರ ಅಪ್ಪಣೆಯಂತೆ ಕೃಷ್ಣಶಾಸ್ತ್ರಿಗಳು ಮಂತ್ರೋಪದೇಶಕ್ಕೆ ಏರ್ಪಡಿಸಿದ್ದರು. ಮೊದಲು ಗಣಪತಿಯ ಪೂಜೆಯನ್ನು ಮಾಡಿಸಿದ ಬಳಿಕ ರಾಯರಿಗೂ ಮಹಾರಾಜರಿಗೂ ಮೇಲುಗಡೆಯಲ್ಲಿ ಒಂದು ಬಟ್ಟೆಯ ಬುರುಕಿಯನ್ನು ಹಾಕಿದರು. ಸುತ್ತಲೂ ಜನರು ಭಜನೆ ಮಾಡುತ್ತಿದ್ದರು. ಮಹಾರಾಜರು ಬಲಗಿವಿಯಲ್ಲಿ ರಾಯರಿಗೆ ರಾಮಮಂತ್ರೋಪದೇಶವನ್ನು ಮಾಡಿದರು. ಬಹಳ ಉಚ್ಚಸ್ವರದಲ್ಲಿ ಮಹಾರಾಜರು ಹೇಳಿಕೊಟ್ಟಂತೆ ರಾಯರಿಗೆ ಭಾಸವಾಯಿತು. ಆದರೆ ಅನಂತರ ವಿಚಾರಿಸಲಾಗಿ ಪಕ್ಕದಲ್ಲಿದ್ದ ಚಿದಂಬರಯ್ಯನವರಿಗೂ ಸಹ ಅದು ಕೇಳಿರಲಿಲ್ಲವಂತೆ! ಇದೊಂದು ಚಮತ್ಕಾರವೇ ಆಯಿತು. ಆ ದಿನವೆಲ್ಲ ಎಲ್ಲೆಲ್ಲಿ ಹೋದರೂ ಯಾರೋ ಕಿವಿಯಲ್ಲಿ ಆ ಮಂತ್ರವನ್ನು ಹೇಳುತ್ತಲೇ ಇರುತ್ತಾರೆಂಬಂತೆ ರಾಯರಿಗೆ ಭಾಸವಾಗುತ್ತಿತ್ತು. ರಾಯರಿಗೆ ಅವರ ತಂದೆಯವರು ಭೋಜನಕಾಲದಲ್ಲಿ ಹರೇರಾಮ-ಮುಂತಾಗಿ ಶ್ಲೋಕಗಳನ್ನು ಹೇಳಿಕೊಟ್ಟ ಅನಂತರ ಈ ತಾರಕಮಂತ್ರವನ್ನು ಹೇಳಿಕೊಡುತ್ತಿದ್ದರಂತೆ. ಆದರೆ ಇದು ತಾರಕಮಂತ್ರವೆಂದು ಮಾತ್ರ

ಅವರು ಹೇಳಿರಲಿಲ್ಲವಂತೆ. ಈಗ ಸದ್ಗುರು ಮಹಾರಾಜರಿಂದ ಮಂತ್ರವು ಕಿವಿಗೆ ಬಿದ್ದಮೇಲೆ ರಾಯರಿಗೆ ನಿದ್ರಿಸುತ್ತಿದ್ದವನು ಎಚ್ಚತ್ತಂತೆ ಆಯಿತು. ಕೃತಾರ್ಥನಾದೆನೆಂದು. ರಾಯರು ಭಾವಿಸಿದರು.

ಆ ದಿನ ರಾತ್ರಿಯೂ ಭಜನೆಯಾಯಿತು. ರಾತ್ರೆಯೆಲ್ಲ ರಾಯರಿಗೆ ಸ್ವಲ್ಪ ದೇಹಾಲಸ್ಯದಿಂದ ಸರಿಯಾಗಿ ನಿದ್ರೆಯು ಹತ್ತಿರಲಿಲ್ಲ. ಕಿವಿಯಲ್ಲಿ ಮಾತ್ರ ಮಂತ್ರೋಚ್ಚಾರಣೆಯು ನಡೆದೇ ಇತ್ತು. ಅರ್ಧರಾತ್ರಿಯಲ್ಲಿ ಇದ್ದಕ್ಕಿದ್ದ ಹಾಗೇ 'ಮ್ಹಣಾ ಜಾನಕೀಕಾಂತಸ್ಮರಣ! ಜಯಜಯರಾಮ!'- ಎಂಬ ಜಯಘೋಷವು ಕೇಳಿಸಿತು. ವಿಚಾರಿಸಿದ್ದರಲ್ಲಿ ಮಹಾರಾಜರು ಶೂದ್ರಜನರಿಗೆಲ್ಲ ಊಟವನ್ನು ಹಾಕಿಸಿ ಭಜನೆ ಮಾಡಿಸುತ್ತಿದ್ದರೆಂತ ತಿಳಿಯಿತು. ಮಹಾರಾಜರು ಯಾವದೊಂದು ಭೇದಭಾವವಿಲ್ಲದೆ ಎಲ್ಲರನ್ನೂ ಸಮಬುದ್ಧಿಯಿಂದ ಕಾಣುತ್ತಿದ್ದರು. ವಿದ್ವಾಂಸರುಗಳು ಸಹ ತಮ್ಮ ಸಂಶಯಗಳನ್ನು ಅವರ ಮುಂದಿಟ್ಟು ಪರಿಹರಿಸಿಕೊಳ್ಳುತ್ತಿದ್ದರು. ಪಂಚದಶಿಯ ಕೆಲವು ಶ್ಲೋಕಗಳಿಗೆ ಮಹಾರಾಜರು ಮರಾಠಿಯಲ್ಲಿ ಅರ್ಥವಿವರಣೆ ಮಾಡುತ್ತಿದ್ದುದನ್ನು ರಾಯರು ಕೇಳಿದ್ದುಂಟು. ದಿನವೂ ಊರಲ್ಲೆಲ್ಲ ಓಡಾಡಿ ಜನರ ಯೋಗಕ್ಷೇಮವನ್ನು ವಿಚಾರಿಸುವದು, ಅನುಭವವೈದ್ಯಗಳನ್ನು ತಿಳಿಸುವದು, ಕೂಲಿಯವರಿಗೆ ಏನಾದರೂ ಉದ್ಯೋಗವನ್ನು ದೊರಕಿಸುವದು, ಸುತ್ತಮುತ್ತಲ ಗ್ರಾಮಸ್ಥರಿಗೆ ನ್ಯಾಯತೀರ್ಮಾನಗಳನ್ನು ಕೊಡುವದು. ಬಡವರಿಗೆ ವಸ್ತ್ರಗಳನ್ನೂ ಬ್ರಾಹ್ಮಣಸ್ತ್ರೀಯರಿಗೆ ಹರಿದ್ರಾದಿ ಮಂಗಳದ್ರವ್ಯಗಳನ್ನೂ ಕುಪ್ಪಸವನ್ನೂ ಹಂಚುವದು, ರಾಮಗೀತೆಯ ಪುಸ್ತಕಗಳನ್ನು ಅಕ್ಷರಸ್ಥರಾದ ಭಕ್ತರಿಗೆಲ್ಲ ಕೊಡುವದು- ಹೀಗೆ ಮಹಾರಾಜರು ವಿಶ್ವಕುಟುಂಬಿಗಳಾಗಿ ವ್ಯವಹರಿಸುತ್ತಿದ್ದರು.

ರಾಯರಿಗೆ ರಜಾದಿನಗಳೆಲ್ಲ ಕಳೆದುಹೋದರೂ ವಾಪಸು ಹೊರಡಲು ಮಹಾರಾಜರ ಅನುಮತಿಯು ದೊರಕಲಿಲ್ಲ. ಸುಮಾರು ಹದಿನೈದು ದಿನಗಳ ಅನಂತರ ಒಂದು ದಿನ ಮಹಾರಾಜರು'* ಫಲಮಂತ್ರಾಕ್ಷತೆಗಳನ್ನು ಅನುಗ್ರಹಿಸಿ "ಹೋಗಿ ಸುಖವಾಗಿರಿ. ಶ್ರೀರಾಮನು ಒಳ್ಳೆಯದು ಮಾಡಿಯಾನು!" ಎಂದು ಹರಸಿ ಕಳುಹಿಸಿದರು. ಅಂತೂ ಕಲಿಯುಗದಲ್ಲೂ ಇಂಥ ಮಹಾತ್ಮರೊಬ್ಬರ ಅನುಗ್ರಹವು ಮತ್ತೊಬ್ಬರ ನಿಮಿತ್ತದಿಂದ ಗೋಂದಾವಳಿಗೆ ಬಂದ ತಮಗೂ ಆದದ್ದಕ್ಕಾಗಿ ರಾಯರಿಗೆ ಬಹಳ ಸಂತೋಷವಾಯಿತು.

---

* ಶ್ರೀ ಬ್ರಹ್ಮಚೈತನ್ಯ ಸದ್ಗುರು ಮಹಾರಾಜರ ಸಂಪೂರ್ಣ ಚರಿತ್ರೆಯು ಕನ್ನಡದಲ್ಲಿ ಮುದ್ರಿತವಾಗಿದೆ. ಮರಾಠಿಯಲ್ಲಿ ವಿಸ್ತಾರವಾಗಿಯೇ ಬರೆಯಲ್ಪಟ್ಟು ಪ್ರಕಾಶಿತವಾಗಿದೆ. ಆಸಕ್ತಿಯುಳ್ಳವರು ಆ ಗ್ರಂಥಗಳನ್ನು ಓದಬಹುದು

# ೯. ಸತ್ಸಂಗದ ಔತ್ಸುಕ್ಯ

## ನಿತ್ಯಾನುಷ್ಠಾನ :

ರಾಯರು ಗೋಂದಾವಳಿಯಿಂದ ಹಿಂತಿರುಗಿ ದಾವಣಗೆರೆಗೆ ಬರುವದರೊಳಗೆ ಅವರು ಹೆಚ್ಚಿಗೆ ಉಪಯೋಗಿಸಿಕೊಂಡಿದ್ದ ರಜಾವನ್ನೂ ಸರ್ಕಾರದವರು ಮಂಜೂರು ಮಾಡಿದ್ದರು. ಅದನ್ನು ರಾಯರು ಗುರುಗಳ ಕೃಪೆಯೆಂದೇ ಭಾವಿಸಿದರು. ದಾವಣಗೆರೆಯಲ್ಲಿ ನಿತ್ಯವೂ ಜಪ, ಪೂಜೆ, ಧ್ಯಾನ, ಗುರುಪಾದುಕೆಗಳಿಗೆ ವಿಶೇಷಪೂಜೆ, ಭಜನೆ- ಇವುಗಳನ್ನು ಮಾಡುತ್ತಿದ್ದರು. ಭಾಷ್ಯಪಾರಾಯಣ, ಭಾಷ್ಯವನ್ನು ಮಡಿಯಲ್ಲಿಯೇ ನೋಡಿಕೊಂಡು ಬರೆಯುವದು- ಇವು ದಿನಚರಿಯಾಗಿದ್ದವು. ಶ್ರೀ ರಂಗಾಶಾಸ್ತ್ರಿಗಳು ಗೋಂದಾವಳಿಯಿಂದ ಹಿಂತಿರುಗುವಾಗ ಗುರುಮಹಾರಾಜರಲ್ಲಿ ತಮ್ಮ ಪುನರ್ವಿವಾಹದ ವಿಷಯವನ್ನು ಕೇಳಿದ್ದರು. 'ಅದನ್ನೂ ಮಾಡಿಕೊಂಡು ನೋಡಿರಿ!' -ಎಂದು ಹೇಳಿದ ಬಳಿಕ 'ಮುಂದೆ ಯಾವ ಎಡರೂ ಬರದಂತೆ ಅನುಗ್ರಹಿಸಬೇಕು'-ಎಂದು ಶಾಸ್ತ್ರಿಗಳು ಪ್ರಾರ್ಥಿಸಿದ್ದಕ್ಕೆ ತೇರಾಕೋಟಿ ಜಪವನ್ನು ಮಾಡುವಂತೆ ಅಪ್ಪಣೆ ಮಾಡಿದ್ದರು. ಹೊಸದರಲ್ಲಿ ಶಾಸ್ತ್ರಿಗಳು ನಿರಂತರವೂ ರಾಮನಾಮ ಜಪದಲ್ಲೇ ಕಾಲವನ್ನು ಕಳೆಯುತ್ತಿದ್ದರು. ಮುಂದೆ ಅವರು ಕಡೂರಿಗೆ ಪ್ರಯಾಣ ಮಾಡಿದರು. ರಾಯರಿಗೆ ಮಾತ್ರ ಮಂತ್ರಜಪದ ಮಹಿಮೆಯು ಚೆನ್ನಾಗಿ ಮನದಲ್ಲಿ ನೆಟ್ಟಿತು.

## ಡಿ. ಸಿ. ನಂಜಪ್ಪನವರ ಪ್ರಥಮಸಮಾಗಮ :

ರಾಯರು ಹೀಗೆಯೇ ಭಕ್ತಿಯ ಆವೇಶದಿಂದ ಕಾಲಕ್ಷೇಪವನ್ನು ಮಾಡುತ್ತಿದ್ದಾಗ ಅರಸೀಕೆರೆಯಿಂದ ಡಿ.ಸಿ. ನಂಜಪ್ಪನವರೆಂಬುವರು* ರಾಯರ ದರ್ಶನವನ್ನು ಮಾಡಬೇಕೆಂದೂ ಕೆಲವು ವೇದಾಂತವಿಚಾರಗಳನ್ನು ಚರ್ಚಿಸಬೇಕೆಂದೂ ಬಯಸಿ ಪತ್ರವನ್ನು ಬರೆದರು. ರಾಯರು ಬರುವಂತೆ ತಿಳಿಸಿದ್ದರಿಂದ ಒಂದು ದಿನ ನಂಜಪ್ಪನವರು ದಾವಣಗೆರೆಗೆ ಬಂದರು. ನಂಜಪ್ಪನವರು ಆಗಿನ ಕಾಲಕ್ಕೆ ಪ್ರಚಾರದಲ್ಲಿದ್ದ ರಾಯರು ಟಿಪ್ಪಣಿ ಬರೆದಿದ್ದ ಚಿದಂಬರಯ್ಯ ಕೃತ 'ಭಕ್ತಿದೀಪಿಕೆ'ಯೆಂಬ ಗ್ರಂಥದ ವಿಮರ್ಶೆಯನ್ನು ಓದಿ ಅದರಲ್ಲಿ 'ಬ್ರಹ್ಮಶ್ರೀ॥ ವೈ. ಸುಬ್ಬರಾಯರು' ಎಂದಿದ್ದ ಪರಾಮರ್ಶವನ್ನು ಕಂಡು ಬ್ರ॥ ಶ್ರೀ ಎಂದರೆ ರಾಯರು ಯಾರೋ ದೊಡ್ಡ ಮಹಾತ್ಮರಿರಬಹುದೆಂತ ಭಾವಿಸಿ ಅವರಲ್ಲಿಗೆ ಬಂದಿದ್ದರು. ಆ ದಿನ ರಾಮನವಮಿಯಾಗಿತ್ತು. ಆ ದಿನವೆಲ್ಲ ಇಬ್ಬರೂ ಪರಮಾರ್ಥವಿಚಾರದಲ್ಲಿಯೇ ಕಾಲವನ್ನು ಕಳೆದರು. ನಂಜಪ್ಪನವರಿಗೆ ಏನೋ ಒಂದು ಬದಲಾವಣೆಯು ತಮ್ಮ ಜೀವನದಲ್ಲಿ ಆದಂತೆ ಕಂಡಿತು. ಶ್ರೀ ನಂಜಪ್ಪನವರು ರಾಯರನ್ನು ಗೀತೋಪದೇಶವನ್ನು ಮಾಡಬೇಕೆಂದು

---

* ಇವರು 'ಭಗವಚ್ಚೈತನ್ಯ'ರೆಂಬ ಹೆಸರಿನಿಂದ ಮೈಸೂರಿನಲ್ಲಿ ವಾಸವಾಗಿದ್ದು ಈಚೆಗೆ ಸ್ವರ್ಗಸ್ಥರಾದರು.

ಕೇಳಿಕೊಂಡರು. ಆದರೆ ರಾಯರು "ಉಪದೇಶವೆಂದರೆ ನಮ್ಮಂಥವರು ಮಾಡತಕ್ಕದ್ದಲ್ಲ. ಕುರ್ತಕೋಟಿಯಲ್ಲಿ ಮಹಾಭಾಗವತರೆಂಬ ಸಾಧುಗಳು ಇದ್ದಾರೆ. ಅವರಿಂದ ಉಪದೇಶವನ್ನು ಕೊಡಿಸುತ್ತೇನೆ" ಎಂದು ಅವರನ್ನು ಸಮಾಧಾನಗೊಳಿಸಿದರು. ಮುಂದೆ ರಾಯರು ಸ್ಕೂಲಿಗೆ ರಜಾಬಂದೊಡನೆಯೇ ಕುರ್ತಕೋಟಿಗೆ ಹೋಗೋಣವೆಂದು ಹೇಳಿದ್ದರಿಂದ ಶ್ರೀ ನಂಜಪ್ಪನವರು ಏಪ್ರೆಲ್ ತಿಂಗಳಿನಲ್ಲಿ ಮತ್ತೆ ದಾವಣಗೆರೆಗೆ ಬಂದರು. ಇಬ್ಬರೂ ಕುರ್ತಕೋಟಿಗೆ ಹೋಗಿ ಶ್ರೀಮಹಾಭಾಗವತರನ್ನು ದರ್ಶನಮಾಡಿದರು. ಆಗ ಶ್ರೀಮಹಾಭಾಗವತರು ನಂಜಪ್ಪನವರಿಗೆ ಗೀತೋಪದೇಶವನ್ನು ಅನುಗ್ರಹಿಸಿದರು. ಇಬ್ಬರೂ ರಜವನ್ನು ಕುರ್ತಕೋಟಿಯಲ್ಲಿಯೇ ಕಳೆದರು. ಆಗ್ಗೆ ಶ್ರೀ ಚಿದಂಬರಯ್ಯನವರೂ ಮಹಾಭಾಗವತರ ಸೇವೆಯಲ್ಲಿ ತೊಡಗಿದ್ದರು; ಅವರ ಪ್ರೋತ್ಸಾಹದಿಂದ 'ಪರಮಾರ್ಥ' ಎಂಬ ಮಾಸಪತ್ರಿಕೆಗೆ ಸಂಪಾದಕರೂ ಆಗಿದ್ದರು.

ಈ ನಡುವೆ ಹುಬ್ಬಳ್ಳಿಯಲ್ಲಿ ನಡೆದ ಶಂಕರಜಯಂತಿಯ ಉತ್ಸವಕ್ಕೆ ಶ್ರೀ ರಾಯರು ನಂಜಪ್ಪ ಭಾಗವತರೊಡನೆ ಹೋಗಿದ್ದರು. ಅಲ್ಲಿ ವೇ॥ ವಿರೂಪಾಕ್ಷಶಾಸ್ತ್ರಿಗಳು, ಶ್ರೀ ಕೃಷ್ಣಶಾಸ್ತ್ರಿಗಳು ಮುಂತಾದ ವಿದ್ವಾಂಸರು ಬಂದಿದ್ದರು. ಅಲ್ಲಿ ವೇದಾಂತದಲ್ಲಿ ಪರೀಕ್ಷೆಗಳನ್ನು ಏರ್ಪಡಿಸಿದ್ದರು. ಮಹಾಭಾಗವತರ ಪ್ರೇರಣೆಯಿಂದ ರಾಯರು ಬ್ರಹ್ಮಸೂತ್ರ ಭಾಷ್ಯದ ಚತುಃಸೂತ್ರೀಭಾಷ್ಯದ ಪರೀಕ್ಷೆಗೆ ಕುಳಿತರು. ವೇ॥ ಕೃಷ್ಣಶಾಸ್ತ್ರಿಗಳು ಮಾಡಿದ ಪರೀಕ್ಷೆಯಲ್ಲಿ ರಾಯರು ಉತ್ತೀರ್ಣರಾಗಿ ಹತ್ತು ರೂ.ಗಳ ಬಹುಮಾನವನ್ನು ಪಡೆದರು. ಆದರೆ ಆ ಮೊಬಲಗನ್ನು ಮುಂದಿನ ವರ್ಷದ ಪರೀಕ್ಷೆಗೆ ವಿನಿಯೋಗಿಸಬೇಕೆಂದು ಹಿಂತಿರುಗಿ ಕೊಟ್ಟುಬಿಟ್ಟರಂತೆ. ಎಂಥ ಆದರ್ಶವಿದು!

## ಇಂಗ್ಲಿಷ್‌ನಲ್ಲಿ ಗ್ರಂಥರಚನೆ :

ರಾಯರು ಹುಬ್ಬಳ್ಳಿಯ ಶಂಕರಜಯಂತೀ ಕಾಲಕ್ಕೆ ಮಹಾಭಾಗವತರು ಮಾಡಿದ ಉಪನ್ಯಾಸಗಳನ್ನು ಟಿಪ್ಪಣಿ ಬರೆದುಕೊಂಡಿದ್ದರು. ಅದರ ಆಧಾರದಿಂದ ಇಂಗ್ಲಿಷ್‌ನಲ್ಲಿ "The Highest Goal of Human Life" ಎಂಬ ಗ್ರಂಥವನ್ನೂ "Spiritual Knowledge and How to Attain It" ಎಂಬ ಗ್ರಂಥವನ್ನೂ ಬರೆದರು. ಇವುಗಳನ್ನು ಮುದ್ರಿಸುವದಕ್ಕೆ ಮೊದಲು ಶ್ರೀ ಕೆ.ಎ. ಕೃಷ್ಣಸ್ವಾಮಿ ಅಯ್ಯರ್‌ರವರಿಗೆ ತೋರಿಸಲಾಗಿ ಅವರು ಅದನ್ನು ಪರಿಷ್ಕರಿಸಿಕೊಟ್ಟರು. ಆಗ್ಗೆ ಚಿಕ್ಕಬಳ್ಳಾಪುರದಲ್ಲಿದ್ದ ಶ್ರೀ ಅಯ್ಯರ್‌ರವರು ಆ ಊರಿನಲ್ಲಿ ರಾಯರಿಂದ ಒಂದು ಉಪನ್ಯಾಸವನ್ನು ಮಾಡಿಸಿದರು. ಗೋಂದಾವಳಿ ಮಹಾರಾಜರ ಪ್ರಭಾವಕ್ಕೆ ಒಳಗಾಗಿದ್ದ ರಾಯರು ಜ್ಞಾನಕ್ಕಿಂತ ಭಕ್ತಿಯೇ ಹೆಚ್ಚೆಂದೂ ಶಂಕರರಾಮಾನುಜರಿಬ್ಬರೂ ಒಂದೇ ದೃಷ್ಟಿಕೋನದಿಂದ ಉಪದೇಶವನ್ನು ಮಾಡಿದ್ದಾರೆಂದೂ ಪ್ರತಿಪಾದಿಸಿದರು. ಶ್ರೀ ಅಯ್ಯರ್‌ರವರು ಗುಣಾಂಶವನ್ನು ಹೊಗಳಿ ಭಕ್ತಿಯು ಪರಮವಾದರೂ ಶಂಕರಭಗವತ್ಪಾದರ ಅಭಿಪ್ರಾಯದಂತೆ ವೇದಾಂತಗಳಿಗೆ ಜ್ಞಾನದಲ್ಲೇ ತಾತ್ಪರ್ಯವೆಂದೂ ಬಹಿರಂಗವಾಗಿ ಇಬ್ಬರು ಆಚಾರ್ಯರೂ

ಒಂದೇ ಎಂದು ಹೇಳುವದು ಆಚಾರ್ಯರಿಗೆ ದ್ರೋಹವೆಸಗಿದಂತಾಗುವದೆಂದೂ ರಾಯರನ್ನು ತಿದ್ದಿದರಂತೆ. ಆದರೂ ರಾಯರಿಗೆ ಆಗ್ಗೆ ಇನ್ನೂ ರಾಮಾನುಜಸಿದ್ಧಾಂತವು ಸರಿಯಾಗಿ ತಿಳಿದಿರಲಿಲ್ಲವಾಗಿ ಅವರು ವೈಲಕ್ಷಣ್ಯವನ್ನು ಹಿಡಿಯಲಾರದೆ ಹೋದರು. ಆಗ್ಗೆ ಅವರ ಮನಸ್ಸು ಭಕ್ತಿಪರವಾದ ವಾತಾವರಣದಲ್ಲಿದ್ದುದೇ ಇದಕ್ಕೆ ಕಾರಣವಿರಬಹುದು.

## ಕುರ್ತಕೋಟಿಮಹಾಭಾಗವತರ ನಿಕಟಸಂಬಂಧ :

ಇನ್ನು ಮುಂದೆ ರಾಯರಿಗೆ ಪ್ರತಿಯೊಂದು ರಜಾದಲ್ಲೂ ವಾರಕ್ಕೊಂದು ಬಾರಿ ಎನ್ನುವಷ್ಟು ಮಟ್ಟಿಗೆ ಮಹಾಭಾಗವತರು ಎಲ್ಲಿದ್ದರೆ ಅಲ್ಲಿಗೆ ಹೋಗಿ ಬರುವ ಪದ್ಧತಿಯು ಬೆಳೆಯಿತು. ಅವರು ಉಪದೇಶಿಸುತ್ತಿದ್ದ ಜ್ಞಾನಗಂಗೆಯನ್ನು ಪ್ರತಿಸಲವೂ ಕಾವಡಿಯಿಂದ ಹೊತ್ತು ತರುತ್ತಿದ್ದರು. ಮಹಾಭಾಗವತರು ಈ ಸಮಯದಲ್ಲಿ ಸ್ವಲ್ಪ ಕಾಲ ಧಾರವಾಡ ಪಾಠಶಾಲೆಯ ಕಾರ್ಯದರ್ಶಿಗಳಾಗಿದ್ದು ಸಂಸ್ಕೃತಾಭ್ಯಾಸದ ಪ್ರಚಾರದ ಬಗ್ಗೆ ಬಹಳ ಕೆಲಸಮಾಡಿದರಲ್ಲದೆ ಅಧ್ಯಾತ್ಮವಿಚಾರೋಪನ್ಯಾಸಗಳಿಂದ ಆ ಪ್ರಾಂತದ ಜನರನ್ನೆಲ್ಲ ಹುರಿದುಂಬಿಸುತ್ತಿದ್ದರು. ಅವರು ಗೀತೆಯ ಮೇಲೆ ಕೊಟ್ಟ ಉಪನ್ಯಾಸಗಳು ರಾಯರಿಗೂ ಶ್ರೀ ಚಿದಂಬರಯ್ಯನವರಿಗೂ ಬಹಳ ಹಿಡಿಸಿದವು. ಶ್ರೀ ಚಿದಂಬರಯ್ಯನವರು ಆ ವಿಷಯಗಳನ್ನೆಲ್ಲ ಸಂಗ್ರಹಿಸಿ 'ಭಗವದ್ಗೀತಾಸಾರವಿಚಾರ' ವೆಂಬ ದೊಡ್ಡಗ್ರಂಥವೊಂದನ್ನು ತಮ್ಮದೇ ಆದ ವಿಶಿಷ್ಟ ಶೈಲಿಯಲ್ಲಿ ಬರೆದು ಪ್ರಸಿದ್ಧಪಡಿಸಿದರು. ರಾಯರಿಗೆ ಮಹಾಭಾಗವತರ ಸಂಪರ್ಕದಿಂದಲೇ ಕಠೋಪನಿಷದ್ಭಾಷ್ಯದಲ್ಲಿ ಆಗಿಂದಾಗ್ಗೆ ಬರುತ್ತಿದ್ದ 'ಆಚಾರ್ಯ' ಎಂಬ ಶಬ್ದದ ಕಡೆಗೆ ಚಿತ್ತವು ತಿರುಗುವದಕ್ಕೆ ಕಾರಣವಾಯಿತು. ಅವರ ಲಯಚಿಂತನೋಪದೇಶದ ಪ್ರಭಾವದಿಂದ ಮಾಂಡೂಕ್ಯದಲ್ಲಿನ 'ಆತ್ಮನ ಪಾದತ್ರಯಗಳ ಲಯಕ್ರಮ'ದ ಮೇಲೆ ಅವಧಾನವೂ ಉಂಟಾಯಿತು. ಹೀಗೆ ರಾಯರ ವೇದಾಂತಾಭ್ಯಾಸವು ದೃಢವಾಗಲು ಮಹಾಭಾಗವತರ ಸಹವಾಸವು ಬಹಳ ಸಹಾಯಕವಾಯಿತು. ಆದರೆ ಈ ಭಾಗ್ಯವು ಅವರಿಗೆ ಹೆಚ್ಚು ಕಾಲ ದೊರೆಯಲಿಲ್ಲ. ಸ್ವಲ್ಪ ದಿನಗಳಲ್ಲೇ ಅವರಿಗೆ ದಾವಣಗೆರೆಯಿಂದ **ಕಳೂರುಕಟ್ಟೆ** (ಈಗ ಹೊಸನಗರ) ಎಂಬ ಅಜ್ಞಾತ ಸ್ಥಳವೊಂದಕ್ಕೆ ವರ್ಗವಾಗಿಬಿಟ್ಟಿತು.

## ದಾವಣಗೆರೆಯಲ್ಲಿ ಜನಾನುರಾಗ :

ರಾಯರಿಗೆ ಅನೇಕ ವಿಧಗಳಿಂದ ದಾವಣಗೆರೆಯ ವಾಸವು ತುಂಬ ಹಿಡಿಸಿತ್ತು. ಮಹಾಭಾಗವತರಿದ್ದಲ್ಲಿಗೆ ಹೋಗಿಬರಲು ಅನುಕೂಲವಾಗಿದ್ದದ್ದು, ನಿತ್ಯಾನುಷ್ಠಾನಗಳಿಗೆ ಸಾಕಷ್ಟು ವೇಳೆಯು ದೊರೆಯುತ್ತಿದ್ದದ್ದು, ಸ್ಕೂಲು ಕೆಲಸವು ಅಲ್ಲಿ ಅವರಿಗೆ ಅಚ್ಚುಮೆಚ್ಚಾಗಿದ್ದದು-ಇವೇ ಮೊದಲಾದ ಕಾರಣಗಳಿಂದ ರಾಯರಿಗೆ ಆ ಊರನ್ನು ಬಿಡುವದು ಒಂದು ರೀತಿಯಲ್ಲಿ ದುಃಖಕರವೇ ಆಗಿತ್ತು. ಇವುಗಳಲ್ಲದೆ ಜನರಲ್ಲಿ ಬೆಳೆಸಿದ್ದ ಸಂಪರ್ಕವೂ ಸಹ ಬಹಳ

ಹೆಚ್ಚಾಗಿತ್ತು. ಮಾಗಾನಹಳ್ಳಿ ದೊಡ್ಡಬಸಪ್ಪನವರೆಂಬ ಸಾಹುಕಾರರಂತೂ ಇವರನ್ನು ಬಹಳವಾಗಿ ಮೆಚ್ಚಿದ್ದರು. ಅವರಿಗೆ ಬಂದಿದ್ದ ಬಟ್ಟೆಯ ವ್ಯಾಪಾರಸಂಬಂಧದ ಕೆಲವು ಕಾಗದಗಳಿಗೆ ರಾಯರು ಸರಿಯಾಗಿ ಅರ್ಥವನ್ನು ಹೇಳಿದ್ದನ್ನು ಅವರು ಬಹಳವಾಗಿ ಮೆಚ್ಚಿದ್ದರು. ಅಲ್ಲದೆ ಅದಕ್ಕಾಗಿ ಅವರು ಸ್ವಲ್ಪ ಹಣವನ್ನು ಕೊಡಲು ಬಂದಾಗ ರಾಯರು ಬೇಡವೆಂದದ್ದು ಅವರಿಗೆ ಇನ್ನೂ ಆಶ್ಚರ್ಯವಾಗಿರಬೇಕು. ರಾಯರು ವಿವೇಕಾನಂದರಲ್ಲಿ ಪ್ರೇಮವುಳ್ಳವರೆಂಬುದನ್ನು ತಿಳಿದು ಅವರ ಕೃತಿಗಳನ್ನೆಲ್ಲ ಬಹಳ ಕಾಲದವರೆಗೆ ಇವರಲ್ಲೇ ಬಿಟ್ಟಿದ್ದರು. ಅಂತೂ ಮುಂದೆ ಕಾರ್ಯಾಲಯವು ಪ್ರಾರಂಭವಾಗಲು ಈ ಮಹನೀಯರ ಸಹಾಯವೇ ಮೂಲಕಾರಣವಾಗಿ ಬಿಟ್ಟಿತು. ಅದನ್ನು ಮತ್ತೆ ವಿವರಿಸುವೆನು.

ಇಷ್ಟೆಲ್ಲ ಅನುಕೂಲಗಳಿದ್ದರೂ ದಾವಣಗೆರೆಯಲ್ಲಿದ್ದಾಗ ರಾಯರಿಗೆ ಕೆಲವು ಗೃಹಕೃತ್ಯದ ತೊಂದರೆಗಳೂ ಬಂದೊದಗಿದವು. ಅವರ ಸಂಸಾರದ ವೆಚ್ಚವು ಅನೇಕಕಾರಣಗಳಿಂದ ಹೆಚ್ಚಾಗಿ, ಸಾಲದ ಬಾಧೆಯೂ ಇತ್ತು. ಈಗ ಬೇರೆಯ ಕಡೆಗೆ ವರ್ಗವಾದದ್ದರಿಂದ ಸಾಲವನ್ನೆಲ್ಲ ತೀರಿಸಿಯೇ ಆ ಸ್ಥಳವನ್ನು ಬಿಡಬೇಕಾಗಿ ಬಂತು. ಅಲ್ಲದೆ ಕಳೂರುಕಟ್ಟೆಯು ಅನಾರೋಗ್ಯಕರವಾದ ಸ್ಥಳವೆಂದೂ ತೀರ ಕುಗ್ರಾಮವೆಂದೂ ರಾಯರಿಗೆ ತಿಳಿದಾಗ ಏನೂ ತಪ್ಪಿಲ್ಲದ ತಮ್ಮನ್ನು ಸರಕಾರದವರು ಹೀಗೆ ವರ್ಗಮಾಡಿರುವದು ಸರಿಯಲ್ಲವೆಂದೂ ಇದನ್ನು ರದ್ದುಮಾಡಬೇಕೆಂದೂ ಮೇಲಿನ ಅಧಿಕಾರಿಗಳಿಗೆ ಬರೆದುಕೊಂಡರು. ಆದರೆ ಅವರ ಪ್ರಾರ್ಥನೆಯು ಸಫಲವಾಗಲಿಲ್ಲ. ಇವರ ಬರವಣಿಗೆಯು ಮೇಲಿನವರಿಗೆ ಕೋಪವನ್ನೇ ಉಂಟುಮಾಡಿತು. ಕೂಡಲೆ ಛಾರ್ಜುಕೊಟ್ಟು ಹೊರಡಲೇ ಬೇಕಾಯಿತು. ಆಗ ರಾಯರು ಹೆಂಡತಿಯ ಮೈಮೇಲಿನ ಕೆಲವು ಆಭರಣಗಳನ್ನು ಮಾರಿ ಸಾಲವನ್ನು ತೀರಿಸಿ ದಾವಣಗೆರೆಯಿಂದ ಹೊರಟರು.

## ಕಳೂರುಕಟ್ಟೆ (ಹೊಸನಗರ)ಯಲ್ಲಿ ರಾಯರು :

ಆಗಿನ ಕಾಲಕ್ಕೆ ಈ ಊರು ಮಲೆನಾಡಿನ ಒಂದು ಮೂಲೆಯಾಗಿದ್ದುದರಿಂದಲೂ ಹವಾಗುಣವು ಚೆನ್ನಾಗಿರಲಿಲ್ಲವಾದ್ದರಿಂದಲೂ ಬಹಳ ಚಿಕ್ಕದಾಗಿತ್ತು. ರಾಯರು ತಮ್ಮ ಕುಟುಂಬ ಸಮೇತ ಈ ಊರಿಗೆ ಬಂದಾಗ ಅವರಿಗೆ ಅದು ವಿಲಕ್ಷಣವಾಗಿ ಕಂಡಿತು. ಊರಿನಲ್ಲಿ ಪ್ರಜಾಸಂಖ್ಯೆ ತುಂಬ ಕಡಿಮೆ; ಅಂದರೆ ಸುಮಾರು 600-700 ಇರಬಹುದು. ಸ್ಕೂಲಿನಲ್ಲಿ ಹುಡುಗರ ಸಂಖ್ಯೆಯೂ ಅಷ್ಟೇ; 40-50 ಇರಬಹುದು. ದಾವಣಗೆರೆಯಂಥ ದೊಡ್ಡ ಊರಿನಿಂದ ಬಂದಿದ್ದ ರಾಯರಿಗೆ ಇದು ಬಹಳ ಚಿಕ್ಕದಾಗಿ ಕಂಡಿತು. ಒಂದು ಮನೆಯನ್ನು ಬಾಡಿಗೆಗೆ ಗೊತ್ತುಮಾಡಿಕೊಂಡು ವಾಸಮಾಡಲಾರಂಭಿಸಿದರು. ಸ್ಕೂಲು ಅಷ್ಟೇನೂ ವ್ಯವಸ್ಥಿತವಾಗಿರಲಿಲ್ಲ. ರಾಯರು ಬಂದಮೇಲೆ ಚಂದ್ರಶೇಖರಶಾಸ್ತ್ರಿಗಳೆಂಬ ಅಸಿಸ್ಟೆಂಟ್ ಮಾಸ್ತರರೊಬ್ಬರು ಹೊಸದಾಗಿ ಬಂದರು. ರಾಯರೇ ಹೆಡ್‌ಮಾಸ್ತರಾಗಿದ್ದರು.

ಗುಂಡೂರಾಯರೆಂಬ ಮತ್ತೊಬ್ಬರ ಪರಿಚಯವೂ ಆಯಿತು. ಕೆಲವೇ ದಿನಗಳು ಕಳೆದಬಳಿಕ ಈ ಊರು ಜೀವನಕ್ಕೆ ತಕ್ಕದ್ದಲ್ಲವೆಂತ ರಾಯರಿಗೆ ಮನವರಿಕೆಯಾಯಿತು. ಅಲ್ಲಿ ಯಾವ ಆಹಾರಪದಾರ್ಥಗಳಾಗಲಿ ತರಕಾರಿಗಳಾಗಲಿ ಸಿಕ್ಕುತ್ತಿರಲಿಲ್ಲ. ಈ ವೇಳೆಗೆ ರಾಯರ ಪತ್ನಿಯು ಗರ್ಭಿಣಿಯೂ ಆಗಿದ್ದರು. ಆದ್ದರಿಂದ ಸಹಾಯಕ್ಕೆ ಲಕ್ಷ್ಮಮ್ಮನವರನ್ನು ಕರೆದುಕೊಂಡು ಬಂದಿದ್ದರು. ಪ್ರಸವವಾದನಂತರ ಬಾಣಂತಿಯ ಉಪಚಾರಗಳಿಗೆ ಸೌಕರ್ಯವಿಲ್ಲದ ಈ ಊರಿನಲ್ಲಿರಲು ಮನೆಯವರು ಒಪ್ಪಲಿಲ್ಲ. ಆದ್ದರಿಂದ ಸಂಸಾರವನ್ನೆಲ್ಲ ರಾಯರು ತವರೂರಿಗೆ ಕಳುಹಿಸಿ ಒಬ್ಬರೇ ಉಳಿದುಕೊಂಡರು. ಈಗ ರಾಯರಿಗೆ ಸ್ವಲ್ಪ ಹೆಚ್ಚಾಗಿ ಬಿಡುವು ದೊರೆಯಿತು. ಸ್ಕೂಲಿನಲ್ಲೂ ಹೆಚ್ಚು ಕೆಲಸವಿರಲಿಲ್ಲ. `Heart of The Bhagavadgita'-ಎಂಬ ಗ್ರಂಥವನ್ನು ಬರೆದು ಪೂರೈಸಿದರು. ಅದನ್ನು ಶ್ರೀಮಹಾಭಾಗವತರಿಗೆ ಒಪ್ಪಿಸಲಾಗಿ ಅವರು ಅದನ್ನು ತಮ್ಮದಾಗಿಯೇ ಮಾಡಿಕೊಂಡು ಗಾಯಕವಾಡ್ ಗ್ರಂಥಾವಳಿಯಲ್ಲಿ ಪ್ರಕಾಶಗೊಳಿಸಿದರು. ಇಷ್ಟರ ಮಟ್ಟಿಗೆ ರಾಯರಿಗೆ ಈ ಊರಿನಲ್ಲಿ ಸತ್ಕಾಲಕ್ಷೇಪಕ್ಕೆ ಅವಕಾಶವಾಯಿತು.

ಇನ್ನು ಮುಂದೆ ರಾಯರಿಗೆ ಇಲ್ಲಿ ಕೆಲಸಮಾಡಲು ಬೇಜಾರಾದ್ದರಿಂದ ಎರಡು ತಿಂಗಳು ರಜಾಕ್ಕೆ ಬರೆದುಕೊಂಡು ಆ ಊರನ್ನು ಬಿಟ್ಟು ಹೊರಟರು. ಈ ಅವಧಿಯಲ್ಲಿ ಆಗಾಗ್ಗೆ ಕುರ್ತಕೋಟಿ-ಧಾರವಾಡ-ಅರಸೀಕೆರೆಗಳಿಗೆ ಹೋಗಿ ಬರುತ್ತಿದ್ದರು. ಇದೇ ಸಮಯದಲ್ಲಿ Study of Sanskrit' ಎಂಬ ಗ್ರಂಥವನ್ನು ಬರೆದರು. ಇದನ್ನೂ ಮಹಾಭಾಗವತರು ತಿದ್ದಿ ಸರಿಪಡಿಸಿ ಹೊರಕ್ಕೆ ತರುವ ಯೋಚನೆಮಾಡಿದರು. ಈ ನಡುವೆ ಶ್ರೀ ಚಿದಂಬರಯ್ಯನವರೂ ಕುರ್ತುಕೋಟಿಯಲ್ಲೇ ಉಳಿದಿದ್ದರು. ಅವರು ಆಗಾಗ್ಗೆ ರಜಾ ತೆಗೆದುಕೊಳ್ಳುವದನ್ನು ನೋಡಿ ಸರ್ಕಾರದವರು ಅವರನ್ನು ಕೆಲಸದಿಂದಲೇ ನಿವೃತ್ತಿಗೊಳಿಸಿಬಿಟ್ಟರು. ಆ ಹುಕುಮಿನ ಕಾಗದವನ್ನು ಶ್ರೀ ಚಿದಂಬರಯ್ಯನವರು ಬಿಚ್ಚಿ ನೋಡಿಯೇ ಇರಲಿಲ್ಲ. ರಾಯರಿಗೆ ಈ ವಿಷಯವು ತಿಳಿದಾಗ ಅವರು ಸರ್ಕಾರಕ್ಕೆ ಮತ್ತೆ ಬರೆದು ಆಗ್ಗೆ ಸರ್ಕಲ್ ಇನ್‌ಸ್ಪೆಕ್ಟರಾಗಿದ್ದ ಶ್ರೀ ಎನ್. ಶಾಮರಾಯರ ಸಹಾಯದಿಂದ ಪೆನ್‌ಷನ್ ಮಂಜೂರುಮಾಡಿಸಿಕೊಟ್ಟರು. ಶ್ರೀ ಚಿದಂಬರಯ್ಯನವರಿಗೆ ಸ್ವಲ್ಪ ಅನಾರೋಗ್ಯವೂ ಇತ್ತಾದ್ದರಿಂದ ನಿವೃತ್ತಿಯನ್ನು ಸರ್ಕಾರದವರು ಅನುಮೋದಿಸಿಬಿಟ್ಟರು. ಹೀಗೆ ಶ್ರೀ ಚಿದಂಬರಯ್ಯನವರು ಸರ್ಕಾರದ ಬಂಧನದಿಂದ ವಿಮುಕ್ತರಾದರು. ರಾಯರು ಶ್ರೀ ಮಹಾಭಾಗವತರ ಸೂಚನೆಯಂತೆ ಮುಂದೆ ಬೊಂಬಾಯಿಗೆ ಅವರೊಡನೆಯೇ ಹೊರಟುಬಿಟ್ಟರು. ಆಗ್ಗೆ ಮಹಾಭಾಗವತರ ಸಾನ್ನಿಧ್ಯದಿಂದ ರಾಯರಿಗೆ ಕೆಲವು ಗೌರವಸ್ಥರ ಹಾಗೂ ಮುಖ್ಯ ಸಂಸ್ಥೆಗಳ ಪರಿಚಯವು ಬೊಂಬಾಯಿಯಲ್ಲಿ ದೊರೆಯಿತು. ಆ ವೇಳೆಗೆ ಊರಿನಿಂದ ರಾಯರಿಗೆ ಪತ್ರವು ಬಂದಿತಾದ್ದರಿಂದ ಊರಿಗೆ ಹಿಂತಿರುಗಿದರು. ಮತ್ತೆ ಕೆಲವೇ ದಿನಗಳಲ್ಲಿ ಶ್ರೀಮಹಾಭಾಗವತರಿಗೆ ತಿರುವಾದಿ-ಎಂಬಲ್ಲಿ ನಡೆದ ಧಾರ್ಮಿಕಪರಿಷತ್‌ಗೆ ಆಹ್ವಾನವು ಬಂದಿದ್ದುದರಿಂದ ರಾಯರೂ ಶ್ರೀ ಚಿದಂಬರಯ್ಯನವರೂ ಅವರ ಜೊತೆ ತಿರುವಾದಿಗೆ ಹೊರಟರು.

**ತಿರುವಾದಿಪರಿಷತ್ :**

ಈ ಊರು ಕಾವೇರೀ ತೀರದಲ್ಲಿದೆ. ಶ್ರೀ ಮಹಾಭಾಗವತರು ಶಿಷ್ಯಸಮೇತರಾಗಿ ಬರುವ ವೇಳೆಗಾಗಲೇ ಇಲ್ಲಿ ಪರಿಷತ್ತು ಸೇರಿಬಿಟ್ಟಿತ್ತು. ಅಲ್ಲಿಯೇ ಒಂದು ಛತ್ರದಲ್ಲಿ ಇವರೆಲ್ಲ ಉಳಿದಿದ್ದರು. ಕಾರ್ಯದರ್ಶಿಗಳು ವಿಚಾರಿಸುವಷ್ಟರಲ್ಲೇ ಇವರು ತಮ್ಮ ಭೋಜನಾದಿಗಳ ಏರ್ಪಾಡನ್ನು ತಾವೇ ಮಾಡಿಕೊಂಡಿದ್ದರು. ಖರ್ಚೆಲ್ಲ ಶ್ರೀಮಹಾಭಾಗವತರದೇ ಆಗಿತ್ತು. ಅಂಥ ಉದಾರಿಗಳು ಅವರು. ಆದರೆ ಆ ದಿನ ಅವರು ಸ್ವಲ್ಪ ಕೋಪಗೊಂಡಿದ್ದರು. ಕಾರಣವೇನೆಂದರೆ, ಹಿಂದಿನ ದಿನವೇ ಪರಿಷತ್‌ನಲ್ಲಿ ಅವರ ಭಾಷಣವಿದ್ದರೂ ಹೊತ್ತಾಯಿತೆಂದು ಕಾರ್ಯದರ್ಶಿಗಳು ಅವಕಾಶವನ್ನು ಕೊಟ್ಟಿರಲಿಲ್ಲ. ಜೊತೆಗೆ ಅಂಥ ಧಾರ್ಮಿಕ ಪರಿಷತ್‌ಗೆ ಲೌಕಿಕರನ್ನು ಅಧ್ಯಕ್ಷರನ್ನಾಗಿ ಮಾಡಿ ಮಹಾಭಾಗವತರಂಥ ವೈದಿಕರೂ ವಿದ್ವಾಂಸರೂ ಆದವರನ್ನು ಸರಿಯಾದ ಸ್ಥಾನಮಾನಗಳಿಂದ ಗೌರವಿಸಿರಲಿಲ್ಲ. ಹೊಸ ಪರಿಷತ್ತೊಂದನ್ನು ಕರೆಯುವಷ್ಟು ಸ್ಥಿತಿಯಲ್ಲಿ ಶ್ರೀಮಹಾಭಾಗವತರು ಇದ್ದರು. ಆಗ ಶ್ರೀ ವಿ.ಪಿ. ಮಾಧವರಾಯರು ಅವರನ್ನು ಸಮಾಧಾನಗೊಳಿಸಿ ಲೋಪದೋಷಗಳನ್ನು ತಿದ್ದುವದಕ್ಕೇ ತಾವು ಬರಬೇಕೆಂದು ಪ್ರಾರ್ಥಿಸಿಕೊಂಡರು. ಆಗ ಶ್ರೀಮಹಾಭಾಗವತರು ಸಭೆಗೆ ದಯಮಾಡಿಸಿದರು. ಪರಿಷತ್ತು ಕೆಲವು ಧರ್ಮಶಾಸ್ತ್ರವಿಚಾರಗಳ ತೀರ್ಮಾನಕ್ಕಾಗಿ ಸೇರಿತ್ತು. ಪ್ರೌಢವಿವಾಹವು ಶಾಸ್ತ್ರಸಮ್ಮತವೆ? ಅಲ್ಲವೆ? ಎಂಬಂಥ ಕೆಲವು ಸುಧಾರಕ ಪ್ರಶ್ನೆಗಳೂ ಇದ್ದವು. ವಿದ್ವಾಂಸರುಗಳೆಲ್ಲ ತಮ್ಮ ತಮ್ಮ ಅಭಿಪ್ರಾಯಗಳನ್ನು ಬರೆದುಕೊಟ್ಟಿದ್ದರು. ಶ್ರೀಮಹಾಭಾಗವತರು ಬರೆದಿರಲಿಲ್ಲವಾದ್ದರಿಂದ ಅವರ ಭಾಷಣಕ್ಕೇ ಏರ್ಪಾಡು ಆಯಿತು. ಆ ಮಹಾತ್ಮರು ತಮ್ಮ ಅಸ್ಖಲಿತವಾಣಿಯಿಂದ ಮಾಡಿದ ಭಾಷಣವು ಎಲ್ಲರಿಗೂ ಸಂತೋಷವನ್ನುಂಟುಮಾಡಿತು. ಪಂಡಿತರುಗಳೆಲ್ಲ ಸಾಧು! ಸಾಧು! ಎನ್ನುತ್ತಿದ್ದರು. ಮಾರನೆಯ ದಿನ ಇಂಗ್ಲಿಷು ಪತ್ರಿಕೆಗಳಲ್ಲೆಲ್ಲ ದೊಡ್ಡ ಅಕ್ಷರಗಳಲ್ಲಿ `A Stirring Speech' ಎಂದು ಅವರ ಭಾಷಣವನ್ನು ಪ್ರಶಂಸಿಸಲಾಗಿತ್ತು. ಶ್ರೀಮಹಾಭಾಗವತರು ಇಲ್ಲಿನ ಕಾರ್ಯಕ್ರಮವು ಮುಗಿದಮೇಲೆ ರಾಮೇಶ್ವರದವರೆಗೂ ಹೋಗಿ ಬಂದರು. ರಾಯರಿಗೂ ಅನಾಯಾಸವಾಗಿ ರಾಮೇಶ್ವರದ ಯಾತ್ರೆಯಾಯಿತು. ಹಿಂತಿರುಗಿ ಬರುವಾಗ ಮಧುರೆ, ಶ್ರೀರಂಗ, ಜಂಬುಕೇಶ್ವರ- ಮುಂತಾದ ಸ್ಥಳಗಳನ್ನು ನೋಡಿಕೊಂಡು ಬಂದರು. ಆ ವೇಳೆಗೆ ರಾಯರಿಗೆ ಸ್ವಲ್ಪ ಶರೀರದಲ್ಲಿ ಆಯಾಸವಾಗಿದ್ದುದರಿಂದ ಬೆಂಗಳೂರು ಮೂಲಕ ಅರಸೀಕೆರೆಗೆ ಬಂದರು. ಅಲ್ಲಿ ರಾಯರ ಮಾವನ ಮನೆಯ ಪಕ್ಕದಲ್ಲೇ ಶ್ರೀ ಕೆ. ತಿಮ್ಮಪ್ಪದಾಸರೆಂಬುವರ ಮನೆ. ಶ್ರೀ ತಿಮ್ಮಪ್ಪದಾಸರಿಗೂ ರಾಯರಿಗೂ ಹಿಂದಿನಿಂದಲೂ ಪರಿಚಯವಿತ್ತು. ಅವರ ಮಕ್ಕಳ ಪೈಕಿ ಶ್ರೀ ಕೆ. ನಾರಣಪ್ಪನವರೆಂಬುವರು ಗೋಂದಾವಳಿಗೆ ಹೋಗಿ ಬಂದಿದ್ದರು. ಅವರು ಯಾವಾಗಲೂ ಏಕಾಂತವಾಗಿದ್ದು ರಾಮನಾಮಜಪವನ್ನು ಮಾಡುತ್ತಿದ್ದರು. ರಾಯರು ಅವರನ್ನು ವಿಚಾರದ ಕಡೆಗೆ ತಿರುಗಿಸಲು ಪ್ರಯತ್ನಿಸಿದರು. ಅದು ಸಫಲವಾಯಿತೆನ್ನಬಹುದು.

## ಕಳೂರುಕಟ್ಟೆಯ ವಾಸದ ಉಪಸಂಹಾರ :

ಮುಂದೆ ರಾಯರಿಗೆ ಆರೋಗ್ಯವು ಸುಮಾರಾಗಿ ಸರಿಯಾಯಿತಾದರೂ ಪೂರ್ತಿಯಾಗಿ ಆರೋಗ್ಯವಿರಲಿಲ್ಲ. ರಜವೆಲ್ಲ ಪೂರೈಸಿದ್ದರಿಂದ ಮತ್ತೆ ಕಳೂರುಕಟ್ಟೆಗೆ ಬಂದು ಕೆಲಸವನ್ನು ಮುಂದುವರಿಸಿದರು. ಕೆಲವು ಸುಧಾರಣೆಗಳನ್ನು ಸ್ಕೂಲಿನಲ್ಲಿ ಮಾಡಿದರು. ರಾಯರು ಉಪಾಧ್ಯಾಯರಾಗಿದ್ದ ವೇಳೆಯಲ್ಲಿ ಸ್ಕೂಲಿಗೆ ದಿವಾನರ ಭೇಟಿಯ ಯೋಗವೂ ಒದಗಿತ್ತು. ಹೇಗೂ ಸ್ಕೂಲಿನ ಕೆಲಸದ ಅನಂತರ ವಿರಾಮ ದೊರೆತಾಗಲೆಲ್ಲ ವೇದಾಂತಮಾರ್ಗದಲ್ಲಿ ಮುಂದುವರೆಯುತ್ತಿದ್ದರು. ಅಷ್ಟುಹೊತ್ತಿಗೆ ಅವರಿಗೆ ಮತ್ತೊಂದು ರೀತಿಯಿಂದ ದೈವಸಹಾಯವು ಪ್ರಾಪ್ತವಾಯಿತು. ಏನೆಂದರೆ: ದಾವಣಗೆರೆಯ ಶ್ರೀ ಮಾಗಾನಹಳ್ಳಿ ದೊಡ್ಡ ಬಸಪ್ಪನೆಂಬುವರು ರಾಯರನ್ನು ಕೆಲವು ಕಾಲ ರಜಾಪಡೆದು ದಾವಣಗೆರೆಗೇ ಬರಬೇಕೆಂದೂ ಆ ಸಂಬಳವನ್ನು ತಾವು ಕೊಡುವದಾಗಿಯೂ ತಿಳಿಸಿದರು. ರಾಯರಿಗೆ ಬಹಳ ಸಂತೋಷವಾಯಿತು. ರಜಕ್ಕೆ ಅರ್ಜಿಹಾಕಿ ದಾವಣಗೆರೆಗೆ ಬಂದರು. ಶ್ರೀ ದೊಡ್ಡಬಸಪ್ಪನವರು ರಾಯರಿಗೆ ಮತ್ತೇನೂ ಕೆಲಸವನ್ನು ಕೊಡದೆ ಶ್ರೀ ವಿವೇಕಾನಂದರ ರಾಜಯೋಗವನ್ನು ಭಾಷಾಂತರಮಾಡುವ ಕಾರ್ಯವನ್ನು ವಹಿಸಿದರು. ಆ ಕೆಲಸವು ರಾಯರಿಗೆ ಬಹಳ ಪ್ರಿಯವಾಗಿದ್ದುದರಿಂದ ಕೂಡಲೆ ಅದನ್ನು ಪ್ರಾರಂಭಿಸಿದರು. ಆದರೆ ಒಂದೆರಡು ತಿಂಗಳಲ್ಲೇ ದಾವಣಗೆರೆಗೆ ಪ್ಲೇಗು ಬಂದದ್ದರಿಂದ ರಾಯರು ಮತ್ತೆ ಊರಿಗೆ ಬಂದುಬಿಟ್ಟರು. ಆ ವೇಳೆಗೆ ದೈವಾನುಗ್ರಹದಿಂದ ಮೂರನೆಯ ಸಲಕ್ಕೆ ಮತ್ತೆ ರಾಯರಿಗೆ ಹೊಳಲ್ಕೆರೆಗೆ ವರ್ಗವಾಯಿತು. ಕೂಡಲೆ ಬಂದು ರಾಯರು ಹೆಡ್‌ಮಾಸ್ಟರಾಗಿ ಕೆಲಸದ ಮೇಲೆ ಹಾಜರಾದರು.

## ಹೊಳಲ್ಕೆರೆಯ ವೃತ್ತಾಂತ :

ಈ ಬಾರಿ ರಾಯರು ಈ ಊರಿನಲ್ಲಿ ಸುಖವಾಗಿ ಕಾಲವನ್ನು ಕಳೆದರೆನ್ನಬಹುದು. ಶ್ರೀ ದೊಡ್ಡಬಸಪ್ಪನವರು- ದಾವಣಗೆರೆಗೆ ಬಂದು ರಾಜಯೋಗದ ಅನುವಾದವನ್ನು ಪೂರೈಸಬೇಕೆಂದು- ಅವರನ್ನು ಕೇಳಿಕೊಂಡರು. ಆದರೆ ರಾಯರು ಹೊಳಲ್ಕೆರೆಯಲ್ಲೇ ನಿಂತು ಅದನ್ನು ಪೂರೈಸುವದಾಗಿ ವಾಗ್ದಾನಮಾಡಿ ಅದರಂತೆಯೇ ಭಾಷಾಂತರವನ್ನು ಬರೆದು ಮುಗಿಸಿದರು. ಈ ಕಾಲಕ್ಕೆ ಅರಸೀಕೆರೆಯ ಶ್ರೀ ಡಿ. ಸಿ. ನಂಜಪ್ಪನವರೂ ಇಲ್ಲೇ ಉಪಾಧ್ಯಾಯರಾಗಿ ಸೇರಿದರು. ಉಳಿದ ಮೇಷ್ಟರುಗಳೂ ಸಹಕರಿಸುತ್ತಿದ್ದರಾದ್ದರಿಂದ ಸ್ಕೂಲಿನ ಕೆಲಸವು ಸರಾಗವಾಗಿ ನಡೆಯುತ್ತಿತ್ತು. ರಾಯರು ಈ ಕಾಲದಲ್ಲಿ ರಾಮಾನುಜಭಾಷ್ಯವನ್ನು ಓದಿದರು. ಅದನ್ನು ಶಾಂಕರಭಾಷ್ಯಕ್ಕೆ ಹೋಲಿಸಿ ವಿಚಾರಮಾಡುತ್ತಿದ್ದರು. ಶ್ರೀರಾಮಾನುಜರ 'ವೇದಾಂತಸಾರ'ವನ್ನು ಓದಿದ ಮೇಲೆ **'ಬಾದರಾಯಣಸೂತ್ರವು ಶಂಕರಭಾಷ್ಯ ಸಮ್ಮತವೆ? ಅಲ್ಲವೆ?'** ಎಂಬ ಬಗ್ಗೆ ಪ್ರಬಂಧವೊಂದನ್ನು ಬರೆದರು. (ಅದು ಪ್ರಕಟವಾಗಿರಲಾರದು). ಆ ಊರಿನಲ್ಲಿ ರಾಯರು ರಾಮನವಮೀ ಉತ್ಸವದಲ್ಲಿ ಕೆಲವು ಉಪನ್ಯಾಸಗಳನ್ನು ಮಾಡಿದರು.

ತಮ್ಮ ಪುತ್ರರಾದ ಶ್ರೀ ನರಸಪ್ಪನವರಿಗೆ ಉಪನಯನವನ್ನೂ ನೆರವೇರಿಸಿದರು. ಇದೇ ಅವಧಿಯಲ್ಲಿ ಶ್ರೀಮಹಾಭಾಗವತರೂ ಚಿತ್ರದುರ್ಗಕ್ಕೆ ಹೋಗುವ ಮಾರ್ಗದಲ್ಲಿ ಬಂದು ರಾಯರ ಮನೆಯಲ್ಲಿ ನಾಲ್ಕು ದಿನಗಳು ಉಳಿದಿದ್ದರು. ಅವರ ಉಪದೇಶಗಳು ಜನರ ಮೇಲೆಲ್ಲ ತುಂಬ ಪರಿಣಾಮಕಾರಿಯಾದವು. ಶ್ರೀಮಹಾಭಾಗವತರು ಆಗ್ಗೆ ಒಂದು ಹರಿಕಥೆಯನ್ನೂ ಮಾಡಿದರು. ಅದು ಆದರ್ಶವಾದ ಹರಿಕಥೆಯಾಗಿತ್ತು. ಅಂಥ ಸನ್ನಿವೇಶವು ಅವರ ಜನ್ಮದಲ್ಲಿಯೇ ಅದೊಂದೇ ಎನ್ನಿಸುವಷ್ಟು ರಾಯರಿಗೆ ಪರಿಣಾಮವಾಗಿತ್ತು. ಇಷ್ಟೆಲ್ಲ ಸಂತೋಷದಿಂದ ಕೂಡಿದ ಸನ್ನಿವೇಶವು ಕೇವಲ ಹತ್ತು ತಿಂಗಳಕಾಲ ರಾಯರಿಗೆ ಲಭಿಸಿತು. ಮುಂದೆ ಶ್ರೀ ನಂಜಪ್ಪನವರಿಗೆ ಚಿತ್ರದುರ್ಗಕ್ಕೂ ರಾಯರಿಗೆ ಹರಿಹರಕ್ಕೂ ವರ್ಗವಾಗಿಬಿಟ್ಟಿತು.

## ಹರಿಹರದ ವೃತ್ತಾಂತ :

ಈ ಊರಿಗೆ ರಾಯರು ಈಗ ಎರಡನೆಯ ಬಾರಿಗೆ ವರ್ಗವಾಗಿ ಬಂದಿದ್ದರು. ಅವರು ಇಷ್ಟು ಬೇಗಬರಲು ಕಾರಣವೇನೆಂದರೆ: ಸ್ಕೂಲಿನ ಅಸಮರ್ಪಕತೆಯನ್ನು ಕಂಡು ಅಲ್ಲಿದ್ದ ನಿವೃತ್ತ ಅಸಿಸ್ಟೆಂಟ್ ಕಮೀಷನರೊಬ್ಬರು ಸರ್ಕಾರಕ್ಕೆ ಬರೆದಿದ್ದರ ಫಲವಾಗಿ ದಕ್ಷಉಪಾಧ್ಯಾಯರೆಂದೂ ಕರ್ತವ್ಯನಿಷ್ಠರೆಂದೂ ಹೆಸರಾಗಿದ್ದ ರಾಯರನ್ನು ಸರ್ಕಾರದವರು ಅಲ್ಲಿಗೆ ವರ್ಗ ಮಾಡಿದ್ದರು. ರಾಯರು ಬಂದಾಗ ಸ್ಕೂಲಿನ ನೀತಿ ನಿಯಮಗಳು ಚೆನ್ನಾಗಿರಲಿಲ್ಲ. ಜಾಣರಾದ ರಾಯರು ಕ್ರಮವಾಗಿ ತಾವು ಒಂದೊಂದಾಗಿ ನಿಯಮಪಾಲನೆಯನ್ನು ಜಾರಿಗೆ ತರುತ್ತಾ ಬಂದರು. ದೋಷಗಳನ್ನೆಲ್ಲ ನಿವರ್ತನಮಾಡಿ ಸ್ಕೂಲಿನ ಕೀರ್ತಿಯನ್ನು ಹೆಚ್ಚಿಸಿದರು; ಇದರಿಂದ ಮೇಲಧಿಕಾರಿಗಳ ಮೆಚ್ಚುಗೆಗೂ ಪಾತ್ರರಾದರು. ಇದೇ ಸಮಯದಲ್ಲಿ ನಾರದಭಕ್ತಿಸೂತ್ರಕ್ಕೆ ಒಂದು ವಿಸ್ತಾರವಾದ 'ಭಕ್ತಿಚಂದ್ರಿಕೆ'*ಯೆಂಬ ವಿವರಣೆಯನ್ನು ಬರೆದರು. ಆಗಲೇ ರಾಜಯೋಗಗ್ರಂಥವೂ ಅಚ್ಚಾಗಿ ಹೊರಬಂತು. ಶ್ರೀ ದೊಡ್ಡಬಸಪ್ಪನವರು ಅದರ ಪ್ರತಿಗಳನ್ನೆಲ್ಲ ರಾಯರಿಗೇ ಕೊಟ್ಟು ಇವುಗಳ ಮಾರಾಟದಿಂದ ಬಂದ ಹಣವನ್ನು ಮುಂದಿನ ಗ್ರಂಥದ ಮುದ್ರಣಕ್ಕೆ ಉಪಯೋಗಿಸಿಕೊಳ್ಳಬೇಕೆಂದು ತಿಳಿಸಿದರು. ಆದರೆ ರಾಯರು 'ಸಂಸಾರಿಗಳಾದ ನಮಗೆ ಹಣವನ್ನು ಕೂಡಿಸುವದು ಕಷ್ಟ'ವೆಂದಾಗ ಶ್ರೀ ದೊಡ್ಡ ಬಸಪ್ಪನವರು "ಇಷ್ಟರಮೇಲೆ ನೀವು ಬ್ರಾಹ್ಮಣರು, ಅಗತ್ಯವಾದರೆ ಕುಟುಂಬದ ವೆಚ್ಚಕ್ಕೇ ಉಪಯೋಗಿಸಿಕೊಂಡುಬಿಡಿ" ಎಂದುಬಿಟ್ಟರು. ಆದರೆ ರಾಯರ ನಿಷ್ಠೆಯು- ಇದೇ ಗ್ರಂಥದ ಮಾರಾಟದ ಧನವು ಮುಂದಿನ ಗ್ರಂಥಗಳ ಮುದ್ರಣಕ್ಕೆ ಮೂಲಧನವಾಗುವಂತೆಯೂ ಮುಂದೆ ಕಾರ್ಯಾಲಯದ ಸ್ಥಾಪನೆಗೆ ಈ ಸಹಾಯವೇ ಬೀಜಧನವಾಗುವಂತೆಯೂ-ಮಾಡಿತು. ಅದರ ವಿಚಾರವನ್ನು ಮತ್ತೆ ಪರಾಮರ್ಶಿಸುವೆನು.

---

* ಈ ಗ್ರಂಥವನ್ನು ಪರಿಷ್ಕರಿಸಿ ಈಚೆಗೆ ಶ್ರೀಶ್ರೀಗಳವರು ಕಾರ್ಯಾಲಯದ ಮೂಲಕ ಮತ್ತೆ ಬೆಳಕಿಗೆ ಹಿಡಿದಿರುತ್ತಾರೆ.

ರಾಯರು ಈ ವೇಳೆಯಲ್ಲಿಯೇ ಕೆಲವು ಸ್ಕೂಲು ಪುಸ್ತಕಗಳನ್ನೂ ಬರೆದರು. ಅದರಲ್ಲಿ **'ಕರ್ಣಾಟಕ ವಾಕ್ಯರಚನಾಕ್ರಮ'** ಎಂಬುದು ಮುಖ್ಯವಾದದ್ದು. ಇದು ಬಹಳ ಕಾಲದವರೆಗೂ ಮುಂದೆ ಮಿಡಲ್‌ಸ್ಕೂಲು ತರಗತಿಗಳಿಗೆ ಪಠ್ಯಪುಸ್ತಕವಾಗಿತ್ತು. ಶ್ರೀಮಹಾಭಾಗವತರು ಸ್ಥಾಪಿಸಿದ್ದ `Sanskrit Research Institute Journal'ಗೆ ರಾಯರು ಒಂದೆರಡು ಲೇಖನಗಳನ್ನು ಬರೆದದ್ದು ಇದೇ ಕಾಲದಲ್ಲಿಯೇ. ಆಗ್ಗೆ ತುಮಕೂರಿಗೆ ವರ್ಗವಾಗಿ ಬಂದಿದ್ದ ಶ್ರೀ ಕೆ.ಎ. ಕೃಷ್ಣಸ್ವಾಮಿ ಅಯ್ಯರ್‌ರವರ ಭೇಟಿಗೆ ರಾಯರು ಹೋಗಿದ್ದಾಗ ಶ್ರೀ ಅಯ್ಯರ್‌ರವರು ಬರೆದಿದ್ದ `Fundamentals of Vedanta' ಎಂಬ ಒಂದು ಉಪನ್ಯಾಸವನ್ನು ಓದಿದಾಗ ಅವಸ್ಥಾತ್ರಯ ಪ್ರಕ್ರಿಯೆಯ ಮರ್ಮವು ಇಂಥದ್ದೆಂಬುದು ಮೊಟ್ಟ ಮೊದಲಬಾರಿಗೆ ಇವರಿಗೆ ಮನವರಿಕೆಯಾಯಿತು. ಹೀಗೆ ಕಾಲವು ಸಾಗುತ್ತಿರಲು ರಾಯರ ಕುಟುಂಬಕ್ಕೆ ಸೇರಿದವರಲ್ಲಿ ಒಬ್ಬ ಹುಡುಗನ ಅಕಾಲ ಮರಣವು ಹರಿಹರದ ಜೀವನದ ಬಗ್ಗೆ ಬೇಸರವನ್ನುಂಟು ಮಾಡಿತು. ಜೊತೆಗೆ ಶ್ರೀಮಹಾಭಾಗವತರೊಡನೆ ಕಾಶೀಯಾತ್ರೆಯನ್ನು ಮಾಡುವ ಸುಯೋಗವು ತಾನಾಗಿ ಒದಗಿ ಬಂದದ್ದೂ ರಜಾ ದೊರೆಯದೆ ತಪ್ಪಿಹೋದದ್ದೂ ಇನ್ನಷ್ಟು ದುಃಖಕ್ಕೆ ಕಾರಣವಾಯಿತು. ಅದರಿಂದ ಶ್ರೀ ಡಿ.ಸಿ. ನಂಜಪ್ಪನವರು ಮತ್ತು ಶ್ರೀ ಕೆ. ನಾರಣಪ್ಪ-ಇವರುಗಳು ಮಾತ್ರ ಶ್ರೀಮಹಾಭಾಗವತರೊಡನೆ ಕಾಶೀಯಾತ್ರೆಗೆ ಹೋಗಿ ಬಂದರು. ರಾಯರು ಅದನ್ನೆಲ್ಲ ಕೇಳಿ ಸಂತೋಷಪಡುವದರಲ್ಲಿ ಮಾತ್ರ ಭಾಗಿಗಳಾದರು. ಈ ನಡುವೆ ಸರ್ಕಾರದವರು ಹೊಸದಾಗಿ ಏರ್ಪಾಡಾಗಿದ್ದ ಎಜುಕೇಷನಲ್ ಸೂಪರ್‌ವೈಸರ್ ಹುದ್ದೆಗೆ ರಾಯರನ್ನು ನೇಮಕಮಾಡಿ ಹೊಸದುರ್ಗಕ್ಕೆ ಕಳುಹಿಸಿದರು. ರಾಯರು ಸ್ವಲ್ಪದಿನಗಳು ಆ ಕೆಲಸಮಾಡಿದರಾದರೂ ಪ್ರವಾಸವೇ ಮುಖ್ಯವಾಗಿದ್ದ ಆ ಉದ್ಯೋಗವು ಅವರ ಮನಸ್ಸಿಗೆ ಹಿಡಿಸಲಿಲ್ಲ. ಜೊತೆಗೆ ಅವರ ಆಚಾರ ವಿಚಾರಗಳಿಗೂ ಮತ್ತೆ ತೊಂದರೆಯಾಯಿತು. ಆದ್ದರಿಂದ ಉಪಾಧ್ಯಾಯರ ಕೆಲಸವನ್ನೇ ಕೊಡಿಸಬೇಕೆಂದು ಕೇಳಿಕೊಂಡರು. ಸರ್ಕಾರದವರು ಮತ್ತೆ ಹರಿಹರಕ್ಕೇ ರಾಯರನ್ನು ವರ್ಗಮಾಡಿದರು. ಆದರೆ ಹಿಂದೆ ಹೇಳಿದ ಕಾರಣಗಳಿಂದ ರಾಯರಿಗೂ ಅವರ ಮನೆಯವರಿಗೂ ಹರಿಹರದ ವಾಸವು ಇಷ್ಟವಾಗಲಿಲ್ಲ. ನೇರಾಗಿ ಬೆಂಗಳೂರಿಗೆ ಹೋಗಿ ಶ್ರೀ ಕೃಷ್ಣಸ್ವಾಮಿ ಅಯ್ಯರ್‌ರವರ ಮೂಲಕ ಪ್ರಯತ್ನಪಡಲಾಗಿ ಬೆಂಗಳೂರು ಫೋರ್ಟ್ ಎ.ವಿ.ಸ್ಕೂಲಿಗೆ ರಾಯರಿಗೆ ವರ್ಗವಾಯಿತು. ರಾಯರ ಭಾಗಕ್ಕೆ ಇದೊಂದು ದೊಡ್ಡ ವರವಾಗಿ ಪರಿಣಮಿಸಿತು. ಇನ್ನು ಬೆಂಗಳೂರು ವಿಚಾರವನ್ನು ಮುಂದಿನ ಅಧ್ಯಾಯದಿಂದ ಪ್ರಸ್ತಾಪಿಸುವೆನು.

≺ ❖ ❖ ❖ ≻

# ೧೦. ಬೆಂಗಳೂರುನಗರದಲ್ಲಿ ವಾಸ

## ಬೆಂಗಳೂರಿನ ಜೀವನ :

ರಾಯರು ಬೆಂಗಳೂರಿಗೆ ಬರುವ ಹೊತ್ತಿಗೆ ದೈವಯೋಗದಿಂದ ವೇ|| ಎಸ್. ವಿಠಲಶಾಸ್ತ್ರಿಗಳೂ ಶ್ರೀ ಕೆ.ಎ. ಕೃಷ್ಣಸ್ವಾಮಿ ಅಯ್ಯರ್‌ರವರೂ ಅದೇ ಊರಿಗೆ ಬಂದಿದ್ದರು. ವೇ|| ಶಾಸ್ತ್ರಿಗಳು ಮದ್ರಾಸಿನ ವೇದಾಂತಶಿರೋಮಣಿ ಪರೀಕ್ಷೆಯಲ್ಲಿಯೂ 1915ರಲ್ಲಿ ನಡೆದ ಅದ್ವೈತ ವೇದಾಂತ ಸಭೆಯ ಪರೀಕ್ಷೆಯಲ್ಲಿಯೂ ಉತ್ತೀರ್ಣರಾಗಿ ಬೆಂಗಳೂರಿನ ಫೋರ್ಟ್ ಎ.ವಿ. ಸ್ಕೂಲಿಗೆ ಉಪಾಧ್ಯಾಯರಾಗಿ ವರ್ಗವಾಗಿ ಬಂದಿದ್ದರು. ರಾಯರು ಬಂದದ್ದು ವೇ|| ಶಾಸ್ತ್ರಿಗಳಿಗೆ ತುಂಬ ಸಂತೋಷಕರವಾಯಿತು. ಶ್ರೀ ಕೆ.ಎ. ಕೃಷ್ಣಸ್ವಾಮಿ ಅಯ್ಯರ್‌ರವರ ಸಂಗವೂ ದೊರೆತದ್ದರಿಂದ ರಾಯರಿಗೆ ಬಹಳ ಆನಂದವಾಯಿತು. ಕೆಲಸಕ್ಕೆ ಸೇರಿದಾಗ ರಾಯರಿಗೆ ಸ್ಕೂಲೇ ಬಹಳ ಆಶ್ಚರ್ಯವಾಗಿ ಕಂಡಿತು. ಏಕೆಂದರೆ ಇದುವರೆಗೆ ರಾಯರು ಕೆಲಸಮಾಡಿದ್ದ ಎಲ್ಲಾ ಸ್ಕೂಲುಗಳಿಗಿಂತ ಇದು ಬಹಳ ದೊಡ್ಡದಾಗಿತ್ತು. ಕ್ರಮಕ್ರಮವಾಗಿ ಕೆಲಸಕ್ಕೆ ಹೊಂದಿಕೊಂಡು ಬಾಡಿಗೆಮನೆ ಮಾಡಿಕೊಂಡು ಸಂಸಾರವನ್ನೂ ಕರೆತಂದರು. ಆಗ್ಗೆ ಬೆಂಗಳೂರು ನಗರವು ಈಗಿನಷ್ಟು ಬೆಳೆದಿರಲಿಲ್ಲ. ಆದರೂ ಬಡವರಿಗೆ ಮನೆಯು ಸಿಗುವದು ಕಷ್ಟವಾಗಿತ್ತು. ರಾಯರು ಎರಡು ಮೂರು ಮನೆಗಳನ್ನು ಬದಲಾಯಿಸಿದ ಬಳಿಕ ಸ್ವಲ್ಪ ಅನುಕೂಲವಾದ ಸ್ಥಳವು ದೊರೆಯಿತು. ವಿರಾಮಕಾಲದಲ್ಲಿ ಶ್ರೀ ಅಯ್ಯರ್‌ರವರ ಸಂಪರ್ಕವನ್ನು ನಿಕಟವಾಗಿ ರಾಯರು ಬೆಳೆಯಿಸತೊಡಗಿದರು. ಶ್ರೀ ಅಯ್ಯರ್‌ರವರು ತಮ್ಮ ಮಕ್ಕಳಿಗೆ ಪಾಠ ಹೇಳಲು ರಾಯರನ್ನೇ ಗೊತ್ತುಮಾಡಿದ್ದರಿಂದ ದಿನವೂ ಅವರ ಮನೆಗೆ ಹೋಗಲೇಬೇಕಾಗಿತ್ತು. ಇದರಿಂದ ವೇದಾಂತ ವಿಚಾರದಲ್ಲಿ ಮುಂದುವರೆಯಲು ಅವಕಾಶವು ದೊರೆಯಲಾರಂಭಿಸಿತು. ಅಯ್ಯರ್‌ರವರ `Fundamentals of Vedanta' ಎಂಬ ಉಪನ್ಯಾಸವನ್ನು ಓದಿದ ಮೇಲೆ ರಾಯರಿಗೆ ವೇದಾಂತವನ್ನು **ಜಿಜ್ಞಾಸ್ಯವಾದ ಬಾಹ್ಯಪ್ರಪಂಚದೃಷ್ಟಿಯಿಂದ ವಿಚಾರಮಾಡುವದಕ್ಕಿಂತಲೂ ಜಿಜ್ಞಾಸುವಿನ ದೃಷ್ಟಿಯಿಂದ ವಿಚಾರಮಾಡುವದು ಹೆಚ್ಚಿನ ಫಲಕಾರಿ**- ಎಂಬ ಭಾವನೆಯು ಬಂದಿತು. ಈ ದೃಷ್ಟಿಯಿಂದ ಒಂದು ಪುಸ್ತಕವನ್ನು ಬರೆಯಲು ಕೆಲವು ಟಿಪ್ಪಣಿಗಳನ್ನು ಸಂಗ್ರಹಿಸಿ ಅಯ್ಯರ್‌ರವರಿಗೆ ತೋರಿಸಲು ಅವರು ನೋಡಿ ಸಂತೋಷಪಟ್ಟರು. ಅನಂತರ ರಾಯರಿಗೆ ಶ್ರೀ ಅಯ್ಯರ್‌ರವರು ಇಂಗ್ಲಿಷಿನಲ್ಲಿ ಬರೆದಿದ್ದ ಆ ಉಪನ್ಯಾಸವನ್ನು ಸಂಸ್ಕೃತಭಾಷೆಯಲ್ಲಿ ಬರೆಯಬೇಕೆಂಬ ಕುತೂಹಲವುಂಟಾಗಿ **'ವೇದಾಂತಪ್ರಕ್ರಿಯಾರಹಸ್ಯಮ್'** ಎಂಬ ಹೆಸರಿನಿಂದ ಅದನ್ನು ಸಂಸ್ಕೃತಕ್ಕೆ ತಿರುಗಿಸಿದರು. ಆದರೆ ಈಗಲೂ ಆ ಗ್ರಂಥವು ಆಮುದ್ರಿತವಾಗಿ ಹಾಗೇ ಉಳಿದುಕೊಂಡಿದೆ. ಶ್ರೀ ಅಯ್ಯರ್‌ರವರು ಅದನ್ನು ಸಂಸ್ಕೃತಪಂಡಿತರೊಬ್ಬರಿಗೆ ತೋರಿಸಲು ಅವರು ಶೈಲಿಯನ್ನು ನೋಡಿ ಬಹಳ ಮೆಚ್ಚಿದರಂತೆ. ಹೀಗೆ ರಾಯರಿಗೆ ಅಯ್ಯರ್‌ರವರ ಸಹವಾಸದಿಂದ ಮತ್ತೆ ಕೆಲವು ಪಂಡಿತರ

ಪರಿಚಯವೂ ಆಯಿತು. ಅವರೊಳಗೆ ಶ್ರೀ ದೊಡ್ಡ ಬೆಲೆಯ ನಾರಾಯಣಶಾಸ್ತ್ರಿಗಳೆಂಬವರು ಮುಖ್ಯರು. ಶ್ರೀ ಎಸ್. ವಿಠಲಶಾಸ್ತ್ರಿಗಳ ವಿಚಾರವು ಈ ಮೊದಲೇ ಪ್ರಸ್ತಾಪಿಸಲ್ಪಟ್ಟಿದೆಯಷ್ಟೆ! ಅವರು ಶ್ರೀ ಅಯ್ಯರ್‌ರವರು ಹಾಕುತ್ತಿದ್ದ ವೇದಾಂತದ ಪ್ರಶ್ನೆಗಳಿಗೆ ಉತ್ತರವು ತಿಳಿಯದೆ ಪೇಚಾಡುತ್ತಾ ರಾಯರಲ್ಲಿ ತಿಳಿಯಿಸುತ್ತಿದ್ದರು. ರಾಯರು ಅವಸ್ಥಾತ್ರಯದೃಷ್ಟಿಯ ಅವಲಂಬನೆಯಿಂದ ಹೇಗೆ ಎಲ್ಲಾ ತೊಡಕುಗಳೂ ಬಿಚ್ಚಿಕೊಳ್ಳುವವು-ಎಂಬುದನ್ನು ಹೇಳುತ್ತಿದ್ದರು. ಈ ಕ್ರಮವು ಇನ್ನೂ ಚೆನ್ನಾಗಿ ಅಳವಟ್ಟುಕೊಳ್ಳಲು ಸ್ವಲ್ಪಕಾಲವು ಬೇಕಾಯಿತು.

## ವೇದಾಂತಾಭ್ಯಾಸ :

ರಾಯರಿಗೆ ಈ ಸಮಯದಲ್ಲಿ ಬೆಂಗಳೂರಿನಲ್ಲಿ ಮತ್ತೊಂದು ಸದವಕಾಶವು ದೊರೆಯಿತು. 1907ರಲ್ಲಿ ಶ್ರೀ ಶೃಂಗೇರಿ ಜಗದ್ಗುರುಗಳು ಕಾಲಟಿಗೆ ದಯಮಾಡಿಸುವಾಗ ಬೆಂಗಳೂರಿನಲ್ಲಿ ಶಂಕರಮಠದ ತಳಹದಿಯಾಯಿತು. ಗುರುಗಳು ಹಿಂದಿರುಗಿ ದಯಮಾಡಿಸುವ ವೇಳೆಗೆ ಕಟ್ಟಡವು ಸಿದ್ಧವಾಗಿತ್ತು. 1911ನೆಯ ಫೆಬ್ರವರಿ ಮೂರನೆಯ ತಾರೀಖಿನ ದಿನ ಜಗದ್ಗುರುಗಳು ಹೊಸ ಶಂಕರಮಠದ ಕಟ್ಟಡದಲ್ಲಿ **"ಭಾರತೀಯಗೀರ್ವಾಣ ಪ್ರೌಢವಿದ್ಯಾಭಿವರ್ಧಿನೀ ಪಾಠಶಾಲಾ"** ಎಂಬ ಹೆಸರಿನ ಸಂಸ್ಕೃತ ಪಾಠಶಾಲೆಯನ್ನು ಸ್ಥಾಪಿಸಿ ಐವತ್ತು ಜನ ಪ್ರೌಢವಿದ್ಯಾರ್ಥಿಗಳಿಗೆ ಪೂರ್ವೋತ್ತರ ಮೀಮಾಂಸಾಪಾಠಪ್ರವಚನಗಳಿಗೆ ಏರ್ಪಡಿಸಿದರು. ರಾಯರು ಬರುವ ವೇಳೆಗೆ ಈ ಪಾಠಶಾಲೆಯು ಸ್ಥಾಪಿತವಾಗಿ ಆರು ವರ್ಷಗಳಾಗಿದ್ದವು. ಮತ್ತು ಆಗ್ಗೆ ವೇ॥ ಬ್ರ॥ ಶ್ರೀ ಹಾ. ವಿರೂಪಾಕ್ಷಶಾಸ್ತ್ರಿಗಳವರೇ ವೇದಾಂತವಿಭಾಗಕ್ಕೆ ಪ್ರಾಧ್ಯಾಪಕರೂ ಆಗಿದ್ದರು. 1912ರಲ್ಲಿ **ಶ್ರೀಜಗದ್ಗುರು ಶಿವಾಭಿನವನ ನರಸಿಂಹಭಾರತೀ ಸ್ವಾಮಿಗಳವರು** ಬ್ರಹ್ಮೀ ಭೂತರಾದ ಬಳಿಕ ಅದೇ ಧರ್ಮಪೀಠವನ್ನೇರಿದ ಶ್ರೀಚಂದ್ರಶೇಖರ ಭಾರತೀಸ್ವಾಮಿಗಳವರಿಗೆ ಶ್ರೀ ಶಾಸ್ತ್ರಿಗಳು ತರ್ಕವೇದಾಂತ ಪಾಠಗಳನ್ನು ಹೇಳುತ್ತಿದ್ದರು. ಆಗ್ಗೆ ಸೂತ್ರಭಾಷ್ಯಪಾಠವು ನಡೆಯುತ್ತಿತ್ತು. ರಾಯರು ಧಾರವಾಡದಲ್ಲಿ ಶ್ರೀ ಶಾಸ್ತ್ರಿಗಳವರಿಂದ ಕೆಲವು ಕಾಲ ವೇದಾಂತಪಾಠಗಳನ್ನು ಶ್ರವಣಮಾಡಿದ್ದನ್ನು ಹಿಂದೆಯೇ ತಿಳಿಸಿದೆಯಷ್ಟೆ? ಈಗ ಮತ್ತೆ ಅದೇ ಶಾಸ್ತ್ರಿಗಳವರಿಂದ ಪ್ರೌಢಪಾಠವನ್ನೂ ಶ್ರವಣಮಾಡುವ ಸುಯೋಗವು ರಾಯರಿಗೆ ಪ್ರಾಪ್ತವಾದಂತಾಯಿತು. ಈಗ ನಡೆಯುತ್ತಿದ್ದ ಪಾಠವು ವಿದ್ವತ್‌ತರಗತಿಗಳ ಮಟ್ಟದ್ದಾಗಿದ್ದರೂ ಶ್ರೀ ಶಾಸ್ತ್ರಿಗಳು ರಾಯರಂಥ ಲೌಕಿಕರಿಗೆ ಅರ್ಥವಾಗಲೆಂಬ ದೃಷ್ಟಿಯಿಂದ ಹಗುರವಾದ ಶೈಲಿಯಿಂದಲೇ ಹೇಳುತ್ತಿದ್ದರು. ಆಗಾಗ್ಗೆ ಅಲ್ಲಲ್ಲಿ ಬರುವ ಪಾರಿಭಾಷಿಕ ಶಬ್ದಗಳನ್ನೂ ಪರಿಚಯಮಾಡಿಕೊಡುತ್ತಿದ್ದರು; ದೃಷ್ಟಾಂತಗಳನ್ನೂ ಹೇಳುತ್ತಿದ್ದರು; ಮತ್ತು ನಡುನಡುವೆ ಕರ್ಮಪ್ರಾಶಸ್ತ್ಯವನ್ನು ಹೊಗಳಿ ಕರ್ಮವನ್ನು ಬಿಡಬಾರದೆಂದೂ ಬೋಧಿಸುತ್ತಿದ್ದರು. ಇದರಿಂದ ರಾಯರಿಗೆ ಕರ್ಮಜ್ಞಾನಗಳ ಸಂಬಂಧವೂ ಸಾಮರಸ್ಯವೂ ಮನದಟ್ಟಾಗುವಂತಾಯಿತು.

## ಡಿ.ಐ.ಜಿ. ಬೆಳವಾಡಿ ದಾಸಪ್ಪನವರು :

ರಾಯರನ್ನು ಕಳೂರುಕಟ್ಟೆಗೆ ವರ್ಗಮಾಡಿದ್ದ ಈ ಮಹನೀಯರ ಪರಿಚಯವು ಹರಿಹರದಲ್ಲಿದ್ದಾಗಿನಿಂದಲೇ ಸ್ವಲ್ಪಮಟ್ಟಿಗೆ ರಾಯರಿಗೆ ಆಗಿತ್ತು. ಹರಿಹರಕ್ಕೊಮ್ಮೆ ಇವರು ಬಂದಿದ್ದಾಗ ರಾಯರು ಕನ್ನಡಿಸಿದ್ದ "ರಾಜಯೋಗ"ಗ್ರಂಥವನ್ನು ಇವರು ನೋಡಿದ್ದರು. ಯೋಗಶಾಸ್ತ್ರದಲ್ಲಿ ಇವರಿಗೆ ಅಭಿರುಚಿಯಿತ್ತೆಂದು ಕಂಡುಬರುತ್ತದೆ. "ಆತ್ಮವಿದ್ಯಾವಿಲಾಸ"ದ ಮತ್ತು "ಸದಾಶಿವೇಂದ್ರಸ್ತುತಿ"ಯ ಶ್ಲೋಕಗಳೆಲ್ಲವೂ ಇವರಿಗೆ ಕಂಠಗತವಾಗಿದ್ದವು. ರಾಯರು ಶ್ರೀ ಕೃಷ್ಣಸ್ವಾಮಿಅಯ್ಯರ್‌ರೊಡನೆ ವೇದಾಂತವಿಚಾರ ಮಾಡುತ್ತಿದ್ದಾರೆಂಬುದು ತಿಳಿದ ಮೇಲೆ ಬೆಂಗಳೂರಿಗೆ ಬಂದಿದ್ದ ರಾಯರನ್ನು ಈ ಡಿ.ಐ.ಜಿ. ಸಾಹೇಬರು ತಮ್ಮಲ್ಲಿಗೆ ಬರಮಾಡಿಕೊಂಡರು. ಆಗಾಗ್ಗೆ ರಾಯರು ಅವರ ಮನೆಗೆ ಹೋಗಿ ಬರುವದು ಅಭ್ಯಾಸವಾದಂತೆಲ್ಲ ಸೂತ್ರಭಾಷ್ಯ-ಐತರೇಯ ಭಾಷ್ಯಗಳ ಕೆಲವು ಘಟ್ಟಗಳಿಗೆ ರಾಯರಿಂದ ಅರ್ಥವನ್ನು ಕೇಳಿ ತಿಳಿದುಕೊಳ್ಳುತ್ತಿದ್ದರು. ಕೆಲವು ದಿನಗಳಾದ ಮೇಲೆ ಮಾಂಡೂಕ್ಯ ಕಾರಿಕೆಗಳನ್ನು ಕ್ರಮವಾಗಿಯೇ ಓದಲಾರಂಭಿಸಿದರು. ಅದರ ಮಹತ್ತ್ವವು ದಾಸಪ್ಪನವರಿಗೆ ಅವರು ಕೆ. ಶೇಷಾದ್ರಿ ಅಯ್ಯರ್‌ರವರ ಮನೆಯಲ್ಲಿದ್ದಾಗ ತಿಳಿದಿತ್ತಂತೆ. ಆದ್ದರಿಂದ ರಾಯರೊಡನೆ ಅದರ ವ್ಯಾಸಂಗ ಮಾಡಲಾರಂಭಿಸಿದರು. ಇದರಿಂದ ರಾಯರಿಗೂ ಹೊಸ ಹೊಸ ಪರಿಣಾಮಗಳಾದವು. ಶ್ರೀ ದಾಸಪ್ಪನವರು ಶಂಕರಭಾಷ್ಯದ ಎಷ್ಟೋ ಪಂಕ್ತಿಗಳನ್ನು ಕಂಠಪಾಠಮಾಡಿದ್ದರಂತೆ.

ಸ್ವಲ್ಪ ಸಲಿಗೆಯಾದಂತೆಲ್ಲ ರಾಯರಿಗೆ ದಾಸಪ್ಪನವರ ಬಗ್ಗೆ ಸರಿಯಾದ ಭಾವನೆಯುಂಟಾಯಿತು. ಶ್ರೀ ದಾಸಪ್ಪನವರು ಒಂದು ದಿನ ಪ್ರಸ್ತಾಪ ಕ್ರಮದಿಂದ ಶೃಂಗೇರಿಯ ಜಗದ್ಗುರುಗಳಾದ ಶ್ರೀಸಚ್ಚಿದಾನಂದ ಶಿವಾಭಿನವನರಸಿಂಹ ಭಾರತೀ ಸ್ವಾಮಿಗಳ ಒಂದು ಉದಾಹರಣೆಯನ್ನು ತಿಳಿಸಿದರಂತೆ. ಹೇಗೆಂದರೆ: ಜಗದ್ಗುರುಗಳು ಉತ್ತರದೇಶಕ್ಕೆ ದಿಗ್ವಿಜಯ ಯಾತ್ರೆಗೆ ಹೊರಟಾಗ ಬಳ್ಳಾರಿಯವರೆಗೆ ಬಂದರಂತೆ. ಅಲ್ಲಿ ಆರೋಗ್ಯವು ಕಡಿಮೆಯಾಗಲಾಗಿ ಡಾಕ್ಟರು ಕೆಲವು ನಿಯಮಗಳನ್ನು ಹೇಳಿದರಂತೆ. ಒಂದು ದಿನ ಆಹ್ನಿಕಕ್ಕೂ ಬಿಸಿನೀರನ್ನು ಡಾಕ್ಟರ ಸೂಚನೆಯಂತೆ ಪರಿಜನರು ಇರಿಸಿದಾಗ ಜಗದ್ಗುರುಗಳು 'ಆಹಾ! ಇದೆಂಥ ದೇಹಾಭಿಮಾನ! ಅಭಿಮಾನತ್ಯಾಗಮಾಡಬೇಕೆಂದು ಜನರಿಗೆ ಹೇಳಹೊರಟ ನಾನೇ ಹೀಗಾದರೆ ಹೇಗೆ? ಮುಂದಿನ ಪ್ರವಾಸವೇ ಬೇಡ!' ಎಂದುಕೊಂಡು ಹಿಂತಿರುಗಿ ಶೃಂಗೇರಿಗೇ ಹೋಗಿ ಗುರುಗಳ ಸಮಾಧಿಯ ಬಳಿಯಲ್ಲಿ ನಿಂತು ತಮ್ಮ ಅಪರಾಧವನ್ನು ಮನ್ನಿಸಿ ದೇಹಾಭಿಮಾನದ ಬಲೆಯಿಂದ ಕಾಪಾಡಬೇಕೆಂದು ಬೇಡಿಕೊಂಡರಂತೆ! ಈ ಉದಾಹರಣೆಯನ್ನು ಹೇಳಿ ಶ್ರೀ ದಾಸಪ್ಪನವರು ರಾಯರಿಗೆ ದೇಹಾಭಿಮಾನದ ಬಗ್ಗೆ ಎಚ್ಚರಿಕೆಯನ್ನು ಕೊಟ್ಟರಂತೆ. ಹೀಗೆಲ್ಲ ವೇದಾಂತ ವಿಚಾರಾಸಕ್ತಿ, ಸಹೃದಯತೆ, ಸಾಮಾನ್ಯರಲ್ಲೂ ಕರುಣೆಯನ್ನು ತೋರಿಸುತ್ತಿದ್ದ ಶ್ರೀ ದಾಸಪ್ಪನವರ ಬಗ್ಗೆ ರಾಯರಿಗೆ ಪೂಜ್ಯಬುದ್ಧಿಯೇ ಉಂಟಾಯಿತು. ಅವರು ತಮ್ಮ ಮಗಳಿಗೆ ಗಣಿತಪಾಠವನ್ನು ಹೇಳಲು ರಾಯರನ್ನು ನೇಮಿಸಿದರಂತೆ. ಆದರೆ ರಾಯರು ಟ್ಯೂಷನ್ ಫೀಜನ್ನು ತೆಗೆದುಕೊಳ್ಳಲು

ನಿರಾಕರಿಸಿ ಮುಂದೆ ಉಪಾಯವಾಗಿ ವೇದಾಂತಾಭ್ಯಾಸಕ್ಕೆ ಅಡ್ಡಿಯಾಗುವದೆಂಬ ಕಾರಣದಿಂದ ಟ್ಯೂಷನ್ನನ್ನು ಬಿಟ್ಟುಬಿಟ್ಟರು. ಇದರಿಂದ ಅವರಿಗೆ ರಾಯರ ಮೇಲಿನ ಗೌರವವು ಮತ್ತಷ್ಟು ಹೆಚ್ಚಿತು.

ಶ್ರೀ ದಾಸಪ್ಪನವರ ಪರಿಚಯದಿಂದ ರಾಯರಿಗೆ ಮತ್ತೊಂದು ಉಪಕಾರವಾಯಿತು. ಏನೆಂದರೆ:ಆಗತಾನೆ ಸರ್ಕಾರದವರು ಸಂಸ್ಥಾನದ ಕೆಲವು ಕಡೆಗಳಲ್ಲಿ ಅಪ್ಪರ್‌ಸೆಕೆಂಡರಿ ಸ್ಕೂಲುಗಳನ್ನು ತೆರೆಯಲಿದ್ದು ಬೆಂಗಳೂರಿನಲ್ಲಿ ಪ್ರಾರಂಭಿಸುವ ಸ್ಕೂಲಿಗೆ ಒಬ್ಬ ಇಂಗ್ಲಿಷ್ ಉಪಾಧ್ಯಾಯರು ಬೇಕಾಗಿತ್ತು. ಶ್ರೀ ದಾಸಪ್ಪನವರು ವಿಚಾರಿಸಿನೋಡಿ ರಾಯರನ್ನು ಹೊಸ ಡಿಸ್ಟ್ರಿಕ್ಟ್ ನಾರ್ಮಲ್‌ಸ್ಕೂಲಿಗೆ ಉಪಾಧ್ಯಾಯರಾಗುವಂತೆ ಸಹಾಯಮಾಡಿದರು. ಇದರಿಂದ ಆ ಸ್ಕೂಲಿನಲ್ಲಿ ಅನೇಕ ವಿದ್ವಾಂಸರ ಪರಿಚಯವು ರಾಯರಿಗೆ ಉಂಟಾಯಿತು. ಅವರಲ್ಲಿ ವೇ|| ಗಳಾದ ಎಂ.ಎಸ್. ವೆಂಕಟೇಶಶಾಸ್ತ್ರಿಗಳು, ಕ. ನಂಜುಂಡ ಶಾಸ್ತ್ರಿಗಳು, ಮೋಟಗಾನಹಳ್ಳಿ ರಾಮಶೇಷಶಾಸ್ತ್ರಿಗಳು, ಮತ್ತು ಗಂಗಾಧರಶಾಸ್ತ್ರಿಗಳು-ಇವರು ಮುಖ್ಯರಾದವರು.

## "ಮೂಲವಿದ್ಯಾನಿರಾಸ" ಗ್ರಂಥರಚನೆಗೆ ಸಿದ್ಧತೆ :

ಶ್ರೀ ಕೆ.ಎ. ಕೃಷ್ಣಸ್ವಾಮಿ ಅಯ್ಯರ್‌ರವರು ಪ್ರತಿದಿನವೂ ರಾಯರನ್ನು ಸಂಚಾರಕ್ಕೆ ಕರೆದುಕೊಂಡು ಹೋದಾಗ ವೇದಾಂತವಿಚಾರವನ್ನು ಬಲಪಡಿಸುವದು, ಹೊಸ ವೇದಾಂತ ಪ್ರಿಯರ ಪರಿಚಯಮಾಡಿಸುವದು-ಹೀಗೆ ಮಾಡುತ್ತಿದ್ದರು. ರಾಯರು ಅಯ್ಯರ್‌ರ ಇಂಗ್ಲಿಷು ಪ್ರಬಂಧವನ್ನು ಸಂಸ್ಕೃತಕ್ಕೆ ತರ್ಜುಮೆ ಮಾಡಿದ್ದನ್ನು ನೋಡಿ ರಾಯರ ಸಂಸ್ಕೃತಾಭಾಷಾ ಶೈಲಿ, ಲಾಲಿತ್ಯ-ಇವುಗಳನ್ನೂ ಶಕ್ತಿಯುತವಾದ ವಿಷಯಪ್ರತಿಪಾದನೆಯ ರೀತಿಯನ್ನೂ ಅವರು ಬಹಳ ಮೆಚ್ಚಿದ್ದರು. ಅದರಿಂದ ರಾಯರಿಗೆ ಒಂದು ದಿನ 'ಮೂಲಾವಿದ್ಯಾಕುಠಾರ' ಎಂಬ ಸಂಸ್ಕೃತಗ್ರಂಥವೊಂದನ್ನು ಬರೆಯುವಂತೆ ಪ್ರೋತ್ಸಾಹಿಸಿದರು. ರಾಯರಿಗೆ ಆಗ್ಗೆ ಮೂಲಾವಿದ್ಯೆಯೆಂದರೇನೆಂಬುದೇ ತಿಳಿದಿರಲಿಲ್ಲ. ಆಗ ಶ್ರೀ ಕೃಷ್ಣಸ್ವಾಮಿ ಅಯ್ಯರ್‌ರವರು ಪ್ರಸ್ತಾಪಮಾಡುತ್ತಾ ಅದು ಅಧ್ಯಾಸಕ್ಕೆ ಉಪಾದಾನಕಾರಣವಾಗಿರುವದೆಂದೂ ಸುಷುಪ್ತಿ ಪ್ರಳಯಗಳಲ್ಲಿ ಬೀಜರೂಪದಿಂದಿದ್ದುಕೊಂಡಿರುವದೆಂದೂ ಜ್ಞಾನಿಗಳಲ್ಲೂ ಅದರ ಲೇಶವುಂಟೆಂದೂ ಈಗಿನ ವೇದಾಂತಿಗಳು ಹೇಳುತ್ತಾರೆ. ಈ ಪ್ರಕ್ರಿಯೆಯು ಶಂಕರಸಿದ್ಧಾಂತಕ್ಕೆ ವಿರುದ್ಧವಾಗಿರುವದರಿಂದಲೂ ಯುಕ್ತಿವಿರುದ್ಧವಾಗಿರುವದರಿಂದಲೂ ಇದನ್ನು ಕಡಿದು ಹಾಕುವದಕ್ಕಾಗಿ 'ಮೂಲಾವಿದ್ಯಾಕುಠಾರ'ವು ರಚಿತವಾಗಬೇಕೆಂದರು. ರಾಯರು 'ಹೀಗೆಲ್ಲ ಯಾರು ಹೇಳುತ್ತಾರೆ?' ಎಂದು ಕೇಳಲು ಅಯ್ಯರ್‌ರವರು ಹೀಗೆಯೇ ಹೇಳುತ್ತಾರೆ ಎಂದಾಗ ರಾಯರಿಗೆ ಅತ್ಯಾಶ್ಚರ್ಯವಾಯಿತು. ವೇ|| ವಿರೂಪಾಕ್ಷಶಾಸ್ತ್ರಿಗಳು ರಾಯರಿಗೆ ಭಾಷ್ಯಪಾಠವನ್ನು ಹೇಳುವಾಗ ಮೂಲಾನುಗುಣವಾಗಿಯೇ ಹೇಳುತ್ತಿದ್ದದ್ದರಿಂದ ಪಾಠದಲ್ಲಿ ಅಂಥ ವಿಚಾರಗಳ ಸುಳಿವೇ ಇರಲಿಲ್ಲ. ಆದ್ದರಿಂದ ರಾಯರಿಗೆ ಮೂಲಾವಿದ್ಯೆಯ ವಿಚಾರವು ಹೇಗೆ ಗೊತ್ತಾಗಬೇಕು?

ಅಯ್ಯರ್‌ರವರನ್ನು ಮತ್ತೆ ಪ್ರಶ್ನಿಸಿ ರಾಯರು 'ನಮ್ಮ ಶಾಸ್ತ್ರಿಗಳು ಹಾಗೆ ಹೇಳಿಕೊಟ್ಟೇ ಇಲ್ಲ'- ಎಂದುಬಿಟ್ಟರು. ಆಗ ಶ್ರೀ ಕೃಷ್ಣಸ್ವಾಮಿ ಅಯ್ಯರ್‌ರವರು ರಾಯರನ್ನು ಒಂದು ದಿನ ಶಾಸ್ತ್ರಿಗಳ ಮನೆಗೆ ಕರೆದುಕೊಂಡು ಹೋಗಿ ವಿಷಯವನ್ನು ಪ್ರಸ್ತಾಪಿಸಿದರು. 'ಅದ್ವೈತಕ್ಕೆ ಪ್ರಮಾಣವೇನು?'- ಎಂದು ಪ್ರಶ್ನಿಸಿದ್ದಕ್ಕೆ ಶಾಸ್ತ್ರಿಗಳು 'ಜೀವನ್ಮುಕ್ತರ ಅನುಭವವೇ ಪ್ರಮಾಣ' ಎಂದು ಉತ್ತರವನ್ನು ಕೊಟ್ಟರು. 'ಜೀವನ್ಮುಕ್ತರಿಗೆ ದ್ವೈತವು ಕಾಣಿಸುವದಿಲ್ಲವೆ?' ಎಂದು ಕೇಳಿದ್ದಕ್ಕೆ 'ಸುಟ್ಟ ಬಟ್ಟೆಯಂತೆ ಬಾಧಿತಾನುವೃತ್ತಿಯಿಂದ ಅವರಿಗೆ ದ್ವೈತವು ಕಂಡರೂ ಅದು ಪ್ರಾರಬ್ಧ ಕರ್ಮವಿರುವವರೆಗೆ ಮಾತ್ರ ಇರುತ್ತದೆಯಾದ್ದರಿಂದ ಬಾಧಕವಿಲ್ಲ'- ಎಂದು ಶಾಸ್ತ್ರಿಗಳು ಹೇಳಿದರು. 'ಪ್ರಾರಬ್ಧಕರ್ಮವಾದರೂ ಏತಕ್ಕೆ ಉಳಿದುಕೊಂಡಿದೆ?'- ಎಂಬುದಕ್ಕೆ **'ಅವಿದ್ಯಾಲೇಶವೇ ಅದಕ್ಕೆ ಹೇತು'**ವೆಂದು ನುಡಿದರು. 'ಸರ್ವಥಾ ಅದ್ವೈತಸ್ಥಿತಿಯು ಯಾವದು?'- ಎನ್ನಲು 'ವಿದೇಹಮುಕ್ತಿಯೇ' ಎಂದರು. ಹೀಗೆ ಸ್ವಲ್ಪ ಹೆಚ್ಚು ಕಡಿಮೆಯಾಗಿ ತಮ್ಮ ಹೇಳಿಕೆಗಳಿಗೆಲ್ಲ ಶಾಸ್ತ್ರಿಗಳಿಂದ ಸಾಕ್ಷ್ಯವನ್ನು ಹೇಳಿಸಿದ ತರುವಾಯ ಇಬ್ಬರೂ ಮನೆಗೆ ಬಂದರು. ರಾಯರಿಗೆ ಅತ್ಯಂತ ಆಶ್ಚರ್ಯವಾಯಿತು. ಶಂಕರಭಾಷ್ಯಗಳನ್ನೆಲ್ಲ ಇಷ್ಟುಕಾಲ ಓದಿದ್ದರೂ ಅದರಲ್ಲಿ ಈ ಅವಿದ್ಯೆಯ ಸೊಲ್ಲೂ ಇಲ್ಲದಿದ್ದರೂ ಶಾಸ್ತ್ರಿಗಳು ಹೀಗೇಕೆ ಹೇಳುತ್ತಾರೆ? ಇದಕ್ಕೆ ಆಧಾರವು ಎಲ್ಲಿದೆ?- ಎಂಬುದನ್ನು ಶೋಧಿಸುವ ಕುತೂಹಲವು ರಾಯರಿಗೆ ಪ್ರಬಲವಾಯಿತು.* ಆಗ ಅಯ್ಯರ್‌ರವರು ಅಧ್ಯಾಸಭಾಷ್ಯದ 'ರತ್ನಪ್ರಭಾ' ವ್ಯಾಖ್ಯಾನವನ್ನು ತೋರಿಸಿದರು. ಅನಂತರ ವ್ಯಾಖ್ಯಾನಗಳಲ್ಲೆಲ್ಲ ಈ ಮೂಲಾವಿದ್ಯಾವಾದವು ರಾಯರಿಗೆ ಎಲ್ಲೆಲ್ಲೂ ಕಾಣಲಾರಂಭಿಸಿತು. ಆಗ ರಾಯರು ತಮ್ಮಲ್ಲಿದ್ದ ಸವ್ಯಾಖ್ಯ (ಆನಂದಗಿರಿ ಟೀಕಾ) ಬೃಹದಾರಣ್ಯಕ ಭಾಷ್ಯವನ್ನು ಮನಮುಟ್ಟಿ ಓದಲಾರಂಭಿಸಿದರು. ಅದರಲ್ಲಿ ವಿಶೇಷವಾಗಿ ನಾಲ್ಕನೆಯ ಅಧ್ಯಾಯದ ಮೂರನೆಯ ಬ್ರಾಹ್ಮಣದಲ್ಲಿ **'ತತ್ರ ಅಭಯಂ ರೂಪಮಿತಿ ಅವಿದ್ಯಾವರ್ಜಿತಮಿತ್ಯೇತತ್'** ಎಂಬ ಭಾಷ್ಯವಾಕ್ಯದ ಟೀಕೆಯಲ್ಲಿ **"ಅಭಯಮಿತಿ ಅವಿದ್ಯಾರಾಹಿತ್ಯಮುಚ್ಯತೇ ಸಾ ಚ ಸುಷುಪ್ತೇ ಸ್ವರೂಪೇಣ ಸತ್ಯಪಿ ನಾಭಿವ್ಯಕ್ತಾ ಭಾತೀತಿ ದ್ರಷ್ಟವ್ಯಮ್"** ಎಂದು ಬರೆದಿತ್ತು. ಮುಂದೆ **'ಅವಿದ್ಯಾಯಾ ಯದಾ ಪ್ರವಿವಿಕ್ತೋ ಭವತಿ'** ಎಂಬ ಭಾಷ್ಯವಾಕ್ಯಕ್ಕೆ **'ಅನ್ಯತ್ವಪ್ರತ್ಯುಪಸ್ಥಾಪಕಹೇತೋರವಿದ್ಯಾಯಾ ಅಭಾವಾತ್'** ಎಂಬ ಭಾಷ್ಯಕ್ಕೆ **'ಯದ್ಯಪಿ ಸುಷುಪ್ತೇ ಅವಿದ್ಯಾ ವಿದ್ಯತೇ, ತಥಾಪಿ ಸಾ ನಾಭಿವ್ಯಕ್ತಾಸ್ತೀತಿ ಅನರ್ಥಪರಿಹಾರೋಪಪತ್ತಿರಿತ್ಯರ್ಥಃ'** ಎಂದೂ **'ಅವಿದ್ಯಾಕಾಮಕರ್ಮನಿರ್ಮುಕ್ತಮೇವ ತದ್ರೂಪಂ ಯತ್ಸುಷುಪ್ತೇ ಆತ್ಮನೋ ಗೃಹ್ಯತೇ ಪ್ರತ್ಯಕ್ಷತಃ'** ಎಂಬ ಭಾಷ್ಯಕ್ಕೆ **'ಪ್ರತ್ಯಕ್ಷತಃ**

---

(* ರಾಯರಂತೆಯೇ ಸ್ವಂತವಾಗಿ ವ್ಯಾಖ್ಯಾನಗಳ ಸಂಪರ್ಕವಿಲ್ಲದೆ ನೇರಾಗಿ ಭಾಷ್ಯವನ್ನು ಓದುವ ಜಿಜ್ಞಾಸುಗಳಿಗೆಲ್ಲ ಹೀಗೆಯೇ ತಿಳಿವಳಿಕೆಯಾಗುತ್ತದೆ. ಭಾಷ್ಯಪ್ರಕ್ರಿಯೆಯು ಮನಸ್ಸಿನಲ್ಲಿ ದೃಢವಾಗಿ ನಿಂತರೆ ವ್ಯಾಖ್ಯಾನಗಳಲ್ಲಿ ಕಾಣುವ ಇತರ ಪ್ರಕ್ರಿಯೆಗಳು ಭಾಷ್ಯವಿರುದ್ಧವೆಂಬುದು ತಾನಾಗಿಯೇ ಗೊತ್ತಾಗುವದು)

ಸ್ವರೂಪಚೈತನ್ಯವಶಾತ್ ಯಥೋಕ್ತಾತ್ಮರೂಪಸ್ಯ ಸುಷುಪ್ತೇ ಗೃಹ್ಯಮಾಣತ್ವಮ್ ಉತ್ಥಿತಸ್ಯ ಪರಾಮರ್ಶಾದವಧೇಯಮ್'- ಎಂಬುದಾಗಿಯೂ ಭಾಷ್ಯವಾಕ್ಯಗಳಿಗೆಲ್ಲ ವ್ಯಾಖ್ಯಾನಕಾರರು ತಿರಿಚಿ ಅರ್ಥಮಾಡಿರುವದು ರಾಯರಿಗೆ ಗೊತ್ತಾಯಿತು. ಆ ವಾಕ್ಯಗಳನ್ನೆಲ್ಲ ರಾಯರು ಗುರುತುಮಾಡಿಕೊಂಡರು. ಸುಷುಪ್ತಿಯಲ್ಲಿ ಅವಿದ್ಯೆಯಿಲ್ಲವೆಂಬುದಕ್ಕೆ ಪ್ರತ್ಯಕ್ಷ ಭಾಷ್ಯವಚನಗಳಿವೆ-ಎಂದು ಶ್ರೀ ಅಯ್ಯರ್‌ರವರಿಗೂ ತಿಳಿಸಿದರು.

ಈ ವೇಳೆಗೆ ಶ್ರೀ ಎಂ. ಎಸ್. ವೆಂಕಟೇಶಶಾಸ್ತ್ರಿಗಳವರು ರಾಯರಿಗೆ 'ಪಂಚಪಾದಿಕಾ' ವಿವರಣಗ್ರಂಥ, 'ಅದ್ವೈತಸಿದ್ಧಿ' (ಸವ್ಯಾಖ್ಯಾನ)- ಇವುಗಳನ್ನು ಕೊಟ್ಟರು. ಅವುಗಳನ್ನು ಓದಿದಂತೆಲ್ಲ ಭಾಷ್ಯಕ್ಕಿಂತ ಬೇರೊಂದು ಪ್ರಕ್ರಿಯೆಯು ಹೊಸದಾಗಿ ಹೊರಕ್ಕೆ ಬಂದಿರುವದು. ರಾಯರಿಗೆ ಸ್ಫುಟತರವಾಗಿ ಗೋಚರವಾಗುತ್ತಾ ಬಂದಿತು. ಹೊಸ ಹೊಸ ವಿಷಯಗಳನ್ನೆಲ್ಲ ನೋಟ್‌ಬುಕ್‌ನಲ್ಲಿ ಗುರುತು ಹಾಕಿಕೊಂಡರು. ಈ ವಿಷಯಗಳನ್ನು ಆಗಾಗ್ಗೆ ವೇ।। ಎಸ್. ವಿಠಲಶಾಸ್ತ್ರಿಗಳಲ್ಲಿಯೂ ವೇ।। ವೆಂಕಟೇಶಶಾಸ್ತ್ರಿಗಳಲ್ಲಿಯೂ ಚರ್ಚಿಸುತ್ತಿದ್ದರು. ಶ್ರೀ ಅಯ್ಯರ್‌ರವರಲ್ಲಿ ಸಿಕ್ಕಿದ ಇಂಗ್ಲಿಷು ಟಿಪ್ಪಣಿಗಳಿಂದ ವಿಷಯಗಳನ್ನು ಸಂಗ್ರಹಿಸಿದರು. ಹೀಗೆಲ್ಲ ನಡೆದು 'ಮೂಲಾವಿದ್ಯಾನಿರಾಸ' ಗ್ರಂಥದ ತಳಹದಿ ಏರ್ಪಟ್ಟಿತು.

ಈ ನಡುವೆ ರಾಯರು ಬರೆದಿದ್ದ 'ಪದತ್ರಯ'ವೆಂಬ ಸಣ್ಣ ಕನ್ನಡ ವ್ಯಾಕರಣಗ್ರಂಥವು ಪಠ್ಯಪುಕ್ತವಾಗಿ ಸ್ಕೂಲುಗಳಿಗೆ ನಿಯಮಿತವಾಯಿತು. 'ವ್ಯಾಕರಚನಾಕ್ರಮ' ಎಂಬ ಪುಸ್ತಕವು ದೊಡ್ಡದಾದ್ದರಿಂದ ಅಚ್ಚುಮಾಡಿಸಲು ಸಾಧ್ಯವಿಲ್ಲದೆ ವಿದ್ಯಾಭ್ಯಾಸದ ಇಲಾಖೆಯವರಿಗೇ ಒಪ್ಪಿಸಬೇಕೆಂದಿರುವಾಗ ಶ್ರೀ ಸುಬ್ರಹ್ಮಣ್ಯ ಅಯ್ಯರ್‌ರವರು ಅದನ್ನು ನೋಡಿ ಇನ್ನೂ ಕೆಲವು ತಿದ್ದುಪಡಿ ಸೂಚನೆಗಳನ್ನು ಕೊಟ್ಟಿದ್ದರಿಂದ ರಾಯರು ಮತ್ತೊಂದು ಬಾರಿ ಅದನ್ನು ತಿದ್ದಿ ಬರೆದರು. ಆದರೆ ಒಂದು ಭಾಗವು ಮಾತ್ರ ಮುದ್ರಣವಾಯಿತು.

## ಕುಟುಂಬವಿಯೋಗ; ಬದಲಾವಣೆ :

ಈ ವೇಳೆಗೆ ರಾಯರ ಪತ್ನಿಯು ಗರ್ಭಿಣಿಯಾಗಿದ್ದುದರಿಂದ ಅವರನ್ನು ಅರಸೀಕೆರೆಗೆ ಕರೆದುಕೊಂಡು ಬಂದರು. ಆ ಸಮಯದಲ್ಲಿ ದೇಶದಲ್ಲೆಲ್ಲ ಇನ್‌ಫ್ಲೂಯಂಜಾ ಎಂಬ ರೋಗವು ಬಲವಾಗಿ ಹರಡಿದ್ದು ಬಹಳ ಜನರನ್ನು ಆಹುತಿ ತೆಗೆದುಕೊಂಡಿತ್ತು. ಬಹುವೇಗದಿಂದ ಹರಡುತ್ತಲಿದ್ದ ಈ ರೋಗಕ್ಕೆ ರಾಯರೂ ಅವರ ಪುತ್ರ ಶ್ರೀ ನರಸಪ್ಪನವರೂ ಸಿಕ್ಕಿದರಾದರೂ ಅವರಿಬ್ಬರಿಗೂ ವಾಸಿಯಾಯಿತು. ಏನೂ ತೊಂದರೆಯಾಗಲಿಲ್ಲ.* ಆದರೆ ರಾಯರ ಧರ್ಮಪತ್ನಿಯವರು ಮಾತ್ರ ಒಂದು ಹೆಣ್ಣು ಮಗುವನ್ನು ಪ್ರಸವಿಸಿ ಮಗುವಿನೊಡನೆಯೇ ಇಹಲೋಕವನ್ನು ತ್ಯಜಿಸಿದರು.

---

* ಇದು ಕನ್ನಡನಾಡಿನವರ ಸೌಭಾಗ್ಯವೆಂದೇ ಹೇಳಬೇಕು. ಏಕೆಂದರೆ ಶ್ರೀಶ್ರೀಗಳವರಿಂದ ವೇದಾಂತ ಶಾಸ್ತ್ರದ ಅಪಾರ ಗ್ರಂಥಗಳು ಬರೆಯಲ್ಪಟ್ಟು ಶ್ರೀ ನರಸಪ್ಪನವರ ಮೂಲಕ ಮುದ್ರಿತವಾಗಿ ಪ್ರಚಾರವಾಗಬೇಕಾಗಿದ್ದ ದೈವಸಂಕಲ್ಪವು ಈ ಸಮಯದಲ್ಲಿ ಸಹಾಯಮಾಡಿರಬೇಕು.

ಆಗ ರಾಯರಿಗೆ ಒಂದು ಗಂಡು, ಮೂರು ಹೆಣ್ಣು- ಈ ರೀತಿ ನಾಲ್ಕು ಮಕ್ಕಳು ಇದ್ದರು. ಶ್ರೀ ನರಸಪ್ಪನೇ ದೊಡ್ಡವನು. ಉಳಿದ ಹೆಣ್ಣುಮಕ್ಕಳಿಗೆ ಕ್ರಮವಾಗಿ ಎಂಟು,ಐದು, ಎರಡು ವರ್ಷಗಳಾಗಿದ್ದವು. ಶ್ರೀ ಕೆ. ತಿಮ್ಮಪ್ಪದಾಸರ ಸಹಾಯದಿಂದ ರಾಯರು ಶವಸಂಸ್ಕಾರವನ್ನು ನೆರವೇರಿಸಿ ಮುಂದೆ ಹರಿಹರದಲ್ಲಿ ಪುತ್ರರಾದ ಶ್ರೀ ನರಸಪ್ಪನವರಿಂದ ಕರ್ಮಾಂತರಗಳನ್ನೆಲ್ಲ ಮಾಡಿಸಿ ಧರ್ಮಪತ್ನಿಗೆ ಸದ್ಗತಿಯನ್ನು ಕಾಣಿಸಿದರು. ಕೆಲಸವೆಲ್ಲ ಪೂರೈಸಿದ ಮೇಲೆ ಬೆಂಗಳೂರಿಗೆ ಮಕ್ಕಳೊಡನೆ ಹಿಂದಿರುಗಿ ಬಂದರು.

ಬೆಂಗಳೂರಿನಲ್ಲಿ ಚಾಮರಾಜಪೇಟೆಯಲ್ಲಿ ಬೇರೊಂದು ಮನೆಯನ್ನು ಮಾಡಿಕೊಂಡು ರಾಯರೇ ಗಂಡಾಗಿಯೂ ಹೆಣ್ಣಾಗಿಯೂ ಕಷ್ಟಪಡುತ್ತಾ ಚಿಕ್ಕ ಮಕ್ಕಳೊಡನೆ ಸಂಸಾರವನ್ನು ಮುಂದುವರಿಸಿದರು. ಸ್ವಲ್ಪ ಕಾಲದ ಅನಂತರ ರಾಯರ ಸಹೋದರಿ ಶ್ರೀಮತಿ ಲಕ್ಷ್ಮಕ್ಕನವರು ಅವರ ಸಹಾಯಕ್ಕೆ ಬಂದರು. ಇದರಿಂದ ಸ್ವಲ್ಪ ಅನುಕೂಲವಾಯಿತು. ಆದರೂ ಖರ್ಚುವೆಚ್ಚಗಳು ಮಾತ್ರ ಹೆಚ್ಚಿದವು. ಮನುಷ್ಯನಿಗೆ ಎಂಥ ಕಷ್ಟವು ಬಂದರೂ ತಡೆದುಕೊಳ್ಳುವ ಶಕ್ತಿಯನ್ನು ದೇವರು ಕೊಟ್ಟಿರುತ್ತಾನೆ. ಪರಮಾತ್ಮನನ್ನು ಮರೆತಾಗಲೆಲ್ಲ ಮತ್ತೆ ಅವನನ್ನು ನೆನೆಯಲು ಕಷ್ಟಗಳು ಬರುತ್ತಿರುತ್ತವೆ. ಜೀವನದಲ್ಲಿ ಮನುಷ್ಯನು ಅದನ್ನು ಅರಿತುಕೊಳ್ಳಬೇಕು. ರಾಯರು ತಮಗೆ ಬಂದಿದ್ದ ಸಂಕಟವನ್ನು ಭಗವಂತನು ತಮಗೆ ಅನುಗ್ರಹ ಮಾಡಲು ದಾರಿಮಾಡಿದ್ದಾನೆಂದೇ ಭಾವಿಸಿದರು. ಹಾಗೆಯೇ ಅವರಿಗೆ ಹೇಗೋ ದಾರಿತೋರಿಸಿದನು. ಪದತ್ರಯ ಪುಸ್ತಕವನ್ನು ಮಾರಿದ್ದರಿಂದ ಆಗ್ಗೆ ಬಂದಿದ್ದ ರೂ. 300ಗಳನ್ನು ಮೇಲಿನ ಸಂಕಟಕಾಲದಲ್ಲಿ ಉಪಯೋಗಿಸಿದರು. ರಾಯರ ಜೀವನದಲ್ಲಿ ಯಾವಾಗಲೂ ಅವರ ಅವಶ್ಯಕತೆಗೆ ತಕ್ಕಷ್ಟು ಹಣವು ಬರುತ್ತಿತ್ತೇ ಹೊರತು ಹೆಚ್ಚಿಗೆ ಬರುತ್ತಿರಲಿಲ್ಲ. ಆದರೂ ದೇವರು 'ವಿನಾ ದೈನ್ಯೇನ ಜೀವನಮ್' ಎಂಬಂತೆ ಜೀವನಕ್ಕೆ ಎಂದೂ ದೈನ್ಯವನ್ನುಂಟುಮಾಡಿರಲಿಲ್ಲ. ಅಂತೂ ರಾಯರು 'ಯೋಗಕ್ಷೇಮಂ ವಹಾಮ್ಯಹಮ್' ಎಂಬ ಭಗವದ್ವಾಕ್ಯದಲ್ಲಿ ಶ್ರದ್ಧೆಯಿಟ್ಟು ತಮ್ಮ ಕರ್ತವ್ಯವನ್ನು ಮುಂದುವರಿಸುತ್ತಾ ಬಂದರು.

## ಮಾಂಡೂಕ್ಯದ ಭಾಷಾಂತರ :

ಈಗ ಇನ್ನೊಂದು ಘಟನೆಯು ನಡೆಯಿತು. ದಾವಣಗೆರೆಯ ಮಾಗಾನಹಳ್ಳಿ ದೊಡ್ಡಬಸಪ್ಪನವರ ಔದಾರ್ಯದಿಂದ ಮುದ್ರಿಸಿದ್ದ "ರಾಜಯೋಗ"ಪುಸ್ತಕದ ಪ್ರತಿಗಳು ಮಾರಾಟವಾಗದೆ ಹಾಗೇ ನಿಂತಿದ್ದವು. ರಾಯರು ಪರಸ್ಥಳಕ್ಕೆ ಹೋದಾಗ ಕೆಲವು ಪ್ರತಿಗಳು ಗೆಜ್ಜಲು ಹುಳುಗಳಿಗೂ ಆಹುತಿಯಾದವು. ಉಳಿದವುಗಳನ್ನೇ ರಾಯರು ಶೇ. 40 ರಷ್ಟು ಕಮಿಷನ್‌ಕೊಟ್ಟು ಒಟ್ಟಿಗೆ ಮಾರಿ ಆ ಹಣದಿಂದ ಮುಂದಿನ ಗ್ರಂಥಪ್ರಕಟನೆಗೆ ಬೇಕಾದ ಮುದ್ರಣದ ಕಾಗದವನ್ನು ಕೊಂಡು ಇಟ್ಟರು. ಹಾಗೆ ಮಾಡದಿದ್ದರೆ ದೊಡ್ಡಬಸಪ್ಪನವರ ಆಕಾಂಕ್ಷೆಗೆ ಅಡ್ಡಿಮಾಡಿದ ಅಪರಾಧವಾಗುವದೆಂತ ಭಾವಿಸಿ ರಾಯರು ಈ ರೀತಿ ಏರ್ಪಾಡು

ಮಾಡಿದರು. ಆ ವೇಳೆಗೆ ಹಿಂದೆಯೇ ಸ್ವಲ್ಪ ಕನ್ನಡಿಸಿ ನಿಲ್ಲಿಸಿದ್ದ ಮಾಂಡೂಕ್ಯೋಪನಿಷತ್ತಿನ ಭಾಷಾಂತರವನ್ನು ತ್ವರಿತವಾಗಿ ಮುಂದುವರಿಸಲಾರಂಭಿಸಿದರು. **ಅಧ್ಯಾತ್ಮಪ್ರಕಾಶ ಕಾರ್ಯಾಲಯದಿಂದ ಮುಂದೆ ಪ್ರಕಟವಾಗಲಿರುವ "ಅಧ್ಯಾತ್ಮಗ್ರಂಥಾವಳಿ"ಯಲ್ಲಿ ಇದು ಮೊಟ್ಟಮೊದಲನೆಯ ಗ್ರಂಥವಾಯಿತು.**

ಶ್ರೀಮಹಾಭಾಗವತರು ಕರವೀರ ಸಂಕೇಶ್ವರ ಪೀಠಾಧಿಪತಿಗಳಾದ ಅನಂತರ ಶ್ರೀ ಚಿದಂಬರಯ್ಯನವರು ಅವರ ಸೇವೆಯಲ್ಲೇ ನಿರತರಾಗಿದ್ದರು. ಹೊಸದುರ್ಗದಿಂದ ರಾಯರೂ ಹೋಗಿ ಶ್ರೀ ಭಾಗವತರನ್ನು ತುರೀಯಾಶ್ರಮಸ್ವೀಕಾರಾನಂತರ ನೋಡಿಕೊಂಡು ಬಂದಿದ್ದರು. ಶ್ರೀ ಚಿದಂಬರಯ್ಯನವರು ಈಗ ಬೆಂಗಳೂರಿಗೇ ಬಂದಿದ್ದರು. ಶಂಕರಪುರಂ ಬಡಾವಣೆಯಲ್ಲಿ ಗೋಲ್ಕೊಂಡ ಹೌಸ್-ಎಂಬಲ್ಲಿ ರಾಯರೂ ಶ್ರೀ ಚಿದಂಬರಯ್ಯನವರೂ ಕೆಲವು ತಿಂಗಳುಗಳು ಒಟ್ಟಿಗೇ ಇರುವ ಸುಯೋಗವು ದೊರೆಯಿತು. ಆಗ ಶ್ರೀ ಚಿದಂಬರಯ್ಯನವರು ರಾಯರು ಬರೆಯುತ್ತಿದ್ದ ಮಾಂಡೂಕ್ಯದ ಕೈಬರವಣಿಗೆಯ ಪ್ರತಿಯನ್ನು ಓದುವದು, ಆಗಾಗ್ಗೆ ಪ್ರಶ್ನೋತ್ತರಗಳನ್ನು ಮಾಡಿ ಚರ್ಚಿಸುವದು, ಪುಸ್ತಕವನ್ನು ಅಚ್ಚಿಗೆ ಸಿದ್ಧಪಡಿಸುವುದು, ಪ್ರೂಫುಗಳನ್ನು ತಿದ್ದುವದು-ಹೀಗೆಲ್ಲ ಸಹಾಯಮಾಡಿದರು. ಅವಸ್ಥಾತ್ರಯವಿಚಾರವು ಆಗ್ಗೆ ಶ್ರೀ ಚಿದಂಬರಯ್ಯನವರಿಗೂ ಬಹಳವಾಗಿ ಹತ್ತಿಕೊಂಡಿತ್ತು. 'ವೇದಾಂತ ವಿಚಾರದ ಗುಟ್ಟು' ಎಂಬ ಅವರ ಪುಸ್ತಕದಲ್ಲಿ ಇದನ್ನು ಕಾಣಬಹುದು. 'ಭರತನ ಬಂಧುಪ್ರೇಮ' ಎಂಬ ಗ್ರಂಥದ ಎರಡನೆಯ ಸಂಸ್ಕರಣದಲ್ಲೂ ಸ್ವಪ್ನದ ವಿಚಾರದಲ್ಲಿ ಕೆಲವು ವಿಷಯಗಳನ್ನು ಅವರು ಸೇರಿಸಿದ್ದರು. ಹೀಗಿತ್ತು, ಅವರ ವಿಚಾರಧಾರೆ! ಮುಂದೆ ಕೆಲವು ತಿಂಗಳಲ್ಲೇ ಅವರ ಬಳಿಗೆ ಬಂದಿದ್ದ ತಿಪಟೂರು ಶ್ರೀ ಸೂರಪ್ಪನೆಂಬವರಿಗೆ 'ಮಿಕ್ಕದ್ದನ್ನೆಲ್ಲ ಬಿಟ್ಟು ಮಾಂಡೂಕ್ಯವನ್ನು ಮುಖ್ಯವಾಗಿ ಓದಿರಿ!' ಎಂದು ಹೇಳಿದರಂತೆ.

## ಮೂಲಾವಿದ್ಯಾನಿರಾಸ :

ಈಗ ರಾಯರು "ಮೂಲಾವಿದ್ಯಾನಿರಾಸ" ಗ್ರಂಥರಚನೆಗೆ ಕೈಹಾಕಿದರು. ಅದು ಮುಂದುವರಿಯುತ್ತಾ ಬಂತು. ಡಿಸ್ಟ್ರಿಕ್ಟ್ ನಾರ್ಮಲ್ ಸ್ಕೂಲಿನಲ್ಲಿದ್ದಾಗ ಪರಿಚಿತರಾಗಿದ್ದ ಶ್ರೀ ರಾಮಶೇಷಶಾಸ್ತ್ರಿಗಳು ಪಾರಾಯಣ ಮಾಡುತ್ತಿದ್ದ ಒಂದು ಗ್ರಂಥವನ್ನು ರಾಯರು ನೋಡಿದರು. ಅದರ ಹೆಸರು "**ಗುರುಜ್ಞಾನವಾಸಿಷ್ಠ**" ಎಂದಿತ್ತು. ಅದರಲ್ಲಿ ದ್ವೈತ, ಅದ್ವೈತ, ವಿಶಿಷ್ಟಾದ್ವೈತವಾದಗಳೆಲ್ಲ ತಪ್ಪೆಂದೂ ದ್ವೈತಾದ್ವೈತವಾದವೇ ಸರಿಯೆಂದೂ ಬರೆದಿದ್ದುದಲ್ಲದೆ ಸುಷುಪ್ತಿಯಲ್ಲಿ ಅವಿದ್ಯೆಯಿಲ್ಲವೆಂಬ ಮತವನ್ನು ಬಹಳ ಕಡೆ ಖಂಡಿಸಲಾಗಿತ್ತು. ಆಗ ರಾಯರಿಗೆ ಈ ಗ್ರಂಥವು ಈಚೆಗೆ ರಚಿತವಾದದ್ದೆಂದೂ ವ್ಯಾಖ್ಯಾನಕಾರರು ಮೂಲಾವಿದ್ಯಾವಾದವನ್ನು ಅಂಗೀಕರಿಸುವದಕ್ಕೆ ಇಂಥ ಗ್ರಂಥಗಳಿಗೆ ಅಂಜಿಕೊಂಡಿರುವದೂ ಕಾರಣವೆಂದೂ ನಿಶ್ಚಯವಾಯಿತು. ಇದರ ವಿಷಯಗಳನ್ನು ರಾಯರು ಮೂಲಾವಿದ್ಯಾ

ನಿರಾಸಕ್ಕೆ ಸೇರಿಸಿಕೊಂಡರು. ಸಂಸ್ಕೃತಕಾಲೇಜಿನಲ್ಲಿ ದೊರೆತ "ಬೃಹದಾರಣ್ಯಕ **ವಾರ್ತಿಕ**"ದಿಂದಲೂ ರಾಯರಿಗೆ ಈ ಗ್ರಂಥರಚನೆಯ ವಿಷಯಕ್ಕೆ ಹೆಚ್ಚು ಸಹಾಯವಾಯಿತು. ಈ ಸಂದರ್ಭದಲ್ಲಿ ಹಗಲೂ ರಾತ್ರೆ ಗ್ರಂಥರಚನೆಯಲ್ಲಿಯೇ ರಾಯರು ತೊಡಗಿದ್ದರು. ಬೀರೂರಿನಲ್ಲಿ ರಾಮಪಟ್ಟಾಭಿಷೇಕಗಳನ್ನು ಮಾಡಿಸುತ್ತಾ ಸುಪ್ರಸಿದ್ಧರಾಗಿದ್ದ ಕಣಕಟ್ಟೆಯ ಶ್ರೀ ರಾಮಣ್ಣನೆಂಬುವರು ಆಗ್ಗೆ ರಾಯರ ಮನೆಗೆ ಒಂದು ದಿನ ಬಂದಿದ್ದಾಗ ರಾತ್ರೆಯೆಲ್ಲ ರಾಯರು ಬರೆಯುತ್ತಿದ್ದುದು ಗೊತ್ತಾಯಿತಂತೆ. ಮತ್ತೊಂದು ದಿನ ಮಾಗಳದ ಶ್ರೀ ರಂಗರಾಯರು ಈ ರೀತಿ ಬರೆಯುತ್ತಿರುವದನ್ನು ನೋಡಿ 'ನಿಮ್ಮ ಆರೋಗ್ಯವು ಕೆಡುತ್ತದೆ, ಜೋಕೆ!' ಎಂದು ಎಚ್ಚರಿಸಿದ್ದರಂತೆ. ಆದರೂ ರಾಯರಿಗೆ ಈ ರೀತಿ ಕೆಲಸ ಮಾಡುತ್ತಿದೇನೆಂಬ ಅರಿವೇ ಇರಲಿಲ್ಲ. ಕೆಲವು ದಿನಗಳಾದ ಮೇಲೆ ಆರೋಗ್ಯವು ಕೆಟ್ಟಿತ್ತೆಂಬುದು ತಿಳಿಯಿತು. ಅಂತೂ ಎಡೆಬಿಡದೆ ಮಹಾತಪಸ್ಸು ಮಾಡಿದಂತೆ ಈ ಗ್ರಂಥವನ್ನು ರಾಯರು ಬರೆದು ಸಿದ್ಧಗೊಳಿಸಿದರು.

ಗ್ರಂಥವನ್ನು ಬರೆಯುವಾಗ ರಾಯರಿಗೆ ಇದ್ದ ಉತ್ಸಾಹವು ಪೂರೈಸಿದ ಅನಂತರ ಇಳಿಮುಖವಾಯಿತು. ಆ ಸಂದರ್ಭದಲ್ಲಿ ಶರೀರಸ್ವಾಸ್ಥ್ಯವನ್ನು ಸರಿಪಡಿಸಿಕೊಳ್ಳಲು ಊರಿಗೆ ಹೋಗಿದ್ದ ರಾಯರು ಔಷಧೋಪಚಾರಗಳು ಮುಗಿದ ನಂತರ ವೇ॥ ಬ್ರ॥ ಶ್ರೀ ಎಸ್. ವಿಠಲಶಾಸ್ತ್ರಿಗಳ ಪ್ರಾರ್ಥನೆಯಂತೆ ಸಕ್ಕರೆಪಟ್ಟಣಕ್ಕೆ ಬಂದರು. ಅಲ್ಲಿ ವೇ॥ ಶಾಸ್ತ್ರಿಗಳ ದ್ವಿತೀಯವಿವಾಹದ ಏರ್ಪಾಡಾಗಿತ್ತು. ಆ ಸಂದರ್ಭದಲ್ಲಿ ಶಾಸ್ತ್ರಿಗಳು ರಾಯರ ಹೊಸ ಗ್ರಂಥದ ಬಗ್ಗೆ ಜನಗಳಿಗೆ ತಿಳಿಸಿ ಧನಸಹಾಯವನ್ನು ಮಾಡಬೇಕೆಂದು ಸೂಚಿಸಿದ್ದರಿಂದ ಸ್ವಲ್ಪಮಟ್ಟಿಗೆ ಅನುಕೂಲವಾಯಿತು. ಮುಂದೆ ಚಿಕ್ಕಮಗಳೂರಿಗೂ ಇದೇ ಉದ್ದೇಶದಿಂದ ರಾಯರು ಹೋಗಿದ್ದಾಗ ಅದು ಸಫಲವಾಗಲಿಲ್ಲ. ಇದರಿಂದ 'ಈ ಗ್ರಂಥದ ಮುದ್ರಣವು ಹೇಗಾದೀತು? ಅಚ್ಚಾದಮೇಲೂ ವಿದ್ವಾಂಸರು ಹೇಗೆ ಕಂಡಾರು?' ಎಂಬ ಯೋಚನೆಯೂ ರಾಯರಿಗೆ ಬಂತು. ಇದರ ವಿಷಯವನ್ನು ಮತ್ತೆ ಮುಂದೆ ಪ್ರಸ್ತಾಪಿಸುವೆನು.

## ತಿಪಟೂರು ಸೂರಪ್ಪನವರು :

ಇವರು ಒಬ್ಬ ಭಕ್ತರು. ತಿಪಟೂರಿನಲ್ಲಿ ಉಪಾಧ್ಯಾಯರಾಗಿದ್ದು ಅನಂತರ ವಿರಕ್ತರಾಗಿ ಏಕಾಂಗಿಯಾಗಿದ್ದರು. ಇವರಿಗೆ ಗೋಂದಾವಳಿಯ ಮಹಾರಾಜರ ಅನುಗ್ರಹದಿಂದ ಭಜನೆಯಲ್ಲಿ ಆಸಕ್ತಿಯುಂಟಾಯಿತಂತೆ. ಮಹಾರಾಜರು 'ಭಜನ್ ಕರೋ' ಎಂದು ಅಪ್ಪಣೆ ಮಾಡಿದ ಮಾತ್ರದಿಂದ ಅವರು ಭಜನೆಗೆ ಪ್ರಾರಂಭಿಸಿದರಂತೆ. ಪುನಃ ಮಹಾರಾಜರು ಬಂದು ಮೈಮೇಲೆ ಕೈಯಾಡಿಸುವವರೆಗೆ ಶರೀರಭಾನವೇ ಇಲ್ಲದೆ ಭಜನೆಮಾಡುತ್ತಿದ್ದರಂತೆ. ಇವರು ಒಂದು ತೋಟದ ಗುಡಿಸಲಿನಲ್ಲಿದ್ದುಕೊಂಡು ಜಪ, ಪೂಜಾ, ಭಜನ-ಧ್ಯಾನಾದಿಗಳಲ್ಲಿ ಕಾಲವನ್ನು ಕಳೆಯುತ್ತಿದ್ದರು. ರಾಧಾಕೃಷ್ಣ ವಿಗ್ರಹಗಳನ್ನು ಇಟ್ಟುಕೊಂಡಿದ್ದರು. ಆಗಾಗ್ಗೆ ಅಖಂಡ ಭಜನೆ, ಸಪ್ತಾಹ ಇವುಗಳನ್ನು ಏರ್ಪಡಿಸುತ್ತಿದ್ದರು. ಶ್ರೀ ಡಿ.ಸಿ. ನಂಜಪ್ಪಭಾಗವತರ ಮೂಲಕ

ರಾಯರಿಗೆ ಇವರ ಪರಿಚಯವಾಯಿತು. ಇವರು ತುಂಬ ಸಾತ್ತ್ವಿಕರಾಗಿದ್ದರು. ರಾಯರಲ್ಲಿ ವೇದಾಂತ ವಿಚಾರಮಾಡಬೇಕೆಂದು ಮಾಂಡೂಕ್ಯೋಪನಿಷತ್ತಿನ ಶ್ರವಣವನ್ನು ಆರಿಸಿಕೊಂಡರು. ಶ್ರೀ ಡಿ.ಸಿ. ನಂಜಪ್ಪನವರೂ ಜೊತೆಗೆ ಸೇರಿದರು. ಹೀಗೆ ರಾಯರ ಮನೆಯಲ್ಲಿ ಪಾಠಪ್ರವಚನಗಳು ನಡೆಯುತ್ತಿದ್ದವು. ಒಂದು ದಿನ ಭಾಗವತದ ಪ್ರಸ್ತಾಪವು ಬಂದು ಕೃಷ್ಣನು ಸಶರೀರನಾಗಿ ಪರಂಧಾಮವನ್ನೈದಿದನು-ಎಂದು ಶ್ರೀ ಸೂರಪ್ಪನವರು ಹೇಳಿದ್ದಕ್ಕೆ ರಾಯರು 'ಹಾಗಿರಲಾರದು' ಎಂದಾಗ ಶ್ರೀ ಸೂರಪ್ಪನವರು ಭಾಗವತಗ್ರಂಥವನ್ನೇ ಕೈಗೆತ್ತಿಕೊಟ್ಟರು.

ರಾಯರು ಪೂರ್ತ ಶ್ಲೋಕಗಳನ್ನು ಓದಿ ಅರ್ಥಹೇಳಿ ಮರ್ತ್ಯಶರೀರವನ್ನು ಇಲ್ಲಿಯೇ ಬಿಟ್ಟನೆಂಬುದನ್ನು ಸಮರ್ಥಿಸಿದರು. ಆಗ ಶ್ರೀ ಸೂರಪ್ಪನವರಿಗೆ ಪರಮಸಂತೋಷವಾಗಿ ದಪ್ಪಕ್ಷರದ ಒಂದು ಭಾಗವತಗ್ರಂಥವನ್ನು ರಾಯರಿಗೆ ಕೊಟ್ಟು ಪೂರ್ತ ಓದಬೇಕೆಂದು ಕೇಳಿಕೊಂಡರು. ರಾಯರು ಅದಕ್ಕೆ ಒಪ್ಪಿದರು. ಆಗ್ಗೆ ರೈಲ್ವೆ ಇಲಾಖೆಯಲ್ಲಿ ಕೆಲಸದಲ್ಲಿದ್ದ ಬರಕದ ಶ್ರೀ ಶ್ರೀಕಂಠಯ್ಯನವರೆಂಬುವರ ಮನೆಯಲ್ಲಿ ಸಂಜೆಯ ವೇಳೆ ಶ್ರೀ ಸೂರಪ್ಪನವರು ಭಜನೆ ಮಾಡುತ್ತಿದ್ದರು. ಅಲ್ಲಿ ಕೆಲವು ಭಜನ ಸಪ್ತಾಹಗಳನ್ನೂ ನಡೆಯಿಸಿದ್ದರು. ರಾಯರು ಆಗಾಗ್ಗೆ ಭಜನೆಗೆ ಹೋಗಿ ಬರುತ್ತಿದ್ದರು. ಶ್ರೀಬ್ರಹ್ಮಚೈತನ್ಯರ ಆರಾಧನೆಯೂ ಆ ವರ್ಷ ಶ್ರೀ ಶ್ರೀಕಂಠಯ್ಯನವರ ಮನೆಯಲ್ಲಿ ನಡೆಯಿತು. ಈ ಎಲ್ಲಾ ಕಾರಣಗಳಿಂದ ರಾಯರಿಗೂ ಶ್ರೀ ಶ್ರೀಕಂಠಯ್ಯನವರಿಗೂ ಸ್ನೇಹವು ಬೆಳೆಯಿತಲ್ಲದೆ ಅವರ ಮನೆಗೆ ಬರುತ್ತಿದ್ದ ದೊಡ್ಡ ಹೆಜ್ಜಾಜಿ ಶ್ರೀ ಸೀತಾರಾಮಶಾಸ್ತ್ರಿಗಳೇ ಮುಂತಾದ ಭಕ್ತರ ಪರಿಚಯವೂ ರಾಯರಿಗೆ ದೊರೆಯಿತು.

# ೧೧. ಅಧ್ಯಾತ್ಮಪ್ರಕಾಶಕಾರ್ಯಾಲಯದ ಉದಯ

## "ಅಧ್ಯಾತ್ಮಪ್ರಕಾಶ"ವೆಂಬ ಹೆಸರಿನ ಪ್ರಾದುರ್ಭಾವ :

ಶ್ರೀ ಸೂರಪ್ಪನವರಿಗೂ ರಾಯರಿಗೂ ಗಾಢವಾದ ಆತ್ಮಬಂಧುತ್ವವುಂಟಾದ ಮೇಲೆ ಅವರು 'ಈ ಊರಿನಲ್ಲಿಯೇ ಕಾಲವನ್ನು ಹಾಕುತ್ತೇನೆ. ನನಗೇನಾದರೂ ಉದ್ಯೋಗವನ್ನು ಕೊಡಿರಿ' ಎಂದು ರಾಯರನ್ನು ಕೇಳಿಕೊಂಡರು. ಅಧ್ಯಾತ್ಮಪ್ರಿಯರಾದ ಅವರಿಗೆ ಯಾವ ಉದ್ಯೋಗವೂ ಹಿಡಿಸಲಾರದೆಂದು ರಾಯರು ಯೋಚಿಸಿ ಅಧ್ಯಾತ್ಮವಿಚಾರ ಪ್ರಧಾನವಾದ ಒಂದು ಪತ್ರಿಕೆಯನ್ನು ಹೊರಡಿಸಿ ಅದನ್ನು ಶ್ರೀ ಸೂರಪ್ಪನವರು ನಡೆಯಿಸುವಂತೆ ಏರ್ಪಡಿಸಬೇಕೆಂದು ಯೋಚಿಸಿದರು. ಶ್ರೀ ಚಿದಂಬರಯ್ಯನವರೂ ರಾಯರೂ ಹಿಂದೆ ಯಳ್ಳಂಬಳಸೆಯಲ್ಲಿದ್ದಾಗ 'ಪುಂಡರೀಕ'ವೆಂಬ ಪತ್ರಿಕೆಯೊಂದನ್ನು ಹೊರಡಿಸಿದಂತೆ ಶ್ರೀ ಚಿದಂಬರಯ್ಯನವರಿಗೆ ಕನಸಾಗಿತ್ತಂತೆ. ಅದನ್ನು ಅವರು ರಾಯರಿಗೆ ತಿಳಿಸಿದ್ದರಂತೆ. ಅಲ್ಲಿಂದೀಚೆಗೆ ಇಬ್ಬರೂ ಸೇರಿ ಅಧ್ಯಾತ್ಮವಿಚಾರ ಪ್ರಧಾನವಾದ ಪತ್ರಿಕೆಯನ್ನು ಹೊರಡಿಸಬೇಕೆಂದು ಯೋಚಿಸಿದ್ದರಾದರೂ ಕೆಲಸದ ವರ್ಗಾವಣೆಗಳಲ್ಲಿ ಒಬ್ಬರನ್ನೊಬ್ಬರು ಅಗಲಿದ ಮೇಲೆ ಆ ಸಂಕಲ್ಪವು ಹಾಗೆಯೇ ನಿಂತುಹೋಗಿತ್ತು. ಈಗ ಅದರ ನೆನಪಾಯಿತು. ಆಗ ತಾನೆ ಓದಿದ್ದ ಯಾವದೋ ಪುಸ್ತಕಗಳ ಪಟ್ಟಿಯಲ್ಲಿ 'ಅಧ್ಯಾತ್ಮಪ್ರಕಾಶ'ವೆಂಬ ಹೆಸರನ್ನು ರಾಯರು ನೋಡಿದ್ದು ಅವರ ಮನಸ್ಸಿನಲ್ಲಿ ನಿಂತಿತ್ತು. ಪತ್ರಿಕೆಗೆ ಅದೇ ಹೆಸರು ಸರಿಯೆಂದು ನಿಶ್ಚಯಿಸಿ ಶ್ರೀ ಸೂರಪ್ಪನವರಿಗೆ ತಮ್ಮ ಅಭಿಪ್ರಾಯವನ್ನು ತಿಳಿಸಿದರು. ಶ್ರೀ ಸೂರಪ್ಪನವರು 'ಹಾಗೇ ಆಗಲಿ; ಆದರೆ ಈ ವರ್ಷ ನನಗೆ ಮಾತೃವಿಯೋಗವಾಗಿದೆಯಾಗಿ ಕಾಶೀಯಾತ್ರೆಯನ್ನು ಮಾಡಿಕೊಂಡು ಬರುತ್ತೇನೆ; ಆನಂತರ ಏನೂ ಕೆಲಸವಿರುವದಿಲ್ಲ. ಪತ್ರಿಕೆಯ ಜವಾಬ್ದಾರಿಯನ್ನು ವಹಿಸುತ್ತೇನೆ' ಎಂದರು. ಅದೇ ವರ್ಷ ಶರೀರದಲ್ಲಿ ರಕ್ತ ಬಲವು ಕಡಿಮೆಯಾಗಿದ್ದರೂ ಕರ್ಮನಿಮಿತ್ತವಾಗಿ ಬರಕದ ಶ್ರೀ ಶ್ರೀಕಂಠಯ್ಯನವರೇ ಮೊದಲಾದವರೊಡನೆ ಅವರು ಕಾಶೀಯಾತ್ರೆಗೆ ಹೋಗಿ ಕಾಶಿಯಲ್ಲೇ ದೇಹತ್ಯಾಗವನ್ನು ಮಾಡಿಬಿಟ್ಟರು. ಇದರಿಂದ ಅಧ್ಯಾತ್ಮಪ್ರಕಾಶ ಮಾಸಪತ್ರಿಕೆಯು ಕೂಡಲೆ ಪ್ರಕಟವಾಗಲಿಲ್ಲ. ಸಂಕಲ್ಪವು ಮಾತ್ರ ರಾಯರಲ್ಲಿಯೇ ಉಳಿಯಿತು. ರಾಯರು ಮಾಂಡೂಕ್ಯೋಪನಿಷತ್ತನ್ನು ಪ್ರಕಟಿಸಿ ಅದರ ರಟ್ಟಿನ ಕೊನೆಯ ಪುಟದಲ್ಲಿ "ಅಧ್ಯಾತ್ಮಪ್ರಕಾಶ" ಎಂಬ ಹೆಸರಿನಿಂದ ಶ್ರೀಶಂಕರಾಚಾರ್ಯರ ಪ್ರಸಿದ್ಧ ಗ್ರಂಥಗಳನ್ನಾದರೂ ಪ್ರಕಟಿಸಬೇಕೆಂದು ಸಂಕಲ್ಪಿಸಿದೆ- ಎಂದು ಪ್ರಕಟಿಸಿದರು. ಆ ಪುಸ್ತಕದ ಪ್ರತಿಯೊಂದನ್ನು ಶ್ರೀ ಮಾಗಾನಹಳ್ಳಿ ದೊಡ್ಡಬಸಪ್ಪನವರಿಗೂ ಕೊಟ್ಟು ಕೃತಕೃತ್ಯರಾದರು. ಹೀಗೆ ಯಾವ ಗದ್ದಲವೂ ಇಲ್ಲದೆ ಸಮಾರಂಭ ಮಹೋತ್ಸವವಿಲ್ಲದೆ ರಾಯರಿಗೂ ಅರಿವಿಲ್ಲದ ರೀತಿಯಲ್ಲಿ ಕ್ರಿ.ಶ. 1920 ನೆಯ ಇಸವಿಯಲ್ಲಿ ಅಧ್ಯಾತ್ಮಪ್ರಕಾಶಕಾರ್ಯಾಲಯವು ಜನಿಸಿತು.

ರಾಯರ ಜೀವನದಲ್ಲಿ ನಡೆದ. ಘಟನೆಗಳ ಪೈಕಿ 1920ರಲ್ಲಿ ಕಾವೇರಿಪಟ್ಟಣವೆಂಬಲ್ಲಿ ನಡೆದ ಶ್ರೀ ಕೃಷ್ಣಸ್ವಾಮಿ ಅಯ್ಯರ್‌ರವರ ಮಗನ ಮದುವೆಯ ಸಂದರ್ಭವೂ ಒಂದು ನೆನಪಿಟ್ಟುಕೊಳ್ಳಬೇಕಾದ ಸಂಗತಿ. ಆಗ್ಗೆ ರಾಯರು, ವೇ|| ಎಸ್. ವಿಠಲಶಾಸ್ತ್ರಿಗಳು-ಮುಂತಾಗಿ ಎಲ್ಲರೂ ಅಲ್ಲಿಗೆ ಹೋಗಿದ್ದರು. ಅಯ್ಯರ್‌ರವರು ಬಿಡುವು ದೊರೆತಾಗ ಅಲ್ಲಿಯೂ ವೇದಾಂತ ವಿಚಾರ ಮಾಡುತ್ತಿದ್ದರಂತೆ. ಅಯ್ಯರ್‌ರವರ ಪೂರ್ವಜರ ಊರು ಅದು. ಅವರ ಪೂರ್ವಜರು ಶ್ರೀಮಂತ ಪೇಶ್ವೆಯವರ ಕಾಲಕ್ಕೆ ಪೂನಾಕ್ಕೆ ಹೋಗಿ ಸಾಮವೇದದಲ್ಲಿ ಪಾಂಡಿತ್ಯವನ್ನು ಪ್ರದರ್ಶನಮಾಡಿ ಹೇರಳವಾಗಿ ಧನವನ್ನು ಸಂಪಾದಿಸಿದ್ದರಂತೆ. ಸಾಮವೇದಕ್ಕೆ ಒಂದು ಲಕ್ಷಣಗ್ರಂಥವನ್ನೂ ಬರೆದಿದ್ದರಂತೆ. ಆದರೆ ಯಾರೋ ಅಸೂಯಾಪರರು ಅದನ್ನು ಸುಟ್ಟುಹಾಕಿಸಿದರಂತೆ. ಈ ವಿಷಯವನ್ನು ಅಯ್ಯರ್‌ರವರೇ ರಾಯರಿಗೆ ಹೇಳಿ 'ನಿಮ್ಮ ಮೂಲಾವಿದ್ಯಾನಿರಾಸವೂ ಹೀಗಾದೀತು. ಜೋಕೆ!' ಎಂದಿದ್ದರಂತೆ. ಅಯ್ಯರ್‌ರವರ ಪೂರ್ವಜರು ಆ ಊರಿನಲ್ಲಿ ನೇಯ್ಗೆಯವರಿಗೆ ಪ್ರೋತ್ಸಾಹ ಕೊಟ್ಟು ಕಾಪಾಡಿದ್ದರಿಂದ ಅಯ್ಯರ್‌ರವರನ್ನೂ ಅವರ ಕಡೆಯವರನ್ನೂ ಆ ಜನರು ರಾಜಮರ್ಯಾದೆಯಿಂದ ಕಾಣುತ್ತಿದ್ದರು. ಆ ಊರಿನಲ್ಲಿ ವಿವಾಹವೂ ಬಹಳ ಚೆನ್ನಾಗಿ ನಡೆಯಿತು.

ಕಾವೇರಿಪಟ್ಟಣವು ಹೆಸರಿಗೆ ತಕ್ಕಂತೆ ಕಾವೇರೀ ತೀರದಲ್ಲಿದೆ. ನದೀ ತೀರವು ಬಹಳ ರಮಣೀಯವಾಗಿದೆ. ಅಯ್ಯರ್‌ರವರು ಕೊನೆಗಾಲಕ್ಕೆ ಆ ಊರಿನ ನದೀತೀರದಲ್ಲಿ ಒಂದು ಕುಟೀರವನ್ನು ಮಾಡಿಕೊಂಡು ಏಕಾಂತವಾಸದಲ್ಲಿರಬೇಕೆಂದು ಬಯಸಿದ್ದರಂತೆ. ಅದು ನೆರವೇರಲಿಲ್ಲವಾದರೂ ಅಯ್ಯರ್‌ರವರು ವೈರಾಗ್ಯದಲ್ಲೇನೂ ಕಡಿಮೆಯವರಾಗಿರಲಿಲ್ಲ. ಅವರು ಋಷಿಸಮಾನರೆಂದೇ ರಾಯರ ಭಾವನೆ. ಲೌಕಿಕದೃಷ್ಟಿಯಿಂದ ಅವರಿಗೆ ಒದಗಿದ ಲಾಭನಷ್ಟ, ಸುಖದುಃಖಗಳಲ್ಲಿ ಅವರ ಸಮಚಿತ್ತತೆಯನ್ನು ನೋಡಿ ರಾಯರೇ ಮೆಚ್ಚಿಕೊಂಡಿದ್ದರು. ಅಂಥ ತಿತಿಕ್ಷೆ, ಅಯ್ಯರ್‌ರವರದ್ದು!

ರಾಯರು ಗೋಲ್ಕೊಂಡ ಹೌಸ್‌ನಲ್ಲಿದ್ದಾಗ ಕೆಲವು ಸಂಸಾರತಾಪತ್ರಯಗಳಿಂದ ಖರ್ಚು ಮಿತಿಮೀರಿಹೋಗಿ ಮನೆಯವರನ್ನೆಲ್ಲ ಊರಿಗೆ ಕಳುಹಿಸಿ ತಾವು ಮತ್ತು ಶ್ರೀ ನರಸಪ್ಪನವರು ಇಬ್ಬರೇ ಇದ್ದರು. ಆಗ್ಗೆ ಅವರು ಚಾಮರಾಜಪೇಟೆಯಲ್ಲಿ ಒಂದು ರೂಮು ಮಾಡಿಕೊಂಡಿದ್ದರು. ಗರಡಿ ರಾಚಪ್ಪನವರೆಂಬ ಒಬ್ಬ ವೀರಶೈವರು ರಾಯರಲ್ಲಿಗೆ ಬಂದು ವೇದಾಂತವಿಚಾರ ಮಾಡಿಕೊಂಡು ಹೋಗುತ್ತಿದ್ದರು. ಆ ಸಂದರ್ಭದಲ್ಲಿ ರಾಮಕೃಷ್ಣ ಮಿಷನ್‌ನಲ್ಲಿ ನಡೆದ ಒಂದು ಉತ್ಸವಸಂದರ್ಭದಲ್ಲಿ ರಾಯರು ಭಾಷಣ ಮಾಡಿದರು. ದೊಡ್ಡ ಸಭೆಯಲ್ಲಿ ಭಾಷಣ ಮಾಡಿದ್ದು ಅದೇ ಮೊದಲಾದ್ದರಿಂದ ಸಭಾಕಂಪವಾಗಿ ಅರ್ಧಗಂಟೆಯಷ್ಟೇ ಮಾತನಾಡಿ ನಿಲ್ಲಿಸಿದರು. ಆದರೆ ಉಪನ್ಯಾಸವೇನೋ 'ಅಭಯಧರ್ಮ'ವೆಂಬ ವಿಷಯವಾಗಿತ್ತು. ಚೆನ್ನಾಗಿತ್ತೆಂತ ರಾಯರಿಗೆ ಅನಂತರ ಗೊತ್ತಾಯಿತು. ಮುಂದೆ ತಿರುಮಕೂಡ್ಲು ನರಸೀಪುರದಲ್ಲಿ ನಡೆದ ಸಪ್ತಾಹವೊಂದಕ್ಕೆ ರಾಯರೂ

ಚಿದಂಬರಯ್ಯನವರೂ ಹೋಗಿದ್ದು ಅಲ್ಲಿ ಭಾಷಣ ಮಾಡಿದರು. ಶ್ರೀ ಚಿದಂಬರಯ್ಯನವರೂ ಅವರ ಮಕ್ಕಳೂ ಆ ಕಾಲದಲ್ಲಿ ಬೆಂಗಳೂರಿನಲ್ಲಿಯೇ ಇದ್ದರು. ಅವರ ಮಗ ವೇದಾಂತಶಿರೋಮಣಿ ಹೊಸಕೆರೆ ಶ್ರೀನಿವಾಸಮೂರ್ತಿ ಎಂಬುವರು ರಾಯರ ಅಪೇಕ್ಷೆಯಂತೆ "ಮೂಲಾವಿದ್ಯಾನಿರಾಸ" ಗ್ರಂಥವನ್ನು ಸಂಪೂರ್ಣವಾಗಿ ಸುಂದರವಾದ ದೇವನಾಗರೀ ಅಕ್ಷರಗಳಿಂದ ಬರೆದುಕೊಟ್ಟರು. ಶ್ರೀ ಅಯ್ಯರ್‌ರವರಿಗೆ ಮೂಲಾವಿದ್ಯಾನಿರಾಸಗ್ರಂಥದ ಬಗ್ಗೆ ಅತ್ಯಂತ ಉತ್ಸಾಹವಿತ್ತು. ಪುಸ್ತಕವೆಲ್ಲ ಆದ್ಯಂತವಾಗಿ ಅವರ ಪ್ರೇರಣೆಯಿಂದಲೇ ಆದದ್ದೆಂದು ರಾಯರು ತಿಳಿಸಿದ್ದಾರೆ. ಆದ್ದರಿಂದಲೇ ಆ ಗ್ರಂಥದ ಕೊನೆಯಲ್ಲಿ **"ಶ್ರುತಿಶಿರಸಿ ನಿಗೂಢಂ ಶುದ್ಧಮದ್ವೈತತತ್ತ್ವಂ ಕುಮತಿಭರನವಾಪ್ಯಂ ಹ್ಯೇತದರ್ಥಂ ನಿಬನ್ಧಮ್। ವ್ಯತನುತ ಕೃಪಯಾ ಯಃ ಪ್ರೇರಯಿತ್ವಾ ಧಿಯೋ ಮೇ ತಮಖಿಲಹೃದಯಜ್ಞಂ ಕೃಷ್ಣಸಂಜ್ಞಂ ನತೋಽಸ್ಮಿ"** - ಎಂದು ಅಯ್ಯರನ್ನು ರಾಯರು ಸ್ತುತಿಸಿರುತ್ತಾರೆ. ಶ್ರೀ ಕೃಷ್ಣಸ್ವಾಮಿ ಅಯ್ಯರ್‌ರವರ ಮೂಲಕ ಎಲ್ಲರ ಆತ್ಮನಾದ ಶ್ರೀಕೃಷ್ಣಪರಮಾತ್ಮನೇ ಈ ಗ್ರಂಥವನ್ನು ಬರೆಯುವಂತೆ ರಾಯರನ್ನು ಪ್ರೇರಿಸಿರುತ್ತಾನೆ- ಎಂದು ಆ ಶ್ಲೋಕದ ತಾತ್ಪರ್ಯ.

ರಾಯರು ಹೀಗೆ ವೇದಾಂತವಿಚಾರದಲ್ಲಿ ಮುಂದುವರಿಯುತ್ತಾ ಅಯ್ಯರ್‌ರವರ ಸಹವಾಸದಿಂದ ಅದನ್ನು ಅಭಿವೃದ್ಧಿಪಡಿಸಿಕೊಳ್ಳುತ್ತಿರುವ ಈ ಸಮಯದಲ್ಲಿ ರಾಯರಿಗೆ ಮಧುಗಿರಿಗೂ ಶ್ರೀಕೃಷ್ಣಸ್ವಾಮಿ ಅಯ್ಯರಿಗೆ ತುಮಕೂರಿಗೂ ವರ್ಗವಾಯಿತು. ರಾಯರು ಮಧುಗಿರಿಗೆ ಹೋಗುವ ಮುಂಚೆ ಬೆಂಗಳೂರಿನ ಶಂಕರಮಠದಲ್ಲಿ ಕೀರ್ತನಕಾರರ ಸಮ್ಮೇಳನವೊಂದು ನಡೆಯಿತು. ಅದನ್ನು ಶ್ರೀ ಕೊಪ್ಪಳದ ಜಯರಾಮಾಚಾರ್ಯರೆಂಬ ಪ್ರಸಿದ್ಧ ದೇಶಭಕ್ತರೊಬ್ಬರು ಕೂಡಿಸಿದ್ದರು. ಅಲ್ಲಿ ನಡೆದ ಕೆಲವು ಕೀರ್ತನಗಳನ್ನು ಕೇಳಿದ್ದರಿಂದ - ಹಾಗೂ ಕೀರ್ತನಕಾರರ ದರ್ಶನದಿಂದ - ರಾಯರಿಗೆ ಕೀರ್ತನವೂ ಅಧ್ಯಾತ್ಮಪ್ರಚಾರಕ್ಕೆ ಒಂದು ಅಮೂಲ್ಯಸಾಧನವೆಂಬ ಭಾವನೆಯುಂಟಾಯಿತು. ಶ್ರೀ ಜಯರಾಮಾಚಾರ್ಯರಿಗೆ ದೇಶಭಕ್ತಿಯನ್ನು ಹರಡುವ ಶಕ್ತಿಯು ಚೆನ್ನಾಗಿತ್ತು. ಈಗ ರಾಯರಿಗೂ ಸ್ವಲ್ಪ ಸ್ವದೇಶೀಭಾವನೆಯು ಅಂಕುರಿಸಿತು. ಆದರೆ ಸರಕಾರದ ಮೇಲೆ ತಿರುಗಿ ಬೀಳುವಂಥ ದೇಶಭಕ್ತಿ ಭಾವನೆಯು ರಾಯರಲ್ಲಿ ಹುಟ್ಟಲಿಲ್ಲ. ಕಾಂಗ್ರೆಸ್‌ನವರು ಪ್ರದರ್ಶಿಸುತ್ತಿದ್ದ ಚಟುವಟಿಕೆಗಳೂ ದೇಶಕ್ಕೆ ಅಷ್ಟು ಹಿತಕರವಲ್ಲವೆಂದೇ ರಾಯರಿಗೆ ಭಾವನೆಯಿತ್ತು. ಆದ್ದರಿಂದ ಆ ವಿಷಯದಲ್ಲಿ ತಟಸ್ಥರಾದರು.

ಮಧುಗಿರಿಗೆ ಹೋಗುವ ಮುನ್ನ ರಾಯರು ಒಂದು ದಿನ ತುಮಕೂರಿಗೆ ಬಂದು ಅಲ್ಲಿ ಅಯ್ಯರ್‌ರ ಪ್ರೋತ್ಸಾಹದಿಂದ ಒಂದು ಉಪನ್ಯಾಸವನ್ನು ಮಾಡಿದರು. ಅಲ್ಲಿ ಕೆಲವು ಹಳೆಯ ಸ್ನೇಹಿತರುಗಳು ರಾಯರನ್ನು ಶ್ಲಾಘಿಸಿದರು. ಅನಂತರ ರಾಯರು ಮಧುಗಿರಿಗೆ ಸರಕಾರಿ ಎ.ವಿ. ಸ್ಕೂಲಿಗೆ ಕೆಲಸದ ಮೇಲೆ ಬಂದರು. ಹಳೇ ಹೆಡ್‌ಮಾಸ್ಟರಿಗೆ ಏರ್ಪಡಿಸಿದ ಸತ್ಕಾರ ಸಮಾರಂಭದಲ್ಲಿ ರಾಯರೂ ಭಾಷಣ ಮಾಡಿದ್ದರಿಂದ ಆ ಊರಿನ ಜನಗಳಲ್ಲಿ ಅವರ ವಿಷಯಕ್ಕೆ ಸದಭಿಪ್ರಾಯವು ಮೂಡಿತು. ಸ್ಕೂಲ್ ಮೇಷ್ಟರುಗಳಲ್ಲಿದ್ದ ಪರಸ್ಪರ ವೈಷಮ್ಯಗಳನ್ನು ಉಪಾಯದಿಂದ ಪರಿಹರಿಸಿಕೊಂಡು ಉತ್ಸಾಹದಿಂದ ಸ್ಕೂಲು ಕೆಲಸಕ್ಕೆ ಪ್ರಾರಂಭಿಸಿದರು.

## ಸ್ವದೇಶೀಯ ಚಳುವಳಿ :

ರಾಯರು ಮಧುಗಿರಿಗೆ ಬಂದ ಕೆಲವೇ ದಿನಗಳಲ್ಲಿ ಜಯರಾಮಾಚಾರ್ಯರು ಅಲ್ಲಿಗೆ ಬಂದರು. ಅವರ ಬಗ್ಗೆ ರಾಯರಿಗೆ ಅಷ್ಟೇನೂ ಅಭಿಮಾನವಿರಲಿಲ್ಲ. ಆ ವೇಳೆಗೆ ಸರ್ಕಾರದವರು ಸ್ಕೂಲು ವಿದ್ಯಾರ್ಥಿಗಳು ಚಳುವಳಿಯಲ್ಲಿ ಸೇರದಂತೆ ಅಧಿಕಾರಿಗಳು ಎಚ್ಚರಿಕೆಯನ್ನು ತೆಗೆದುಕೊಳ್ಳಬೇಕು- ಎಂಬ ನಿರೂಪವನ್ನು ಹೊರಡಿಸಿದ್ದರು. ರಾಯರಿಗೂ ವಿದ್ಯಾರ್ಥಿಗಳು ರಾಜಕೀಯಚಳುವಳಿಯಲ್ಲಿ ಸೇರುವದು ಸರಿಯಲ್ಲವೆಂದೇ ಅಭಿಪ್ರಾಯವಿತ್ತು. ಆದರೆ ಬ್ರಿಟಿಷರು ನಮ್ಮ ಜನರಿಗೆ ಮಾಡಿದ್ದ ಅನ್ಯಾಯಗಳು, ಕ್ರೂರವಾದ ಶಿಕ್ಷೆಗಳು, ಕೊಲೆಗಳು- ಮುಂತಾದವು ರಾಯರ ಕಿವಿಗೆ ಬಿದ್ದಿರಲಿಲ್ಲ. ಆದ್ದರಿಂದ ಬ್ರಿಟಿಷರ ಮೇಲೆ ರಾಯರಿಗೆ ಅಸಮಾಧಾನವಾಗುವ ಸಂಭವವಿರಲಿಲ್ಲ. ಜಯರಾಮಾಚಾರ್ಯರು ಕೀರ್ತನೆಗಳನ್ನು ವೀರರಸಪ್ರಧಾನವಾಗಿ ಜನರ ಮುಂದಿಟ್ಟು ಹುರಿದುಂಬಿಸುತ್ತಿದ್ದರು. ಅವರು ತಮ್ಮ ಕಾರ್ಯಕ್ರಮದ ಅಂತ್ಯದಲ್ಲಿ ಸ್ಕೂಲು ವಿದ್ಯಾರ್ಥಿಗಳು ಸ್ವಯಂಸೇವಕರಾಗಿ ಮುಂದೆ ಬರಬೇಕೆಂಬ ಸೂಚನೆಯನ್ನಿಟ್ಟರು. ಸ್ಕೂಲು ಹೆಡ್‌ಮಾಸ್ಟರೂ ಈ ವಿಷಯಕ್ಕೆ ತಮ್ಮ ಅಭಿಪ್ರಾಯವನ್ನು ಕೊಡಬೇಕೆಂದು ಒಬ್ಬ ಪ್ಲೀಡರು ಕೇಳಿಕೊಂಡದ್ದರಿಂದ ರಾಯರು ತಮ್ಮ ಅಭಿಪ್ರಾಯವನ್ನು ತಿಳಿಸಬೇಕಾಯಿತು. "ಸ್ಕೂಲು ಹುಡುಗರು ಪ್ರಥಮತಃ ವಿದ್ಯಾರ್ಥಿಗಳು. ಅವರು ತಂದೆ ತಾಯಿಗಳ ಅಪ್ಪಣೆಯಿಲ್ಲದೆ ಬೇರೆ ಹವ್ಯಾಸಕ್ಕೆ ಹೋಗಬಾರದು. ದೇಶಸೇವೆ ಮಾಡುವ ನೆಪದಲ್ಲಿ ಹಿರಿಯರ ಮಾತನ್ನು ಮೀರಬಾರದು. ರಾಜಕೀಯ ವಿಚಾರಗಳು ಈ ವಯಸ್ಸಿನಲ್ಲಿ ತಿಳಿಯುವ ಸಂಭವವು ಕಡಿಮೆಯಾದ್ದರಿಂದಲೂ ವಿದ್ಯಾಭ್ಯಾಸಕ್ಕೂ ರಾಜಕೀಯಕ್ಕೂ ದೃಷ್ಟಿಕೋನವು ಬೇರೆಯಾಗಿರುವದರಿಂದಲೂ ವಿದ್ಯಾರ್ಥಿಗಳಾಗಿರುವವರು ವಿದ್ಯಾರ್ಥಿ ದಶೆಯು ಪೂರೈಸುವವರೆಗೆ ಯಾವ ಬೇರೆಯ ಚಟುವಟಿಕೆಗಳಿಗೂ ಹೋಗಬಾರದು. ಆದರೆ ಅವಕಾಶ ದೊರೆತಾಗ ಸಣ್ಣ ಪುಟ್ಟ ಜನೋಪಕಾರದ ಕೆಲಸಗಳನ್ನು ಮಾಡುವದು ತಪ್ಪಲ್ಲ. ದೇಶಭಕ್ತಿಯಿರಬೇಕಾದುದು ಅಗತ್ಯವಾದರೂ ಅದು ವಿದ್ಯಾಭ್ಯಾಸಕ್ಕೆ ಬಾಧಕವಾಗಬಾರದು" ಎಂದು ತಿಳಿಸಿದರು*. ಜಯರಾಮಾಚಾರ್ಯರ ಕಾರ್ಯಕ್ರಮಕ್ಕೆ ಇದರಿಂದ ನಿರಾಶೆಯೇ ಆಗಿರಬೇಕು. ಕಾಂಗ್ರೆಸ್‌ನವರ ನಿಯಮದಂತೆಯೂ ಹದಿನೆಂಟು ವರ್ಷಕ್ಕೆ ಮೀರದ ಹುಡುಗರು ಸ್ವಯಂಸೇವಕರಾಗಲು ಅವಕಾಶವಿಲ್ಲವಾಗಿದೆ. ಆ ದೃಷ್ಟಿಯಿಂದಲೂ ಸ್ಕೂಲು ವಿದ್ಯಾರ್ಥಿಗಳು ರಾಜಕೀಯಕ್ಕೆ ಸೇರಬಾರದೆಂದೇ ಆಗುತ್ತದೆ. ಅಂತೂ ಈಗಿನ ಗೊಂದಲವನ್ನು ನೋಡಿದರೆ ನಾವು ಸಂಸ್ಕೃತರಾಗಿ, ವಿದ್ಯಾವಂತರಾಗಿ, ಅನಂತರ ದೇಶಭಕ್ತರಾಗುವದೇ ಮೇಲು. ಅದನ್ನು ಬಿಟ್ಟು ಮೊದಲೇ ದೇಶಭಕ್ತರಾಗುವ ಭರದಲ್ಲಿ ಅಜ್ಞಾನಿಗಳಾಗಿ, ನಿರುದ್ಯೋಗಿಗಳಾಗಿ ದೇಶಕ್ಕೆ

---

* ರಾಯರು ಬಹಳ ಹಿಂದೆಯೇ ಪ್ರಕಟಪಡಿಸಿದ್ದ ಈ ಅಭಿಪ್ರಾಯಗಳು ಮನನೀಯವಾಗಿವೆ. ಈ ನಿಯಮಗಳಿಗೆ ಲಕ್ಷವನ್ನು ನಮ್ಮ ನಾಯಕರು ಕೊಟ್ಟದ್ದಿದ್ದರೆ ಈಗ ನಡೆಯುತ್ತಿರುವ ವಿದ್ಯಾರ್ಥಿಗಳ ಗಲಭೆಗಳಿಗೆ ಅವಕಾಶವಾಗುತ್ತಿರಲಿಲ್ಲ.

ದ್ರೋಹಿಗಳಾಗುವದರಿಂದ ಆತ್ಮೋದ್ಧಾರವಾಗಲಿ ದೇಶೋದ್ಧಾರವಾಗಲಿ ಆಗುವಂತಿಲ್ಲವೆಂಬುದು ಸ್ಪಷ್ಟವೇ ಆಗಿದೆ. ಇರಲಿ. ಶ್ರೀ ಜಯರಾಮಾಚಾರ್ಯರಿಗೆ ಆ ಊರಿನಲ್ಲಿ ಒಂದು ಉತ್ಸವದ ಮೆರವಣಿಗೆಯನ್ನೂ ಸಹ ಜನರು ಮಾಡಿದರು. ಜಯಕಾರಗಳನ್ನೂ ಹಾಕಿದರು. 'ಗಾಂಧಿಯಂಥ ಮಹಾತ್ಮರ ಜೊತೆಗೆ ಈತನಿಗೂ ಜಯಕಾರವನ್ನು ಹಾಕುತ್ತಾರಲ್ಲ! ಇದು ಎಷ್ಟು ಮಟ್ಟಿಗೆ ಸರಿ! ಈತನಾದರೂ ಜಂಭದಿಂದ ಹಾಗೆ ಹಾಕಿಸಿಕೊಳ್ಳುವದು ಸೂಕ್ತವೆ?' ಎಂದು ರಾಯರಿಗೆ ಅನ್ನಿಸಿತು. ಅಂತೂ ಉತ್ಸವವು ಮುಗಿಯಿತು. ಈ ಉತ್ಸವವನ್ನು ನೋಡಿದ್ದರಿಂದಲೋ ಏನೋ ರಾಯರಿಗೆ ಮುಂದೆ ಒಂದು ದಿನ ಕನಸಿನಲ್ಲಿ ಊರಿನ ಬೀದಿಯಲ್ಲಿ ಬರುತ್ತಿದ್ದ ಒಂದು ಕಾದ ಎಣ್ಣೆಯ ಕೊಪ್ಪರಿಗೆಯಿಂದ ಧಗಧಗನೆ ಉರಿಯುತ್ತಿರುವ ಕೊಳ್ಳಿಗಳನ್ನು ಅದ್ದಿ ತೆಗೆದುಕೊಂಡು ಪ್ರತಿಯೊಬ್ಬರೂ ತಮ್ಮ ತಮ್ಮ ಮನೆಯ ಮೇಲೆ ಎಸೆದುಕೊಳ್ಳುತ್ತಿರುವಂತೆ ಕಂಡಿತಂತೆ. ಅದರ ಅರ್ಥವೇನಾದರೂ ಇರಲಿ, ರಾಯರಿಗೆ ಈ ರಾಜಕೀಯ ವ್ಯಾಪಾರದಲ್ಲಿ ಸೇರುವದು ಇಲ್ಲದ ತೊಂದರೆಯನ್ನು ಮೈಮೇಲೆ ಹಾಕಿಕೊಂಡಂತೆಯೇ ಸರಿ ಎಂದು ತೋರಿತಂತೆ. ಈಗಿನ ದೇಶದ ಕಲುಷಿತ ವಾತಾವರಣವನ್ನು ನೋಡಿದರೆ ರಾಯರ ಕನಸಿನ ಅರ್ಥವು ಚೆನ್ನಾಗಿ ಮನದಟ್ಟಾಗುವಂತೆಯೇ ಇದೆ. ಏಕೆಂದರೆ ಸ್ವಾತಂತ್ರ್ಯವು ಲಭಿಸಿದ ಅನಂತರ ರಾಜಕೀಯ ಅಶಾಂತಿಯೇ ಬೆಳೆಯುತ್ತಿದ್ದು ಜನರಿಗೆ ನೆಮ್ಮದಿಯಿಲ್ಲವಾಗಿದೆ.

ಮುಂದೆ ರಾಯರು ಕೆಲವೇ ದಿನಗಳಲ್ಲಿ ಮಧುಗಿರಿಯ ಎ.ವಿ. ಸ್ಕೂಲನ್ನು ಹೊಸ ಕಟ್ಟಡದಲ್ಲಿ ನಡೆಯಿಸಬೇಕಾಗಿ ಬಂದಿತು. ದಿವಾನರು ಬರುತ್ತಾರಾದ್ದರಿಂದ ತ್ವರಿತವಾಗಿ ಬದಲಾವಣೆ ಮಾಡಿ ಅವರನ್ನು ಸಂತೋಷಗೊಳಿಸಬೇಕೆಂದು ಸ|| ಇನ್‌ಸ್ಪೆಕ್ಟರ್ ಶ್ರೀ ವೆಂಕಟರಾಮಯ್ಯನವರು ತಿಳಿಸಿದ್ದರು. ರಾಯರು ಸ್ವಲ್ಪ ಶ್ರಮಪಟ್ಟು ಈ ಕೆಲಸವನ್ನು ನಿರ್ವಹಿಸಿ ಕೊನೆಯಲ್ಲಿ ದಿವಾನರಿಂದಲೂ ಇನ್‌ಸ್ಪೆಕ್ಟರಿಂದಲೂ ಶ್ಲಾಘಿಸಲ್ಪಟ್ಟರು. ಆಗ ರಾಯರು ಶ್ರೀ ವೆಂಕಟರಾಮಯ್ಯನವರಿಗೆ ಮಾಂಡೂಕ್ಯೋಪನಿಷತ್ತಿನ ಪ್ರತಿಯೊಂದನ್ನು ಕೊಟ್ಟು ಸಂತೋಷಪಡಿಸಿದರು.

ರಾಯರು ಮಧುಗಿರಿಯನ್ನು ಬಿಡುವದರೊಳಗೆ ಮತ್ತೆ ಕೆಲವು ಘಟನೆಗಳು ನಡೆದವು. ಅವುಗಳಲ್ಲಿ ಮುಖ್ಯವಾದದ್ದು ಅರಸೀಕೆರೆಯ ರಾಮಸೇವಾ ಸಂಘದ ಚಟುವಟಿಕೆಗಳು. ಅರಸೀಕೆರೆಯು ರಾಯರಿಗೆ ಹಳೆಯ ಪರಿಚಯದ ಸ್ಥಳವಷ್ಟೆ? ಆಗ್ಗೆ ಅಲ್ಲಿದ್ದ ಶ್ರೀ ಕೆ. ತಿಮ್ಮಪ್ಪದಾಸರು, ಅವರ ಮಕ್ಕಳು, ಮತ್ತು ನಂಜಪ್ಪನವರು- ಮುಂತಾದವರು ಸೇರಿ ಒಂದು ಸಂಘವನ್ನು ನಿರ್ಮಿಸಿ, ಭಜನೆ, ಹರಿಕಥೆ, ಪುರಾಣಗಳನ್ನು ನಡೆಯಿಸುತ್ತಿದ್ದರು. ಸಂಘದವರ ಆಹ್ವಾನದಂತೆ ರಾಯರು ಅಲ್ಲಿಗೆ ಹೋಗಿದ್ದರು. ಚಿದಂಬರಯ್ಯನವರಿಂದ ಅಲ್ಲಿ ಪುರಾಣವೂ ನಡೆಯುತ್ತಿತ್ತು. ರಾಯುರು ಒಂದೆರಡು ಉಪನ್ಯಾಸಗಳನ್ನು ಮಾಡಿದರು. ಶ್ರೀ ಜಯರಾಮಾಚಾರ್ಯರೂ ಅಲ್ಲಿಗೆ ಬಂದಿದ್ದರು. ಆದರೆ ಸರ್ಕಾರದವರ ಅಡಚಣೆಯಿಂದ ಅವರ ಕಾರ್ಯಕ್ರಮಗಳು ಲಘುವಾಗಿ ಪೂರೈಸಿದವು. ಶ್ರೀ ಚಿದಂಬರಯ್ಯನವರು ಬರೆದಿದ್ದ

"ಸುಧರ್ಮ ಪ್ರಭಾವ" ವೆಂಬ ನಾಟಕಾಭಿನಯದ ಏರ್ಪಾಡಾಗಿದ್ದುದು ಲೈಸನ್ಸ್ ಕೊಡಲು ಸರ್ಕಾರದವರು ಹಾಕಿದ ಷರತ್ತುಗಳಿಗೆ ಕೆಲವರು ಒಪ್ಪಲಿಲ್ಲವಾಗಿ ಆ ಸಮಾರಂಭವೂ ನಿಂತುಹೋಯಿತು. ಅದೇ ವರ್ಷ ಶ್ರೀ ಡಿ.ಸಿ. ನಂಜಪ್ಪನವರ ಮಗನ ಉಪನಯನವೂ ಆಯಿತು.

## ಮಗಳ ವಿವಾಹ :

ಶ್ರೀ ನಂಜಪ್ಪನವರ ಮನೆಯ ಉಪನಯನ ಕಾಲದಲ್ಲಿ ರಾಯರು ವಿಚಾರಮಾಡುತ್ತಾ ವರಾನ್ವೇಷಣೆಯಲ್ಲಿ ತೊಡಗಿದ್ದಾಗ ಪುರೋಹಿತರ ಸಹಾಯದಿಂದ ಕಣಕಟ್ಟೆಯ ಶ್ರೀ ಸೀತಾರಾಮದೀಕ್ಷಿತನೆಂಬ ವರನು ರಾಯರ ಹಿರಿಯ ಮಗಳು ಶ್ರೀಮತಿ ಲಕ್ಷ್ಮೀದೇವಮ್ಮನಿಗೆ ದೊರೆತನು. ಗಂಡಿನ ಕಡೆಯವರು ಹೆಣ್ಣನ್ನು ಸಹ ನೋಡದೆ ಶ್ರೀ ರಾಮಣ್ಣನವರ ಶಿಫಾರಸ್ಸಿನಿಂದ ಲಗ್ನಪತ್ರಿಕೆಯನ್ನೇ ಮಾಡಿಕೊಟ್ಟರು. ಹೀಗೆ ಬಹುಬೇಗ ವಿವಾಹವು ಗೊತ್ತಾದ್ದರಿಂದ ರಾಯರು ಯಳ್ಳಂಬಳಸೆಗೆ ಹೋಗಿ ಅಲ್ಲಿ ಮದುವೆಯ ಏರ್ಪಾಡು ಮಾಡಿದರು. ಸ್ನೇಹಿತರೂ ಶಿಷ್ಯರೂ ಬಂಧುಬಾಂಧವರೂ ಎಲ್ಲರೂ ನೆರೆದರು. ಭಗವದನುಗ್ರಹದಿಂದ ಎಲ್ಲಾ ಸಹಾಯವೂ ತಾನಾಗಿಯೇ ಒದಗಿತು. ಮದುವೆಯ ಸಮಾರಂಭವು ವಿಜೃಂಭಣೆಯಿಂದ ನಡೆಯಿತು. ಅದಕ್ಕಿಂತಲೂ ಹೆಚ್ಚಾಗಿ ಆ ಸಮಯದಲ್ಲಿ ಬರಕದ ಶ್ರೀಕಂಠಯ್ಯನವರು ಏರ್ಪಡಿಸಿದ್ದ ಪೂಜೆ, ಭಜನೆಗಳು - ಪುರಾಣಾದಿಗಳು, ಭಕ್ತಮಂಡಲಿಯವರ ಪ್ರೋತ್ಸಾಹದಿಂದ ಬಹುಚೆನ್ನಾಗಿ ನಡೆದು ಬೀಗರಿಗೆ ಮನೋರಂಜನೆಯಾಗಿತ್ತು. ರಾಯರ ತಮ್ಮಂದಿರೇ ಎಲ್ಲಾ ವ್ಯವಹಾರವನ್ನೂ ಬೀಗರ ಉಪಚಾರಗಳನ್ನೂ ನಿರ್ವಹಿಸಿ ನಡೆಸಿದರು. ರಾಯರು ಭಕ್ತಮಂಡಲಿಯಲ್ಲಿ ಸೇರಿಹೋಗಿದ್ದು ಯಾರೋ ಒಬ್ಬರು "ನೀವು ಯಾವಾಗ ಹೊರಡುತ್ತೀರಿ? ಮನೆಯ ಯಜಮಾನರಿಗೂ ನಿಮಗೂ ಏನು ಸಂಬಂಧ?" ಎಂದು ಕೇಳಿದರಂತೆ! ಹೀಗೆ ಜನಕನಂತೆ ರಾಯರು ಜ್ಞಾನಿಗಳ ವ್ಯವಹಾರವನ್ನೇ ನಡೆಯಿಸಿ ತೋರಿಸಿಬಿಟ್ಟರು!.

ರಾಯರು ವಿವಾಹವನ್ನು ಮುಗಿಸಿಕೊಂಡು ಮಧುಗಿರಿಗೆ ಹಿಂತಿರುಗುವ ವೇಳೆಗೆ ಅವರ "ವಾಕ್ಯರಚನಾಕ್ರಮ" ಗ್ರಂಥವು ಪಠ್ಯಪುಸ್ತಕವಾಗಿ ಮಂಜೂರಾಗಿತ್ತು. ಇದರಿಂದ ರಾಯರಿಗೆ ಮದುವೆಯ ಖರ್ಚುವೆಚ್ಚಗಳನ್ನು ಸರಿದೂಗಿಸಲು ತುಂಬ ಸಹಾಯವಾಯಿತು. ಇದೊಂದೇ ಸಂದರ್ಭದಲ್ಲಿ ಅಲ್ಲದೆ ಆ ಗ್ರಂಥವು ಮುಂದೆಯೂ ರಾಯರಿಗೆ ಸಂಸಾರದಲ್ಲಿ ಅನಿವಾರ್ಯವಾಗಿ ಒದಗಿದ ವಿಶೇಷ ಖರ್ಚುಗಳಿಗೆಲ್ಲ ಸಹಾಯವನ್ನು ಮಾಡಿತು ಎಂದರೆ ಅತ್ಯುಕ್ತಿಯಲ್ಲ*.

* ರಾಯರು ಈಚೆಗೆ ಸಂನ್ಯಾಸ ಸ್ವೀಕಾರಮಾಡಿದ ಮೇಲೂ ಅದರ ಹಕ್ಕನ್ನು ಅವರ ಮಗ ಶ್ರೀ ವೈ. ನರಸಪ್ಪನವರು ಉಪಯೋಗಿಸಿಕೊಂಡು ಆ ಪಠ್ಯಪುಸ್ತಕದಿಂದ ಸಾಕಷ್ಟು ಸಹಾಯವನ್ನೂ ಉಪಕಾರವನ್ನೂ ಹೊಂದಿರುತ್ತಾರೆ. 1958 ರವರೆಗೂ ಅದು ಪಠ್ಯಪುಸ್ತಕವಾಗಿಯೇ ಇತ್ತು- ಎಂದರೆ ಸುಮಾರು ಮೂವತ್ತೆಂಟು ವರ್ಷಗಳ ಕಾಲ ನಡೆದುಬಂದಿಯೆಂದರೆ ಆಶ್ಚರ್ಯವೇ ಸರಿ.

ಯಾವ ಶಿಫಾರಸ್ಸೂ ಇಲ್ಲದೆ ಒದಗಿದ ಈ ಸಹಾಯವನ್ನು ರಾಯರು ಭಗವಂತನ ಕೃಪೆಯೆಂದೇ ಭಾವಿಸಿದರು. ಇದನ್ನು ವ್ಯವಹಾರ ದೃಷ್ಟಿಯಿಂದ ಒದಗಿಸಿಕೊಟ್ಟ ಶ್ರೀ ಬೆಳವಾಡಿ ದಾಸಪ್ಪನವರನ್ನು ರಾಯರು ತುಂಬ ಕೃತಜ್ಞತೆಯಿಂದ ಸ್ಮರಿಸಿಕೊಂಡರು. ವ್ಯವಹಾರದ ಯೋಚನೆಯಿಲ್ಲದೆ ಪರಮಾರ್ಥಕ್ಕೇ ರಾಯರು ತಿರುಗಲು ಹಾಗೂ ಅಧ್ಯಾತ್ಮಗ್ರಂಥಗಳನ್ನು ಬರೆಯಲು ಇದರಿಂದ ಬಹಳ ಉಪಕಾರವಾಯಿತು.

## ಮತ್ತೆ ಬೆಂಗಳೂರು :

ರಾಯರು ಮಧುಗಿರಿಯ ಎ.ವಿ. ಸ್ಕೂಲಿನಲ್ಲಿ ಉತ್ಸಾಹದಿಂದಲೇ ಕೆಲಸ ಮಾಡುತ್ತಿದ್ದರು. ಆದರೂ ಅದೇನೋ, ಸರ್ಕಾರದವರು ಅವರನ್ನು ಪುನಃ ಕೇವಲ ಒಂಬತ್ತು ತಿಂಗಳ ಅವಧಿಯಲ್ಲಿ ಬೆಂಗಳೂರಿನ ಶ್ರೀ ಎಸ್.ಆರ್. ನಂಜುಂಡಯ್ಯನವರ ಎ.ವಿ. ಸ್ಕೂಲಿಗೆ ವರ್ಗ ಮಾಡಿದರು. ರಾಯರಿಗೆ ಅನುಕೂಲವೇ ಆಯಿತು. ಮಗ ಶ್ರೀ ನರಸಪ್ಪನವರೊಡನೆ ಬೆಂಗಳೂರಿಗೆ ಬಂದರು. ಶ್ರೀ ನರಸಪ್ಪನವರು ಹೈಸ್ಕೂಲಿಗೆ ಸೇರಿದರು. ರಾಯರು ಎ.ವಿ. ಸ್ಕೂಲಿಗೆ ಸೇರಿದ ಕೆಲವೇ ದಿನಗಳಲ್ಲಿ ಅಲ್ಲಿದ್ದ ಹೆಡ್‌ಮಾಸ್ಟರು ವರ್ಗವಾಗಿ ಹೊಸಬರು ಬಂದರು. ಹೊಸ ಹೆಡ್‌ಮಾಸ್ಟರು ಅದೇಕೊ, ರಾಯರ ಬಗ್ಗೆ ಸ್ವಲ್ಪ ತಪ್ಪು ಅಭಿಪ್ರಾಯವುಳ್ಳವರಾಗಿದ್ದು ಪರೀಕ್ಷೆಗೆ ಆಯ್ಕೆಯಾಗದ ಹುಡುಗರನ್ನೆಲ್ಲ ಒಂದು ಸೆಕ್ಷನ್ ಮಾಡಿ ಅದರ ಪಾಠಗಳನ್ನೇ ಬಹುಮಟ್ಟಿಗೆ ರಾಯರಿಗೆ ಕೊಟ್ಟರು. ವಾರಕ್ಕೆ ಕೇವಲ 19 ಪೀರಿಯಡ್ ಪಾಠಗಳು ಮಾತ್ರವಿದ್ದುದರಿಂದ ತತ್ತ್ವವಿಚಾರಕ್ಕೆ ರಾಯರಿಗೆ ವಿರಾಮವು ದೊರೆಯಿತು. ವಿರಾಮಕಾಲದಲ್ಲೆಲ್ಲ ರಾಯರು ಚಿತ್ಸುಖರ **ಅದ್ವೈತದೀಪಿಕೆ** ಎಂಬ ಗ್ರಂಥವನ್ನು ಅಭ್ಯಾಸ ಮಾಡುತ್ತಿದ್ದರು. ಮಧ್ಯಾಹ್ನದ ಮೇಲೆ ಬಿಡುವಾದಾಗ ಶ್ರೀ ಗರಡಿ ರಾಚಪ್ಪನವರು ಬಂದು **"ಉಪದೇಶಸಾಹಸ್ರಿ"** ಯ ಅರ್ಥವನ್ನು ಹೇಳಿಸಿಕೊಂಡು ಬರೆದುಕೊಳ್ಳುತ್ತಿದ್ದರು. ಬೆಳಗಿನ ಹೊತ್ತು ರಾಯರು ಶಂಕರಮಠಕ್ಕೆ ಹೋಗಿ ವೇ. ವಿರೂಪಾಕ್ಷಶಾಸ್ತ್ರಿಗಳಿಂದ **ಭಾಮತೀ ಪಾಠವನ್ನು** ಶ್ರವಣಮಾಡುತ್ತಿದ್ದರು. ಆಗ ಶ್ರೀ ಶಾಸ್ತ್ರಿಗಳು ಕೆಲವು ವಿದ್ಯಾರ್ಥಿಗಳಿಗೆ ಭಾಮತೀ ಪಾಠವನ್ನು ಹೇಳಿಕೊಡುತ್ತಿದ್ದರು.

## ವೇದಾಂತಬಾಲಬೋಧೆ :

ಕೆಲವು ದಿನಗಳನಂತರ ಆ ಸ್ಕೂಲಿನ ಹೆಡ್‌ಮಾಸ್ಟರಿಗೂ ರಾಯರಿಗೂ ವಿರಸವೇ ಬೆಳೆದದ್ದರಿಂದ ರಾಯರು ತಮ್ಮನ್ನು ಬೇರೊಂದು ಸ್ಕೂಲಿಗೆ ವರ್ಗಮಾಡಬೇಕು ಅಥವಾ ಎರಡು ತಿಂಗಳು ರಜವನ್ನಾದರೂ ಕೊಡಬೇಕೆಂದು ಮೇಲಧಿಕಾರಿಗಳಿಗೆ ಬರೆದುಕೊಂಡರು. ಆದರೆ ರಜವನ್ನು ಉಪಯೋಗಿಸಿಕೊಳ್ಳುವದು ಹೇಗೆ?- ಎಂಬುದನ್ನು ಅವರು ಯೋಚಿಸಿರಲಿಲ್ಲ. ಆ ವೇಳೆಗೆ ಏತಕ್ಕೋ ಬಂದಿದ್ದ ಅರಸೀಕೆರೆಯ ಶ್ರೀ ಕೆ. ನಾರಾಣಪ್ಪನವರನ್ನು ಕಂಡಾಗ ಅಂಥ

ಸಾಮಾನ್ಯರಿಗೂ ತಿಳಿಯುವಂತೆ ಒಂದು ಸಣ್ಣ ವೇದಾಂತಪುಸ್ತಕವನ್ನು ಬರೆಯಬೇಕೆಂದು ರಾಯರಿಗೆ ಅನ್ನಿಸಿತು. ಕೂಡಲೆ ಪ್ರತಿದಿನವೂ ಬೆಳಗ್ಗೆ ಎದ್ದು ಹೇಳಿಕೊಳ್ಳುತ್ತಿದ್ದ **"ಪ್ರಾತಃಸ್ಮರಣಸ್ತೋತ್ರ"**ದ ಒಂದೊಂದು ಶ್ಲೋಕದ ವಿವರಣೆಯನ್ನೂ ಪ್ರಶ್ನೋತ್ತರ ರೂಪವಾಗಿ ಹೇಳಿ ಅವರ ಕೈಯಿಂದಲೆ ಬರೆಸಿದರು. ವೇದಾಂತವನ್ನು ಸುಲಭಶೈಲಿಯಲ್ಲಿ ಬರೆಯಬೇಕೆಂದು ರಾಯರು ಇಚ್ಛಿಸಿದ್ದ ಪ್ರಕರಣಗಳಲ್ಲಿ ಇದೇ ಮೊದಲನೆಯದಾಯಿತು. ಇದಕ್ಕೆ **' ವೇದಾಂತ ಬಾಲಬೋಧೆ'** ಎಂದು ಹೆಸರಿಟ್ಟರು. ಇದನ್ನು ಮುದ್ರಣ ಮಾಡಿಸಲು ಪ್ರೆಸ್ಸಿಗೆ ಕೊಟ್ಟಾಗ ಆ ಮುದ್ರಣಾಲಯದ ಮಾಲೀಕರ ತಂದೆಯವರು "ಇಂಥ ಪುಸ್ತಕಗಳನ್ನೇಕೆ ಬರೆಯುತ್ತೀರಿ? ಯಾವದಾದರೂ ಕಥೆಯನ್ನೋ ಕಾದಂಬರಿಯನ್ನೋ ಬರೆಯಬಾರದೆ? ಸಾವಿರಾರು ಪ್ರತಿಗಳು ಖರ್ಚಾದಾವು?" ಎಂದರಂತೆ. ರಾಯರು "ಇಲ್ಲ, ನಾನು ಕಥೆ ಬರೆಯುವವನಲ್ಲ, ಇಂಥ ವೇದಾಂತ ಪುಸ್ತಕಗಳನ್ನೇ ಬರೆದು ಇವುಗಳಲ್ಲಿಯೂ ಜನರಿಗೆ ಆಸಕ್ತಿಯುಂಟಾಗುವ ಹಾಗೆ ಮಾಡುತ್ತೇನೆ. ಸ್ವಲ್ಪ ತಡೆದು ನೋಡಿರಿ" ಎಂದು ಹೇಳಿದರಂತೆ. ಆದರೆ ರಾಯರ ಈ ಮಾತನ್ನು ಅಕ್ಷರಶಃ ಸತ್ಯವಾಗಿಸಿದ ಶ್ರೀಶಂಕರಭಗವತ್ಪಾದರವರ ಕೃಪೆಯನ್ನು ಎಷ್ಟು ಕೊಂಡಾಡಿದರೂ ಸಾಲದು. ಕನ್ನಡನಾಡಿನ ಸೌಭಾಗ್ಯದಿಂದ ರಾಯರಂಥ ಮೇಧಾವಿಗಳೊಬ್ಬರು ಕೇವಲ ಕಥೆ ಕಾದಂಬರಿಕಾರರೋ ಸಾಹಿತ್ಯಕ್ಷೇತ್ರದ ಕವಿಗಳೋ ಆಗದೆ **ಕನ್ನಡವೇದಾಂತ ಪ್ರಪಂಚದ ಶಂಕರಾಚಾರ್ಯರೆನಿಸಿದುದು ದೇಶದ ಸುದೈವವೇ ಸರಿ.** ಇಂಥ ಮಹಾತ್ಮರ ಸತತ ಪ್ರಯತ್ನ ಪರಿಶ್ರಮಗಳ ಫಲವೇ ಈಗಿನ **ಅಧ್ಯಾತ್ಮಪ್ರಕಾಶಕಾರ್ಯಾಲಯವೆಂಬ** ಸಂಸ್ಥೆಯಾಗಿದೆ. ರಾಯರು ವೇದಾಂತಬಾಲಬೋಧೆಯ ಪ್ರಥಮ ಮುದ್ರಣದ ಪೀಠಿಕೆಯಲ್ಲಿ ಹೇಳಿರುವಂತೆ ಕನ್ನಡದಲ್ಲಿ ವೇದಾಂತ ಗ್ರಂಥಗಳು ಅನೇಕವಾಗಿದ್ದರೂ ದರ್ಶನಾಂತರಗಳ ಬೆರಕೆಯಿಲ್ಲದೆ, ಭಾಷ್ಯವಾರ್ತಿಕ ಪ್ರಕ್ರಿಯೆಗಳಿಗೆ ವಿರೋಧವಿಲ್ಲದೆ, ಶಾಸ್ತ್ರಾಡಂಬರದ ಪಾರಿಭಾಷಿಕ ಶಬ್ದಗಳ ಕ್ಲೇಶವಿಲ್ಲದೆ, ತಿಳಿಯಾದ ಸರಳವಾದ ಹೊಸಗನ್ನಡದಲ್ಲಿ ರಚಿತವಾಗಿರುವ ಕೃತಿಗಳ ಕೊರತೆಯಿತ್ತು. ಆದರೆ ರಾಯರ ಲೇಖನಿಯಿಂದ ಹೊರಬಿದ್ದಿರುವ ಈ ಕೃತಿರತ್ನಗಳಿಂದ ಅಂಥ ಕೊರತೆಯು ನೀಗಿತು. ಇವು ಇನ್ನು ಮುಂದೆ ಕನ್ನಡ ಸಾರಸ್ವತಲೋಕಕ್ಕೆ ಅನರ್ಘ್ಯವಾದ ಕಾಣಿಕೆಗಳಾಗಿರುವವೆಂಬುದರಲ್ಲಿ ಸ್ವಲ್ಪವೂ ಉತ್ಪ್ರೇಕ್ಷೆಯಿರುವದಿಲ್ಲ.

**ಕಾಶೀಯಾತ್ರೆ :**

ರಾಯರು ಮನಸ್ಸಿನ ಬೇಜಾರುಕಳೆದುಕೊಳ್ಳಲು ರಜಕ್ಕೆ ಬರೆದುಕೊಂಡಿದ್ದರಷ್ಟೆ! ಅದು ಮಂಜೂರಾಗುವ ವೇಳೆಗೆ ಒಂದುದಿನ ಬೆಳಗಿನ ಜಾವದಲ್ಲಿ ರಾಯರಿಗೆ ಒಂದು ಕನಸಾಯಿತು. ಅದರಲ್ಲಿ ಯಾರೋ ಒಬ್ಬರು ಒಂದು ಹಸಿರುರಟ್ಟಿನ ಪಂಚಾಂಗವೊಂದನ್ನು ಹಿಡಿದುಕೊಂಡು ತೋರಿಸಿದರಂತೆ. ಅದರಲ್ಲಿ ರಟ್ಟಿನ ಮೇಲೆ ದಪ್ಪಕ್ಷರದಲ್ಲಿ **"ತೀರ್ಥರಾಜಃ ಪ್ರಯಾಗಃ"** ಎಂದು ಬರೆದಿತ್ತಂತೆ. ಅಲ್ಲದೆ "ನಿನ್ನ ಪೂರ್ವಜರೆಲ್ಲ ಪ್ರಯಾಗಾದಿ ಕ್ಷೇತ್ರಗಳನ್ನು ನೋಡಿಕೊಂಡು

ಬಂದಿರುತ್ತಾರೆ. ನೀನೇಕೆ ಹೋಗುವದಿಲ್ಲ?" ಎಂದಂತೆ ಆಯಿತಂತೆ. ಕೂಡಲೆ ರಾಯರು ಎಚ್ಚೆತ್ತು ಕನಸನ್ನು ತಮ್ಮ ಅಕ್ಕನವರಿಗೆ ಹೇಳಲು ಅವರು ತಾವೂ ಯಾತ್ರೆಗೆ ಬರುವದಾಗಿ ತಿಳಿಸಿದರು. ಇನ್ನೂ ಒಬ್ಬಿಬ್ಬರು ನೆಂಟರು ಮತ್ತು ಸ್ನೇಹಿತರು-ಹೀಗೆ ನಾಲ್ಕು ಜನ ಹೆಂಗಸರು ಇಬ್ಬರು ಗಂಡಸರು ಜೊತೆಯಾಗಿ ಕಾಶೀಯಾತ್ರೆಗೆ ಹೊರಡಲು ಸಿದ್ಧರಾದರು. ಆ ವೇಳೆಗೆ ರಜವೂ ಮಂಜೂರಾಗಿ ಬಂದೇಬಿಟ್ಟಿದ್ದರಿಂದ ತಾ. 30-1-1922ನೇ ಮಾಘ ಶುಕ್ಲ ತೃತೀಯಾ ಸೋಮವಾರ ರಾಯರು ಕಾಶೀಯಾತ್ರೆಗಾಗಿ ಪ್ರಯಾಣಬೆಳೆಸಿದರು. *

## ದೊಡ್ಡಹೆಜ್ಜಾಜಿ ಸೀತಾರಾಮಶಾಸ್ತ್ರಿಗಳು :

ರಾಯರ ಜೊತೆ ಕಾಶೀಯಾತ್ರೆಗೆ ಹೊರಟಿದ್ದ ಮತ್ತೊಬ್ಬ ಗಂಡಸರೆಂದರೆ ದೊಡ್ಡ ಹೆಜ್ಜಾಜಿ ಶ್ರೀ ಸೀತಾರಾಮಶಾಸ್ತ್ರಿಗಳೆಂಬವರು. ಇವರ ವಿಷಯವನ್ನು ಹಿಂದೆ ಸ್ವಲ್ಪ ಪರಾಮರ್ಶಿಸಿದೆ. ಇವರು ದೊಡ್ಡಬಳ್ಳಾಪುರ ತಾ. ದೊಡ್ಡಹೆಜ್ಜಾಜಿ ಗ್ರಾಮದವರು. ಇವರು ಅಪ್ಪರ್ ಸೆಕೆಂಡರಿ ಪ್ಯಾಸ್ ಮಾಡಿದ್ದರು. ಜೊತೆಗೆ ಪೂರ್ವಿಕರಿಂದ ಕಲಿತ ಸಾಹಿತ್ಯ, ಜ್ಯೋತಿಷ್ಯ, ಸಂಗೀತಗಳಲ್ಲೂ ಪರಿಶ್ರಮವನ್ನು ಹೊಂದಿದ್ದರು. ಬಹಳ ಭಾವುಕರು. ಬರಕದ ರಾಮೋತ್ಸವ ಭಜನೆಗಳಲ್ಲಿ ಭಾಗವಹಿಸಿದ್ದರು. ಹರಿಕಥೆಗಳನ್ನು ಮಾಡುತ್ತಿದ್ದರು. ಇವರ ಸಾತ್ತ್ವಿಕತನದಿಂದ ಇವರ ಮನೆಯವರೆಲ್ಲರೂ ಪ್ರಭಾವಿತರಾಗಿದ್ದರು. ಇವರು ತಿಪಟೂರು ಶ್ರೀ ಸೂರಪ್ಪನವರ ಪರಿಚಯ ಮಾಡಿಕೊಂಡು ಅವರೊಡನೆ ಕೆಲವು ಕಾಲವಿದ್ದರು. ಕನಸಿನಲ್ಲಿ ಇವರಿಗೆ ಯಾರೋ ಮಹನೀಯರು ರಾಮನಾಮವನ್ನು ಉಪದೇಶಿಸಿದರಂತೆ. ಶ್ರೀ ಸೂರಪ್ಪನವರ ಬಳಿಗೆ ಬಂದು ಅವರಲ್ಲಿದ್ದ ಫೋಟೋವನ್ನು ನೋಡಿ "ಇವರೇ ನನಗೆ ಕನಸಿನಲ್ಲಿ ರಾಮನಾಮವನ್ನುಪದೇಶಿಸಿದ ಮಹಾತ್ಮರು; ಇವರು ಯಾರು?" ಎಂದು ಕೇಳಿದಾಗ ಅವರು ಬ್ರಹ್ಮಚೈತನ್ಯ ಸದ್ಗುರುಮಹಾರಾಜರೆಂದು ತಿಳಿದು ಬರುತ್ತಲೂ ಆಶ್ಚರ್ಯವಾಯಿತಂತೆ. ಹೀಗೆ ಇವರಿಗೆ ಕನಸಿನಲ್ಲೇ ಮಹಾರಾಜರ ಅನುಗ್ರಹವಾಗಿತ್ತು. ಅಂತೂ ಸತ್ಪುರುಷರ ವರ್ಗಕ್ಕೆ ಸೇರಿದ ಶ್ರೀ ಸೀತಾರಾಮಶಾಸ್ತ್ರಿಗಳು ರಾಯರಿಗೆ ಹಿಂದೆಯೇ ಪರಿಚಿತರಾಗಿದ್ದರು.

ರಾಯರ ಕಾಶೀಯಾತ್ರೆಯ ವೃತ್ತಾಂತವನ್ನು ತಿಳಿದು ತಾವೂ ಅವರೊಡನೆ ಹೊರಟುಬಿಟ್ಟರು. ಆದರೆ ಅವರಲ್ಲಿ ಹಣವೇನೂ ಇರಲಿಲ್ಲ. 'ಏನು ಮಾಡುತ್ತೀರಿ?' ಎಂದದದ್ದಕ್ಕೆ ದೇವರಿದ್ದಾನೆ, ನೋಡೋಣ'- ಎಂದುಬಿಟ್ಟರಂತೆ. ಕೊನೆಗೆ ರಾಯರ

---

* ರಾಯರು ಸಂನ್ಯಾಸಸ್ವೀಕಾರಮಾಡಿದ ಅನಂತರ 1956ರಲ್ಲಿ ಒಂದು ಬಾರಿ ಮತ್ತೆ ಕಾಶೀಯಾತ್ರೆಯನ್ನು ಮಾಡಿದರು. ಪುನಃ 1966ನೇ ಸೆಪ್ಟೆಂಬರ್ 30 ರಂದು ಕಾಶೀಯಾತ್ರೆಗಾಗಿ ಹೊರಟು ತಾ. 4-12-66ರಂದು ಕಾಶಿಯನ್ನು ಸೇರಿ 12-12-66ರ ಪೂರ ಅಲ್ಲಿದ್ದರು. ಈ ರೀತಿ ಮೂರುಬಾರಿ ಕಾಶೀಯಾತ್ರೆ ಮಾಡಿದ ಮಹನೀಯರಿವರು. ಮೂರನೆಯ ಬಾರಿಗೆ ಹೊರಟಾಗ ಅವರಿಗೆ ವಯಸ್ಸು 87 ವರ್ಷಗಳಾಗಿತ್ತು. ಆದರೂ ಅವರ ಸತ್ಸಂಕಲ್ಪವು ನೆರವೇರಿರುತ್ತದೆ.

ಪರಿವಾರದಲ್ಲಿದ್ದವರೆಲ್ಲ ಸ್ವಲ್ಪ ಸ್ವಲ್ಪ ಖರ್ಚುಹಾಕಿಕೊಂಡು ಒಬ್ಬ ಬ್ರಾಹ್ಮಣನಿಗೆ ಕಾಶೀಯಾತ್ರೆ ಮಾಡಿಸಿದ ಫಲವು ಬರುವದೆಂತ ಭಾವಿಸಿ ಕರೆದುಕೊಂಡು ಹೊರಟರು. ರಾಯರಿಗೆ ಮಾತ್ರ ಬರೀ ಹೆಂಗಸರ ಜೊತೆಗೆ ಒಬ್ಬರು ಗಂಡಸರ ಸಹಾಯವೂ ಯಾತ್ರೆಯಲ್ಲಿ ದೊರೆತದ್ದು ಬಹಳ ಅನುಕೂಲವಾಯಿತು. ಈ ಸಹಾಯವನ್ನು ದೇವರೇ ಒದಗಿಸಿದ್ದಾನೆಂದು ರಾಯರು ಭಾವಿಸಿಕೊಂಡರು.

ಈ ಸಲದ ಕಾಶೀಯಾತ್ರೆಯು ಹೆಣ್ಣುಮಕ್ಕಳ ಜೊತೆಯಲ್ಲಾದದ್ದರಿಂದ ಕೇವಲ ಕರ್ಮಪ್ರಧಾನವಾಗಿತ್ತು-ಎಂದು ರಾಯರು ತಿಳಿಸುತ್ತಾರೆ. ಅಲ್ಲಲ್ಲಿ ನದೀಸ್ನಾನ, ತೀರ್ಥವಿಧಿಯನ್ನು ಮಾಡುವದು, ದೇವರದರ್ಶನ, ಕಾಣಿಕೆಯನ್ನೊಪ್ಪಿಸುವದು-ಹೀಗೆಯೇ ಬಲುಮಟ್ಟಿಗೆ ನಡೆಯಿತು. ದೇಶಪರಿಚಯ, ಭಾಷಾ ಹಾಗೂ ಆಚಾರಪ್ರಭೇದಗಳ ಪರಿಚಯಗಳೂ ಆದವು. ಆದ್ದರಿಂದ ರಾಯರು ಯಾತ್ರೆಗೆ ಹೋಗಿದ್ದ ಸ್ಥಳಗಳನ್ನು ಮಾತ್ರ ನಿರ್ದೇಶಿಸುವೆವು. ಬೆಂಗಳೂರಿನಿಂದ ಹೊರಟು ಹರಿಹರ, ಮೀರಜ್, ನರಸೋಬವಾಡಿ, ಮುಂದೆ ಪೂನಾ ಮಾರ್ಗವಾಗಿ ನಾಸಿಕ, ತ್ರಿಯಂಬಕಗಳನ್ನು ಸಂದರ್ಶಿಸಿದರು. ಮುಂದೆ ಖಾಂಡ್ವಕ್ಕೆ ಹೋಗಿ ಓಂಕಾರೇಶ್ವರ ಕ್ಷೇತ್ರಕ್ಕೆ ಹೋದರು. ಅಲ್ಲಿಂದ ಮಥುರೆ, ಗೋಕುಲ- ನೋಡಿಕೊಂಡು ಪ್ರಯಾಗಕ್ಕೆ ಹೋದರು. ಅಲ್ಲಿನ ಯಾತ್ರಾವಿಧಾನಗಳೆಲ್ಲ ಪೂರೈಸಿದ ಮೇಲೆ ಮುಂದೆ ಅಯೋಧ್ಯೆಯನ್ನು ನೋಡಿಕೊಂಡು ಕಾಶೀಕ್ಷೇತ್ರವನ್ನು ತಲುಪಿದರು. ಕಾಶಿಯಲ್ಲಿ ದೇವರ ದರ್ಶನಾದಿಗಳು ಪೂರೈಸಿದ ಅನಂತರ ನಡುವೆ ಶಿವರಾತ್ರಿ ಬಂದದ್ದರಿಂದ ಅದನ್ನೂ ಮುಗಿಸಿಕೊಂಡು ಹತ್ತು ದಿನಗಳು ಅಲ್ಲಿದ್ದು ಮುಂದೆ ಗಯಾಕ್ಕೆ ಹೋದರು. ಅಲ್ಲಿಂದ ಖರಗ್‌ಪುರ ಮಾರ್ಗವಾಗಿ ಪುರಿಗೆ ಬಂದರು. ಪುರಿಯಿಂದ ವಿಜಯನಗರ, ರಾಜಮಹೇಂದ್ರಿ, ನಂದ್ಯಾಲ-ಇವುಗಳನ್ನು ನೋಡಿಕೊಂಡು ಗುಂತಕಲ್ ಮಾರ್ಗವಾಗಿ ಬೆಂಗಳೂರಿಗೆ ಹಿಂತಿರುಗಿದರು. ಈ ಪ್ರಯಾಣದ ಅನುಭವವನ್ನು ರಾಯರು ತಿಳಿಸುವದರ ಸಾರವಿಷ್ಟು: ಉತ್ತರ ದೇಶದಲ್ಲಿ ದಕ್ಷಿಣ ದೇಶದಲ್ಲಿರುವಷ್ಟು ಕರ್ಮಾಚರಣೆಯಿಲ್ಲ. ಆದರೆ ಭಕ್ತಿಶ್ರದ್ಧೆಗಳಿಂದ ಆ ದೇಶದ ಜನರು ಭಗವಂತನ ಭಜನೆಯಲ್ಲಿ ನಿರತರಾಗಿರುವರು. ಉತ್ತರ ದೇಶದಲ್ಲಿರುವ ನಿಜವಾದ ಸಾಧುಸತ್ಪುರುಷರನ್ನು ಯಾತ್ರೆಯಲ್ಲಿ ಅವಶ್ಯವಾಗಿ ಕಾಣಬೇಕಾಗಿತ್ತು. ಅದು ಈ ಸಲ ರಾಯರಿಗೆ ಸಾಧ್ಯವಾಗಲಿಲ್ಲ. ಬಾಹ್ಯಕರ್ಮವು ನಮ್ಮನ್ನು ಸಂಸಾರದಿಂದ ದಾಟಿಸಲಾರದು-ಎಂದು ಅವರಿಗೆ ಮನವರಿಕೆಯಾಯಿತು.

## ಬೆಂಗಳೂರಿನಿಂದ ಹೊರಗೆ ಕೆಲಕಾಲ :

ರಾಯರು ಕಾಶೀಯಾತ್ರೆಯನ್ನು ಮುಗಿಸಿಕೊಂಡು ಬರುವ ವೇಳೆಗೆ ಮತ್ತೆ ಅವರಿಗೆ ಮಧುಗಿರಿಗೆ ವರ್ಗವಾಗಿತ್ತು. ಈ ಬಾರಿ ರಾಯರು ಮಧುಗಿರಿಗೆ ಹೋದಂತೆಯೇ ಅಲ್ಲವೆಂದು ಹೇಳಬೇಕು. ಏಕೆಂದರೆ ಅಲ್ಲಿಗೆ ಹೋಗಿ ಒಂದು ತಿಂಗಳು ರಜಾಕ್ಕೆ ಬರೆದುಕೊಂಡು ಪುನಃ ಬೆಂಗಳೂರಿಗೇ ಬಂದುಬಿಟ್ಟರು. ಮನೆಯಲ್ಲೇ ರಾಮಾಯಣ ಸುಂದರಕಾಂಡ ಪಾರಾಯಣ

ಮತ್ತು ವೇದಾಂತ ಗ್ರಂಥಕಾಲಕ್ಷೇಪಗಳಲ್ಲಿ ಆ ಕಾಲವನ್ನು ಕಳೆದರು. ಸುಂದರಕಾಂಡದ ಮಂಗಳದ ವೇಳೆಗೆ ರಾಯರಿಗೆ ಪುನಃ ಬೆಂಗಳೂರಿಗೇ ವರ್ಗವಾಗಿರುವದಾಗಿ ಆರ್ಡರು ಬಂತು. ಆದರೆ ರಾಯರು ಹೋಗಿ ವಿಚಾರಿಸಿ ಡ್ಯೂಟಿಗೆ ಹಾಜರಾಗುವದರಲ್ಲೇ ಅದು ಬೇರೊಬ್ಬರಿಗೆ ಆಗಿಬಿಟ್ಟು ರಾಯರನ್ನು ಚೆನ್ನಪಟ್ಟಣಕ್ಕೆ ವರ್ಗಮಾಡಿದ್ದರು. ದೈವಗತಿಯು ವಿಚಿತ್ರ!

## ಚನ್ನಪಟ್ಟಣದ ವೃತ್ತಾಂತ :

ರಾಯರು ಚನ್ನಪಟ್ಟಣಕ್ಕೆ ಹೊರಡುವ ವೇಳೆಗೆ ಬೆಂಗಳೂರು ಚಾಮರಾಜಪೇಟೆಯಲ್ಲಿ ಒಂದು ಮನೆಯನ್ನು ಖರೀದಿಗೆ ಕೊಳ್ಳಲು ಏರ್ಪಾಡುಮಾಡಿದ್ದರು. ಅದಕ್ಕೆ ಸಾಲದೆ ಬಂದ ಹಣಕ್ಕಾಗಿ ಅದೇ ಮನೆಯನ್ನು ಬೆಂಗಳೂರಿನ ಹೌಸ್‌ಬಿಲ್ಡಿಂಗ್ ಸೊಸೈಟಿಗೆ ಆಧಾರಮಾಡಿ ಸಾಲವನ್ನು ಕೇಳಿದ್ದರು. ಹೀಗಾಗಿ ವ್ಯವಹಾರವು ಪೂರ್ತಿಯಾಗಿರಲಿಲ್ಲ. ಅಷ್ಟರಲ್ಲೇ ಚನ್ನಪಟ್ಟಣಕ್ಕೆ ಹೊರಟರು. ಚೆನ್ನಪಟ್ಟಣದಲ್ಲಿ ಹೊಸ ಸ್ಕೂಲು ಪ್ರಾರಂಭವಾಗಿದ್ದು ಅದಕ್ಕೆ ಮೇಲಧಿಕಾರಿಗಳಿಂದ ಎಲ್ಲಾ ಸೌಕರ್ಯಗಳೂ ಬಂದಿದ್ದವು. ಹೆಚ್ಚಿನ ಉಪಾಧ್ಯಾಯರು ಬಂದರು. ರಾಯರಿಗೂ ಸಾಕಷ್ಟು ವಿರಾಮವು ದೊರೆಯಿತು. ಉಳಿದ ಸಹೋಪಾಧ್ಯಾಯರುಗಳೂ ರಾಯರಿಗೆ ಹೊಂದಿಕೊಂಡಿದ್ದರಿಂದ ಕೆಲಸವೇನೂ ಕಷ್ಟವಾಗಲಿಲ್ಲ. ರಾಯರು ಈಗ ದೊರೆತ ವಿರಾಮವನ್ನು ವೇದಾಂತಗ್ರಂಥಗಳ ರಚನೆಗೆ ವಿನಿಯೋಗಿಸಲಾರಂಭಿಸಿದರು. ಉಪನಿಷತ್ತುಗಳು ಎಂದರೆ ಈಶ, ಮುಂಡಕ, ಪ್ರಶ್ನ-ಈ ಉಪನಿಷತ್ತುಗಳ ಭಾಷ್ಯವನ್ನು ಅನುವಾದ, ಟಿಪ್ಪಣಿ, ಪ್ರಮಾಣ ಸ್ಥಾನಸೂಚಿಕೆ, ಗ್ರಂಥದ ಸಾರ ಮುಂತಾದ ಸೌಕರ್ಯಗಳೊಡನೆ ಬರೆದು ಸಿದ್ಧಗೊಳಿಸಿದರು. **ಅಧ್ಯಾತ್ಮ ಗ್ರಂಥಾವಳಿಯು** ಬೆಳೆಯಲಾರಂಭಿಸಿತು. ಮನೆಯಲ್ಲಿ ಸಾಯಂಕಾಲದ ವೇಳೆಯಲ್ಲಿ ಮಹಾಭಾರತವನ್ನು ಅನುಕ್ರಮವಾಗಿ ಓದಲಾರಂಭಿಸಿ ಕೆಲವು ಶ್ಲೋಕಗಳನ್ನು ಆರಿಸಿ ಒಂದು ಪುಸ್ತಕದಲ್ಲಿ ಬರೆದುಕೊಳ್ಳುತ್ತಿದ್ದರು. ಇದರಿಂದ ಮುಂದೆ ಗ್ರಂಥರಚನೆಗೆ ಬಹಳ ಸಹಾಯವಾಯಿತು. ಚೆನ್ನಪಟ್ಟಣದಲ್ಲಿ ಕೆಲವು ದಾಸಬಣಜಿಗಜಾತಿಯ ಅಬ್ರಾಹ್ಮಣರನ್ನು ಯಾರೋ ಅಯ್ಯಂಗಾರ್ಯರು ಶುದ್ಧಾಚಾರಕ್ಕೆ ತಿರುಗಿಸಿದ್ದರಿಂದ ಅವರು ದಿನವೂ ಬೆಳಗ್ಗೆ ಎದ್ದು ಕೊಳದಲ್ಲಿ ಸ್ನಾನಮಾಡಿ ಮುಕುಂದಮಾಲಾಸ್ತೋತ್ರವನ್ನು ಪಠನಮಾಡಿಕೊಂಡು ಬರುತ್ತಿದ್ದುದನ್ನು ನೋಡಿ ರಾಯರಿಗೆ ಬಹಳ ಹರ್ಷವಾಗಿತ್ತು. ಅದೇ ಊರಿನಲ್ಲಿ ರಾಯರ ಪಕ್ಕದ ಮನೆಯಲ್ಲಿ ವಾಸವಾಗಿದ್ದ ಥಿಯಾಸಫಿಸ್ಟ್ ಶ್ರೀ ಸೂರ್ಯನಾರಣಪ್ಪ ಎಂಬುವರು ರಾಯರಿಗೆ `Free Thought' ಎಂಬ ಪುಸ್ತಕವನ್ನು ಕೊಟ್ಟಿದ್ದರು. ಅದರಲ್ಲಿದ್ದ ಕೆಲವು ಸೂಚನೆಗಳನ್ನು ಉಪಯೋಗಿಸಿಕೊಂಡು ರಾಯರು ಉಪನಿಷದ್ವಚನಗಳ ಆಧಾರದಿಂದ **'ಸರ್ವೇಷ್ಟಸಿದ್ಧಿ'** ಎಂಬ ಗ್ರಂಥವನ್ನು ಬರೆದರು. ಇದೂ ಅಧ್ಯಾತ್ಮಗ್ರಂಥಾವಳಿಯಲ್ಲಿ ಸೇರಿತು. ಈ ರೀತಿ ಒಂದು ವರ್ಷವು ಕಳೆದ ನಂತರ 1923 ರಲ್ಲಿ ರಾಯರಿಗೆ ಬೆಂಗಳೂರು

ಚಾಮರಾಜೇಂದ್ರ ಸಂಸ್ಕೃತ ಮಹಾಪಾಠಶಾಲೆಗೆ ಇಂಗ್ಲಿಷು ಮತ್ತು ಸಂಸ್ಕೃತಉಪಾಧ್ಯಾಯರ ಸ್ಥಾನಕ್ಕೆ ವರ್ಗವಾಯಿತು. ಇದರಿಂದ ರಾಯರಿಗೆ ಹೆಚ್ಚು ಅನುಕೂಲವಾಯಿತು.

## ಬೆಂಗಳೂರು ಸಂಸ್ಕೃತಕಾಲೇಜ್ :

ರಾಯರು ಬೆಂಗಳೂರಿಗೆ ಬರುವ ವೇಳೆಗೆ ಸೊಸೈಟಿಯ ಸಾಲವು ಮಂಜೂರಾಗಿತ್ತು. ಮನೆಯನ್ನು ಖರೀದಿಗೆ ತೆಗೆದುಕೊಂಡು ಸ್ವಂತಮನೆಯಲ್ಲೇ ರಾಯರು ವಾಸಮಾಡಲಾರಂಭಿಸಿದರು. ಕಾಲೇಜಿನ ಕೆಲಸವು ರಾಯರಿಗೆ ಬಹಳ ತೃಪ್ತಿಕರವಾಗಿತ್ತು. ಸಂಸ್ಕೃತವಿಭಾಗಕ್ಕೆ ಕೆಲವು ಕಾವ್ಯ ಪಾಠಗಳನ್ನು ಹೇಳಲು ರಾಯರಿಗೆ ಕೊಟ್ಟಿದ್ದರು. ಇಂಗ್ಲಿಷು ಸ್ಕೂಲುಪದ್ಧತಿಯಂತೆ ಪಾಠ ಬೋಧನೆಯನ್ನು ಮಾಡಿದ್ದರಿಂದ ಹುಡುಗರಿಗೆ ಉತ್ಸಾಹಕರವಾಗಿತ್ತು. ಆದರೂ ವಿರಾಮವು ಸಾಕಷ್ಟು ದೊರೆಯುತ್ತಿತ್ತು. ಆಗ್ಗೆ ಲೈಬ್ರರಿಯಿಂದ ಸಂಸ್ಕೃತಗ್ರಂಥಗಳನ್ನು ತಂದು ಓದುತ್ತಿದ್ದರು. ಕಾಲೇಜಿನ ಪಂಡಿತರುಗಳನ್ನೆಲ್ಲ ಪರಿಚಯಮಾಡಿಕೊಂಡರು. ಅವರಲ್ಲಿ ವೇ||ಬ್ರ|| ಶ್ರೀ ಗಳಾದ ದೇಶಿಕಾಚಾರ್ಯರು, ವಿ.ಟಿ. ತಿರುನಾರಾಣಯ್ಯಂಗಾರ್ಯರು, ಕೃಷ್ಣಾಚಾರ್ಯರು, ಯಜ್ಞವಿಠಲಚಾರ್ಯರು ಇವರು ಮುಖ್ಯರಾದವರು. ರಾಯರಿಗೆ ಪ್ರತಿದಿನವೂ ಶ್ರೀ ಅಯ್ಯರ್‌ರವರ ದರ್ಶನವೂ ದೊರೆಯುವ ಯೋಗವು ಲಭಿಸಿತು.

## "ಅಧ್ಯಾತ್ಮಪ್ರಕಾಶ" ಮಾಸಪತ್ರಿಕೆಯ ಜನ್ಮೋತ್ಸವ :

ರಾಯರು 1923ನೇ ಜನವರಿಯಲ್ಲಿ ಸಂಸ್ಕೃತ ಕಾಲೇಜಿಗೆ ವರ್ಗವಾಗಿ ಬಂದಿದ್ದರು. ಅನಂತರ ಕೇವಲ ಮೂರು ತಿಂಗಳೊಳಗಾಗಿ 'ಅದ್ಯಾತ್ಮಪ್ರಕಾಶ' ಪತ್ರಿಕೆಯ ಪ್ರಕಟನೆಯ ಸಂಕಲ್ಪವನ್ನು ಕೈಗೊಂಡರು. ಅಂದರೆ ಅವರ ಉತ್ಸಾಹವು ಹೇಗಿರಬೇಕೆಂಬುದನ್ನು ವಾಚಕರು ಊಹಿಸಬಹುದು. ಅಂತೂ 1923ನೆಯ ಮಾರ್ಚಿ ತಿಂಗಳಿನಲ್ಲಿ **ರುಧಿರೋದ್ಗಾರಿ ಸಂವತ್ಸರದ ಚೈತ್ರ ಶುಕ್ಲ ನವಮೀ (ರಾಮನವಮೀ) ದಿನದಂದು ಅಧ್ಯಾತ್ಮ ಪ್ರಕಾಶ ಮಾಸ ಪತ್ರಿಕೆಯು ಜನ್ಮವನ್ನು ತಾಳಿತು.** ಈ ಘಟನೆಯು ಮುಂದೆ ಕಾರ್ಯಾಲಯವು ದೊಡ್ಡದಾಗಿ ಬೆಳೆದು ಶ್ರೀ ದಿಗ್ವಿಜಯರಾಮದೇವರ ಪ್ರತಿಷ್ಠೆಯಾಗಲು ನಾಂದಿಯಾಗಿತ್ತೆಂದು ಈಗ ಹೇಳಬೇಕಾಗಿದೆ. ಶ್ರೀರಾಮರ ಪ್ರತಿಷ್ಠೆಯ ವಿಚಾರವನ್ನು ಮುಂದೆ ಸಮಯಾನುಗುಣವಾಗಿ ಪ್ರಸ್ತಾಪಿಸುವೆನು. ಪತ್ರಿಕೆಯ ಮೊದಲನೆಯ (ಪ್ರಪ್ರಥಮ) ಸಂಚಿಕೆಯಲ್ಲಿ ಸಂಪಾದಕರ ವಿಜ್ಞಾಪನೆಯಲ್ಲಿ ಪತ್ರಿಕೆಯ ಉದ್ದೇಶವನ್ನು ಹೀಗೆ ತಿಳಿಸಲಾಗಿದೆ: "ಜಗತ್ತೆಲ್ಲ **ಅಧ್ಯಾತ್ಮ ಅಧಿಭೂತ** ಎಂದು ಎರಡು ದೊಡ್ಡ ಪಂಗಡವಾಗಿರುವದು. ನಮ್ಮ ಪೂರ್ವಜರು ಈ ಎರಡು ಪ್ರಪಂಚಗಳ ಬೆಲೆಯನ್ನೂ ಕಟ್ಟಿ ಅದಕ್ಕೆ ತಕ್ಕಂತೆ ವ್ಯವಹಾರವನ್ನು ನಡೆಸುತ್ತಿದ್ದುದರಿಂದ ಸುಖವನ್ನು ಹೊಂದಿದ್ದರು. ಆದರೆ ಈಗ ನಮಗೆ ಕಾಲವಶದಿಂದ ಪ್ರಪಂಚದ ಮುಖ್ಯಭಾಗವಾದ

'ಅಧ್ಯಾತ್ಮ'ವು ಕಣ್ಮರೆಯಾಗಿದೆ. ಅಧಿಭೂತವೊಂದೇ ಪ್ರಧಾನವಾಗಿ ತೋರುತ್ತಿದೆ. ಇದರಿಂದ ಸಮಾಜದ ಶಾಂತಿಯೆಲ್ಲ ಕದಡಿ ಅನೇಕ ವಿಧವಾದ ರಾಜಕೀಯ ಪರಿವರ್ತನೆಗಳಿಂದ ಜನರ ಮನಸ್ಸೆಲ್ಲ ಅಲ್ಲೋಲಕಲ್ಲೋಲವಾಗಿಬಿಟ್ಟಿದೆ. ಇದರ ಪರಿಣಾಮವು ಅಧ್ಯಾತ್ಮ ವಿದ್ಯೆಯ ತವರುಮನೆಯಾದ ಭರತಖಂಡದಲ್ಲೂ ತಲೆದೋರಿರುತ್ತದೆ. ಆದ್ದರಿಂದ ಭೌತಿಕಸಂಪತ್ತಿನ ಸುಖವನ್ನು ಅನುಭವಿಸುವದಕ್ಕೆ ಅಧ್ಯಾತ್ಮ ವಿದ್ಯೆಯ ತಳಹದಿಯು ಬೇಕೆಂಬುದನ್ನು ನಮ್ಮ ಜನರಿಗೆ ಮತ್ತೆ ನೆನಪುಮಾಡಿಕೊಡುವ ಕಾಲವು ಈಗ ಒದಗಿರುತ್ತದೆ. ಅಧ್ಯಾತ್ಮವಿದ್ಯೆಯೆಂಬ ವೃಕ್ಷದ ತಾಯಿಬೇರೆಂದರೆ ವೇದಾಂತವು. ವೇದಾಂತಸಿದ್ಧಾಂತದ ಆವಾಸಸ್ಥಾನವು ಉಪನಿಷತ್ತುಗಳು. ಆದ್ದರಿಂದ ಅಧ್ಯಾತ್ಮವಿದ್ಯೆಗೆಲ್ಲ ಮೂಲವಾಗಿರುವ ಉಪನಿಷತ್ಸಿದ್ಧಾಂತವನ್ನೂ ಇದನ್ನು ಪರಿಪುಷ್ಟಿಗೊಳಿಸುವ ಮಿಕ್ಕ ದರ್ಶನಗಳನ್ನೂ ನಮ್ಮ ಕರ್ನಾಟಕಪ್ರಾಂತನಿವಾಸಿಗಳಿಗೆ ಪರಿಚಯಮಾಡಿಕೊಡಬೇಕೆಂಬ ಘನ ಉದ್ದೇಶದಿಂದ ಈ ಮಾಸಪತ್ರಿಕೆಯ ಪ್ರಕಾಶನಕ್ಕೆ ಕೈಹಾಕಿರುವೆವು. ಜಿಜ್ಞಾಸುಗಳಾಗಿರುವ ಮಹನೀಯರು ಪೂರ್ವಮಹರ್ಷಿಗಳ ಸೇವೆಯೂ ಅಧ್ಯಾತ್ಮ ವಿಚಾರದ ಕಾಲಕ್ಷೇಪವೂ ದೊರೆಯುವ ಈ ಸುಯೋಗವನ್ನು ಕಳೆದುಕೊಳ್ಳದೆ ತಮ್ಮ ಮಿತ್ರಮಂಡಲಿಯಲ್ಲೂ ಇದರ ಪ್ರಯೋಜನವನ್ನು ಮಾಡಿಕೊಟ್ಟು ನಮ್ಮ ಪ್ರಯತ್ನವನ್ನು ಸಫಲಗೊಳಿಸಬೇಕಾಗಿ ಬೇಡುತ್ತೇವೆ"

ಈ ಮೇಲಿನ ಧ್ಯೇಯವನ್ನು ಪತ್ರಿಕೆಯು ಈವರೆಗೂ ಸ್ವಲ್ಪವೂ ಲೋಪವಿಲ್ಲದಂತೆ ಕಾಪಾಡಿಕೊಂಡು ಬಂದಿರುವದು ಒಂದು ಮಹಾಪ್ರಯತ್ನವೇ ಸರಿ. ಎಷ್ಟೋ ಪತ್ರಿಕೆಗಳು ಅದರಲ್ಲೂ ಅಧ್ಯಾತ್ಮವಿಚಾರಪ್ರಧಾನವಾದವುಗಳು ಜನ್ಮತಾಳಿದ ಕೆಲವೇ ವರ್ಷಗಳಲ್ಲಿ ಕಣ್ಮರೆಯಾಗಿಬಿಡುತ್ತವೆ. ಆದರೆ ಕಳೆದ ಅರವತ್ತೈದು ವರ್ಷಗಳಿಂದಲೂ (ಮಧ್ಯೆ ಒಂದೆರಡು ಬಾರಿ ಪತ್ರಿಕೆಯು ಸ್ವಲ್ಪ ಕಾಲ ಅದೃಶ್ಯವಾಗಿದ್ದರೂ) ನಿರಂತರವಾಗಿ ಅಧ್ಯಾತ್ಮವಿಚಾರದ ಪ್ರಚಾರವನ್ನೇ ಕೈಗೊಂಡು ಅದಕ್ಕಾಗಿ ಮೀಸಲಾಗಿ ನಡೆದುಕೊಂಡು ಬಂದಿರುವ ಈ ಪತ್ರಿಕೆಯ ಇತಿಹಾಸವನ್ನು ನೋಡಿದರೆ ಇದು ಹುಟ್ಟಿದ ಕಾಲದ ಬಲವೇ ಇದಕ್ಕೆಲ್ಲ ಕಾರಣವೆಂದು ಧಾರಾಳವಾಗಿ ಹೇಳಬಹುದು. ಶ್ರೀರಾಮದೇವರ ಪ್ರಸಾದಿಂದ ಈ ಪತ್ರಿಕೆಯು ಹೀಗೆಯೇ ಚಿರಂಜೀವಿಯಾಗಿ ಬೆಳೆದು ಅಧ್ಯಾತ್ಮತತ್ತ್ವದ ಪ್ರಚಾರವನ್ನು ಮಾಡುವದರ ಮೂಲಕ ಜನಸೇವೆಯನ್ನು ಮಾಡಲೆಂದು ಹಾರೈಸಿ ಈಗ ಪ್ರಕೃತವಿಚಾರಕ್ಕೆ ಬರೋಣ.

ರಾಯರು ಪತ್ರಿಕೆಯ ಮೊದಲನೆಯ ಸಂಚಿಕೆಯನ್ನು ಹೊರಡಿಸಿದ ಮೇಲೆ ಅದರ ಪ್ರಚಾರಕ್ಕಾಗಿ ಪ್ರಯತ್ನವನ್ನು ಪ್ರಾರಂಭಿಸಿದರು. ಪರಸ್ಥಳಗಳಲ್ಲಿ ಕೆಲವರಿಗೆ ಪತ್ರಿಕೆಯನ್ನು ಕಳುಹಿಸಿಕೊಟ್ಟು ಅಧ್ಯಾತ್ಮವಿದ್ಯಾಪ್ರಚಾರಕ್ಕೆ ಸಹಾಯಮಾಡಬೇಕೆಂದು ಕೇಳಿಕೊಂಡರು. ಅಲ್ಲಲ್ಲಿ ಕೆಲವರು ಸಹಾಯಮಾಡಿದರು. ಅವರಲ್ಲಿ ಹೊಳೆನರಸೀಪುರದ ಪ್ಲೀಡರ್ ಶ್ರೀ ಪಿ.ಎನ್. ನರಸಿಂಹಯ್ಯನವರೂ ಒಬ್ಬರು.

ಈ ಪತ್ರಿಕೆಯನ್ನು ಶೃಂಗೇರಿ ಜಗದ್ಗುರುಗಳ ಆಶೀರ್ವಾದಕ್ಕೆ ಪಾತ್ರವಾಗಿ ಮಾಡಬೇಕೆಂದು ರಾಯರಿಗೆ ಬಹಳ ಕುತೂಹಲವಿತ್ತು. ಆದ್ದರಿಂದ ವೈಶಾಖಮಾಸದ ರಜದಲ್ಲಿ ಶ್ರೀ ಚಿದಂಬರಯ್ಯನವರ ಜೊತೆಯಲ್ಲಿ ರಾಯರು ಶೃಂಗೇರಿಗೆ ಹೋದರು. ನಡುವೆ ತರೀಕೆರೆಯಲ್ಲಿಳಿದು 'ಆತ್ಮೋದ್ಧಾರಸಂಘ'ದಲ್ಲಿ ಉಪನ್ಯಾಸವೊಂದನ್ನು ಮಾಡಿದರು. ಆತ್ಮೋದ್ಧಾರಸಂಘವು ತರೀಕೆರೆಯ ಕೆಲವು ಜಿಜ್ಞಾಸುಗಳ ಸಹಕಾರದಿಂದ ಸ್ಥಾಪಿತವಾಗಿತ್ತು. ಶ್ರೀ ಡಿ.ಸಿ. ನಂಜಪ್ಪಭಾಗವತರು ಅದರ ಸಂಚಾಲಕರಾಗಿದ್ದರು. ಅವರು ಉತ್ಸಾಹದಿಂದ ಪ್ರತಿ ಏಕಾದಶಿಯೂ ಹರಿಕಥೆಯನ್ನು ಮಾಡುತ್ತಿದ್ದರು. ರಾಯರು ಶ್ರೀ ನಂಜಪ್ಪಭಾಗವತರನ್ನೂ ಜೊತೆಯಲ್ಲಿ ಕರೆದುಕೊಂಡು ಶೃಂಗೇರಿಗೆ ಹೋದರು. ಅಲ್ಲಿ ಜಗದ್ಗುರು ಶ್ರೀಚಂದ್ರಶೇಖರ ಭಾರತೀಸ್ವಾಮಿಗಳವರಿಗೆ ಆರೋಗ್ಯವು ಸರಿಯಾಗಿರಲಿಲ್ಲವಾಗಿ ಪತ್ರಿಕೆಗೆ ಯಾವ ಪ್ರೋತ್ಸಾಹವೂ ದೊರೆಯಲಿಲ್ಲ. ಶ್ರೀ ಡಿ.ಸಿ. ನಂಜಪ್ಪಭಾಗವತರು ರಾಯರಿಂದ ಅಲ್ಲಿಯೇ ಭಾಷ್ಯಶಾಂತಿಯನ್ನು ಮಾಡಿಸಿಕೊಂಡರು. ಅಲ್ಲಿ ಒಂದು ಸಣ್ಣ ಉಪನ್ಯಾಸವೂ ಶ್ರೀ॥ ಶೇಷಶಾಸ್ತ್ರಿಗಳ ಪ್ರೋತ್ಸಾಹದಿಂದ ನಡೆಯಿತು. ಬರುವಾಗ ಬಾಣಾವರದಲ್ಲಿ, ಅರಸೀಕೆರೆಯಲ್ಲಿ ಒಂದೆರಡು ಉಪನ್ಯಾಸಗಳನ್ನು ಮುಗಿಸಿಕೊಂಡು ಬೆಂಗಳೂರಿಗೆ ಹಿಂದಿರುಗಿದರು. ಪತ್ರಿಕೆಯು ಒಂದು ವರ್ಷ ನಡೆದು ನಿಂತುಹೋಯಿತು. ಮತ್ತೆ ಶ್ರೀಕ್ರೋಧನ ಸಂವತ್ಸರದ ಚೈತ್ರದಲ್ಲಿ ಪತ್ರಿಕೆಯು ತಲೆಯೆತ್ತಿತಾದರೂ ಕೇವಲ ನಾಲ್ಕು ತಿಂಗಳಕಾಲ ನಡೆದು ನಿಂತುಹೋಯಿತು. ಅನಂತರ ಆರು ವರ್ಷಕಾಲ ಪತ್ರಿಕೆಯು ಪ್ರಕಟವಾಗಲಿಲ್ಲ. ಮುಂದೆ 1931ನೆಯ ಸೆಪ್ಟೆಂಬರ್‌ನಲ್ಲಿ ಪತ್ರಿಕೆಯು ಪುನಃ ಪ್ರಕಟವಾಯಿತು. ಅಲ್ಲಿಯುವರೆಗಿನ ಕೆಲವು ಘಟನೆಗಳನ್ನು ಇಲ್ಲಿ ಪರಿಚಯ ಮಾಡಿಕೊಡಲಾಗುವದು.

ಕೋಲಾರ ಜಿಲ್ಲಾ ಆವನೀಮಠಕ್ಕೆ ಒಬ್ಬ ಉತ್ತರಾಧಿಕಾರಿಗಳು ಬೇಕೆಂಬ ವಿಚಾರವು ಪ್ರಸ್ತಾಪಿಸಲ್ಪಟ್ಟಾಗ ಶ್ರೀ ಅಯ್ಯರ್‌ರವರು ರಾಯರನ್ನು ಕೇಳಿದರಂತೆ. ರಾಯರು 'ಮಠದ ಗೋಜು ನನಗೇಕೆ?' ಎಂದಾಗ, ಅಯ್ಯರ್‌ರವರು 'ಹಾಗಲ್ಲ, ಅದನ್ನು ಆದರ್ಶಸಂಸ್ಥೆಯಾಗಿ ಮಾಡೋಣ, ನಾನೂ ದುಡಿಯುತ್ತೇನೆ' ಎಂದು ಪ್ರೋತ್ಸಾಹಿಸಿದರು. ಅಯ್ಯರ್‌ರವರು ಹಾಗೆಯೇ ವಿಷಯವನ್ನು ಬಲಪಡಿಸಿ ಸರ್ಕಾರಕ್ಕೆ ಅರ್ಜಿಯನ್ನು ಹಾಕಿಸಿದ್ದರು. ಆದರೆ ಆ ಪೀಠಕ್ಕೆ ಅಸ್ಖಲಿತಬ್ರಹ್ಮಚಾರಿಗಳೇ ಬರತಕ್ಕದ್ದೆಂದು ಕಮಿಟಿಯಲ್ಲಿ ನಿರ್ಣಯವಾದ್ದರಿಂದ ರಾಯರಿಗೆ ಮೊದಲೇ ಬೇಡವಾಗಿದ್ದ ಮಠಾಧಿಪತ್ಯ ವಿಷಯವು ಹಾಗೆಯೇ ನಿಂತುಹೋಯಿತು.

ಆದರೆ ಇದರಿಂದ ರಾಯರಿಗೆ ಒಂದು ಅನುಕೂಲವಾಯಿತು. ಏನೆಂದರೆ ಮಠಕ್ಕೆ ಹೋಗುವದು ಸಂಭಾವಿತವೆಂದು ತೋರುತ್ತಿದ್ದ ಕಾಲದಲ್ಲಿ ರಾಯರು ತಮ್ಮ ಮಕ್ಕಳಿಬ್ಬರಿಗೂ ಮದುವೆ ಮಾಡಿಬಿಡಬೇಕೆಂದು ಯೋಚಿಸಿದರು. ಅದಕ್ಕೆ ತಕ್ಕಂತೆ ವರಾನ್ವೇಷಣ, ಕನ್ಯಾನ್ವೇಷಣಗಳನ್ನು ನಡೆಸಿ ಎರಡನೆಯ ಮಗಳಾದ ಸೌ॥ ಗಿರಿಜೆಗೆ ಚಿ॥ ಚಂದ್ರಶೇಖರಯ್ಯನೆಂಬ ಬಿ.ಎ. ಪ್ಯಾಸುಮಾಡಿದ ವರನನ್ನೂ ಮಗನಾದ ಚಿ. ನರಸಪ್ಪನಿಗೆ ಶ್ರೀ ಸೀತಾರಾಮಯ್ಯನವರೆಂಬ

ತಮ್ಮ ಸಂಬಂಧಿಗಳ ಪುತ್ರಿಯಾದ ಸೌ॥ ಸರೋಜಮ್ಮನೆಂಬ ವಧುವನ್ನೂ ಗೊತ್ತುಮಾಡಿದರು. ಮೊದಲು ಮಗಳ ವಿವಾಹವನ್ನು ನೆರವೇರಿಸಿ ಅನಂತರ ಮಗನ ಮದುವೆಯನ್ನೂ ಮಾಡಿದರು. ಎರಡು ಉತ್ಸವಗಳೂ ವಿಜೃಂಭಣೆಯಿಂದ ನಡೆದವು. ಸಂನ್ಯಾಸವನ್ನು ತೆಗೆದುಕೊಳ್ಳುವವನು ಮಾಡಬೇಕಾದ ಕರ್ತವ್ಯಗಳನ್ನೆಲ್ಲ ಮಾಡಿ ಜವಾಬ್ದಾರಿಯನ್ನೆಲ್ಲ ತೃಪ್ತಿಕರವಾಗಿ ನಿರ್ವಹಿಸಿ ರಾಯರು ಎಲ್ಲವನ್ನೂ ವ್ಯವಸ್ಥೆ ಮಾಡಿದರು. ಪತ್ನೀವಿಯೋಗವಾದ ಅನಂತರ ರಾಯರು ಬೇರೊಂದು ಮದುವೆಯನ್ನು ಮಾಡಿಕೊಳ್ಳಬಹುದಾದ ಅವಕಾಶವಿದ್ದರೂ ಅದಕ್ಕೆ ಮನಸ್ಸು ಮಾಡದೆ ಏಷಣೆಗಳನ್ನೆಲ್ಲ ತ್ಯಾಗಮಾಡಿ ಧೀರರಾಗಿದ್ದರು. ಈಗಲಂತೂ ಎಲ್ಲಾ ವ್ಯವಹಾರಗಳನ್ನೂ ಸುಗಮವಾಗಿ ಪೂರೈಸಿ ಸಂನ್ಯಾಸಕ್ಕೆ ಸಿದ್ಧರಾಗಿಯೇ ಬಿಟ್ಟರು. ಆದರೆ ದೈವಯೋಗದಿಂದ ಆಗ ತಪ್ಪಿದ ಅವಕಾಶವು ಮುಂದೆ 1948ರವರೆಗೂ ಮತ್ತೆ ಒದಗಲಿಲ್ಲ. ಆದರೂ ರಾಯರು ಸಂನ್ಯಾಸಿಗಳಂತೆಯೇ ನಿಃಸ್ಪೃಹರಾಗಿದ್ದು ಕಾರ್ಯಾಲಯದ ಬೆಳವಣಿಗೆಯನ್ನು ಹೇಗೆ ಮಾಡಿದರೆಂಬುದನ್ನು ವಾಚಕರು ಮುಂದೆ ಕಾಣಬಹುದು.

ವೇ॥ ಬ್ರ॥ ಶ್ರೀ ವಿರೂಪಾಕ್ಷಶಾಸ್ತ್ರಿಗಳವರು ಆಗ್ಗೆ ಬೆಂಗಳೂರಿನಲ್ಲಿ ಹೆಚ್ಚಿನ ಯಶಸ್ಸನ್ನು ಗಳಿಸಿದ್ದರು. 1922ರಲ್ಲೇ ಶ್ರೀಮನ್ಮಹಾರಾಜರು ಅವರಿಗೆ 'ವಿದ್ಯಾನಿಧಿ' ಎಂಬ ಬಿರುದನ್ನು ದಿವ್ಯವಸ್ತ್ರಭೂಷಣಾದಿಗಳೊಡನೆ ಕೊಟ್ಟಿದ್ದರು. 1923ನೆಯ ಜೂನ್ ತಿಂಗಳಲ್ಲಿ ಐದನೆಯ ಜಾರ್ಜ್ ಚಕ್ರವರ್ತಿಗಳಿಂದ ಅವರಿಗೆ 'ಮಹಾಮಹೋಪಾಧ್ಯಾಯ' ಎಂಬ ಬಿರುದೂ ಬಂದಿತ್ತು. ಅವರು ಸ್ವಲ್ಪಭಾಗ ಪಂಚಪಾದಿಕಾ ಪಾಠವನ್ನು ರಾಯರಿಗೂ ಹೇಳಿದ್ದರು. ಮುಂದೆ ಅವರು 1926ರಲ್ಲಿ ಮೈಸೂರು ಮಹಾರಾಜ ಸಂಸ್ಕೃತ ಮಹಾಪಾಠಶಾಲೆಯ ಅದ್ವೈತವೇದಾಂತ ಪ್ರಧಾನೋಪಾಧ್ಯಾಯರಾಗಿ ದಯಮಾಡಿಸಿದರು. ಅನಂತರ ಶಂಕರಮಠದಲ್ಲಿ ಶ್ರೀ ವೈದ್ಯನಾಥಶಾಸ್ತ್ರಿಗಳೇ ಲೌಕಿಕರಿಗೆಲ್ಲ ವೇದಾಂತಪಾಠವನ್ನು ಹೇಳುತ್ತಿದ್ದರು. ಆಗ್ಗೆ ರಾಯರು ಬರೆದಿದ್ದ ಮಾಂಡೂಕ್ಯೋಪನಿಷತ್ತಿನ ಆಗಮ ಪ್ರಕರಣದ ಅನುವಾದದ ವಿಷಯವು ಚರ್ಚೆಗೆ ಬರುತ್ತಿತ್ತು. ಶ್ರೀ ಕೃಷ್ಣಸ್ವಾಮಿ ಅಯ್ಯರ್‌ರವರೂ ತಮ್ಮ ಮನೆಯಲ್ಲಿ ಕೆಲವು ಗೃಹಸ್ಥರನ್ನು ಸೇರಿಸಿಕೊಂಡು ಆಗಮಪ್ರಕರಣವನ್ನು ಪಾಠ ಹೇಳುತ್ತಿದ್ದರು. ಮುಂದೆ ಶ್ರೀ ಕೃಷ್ಣಸ್ವಾಮಿ ಅಯ್ಯರ್‌ರವರ ಸೂಚನೆಯಂತೆ ಶ್ರೀ ಎ.ಆರ್. ನಾಗೇಶ್ವರ ಅಯ್ಯರೇ ಮೊದಲಾದವರಿಗೆ ರಾಯರೇ ಸೂತ್ರಭಾಷ್ಯಪಾಠವನ್ನು ಹೇಳಲಾರಂಭಿಸಿದರು. ಚತುಃಸೂತ್ರಿಯವರೆಗೆ ಪೂರ ಪಾಠ ನಡೆಯಿತು.

### ಗ್ರಂಥಗಳ ಪ್ರಕಟನೆ :

ರಾಯರು 1925ರಲ್ಲೇ ಅನುವಾದ ಮಾಡಿ ಸಿದ್ಧಪಡಿಸಿದ್ದ ಸಂಹಿತೋಪನಿಷತ್ತು ಶ್ರೀ ನಾಗೇಶ್ವರ ಅಯ್ಯರ್‌ರವರ ಪ್ರೋತ್ಸಾಹದಿಂದ ಅಚ್ಚಾಯಿತು. 1927ರಲ್ಲಿ ಮುಂಡಕೋಪನಿಷತ್ತು ಸಹ ಹೊರಕ್ಕೆ ಬಂದಿತು. ಅಧ್ಯಾತ್ಮ ಗೀತಾವಳಿ, ಹರಿಶರಣಾಷ್ಟಕ, ವಾಗ್ದೇವೀಸ್ತೋತ್ರ–ಈ

ಪುಸ್ತಕಗಳೂ ಒಂದೊಂದಾಗಿ ಅಚ್ಚಾದವು. ಸಂಸ್ಕೃತದಲ್ಲಿ ಮೂಲಾವಿದ್ಯಾನಿರಾಸವು ಈ ವೇಳೆಗೆ ಬರೆದು ತಿದ್ದಲ್ಪಟ್ಟು ಮುದ್ರಣಕ್ಕೆ ಸಿದ್ಧವಾಗಿತ್ತು. 1927ರಲ್ಲಿ ಮೈಸೂರು ಸರಕಾರದ ದೇವರಾಜ ಬಹದ್ದೂರ್ ಧರ್ಮನಿಧಿಯ ಸಹಾಯವನ್ನು ಕೋರಿ ಈ ಗ್ರಂಥದ ಒಂದು ಭಾಗವನ್ನು ಪ್ರೋತ್ಸಾಹಿಸಲು ಕಳುಹಿಸಿದ್ದಕ್ಕೆ 300ರೂ.ಗಳ ಬಹುಮಾನವು ಬಂದಿತು. ಕೂಡಲೆ ರಾಯರು ಈ ಗ್ರಂಥವನ್ನು ಅಚ್ಚುಮಾಡಿಸಿ ಪ್ರಕಟಿಸುವ ಯೋಚನೆಯನ್ನು ಮಾಡಿದರು.

ಈ ನಡುವೆ ನಡೆದ ಒಂದು ಸಂಗತಿಯನ್ನು ವಾಚಕರ ಅವಗಾಹನೆಗೆ ತರಬೇಕಾಗಿದೆ. ಬ್ರ॥ ಶ್ರೀ॥ ವಿರೂಪಾಕ್ಷಶಾಸ್ತ್ರಿಗಳಿಗೆ-ರಾಯರು ಯಾವದೋ ಒಂದು ಸಂಪ್ರದಾಯವಿರುದ್ಧವಾದ ಗ್ರಂಥವನ್ನು ಬರೆಯುತ್ತಿದ್ದಾರೆಂದು- ಯಾರೋ ಸುದ್ದಿಯನ್ನು ಮುಟ್ಟಿಸಿದ್ದರಿಂದ ಒಂದು ದಿನ ಶಂಕರ ಮಠದ ಮುಂದೆ ನಿಲ್ಲಿಸಿಕೊಂಡು ರಾಯರನ್ನು ಕುರಿತು "ಶಂಕರರಿಗೆ ದ್ರೋಹಕರವಾದ ಯಾವ ಬರವಣಿಗೆಯನ್ನೂ ನೀವು ಬರೆಯಕೂಡದು" ಎಂದು ಎಚ್ಚರಿಕೆಯನ್ನು ಕೊಟ್ಟರು. ಕೂಡಲೆ ರಾಯರು "ಹಾಗಿಲ್ಲ; ಶಂಕರರಿಗೆ ವಿರುದ್ಧವಾಗಿ ಹೇಳುವವರಿಗೆ ಪ್ರತ್ಯುತ್ತರವನ್ನು ಬರೆಯುತ್ತಿದ್ದೇನೆ" ಎಂದರು. ಅಷ್ಟಕ್ಕೇ ಮಾತು ಮುಗಿಯಿತು. ಆದರೆ ಮೂಲಾವಿದ್ಯಾನಿರಾಸ ಗ್ರಂಥದ ವಿಷಯವೇನೆಂಬುದನ್ನು ನೇರಾಗಿ ವಿಶೇಷ ರೀತಿಯಿಂದ ಬ್ರ॥ ಶ್ರೀ॥ ಶಾಸ್ತ್ರಿಗಳು ಕೇಳಲಿಲ್ಲ. ರಾಯರಿಗೂ ಹೇಳಲು ಅವಕಾಶವಾಗಲಿಲ್ಲ. ಹೀಗಾಗಿ ಈ ಗ್ರಂಥದ ವಿಷಯಕ್ಕೆ ವೇ. ಶಾಸ್ತ್ರಿಗಳ ಅಭಿಪ್ರಾಯವನ್ನು ಖಂಡಿತವಾಗಿ ತಿಳಿಯಲಾಗಲಿಲ್ಲ. ವಿವರಣಗ್ರಂಥದ ಪಾಠವಾಗುತ್ತಿರುವಾಗ ಒಂದು ದಿನ ವೇ॥ ವಿರೂಪಾಕ್ಷಶಾಸ್ತ್ರಿಗಳು ಪ್ರಾಸಂಗಿಕವಾಗಿ "ಶ್ರೀ ಸುಬ್ಬರಾಯರು ಮೂಲಾವಿದ್ಯೆಯಿಲ್ಲವೆಂದು ಹೇಳುತ್ತಾರೆಂದು ಜನರು ಅನ್ನುತ್ತಾರೆ. ಆದರೆ ಅವರು ಏನು ಹೇಳುತ್ತಾರೋ ಜನರು ಏನು ತಿಳಿದುಕೊಂಡಿದ್ದಾರೋ ಕಾಣೆ" ಎಂದರು. ಆಗ್ಗೆ ರಾಯರೂ ಉಪಸ್ಥಿತರಾಗಿದ್ದರು. ಆದರೂ ಬಹುಜನರ ಮುಂದೆ ವೇ॥ ಶಾಸ್ತ್ರಿಗಳಂಥ ದೊಡ್ಡ ವಿದ್ವಾಂಸರ ಸಂಗಡ ಚರ್ಚೆ ಮಾಡತಕ್ಕದ್ದಲ್ಲವೆಂದು ರಾಯರು ಸುಮ್ಮನಾದರು. ಈ ಎರಡು ಸಂದರ್ಭಗಳು ಹೊರತು ಮತ್ತೆ ನೇರಾಗಿ ಮೂಲಾವಿದ್ಯಾನಿರಾಸ ಗ್ರಂಥದ ವಿಷಯಕ್ಕೆ ಶ್ರೀ ಶಾಸ್ತ್ರಿಗಳವರಲ್ಲಿ ಚರ್ಚೆಮಾಡುವದಕ್ಕಾಗಲಿ ವಿಚಾರವಿನಿಮಯಕ್ಕಾಗಲಿ ರಾಯರಿಗೆ ಅವಕಾಶವು ಮತ್ತೆ ದೊರೆಯಲೇ ಇಲ್ಲ.

## ಅಧ್ಯಾತ್ಮಪ್ರಕಾಶ ಮುದ್ರಣಾಲಯ :

ಸಂಸ್ಕೃತದ 'ಮೂಲಾವಿದ್ಯಾನಿರಾಸ'ಗ್ರಂಥಕ್ಕೆ ಬಹುಮಾನವು ದೊರೆತಾಗ ರಾಯರಿಗೆ ಸಂತೋಷವಾಯಿತಾದರೂ ವಿದ್ಯಾಭ್ಯಾಸದ ಇಲಾಖೆಯವರು ಗ್ರಂಥವನ್ನು ಒಂದು ಗೊತ್ತಾದ ಅವಧಿಯಲ್ಲಿ ಅಚ್ಚುಮಾಡಿಸಬೇಕೆಂಬ ಷರತ್ತು ಹಾಕಿದ್ದರು. ಆದರೆ ರಾಯರಲ್ಲಿ ಹಣವಿರಲಿಲ್ಲ. ಬೇರೆ ಬೇರೆಯ ಕಡೆಗಳಲ್ಲಿ ಮುದ್ರಣಕ್ಕೆ ಮಾಡಿದ ಪ್ರಯತ್ನಗಳು ಫಲಕಾರಿಯಾಗಲಿಲ್ಲ. ಗ್ರಂಥಕ್ಕೆ ಮೈಸೂರಿನ ಶ್ರೀಮನ್ಮಹಾರಾಜರವರ ಪ್ರೋತ್ಸಾಹವನ್ನು ಕೋರಿ ಅರಮನೆಗೆ ಕಳುಹಿಸಿದರು.

ಆದರೆ ಅದರ ಸಮಾಲೋಚನೆಯನ್ನು ಶ್ರೀಮನ್ಮಹಾರಾಜರು ವೇ|| ವಿರೂಪಾಕ್ಷ ಶಾಸ್ತ್ರಿಗಳವರಿಗೆ ವಹಿಸಿದ್ದರಿಂದ ವೇ|| ಶಾಸ್ತ್ರಿಗಳು "ಗ್ರಂಥದ ಶೈಲಿಯು ಉತ್ತಮವಾಗಿದೆಯಾದರೂ ವಿಷಯಪ್ರತಿಪಾದನೆಯು ಸಂಪ್ರದಾಯವಿರುದ್ಧವಾಗಿದೆ" ಎಂದು ಅಭಿಪ್ರಾಯಕೊಟ್ಟರು. ಬೇರೆಯವರಿಂದ ಮತ್ತೆ ಸಮಾಲೋಚನೆ ಮಾಡಿಸಲು ಕಾಲಾವಕಾಶವು ಬೇಕಾಗಿತ್ತು. ಆದರೆ ರಾಯರು · ಗ್ರಂಥವು ಜಾಗ್ರತೆಯಾಗಿ ಮುದ್ರಿತವಾಗಬೇಕಾಗಿದೆಯಾದ್ದರಿಂದ ದಯವಿಟ್ಟು ಅದನ್ನು ಹಿಂದಕ್ಕೆ ಕಳುಹಿಸಿಬೇಕೆಂದು ಕೇಳಿದ್ದರಿಂದ ಸಹಾಯವೇನೂ ದೊರೆಯದಾಯಿತು. ಆಗ್ಗೆ ಬೆಂಗಳೂರಿಗೆ ದಯಮಾಡಿಸಿದ್ದ ಡಾ|| ಎಸ್. ರಾಧಾಕೃಷ್ಣನ್‌ರವರನ್ನು (ಈಚೆಗೆ ಮಾಜಿ ರಾಷ್ಟ್ರಪತಿಗಳು) ಕಂಡು ರಾಯರು ಗ್ರಂಥದ ವಿಚಾರವನ್ನು ತಿಳಿಸಲಾಗಿ ಕಲ್ಕತ್ತಾ ವಿಶ್ವವಿದ್ಯಾಲಯದಲ್ಲಿ ಇದಕ್ಕೆ ಪ್ರೋತ್ಸಾಹವು ದೊರೆಯುವಂತೆ ಶಿಫಾರಸು ಮಾಡುವುದಾಗಿ ಹೇಳಿದರು. ಆದೇಕೊ, ಅದೂ ನಡೆಯಲಿಲ್ಲ.

ಇಷ್ಟರಲ್ಲಿ ರಾಯರ ಪುತ್ರ ಶ್ರೀ ವೈ. ನರಸಪ್ಪನವರು ದೊಡ್ಡವರಾಗಿದ್ದು ಅವರಿಗೆ ಮುಂದೆ ಹೆಚ್ಚಿನ ವಿದ್ಯಾಭ್ಯಾಸವನ್ನು ಮಾಡಲು ಅನುಕೂಲಗಳು ದೊರೆಯಲಿಲ್ಲವಾದ ಕಾರಣ ಒಂದು ಉದ್ಯೋಗವನ್ನು ಅವರಿಗೆ ಕಲ್ಪಿಸುವ ಯೋಚನೆಯೂ ರಾಯರಿಗೆ ಬಂತು. ಏನಾದರೊಂದು ಸ್ವತಂತ್ರವಾದ ಉದ್ಯೋಗವನ್ನೇ ಮಾಡಿಸಿಕೊಡಬೇಕೆಂದು ರಾಯರಿಗೆ ಇಷ್ಟವಿದ್ದುದರಿಂದ ಮುದ್ರಣಕೆಲಸಕ್ಕೆ ಸಜ್ಜುಗೊಳಿಸಿದರೆ ಸರಿಯಾದೀತೆಂದು ಅವರಿಗೆ ಪ್ರೆಸ್‌ಕೆಲಸಗಳಲ್ಲಿ ತರಬೇತಿ ಕೊಡಿಸಲಾರಂಭಿಸಿದರು. ಸ್ವಲ್ಪ ದಿನಗಳಲ್ಲೇ ದೇವನಾಗರೀ ಟೈಪುಗಳನ್ನು ಕೊಂಡು ಚಾಮರಾಜಪೇಟೆಯ ಮನೆಯಲ್ಲೇ ಕಂಪೋಜು ಪ್ರಾರಂಭಿಸಿ ಒಂದೆರಡು ತಿಂಗಳ ಅನಂತರ ಒಂದು ಟ್ರೆಡಲ್ ಪ್ರಿಂಟಿಂಗ್ ಯಂತ್ರವನ್ನು ಕೊಂಡರು. **ಹೀಗೆ 1928ರಲ್ಲಿ ಅಧ್ಯಾತ್ಮ ಪ್ರಕಾಶ ಮುದ್ರಣಾಲಯದ ಸ್ಥಾಪನೆಯಾಯಿತು.**

ರಾಯರಿಗೆ ಈ ವೇಳೆಗೆ ಸಂಸ್ಕೃತಕಾಲೇಜಿನಿಂದ ಸ್ಥಳಪಲ್ಲಟವಾಗುವ ಸಂಭವಿದೆಯೆಂದು ತಿಳಿಯಿತು. ಸಂಸ್ಕೃತಕಾಲೇಜು ಆ ಸಮಯಕ್ಕೆ ಮುಜರಾಯಿ ಇಲಾಖೆಯಿಂದ ವಿದ್ಯಾಭ್ಯಾಸದ ಇಲಾಖೆಗೆ ಬಂದಿತು. ಕೆಲವು ಅಬ್ರಾಹ್ಮಣರಿಗೂ ಪ್ರವೇಶಾವಕಾಶವನ್ನು ಕೊಡಲಾಯಿತು. ರಾಯರ ಹೆಸರು ಕಾರಣಾಂತರಗಳಿಂದ ಬೇರೆ ಬೇರೆ ಸ್ಕೂಲುಗಳಲ್ಲಿ ಕಾಣಿಸಿಕೊಂಡು ಕೊನೆಗೆ ಬೆಂಗಳೂರಿನ ಫೋರ್ಟ್ ಮಿಡ್ಲ್ ಸ್ಕೂಲಿಗೇ ವರ್ಗವಾಯಿತು. ಅಂತೂ ರಾಯರು ಸಂಸ್ಕೃತ ಕಾಲೇಜನ್ನು ಬಿಟ್ಟು ಮತ್ತೆ ಇಂಗ್ಲಿಷು ಸ್ಕೂಲುಗಳನ್ನು ಸಂಬಂಧಿಸಿಕೊಂಡರು. ಇನ್ನುಮುಂದೆ ಅಲ್ಲಲ್ಲೇ ಮಿಡ್ಲ್‌ಸ್ಕೂಲುಗಳಲ್ಲಿ ವರ್ಗವಾಗುತ್ತಾ ಕೊನೆಗೆ ಮಿಡ್ಲ್‌ಸ್ಕೂಲು ಉಪಾಧ್ಯಾಯರಾಗಿಯೇ ನಿವೃತ್ತರಾದರು. ಆದ್ದರಿಂದ ರಾಯರ ಸ್ವಂತಜೀವನದ ವೃತ್ತಾಂತವು ಇನ್ನೇನೂ ಹೆಚ್ಚು ವಿವರಿಸುವಂಥದ್ದಿಲ್ಲವಾದ್ದರಿಂದ ಇನ್ನು ಮುಂದೆ ರಾಯರ ಜೀವನಾಡಿಯೂ ಅವರ ಸೃಷ್ಟಿಯೂ ಆದ ಅಧ್ಯಾತ್ಮಪ್ರಕಾಶಕಾರ್ಯಾಲಯದ ವಿಚಾರವನ್ನೇ ಮುಖ್ಯವಾಗಿ ವರ್ಣಿಸಲಾಗುವುದು.

# ೧೨. ಕ್ರಮಬದ್ಧ ಚಟುವಟಿಕೆಗಳು

## ಗ್ರಂಥಪ್ರಕಟನೆಯಲ್ಲಿ ಪ್ರಗತಿ:

ಅಧ್ಯಾತ್ಮಪ್ರಕಾಶಕಾರ್ಯಾಲಯದ ಕ್ರಮಬದ್ಧವಾದ ಚಟುವಟಿಕೆಗಳ ಆರಂಭದಿಂದ ಈ ಸಂಸ್ಥೆಯ ಚರಿತ್ರೆಯು ಈಗ ಮುಂದುವರೆಯುತ್ತದೆ. ಈವರೆಗೆ ಕಾರ್ಯಾಲಯದ ಗ್ರಂಥಪ್ರಕಟನೆಗಳ ತಳಹದಿಯಂತೆ ಹೊರಬಂದಿರುವ ನಾಲ್ಕಾರು ಅಧ್ಯಾತ್ಮಗ್ರಂಥಗಳು, ಅಧ್ಯಾತ್ಮಪ್ರಕಾಶಮಾಸಪತ್ರಿಕೆ, ಹಾಗೂ ಮುದ್ರಣಾಲಯಸ್ಥಾಪನೆ-ಇವುಗಳನ್ನು ಹಿಂದೆಯೇ ತಿಳಿಸಲಾಗಿದೆ. ರಾಯರು ಮುದ್ರಣಾಲಯವನ್ನು ಕಾರ್ಯಾಲಯದ ಗ್ರಂಥಗಳ ಪ್ರಕಟನೆಗಾಗಿಯೇ ತೆರೆದಿದ್ದರಾದರೂ ಮಗನಾದ ಶ್ರೀ ವೈ. ನರಸಪ್ಪನಿಗೆ ಉದ್ಯೋಗವನ್ನು ಒದಗಿಸುವದಕ್ಕಾಗಿಯೂ ಅದನ್ನು ಏರ್ಪಾಡುಮಾಡಿದ್ದರು. ಆದ್ದರಿಂದ ಅದು ಸ್ವಂತದ್ದಾಗಿತ್ತು. ಶ್ರೀ ವೈ. ನರಸಪ್ಪನವರಿಗೆ ಜೀವನೋಪಾಯಕ್ಕೆ ತಕ್ಕ ಅನುಕೂಲವನ್ನೂ ಲಾಭವನ್ನೂ ಒದಗಿಸುವದಕ್ಕಾಗಿ 'ಪುರುಷಾರ್ಥ ಗ್ರಂಥಾವಳಿ' ಎಂಬ ಹೆಸರಿನಿಂದ ರಾಯರು ಕೆಲವು ಪುಸ್ತಕಗಳನ್ನು ಬರೆದುಕೊಟ್ಟರು. ಅವುಗಳಲ್ಲಿ ರಘುವಂಶ-1ನೆಯ 10ನೆಯ ಸರ್ಗಗಳು (ಅರ್ಥಸಮೇತ), ಸಂಸ್ಕೃತಪ್ರಥಮ ಪುಸ್ತಕಮ್, ಪದತ್ರಯ, ಭೀಷ್ಮಚರಿತ್ರೆ, ವಿಷ್ಣುಸಹಸ್ರನಾಮ, ಮಹಾಶಿವರಾತ್ರೀವ್ರತ-ಇವುಗಳು ಮುಖ್ಯವಾದವು. ಆದರೆ ಇವುಗಳಿಂದ ಹೆಚ್ಚಿನ ಲಾಭವೇನೂ ಬರಲಿಲ್ಲವಾಗಿ ಆ ಕೆಲಸವನ್ನು ಅಲ್ಲಿಗೇ ಕೈಬಿಡಲಾಯಿತು. ಮುಂದೆ ಅಧ್ಯಾತ್ಮಗ್ರಂಥಗಳ ಮುದ್ರಣಕ್ಕಾಗಿಯೇ ಪ್ರೆಸ್ಸು ಸಿದ್ಧವಾಯಿತು. ಮೊಟ್ಟಮೊದಲನೆಯದಾಗಿ ಮುದ್ರಣಾಲಯದಲ್ಲಿ **'ಗುರುಭಕ್ತಿಸಾರ'** ವೆಂಬ ಅಧ್ಯಾತ್ಮಗ್ರಂಥವು ಅಚ್ಚಾಯಿತು.

## "ಮೂಲಾವಿದ್ಯಾನಿರಾಸ" ಗ್ರಂಥದ ಪ್ರಕಟನೆ:

1929ನೆಯ ವರ್ಷದಲ್ಲಿ ಈ ಸಂಸ್ಕೃತಗ್ರಂಥವು ರಾಯರ ಸ್ವಂತಮುದ್ರಣಾಲಯದಲ್ಲೇ ಅಚ್ಚಾಗಿ ಹೊರಬಂದಿತು. ಈ ಗ್ರಂಥದ ಸ್ವಲ್ಪಭಾಗವನ್ನು ಶ್ರೀ ನವೀನಂ ವೆಂಕಟೇಶ ಶಾಸ್ತ್ರಿಗಳು ನೋಡಿದರಾದರೂ ನಡುವೆ ಇಬ್ಬರಿಗೂ ಮತಭೇದವುಂಟಾದ್ದರಿಂದ ಇದನ್ನು ಅಲ್ಲಿಗೇ ಬಿಟ್ಟುಬಿಟ್ಟರು. ಗ್ರಂಥವು ಪ್ರಕಟವಾದ ಮೇಲೆ ಪತ್ರಿಕೆಗಳಿಗೂ ಪಂಡಿತರುಗಳಿಗೂ ವಿಮರ್ಶೆಗಾಗಿ ಕಳುಹಿಸಲ್ಪಟ್ಟಿತು. ಕೆಲವು ಕಾಲದವರೆಗೆ ಈ ಗ್ರಂಥದ ಬಗ್ಗೆ ಖಂಡನೆ-ಮಂಡನೆಗಳು ಪತ್ರಿಕೆಗಳಲ್ಲಿ ಹೊರಬಿದ್ದು ಚರ್ಚೆಗಳು ಬಿಸಿಯಾಗಿ ನಡೆದವು. ಇವುಗಳಲ್ಲಿ ಮುಖ್ಯವಾಗಿ `Review of Philosphy and Religion' ಎಂಬ ಪತ್ರಿಕೆಯಲ್ಲಿ ಪ್ರೊ।। ಶ್ರೀ ಕೆ. ಸುಂದರರಾಮಯ್ಯರ್‌ರವರೂ `Vedanta Kesari' ಪತ್ರಿಕೆಯಲ್ಲಿ ಅರ್ಥಶಾಸ್ತ್ರವಿಶಾರದ

ಶ್ರೀ ಆರ್. ಶಾಮಶಾಸ್ತ್ರಿಗಳೂ ಗ್ರಂಥವನ್ನು ಖಂಡಿಸಿ ಬರೆದ ವಿಮರ್ಶೆಗಳು ಮುಖ್ಯವಾದವುಗಳು. ರಾಯರು ಅವುಗಳಿಗೆ ಪ್ರತ್ಯುತ್ತರವನ್ನು ಬರೆದರು. ಈ ಗ್ರಂಥದ ಎರಡನೆಯ ಭಾಗದಲ್ಲಿ ವೇದಾಂತಸಂಪ್ರದಾಯ ಸ್ವರೂಪನಿರ್ಧಾರಣ, ಪರಮತಪ್ರವೇಶಶಂಕಾನಿರಾಕರಣ, ಪ್ರಕರಣೋಪಸಂಹಾರ- ಎಂಬ ಮೂರು ಖಂಡಗಳನ್ನು ಇಟ್ಟು ಆಯಾ ವಿಚಾರಗಳನ್ನು ವಿಮರ್ಶಿಸಿ ಪೂರ್ವಪಶ್ಚಿಮದೇಶಗಳ ತತ್ತ್ವವಿಚಾರಪ್ರಸ್ಥಾನಗಳ ಸಮಾಲೋಚನೆಯನ್ನು ಮಾಡಬೇಕೆಂಬ ಉದ್ದೇಶವು ರಾಯರಿಗೆ ಇತ್ತು. ಆದರೆ ಆ ಎರಡನೆಯ ಭಾಗವು ಪ್ರಕಟವಾಗಲಿಲ್ಲ.

## ಭಗವದ್ಗೀತಾದಿಗ್ರಂಥಗಳ ಪ್ರಕಟನೆ :

ಭಗವದ್ಗೀತಾ ಭಾಷ್ಯದ 1 ರಿಂದ 3 ಅಧ್ಯಾಯಗಳು ಮತ್ತು 4 ಅಧ್ಯಾಯಗಳು-ಇವುಗಳನ್ನು ಶಾಂಕರಭಾಷ್ಯದ ಅನುವಾದ ಟಿಪ್ಪಣಿಗಳ ಸಮೇತ 1930ರ ವೇಳೆಗೆ ರಾಯರು ಕೆಲವು ಮಹನೀಯರ ಸಹಾಯದಿಂದ ಹೊರತಂದರು. ಈ ವೇಳೆಗೆ **ಅಧ್ಯಾತ್ಮಪ್ರಕಾಶಪತ್ರಿಕೆಯ** ಮೂರನೆಯ ಸಂಪುಟವು ಹೊರಬಂದಿತ್ತು. ಇದೇ ಸಮಯದಲ್ಲಿ ಹೊಳೆನರಸೀಪುರದ ಒಬ್ಬ ಮಹನೀಯರ ಔದಾರ್ಯದಿಂದ ಕಾಠಕೋಪನಿಷತ್ತನ್ನು ಭಾಷ್ಯಾನುವಾದಸಹಿತ ಹೊರಕ್ಕೆ ತರಲಾಯಿತು.

## ಶ್ರೀ ಪಿ.ಎನ್. ನರಸಿಂಹಯ್ಯನವರು :

ರಾಯರು ಹಾಗೂ ಅಧ್ಯಾತ್ಮಪ್ರಕಾಶ ಕಾರ್ಯಾಲಯವು ಹೊಳೆನರಸೀಪುರಕ್ಕೆ ಬರಲು ಮುಖ್ಯಕಾರಣರಾದವರು ಈ ಮಹನೀಯರು. ಇವರ ಸಾಮಾನ್ಯ ಪರಿಚಯವು ರಾಯರಿಗೆ ಬೆಂಗಳೂರು ಶಂಕರಮಠದಲ್ಲಿ ಒಂದು ಬಾರಿ ಆಗಿತ್ತಂತೆ. ಮಾಸಪತ್ರಿಕೆಯ ಮೂರನೆಯ ಸಂಪುಟ ಪ್ರಾರಂಭವಾದಾಗ ಪತ್ರಿಕೆಗೆ ಪ್ರೋತ್ಸಾಹವನ್ನೂ ಹಾಗೂ ಚಂದಾದಾರರನ್ನೂ ಕೋರಿ ರಾಯರು ಬರೆದಿದ್ದ ಕಾಗದಕ್ಕೆ ಶ್ರೀಯುತರು ಸೂಕ್ತಸಹಾಯವನ್ನು ಮಾಡಿದರು. ಅನಂತರ ರಾಯರು ಸಂಚಾರಕ್ರಮದಿಂದ ಹೊಳೆನರಸೀಪುರಕ್ಕೆ ಬಂದಾಗ ಈ ಮಹನೀಯರು ಅವರನ್ನು ತಮ್ಮ ಮನೆಯಲ್ಲೇ ಇಳಿಸಿಕೊಂಡು ಉಪಚರಿಸಿದರು. ಮುಂದೆ ರಾಯರಿಂದ ರಜಾಕಾಲದಲ್ಲಿ ಕಠೋಪನಿಷತ್ತನ್ನೂ ಗೀತಾಭಾಷ್ಯವನ್ನೂ ಪಾಠಹೇಳಿಸಿಕೊಂಡರು. ಇದೇ ಪಾಠದ ಸಂದರ್ಭದಲ್ಲಿ ರಾಯರಿಗೆ ಶ್ರೀ ಆರ್.ಎಸ್. ಶ್ರೀನಿವಾಸಯ್ಯನವರು, ಶ್ರೀ ಆರ್. ರಾಮಸ್ವಾಮಯ್ಯನವರು- ಇವರುಗಳ ಪರಿಚಯವಾಯಿತು. ಅಂತೂ ಹಾಸನ ಡಿಸ್ಟ್ರಿಕ್ಟಿನಲ್ಲಿ ಪತ್ರಿಕಾಪ್ರಚಾರಕ್ಕೆ ಇವರಿಂದ ಸಹಾಯವಾಯಿತು.

## ಕಾರ್ಯಾಲಯದ ರೂಪರೇಖೆಗಳು ಪ್ರಕಟಗೊಂಡದ್ದು :

ಈ ವೇಳೆಗೆ ಕಾರ್ಯಾಲಯದ ಪರಿಚಯವನ್ನು ಮಹಾಜನರಿಗೆ ವಿವರಿಸುವಲ್ಲಿ "ಅಧ್ಯಾತ್ಮವಿದ್ಯೆಯಲ್ಲಿ ಜನರಿಗೆ ಹೆಚ್ಚಿನ ಆದರವನ್ನುಂಟುಮಾಡುವದೇ ಮುಖ್ಯೋದ್ದೇಶ"ವೆಂದು

ಉಲ್ಲೇಖಿಸಲಾಗಿತ್ತು. ಈ ಧ್ಯೇಯಸಾಧನೆಗೆ ಅಂಗವಾಗಿ ಮತ್ತೆ ಕೆಲವು ಉದ್ದೇಶಗಳನ್ನು ಸ್ವೀಕರಿಸಲಾಯಿತು. ಅವುಗಳು ಯಾವುವೆಂದರೆ: (1) ಅಧ್ಯಾತ್ಮವಿಚಾರದಲ್ಲಿ ಜನಸಾಮಾನ್ಯರವರೆಗೂ ಎಲ್ಲರಿಗೂ ಸವಿಯುಂಟಾಗುವಂತೆ ಪ್ರಯತ್ನಿಸುವದು (2) ಮೂಢ ವಿಶ್ವಾಸಗಳನ್ನು ಕಿತ್ತುಹಾಕಿ ಆತ್ಮವಿಚಾರಕ್ಕೆ ಅನುಕೂಲವಾಗಿ ಒದಗುವಂಥ ಸಾಧನಗಳನ್ನು ಮಾಡಬೇಕೆನ್ನುವವರಿಗೆ ಸಹಾಯಮಾಡುವದು. (3) ಅಧ್ಯಾತ್ಮವಿಚಾರದಲ್ಲಿ ತೊಡಗಿರುವವರಿಗೆ ಒಬ್ಬರಿಗೊಬ್ಬರ ಪರಿಚಯಕ್ಕೆ ಅವಕಾಶವನ್ನು ಕಲ್ಪಿಸುವದು. (4) ಅಧ್ಯಾತ್ಮವಿಚಾರ ಸಂಘಗಳನ್ನು ಸ್ಥಾಪಿಸುವದು-ಇವು ಮುಖ್ಯವಾದವು. ಈ ವೇಳೆಗೆ ಅಧ್ಯಾತ್ಮಗ್ರಂಥಪ್ರಕಟನೆ, ಮಾಸಪತ್ರಿಕೆಯ ಪ್ರಕಟನೆ-ಈ ಎರಡೂ ಆಚರಣೆಗೆ ಬಂದಿದ್ದವು. ಬೆಳಗಿನ ವೇಳೆಯಲ್ಲಿ ಭಾಷ್ಯಪ್ರವಚನವು ನಡೆಯುತ್ತಿತ್ತು. ಭಜನೆಯ ಪದ್ಧತಿಯೂ ಆಚರಣೆಗೆ ಬಂದಿತ್ತು. ಅಲ್ಲಲ್ಲಿ ಉಪನ್ಯಾಸಗಳೂ ನಡೆಯುತ್ತಿದ್ದವು. ಕೆಲವು ಅಧ್ಯಾತ್ಮಗ್ರಂಥಗಳೂ ಬರೆಯಲ್ಪಟ್ಟು ಮುದ್ರಣಕ್ಕೆ ಸಿದ್ಧವಾಗಿದ್ದವು. ಶಂಕರಮಹಾಮನನ, ಈಶಾವಾಸ್ಯೋಪನಿಷತ್ತು, ಉಪದೇಶ ಸಾಹಸ್ರಿ (ಪದ್ಯ) - ಇವುಗಳು ಈ ಕಾಲದಲ್ಲಿ ಹೊರಕ್ಕೆ ಬಂದ ಗ್ರಂಥಗಳು.

## ಶಂಕರಸಪ್ತಾಹದ ಉತ್ಸವ :

ಕಾರ್ಯಾಲಯದಲ್ಲಿ ಏರ್ಪಾಡಾಗಿದ್ದ ಚಟುವಟಿಕೆಗಳ ಜೊತೆಗೆ ಪ್ರತಿವರ್ಷವೂ ವೈಶಾಖಮಾಸದಲ್ಲಿ ಈಗಲೂ ನಡೆಯುತ್ತಿರುವ ಶಂಕರಸಪ್ತಾಹವೆಂಬ ಉತ್ಸವವೂ ಇದೇ ಕಾಲದಲ್ಲಿ ಪ್ರಾರಂಭವಾಯಿತು. ಮೊದಲು ಈ ಉತ್ಸವದ ಏರ್ಪಾಡು ಪ್ರಾರಂಭವಾದದ್ದು ಹೇಗೆಂದರೆ: ಬೆಂಗಳೂರಿನಲ್ಲಿ ಆ ಕಾಲಕ್ಕೆ ಶಂಕರಮಠದಲ್ಲಿ ನಡೆಯುತ್ತಿದ್ದ ಶಂಕರಜಯಂತೀ ಉತ್ಸವವು ಪೂಜೆ, ಪಾರಾಯಣ, ಸಂಜೆ ಮಾತ್ರ ಉಪನ್ಯಾಸ, ಅಥವಾ ಹರಿಕಥೆ -ಇವುಗಳಿಂದ ಕೂಡಿರುತ್ತಿತ್ತು. ರಾಯರೂ ಒಂದೆರಡು ಬಾರಿ ಈ ಉತ್ಸವದಲ್ಲಿ ಉಪನ್ಯಾಸವನ್ನು ಮಾಡಿದ್ದರು. ಆದರೆ ಶಂಕರಸಪ್ತಾಹವೆಂಬುದು ಆಚಾರ್ಯರ ಭಾಷ್ಯಪ್ರಚಾರಕ್ಕೂ ವೇದಾಂತೋಪನ್ಯಾಸಗಳಿಗೂ ಪ್ರಾಧಾನ್ಯವನ್ನು ಕಲ್ಪಿಸಿ ಆಗಬೇಕೆಂಬುದು ರಾಯರ ಇಷ್ಟವಾಗಿತ್ತು. ಇದಕ್ಕೆ ತಕ್ಕ ಪ್ರೋತ್ಸಾಹವು ಅಲ್ಲಿ ದೊರೆಯಲಿಲ್ಲವಾಗಿ ವೇ|| ಎಸ್. ವಿಠಲಶಾಸ್ತ್ರಿಗಳು, ವೇ|| ಎಂ.ಎಸ್. ವೆಂಕಟೇಶಶಾಸ್ತ್ರಿಗಳು- ಇವರುಗಳ ಸಹಕಾರದಿಂದ ರಾಯರು ಸ್ವಂತವಾಗಿ ಈ ಉತ್ಸವವನ್ನು ಪ್ರಾರಂಭಿಸಿಬಿಟ್ಟರು. ಮೊದಲನೆಯ ಉತ್ಸವವು ಪ್ರಜೋತ್ಪತ್ತಿ ಸಂವತ್ಸರದ ವೈಶಾಖ ಶುಕ್ಲ ಪಂಚಮಿಯಿಂದ ದ್ವಾದಶಿಯವರೆಗೆ ಬೆಂಗಳೂರು ಚಾಮರಾಜಪೇಟೆಯ ರಾಮೇಶ್ವರದೇವಸ್ಥಾನಕ್ಕೆ ಸೇರಿದ ಕಟ್ಟಡದಲ್ಲಿಯೇ ನಡೆಯಿತು. ಬೆಳಗ್ಗೆ ಭಾಷ್ಯಪ್ರವಚನ, ಮಧ್ಯಾಹ್ನ ಪುರಾಣಶ್ರವಣ, ಸಂಜೆ ಉಪನ್ಯಾಸ ಅಥವಾ ಹರಿಕಥೆ-ಹೀಗೆ ಮೂರುಹೊತ್ತು ಕಾರ್ಯಕ್ರಮಗಳಿರುತ್ತಿದ್ದವು. ವೇ|| ಎಸ್. ವಿಠಲಶಾಸ್ತ್ರಿಗಳ ಸೂಚನೆಯಂತೆ ಪ್ರತಿಯೊಂದು ಪ್ರವಚನದ ಕೊನೆಯಲ್ಲಿಯೂ ರಾಯರು ಅನುವಾದವನ್ನು ಮಾಡುವ ಪದ್ಧತಿಯನ್ನು

ಇಟ್ಟುಕೊಂಡರು. ಕೇವಲ ಒಂದೆರಡು ದಿನಗಳಲ್ಲಿಯೇ ಜನರು ಉತ್ಸಾಹದಿಂದ ಉತ್ಸವದ ಕಾರ್ಯಕ್ರಮಗಳಿಗೆ ಸೇರುತ್ತಾ ಬಂದರು. ಮೊದಲನೆಯ ಉತ್ಸವವು ಯಶಸ್ವಿಯಾಗಿ ನೆರವೇರಿತು. ಈ ವ್ಯವಸ್ಥೆಯೇ ಈವರೆಗೂ ಮುಂದುವರಿದು ಬಂದಿದ್ದು ಈ ಉತ್ಸವವು ಕಾರ್ಯಾಲಯದ ಮುಖ್ಯಚಟುವಟಿಕೆಗಳಲ್ಲೊಂದಾಗಿರುತ್ತದೆ. ಈವರೆಗೆ ಕರ್ನಾಟಕದ ಬೇರೆ ಬೇರೆಯ ಊರುಗಳಲ್ಲಿ ಈ ಅನುಷ್ಠಾನವು ಕಳೆದ 63 ವರ್ಷಗಳಿಂದ ಅವಿಚ್ಛಿನ್ನವಾಗಿ ನಡೆದುಕೊಂಡುಬರುತ್ತಿದೆ.

## ಶ್ರೀ ಗರಡಿ ರಾಚಪ್ಪನವರು :

ಇವರು ಬೆಂಗಳೂರಿನವರು. ಶ್ರೀ ಕೆ. ಎ. ಕೃಷ್ಣಸ್ವಾಮಿ ಅಯ್ಯರ್‌ರವರ ಪ್ರೇರಣೆಯಿಂದ ರಾಯರ ಬಳಿಗೆ ಬಂದು ಅನಂತರ ಅವರ ವಿಚಾರಸರಣಿಯಿಂದ ಆಕರ್ಷಿತರಾದರು. ಇವರು ಬಾಲ್ಯದಿಂದಲೂ ಸಾಧುಸಂತರ ಸಂಗ, ದರ್ಶನಲಾಭಗಳನ್ನು ಪಡೆದವರು. ಇಡೀ ಭಾರತದೇಶವನ್ನೆಲ್ಲ ಒಂದುಬಾರಿ ಸುತ್ತಿದರು. ಬೊಂಬಾಯಿಯಲ್ಲಿ ಒಂದು ಬಾರಿ ಮಹಾತ್ಮಗಾಂಧಿಯವರನ್ನು ಕಂಡಿದ್ದರಂತೆ. ಮುಂದೆ ಬೆಂಗಳೂರಿನಲ್ಲಿಯೇ ಶ್ರೀ ಜವಳಿ ಚಿಕ್ಕಲಿಂಗಣ್ಣಸ್ವಾಮಿಗಳ ಸಂಗವೂ ಇವರಿಗೆ ದೊರಕಿತು. ಅವರ ಮೂಲಕ ಶ್ರೀ ಕೃಷ್ಣಸ್ವಾಮಿ ಅಯ್ಯರ್‌ರವರ ಹೆಸರು ಕೇಳಿ ಅವರನ್ನು ಭೇಟಿ ಮಾಡಿದರು. ಕೊನೆಗೆ ಅಯ್ಯರ್‌ರವರ ಪ್ರೇರಣೆಯಂತೆ ರಾಯರನ್ನು ಕಂಡಾಗ ರಾಯರ ವಿಚಾರಸರಣಿಯು ಇವರಿಗೆ ಬಹಳ ಚೆನ್ನಾಗಿ ಹಿಡಿಸಿತು. ಮುಂದೆ ರಾಯರ ಬಳಿಯಲ್ಲಿಯೇ "ಉಪದೇಶಸಾಹಸ್ರಿ" ಯನ್ನು ಓದಿ ಕನ್ನಡದಲ್ಲಿ ಅದನ್ನು ಬರೆದುಕೊಂಡು ಮತ್ತು ಬರೆಯಿಸಿ ಅದರ ಪ್ರಕಟನೆಯ ವೆಚ್ಚವನ್ನೆಲ್ಲ ತಾವೇ ವಹಿಸಿಕೊಂಡು ಕಾರ್ಯಾಲಯದ ಕೆಲಸಗಳಿಗೆ ಆಶ್ರಯದಾತರಾದರು. ಈ ಮಹನೀಯರು ಇಂಗ್ಲಿಷ್ ಹಾಗು ಸಂಸ್ಕೃತಭಾಷೆಯ ಕೆಲವು ವೇದಾಂತಗ್ರಂಥಗಳನ್ನು ಕಾರ್ಯಾಲಯದ ಪುಸ್ತಕಭಂಡಾರಕ್ಕೆ ದಾನಮಾಡಿರುತ್ತಾರೆ.

## ಪುಸ್ತಕಪ್ರಕಟನೆಯು ಮುಂದುವರೆದದ್ದು :

1933ನೆಯ ವರ್ಷದ ವೇಳೆಗೆ ಅಧ್ಯಾತ್ಮಪ್ರಕಾಶಪತ್ರಿಕೆಯ ನಾಲ್ಕನೆಯ ಸಂಪುಟವು ನಡೆಯುತ್ತಿತ್ತು. ಈ ವೇಳೆಗೆ ವಿಲಕ್ಷಣ ಮೌನಿ, ಸಂಸ್ಕೃತದಲ್ಲಿ ಟಿಪ್ಪಣಿ ಸಹಿತ **ಈಶಾವಾಸ್ಯೋಪನಿಷತ್ತು**, **ವೇದಾಂತಕಥಾವಳಿ**, **ಗಣೇಶಾಷ್ಟಕ**, **ತತ್ತ್ವಸಮಾಸ**-ಈ ಗ್ರಂಥಗಳು ಹೊರಕ್ಕೆ ಬಂದವು. ಮಾಸಪತ್ರಿಕೆಯನ್ನು ಜನಪ್ರಿಯಗೊಳಿಸುವ ಸಲುವಾಗಿ ಚಂದಾಹಣವನ್ನು ಸ್ವಲ್ಪ ಕಡಿಮೆಮಾಡಲಾಯಿತು. ತತ್ತ್ವವಿಚಾರದ ಜೊತೆಗೆ ಧಾರ್ಮಿಕ, ಸಾಮಾಜಿಕ, ವಿದ್ಯಾಭ್ಯಾಸ- ಮುಂತಾದ ವಿಚಾರಗಳ ಬರವಣಿಗೆಗೂ ಅವಕಾಶವನ್ನು ಕಲ್ಪಿಸುವ ವ್ಯವಸ್ಥೆಯನ್ನು ಮಾಡಲಾಯಿತು. ಚಂದಾದಾರರಿಗೆ ಪುಸ್ತಕಗಳನ್ನು ತಗ್ಗಿಸಿದ ಬೆಲೆಗೆ ಕೊಡುವ ಪದ್ಧತಿಯೂ ಆಚರಣೆಗೆ ಬಂತು. ಗ್ರಾಹಕರಿಗೆ ವರ್ಷದ ಕೊನೆಯಲ್ಲಿ ಒಂದೊಂದು

ಪುಟ್ಟಗ್ರಂಥವನ್ನು ಕಾಣಿಕೆಯಾಗಿ ಕೊಡುವ ಸಂಕಲ್ಪವನ್ನೂ ಮಾಡಲಾಯಿತು. ಇಷ್ಟೆಲ್ಲ ಆದರೂ ಚಂದಾದಾರರ ಸಂಖ್ಯೆಯು ಹೆಚ್ಚಾಗಿ ಬೆಳೆಯಲಿಲ್ಲ. ಆದ್ದರಿಂದ ಪತ್ರಿಕೆಯ ಮೂಲಕವೇ ಸ್ವತಂತ್ರಪುಟಗಳಾಗಿ ಒಂದೊಂದು ಅಧ್ಯಾತ್ಮಗ್ರಂಥವನ್ನು ಹೊರತರುವ ಯೋಜನೆಯನ್ನು ಕೈಗೊಳ್ಳಲಾಯಿತು. ಇದರಿಂದ ಸ್ವಲ್ಪಮಟ್ಟಿಗೆ ಪತ್ರಿಕೆಯ ಖರ್ಚುವೆಚ್ಚಗಳಿಗೆ ಅವಲಂಬನೆಯೂ ದೊರೆಯುವಂತಾಯಿತು.

## ಪತ್ರಿಕೆಯ ಮೂಲಕ ಹೊರಬಂದ ಗ್ರಂಥಗಳು :

'ಲಕ್ಷಣಶಾಸ್ತ್ರಿ ಉರುಫ್ ಹಸೇನ್' ಎಂಬ ತರ್ಕವೇದಾಂತಗಳ ತಾರತಮ್ಯವನ್ನು ತೋರಿಸುವ ಒಂದು ಕಥೆಯ ಪುಸ್ತಕ, 'ಆತ್ಮವಿದ್ಯಾವಿಲಾಸ', 'ತಲವಕಾರೋಪನಿಷತ್ತು' (ಭಾಷ್ಯಾನುವಾದಸಹಿತ), ಸ್ವಾಮಿ ವಿವೇಕಾನಂದರ 'ಜ್ಞಾನಯೋಗ'ದ ಕನ್ನಡ ಅನುವಾದ, 'ಅಲಾತಶಾಂತಿಪ್ರಕರಣ' (ಮಾಂಡೂಕ್ಯಕಾರಿಕೆ), 'ಮುಕುಂದಮಾಲಾಸ್ತೋತ್ರ' (ಭಾವಾರ್ಥಸಹಿತ), 'ಅಧ್ಯಾತ್ಮಸೂಕ್ತಿಮಂಜರಿ' (ಶಿವಾನಂದಸರಸ್ವತಿಗಳ ಸೂಕ್ತಿಗಳ ಅನುವಾದ)- ಇಷ್ಟು ಗ್ರಂಥಗಳು 1938ನೆಯ ಇಸವಿಯವರೆಗೆ ಅಧ್ಯಾತ್ಮಪ್ರಕಾಶಮಾಸಪತ್ರಿಕೆಯ ಮೂಲಕ ಪ್ರಕಟವಾದ ಅಧ್ಯಾತ್ಮಗ್ರಂಥಗಳು.

## ಸ್ವತಂತ್ರಗ್ರಂಥಗಳು :

ಸ್ವತಂತ್ರಗ್ರಂಥಗಳಾಗಿಯೇ ಮೋಹಮುದ್ಗರ (ಭಜಗೋವಿಂದಸ್ತೋತ್ರ), ವೇದಾಂತಡಿಂಡಿಮ, ಅಧ್ಯಾತ್ಮವೆಂದರೇನು?, ಸವಾರ್ತಿಕಪಂಚೀಕರಣ, ಭಗವಚ್ಚರಣಸ್ತೋತ್ರ, (ವಿವೇಕಾನಂದರ) ವೇದಾಂತೋಪನ್ಯಾಸಗಳು, ವಾಕ್ಯವೃತ್ತಿ ಮತ್ತು ಲಘುವಾಕ್ಯವೃತ್ತಿ, ಧಮ್ಮಪದ (ಬೌದ್ಧಗ್ರಂಥ), ವೇದಾಂತಡಿಂಡಿಮಃ (ರಾಯರೇ ಸ್ವತಃ ಸಂಸ್ಕೃತಭಾಷೆಯಲ್ಲಿ ಬರೆದ ಭಾವಬೋಧಿನೀವ್ಯಾಖ್ಯಾನಸಹಿತ)- ಇವುಗಳು ಬೆಳಕಿಗೆ ಬಂದವು. ಇಂಗ್ಲಿಷ್‌ನಲ್ಲಿ `Words of Wisdom' ಎಂಬ ರಾಜೇಶ್ವರಾನಂದರ ಸೂಕ್ತಿಗಳು. ಇಂಗ್ಲಿಷ್‌ನಲ್ಲಿ `Avasthatraya or the Unique Method of Vedanta' ಎಂಬ ಒಂದು ಚಿಕ್ಕಗ್ರಂಥ-ಇವುಗಳೂ ಪ್ರಕಟವಾದವು.

## ಶಂಕರಸಪ್ತಾಹದ ಉತ್ಸವಗಳ ವಿವರ :

1932ನೆಯ ಇಸವಿಯಲ್ಲಿ ಎರಡನೆಯ ಶಂಕರಸಪ್ತಾಹದ ಉತ್ಸವವು ಬೆಂಗಳೂರಿನ ಶ್ರೀಜಲಕಂಠೇಶ್ವರ ದೇವಸ್ಥಾನದಲ್ಲಿ ನಡೆಯಿತು. ಶ್ರೀ- ಎ.ಕೆ. ಶಂಕರಯ್ಯನವರು, ಶ್ರೀ ಬಿ. ನಂಜುಂಡಯ್ಯನವರು-ಎಂಬ ಇಬ್ಬರು ಭಕ್ತ ಮಹಾಶಯರು ಈ ಸಂದರ್ಭದಲ್ಲಿ ರಾಯರ ಪರಿಚಯವನ್ನು ಮಾಡಿಕೊಂಡು ಮುಂದೆ ಬಹಳ ವರ್ಷಗಳವರೆಗೂ ಕಾರ್ಯಾಲಯಕ್ಕೆ ನಾನಾಮುಖವಾಗಿ ಸೇವೆಸಲ್ಲಿಸುತ್ತಾ ಬಂದರು. ಮೂರನೆಯ ಉತ್ಸವದಿಂದ ಪುರಾಣಶ್ರವಣವಾದ ಅನಂತರ ಭಜನೆಯನ್ನೂ ಏರ್ಪಡಿಸಲಾಯಿತು.

ಶ್ರೀ ಅನಂತಮೂರ್ತಿಶಾಸ್ತ್ರಿಗಳು ಎಂಬುವರು ಶ್ರೀ ಹೊಸಕೆರೆ ಚಿದಂಬರಯ್ಯನವರ ಮಕ್ಕಳು. ಇವರಿಗೆ ಬಾಲ್ಯದಲ್ಲಿಯೇ ಕುರ್ತಕೋಟಿ ಮಹಾಭಾಗವತರ ಸಾಂನಿಧ್ಯ ಬಲವು ದೊರಕಿತ್ತು. ಇವರು ಐದನೆಯ ಫಾರಂವರೆಗೆ ಹೈಸ್ಕೂಲಿನಲ್ಲಿ ಓದಿ ಅನಂತರ ಧಾರವಾಡದಲ್ಲಿ ಶ್ರೀ ಬೆಟಗೇರಿ ನಾಗೇಶಶಾಸ್ತ್ರಿಗಳಲ್ಲಿ ತರ್ಕಶಾಸ್ತ್ರವನ್ನು ಓದಿದರು. 1923ರಲ್ಲಿ ಮದ್ರಾಸ್ ಸಂಸ್ಕೃತ ಎಂಟ್ರೆನ್ಸ್ ಪರೀಕ್ಷೆ ಪ್ಯಾಸುಮಾಡಿ ಬೆಂಗಳೂರಿಗೆ ಬಂದು ತರ್ಕವಿದ್ವತ್‌ಪರೀಕ್ಷೆಯನ್ನು ಮುಗಿಸಿ ಶಂಕರಮಠದಲ್ಲಿ ವೇದಾಂತವ್ಯಾಸಂಗಕ್ಕೆ ಸೇರಿದರು. ಶಂಕರಮಠದಲ್ಲಿರುವಾಗಲೇ ರಾಯರು ಇವರನ್ನು ಸಪ್ತಾಹಕ್ಕೆ ಆಹ್ವಾನಿಸಿದ್ದರು.

ಐದನೆಯ ಉತ್ಸವವೂ ಬೆಂಗಳೂರಿನಲ್ಲಿಯೇ ನಡೆಯಿತು. ಈ ಐದು ವರ್ಷಗಳೂ ಮಹಾಜನರಿಂದ ಅಪ್ರಾರ್ಥಿತವಾಗಿ ಬಂದ ಮೊಬಲಗನ್ನು ಜಮಾಖರ್ಚು ಇಟ್ಟು ಉತ್ಸವದ ವರದಿಗಳನ್ನು ಅಚ್ಚುಮಾಡಿಸಿ ಉಚಿತವಾಗಿ ಮಹಾಜನರಲ್ಲಿ ಹಂಚಿದ್ದರಿಂದ ಶಂಕರಸಪ್ತಾಹಗಳು ಜನರ ಮೆಚ್ಚುಗೆಗೆ ಪಾತ್ರವಾಗುತ್ತಾ ಬಂದವು.

ಆರನೆಯ ವರ್ಷಕ್ಕೆ ಶಂಕರಸಪ್ತಾಹದ ವ್ಯಾಪ್ತಿಯು ಬೆಂಗಳೂರಿನಿಂದ ಹೊರಕ್ಕೂ ಆಯಿತು. ಆಗ್ಗೆ ವೇ॥ ಎಸ್. ವಿಠಲಶಾಸ್ತ್ರಿಗಳವರು ಶಿವಮೊಗ್ಗದಲ್ಲಿ ಹೈಸ್ಕೂಲು ಉಪಾಧ್ಯಾಯರಾಗಿದ್ದರು. ಅಲ್ಲಿ ಕೆಲವು ಮಹಾಜನರಿಗೆ ವೇದಾಂತಪಾಠವನ್ನೂ ಹೇಳುತ್ತಿದ್ದರು. ಕೆಲವು ಉಪನ್ಯಾಸಗಳನ್ನೂ ಮಾಡಿ ಎಲ್ಲರಿಗೂ ವೇದಾಂತದಲ್ಲಿ ಆಸಕ್ತಿಯನ್ನುಂಟುಮಾಡಿದ್ದರು. **ಆದ್ದರಿಂದ 1937ನೆಯ ಶ್ರೀ ಈಶ್ವರ ಸಂವತ್ಸರದ ಶಂಕರಸಪ್ತಾಹವು ಶಿವಮೊಗ್ಗದ ಕೋಟೆ ಭೀಮೇಶ್ವರ ದೇವಾಲಯದಲ್ಲಿ** ಏರ್ಪಾಡಾಗಿ ಬಹಳ ವಿಜೃಂಭಣೆಯಿಂದ ನೆರವೇರಿತು. ಆಗ್ಗೆ ಶ್ರೀ ಪಾಟಣಕರ ಚಂದ್ರಶೇಖರಭಟ್ಟರು, ಶ್ರೀ ಕುಕ್ಕೆ ಸುಬ್ರಹ್ಮಣ್ಯಶಾಸ್ತ್ರಿಗಳು-ಮೊದಲಾದ ವಿದ್ವಾಂಸರುಗಳೂ ವೇ॥ ಎಸ್. ವಿಠಲಶಾಸ್ತ್ರಿಗಳೊಡನೆ ಉತ್ಸವದಲ್ಲಿ ಭಾಷ್ಯಪ್ರವಚನಾದಿಗಳಲ್ಲಿ ಭಾಗವನ್ನು ವಹಿಸಿದ್ದರು. ಶಿವಮೊಗ್ಗದ ಬ್ರಾಹ್ಮಣಮಹಾಜನರು ಒಂದೊಂದು ದಿನದ ಪೂಜೆಯ, ಬ್ರಾಹ್ಮಣಭೋಜನದ ಖರ್ಚುವೆಚ್ಚಗಳನ್ನು ವಹಿಸಿಕೊಂಡಿದ್ದರು. ಒಟ್ಟುಕಾರ್ಯದ ಮೇಲ್ವಿಚಾರಣೆಯನ್ನು ಅಡ್ವೊಕೇಟ್ ಶ್ರೀ ವೆಂಕಟಸುಬ್ಬಾಶಾಸ್ತ್ರಿಗಳೆಂಬುವರು ವಹಿಸಿದ್ದರು. ಪರಸ್ಥಳದ ವಿದ್ವಾಂಸರ ದಾರಿಯ ಖರ್ಚನ್ನೂ ಸಪ್ತಾಹವರದಿಯ ಮುದ್ರಣ ವೆಚ್ಚವನ್ನೂ ಶಿವಮೊಗ್ಗ ಜನರೇ ವಹಿಸಿಕೊಂಡರು. ಹೀಗೆ ಉತ್ಸವವು ಯಶಸ್ವಿಯಾಗಿ ನಡೆಯಿತು. ಉತ್ಸವವು ಮುಗಿಯುವ ವೇಳೆಗೆ ಬ್ರಹ್ಮಸೂತ್ರಭಾಷ್ಯದ-ಐದು ಅಧಿಕರಣಗಳ ಗ್ರಂಥವನ್ನು ಪ್ರಕಾಶಗೊಳಿಸಿ ಜನರಲ್ಲಿ ಪ್ರಚಾರಮಾಡಲಾಯಿತು.

## Vedanta or The Science of Reality :

ಶ್ರೀ ಕೆ.ಎ. ಕೃಷ್ಣಸ್ವಾಮಿ ಅಯ್ಯರ್‌ರವರ ಈ ಉದ್‌ಗ್ರಂಥವು ಸುಮಾರು 1930ನೆಯ ಇಸವಿಯ ಕೊನೆಯಲ್ಲಿ ಹೊರಕ್ಕೆ ಬಂತು. ಆದರೆ ಅದು ಸಿದ್ಧವಾಗುತ್ತಿದ್ದಾಗ ಅದನ್ನು ನೋಡುವ

ಅವಕಾಶವು ರಾಯರಿಗೆ ದೊರೆಯಲಿಲ್ಲ. ಆದರೂ ಶ್ರೀ ಅಯ್ಯರ್‌ರವರು ಆ ಗ್ರಂಥದಲ್ಲಿ "ಶಂಕರರ ಕೆಲವು ಕ್ಲಿಷ್ಟವಾಕ್ಯಗಳಿಗೆ ಅರ್ಥವನ್ನು ವಿವರಿಸುವದರಲ್ಲಿ ಶ್ರೀ ವೈ. ಸುಬ್ಬರಾಯರು ನನಗೆ ಸಹಾಯಮಾಡಿದ್ದಾರೆ" ಎಂದು ಬರೆದಿದ್ದಾರೆ. ಇವು ರಾಯರು ಆಗಾಗ್ಗೆ ಅಯ್ಯರ್‌ರೊಡನೆ ನಡೆಸಿದ ಸಂಭಾಷಣೆಗಳಿಂದ ಉಂಟಾದ ಫಲವೇ ಹೊರತು ಈ ಗ್ರಂಥಕ್ಕಾಗಿಯೇ ರಾಯರು ಕೊಟ್ಟ ಸೂಚನೆಗಳಲ್ಲ. ಆದರೆ ಇಂಥ ಸಂಭಾಷಣೆಗಳು ರಾಯರ ಮೇಲೆ ಉತ್ತಮ ಪರಿಣಾಮವನ್ನುಂಟುಮಾಡಿದ್ದವು. ಆದ್ದರಿಂದ ಪತ್ರಿಕೆಯಲ್ಲಿ ಅವಸ್ಥಾತ್ರಯವಿಚಾರವನ್ನು ಕುರಿತ ಲೇಖನ ಮಾಲೆಗಳನ್ನು ರಾಯರು ಬರೆಯಲಾರಂಭಿಸಿದರು. ಇನ್ನೂ ಕೆಲವು ಕಾರ್ಯಾಲಯದ ಚಟುವಟಿಕೆಗಳಿಗೆ ಅಯ್ಯರ್‌ರವರ ಬೆಂಬಲವೂ ಒತ್ತಾಸೆಯೂ ರಾಯರಿಗೆ ದೊರಕಿದ್ದವು. ಒಂದು ರೀತಿಯಿಂದ ರಾಯರು ಸ್ಥಾಪಿಸಿರುವ ಕಾರ್ಯಾಲಯಕ್ಕೆ ಅಯ್ಯರ್‌ರವರೇ ಮುಖ್ಯ ಪ್ರೇರಕರು-ಎಂದರೂ ತಪ್ಪಾಗಲಾರದು. ಹೀಗಿದ್ದರೂ ಶ್ರೀ ಅಯ್ಯರ್‌ರವರ ಗ್ರಂಥವು ಮಾತ್ರ ಸಾಕಷ್ಟು ಪ್ರಚಾರವಾಗಲಿಲ್ಲ. ಅವರ ತತ್ತ್ವನಿರೂಪಣೆಯ ಸಾಮರ್ಥ್ಯವೂ ಜನರಿಗೆ ಇನ್ನೂ ಚೆನ್ನಾಗಿ ತಿಳಿದಿಲ್ಲ. `The world knows nothing of its great men' ಎಂಬ ಆಂಗ್ಲಸೂಕ್ತಿಯು ಶ್ರೀ ಅಯ್ಯರ್‌ರವರ ವಿಷಯಕ್ಕೆ ಅನ್ವರ್ಥವಾಗಿದೆ- ಎಂದು ರಾಯರು ಅಭಿಪ್ರಾಯಪಡುತ್ತಾರೆ. ಈಚೆಗೆ ರಾಯರು ಸಂನ್ಯಾಸವನ್ನು ಸ್ವೀಕಾರಮಾಡಿದ ಅನಂತರ 1965ನೆಯ ವರ್ಷದಲ್ಲಿ ಶ್ರೀ ಅಯ್ಯರ್‌ರವರ ಈ ಅಮೋಘಗ್ರಂಥವನ್ನು ಅಧ್ಯಾತ್ಮಪ್ರಕಾಶ ಕಾರ್ಯಾಲಯದ ಮೂಲಕವೇ ಮತ್ತೆ ಮುದ್ರಿಸಿ ಪ್ರಕಾಶಗೊಳಿಸಿದರು. ಇದನ್ನು ನೋಡಿದರೆ ರಾಯರಿಗೆ ಅಯ್ಯರ್‌ರಲ್ಲಿದ್ದ ಗುರುಭಾವನೆಯೂ ಪೂಜ್ಯಬುದ್ಧಿಯೂ ಎಷ್ಟರಮಟ್ಟಿನದು-ಎಂಬುದು ವ್ಯಕ್ತವಾಗುತ್ತದೆ. ಮತ್ತೆ ಈ ಗ್ರಂಥವು 1993ರಲ್ಲಿ ಬೆಂಗಳೂರು ಶಾಖಾ ಕಾರ್ಯಾಲಯದಿಂದ ಮೂರನೆಯ ಬಾರಿಗೆ ಪ್ರಕಟವಾಯಿತು.

### ಚಿಕ್ಕಲಿಂಗಣ್ಣನವರು :*

ಇವರು ಮೈಸೂರಿನವರು, ಗಂಗಡಿಕಾರ ಒಕ್ಕಲಿಗರ ಮನೆತನಕ್ಕೆ ಸೇರಿದವರು. ಇವರ ಪೂರ್ವಜರು ಮೈಸೂರು ಅರಮನೆಯಲ್ಲಿ ಸೇವಕರಾಗಿದ್ದು ಮಹಾರಾಜರ ಮೆಚ್ಚುಗೆಗೆ ಪಾತ್ರರಾದವರೆಂದು ತಿಳಿದುಬರುತ್ತದೆ. ಇವರಿಗೆ ವೇದಾಂತದಲ್ಲಿ ಅಭಿರುಚಿಯುಂಟಾಗಿ ಅಧ್ಯಾತ್ಮ ಮಾರ್ಗವನ್ನೇ ಅವಲಂಬಿಸಿಬಿಟ್ಟಿದ್ದರು. ಇವರು ಒಂದು ಬಾರಿ ಅಯ್ಯರ್‌ರವರ `Fundamentals of Vedanta' ಎಂಬ ಗ್ರಂಥಕ್ಕೆ ರಾಯರು ಬರೆದಿದ್ದ ಅನುವಾದ ರೂಪವಾದ "ವೇದಾಂತ ವಿಚಾರದ ಗುಟ್ಟು" ಎಂಬ ಗ್ರಂಥವನ್ನು ಓದಿದ ಅನಂತರ ಬೆಂಗಳೂರಿಗೆ ಬಂದು

---

* ಇವರ ಸಂಪೂರ್ಣ ಜೀವನ ಚರಿತ್ರೆಯನ್ನು ಶ್ರೀ ಬಿ.ಹೆಚ್. ಮುನಿಸ್ವಾಮಿ ರಾವ್(ಅನಂತರದ ಹೆಸರು: ಪಂಡಿತ ರಾಮನಾಥಸ್ವಾಮಿಗಳು) ಎಂಬುವರು ಕನ್ನಡದಲ್ಲಿ ಬರೆದಿದ್ದಾರೆ.

ಶ್ರೀ ಅಯ್ಯರ್‌ರವರನ್ನೂ ರಾಯರನ್ನೂ ಭೇಟಿ ಮಾಡಿದರು. ರಾಯರನ್ನು ಮೊದಲಬಾರಿಗೆ ನೋಡಿದಾಗ 'ಸರ್ವಭೂತಸ್ಥಮಾತ್ಮಾನಂ' ಎಂಬ (6-30) ಗೀತಾಶ್ಲೋಕದ ವಿಷಯವಾಗಿ ಪ್ರಶ್ನೆಮಾಡಿದರು. ಆಗ ರಾಯರು ಈ ಶ್ಲೋಕದಲ್ಲಿ ಹೇಳಿರುವದು ಪಾತಂಜಲಯೋಗವಲ್ಲವೆಂದೂ ಇದರಲ್ಲಿ ನಿಧಿಧ್ಯಾಸನವೆಂಬ ವೈದಿಕವಾದ ಅಧ್ಯಾತ್ಮಯೋಗ ವನ್ನು ವಿವರಿಸಿದೆಯೆಂದೂ ಹೇಳಿ 'ಆತ್ಮಾನಾತ್ಮರ ಅನ್ಯೋನ್ಯಾಧ್ಯಾಸದಿಂದುಂಟಾಗಿರುವ ಸಂಸಾರವೂ ಜನ್ಮಜರಾದಿದುಃಖಗಳೂ ಧ್ಯಾನಯೋಗದಿಂದ ಸರ್ವಭೂತಗಳಿಗೂ ಅಂತರಾತ್ಮನಾದ ಪರಬ್ರಹ್ಮವನ್ನು ಕಂಡುಕೊಂಡಾಗ ಇಲ್ಲವಾಗುವವು. ಈ ಪರಬ್ರಹ್ಮ ಸ್ವರೂಪದಲ್ಲೇ ನೆಲೆನಿಲ್ಲುವನು'- ಎಂದೂ ತಿಳಿಯಿಸಿದರು. ಶ್ರೀ ಚಿಕ್ಕಲಿಂಗಣ್ಣನವರು ತಾವು ಸರಿಯಾಗಿ ತಿಳಿದುಕೊಂಡೆನೊ, ಇಲ್ಲವೊ-ಎಂಬುದನ್ನು ನಿಶ್ಚಯಿಸಲು ರಾಯರು ಹೇಳಿದ್ದ ವಿಷಯಗಳನ್ನು ಮತ್ತೆ ರಾಯರ ಎದುರಿಗೇ ವಿವರಿಸಿ ಹೇಳಿದರಂತೆ. ಆಗ ರಾಯರಿಗೆ ಇವರು ಸಾಮಾನ್ಯ ಮನುಷ್ಯರಲ್ಲ, ಶಾಸ್ತ್ರವಿಚಾರಸರಣಿಯನ್ನು ಅರಿತುಕೊಂಡಿರುವವರು, ಸ್ವಾಭಿಪ್ರಾಯವನ್ನು ಸುಸ್ಪಷ್ಟವಾಗಿ ತಿಳಿಸಬಲ್ಲ ಭಾಷೆಯನ್ನು ಸ್ವಾಧೀನದಲ್ಲಿಟ್ಟುಕೊಂಡಿರುವವರು- ಎಂಬುದು ವ್ಯಕ್ತವಾಯಿತು. ಇವರ ಭವ್ಯವಾದ ದೇಹಸಂಪತ್ತೂ ಮಾತನಾಡುವ ಶೈಲಿಯೂ ಇವರು ಒಳ್ಳೆಯ ಸುಸಂಸ್ಕೃತರೆಂಬುದಕ್ಕೆ ಹೆಗ್ಗುರುತಾಗಿತ್ತು. ಮುಂದೆ ಆಗಾಗ್ಗೆ ರಾಯರೇ ಸಮಯ ಬಂದಾಗಲೆಲ್ಲ ಇವರನ್ನು ಭೇಟಿಮಾಡಿ ವೇದಾಂತವಿಚಾರದಲ್ಲಿ ಚರ್ಚೆಗಳನ್ನು ಮಾಡುತ್ತಿದ್ದರು. ರಾಯರು ಬಹಳ ದೊಡ್ಡವೇದಾಂತಿಗಳೆಂದೂ ವಿದ್ವಾಂಸರೆಂದೂ ಅನುಭವಿಗಳೆಂದೂ ಶ್ರೀ ಚಿಕ್ಕಲಿಂಗಣ್ಣನವರು ತಿಳಿದಿದ್ದರು. ಮತ್ತು ರಾಯರನ್ನು ಪೂಜ್ಯಬುದ್ಧಿಯಿಂದ ಕಾಣುತ್ತಿದ್ದರು. ಮಾಸಪತ್ರಿಕೆಗೆ ಚಂದಾದಾರರಾಗುವಂತೆ ತಮ್ಮ ಶಿಷ್ಯರನ್ನು ಪ್ರೋತ್ಸಾಹಿಸುವದೂ ರಾಯರು ಪ್ರಕಟಿಸಿರುವ ಅಧ್ಯಾತ್ಮಗ್ರಂಥಗಳನ್ನು ಕೊಳ್ಳುವಂತೆ ಮತ್ತು ಓದುವಂತೆ ಜನರನ್ನು ಪ್ರೇರಿಸುವದೂ ಶ್ರೀ ಲಿಂಗಣ್ಣನವರ ಸ್ವಭಾವವಾಗಿಬಿಟ್ಟಿತ್ತು. ಶ್ರೀ ಲಿಂಗಣ್ಣನವರು ಬೆಂಗಳೂರಿಗೆ ಬಂದಾಗಲೆಲ್ಲ ಶ್ರೀ ಅಯ್ಯರ್‌ರವರೂ ರಾಯರೂ ಅವರನ್ನು ಸಂಧಿಸುತ್ತಿದ್ದರು. ವೇದಾಂತವಿಚಾರದ ಸರಣಿಯಲ್ಲಿ ಕೆಲವು ಕಡೆ ಪ್ರಕ್ರಿಯಾಭೇದವೂ ವೈಲಕ್ಷಣ್ಯವೂ ಕಂಡುಬಂದರೂ ಶ್ರೀ ಲಿಂಗಣ್ಣನವರು ಶಾಂತರಾಗಿಯೇ ವಿಚಾರಮಾಡುತ್ತಾ ಪ್ರಶ್ನೆಗಳನ್ನು ಹಾಕಿ ಉತ್ತರಗಳನ್ನು ಬರಮಾಡಿಕೊಳ್ಳುತ್ತಿದ್ದರು. 1935ರ ಫೆಬ್ರವರಿಯಲ್ಲಿ ರಾಮಕೃಷ್ಣಾಶ್ರಮದಲ್ಲಿ ರಾಯರು ಉಪನ್ಯಾಸ ಮಾಡುತ್ತಾರೆಂಬ ಸುದ್ದಿಯನ್ನು ಕೇಳಿ ಶ್ರೀ ಲಿಂಗಣ್ಣನವರು ಅಲ್ಲಿಗೆ ಬಂದಿದ್ದರು. ಬಹಳ ಕುತೂಹಲದಿಂದ ಅದನ್ನು ಕೇಳಿ ಮಾರನೆಯ ದಿನ ರಾಯರಿಂದ ಮೈಸೂರಿನ ಜಗ್ಗುಲಾಲ ಛತ್ರದಲ್ಲಿ ಉಪನ್ಯಾಸವನ್ನು ಮಾಡಿಸಿದರು. ಆ ಸಭೆಯಲ್ಲಿ ರಾಯರನ್ನು ತುಂಬ ಹೊಗಳಿ ಪ್ರಕಟವಾಗಲಿದ್ದ ಬ್ರಹ್ಮಸೂತ್ರ ಭಾಷ್ಯವನ್ನು ಕೊಂಡುಕೊಳ್ಳುವಂತೆ ಜನರನ್ನು ಪ್ರೋತ್ಸಾಹಿಸಿದರು. ಹೀಗೆ ವೇದಾಂತದ ವಿಚಾರಗಳನ್ನು ಪ್ರಚಾರಮಾಡುತ್ತಾ ಕಾರ್ಯಾಲಯಕ್ಕೆ ಪ್ರಿಯರಾಗಿದ್ದ ಶ್ರೀಯುತರು 1937ರಲ್ಲಿ ಮುಕ್ತರಾದರು.

## ವೇ॥ ಬ್ರ॥ ಶ್ರೀ॥ ಹಾನಗಲ್ ವಿರೂಪಾಕ್ಷಶಾಸ್ತ್ರಿಗಳು :

ಇವರು ಮೈಸೂರಿಗೆ ದಯಮಾಡಿಸಿದ ಮೇಲೆ ಸಂಸ್ಕೃತಮಹಾಪಾಠಶಾಲೆಯ ಸುವರ್ಣಮಹೋತ್ಸವವು ನಡೆಯಿತು. ಆಗ್ಗೆ ಪಂಡಿತ ಮದನಮೋಹನ ಮಾಳವೀಯರು ಬಂದಿದ್ದರು. ಆ ಕಾಲಕ್ಕೆ ನಡೆದ ಕೆಲವು ಮತಸುಧಾರಣಾವಿಷಯಕವಾದ ಚರ್ಚೆಯಲ್ಲಿ ವೇ॥ ಶಾಸ್ತ್ರಿಗಳು ವಿಧವಾವಿವಾಹವು ಅಶಾಸ್ತ್ರೀಯವೆಂದು ಮನಗಾಣಿಸಿಕೊಟ್ಟಿದ್ದರು. (ಶ್ರೀ ಮಾಳವೀಯರು ಬೆಂಗಳೂರಿಗೂ ಬಂದಿದ್ದಾಗ ಬ್ರಾಹ್ಮಣೇತರರಿಗೆ ಪುರಾಣಾದಿಗಳನ್ನು ಶ್ರವಣ ಮಾಡಿಸಬಹುದೆ? ಪ್ರಣವಸಹಿತ ಪಂಚಾಕ್ಷರಿಯನ್ನು ಉಪದೇಶಿಸಬಹುದೆ? ಮುಂತಾದ ಚರ್ಚೆಗಳನ್ನು ಪಂಡಿತರೊಡನೆ ನಡೆಯಿಸಿದ್ದರು. ಆಗ್ಗೆ ರಾಯರೂ ವೇ॥ ವಿಠಲಶಾಸ್ತ್ರಿಗಳೂ ಭಾಗವನ್ನು ವಹಿಸಿದ್ದರು. ಪ್ರಣವೋಪದೇಶಕ್ಕೆ ಅಬ್ರಾಹ್ಮಣರಿಗೆ ಅವಕಾಶವಿಲ್ಲವೆಂಬುದಕ್ಕೆ ರಾಯರು ಸೂತಸಂಹಿತಾವಾಕ್ಯವನ್ನು ತೋರಿಸಿದ್ದಕ್ಕೆ ಮಾಳವೀಯರು ಒಪ್ಪಿಕೊಂಡಿದ್ದರು.) ಶ್ರೀ ವಿರೂಪಾಕ್ಷಶಾಸ್ತ್ರಿಗಳು ಆನಂತರ ದರ್ಭಾಂಗದಲ್ಲಿ ನಡೆದ ಅಖಿಲಭಾರತ ಮಹಾಮಹೋಪಾಧ್ಯಾಯ ಸನ್ಮಾನ ಸಮಾರಂಭದಲ್ಲಿ ಉಪನ್ಯಾಸವನ್ನು ಕೊಟ್ಟು ಯಶಸ್ಸನ್ನು ಗಳಿಸಿದರು. ಆಮೇಲೆ ಕಾಶಿಯಲ್ಲಿ ಅಖಿಲಭಾರತ ಮಹಾವರ್ಷೀಯಬ್ರಾಹ್ಮಣ ಸಮ್ಮೇಳನಕ್ಕೆ ಹೋಗಿ ಸನಾತಧರ್ಮದ ವಿಷಯವಾಗಿ ಭಾಷಣಮಾಡಿದ್ದರು. ಆಮೇಲೆ ಮೈಸೂರು ಶ್ರೀಮನ್ಮಹಾರಾಜರು ಇವರನ್ನು ಆಸ್ಥಾನ ಧರ್ಮಾಧಿಕಾರಿಗಳನ್ನಾಗಿ ನೇಮಿಸಿದರು. ಮುಂದೆ **ಶ್ರೀಮತ್ಪರಮಹಂಸೇತ್ಯಾದಿ ಬಿರುದಾಂಕಿತ ಶ್ರೀಮದಭಿನವ ವಾಲುಕೇಶ್ವರ ಭಾರತೀಸ್ವಾಮಿಗಳೆಂಬ** ಹೆಸರಿನಿಂದ **ಕೂಡಲಿ ಶೃಂಗಗಿರಿ ಜಗದ್ಗುರು ಪೀಠವನ್ನು ಅಲಂಕರಿಸಿದರು.** ಅದಾದ ಒಂದು ವರ್ಷದ ಮೇಲೆ ರಾಯರು ಅವರ ದರ್ಶನವನ್ನು ಪಡೆದಿದ್ದರು. ಸುಮಾರು ಮೂರುವರ್ಷ ಕಾಲ ಜಗದ್ಗುರು ಪೀಠದಲ್ಲಿ ವಿರಾಜಮಾನರಾಗಿ ಶಿಷ್ಯರಿಗೆ ಧರ್ಮೋಪದೇಶ ಮಾಡುತ್ತಿದ್ದು ಶ್ರೀಶ್ರೀಗಳವರು 1936ನೇ ಏಪ್ರಿಲ್ ಮಾಹೆಯಲ್ಲಿ ಬ್ರಹ್ಮೀಭೂತರಾದರು. ರಾಯರಿಗೆ ಮಾತ್ರ ಕಡೆಯವರೆಗೂ ಮೂಲಾವಿದ್ಯಾನಿರಾಸಗ್ರಂಥದ ಬಗ್ಗೆ ಅವರೊಡನೆ ಚರ್ಚೆಮಾಡುವದಕ್ಕಾಗಲಿ ಅಭಿಪ್ರಾಯವಿನಿಮಯಕ್ಕಾಗಲಿ ಅವಕಾಶವೇ ದೊರೆಯಲಿಲ್ಲ. ಆ ಕಾಲಕ್ಕೆ ಉತ್ತರಾದಿ ಮಠದ ಶ್ರೀಗಳು ಹೊರಡಿಸಿದ್ದ "ದ್ವೈತಸಿದ್ಧಾಂತ ವಿಚಾರ" ಎಂಬ ಗ್ರಂಥಕ್ಕೆ ರಾಯರು ವಿಮರ್ಶೆಯನ್ನು ಬರೆದು ಬ್ರ॥ ಶ್ರೀ ವಿರೂಪಾಕ್ಷಶಾಸ್ತ್ರಿಗಳಿಗೆ ತೋರಿಸಿ ಅನುಮತಿಯನ್ನು ಪಡೆದಿದ್ದರು. ಅದನ್ನು ಪಂಡಿತರುಗಳು ಅಚ್ಚು ಮಾಡಿಸಿದರು.

## ಧರ್ಮಸಮ್ಮೇಳನಗಳು :

1933ನೆಯ ಇಸವಿಯಲ್ಲಿ ರಾಯರು ಎರಡು ಧರ್ಮಸಮ್ಮೇಳನಗಳಲ್ಲಿ ಭಾಗವನ್ನು ವಹಿಸಿದ್ದರು. ಬೆಂಗಳೂರಿನಲ್ಲಿದ್ದ ಶ್ರೀ ಎ. ಜೆ. ಖಲೀಜ್ ಎಂಬುವರು ಒಂದು ಸರ್ವಧರ್ಮಸಮ್ಮೇಳನವನ್ನು ಮುಸ್ಲಿಂ ಹಾಲ್‌ನಲ್ಲಿ ಏರ್ಪಡಿಸಿದ್ದರು. ಅದು ನಾಲ್ಕು ದಿನಗಳವರೆಗೆ

ನಡೆಯಿತು. "ಹ್ಯೂಮನಿಸಮ್" ಎಂಬ ಮಾನವ ಸಮಾಜದ ಆರಾಧನೆಯನ್ನು ಹೊಗಳುವ ಮತವನ್ನು ಶ್ರೀ ವಿ. ವಿ. ಕೆ. ರಂಗಾಚಾರ್ ಎಂಬುವರು ಪ್ರತಿನಿಧೀಕರಿಸಿದ್ದರು. ರಾಯರು ಎರಡು ದಿನಗಳವರೆಗೆ ಆ ಸಭೆಗೆ ಅಧ್ಯಕ್ಷರಾಗಿದ್ದರು. ಈ ಸಮ್ಮೇಳನದಲ್ಲಿ ಮುಸ್ಲಿಮರಿಗೆ ಹೆಚ್ಚು ಪ್ರಾಮುಖ್ಯವಿತ್ತಾದರೂ ಬಹುಮಟ್ಟಿಗೆ ಎಲ್ಲರಿಗೂ ಪ್ರಾತಿನಿಧ್ಯವನ್ನು ಕಲ್ಪಿಸಿದ್ದರು.

ಮತ್ತೊಂದು ಧರ್ಮಸಮ್ಮೇಳನವು ನಾಸಿಕದಲ್ಲಿ ಕರವೀರಪೀಠದ ಶಂಕರಾಚಾರ್ಯರ ನೇತೃತ್ವದಲ್ಲಿ ನಡೆಯಿತು. ಇದು ಹಿಂದಿನದಕ್ಕಿಂತಲೂ ಬಹಳ ದೊಡ್ಡದಾಗಿತ್ತು. ಇದರಲ್ಲಿ ಆರ್ಯಸಮಾಜ, ಇಸ್ಲಾಂ, ಯಹೂದಿ, ಶಾಕ್ತ ಮುಂತಾದ ಮತದವರೆಲ್ಲ ಸೇರಿದ್ದರು. ಅಲ್ಲಿ ರಾಯರು- Conquest of Fear' (ಭಯಪರಾಜಯ) ಎಂಬ ಇಂಗ್ಲಿಷ್ ಭಾಷಣವನ್ನು ಓದಿದರು. ಅದು ಮದ್ರಾಸಿನ 'ವೇದಾಂತಕೇಸರಿ' ಮಾಸಪತ್ರಿಕೆಯಲ್ಲಿ ಪ್ರಕಟವಾಯಿತು. ಅಂತೂ ಎರಡು ಸಮ್ಮೇಳನಗಳಲ್ಲೂ ರಾಯರು ಭಾಗವನ್ನು ವಹಿಸಿ ಪ್ರಸಿದ್ಧರಾದರು.

## ಉದ್ಯೋಗದಿಂದ ನಿವೃತ್ತಿ; ಹೊಳೆನರಸೀಪುರದಲ್ಲಿ ವಾಸ :

1935ರಲ್ಲಿ ರಾಯರಿಗೆ ಸರಕಾರಿಯ ಉದ್ಯೋಗದಿಂದ ನಿವೃತ್ತಿಯಾಯಿತು. ಇನ್ನೂ ಮೂರು ವರ್ಷಗಳು ಮುಂದುವರಿಯಬಹುದೆಂದು ಸರಕಾರದವರು ಅನುಮತಿಯಿತ್ತರಾದರೂ ಅರ್ಧಸಂಬಳವು ಪೆನ್‌ಷನ್ ರೂಪದಲ್ಲಿ ಬಂದೇ ಬರುವದರಿಂದ ಕೇವಲ ಇನ್ನು ಅರ್ಧಸಂಬಳಕ್ಕಾಗಿ ಕೆಲಸಮಾಡುತ್ತಾ ನಿರ್ಬಂಧದಲ್ಲಿರುವದು ಸರಿಯಲ್ಲವೆಂದು ರಾಯರಿಗೆ ತೋರಿತು. ಆದ್ದರಿಂದ ನಿವೃತ್ತಿಗೆ ಸರಕಾರದ ಅನುಮತಿಯನ್ನು ಕೇಳಿಕೊಂಡು ಅದು ದೊರೆತಕೂಡಲೆ ನಿವೃತ್ತರಾದರು. ಆ ವೇಳೆಗೆ ಅವರಿಗೆ ಎಲ್ಲಿಯಾದರೂ ಗದ್ದಲವಿಲ್ಲದ ಶಾಂತವಾಗಿರುವ ಊರಿನಲ್ಲಿರಬೇಕೆಂದೂ ಮುಂದೆ ಸಂನ್ಯಾಸವನ್ನು ಸ್ವೀಕಾರಮಾಡಬೇಕೆಂದೂ ಇಚ್ಛೆಯಿತ್ತು. ಅದಕ್ಕೆ ತಕ್ಕಂತೆ ಪ್ಲೀಡರ್ ಶ್ರೀ ಪಿ. ಎನ್. ನರಸಿಂಹಯ್ಯನವರ ಸಹಕಾರದಿಂದ ಹೊಳೆನರಸೀಪುರದಲ್ಲಿ ಗದ್ದೆಯೂ, ಮನೆಯನ್ನು ಕಟ್ಟಲು ಒಂದು ನಿವೇಶನವೂ ಸಹ ಕ್ರಯಕ್ಕೆ ದೊರೆತವು. ರಾಯರು ಹೊಳೆನರಸೀಪುರದಲ್ಲಿಯೇ ನೆಲಸುವ ಉದ್ದೇಶದಿಂದ 1937ನೆಯ ಏಪ್ರಿಲ್ ಮಾಹೆಯಲ್ಲಿ ಅಲ್ಲಿಗೆ ಬಂದುಬಿಟ್ಟರು. ಅಲ್ಲಿಂದ ಮುಂದೆ ಒಂದುವರ್ಷಕಾಲ ಕಾರ್ಯಾಲಯವು ಬೆಂಗಳೂರಿನಲ್ಲಿದ್ದುಕೊಂಡಿತ್ತು. ರಾಯರು ತಮ್ಮ ಬೆಂಗಳೂರಿನ ಮನೆಯನ್ನು ಮಾರಿದಮೇಲೆ ಕಾರ್ಯಾಲಯವು ಸಂಪೂರ್ಣವಾಗಿ 1938ನೆಯ ಏಪ್ರಿಲ್ ಮಾಹೆಯಲ್ಲಿ ಹೊಳೆನರಸೀಪುರಕ್ಕೇ ಬಂದಿತು.

# ೧೩. ಹೊಳೆನರಸೀಪುರದಲ್ಲಿ ಕಾರ್ಯಾಲಯದ ಮುನ್ನಡೆ

## ಸ್ವತಂತ್ರಕಾರ್ಯಾಲಯದ ಬೀಜಾವಾಪ:

ಕಾರ್ಯಾಲಯವು ತನ್ನ ಚಟುವಟಿಕೆಗಳನ್ನು ವಿಸ್ತಾರಗೊಳಿಸಲು ಬೆಂಗಳೂರಿನಂಥ ಮುಂದುವರಿದ ನಾಗರಿಕ ಜನರನ್ನೂ ಆಧುನಿಕ ಸೌಕರ್ಯವಿಶೇಷಗಳನ್ನೂ ಉಳ್ಳ ಪಟ್ಟಣವನ್ನು ಬಿಟ್ಟು ಸಾಮಾನ್ಯ ಸ್ಥಿತಿಯಲ್ಲಿನ ಹೊಳೇನರಸೀಪುರಕ್ಕೆ ಆಗ್ಗೆ ಬಂದದ್ದು ಒಂದು ರೀತಿಯಿಂದ ಅನುಚಿತವೆಂದು ತೋರಿದರೂ ನಿಜವಾದ ಕಾರ್ಯಸಾಧನೆಯನ್ನು ಮಾಡಿ ರಾಯರು ಅಧ್ಯಾತ್ಮವಿಚಾರಪ್ರಪಂಚದಲ್ಲಿ ಅದರಲ್ಲೂ ಶಾಂಕರವೇದಾಂತದ ಕ್ಷೇತ್ರದಲ್ಲಿ ಧ್ರುವತಾರೆಯಾಗಿ ಬೆಳಗಲು ತಕ್ಕ ಶಾಂತವಾತಾವರಣವನ್ನೂ ಸನ್ನಿವೇಶವನ್ನೂ ಹೊಂದಿದ್ದ ಹೊಳೆನರಸೀಪುರವು ರಾಯರಿಗೆ ಎಲ್ಲಾ ರೀತಿಯಿಂದಲೂ ವಾಸಕ್ಕೆ ಯೋಗ್ಯವಾಗಿತ್ತು. ಆದ್ದರಿಂದ ರಾಯರೊಡನೆ ಅವಿನಾಭಾವಸಂಬಂಧದಿಂದ ಅಂಟಿಕೊಂಡಿದ್ದ ಕಾರ್ಯಾಲಯವು ರಾಯರ ಜೊತೆಯಲ್ಲಿಯೇ ಹೊಳೆನರಸೀಪುರಕ್ಕೆ ಬರುವದು ಅನಿವಾರ್ಯವಾಗಿತ್ತು. ಹೀಗೆ ರಾಯರಿಗೆ ಸರ್ಕಾರಿ ಉದ್ಯೋಗದಿಂದ ವಿಶ್ರಾಂತಿಯಾಗುವ ವೇಳೆಗೆ ಕಾರ್ಯಾಲಯವು ಹೊಳೆನರಸೀಪುರಕ್ಕೆ ಕಾಲಿಟ್ಟಿತ್ತು. ನಿಜವಾದ ಸ್ವತಂತ್ರಕಾರ್ಯಾಲಯದ ಬೆಳವಣಿಗೆಯು ಈಗ ಪ್ರಾರಂಭವಾಗುತ್ತದೆಯೆನ್ನಬೇಕು.

ಪರಮೇಶ್ವರನ ಸಂಕಲ್ಪವು ಏನಿರುವದೆಂಬುದು ಮಾನವರಿಗೆ ಊಹಿಸಲೂ ಅಸಾಧ್ಯವಾದದ್ದು. ಅವನು ತನ್ನ ಸೃಷ್ಟಿಯಲ್ಲಿ ತೋರಿರುವ ಅದ್ಭುತಗಳನ್ನು ಯಾವದಾದರೊಂದು ಸಾಮಾನ್ಯವ್ಯಕ್ತಿಯ ಮೂಲಕವಾದರೂ ಹೊರಹಾಕಬಹುದು. ರಾಯರಂಥ ಸಾಮಾನ್ಯ ಸ್ಕೂಲುಮಾಸ್ಟರುಗಳು ಎಷ್ಟು ಜನರಿಲ್ಲ! ಆದರೆ ಭಗವಂತನು ರಾಯರನ್ನು ತನ್ನ ವಿಭೂತಿಪ್ರಕಟನೆಗೆ ಸ್ಥಾನವಾಗಿ ಆರಿಸಿಕೊಂಡನು. ಅವರಿಗೆ ಆದರ್ಶಗೃಹಸ್ಥಕುಟುಂಬದವರೂ ಈಶ್ವರನಲ್ಲಿ ಭಕ್ತಿಶ್ರದ್ಧೆಗಳುಳ್ಳವರೂ ಆದ ತಂದೆತಾಯಿಗಳಿಂದ ಜನ್ಮವನ್ನು ಕರುಣಿಸಿದನು. ವಿದ್ಯಾಸಕ್ತಿಯುಳ್ಳ ಮಹನೀಯರಿಂದ ವಿದ್ಯಾಭ್ಯಾಸವನ್ನು ಕರುಣಿಸಿದನು. ಪ್ರೌಢವಿದ್ಯಾಭ್ಯಾಸಕ್ಕೆ ನಾಗರಿಕತೆಯ ಪಟ್ಟಣಕ್ಕೆ ಕಾಲಿಟ್ಟಾಗಲೂ ಶ್ರೀ ಅಯ್ಯರಂಥ ವೇದಾಂತವಿಚಾರತತ್ಪರರಾದ ಮಹನೀಯರ ಸಾಂನಿಧ್ಯವನ್ನೇ ಕರುಣಿಸಿದನು. ಅಧ್ಯಾತ್ಮವಿಚಾರದ ಪುಸ್ತಕಗಳೂ ಹಾಗೂ ಸಾಧುಜನರೇ ಜೀವನದಲ್ಲಿ ಒದಗುವಂತೆ ಮಾಡಿದನು. ಜೀವನೋಪಾಯಕ್ಕಾಗಿ ಸರ್ಕಾರಿಕೆಲಸವನ್ನು ಮಾಡಬೇಕಾಗಿ ಬಂದಾಗ ದುರ್ವ್ಯಾಪಾರಗಳಿಗೆ ಅವಕಾಶವಿಲ್ಲದ, ಹಸುಮಕ್ಕಳೊಡನೆ ಒಡನಾಡುತ್ತಾ ವಿದ್ಯಾಕಾಲಕ್ಷೇಪದಲ್ಲಿರಲು ಅನುಕೂಲವಾಗುವಂತೆ ವಿದ್ಯಾಭ್ಯಾಸದ ಇಲಾಖೆಯನ್ನೇ ಕರುಣಿಸಿದನು. ವೇದಾಂತಜ್ಞಾನಕ್ಕೆ ಸದ್ಗುರೂಪದೇಶವು ಅವಶ್ಯವೆಂಬುದನ್ನು ಮನಗಂಡು ಶೃಂಗೇರಿ ಪೀಠಾಧಿಪತಿಗಳಂಥ ತಪಸ್ವಿಗಳಾದ ಮಹಾತ್ಮರಿಂದ ಭಾಷ್ಯಶಾಂತಿಯನ್ನು ಅನುಗ್ರಹಿಸಿದನು. ವೇದಾಂತವಿಚಾರವು ಕೇವಲ ಹೊಟ್ಟೆಪಾಡಿನ ಸಾಧನವಾಗದಿರದಂತೆ

ಮಾಡಲು ಮಾರುತಿಯ ಅವತಾರವೆಂದು ಪ್ರಸಿದ್ಧರಾದ **ಗೋಂದಾವಳಿ ಮಹಾರಾಜರ** ಅನುಗ್ರಹಕ್ಕೆ ಪಾತ್ರರಾಗಿ ಸಾಧನತತ್ಪರರಾಗುವಂತೆ ತಿರುಗಿಸಿದನು. ಬೇರೆಬೇರೆಯ ನೆಪದಿಂದ ದಿವ್ಯತೀರ್ಥಕ್ಷೇತ್ರಗಳ ದರ್ಶನವನ್ನು ಮಾಡಿಸಿದನು. ಆಗಾಗ್ಗೆ ಲೌಕಿಕಜೀವನಕ್ಕೆ ಬೇಕಾದ ಅನುಕೂಲ್ಯಗಳನ್ನು ಬೇರೆಬೇರೆಯ ಸಂದರ್ಭದಲ್ಲಿ ಒದಗಿಸಿಕೊಟ್ಟನು. **"ಮೂಲಾವಿದ್ಯಾನಿರಾಸ"** ದಂಥ ಉದ್‌ಗ್ರಂಥವನ್ನು ಸಂಸ್ಕೃತಭಾಷೆಯಲ್ಲಿ ಬರೆಯಿಸಿ ಭಗವತ್ಪಾದರ ಸೇವೆಯನ್ನು ಮಾಡುವಂತೆಯೂ ಕೀರ್ತಿಶಾಲಿಗಳಾಗುವಂತೆಯೂ ಅನುಗ್ರಹಿಸಿದನು. ಬಳಿಕ ಆ ಗ್ರಂಥಮುದ್ರಣದ ನೆಪದಿಂದ ಅಧ್ಯಾತ್ಮ ಗ್ರಂಥಗಳೆಲ್ಲ ತಪ್ಪಿಲ್ಲದೆ ತೃಪ್ತಿಕರವಾಗಿ ಅಚ್ಚಾಗಲು ಅನುಕೂಲಿಸುವಂತೆ ಮುದ್ರಣಾಲಯವನ್ನೂ ಸ್ಥಾಪಿಸಿ ನಡೆಸುವ ಚೈತನ್ಯವನ್ನು ಕೊಟ್ಟನು. ಕೊನೆಗೆ ಕಾರ್ಯಾಲಯದ ಕೆಲಸವನ್ನು ಅಪ್ರತಿಬಂಧವಾಗಿ ಸ್ವತಂತ್ರವಾಗಿ ನಡೆಸಲು ಅನುಕೂಲಿಸುವಂತೆ ಸಂಸ್ಥೆಯು ತನ್ನ ಬಾಲ್ಯವನ್ನು ಕಳೆದು ಯೌವನವನ್ನು ತಳೆಯುವ ವೇಳೆಗೆ ನಗರವಾಸವು ಸಾಕೆಂದು ಹೊಳೆನರಸೀಪುರಕ್ಕೆ ಕಳುಹಿಸಿದನು. ಆ ಮಹಾಮಹಿಮನ ಮಹಿಮೆಯನ್ನು ಹೀಗೆ ಎಷ್ಟೆಂದು ವರ್ಣಿಸೋಣ?

## ಗ್ರಂಥಕಾಲಕ್ಷೇಪ, ಉಪನ್ಯಾಸಗಳು :

ರಾಯರು ಹೊಳೆನರಸೀಪುರಕ್ಕೆ ಬಂದ ಹೊಸದರಲ್ಲಿ ಎರಡು ತಿಂಗಳಕಾಲ ಶ್ರೀ ಪಿ.ಎನ್. ನರಸಿಂಹಯ್ಯನವರ ಪಕ್ಕದ ಮನೆಯಲ್ಲಿಯೇ ಇದ್ದರು. ಆಗ ಉಪದೇಶಸಾಹಸ್ರಿ (ಪದ್ಯ) ಪಾಠವು ನಡೆಯುತ್ತಿತ್ತು. ಮೊದಮೊದಲು ಅಷ್ಟೇನೂ ಜನರು ಸೇರಲಿಲ್ಲ. ರಾಯರು ಮತ್ತೊಂದು ಮನೆಗೆ ಬದಲಾಯಿಸುವ ವೇಳೆಗೆ ಸುಮಾರು 15 ಜನರು ಸೇರುವಂತಾಯಿತು. ಕೆಲವು ಸಣ್ಣ ಸಣ್ಣ ಉಪನಿಷತ್ ಪಾಠಗಳು ಆದವು. ಕೆಲವು ಉಪನ್ಯಾಸಗಳೂ ನಡೆದವು. ಶಿವಮೊಗ್ಗದ ಕರ್ನಾಟಕ ಸಂಘದಲ್ಲೂ ಬೆಂಗಳೂರಿನಲ್ಲೂ ರಾಯರು ಕೆಲವು ಉಪನ್ಯಾಸಗಳನ್ನು ಮಾಡಿದರು.

## ಗ್ರಂಥಪ್ರಕಟನೆ :

**ಶಿವಕವಚ, ಆತ್ಮಬೋಧೆ, ಅಧ್ಯಾತ್ಮಸೂಕ್ತಿಮಂಜರಿ, ಸದ್ಗುರುವಿನ ಅನುಗ್ರಹ, Narada's Aphorisms on Bhakti** ಎಂಬ ಗ್ರಂಥಗಳು ಈ ಅವಧಿಯಲ್ಲಿ ಪ್ರಕಟವಾದವು. ಕೆಲವು ಗ್ರಂಥಗಳು ಮಾಸಪತ್ರಿಕೆಯ ಮೂಲಕವೇ ಹೊರಬಂದವು. ದೃಗ್‌ದೃಶ್ಯವಿವೇಕ, ಭಕ್ತಿಯೋಗ-ಇವುಗಳ ತಿದ್ದಿದ ಸಂಸ್ಕರಣಗಳು ಹೊರಕ್ಕೆ ಬಂದವು.

## ಅಧ್ಯಾತ್ಮ ವಿದ್ಯಾನಿಲಯ :

ಪತ್ರಿಕೆ, ಗ್ರಂಥಕಾಲಕ್ಷೇಪ, ಅನುಷ್ಠಾನಗಳು, ಉಪನ್ಯಾಸಗಳು-ಇವುಗಳ ಜೊತೆಗೆ ಒಂದು ಅಧ್ಯಾತ್ಮವಿದ್ಯಾನಿಲಯವೂ ಕಾರ್ಯಾಲಯಕ್ಕೆ ಅಂಗವಾಗಿರಬೇಕೆಂಬ ಸಂಕಲ್ಪವು

1938ನೇ ಫೆಬ್ರವರಿಯಲ್ಲಿ ರಾಯರಲ್ಲಿ ಮೊಳೆಯಿತು. ಇದರ ಪ್ರಕಟನೆಯನ್ನೂ ಆಗ್ಗೆ ಪತ್ರಿಕೆಯಲ್ಲಿ ಕೊಡಲಾಯಿತು.

## ಹೊಳೆನರಸೀಪುರದಲ್ಲಿ ಮೊದಲನೆ ಎರಡುವರ್ಷಗಳು :

ರಾಯರು ಬೆಂಗಳೂರಿನ ಮನೆಯನ್ನು ಮಾರಿದ ಅನಂತರ 1938ನೆಯ ಮೇ ಮಾಹೆಯಲ್ಲಿ ಶ್ರೀ ವೈ. ನರಸಪ್ಪನವರು ಪ್ರಿಂಟಿಂಗ್ ಪ್ರೆಸ್ ಸಾಮಾನುಗಳ ಸಮೇತ ಹೊಳೆನರಸೀಪುರಕ್ಕೆ ಬಂದರು. ಆ ವೇಳೆಗೆ ರಾಯರು ಹೊಳೆನರಸೀಪುರದಲ್ಲಿ ಹೊಸಮನೆಯನ್ನು ಕಟ್ಟಿಸಿದ್ದರು. ಹೊಸ ಮನೆಯಾದ್ದರಿಂದ ಅದು ಅಪೂರ್ಣವಾಗಿತ್ತು. ಮುದ್ರಣಾಲಯಕ್ಕಾಗಲಿ, ಕಾರ್ಯಾಲಯದ ಕೆಲಸಗಳಿಗಾಗಲಿ ಅದು ಅಷ್ಟು ಸೌಕರ್ಯವಾಗಿರಲಿಲ್ಲ. ಆದರೂ ಮುಂಭಾಗದಲ್ಲಿ ಒಂದು ಜಿಂಕುತಗಡಿನ ಕುಟೀರವನ್ನು ಹಾಕಿಕೊಂಡು ಮುದ್ರಣಾಲಯವನ್ನು ಏರ್ಪಡಿಸಿದರು. ಕೆಲವು ಅನಿವಾರ್ಯ ಅನನುಕೂಲಗಳಿಂದ ಪತ್ರಿಕೆಯಾಗಲಿ, ಮಿಕ್ಕ ಚಟುವಟಿಕೆಗಳಾಗಲಿ ವ್ಯವಸ್ಥಿತವಾಗಿ ಸಾಗಲಿಲ್ಲ. ಈ ನಡುವೆ ರಾಯರಿಗೆ ಅನಾರೋಗ್ಯವೂ ಪ್ರಾಪ್ತವಾಗಿ ಗಂಟಲು ತೊಂದರೆಯಿಂದ ಮಾತನಾಡಲು ಕಷ್ಟವಾಗಿ ಪರಿಣಮಿಸಿತು. ಕಾಲಕ್ರಮದಲ್ಲಿ ತೊಂದರೆಗಳು ಒಂದೊಂದಾಗಿ ನಿವಾರಣೆಯಾಗುತ್ತಾ ಬಂದವು.

## ಶಂಕರಸಪ್ತಾಹ :

ಈ ಉತ್ಸವವು 1938ರಲ್ಲಿ ಹೊಳೆನರಸೀಪುರದಲ್ಲಿಯೇ ನಡೆಯಿತು. ಜನಗಳ ಪರಿಚಯವು ಇನ್ನೂ ಕಡಿಮೆಯಾಗಿದ್ದುದರಿಂದ ಸಾಧಾರಣವಾಗಿ ನಡೆಯಿತು. ಆಸ್ಥಾನ ವಿದ್ವಾನ್ ಕೆ. ಪಿ. ನಾರಾಯಣಶಾಸ್ತ್ರಿಗಳು, ಸಾಹಿತ್ಯ ವಿದ್ವಾನ್ ರಾಮಸ್ವಾಮಿಶಾಸ್ತ್ರಿಗಳು-ಎಂಬ ಹೊಸ ಪಂಡಿತರುಗಳು ಉತ್ಸವದಲ್ಲಿ ಭಾಗವಹಿಸಿದ್ದರು. ಮ.ರಾ. ಸಂತೇಬಾಚಳ್ಳಿ ಸುಬ್ರಾಯರು, ಮ|| ರಾ|| ಆರ್. ರಾಮಸ್ವಾಮಯ್ಯನವರು-ಎಂಬ ಲಾಯರುಗಳು ಈ ವೇಳೆಗೆ ಪರಿಚಿತರಾಗಿದ್ದರು. ಸಪ್ತಾಹದಲ್ಲಿ ಒಂದೊಂದು ದಿನದ ಅತಿಥಿ ಸತ್ಕಾರದ ವೆಚ್ಚವನ್ನು ಇವರುಗಳೂ ಮತ್ತು ಹಿಂದೆಯೇ ಪರಿಚಿತರಾಗಿದ್ದ ಶ್ರೀ ಪಿ.ಎನ್. ನರಸಿಂಹಯ್ಯನವರೂ ವಹಿಸಿಕೊಂಡರು. ಗಂಟಲು ತೊಂದರೆಯಿದ್ದರೂ ರಾಯರು ಉಪನ್ಯಾಸ, ಅನುವಾದಗಳನ್ನು ಮಾಡಿದರು. ಅಂತೂ ಉತ್ಸವವು ಯಶಸ್ವಿಯಾಗಿ ನಡೆಯಿತೆನ್ನಬಹುದು.

## ಶ್ರೀ ಹೊಸಕೆರೆ ಚಿದಂಬರಯ್ಯನವರ ನಿರ್ಯಾಣ :

ರಾಯರೊಡನೆ ಏಕದೇಹನ್ಯಾಯದಿಂದ ಇದ್ದುಕೊಂಡಿದ್ದ ಶ್ರೀ ಹೊಸಕೆರೆ ಚಿದಂಬರಯ್ಯನವರ ವಿಚಾರವನ್ನು ಹಿಂದೆ ಪ್ರಸ್ತಾಪಿಸಿದೆ. ರಾಯರು ಬೆಂಗಳೂರಿನಲ್ಲಿದ್ದಾಗಲೇ ಶ್ರೀ ಚಿದಂಬರಯ್ಯನವರು ಧಾರವಾಡದ ರಾಷ್ಟ್ರೀಯವಿದ್ಯಾ ಶಾಲೆಗೆ ಹೋಗಿದ್ದರು. ಅಲ್ಲಿಂದ

ಭರತಖಂಡದ ಜೀವಜ್ಯೋತಿಗಳು, ಆರ್ಯಧರ್ಮಪ್ರದೀಪ-ಮುಂತಾದ ಗ್ರಂಥಗಳನ್ನು ಹೊರಕ್ಕೆ ತಂದರು. ಬೆಂಗಳೂರಿಗೆ ಹಿಂತಿರುಗಿದ ಅನಂತರ ವೇದಾಂತವಿಚಾರದಲ್ಲಿಯೇ ಮುಳುಗಿದ್ದರು. ಕೆಲವು ಕಾಲ ರಾಯರಿಂದ 'ಮೂಲಾವಿದ್ಯಾನಿರಾಸ' ಪಾಠವನ್ನು ಹೇಳಿಸಿಕೊಂಡರು. 'ಅನುಭವಾಮೃತ' ಎಂಬ ಗ್ರಂಥವನ್ನು ರಾಯರ ಹೊಸ ಅಭಿಪ್ರಾಯಗಳಿಂದ ಕೂಡಿದ ಟಿಪ್ಪಣಿಗಳೊಡನೆ ಪ್ರಕಟಿಸಿದರು. ಮಾಂಡೂಕ್ಯ ಸಂವಾದವೆಂಬ ಗ್ರಂಥವನ್ನು ಆಗಲೇ ಬರೆದರು. ಆದರೆ ಸ್ವಲ್ಪ ಕಾಲಾನಂತರ ಇವರ ಮಗ ವೇ॥ಅನಂತಮೂರ್ತಿಗಳು ಶಂಕರಮಠದಲ್ಲಿ ಓದುವದಕ್ಕೆ ಪ್ರಾರಂಭಿಸಿದಮೇಲೆ ರಾಯರ ಪ್ರಕ್ರಿಯೆಯು ಅಷ್ಟು ನಿರ್ದುಷ್ಟವಲ್ಲವೆಂದು ತೋರಿದ್ದರಿಂದ ಅನುಭವಾಮೃತದ ಮುಂದಿನ ಸಂಸ್ಕರಣದಲ್ಲಿ ವಾದಗ್ರಸ್ತ ವಿಷಯವನ್ನೆಲ್ಲ ತೆಗೆದುಹಾಕಿದರು. ಬೆಂಗಳೂರಿನಲ್ಲಿ ತಮ್ಮ ಮಕ್ಕಳ ಜೊತೆಯಲ್ಲಿಯೇ ಇದ್ದುಕೊಂಡು ಅದೇ ಮನಃಸ್ಥಿತಿಯಲ್ಲಿ ವೇದಾಂತದ ಜೀವಾಳ, ಪಂಚದಶೀತತ್ತ್ವಾರ್ಥ-ಎಂಬ ಗ್ರಂಥಗಳನ್ನು ಬರೆದರು. ಈ ಗ್ರಂಥಗಳ ಬಗ್ಗೆ ರಾಯರ ಸಹಾಯವನ್ನೇನೂ ಕೋರಲಿಲ್ಲ. ಇದಾದ ಕೆಲವು ದಿನಗಳ ನಂತರ ಚಿತ್ರಾವತಿ ಎಂಬಲ್ಲಿ ಏಕಾಂತವಾಸಮಾಡಿಕೊಂಡಿದ್ದರು. ಆದರೆ ಶರೀರಾಲಸ್ಯನಿಮಿತ್ತ ಕೊನೆಯವರೆಗೆ ಅಲ್ಲಿರಲು ಸಾಧ್ಯವಾಗಲಿಲ್ಲ. ಆ ಬಳಿಕ ವೇ॥ ಎಸ್. ವಿಠಲಶಾಸ್ತ್ರಿಗಳ ಸಹವಾಸವು ದೊರೆತಾಗ ವಿಚಾರವಿನಿಮಯವನ್ನು ಮಾಡಿಕೊಂಡಬಳಿಕ ರಾಯರ ಅಭಿಪ್ರಾಯಗಳು ಶಂಕರಭಾಷ್ಯಾನುಸಾರಿಯಾಗಿವೆ - ಎಂಬುದನ್ನು ಮನಗಂಡರು. ಕೂಡಲೆ ರಾಯರನ್ನು ಸಂಧಿಸಿ ರಾಯರ ಜೊತೆಯಲ್ಲಿಯೇ ಕೆಲವುಕಾಲ ಇರಬೇಕೆಂದು ಸಂಕಲ್ಪಿಸಿ ಶಂಕರಸಪ್ತಾಹದ ವೇಳೆಗೆ ಬರುವದಾಗಿ ಹೇಳಿದ್ದರು. ಆದರೆ ವಿಧಿವಿಲಾಸವು ಬೇರೆಯಾಗಿತ್ತು. ಸಪ್ತಾಹಕ್ಕೆ ಹದಿನೈದು ದಿನಗಳ ಮುಂಚೆಯೇ ಅವರು ದಿವಂಗತರಾದರು.

## ವಿದ್ಯಾನಿಲಯದ ಸ್ಥಾಪನೆಗೆ ಪ್ರಯತ್ನ :

ಈ ವೇಳೆಗೆ ವಿದ್ಯಾನಿಲಯದ ಸ್ಥಾಪನೆಯನ್ನು ಆದಷ್ಟು ಜಾಗ್ರತೆ ಮಾಡಬೇಕೆಂಬ ಆಶೆಯು ರಾಯರಿಗೆ ಪ್ರಬಲವಾಯಿತು. ಅಧ್ಯಾತ್ಮಪ್ರಕಾಶಪತ್ರಿಕೆಯ 1939ನೇ ಜುಲೈ ಸಂಚಿಕೆಯಲ್ಲಿ ಉದ್ದೇಶವನ್ನೂ ಪಾಠಕ್ರಮವನ್ನೂ ರೂಪಿಸಿ ಒಂದು ಪ್ರಕಟನೆಯನ್ನು ಹೊರಡಿಸಿದರು. ಆ ವೇಳೆಗಾಗಲೆ ಮತ್ತೂರು ಸುಬ್ರಾಯಾವಧಾನಿಗಳೆಂಬ ಜಿಜ್ಞಾಸುಗಳು ವಿದ್ಯಾರ್ಥಿಗಳಾಗಿ ಬಂದು ಸೇರಿಕೊಂಡಿದ್ದರು; ಉಪನಿಷದ್ಭಾಷ್ಯಗಳನ್ನು ಓದುತ್ತಿದ್ದರು. ಈಗ ಕಣಕಟ್ಟೆಯ ವೇ. ಸೀತಾರಾಮದೀಕ್ಷಿತರು, ಅಗ್ರಹಾರದ ಶ್ರೀನಿವಾಸಭಟ್ಟರು ಸಹ ಬಂದು ಸೇರಿದರು. ಎಲ್ಲರೂ ಸೇರಿ ನೈಷ್ಕರ್ಮ್ಯಸಿದ್ಧಿಯ ಪಾಠವನ್ನು ಓದುವದಕ್ಕೆ ಪ್ರಾರಂಭಿಸಿದರು. ಆದರೆ ರಾಯರಿಗೆ ಗಂಟಲು ತೊಂದರೆಯಿದ್ದುದರಿಂದ ಪಾಠಗಳನ್ನು ಮಾಡುವದು ಕಷ್ಟವಾಗಿತ್ತು. ಕೆಲವರು ಮೂಢಭಕ್ತಿಯ ಜನರು ಶಂಕರವಿಜಯದಲ್ಲಿ ಬರೆದಿರುವ ಮಂಡನಮಿಶ್ರ ಸಂವಾದ, ಪರಕಾಯಪ್ರವೇಶ ಮುಂತಾದ ಘಟನೆಗಳನ್ನು ರಾಯರು ಟೀಕಿಸಿದ್ದರಿಂದ ಗುರುನಿಂದೆಯನ್ನು

ಮಾಡಿದಂತಾಗಿದ್ದು ಆ ಪಾಪದ ಫಲವಾಗಿ ಗಂಟಲು ಹೋಗಿದೆಯೆಂದು ಕುಹಕದ ಸುದ್ದಿಯನ್ನು ಹರಡುವದಕ್ಕೆ ಪ್ರಾರಂಭಿಸಿದರು. ಆದರೆ ಸದ್ಗುರುಗಳ ಅನುಗ್ರಹದಿಂದ ಮುಂದಿನ ವರ್ಷದ ಶಂಕರಸಪ್ತಾಹದ ವೇಳೆಗೆ ಸರಿಯಾಗಿ ರಾಯರಿಗೆ ಮಾತನಾಡುವ ಸೌಕರ್ಯವು ಲಭಿಸಿ ಅವರ ಅಪಪ್ರಚಾರಕ್ಕೆ ತಡೆಹಾಕಿದಂತಾಯಿತು.

## ಗ್ರಂಥಪ್ರಕಟನೆಯಲ್ಲಿ ಮುನ್ನಡೆ :

ಪತ್ರಿಕೆಯ ಮೂಲಕ ದೃಗ್ದೃಶ್ಯವಿವೇಕ, ಉಪದೇಶಸಾಹಸ್ರಿ (ಪದ್ಯ ಭಾಗ ಪ್ರಕರಣ 1 ರಿಂದ 13) ಅಧ್ಯಾತ್ಮಸೂಕ್ತಿಮಂಜರಿ (2ನೆಯ ಭಾಗ) ಇಷ್ಟು ಗ್ರಂಥಗಳು ಹೊರಕ್ಕೆ ಬಂದವು. ಗೀತಾಸಾರ್ಥ ಮತ್ತು ಗೀತಾಭಾಷ್ಯ 13 ರಿಂದ 18 - ಇವು ಸ್ವತಂತ್ರವಾಗಿ ಪ್ರಕಟವಾದವು.

## ಪಂಡಿತಪ್ರವರ ಶ್ರೀ ಹೆಚ್. ಅನಂತಮೂರ್ತಿಶಾಸ್ತ್ರಿಗಳು :

ಇವರು ಹೊಸಕೆರೆ ಶ್ರೀ ಚಿದಂಬರಯ್ಯನವರ ಮಕ್ಕಳು. 1939ರ ವೇಳೆಗೆ ಇವರು ನ್ಯಾಯಸಾಹಿತ್ಯ ವೇದಾಂತವಿದ್ವತ್‌ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿದ್ದರು. 1928ರಲ್ಲಿಯೇ ನವೀನನ್ಯಾಯವಿದ್ವತ್‌ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ ವಿಶೇಷಬಹುಮಾನಗಳನ್ನು ಪಡೆದಿದ್ದರು. 1933ರಲ್ಲಿ ಪ್ರಾಚೀನನ್ಯಾಯವಿದ್ವತ್ ಪರೀಕ್ಷೆಯಲ್ಲಿ ಪ್ರಥಮತರಗತಿಯಲ್ಲಿ ತೇರ್ಗಡೆಯನ್ನು ಹೊಂದಿ ವಿಶೇಷ ಬಹುಮಾನವನ್ನು ಪಡೆದರು. 1936ರಲ್ಲಿ ವೇದಾಂತವಿದ್ವತ್‌ಪರೀಕ್ಷೆಯಲ್ಲಿಯೂ ಪ್ರಥಮತರಗತಿಯಲ್ಲಿ ಉತ್ತೀರ್ಣರಾಗಿ ಅಗ್ರಸ್ಥಾನವನ್ನು ಗಳಿಸಿ ಮೂರು ಚಿನ್ನದ ಪದಕಗಳನ್ನೂ ಸುವರ್ಣವೀರಶೃಂಖಲೆಯನ್ನೂ ಸಂಪಾದಿಸಿದರು. ಶಂಕರಮಠದ ವ್ಯಾಸಂಗದಲ್ಲಿ ವೇದಾಂತ ವಿಭಾಗದಲ್ಲಿ ಪ್ರಥಮತರಗತಿಯಲ್ಲಿ ಉತ್ತೀರ್ಣರಾದ ಬಳಿಕ ಶ್ರೀಶೃಂಗೇರಿಯ ಜಗದ್ಗುರುಗಳು 'ಪಂಡಿತಪ್ರವರ' ಎಂಬ ಬಿರುದನ್ನೂ ಉತ್ತಮವಾದ ಶಾಲುಜೋಡಿಯನ್ನೂ ಇವರಿಗೆ ಅನುಗ್ರಹಿಸಿ ಕೊಟ್ಟರು. 1938ರಲ್ಲಿ ಮೈಸೂರು ಸಾಹಿತ್ಯವಿದ್ವತ್‌ಪರೀಕ್ಷೆಯಲ್ಲೂ ತೇರ್ಗಡೆಯಾಗಿ ಅಗ್ರಸ್ಥಾನವನ್ನು ಸಂಪಾದಿಸಿಕೊಂಡದ್ದಕ್ಕಾಗಿ ಬಂಗಾರದ ಪದಕವೂ ಬಹುಮಾನವೂ ಬಂದವು. ಇಂಥ ವಿದ್ವಾಂಸರ ಸಹಕಾರವು ರಾಯರ ಮುಂದಿನ ಕೆಲಸಕಾರ್ಯಗಳಲ್ಲೆಲ್ಲ ಒದಗಿಬಂದಿದ್ದು, ಒಂದು ಭಾಗ್ಯವೇ ಎನ್ನಬಹುದು.

## ಮೈಸೂರಿನಲ್ಲಿ ಶಂಕರಸಪ್ತಾಹ :

ವೇ|| ವಿದ್ವಾನ್ ಎಸ್. ವಿಠಲಶಾಸ್ತ್ರಿಗಳು ಮೈಸೂರಿಗೆ ಬಂದಮೇಲೆ ವೇದಾಂತ ಪ್ರಚಾರಕ್ಕೆ ಜೀವಕಳೆಯು ಹೆಚ್ಚಿತು. ಅವರು ಭಾಷ್ಯಪಾಠದ ತರಗತಿಗಳನ್ನು ಏರ್ಪಡಿಸಿದರು. ಅಲ್ಲಲ್ಲಿ ಉಪನ್ಯಾಸಗಳನ್ನು ಮಾಡುವದಕ್ಕೆ ಆರಂಭಿಸಿದರು. ವೇ|| ಶಾಸ್ತ್ರಿಗಳ ಪ್ರಯತ್ನದಿಂದ ಶ್ರೀಪ್ರಮಾಥಿ ಸಂವತ್ಸರದ ಶಂಕರಸಪ್ತಾಹವು ಮೈಸೂರಿನ ಅಭಿನವಶಂಕರಾಲಯದಲ್ಲಿ

ನಡೆಯಿತು. ವೇ|| ಬ್ರ. ಪಾಟನಕರ ಚಂದ್ರಶೇಖರಭಟ್ಟರು, ಶ್ರೀ ಪಂಡಿತ ಹೆಚ್. ಅನಂತಮೂರ್ತಿಶಾಸ್ತ್ರಿಗಳು ಇವರುಗಳ ಜೊತೆಗೆ ಈ ಬಾರಿ ಆಸ್ಥಾನವಿದ್ವಾನ್ ಶ್ರೀ ಕೆ. ಗೋಪಾಲಕೃಷ್ಣಶಾಸ್ತ್ರಿಗಳೂ ಭಾಗವನ್ನು ವಹಿಸಿದ್ದರು. ಕೃಷ್ಣಮೂರ್ತಿಪುರಂ ನಿವಾಸಿಗಳು ಪರಸ್ಥಳಗಳಿಂದ ಬಂದಿದ್ದವರಿಗೆ ವಿಶೇಷಸಮಾರಾಧನೆಯನ್ನು ಏರ್ಪಡಿಸಿದ್ದರು. ಮಂಗಳದ ದಿನ ಸಾಯಂಕಾಲ ವಿದ್ವಾನ್ ಸಂಗೀತಭೂಷಣ ಶ್ರೀ ಶೆಲ್ವಪಿಳ್ಳೆ ಅಯ್ಯಂಗಾರ್‌ರವರಿಂದ ಸುಶ್ರಾವ್ಯವಾದ ಸಂಗೀತವೂ ಆಯಿತು. ವಿದ್ವಾನ್ ಶ್ರೀ ಟಿ.ಎಸ್. ತಾತಾಚಾರ್ಯರು ಪಿಟೀಲು ನುಡಿಸುವದರಲ್ಲಿಯೂ, ವಿದ್ವಾನ್ ಶ್ರೀ ಗೋಪಾಲರಾಯರು ಮೃದುಂಗವಾದನದಲ್ಲಿಯೂ ಸಹಾಯಕರಾಗಿದ್ದರು. ಒಟ್ಟಿನಲ್ಲಿ ಸಪ್ತಾಹವು ಚೆನ್ನಾಗಿ ನಡೆದು ಭಕ್ತವೃಂದಕ್ಕೆ ತೃಪ್ತಿಯನ್ನುಂಟುಮಾಡಿತು.

## ಮೂಲಾವಿದ್ಯೆಯ ಗಡಿಬಿಡಿ :

ಮೇಲ್ಕಂಡ ಸಪ್ತಾಹದಲ್ಲಿ ನಡೆದ ಒಂದು ವಿಶೇಷ ಘಟನೆ ಏನೆಂದರೆ: ಬ್ರ. ಶ್ರೀ ಪಾಟನಕರ ಚಂದ್ರಶೇಖರಭಟ್ಟರೂ ಬ್ರ. ಶ್ರೀ ಕನ್ನಂಬಾಡಿ ಗೋಪಾಲಕೃಷ್ಣಶಾಸ್ತ್ರಿಗಳೂ ತಮ್ಮ ತಮ್ಮ ಪ್ರವಚನಕಾಲದಲ್ಲಿ ಈ ಹಿಂದೆಯೇ ವಾದವಿವಾದಗಳು ನಡೆದು ಶಾಂತವಾಗಿದ್ದ ಮೂಲಾವಿದ್ಯೆಯ ಚರ್ಚೆಯನ್ನು ಮತ್ತೆ ಸಂಜೀವನಗೊಳಿಸಿದ್ದು. ಬ್ರ|| ಚಂದ್ರಶೇಖರಭಟ್ಟರು ಬೃಹದಾರಣ್ಯಕ ಭಾಷ್ಯದ 4-3-32ನ್ನು ವಿವರಿಸುವಾಗ "**ಅವಿದ್ಯಾ ವಸ್ತ್ವನ್ತರಪ್ರತ್ಯುಪಸ್ಥಾಪಿಕಾ; ಸಾ ಚ ಶಾಂತಾऽತ್ರ**" ಎಂಬಲ್ಲಿ ಶಾನ್ತಾ ಎಂದರೆ ಅವಿದ್ಯೆಯು ಸಂಪೂರ್ಣವಾಗಿ ಹೋಗಿರುತ್ತದೆ-ಎಂದರ್ಥವಲ್ಲ; ಅದು ವ್ಯಾಪಾರಶೂನ್ಯವಾಗಿ ಭಾವರೂಪವಾದ ಮೂಲಾವಿದ್ಯೆಯ ರೂಪದಲ್ಲಿರುತ್ತದೆ'- ಎಂದು ಹೇಳಿದರು. "ಮೂಲಾವಿದ್ಯೆಯನ್ನು ಗೌಡಪಾದರೂ ಭಾಷ್ಯಕಾರರೂ ಒಪ್ಪಿರುತ್ತಾರೆ. ಅದನ್ನು ಒಪ್ಪದಿದ್ದರೆ ಸಿದ್ಧಾಂತಕ್ಕೆ ಕೆಲವು ಅಡಚಣೆಗಳು ಬರುತ್ತವೆ" ಎಂದೂ ಹೇಳಿ ಕೆಲವು ಪ್ರಮಾಣವಚನಗಳನ್ನೂ ಉದಾಹರಿಸಿದರು. ರಾಯರು ಅನುವಾದಮಾಡುವಾಗ "ಪ್ರಕೃತದಲ್ಲಿ 'ಶಾಂತಾ' ಎಂಬ ಮಾತಿಗೆ 'ಅವಿದ್ಯೆಯು ಅಲ್ಲಿರುವದಿಲ್ಲ' ಎಂದೇ ಅರ್ಥಮಾಡಬೇಕು. ಇದೇ ಬ್ರಾಹ್ಮಣದ 21ನೆಯ ಮಂತ್ರದ ಭಾಷ್ಯದಲ್ಲಿ "**ಯತ್ರ ಅವಿದ್ಯಾಕಾಮಕರ್ಮಾಣಿ ನ ಸನ್ತಿ**" ಎಂದೂ, 22ನೆಯ ಮಂತ್ರದ ಭಾಷ್ಯದಲ್ಲಿ "**ಅತ್ರ ಚೈತತ್ ಪ್ರಕೃತಮ್ - ಅವಿದ್ಯಾಕಾಮಕರ್ಮವಿನಿರ್ಮುಕ್ತಮೇವ ತದ್ರೂಪಂ ಯತ್ಸುಷುಪ್ತೇ ಆತ್ಮನೋ ಗೃಹ್ಯತೇ ಪ್ರತ್ಯಕ್ಷತಃ ಇತಿ**" ಎಂದೂ ಭಾಷ್ಯಕಾರರು '**ನ ಸನ್ತಿ, ವಿನಿರ್ಮುಕ್ತಮೇವ ತದ್ರೂಪಂ**'- ಎಂಬ ಶಬ್ದಗಳಿಂದ ಬಾಯಿಬಿಟ್ಟು ಹೇಳಿರುವದರಿಂದ ಸುಷುಪ್ತಿಯಲ್ಲಿ ಯಾವ ಅವಿದ್ಯೆಯೂ ಇಲ್ಲ- ಎಂಬುದೇ ಪ್ರಕೃತಕ್ಕೆ ಹೊಂದುತ್ತದೆ. ಭಾವಾವಿದ್ಯಾವಾದವು ಕೆಲವು ವ್ಯಾಖ್ಯಾನಪ್ರಸ್ಥಾನಗಳಲ್ಲಿ ಮಾತ್ರ ಕಂಡುಬರುತ್ತದೆಯಾದರೂ ಭಾಷ್ಯಕಾರರಿಗಾಗಲಿ, ಗೌಡಪಾದರಿಗಾಗಲಿ ಅದು ಸಮ್ಮತವಲ್ಲ. ಇಲ್ಲಿ ಶಾಸ್ತ್ರಿಗಳು ಹೇಳಿದ

ಆಕ್ಷೇಪಕ್ಕೆ ಪರಿಹಾರವನ್ನು 'ಮೂಲಾವಿದ್ಯಾನಿರಾಸ' ಎಂಬ ಗ್ರಂಥದಲ್ಲಿ ಬರೆದಿದ್ದೇನೆ"- ಎಂದು ಉಪಸಂಹಾರಮಾಡಿದರು.

ಮತ್ತೊಂದು ದಿನ ಅದೇ ಉತ್ಸವದಲ್ಲಿ ವೇ. ಗೋಪಾಲಕೃಷ್ಣಶಾಸ್ತ್ರಿಗಳು ಗೀತಾಭಾಷ್ಯ 13-27ರ ಭಾಗವನ್ನು ಪ್ರವಚನ ಮಾಡುವಾಗ 'ಕ್ಷೇತ್ರಕ್ಷೇತ್ರಜ್ಞಸಂಯೋಗೋ ಮಿಥ್ಯಾಜ್ಞಾನಲಕ್ಷಣಃ' ಎಂಬ ವಾಕ್ಯವನ್ನು ತೆಗೆದುಕೊಂಡು ಮಿಥ್ಯಾಜ್ಞಾನವೆಂದರೆ ಭಾವರೂಪವಾದ ಮೂಲಾವಿದ್ಯೆ. 'ಇದು ಸುಷುಪ್ತಿ ಪ್ರಲಯಗಳಲ್ಲಿಯೂ ಬೀಜರೂಪವಾಗಿರುತ್ತದೆ. ಅವಿದ್ಯೆಯು ಅಭಾವವೆಂದರೆ ಅದಕ್ಕೆ ಕಾರಣತ್ವವು ಹೊಂದುವುದಿಲ್ಲ'- ಎಂದು ಮುಂತಾಗಿ ಹೇಳಿದರು. ರಾಯರು ಅನುವಾದಕಾಲಕ್ಕೆ ಕ್ಷೇತ್ರಕ್ಷೇತ್ರಜ್ಞರ ಇತರೇತರತದ್ಧರ್ಮಾಧ್ಯಾಸವೇ ಸಂಸಾರಕ್ಕೆ ಮೂಲ- ಎಂಬುದರಲ್ಲಿ ಭಾಷ್ಯಕ್ಕೆ ತಾತ್ಪರ್ಯವೆಂಬುದಕ್ಕೆ "ಕ್ಷೇತ್ರಕ್ಷೇತ್ರಜ್ಞಯೋರ್ವಿಷಯವಿಷಯಿಣೋರ್ಭಿನ್ನ ಸ್ವಭಾವಯೋಃ ಇತರೇತರತದ್ಧರ್ಮಾಧ್ಯಾಸಲಕ್ಷಣಃ ಸಂಯೋಗಃ ಕ್ಷೇತ್ರಕ್ಷೇತ್ರಜ್ಞ ಸ್ವರೂಪವಿವೇಕಾಭಾವನಿಬನ್ಧನಃ" - ಎಂಬ ಭಾಷ್ಯೋಕ್ತಿಯು ಇಲ್ಲಿರುವದೇ ಪ್ರಮಾಣ'- ಎಂದು ವಿವರಿಸಿದರು. ಮತ್ತು 'ಇಲ್ಲಿ ಮೂಲಾವಿದ್ಯೆಯನ್ನು ಪ್ರತಿಪಾದಿಸುವದರಲ್ಲಿ ತಾತ್ಪರ್ಯವಿಲ್ಲ'- ಎಂದು ವಿವರಿಸಿ "ಮಿಥ್ಯಾಜ್ಞಾನರೂಪವಾದ ಅವಿದ್ಯೆಗೆ ವಿವೇಕಾಭಾವವೇ ನಿಮಿತ್ತವು" ಎಂದು ವಿಷಯವನ್ನು ವಿಶದಗೊಳಿಸಿದರು.

ಈ ಚರ್ಚೆಯು ಸಪ್ತಾಹವು ಮುಗಿದಮೇಲೂ ಪೂರ್ತಿಯಾಗಿ ಆರಲಿಲ್ಲ. ಪ್ರತಿಭಾನುವಾರವೂ ಕೆಲವುಕಾಲ ಅಭಿನವಶಂಕರಾಲಯದಲ್ಲಿ ನಡೆದ ಉಪನ್ಯಾಸಗಳಲ್ಲಿ ಈ ಪ್ರಸ್ತಾಪವು ನಡೆದಿತ್ತು. ವೇ।। ಪಾಲಘಾಟ್ ನಾರಾಯಣಶಾಸ್ತ್ರಿಗಳು, ವೇ।। ಗೋಪಾಲಕೃಷ್ಣಶಾಸ್ತ್ರಿಗಳು, ವೇ।। ಮಲ್ಲಿಕೆರೆ ಸುಬ್ರಹ್ಮಣ್ಯಶಾಸ್ತ್ರಿಗಳು-ಇವರುಗಳು ಮೂಲಾವಿದ್ಯಾಪಕ್ಷವನ್ನು ಸಮರ್ಥಿಸುವ ವಿಚಾರಗಳನ್ನು ಪ್ರಸ್ತಾಪಿಸುತ್ತಿದ್ದರು. ವೇ।। ಎಸ್. ವಿಠಲಶಾಸ್ತ್ರಿಗಳೂ ರಾಯರೂ ಮೂಲಾವಿದ್ಯೆಯನ್ನು ಭಾಷ್ಯಕಾರರು ಒಪ್ಪಿಲ್ಲವೆಂದೂ ಒಪ್ಪಿದರೆ ಅದ್ವೈತಸಿದ್ಧಾಂತಕ್ಕೆ ಹಾನಿಯೆಂದೂ ಪ್ರತಿಪಾದಿಸುತ್ತಿದ್ದರು. ಈ ವಿಚಾರದ ಚರ್ಚೆಯು ಮುಂದೆ ಸುಮಾರು ಒಂದು ವರ್ಷದವರೆಗೂ ನಡೆಯಿತು!

ಕಾರ್ಯಾಲಯದ ಇತರ ಚಟುವಟಿಕೆಗಳು, ಗ್ರಂಥಕಾಲಕ್ಷೇಪ, ಪತ್ರಿಕೆಯ ಪ್ರಕಟನೆ, ಪಾಠಪ್ರವಚನಗಳು-ಇವು ಯಥಾಕ್ರಮವಾಗಿ ಈ ಅವಧಿಯಲ್ಲಿ ನಡೆಯುತ್ತಿದ್ದವು. ರಾಯರು ಭದ್ರಾವತಿ, ಮತ್ತೂರು-ಮುಂತಾದ ಸ್ಥಳಗಳಲ್ಲೂ ಉಪನ್ಯಾಸಗಳನ್ನು ಮಾಡಿದರು.

# ೧೪. ಹೊಸ ಚಟುವಟಿಕೆಗಳು
## (1940-44)

**ಗ್ರಂಥಪ್ರಕಟನೆಗಳು :**

ಈ ಅವಧಿಯಲ್ಲಿ ವೇದಾಂತಪ್ರವೇಶಿಕೆ, ಜ್ಞಾನಯೋಗ 2 ನೆಯ ಭಾಗ, ಕೇನೋಪನ್ಯಾಸಮಂಜರಿ, ಮುಂಡಕೋಪನ್ಯಾಸಮಂಜರಿ, ಅಪರೋಕ್ಷಾನುಭೂತಿ, ಚಿದಾನಂದಸವಾಯಿ, ವೇದಾಂತವಿಚಾರದ ಇತಿಹಾಸ, ಭೀಷ್ಮಸ್ತವರಾಜ, ಶಿವನಾಮಾಷ್ಟೋತ್ತರಶತಕ-ಉಪದೇಶಸಾಹಸ್ರಿ (ಪದ್ಯ, 2ನೆಯ ಭಾಗ)- ಇಷ್ಟು ಗ್ರಂಥಗಳು ಪತ್ರಿಕೆಯ ಮೂಲಕ ಹೊರಕ್ಕೆ ಬಂದವು. ಉಪನಿಷತ್ತುಗಳ ಮೊದಲನೆಯ ಪರಿಚಯ, ಶ್ರೀರಾಮಗೀತಾ, ವೇದಾಂತದರ್ಶನ-ಇವುಗಳನ್ನು ಸ್ವತಂತ್ರವಾಗಿಯೇ ಹೊರತರಲಾಯಿತು. ಅವಸ್ಥಾತ್ರಯವಿಚಾರಪ್ರಧಾನವಾದ 'ಪರಮಾರ್ಥಚಿಂತಾಮಣಿ' ಎಂಬ ಗ್ರಂಥವನ್ನೂ ಪ್ರಕಟಿಸಲಾಯಿತು. ವೇದಾಂತಬಾಲಬೋಧೆ, ಸರ್ವೇಷ್ಟಸಿದ್ಧಿ- ಇವುಗಳ ಪುನರ್ಮುದ್ರಣವಾಯಿತು. `Minor works of Sankaracharya' ಎಂಬ ಇಂಗ್ಲಿಷುಗ್ರಂಥವೂ ಈ ಕಾಲದಲ್ಲಿಯೇ ಹೊರಬಂದಿತು.

ಈ ಅವಧಿಯಲ್ಲಿ ಶ್ರೀವಿಕ್ರಮಸಂವತ್ಸರದ ಮತ್ತು ಶ್ರೀವಿಷುಸಂವತ್ಸರದ ಶಂಕರ ಸಪ್ತಾಹಗಳು ಮೈಸೂರಿನಲ್ಲಿ ಚಾಮುಂಡೀಪುರಂ ಶಂಕರನಾರಾಯಣದೇವಸ್ಥಾನದಲ್ಲಿ ನಡೆದವು. ಆಗ್ಗೆ ಪಂಡಿತರತ್ನಂ ಬೆಟ್ಟಹಲಸೂರು ಶ್ರೀ ವೆಂಕಟರಾಮಶಾಸ್ತ್ರಿಗಳು ಭಾಗವನ್ನು ವಹಿಸಿ ಪ್ರೋತ್ಸಾಹವನ್ನು ಕೊಟ್ಟರು.

ಶ್ರೀ ಚಿತ್ರಭಾನೂಸಂವತ್ಸರದ ಉತ್ಸವವು ತರೀಕೆರೆಯಲ್ಲಿ ಪೂರ್ಣಯ್ಯನವರ ಛತ್ರದಲ್ಲಿಯೂ ಶ್ರೀ ಸ್ವಭಾನುಸಂವತ್ಸರದ ಉತ್ಸವವು ತುಮಕೂರು ಬ್ರಾಹ್ಮಣ ಸೇವಾಸಂಘದಲ್ಲಿಯೂ ನಡೆದವು. ತುಮಕೂರು ಉತ್ಸವದಲ್ಲಿ ಮೈಸೂರು ಗೀತಾಪ್ರಚಾರಿಣೀಸಭೆಯ ಶ್ರೀಶಂಕರಾನಂದ ಭಾರತೀಸ್ವಾಮಿಗಳು ಶ್ರೀ ಗಮಕಿ ರಾಮಕೃಷ್ಣ ಶಾಸ್ತ್ರಿಗಳು-ಇವರುಗಳು ಭಾಗವನ್ನು ವಹಿಸಿದ್ದರು. ಶ್ರೀತಾರಣಸಂವತ್ಸರದ ಉತ್ಸವವು ಹೊಳೆನರಸೀಪುರದಲ್ಲಿಯೇ ನಡೆಯಿತು. ಈ ಉತ್ಸವದಲ್ಲಿ ಪಂಡಿತರಾದ ವೇ॥ ನವೀನಂ ವೆಂಕಟೇಶಶಾಸ್ತ್ರಿಗಳೂ, ಶ್ರೀಕೃಷ್ಣಯೋಗೀಂದ್ರ ಸರಸ್ವತೀಸ್ವಾಮಿಗಳೆಂಬವರೂ ಉಪನ್ಯಾಸಗಳನ್ನು ಮಾಡಿದರು. ಊರಿನವರು ಚೆನ್ನಾಗಿ ಸಹಕರಿಸಿದರು.

**ಮೂಲಾವಿದ್ಯಾವಾದದ ಬಗ್ಗೆ ಚರ್ಚೆಗಳು :**

ಈ ಸಂದರ್ಭದಲ್ಲಿ ನಡೆದ ಕೆಲವು ವಾದವಿವಾದಗಳನ್ನು ಸ್ವಲ್ಪ ವಿವರಿಸುವೆನು. 'ಮೂಲಾವಿದ್ಯಾನಿರಾಸ'ಗ್ರಂಥವನ್ನು ರಾಯರು ಬರೆದ ಅನಂತರ ಪಂಡಿತರುಗಳಲ್ಲಿ ಸ್ವಲ್ಪ

ಮನಃಕ್ಷೋಭೆಯೇ ಉಂಟಾಗಿತ್ತು. ನಿಷ್ಪಕ್ಷಪಾತವಾಗಿ ವಿಚಾರಮಾಡಿದ ಪಂಡಿತರುಗಳಲ್ಲಿ ಮೊದಲು ಕಂಡುಬಂದವರು ಬ್ರ|| ಶ್ರೀ ಹೆಚ್. ಅನಂತಮೂರ್ತಿಶಾಸ್ತ್ರಿಗಳು. ಆದರೆ ಇವರೂ ಸಹ ಮೊದಮೊದಲು ರಾಯರ ಅಭಿಪ್ರಾಯದೊಡನೆ ಸೇರಿಕೊಳ್ಳುವಷ್ಟು ಮಟ್ಟಿಗೆ ಸಹಕರಿಸುತ್ತಿದ್ದರೇ ಹೊರತು ಸಂಪೂರ್ಣವಾಗಿ ಶುದ್ಧಶಾಂಕರಪ್ರಕ್ರಿಯೆಗೆ ಸಮ್ಮತಿಯನ್ನು ವ್ಯಕ್ತಪಡಿಸಿರಲಿಲ್ಲ. ಮೈಸೂರಿನಲ್ಲಿ ಪಂಡಿತರುಗಳಿಗೂ ವೇ|| ಎಸ್. ವಿಠಲಶಾಸ್ತ್ರಿಗಳಿಗೂ ಆದ ಚರ್ಚೆಗಳ ವಿಷಯವನ್ನು ಪತ್ರಿಕೆಯಲ್ಲಿ ಪ್ರಕಟಿಸಿದ ಅನಂತರ ರಾಯರಿಗೆ ಮೂಲಾವಿದ್ಯಾ ವಿಷಯಕವಾದ ಗ್ರಂಥವೊಂದನ್ನು ಕನ್ನಡದಲ್ಲಿಯೂ ಬರೆಯುವದು ಉತ್ತಮವೆಂತ ಕಂಡುಬಂದಿತು. 'ಶಂಕರಸೂರ್ಯ'ಎಂಬ ಕರಪತ್ರವೊಂದನ್ನು ಬರೆದು ಶಂಕರಸಪ್ತಾಹದ ಕಾಲದಲ್ಲಿ ಹಂಚಲಾಗಿತ್ತು. ಆದರಿಂದೀಚೆಗೆ 'ಶಂಕರಸಿದ್ಧಾಂತ'ವೆಂಬ ಗ್ರಂಥವನ್ನು ಬರೆದು ರಾಯರು ಪ್ರಕಟಿಸಿದರು. ಅಭಿಪ್ರಾಯವನ್ನು ಕೊಡಬೇಕೆಂದು ಈ ಗ್ರಂಥವನ್ನು ರಾಯರು ಶ್ರೀ ಹೆಚ್. ಅನಂತಮೂರ್ತಿಶಾಸ್ತ್ರಿಗಳಿಗೆ ಕಳುಹಿಸಲಾಗಿ ಅವರು "ಮೂಲಾವಿದ್ಯಾವಾದದಲ್ಲಿರುವಂತೆ ಅಧ್ಯಾಸವಾದದಲ್ಲಿಯೂ ದೋಷವಿದೆ. ಸಾಕ್ಷಿಯನ್ನಿಟ್ಟುಕೊಂಡರೆ ಸಾಕಾಗಿದೆ" ಎಂದು ಬರೆದರು. ಅದಕ್ಕೆ ರಾಯರು "ಸಾಕ್ಷಿಯೇ ಪರಮಾರ್ಥವೆಂಬುದನ್ನು ಎಲ್ಲರೂ ಒಪ್ಪಬೇಕು. ಆದರೆ ಅಧ್ಯಾಸವಾಸದಲ್ಲಿ ಇಂಥಿಂಥ ದೋಷಗಳಿವೆ-ಎನ್ನುವದಕ್ಕೆ ಬದಲು ಗುಣ, ದೋಷ, ಆಗುವದು, ಹೋಗುವದು-ಎಲ್ಲವೂ ಅಧ್ಯಾಸವೇ ಎಂದು ಒಪ್ಪಿಕೊಳ್ಳಬೇಕು. ಅಧ್ಯಾಸವನ್ನು ನಾವು ಇಟ್ಟುಕೊಳ್ಳಬೇಕಾಗಿಲ್ಲ. ಅದು ಅನುಭವದಲ್ಲಿಯೇ ತೋರುತ್ತಿದೆ. ನಾನು ಜ್ಞಾತೃ, ಕರ್ತೃ, ಭೋಕ್ತೃ-ಎಂದಿಟ್ಟುಕೊಂಡಿರುವದು ಶರೀರೇಂದ್ರಿಯಗಳನ್ನು ನಾನು ನನ್ನದೆಂಬ ಅಭಿಮಾನದಿಂದಲೇ ಎಂಬುದು ಸರ್ವಲೋಕಪ್ರತ್ಯಕ್ಷವಾಗಿದೆ" ಎಂದು ಪ್ರತ್ಯುತ್ತರವನ್ನು ಬರೆದಿದ್ದರು. ಆಗ ಅವರು ಆ ವಿಷಯದಲ್ಲಿ ಏನೂ ಹೇಳದೆ ಸುಮ್ಮನಿದ್ದುಬಿಟ್ಟರು. ಆದರೆ ಕ್ರಮ ಕ್ರಮವಾಗಿ ರಾಯರ ಪ್ರಕ್ರಿಯೆಯು ಅವರಿಗೆ ಒಪ್ಪಾದ ಬಗ್ಗೆ ಸ್ವತಃ ಶ್ರೀ ಹೆಚ್. ಅನಂತಮೂರ್ತಿಶಾಸ್ತ್ರಿಗಳೇ ತಮ್ಮ ಮಾತಿನಲ್ಲಿ ಹೀಗೆ ತಿಳಿಸಿದ್ದಾರೆ. "ಶ್ರೀ ಸುಬ್ಬರಾಯರು ಏರ್ಪಡಿಸುತ್ತಿದ್ದ ಶಂಕರಸಪ್ತಾಹಗಳಲ್ಲಿ ಭಾಗವಹಿಸುತ್ತಿದ್ದೆನಾದರೂ ಅವರ ಪ್ರಕ್ರಿಯೆಯನ್ನು ಒಪ್ಪಿಕೊಳ್ಳಲು ನಾನು ಸಿದ್ಧನಾಗಿರಲಿಲ್ಲ. ತುಮಕೂರಿನ ಸಪ್ತಾಹವು ಮುಗಿಯುವವರೆಗೆ ನಾನು ಇವರು ಹೇಳುತ್ತಿದ್ದ ವಿಷಯಗಳಿಗೆ ಅಂಟಿಕೊಂಡಿರಲಿಲ್ಲ. ಮೊದಮೊದಲು ನಮಸ್ಕಾರವನ್ನು ಕೂಡ ಮಾಡಲು ಹಿಮ್ಮೆಟ್ಟುತ್ತಿದ್ದೆನು. ಅವುಗಳನ್ನು ಚೆನ್ನಾಗಿ ತಿಳಿದುಕೊಳ್ಳುವದರಲ್ಲೇ ಆಸಕ್ತನಾದೆ. ಮೂಲಗ್ರಂಥಗಳ ಕಡೆಗೆ ಲಕ್ಷ್ಯವನ್ನು ಕೊಡಬೇಕೆಂದು ರಾಯರು ತಿಳಿಸುತ್ತಿದ್ದ ವಿಷಯವು ಮನಸ್ಸಿಗೆ ಬಂತು. ಕೊನೆಗೆ ವಿಚಾರದಿಂದ, ಮನನದಿಂದ ಚೆನ್ನಾಗಿ ಪರಿಶೀಲಿಸಿ ನೋಡಿದಾಗ ಇವರು ತಿಳಿಸುತ್ತಿರುವ ಪ್ರಕ್ರಿಯೆಯೇ ಶ್ರೀಶಂಕರಭಗವತ್ಪಾದರವರಿಗೆ ಸಮ್ಮತವಾದ ನಿಜವಾದ ಪ್ರಕ್ರಿಯೆಯೆಂದೂ ಸಾಧುವಾದದ್ದೆಂದೂ ಶಾಸ್ತ್ರಾನುಭವಗಳಿಗೆ ಹೊಂದುಗಡೆಯಾದದ್ದೆಂದೂ ನನಗೆ ಈಗ ಮನವರಿಕೆಯಾಗಿದೆ." ಹೀಗೆ ನೇರಾಗಿ ಹೃದಯಪೂರ್ವಕವಾಗಿ ಶ್ರೀಶ್ರೀಗಳವರ

ವಿಚಾರಸರಣಿಯನ್ನೂ ಪ್ರಕ್ರಿಯೆಯನ್ನೂ ಒಪ್ಪಿಕೊಂಡ ಪ್ರಪ್ರಥಮಪಂಡಿತರು ಇವರೇ-ಎಂದು ಹೇಳಿದರೆ ತಪ್ಪಾಗಲಾರದು.

ಹಿಂದೆ ತಿಳಿಸಿರುವ ಅಭಿನವಶಂಕರಾಲಯದಲ್ಲಿನ ಚರ್ಚೆಗಳಾದ ಮೇಲೆ ವೇ॥ಎಸ್. ವಿಠಲಶಾಸ್ತ್ರಿಗಳನ್ನೂ ವೇ॥ ಶ್ರೀ ಮಲ್ಲಿಕೆರೆ ಸುಬ್ರಹ್ಮಣ್ಯಶಾಸ್ತ್ರಿಗಳವರನ್ನೂ **ಮೈಸೂರು ಶ್ರೀಮನ್ಮಹಾರಾಜ ಶ್ರೀಕೃಷ್ಣರಾಜೇಂದ್ರ ಒಡೆಯರ್ ಮಹಾಪ್ರಭುಗಳು** ಬೇರೆಬೇರೆಯಾಗಿ ಕರೆಯಿಸಿಕೊಂಡು ಅವರುಗಳಿಂದ ಅದ್ವೈತವಿಷಯವಾಗಿ ಅರಮನೆಯಲ್ಲಿಯೇ ತಮ್ಮ ಎದುರಿಗೆ ಉಪನ್ಯಾಸಗಳನ್ನು ಮಾಡುವಂತೆ ಹೇಳಿದರಂತೆ. ಅದರ ಫಲವಾಗಿ ವೇ॥ ಎಸ್. ವಿಠಲಶಾಸ್ತ್ರಿಗಳಿಗೆ ಮಹಾರಾಜಕಾಲೇಜಿನಲ್ಲಿ ಪಾಶ್ಚಾತ್ತ್ಯತತ್ತ್ವಶಾಸ್ತ್ರಗಳನ್ನು ಅಭ್ಯಾಸಮಾಡಲು ಅವಕಾಶವನ್ನು ಕಲ್ಪಿಸಿಕೊಟ್ಟರು. ಮೂಲಾವಿದ್ಯೆಯ ಚರ್ಚೆಯಿಂದ ಶಾಸ್ತ್ರಿಗಳಿಗೆ ಇದೊಂದು ದೃಷ್ಟಫಲವಾಯಿತು. ಅಲ್ಲಿಂದೀಚೆಗೆ ಮೂಲಾವಿದ್ಯಾಪ್ರಸ್ಥಾನದಲ್ಲಿ ಅಭಿಮಾನವಿರುವ ಪಂಡಿತರುಗಳು ಬಹಿರಂಗವಾಗಿ ಚರ್ಚೆಮಾಡುವದನ್ನು ಬಿಟ್ಟುಬಿಟ್ಟರು. ವೇ॥ ಹೆಚ್. ಅನಂತಮೂರ್ತಿಶಾಸ್ತ್ರಿಗಳನ್ನು ಬಿಟ್ಟರೆ ಮಿಕ್ಕವರು ಸಪ್ತಾಹಗಳಲ್ಲಿ ಭಾಗವಹಿಸುವದಕ್ಕೂ ಒಪ್ಪಲಿಲ್ಲ. ಅವರು ಅಲ್ಲಲ್ಲಿಯೇ ತಮ್ಮತಮ್ಮ ಅನುಯಾಯಿಗಳಿಗೆ ಮೂಲಾವಿದ್ಯಾನಿರಾಸಪಕ್ಷಪಾತಿಗಳ ಮೇಲೆ ದೋಷವನ್ನು ಎತ್ತಿ ತೋರಿಸುತ್ತಿದ್ದರು. ಮೈಸೂರಿನಲ್ಲಲ್ಲದೆ ಬೆಂಗಳೂರಿನಲ್ಲಿಯೂ ಈ ವಿಷಯದಲ್ಲಿ ಕೆಲವು ಉಪನ್ಯಾಸಗಳಾದವು.

## ಮೂಲಾವಿದ್ಯಾವಾದದ ಪರವಾಗಿಯೂ ವಿರುದ್ಧವಾಗಿಯೂ ಕೆಲವು ಪ್ರಕಟನೆಗಳು:

ರಾಯರ ಶಂಕರಸಿದ್ಧಾಂತವೆಂಬ ಗ್ರಂಥವನ್ನು ಖಂಡಿಸುವದಕ್ಕೆ "ಮೂಲಾವಿದ್ಯಾನಿರಾಸವಾದದ ವಿಮರ್ಶೆ" ಎಂಬ ಚಿಕ್ಕಗ್ರಂಥವನ್ನು ಭಟ್ಟೋಪಾಹ್ವಶೃಂಗಗಿರಿ ಕವಿನರಸಿಂಹಶರ್ಮರು ಬರೆದರು. ಮೂಲಾವಿದ್ಯಾಸಂಪ್ರದಾಯದಂತೆ ಗ್ರಂಥಗಳನ್ನು ಪ್ರಕಟಿಸುವದಕ್ಕೆ ಒಂದು ಸಂಸ್ಥೆಯನ್ನೇ ತೆಗೆಯಲಿರುವದಾಗಿಯೂ ಅವರು ಪ್ರಕಟಿಸಿದರು. ಶ್ರೀ ಎಂ. ರಂಗಣ್ಣನೆಂಬವರು 'ಮೂಲಾವಿದ್ಯಾನಿರಾಸಖಂಡನ' ಎಂಬ ಪುಸ್ತಕವೊಂದನ್ನು ಪಂಡಿತರ ಸಹಾಯದಿಂದ ಬರೆದು ಪ್ರಕಟಿಸಿದರು. ವೇದಾಂತ ವಿದ್ವಾನ್ ಶ್ರೀ ರಾಮಚಂದ್ರಶಾಸ್ತ್ರಿಸೂರಿಗಳು 'ಶಂಕರಸಿದ್ಧಾಂತದ ವಿಮರ್ಶೆ' ಎಂಬ ಲೇಖನವನ್ನು ಬರೆದರು. ರಾಯರು ಅದನ್ನು ಪ್ರತ್ಯುತ್ತರರೂಪವಾದ ಟಿಪ್ಪಣಿಗಳ ಸಹಿತವಾಗಿ ಅಧ್ಯಾತ್ಮಪ್ರಕಾಶಪತ್ರಿಕೆಯಲ್ಲಿ ಪ್ರಕಟಿಸಿದರು. ಮೈಸೂರಿನ ಸಂಸ್ಕೃತಮಹಾಪಾಠಶಾಲೆಯಲ್ಲಿ ರಾಯರು 1940ನೇ ಡಿಸೆಂಬರ್‌ಮಾಹೆಯಲ್ಲಿ ನಾಲ್ಕು ದಿನಗಳಕಾಲ ಶಂಕರಸಿದ್ಧಾಂತ, ಅನುಶಾಂಕರಪ್ರಸ್ಥಾನಭೇದಗಳು, ಅನುಶಾಂಕರಗ್ರಂಥರಚನೆ, ವೇದಾಂತವಿಚಾರದ ಈಗಿನ ಸ್ಥಿತಿ-ಎಂಬ ವಿಷಯಗಳನ್ನು ಕುರಿತು ನಾಲ್ಕು ಉಪನ್ಯಾಸಗಳನ್ನು ಮಾಡಿದರು. ಶಂಕರರಿಂದೀಚೆಗೆ ಬಂದಿರುವ ಅದ್ವೈತಿಗಳು ಮೂಲಾವಿದ್ಯಾವಾದವನ್ನೇ

ಅಲ್ಲದೆ ಇನ್ನೂ ಕೆಲವು ಪ್ರಸ್ಥಾನಭೇದಗಳನ್ನೂ ಪ್ರಕ್ರಿಯಾಭೇದಗಳನ್ನೂ ಶಂಕರರ ಹೆಸರಿನಲ್ಲಿ ಅವಲಂಬಿಸಿರುತ್ತಾರೆ-ಎಂಬುದನ್ನು ಪ್ರತಿಪಾದಿಸಿ ತಿಳಿಸಿದರು. ಈ ವ್ಯಾಖ್ಯಾನಮಾಲೆಯೇ ಮುಂದೆ 'ವೇದಾಂತವಿಚಾರದ ಇತಿಹಾಸ' ಎಂಬ ಗ್ರಂಥರಚನೆಗೆ ಪ್ರಚೋದಕವಾಯಿತು. ಮದ್ರಾಸಿನ ಅಡಿಯಾರ್‌ನಿಂದ ಪ್ರಕಟವಾಗುತ್ತಿದ್ದ 'ಬ್ರಹ್ಮವಿದ್ಯಾ' ಎಂಬ ಹೆಸರಿನ ಇಂಗ್ಲಿಷ್ ಪತ್ರಿಕೆಯಲ್ಲಿ ಕೆ. ಮಾಧವಕೃಷ್ಣ ಶರ್ಮ M.C.L.,ರವರು ಬರೆದ ವಿಮರ್ಶೆಯೊಂದನ್ನು ಅಧ್ಯಾತ್ಮಪ್ರಕಾಶಪತ್ರಿಕೆಯ ಹನ್ನೆರಡನೆಯ ಸಂಪುಟದಲ್ಲಿ ಪ್ರತ್ಯುತ್ತರಸಮೇತವಾಗಿ ಪ್ರಕಟಿಸಲಾಯಿತು. ವೇ. ಎಸ್. ವಿಠಲಶಾಸ್ತ್ರಿಗಳು ಮದರಾಸಿನಲ್ಲಿ ನಡೆದ ಅಖಿಲಭಾರತತತ್ತ್ವಶಾಸ್ತ್ರಜ್ಞರ ಸಮ್ಮೇಳನದಲ್ಲಿ 'ಶಂಕರರೂ ಅವರ ಈಚಿನ ವ್ಯಾಖ್ಯಾನಕಾರರೂ' ಎಂಬ ನಿವೇದನಪತ್ರವನ್ನು ಓದಿದರು. ಅನಂತರ ಧಾರವಾಡದ ಶ್ರೀ ಎನ್.ಆರ್. ಕುಲಕರ್ಣಿಯವರು 'ಮೂಲಾವಿದ್ಯಾವಾದ' ಎಂಬ ಹೆಸರಿನ ಒಂದು ಲೇಖನವನ್ನು ಪತ್ರಿಕೆಗೆ ಬರೆದರು. ಆಮೇಲೆ 'ಮೂಲಾವಿದ್ಯಾ ಚರ್ಚೆಯ ಫಲಿತಾಂಶ' ಎಂಬ ಲೇಖನವನ್ನು ರಾಯರು ಬರೆದರು. ಅದಾದ ಬಳಿಕ ಶ್ರೀ ಕೆ. ಗೋಪಾಲಕೃಷ್ಣಶಾಸ್ತ್ರಿಗಳು 'ಸಮಾಲೋಚನಾ' ಎಂಬ ಹೆಸರಿನ ಒಂದು ಪುಸ್ತಕವನ್ನು ಬರೆದರು. ಅದರ ಜೊತೆಗೆ ಶ್ರೀ ಪಾಟನಕರ ಚಂದ್ರಶೇಖರಭಟ್ಟರ 'ಮೂಲಾವಿದ್ಯಾಸಮರ್ಥನಾ' ಎಂಬ ಲೇಖನವೂ ಇತ್ತು. ಸಮಾಲೋಚನೆಯು ಬರುವ ಮುಂಚೆಯೇ ಶ್ರೀ ಪಾಲಘಾಟ್ ನಾರಾಯಣಶಾಸ್ತ್ರಿಗಳು 'ಅದ್ವೈತಸಿದ್ಧಾಂತ' ಎಂಬ ಹೆಸರಿನಿಂದ ಮಾಡಿದ ಉಪನ್ಯಾಸವನ್ನು ಸಂಗ್ರಹಿಸಿ ರಾಯರಿಂದ 'ಅದ್ವೈತಸಿದ್ಧಾಂತದಲ್ಲಿ ಅವಿದ್ಯಾತತ್ತ್ವ' ಎಂಬ ಹೆಸರಿನ ವಿಮರ್ಶೆಯನ್ನೂ ಬರೆಯಿಸಿ ಮೈಸೂರು ಅಧ್ಯಾತ್ಮವಿಚಾರಸಂಘದವರು ಪ್ರಕಟಿಸಿದರು. ಅನಂತರ ವೇ|| ಎಸ್. ವಿಠಲಶಾಸ್ತ್ರಿಗಳು 'ಸಮಾಲೋಚನೆಯ ಸಮಾಲೋಚನೆ' ಎಂಬ ಕರಪತ್ರವನ್ನು ಅಚ್ಚುಮಾಡಿಸಿ ಹಂಚಿದರು. ಬ್ರ|| ಶ್ರೀ ಯಡತೊರೆ ಸುಬ್ರಾಯಶರ್ಮರು ಬರೆದ 'ಮೂಲಾವಿದ್ಯಾಸಮರ್ಥನಾ' ಎಂಬ ಪುಸ್ತಕವೂ ಹೊರಬಿದ್ದಿತು. ಅನೇಕರು ರಾಯರ ಹೆಸರು ಬ್ರ|| ಶ್ರೀ ಯಡತೊರೆ ಸುಬ್ರಾಯಶರ್ಮರ ಹೆಸರು ಒಬ್ಬ ವ್ಯಕ್ತಿಯ ಹೆಸರೇ ಎಂದು ಭ್ರಮಿಸಿ ಅವರ ವಿಷಯದಲ್ಲಿ ಇವರನ್ನೂ ಇವರ ವಿಷಯದಲ್ಲಿ ಅವರನ್ನೂ ವಿಚಾರಿಸಹತ್ತಿದರು. ಆಗ ರಾಯರು ತಮ್ಮ ಹೆಸರನ್ನು ವೈ.ಸುಬ್ಬರಾವ್ ಯಾನೆ ಯಲ್ಲಂಬಳಸೆ ಸುಬ್ರಹ್ಮಣ್ಯಶರ್ಮ ಎಂಬುದಾಗಿ ಬದಲಾಯಿಸಿಕೊಳ್ಳಬೇಕಾಯಿತು. ಇದೆಲ್ಲ ಆದಮೇಲೆ ಶ್ರೀ ಬಿ.ಹೆಚ್. ಮುನಿಸ್ವಾಮಿರಾವ್ ಎಂಬುವರು 'ಜಿಜ್ಞಾಸುಗಳ ತೊಡಕು' ಎಂಬ ಪುಸ್ತಕವನ್ನು ಬರೆದರು. ಅಂತೂ 'ಮೂಲಾವಿದ್ಯಾನಿರಾಸ'ವೆಂಬ ಸಂಸ್ಕೃತಗ್ರಂಥವು ಆಂಗ್ಲವಿದ್ಯಾವಿಶಾರದರಲ್ಲಿಯೂ ಸಂಸ್ಕೃತಪಂಡಿತರುಗಳಲ್ಲಿಯೂ ಬಗೆಬಗೆಯ ಪ್ರತಿಕ್ರಿಯೆಗಳನ್ನು ಪ್ರಚೋದಿಸಿ ಸದ್ಯಕ್ಕೆ ಇಲ್ಲಿಗೆ ನಿಂತಿತು. ಈ ವಿಷಯದಲ್ಲಿ ಅಲ್ಲಲ್ಲಿ ಹಿಂದುಗಡೆ ಏನಾದರೂ ಗೊಣಗಿಕೊಳ್ಳುವವರು ಈಗಲೂ ಇಲ್ಲದೆ ಇಲ್ಲ. ಆದರೆ ಈ ಬಗ್ಗೆ ಪ್ರತ್ಯಕ್ಷವಾದ ಚರ್ಚೆಯಾಗಲಿ ಗ್ರಂಥರಚನೆಯಾಗಲಿ ಈಚೆಗೆ ಆದದ್ದು ತಿಳಿದುಬಂದಿಲ್ಲ.

**ಭಾಷ್ಯಪ್ರಸ್ಥಾನಗಳ ಮಂಗಳೋತ್ಸವ :**

ಶ್ರೀ ಡಿ. ಸಿ. ನಂಜಪ್ಪಭಾಗವತರು, ರಿ. ಸ್ಯಾನಿಟರಿ ಇನ್‌ಸ್ಪೆಕ್ಟರ್ ಶ್ರೀ ಡಿ. ಅನಂತಯ್ಯನವರು, ವೇ. ಮತ್ತೂರು ಸುಬ್ರಾಯಾವಧಾನಿಗಳು-ಮುಂತಾದ ಪರಸ್ಥಳದವರೊಡನೆ ಸ್ಥಳೀಯರಾದ ಶ್ರೀ ಪಿ.ಎನ್. ನರಸಿಂಹಯ್ಯನವರು, ಶ್ರೀ ಆರ್. ರಾಮಸ್ವಾಮಯ್ಯನವರು, ಶ್ರೀ ಸಂತೇಬಾಚಳ್ಳಿ ಸುಬ್ರಾಯರು-ಮುಂತಾದ ಮಹನೀಯರುಗಳು ಶ್ರವಣಮಾಡುತ್ತಿದ್ದ ಪ್ರಸ್ಥಾನತ್ರಯ ಭಾಷ್ಯಪ್ರವಚನವು ಮುಗಿದು 1943ನೆಯ ಡಿಸೆಂಬರ್‌ನಲ್ಲಿ ಮಂಗಳೋತ್ಸವವು ನೆರವೇರಿತು. ಅಲ್ಲಿಂದ ಮುಂದೆ ದ್ವಿತೀಯಾವೃತ್ತಿಯ ಪಾಠಗಳು ಮತ್ತೆ ಸಾಗುತ್ತಿದ್ದವು. ಆಗಾಗ್ಗೆ ಬೆಂಗಳೂರಿನಿಂದ ಶ್ರೀ ಬಿ.ಹೆಚ್. ಮುನಿಸ್ವಾಮಿರಾಯರು* ಹೊಳೆನರಸೀಪುರಕ್ಕೆ ಬಂದುಹೋಗುತ್ತಿದ್ದರು.

**ಪರಸ್ಥಳಗಳಲ್ಲಿ ಉಪನ್ಯಾಸಗಳು :**

ಈ ಅವಧಿಯಲ್ಲಿ ರಾಯರು ಕೃಷ್ಣರಾಜನಗರ, ನಂಜನಗೂಡು, ರುದ್ರಪಟ್ಟಣ, ಬೆಂಗಳೂರು, ಮೈಸೂರಿನ ರಾಮಕೃಷ್ಣಾಶ್ರಮ, ಸಕಲೇಶಪುರ, ಚಿಕ್ಕಮಗಳೂರು, ಶಿವಮೊಗ್ಗ-ಮುಂತಾದ ಸ್ಥಳಗಳಲ್ಲಿ ಸಂಚರಿಸಿ ಬೇರೆಬೇರೆಯ ಸಂದರ್ಭಗಳಲ್ಲಿ ಉಪನ್ಯಾಸವನ್ನು ಮಾಡಿದರು. ಕಾರ್ಯಾಲಯದ ಅಂಗವಾಗಿ ಹೊಳೆನರಸೀಪುರದ ಟವನ್‌ಹಾಲ್‌ನಲ್ಲಿ ಕೆಲವು ಉಪನ್ಯಾಸಗಳು ಆದವು. ಅಂತೂ ಅಧ್ಯಾತ್ಮಪ್ರಚಾರವು ಸತತವಾಗಿ ನಡೆದಿತ್ತು.

**ಪತ್ರಿಕೆಯು ನಿಂತದ್ದು :**

ಪತ್ರಿಕೆಯು 1931 ರಿಂದ 1944 ರವರೆಗೆ ನಡೆಯುತ್ತಿದ್ದು ಆ ವರ್ಷದ ಆಗಸ್ಟ್ ಮಾಹೆಯಲ್ಲಿ ಅನಿವಾರ್ಯವಾಗಿ ನಿಲ್ಲಬೇಕಾಗಿ ಬಂತು. ಚಂದಾದಾರರ ಸಂಖ್ಯೆಯು ಕಡಿಮೆಯಾದದ್ದು, ಮುದ್ರಣಕ್ಕೆ ಒಳ್ಳೆಯ ಕಾಗದ ದೊರೆಯದೆ ಹೋದದ್ದು, ಸಂಪಾದಕರ ಆರೋಗ್ಯವು ಕೆಟ್ಟದ್ದು-ಈ ಕಾರಣಗಳಿಂದ 1944ನೆಯ ಸೆಪ್ಟೆಂಬರ್‌ನಿಂದ ಪ್ರಕಟವಾಗಬೇಕಾಗಿದ್ದ 16ನೆಯ ಸಂಪುಟವು ನಿಂತುಹೋಯಿತು. ಮುಂದೆ 1946ನೆಯ ಸೆಪ್ಟೆಂಬರ್‌ವರೆಗೆ ಎರಡುವರ್ಷಕಾಲ ಪತ್ರಿಕೆಯು ಹೊರಡಲಿಲ್ಲ.

**ಕೆ.ಎ. ಕೃಷ್ಣಸ್ವಾಮಿ ಅಯ್ಯರ್‌ರವರು ಸ್ವರ್ಗಸ್ಥರಾದುದು :**

ರಾಯರ ಜೀವನಕ್ಕೆ ಉಸಿರಿನಂತಿದ್ದ ಮತ್ತು ರಾಯರಲ್ಲಿ ವೇದಾಂತದ ಅಭಿರುಚಿಯನ್ನು ಬೆಳೆಯಿಸಿ ಕ್ರಮವಾದ ದಿಕ್ಕಿನಲ್ಲಿ ಹಬ್ಬಿಸುವದಕ್ಕೆ ಮುಖ್ಯ ಕಾರಣರಾಗಿದ್ದ ಶ್ರೀ ಅಯ್ಯರ್‌ರವರ ವಿಯೋಗವು ರಾಯರಿಗೆ 1943ನೆಯ ಫೆಬ್ರವರಿ ಮಾಹೆಯಲ್ಲಿ ಅನಿರೀಕ್ಷಿತವಾಗಿ ಬಂದೊದಗಿತು. ರಾಯರು ಹೊಳೆನರಸೀಪುರಕ್ಕೆ ಬಂದಮೇಲೂ ಅಯ್ಯರ್‌ರವರು ಇವರನ್ನು ಮರೆತಿರಲಿಲ್ಲ.

* ಇವರು ಮುಂದೆ ಶ್ರೀರಾಮನಾಥಸ್ವಾಮಿಗಳೆಂಬ ಹೆಸರಿನಿಂದ ಪ್ರಸಿದ್ಧರಾಗಿದ್ದರು

ಕೊನೆಗಾಲಕ್ಕೆ ಅಯ್ಯರ್‌ರವರಿಗೆ ಪಾರ್ಶ್ವವಾಯು ಬಂದು ಹೆಸರುಗಳೆಲ್ಲ ಮರೆತು ಹೋಗಿದ್ದುವಂತೆ. ಆದರೂ ಹೆಸರು ಹೇಳಿದರೆ ನೆನಪಿಸಿಕೊಳ್ಳುತ್ತಿದ್ದರಂತೆ. ವೇದಾಂತದ ತಿರುಳೆಲ್ಲವನ್ನೂ ಚೆನ್ನಾಗಿ ಅರಿತಿದ್ದ ಅವರಿಗೆ ಸ್ವಪ್ನದಲ್ಲಿ ಶ್ರೀಶಂಕರಾಚಾರ್ಯರೇ ಬಂದು ತತ್ತ್ವೋಪದೇಶವನ್ನು ಮಾಡಿದರೆಂಬ ನಂಬಿಕೆಯಿತ್ತು. ಅವರು ಬೆಂಗಳೂರಿನ ಅನಂತಪ್ಪಮಹಾರಾಜರಲ್ಲಿಯೂ ಮೋಟಗಾನಹಳ್ಳಿ ಶಂಕರಶಾಸ್ತ್ರಿಗಳಲ್ಲಿಯೂ ತುಂಬ ಗೌರವವುಳ್ಳವರಾಗಿದ್ದರು. ಎಷ್ಟೋ ವೇದಾಂತವಿಷಯಗಳು ಅವರ ಮುಖದಿಂದ ಹೊರಬಿದ್ದ ಮೇಲೆಯೇ ರಾಯರಿಗೆ ಅವು ಭಾಷ್ಯದಲ್ಲೂ ಇವೆ ಎಂದು ತಿಳಿಯುತ್ತಿತ್ತು. ಹೀಗಿರುವಾಗ ಅವರನ್ನು 'ಋಷಿ' ಸಮಾನರೆಂದು ರಾಯರು ಭಾವಿಸಿದ್ದರಲ್ಲಿ ಆಶ್ಚರ್ಯವೇನು?

ಶ್ರೀ ಅಯ್ಯರ್‌ರವರು ಡಾಯ್ಸನ್ ಎಂಬ ಪಾಶ್ಚಾತ್ತ್ಯವಿದ್ವಾಂಸನು ಬರೆದಿದ್ದ `Elements of Metaphysics' ಎಂಬ ಗ್ರಂಥದಮೇಲೆ `Critical Reflections' ಎಂಬ ಹೆಸರಿನಿಂದ ಬರೆದಿದ್ದ ಗ್ರಂಥವನ್ನು ಆ ವಿದ್ವಾಂಸನು ಓದಿ ಮೆಚ್ಚುಗೆಯನ್ನು ಸೂಚಿಸಿದ್ದನು. ಇಂಥ ವಿದ್ಯಾವಂತರಾದ ಇವರು ಬರೆದ ಕೆಲವು ಲೇಖನಗಳು 'ವೇದಾಂತಕೇಸರಿ'- ಎಂಬ ಇಂಗ್ಲಿಷುಪತ್ರಿಕೆಯಲ್ಲೂ ಪ್ರಕಟವಾಗಿವೆ. ಶ್ರೀರಾಮಕೃಷ್ಣಪರಮಹಂಸರ ಶತಮಾನೋತ್ಸವದ ಸ್ಮಾರಕವಾಗಿ ಪ್ರಕಾಶವಾಗಿರುವ `Cultural Heritage of India' ಎಂಬ ಮಹಾನಿಬಂಧಮಾಲೆಯಲ್ಲಿ `The Philosophy of Advaita or Non-duralism' ಎಂಬ ಹೆಸರಿನಿಂದ ಉತ್ತಮ ನಿಬಂಧವನ್ನು ಇವರು ಬರೆದಿರುತ್ತಾರೆ. `The Drumbeat of Angels Uma's Mirror' ಎಂಬ ಇವರ ಇಂಗ್ಲಿಷ್ ಕಾವ್ಯಗಳು ಅಚ್ಚಾಗಿವೆ. ಡಾ|| ಎಂ. ಶ್ರೀನಿವಾಸರಾಯರು ಇವರ ಸಹಾಯದಿಂದ ಪ್ರಕಟಿಸಿರುವ "ಪಂಚದಶಿ" (English) ಯಲ್ಲಿರುವ ಅಮೋಘವಾದ ಟಿಪ್ಪಣಿಗಳು ಇವರ ವಿಚಾರಪ್ರೌಢಿಮೆಗೆ ಸಾಕ್ಷಿಯಾಗಿರುತ್ತವೆ. ಎಲ್ಲಕ್ಕೂ ಮೇಲಾಗಿ `Vedanta or The Science of Reality' ಎಂಬ ಗ್ರಂಥರತ್ನವಂತೂ ವೇದಾಂತ ಚಕ್ರವರ್ತಿಯ ಕಿರೀಟದಲ್ಲಿ ಶೋಭಿಸುವ ಅನರ್ಘವಾದ ವಜ್ರದಂತಿರುತ್ತದೆ. ಶಾಂಕರಸಿದ್ಧಾಂತವನ್ನು ಭದ್ರವಾದ ಯುಕ್ತ್ಯನುಭವಗಳ ತಳಗಟ್ಟಿನ ಮೇಲೆ ನಿಲ್ಲಿಸುವದಕ್ಕೆ ಶ್ರೀಕೃಷ್ಣಸ್ವಾಮಿ ಅಯ್ಯರ್‌ರವರು ಮಾಡಿರುವ ಸಾಹಸವು ಮನನಶೀಲರಾದ ಜಿಜ್ಞಾಸುಗಳು ಹಲವು ಶತಮಾನಗಳವರೆಗೆ ಕೃತಜ್ಞತೆಯಿಂದ ಕೊಂಡಾಡತಕ್ಕದ್ದಾಗಿರುವದೆಂಬುದು ಆದೊಂದು ಗ್ರಂಥದಿಂದಲೇ ಸುಸ್ಪಷ್ಟವಾಗಿರುತ್ತದೆ.

ಅಯ್ಯರ್‌ರವರು ಇಹಲೋಕವನ್ನು ಬಿಟ್ಟಾಗ ರಾಯರು ಹೊಳೆನರಸೀಪುರದಲ್ಲಿಯೇ ಇದ್ದರು. ಕೆಲವು ದಿನಗಳ ಮುಂಚೆಯಿಂದಲೇ ಅವರು ಆಗಾಗ್ಗೆ ರಾಯರ ಕನಸಿನಲ್ಲಿ ಕಾಣಿಸಿಕೊಳ್ಳುತ್ತಿದ್ದರಂತೆ. ಒಂದು ದಿನ ಬೆಳಗಿನಜಾವದಲ್ಲಿ ಅವರ ಮನೆಯಲ್ಲಿ ದೊಡ್ಡ ಅನ್ನಸಂಪತರ್ಪಣೆಯಾದಂತೆಯೂ ಅವರು ಸ್ನಾನಮಾಡಿಕೊಂಡು ಬಂದು ತಮ್ಮ ಹೆಂಡತಿಗೆ "ಏಳು, ಬಹಳ ಹೊತ್ತಾಯಿತು!" ಎಂದು ತಮಿಳಿನಲ್ಲಿ ಹೇಳಿದರಂತೆಯೂ ಕನಸಾಯಿತಂತೆ.

ಅದಾದ ಮೂರು ದಿನಗಳೊಳಗೆ ಅವರು ಪರಂಧಾಮವನ್ನೈದಿದರು-ಎಂದು ಪತ್ರವು ಬಂದಿತು. ಬೆಂಗಳೂರಿನಲ್ಲಿ ಅವರು ತಾವು ವಾಸವಾಗಿದ್ದ ಮನೆಯನ್ನು ಮಾರಿ ಇಂಥ ದಿನ ಮನೆಯನ್ನು ಖಾಲಿಮಾಡುವದಾಗಿ ಹೇಳಿದ್ದು ಆ ದಿನವೇ ಸರಿಯಾಗಿ ಈ ಲೋಕವನ್ನು ಬಿಟ್ಟು ತೆರಳಿದ್ದರು-ಎಂದು ತಿಳಿದುಬಂದಿದೆ. ಇದೊಂದು ಆಶ್ಚರ್ಯಕರಘಟನೆಯಲ್ಲದೆ ಮತ್ತೇನು?

ರಾಯರು ಬೆಂಗಳೂರಿಗೆ ಹೋಗಿ ಅವರ ಮನೆಯವರನ್ನೆಲ್ಲ ನೋಡಿಕೊಂಡು ಬಂದರು. ಅಯ್ಯರ್‌ರವರ ಅಗಲುವಿಕೆಯು ರಾಯರಿಗೆ ತತ್ಕಾಲಕ್ಕೆ ಸಾಕಷ್ಟು ವ್ಯಥೆಯನ್ನುಂಟು ಮಾಡಿತ್ತು. ಆದರೂ ಆ ಅಪರಿಹಾರ್ಯವಾದ ವಿಷಯಕ್ಕೆ ಸಮಾಧಾನವನ್ನು ಅವರು ತಂದುಕೊಳ್ಳಲೇಬೇಕಾಗಿತ್ತು. ಅಯ್ಯರ್‌ರವರ ಚರಿತ್ರೆಯನ್ನು ಬರೆಯಬೇಕೆಂದು ರಾಯರು ಪ್ರಯತ್ನಪಟ್ಟರಾದರೂ ಅದೇಕೊ, ಸಾಧ್ಯವಾಗಲಿಲ್ಲ. ಅಧ್ಯಾತ್ಮಪ್ರಕಾಶಪತ್ರಿಕೆಯಲ್ಲಿ ಅಯ್ಯರ್‌ರವರ ವಿಷಯಕ್ಕೆ ರಾಯರು ಒಂದು ಲೇಖನವನ್ನು ಬರೆದರು. ಅದರ ಕೊನೆಯಲ್ಲಿರುವ ಚರಮಶ್ಲೋಕಗಳು ಹೀಗಿವೆ:-

ವಿದ್ಯಾಮರ್ಥಂ ಚ ದಾರಾನ್ ಸುಕೃತಮಪಿ ಗೃಹಂ ಪುತ್ರಪೌತ್ರಾಭಿವೃದ್ಧಿಂ ।
ಸಂಪಾದ್ಯೈವಂ ಸ್ವಧರ್ಮಾಚರಣಮಥ ವಿಭೋರರ್ಚನಂ ಸಂವಿಧೇಯಮ್ ॥
ದಾನಂ ದಾನ್ತಿರ್ದಯೈವಂ ನಿಜಪರಸಮತಾಬುದ್ಧಿರಪ್ಯೇವಮೇವಂ ।
ಸ್ವಾಚಾರೇಣೈವ ದೇಷ್ಟಾ ಬತ ಕಥಮಿಹ ನೋ ದೃಶ್ಯತಾಮೇತಿ ಕೃಷ್ಣಃ ॥
ಕಾವ್ಯನಾಟಕಸಂಗೀತತತ್ತ್ವಶಾಸ್ತ್ರಾಬ್ಧಿಚನ್ದ್ರಮಾಃ ।
ಸಂಸ್ಕೃತದ್ರಾವಿಡಾನ್ಧ್ರಾಙ್ಗ್ಲಭಾಷಾಭೂಷಣಭಾರತೀ ॥
ನಿತ್ಯಾನನ್ದಪ್ರದಾದ್ವೈತವೇದಾನ್ತಾಬ್ಜವಿಭಾವಸುಃ ।
ಕೃಷ್ಣಾರ್ಯೋ ವಿಷ್ಣುಪದವೀಂ ಪ್ರಾಪ್ತಃ ಕೃಷ್ಣ ಇವಾಪರಃ ॥

ಎಂದು ಇಲ್ಲಿ ರಾಯರು ಅಯ್ಯರ್‌ರವರ ಗುಣಗಾನಮಾಡಿರುತ್ತಾರೆ.

## ಅಧ್ಯಾತ್ಮವಿದ್ಯಾನಿಲಯ :

ಅಧ್ಯಾತ್ಮವಿದ್ಯೆಯ ಪ್ರಚಾರಕ್ಕಾಗಿ ಯೋಗ್ಯರಾದ ವಿದ್ಯಾರ್ಥಿಗಳನ್ನು ಸಜ್ಜುಮಾಡಬೇಕೆಂದು ಒಂದು ವಿದ್ಯಾನಿಲಯವನ್ನು ಕಾರ್ಯಾಲಯದ ಅಂಗವಾಗಿ ಸ್ಥಾಪಿಸಬೇಕೆಂಬ ಸಂಕಲ್ಪವು ರಾಯರಿಗೆ ಹಿಂದೆಯೇ ಇದ್ದಿತಷ್ಟೆ! ಈ ದಿಶೆಯಲ್ಲಿ 1939ನೆಯ ವರ್ಷದಿಂದಲೂ ಪ್ರಕಟನೆಗಳನ್ನು ಹೊರಡಿಸಿ ಈ ಕಾರ್ಯಕ್ಕೆ ಮಹಾಜನರ ಸಹಾಯವನ್ನು ಕೋರಲಾಗಿತ್ತು. ಅಭ್ಯಾಸದ ವಿವರವನ್ನೂ ಪ್ರಕಟಿಸಲಾಯಿತು. ಮುಖ್ಯವಾಗಿ ಅದ್ವೈತಸಿದ್ಧಾಂತದ ಜೊತೆಗೆ ಸಂಕ್ಷಿಪ್ತವಾಗಿ ದ್ವೈತವಿಶಿಷ್ಟಾದ್ವೈತಸಿದ್ಧಾಂತಗಳನ್ನು ವಿದ್ಯಾರ್ಥಿಗಳಿಗೆ ಬೋಧಿಸುವದು; ಭೂಮಂಡಲದ ಬೇರೆ ಬೇರೆ ಮತಾಚಾರ್ಯರುಗಳ ಚರಿತ್ರೆಯನ್ನೂ ಉಪದೇಶಗಳನ್ನೂ ಸಂಗ್ರಹವಾಗಿ ತಿಳಿಸುವದು; ಜಪ, ಪೂಜಾ, ಧ್ಯಾನಗಳ ಮರ್ಮವನ್ನು ಹೇಳಿಕೊಡುವದು. ಜನಸಾಮಾನ್ಯರಿಗೆ

ಬೋಧವಾಗುವಂತೆ ಕನ್ನಡದಲ್ಲಿ ಪುರಾಣಶ್ರವಣ, ಉಪನ್ಯಾಸಗಳನ್ನು ಮಾಡಲು ತರಬೇತು ಮಾಡುವದು-ಈ ರೀತಿಯಾದ ಶಿಕ್ಷಣವನ್ನು ಕೊಡಲು ಉದ್ದೇಶಿಸಿತ್ತು. ಇಂಥ ಶಿಕ್ಷಣವನ್ನು ಪಡೆದ ಪ್ರಚಾರಕರು ತಾವು ಸ್ವತಃ ಆಚಾರಸಂಪನ್ನರಾಗಿದ್ದು ಜನರಿಗೆ ಅಧ್ಯಾತ್ಮೋಪದೇಶಗಳನ್ನು ಹೇಳುತ್ತಾ ವೇದಾಂತವಿದ್ಯೆಯಲ್ಲಿ ಅಭಿರುಚಿಯನ್ನುಂಟುಮಾಡುವಂಥ ಆದರ್ಶ ಬೋಧಕರಾಗುವಂತೆ ತಯಾರುಮಾಡಬೇಕೆಂದು ರಾಯರು ಸಂಕಲ್ಪಿಸಿ ವಿದ್ಯಾನಿಲಯವನ್ನು ತೆರೆಯುವ ಆಲೋಚನೆಯನ್ನು ಮಾಡಿದರು. ಯೋಗ್ಯರಾದ ವಿದ್ಯಾರ್ಥಿಗಳಿಗೆ ಉಚಿತ ವಸತಿ, ಊಟದ ಸೌಕರ್ಯ-ಇವುಗಳನ್ನು ಒದಗಿಸಿಕೊಟ್ಟು ಒಂದೊಂದು ಪರ್ಯಾಯಕ್ಕೆ ಹತ್ತು ವಿದ್ಯಾರ್ಥಿಗಳಿಗೆ ಕಡಿಮೆಯಿಲ್ಲದಂತೆ ಶಿಕ್ಷಣಕೊಡಬೇಕೆಂಬುದು ರಾಯರ ಸಂಕಲ್ಪವಾಗಿತ್ತು. ಆದರೆ ಕಾಲಗತಿಯಿಂದ ಇಂಥ ವಿದ್ಯಾರ್ಥಿಗಳಾರೂ ಸಿಕ್ಕದೆ ಇದ್ದ ಕಾರಣ 1944ನೆಯ ವರ್ಷದವರೆಗೂ ವಿದ್ಯಾನಿಲಯದ ಸ್ಥಾಪನೆಯು ಸಾಧ್ಯವಾಗಲಿಲ್ಲ. ಹೊರಗಿನ ಜನರ ಸಹಾಯವೂ ದೊರಕಿರಲಿಲ್ಲ. ಕೊನೆಗೆ 1944ನೆಯ ಮೇ ಮಾಹೆಯಲ್ಲಿ ನಂಜನಗೂಡಿನಿಂದ ಶ್ರೀ ಸಿ.ಎನ್. ಯಜ್ಞನಾರಾಯಣಶಾಸ್ತ್ರಿ ಎಂಬ ವಿದ್ಯಾರ್ಥಿಯೊಬ್ಬನು ಬಂದುಸೇರಿದನು. ಆತನಿಗೆ ವೇದಾಧ್ಯಯನವು ಪೂರ್ತಿಯಾಗಿತ್ತು. ಕೆಲವು ಕಾವ್ಯಪಾಠಗಳೂ ಆಗಿದ್ದವು. 1944ನೆಯ ಜುಲೈ ಮಾಹೆಯಲ್ಲಿ ಆ ಒಬ್ಬ ವಿದ್ಯಾರ್ಥಿಯನ್ನೇ ದಾಖಲುಮಾಡಿಕೊಂಡು ವಿದ್ಯಾನಿಲಯವನ್ನು ರಾಯರು ಪ್ರಾರಂಭಿಸಿ ಗೀತಾಭಾಷ್ಯಪಾಠವನ್ನು ಪ್ರಾರಂಭಮಾಡಿದರು. ಮುಂದೆ ಉಪನಿಷದ್ಭಾಷ್ಯ, ನೈಷ್ಕರ್ಮ್ಯಸಿದ್ಧಿ-ಮುಂತಾದ ಪಾಠಗಳೂ ನಡೆದವು.

### ಪುಸ್ತಕಭಂಡಾರ :

ಡಾ॥ ಆರ್. ಶಾಮಶಾಸ್ತ್ರಿಗಳು, ಡಿ.ಸಿ. ನಂಜಪ್ಪಭಾಗವತರು, ಆಸ್ಥಾನ ಮಹಾವಿದ್ವಾನ್ ವೈ.ಚಂದ್ರಶೇಖರಶಾಸ್ತ್ರಿಗಳು-ಮುಂತಾದ ಮಹನೀಯರು ಕೆಲವು ಗ್ರಂಥಗಳನ್ನು ಭಂಡಾರಕ್ಕೆ ಕೊಟ್ಟರು. ಅವಶ್ಯಕವಾದ ಕೆಲವು ಪುಸ್ತಕಗಳನ್ನೂ ಕೊಳ್ಳಲಾಯಿತು.

### ಶರನ್ನವರಾತ್ರಿಯ ಅನುಷ್ಠಾನ :

ಕಾರ್ಯಾಲಯದಲ್ಲಿ ಆಗ್ಗೆ ನಡೆಯುತ್ತಿದ್ದ ಶಂಕರಸಪ್ತಾಹ, ಗೀತಾಜಯಂತಿ, ಶ್ರೀಬ್ರಹ್ಮಚೈತನ್ಯಾರಾಧನೆ-ಈ ಅನುಷ್ಠಾನಗಳ ಜೊತೆಗೆ 1944ನೆಯ ಸೆಪ್ಟೆಂಬರ್ ಮಾಹೆಯಲ್ಲಿ ಮೊದಲನೆಯ ಬಾರಿಗೆ ಶರನ್ನವರಾತ್ರಿಯ ಅನುಷ್ಠಾನವನ್ನು ನೆರವೇರಿಸಲಾಯಿತು. ಆಗ್ಗೆ ಪ್ರಸ್ಥಾನತ್ರಯಭಾಷ್ಯ ಪಾರಾಯಣ, ಸೂರ್ಯನಮಸ್ಕಾರ, ರುದ್ರಾಭಿಷೇಕ-ಮುಂತಾದ ಅನುಷ್ಠಾನಗಳನ್ನು ನಡೆಸಲಾಯಿತು.

### ಕಟ್ಟಡಕ್ಕೆ ನಿವೇಶಗಳು :

ಕಾರ್ಯಾಲಯಕ್ಕೆ ಆಗಂತುಕರು ಬರುವದು, ಹೋಗುವದು-ಹೆಚ್ಚಾದಂತೆಲ್ಲಾ ಸಂಸ್ಥೆಗೆ ಒಂದು ಸ್ವಂತಕಟ್ಟಡವು ಅವಶ್ಯವೆಂತ ರಾಯರಿಗೆ ತೋರಿತು; ಮತ್ತು ಸಂಸ್ಥೆಯ ಕೆಲಸಕಾರ್ಯಗಳನ್ನು

ವಿಸ್ತರಿಸಲು ಅದು ಅವಶ್ಯವೂ ಆಗಿತ್ತು. ಆದರೆ ಕಟ್ಟಡದ ನಿವೇಶನಕ್ಕಾಗಿ ರಾಯರು ಹೊಳೆನರಸೀಪುರದಲ್ಲಿ ಮೊದಲಬಾರಿಗೆ ಮಾಡಿದ್ದ ಪ್ರಯತ್ನಗಳು ಫಲಕಾರಿಯಾಗಿರಲಿಲ್ಲ. ಇದರಿಂದ ಬೇಸತ್ತು ಕಾರ್ಯಾಲಯವನ್ನು ಮೈಸೂರಿಗೆ ಒಯ್ದು ಅಲ್ಲಿಯೇ ಕೆಲಸಗಳನ್ನು ಮುಂದುವರಿಸಬೇಕೆಂದು ಯೋಚಿಸಿ ಮೈಸೂರಿಗೆ ಹೋಗಿ ಪ್ರಯತ್ನಮಾಡಿ ಬಂದರು. ಆದರೆ ದೈವಸಂಕಲ್ಪವು ಬೇರೆಯಾಗಿತ್ತು. ಅವರು ಪ್ರಯತ್ನಮಾಡಿ ಹಿಂತಿರುಗಿಬಂದ ಎರಡುಮೂರು ದಿನಗಳಲ್ಲಿಯೇ ಒಂದು ದಿನ ಸಾಯಂಕಾಲ ಸಂಚಾರಕ್ಕೆ ಹೋಗುತ್ತಿರುವಾಗ ಅಕಸ್ಮಾತ್ತಾಗಿ ಶ್ರೀ ಲಾಯರ್ ಅರಕಲಗೂಡು ಶ್ರೀಕಂಠಯ್ಯನವರೆಂಬವರ ಭೇಟಿಯಾಯಿತು. ಈ ವರೆಗೆ ಅವರ ಪರಿಚಯ ರಾಯರಿಗೆ ಸಾಧಾರಣವಾಗಿ ಆಗಿತ್ತು. ರಾಯರು ಜಾಗ ಸಿಕ್ಕದೆ ಊರನ್ನು ಬಿಡಲಿರುವದಾಗಿ ಪ್ರಸ್ತಾಪಿಸಿದಾಗ ಅವರು ಊರಿನ ಬಡಾವಣೆಯಲ್ಲಿ ಒಂದು ನಿವೇಶನವನ್ನು ತೋರಿಸಿ 'ಈ ಸ್ಥಳವಾದರೆ ನಿಮಗೆ ಆಗಬಹುದೊ?' ಎಂದು ಕೇಳಿದರು. ರಾಯರು "ಆಗಬಹುದು; ಆದರೆ ಇದನ್ನು ಕೊಡುವವರು ಯಾರು?' ಎಂದರು. ಅದಕ್ಕೆ ಶ್ರೀ ಅರಕಲಗೂಡು ಶ್ರೀಕಂಠಯ್ಯನವರು 'ಗುರುಗಳ ಅನುಗ್ರಹ ಹೇಗಾಗುತ್ತದೋ ನೋಡೋಣ' ಎಂದು ನಡೆದುಬಿಟ್ಟರು. ಇಷ್ಟಾದ ಎರಡು ದಿನಗಳ ತರುವಾಯ ಅದೇ ಸ್ಥಳದಲ್ಲಿದ್ದ ತಮ್ಮ ಸ್ವಂತ ಎರಡು ನಿವೇಶನಗಳನ್ನು (ಸೈಟು) ಶ್ರೀ ಅರಕಲಗೂಡು ಶ್ರೀಕಂಠಯ್ಯನವರು ಕಾರ್ಯಾಲಯಕ್ಕೆ ದಾನವಾಗಿ ಸಮರ್ಪಿಸಿ ದಾನಪತ್ರ ಬರೆದು ರಿಜಿಸ್ಟರು ಮಾಡಿಸಿ ರಾಯರಿಗೆ ತಂದುಕೊಟ್ಟು ಬಿಟ್ಟರು! ರಾಯರಿಗೆ ಪರಮಾಶ್ಚರ್ಯವಾಯಿತು. 'ಎಲ್ಲವೂ ಭಗವಂತನ ಲೀಲೆ' ಎಂದುಕೊಂಡು ಆ ಮಹಾಮಹಿಮನನ್ನು ಮನಸಾರೆ ಸ್ತುತಿಸಿದರು.

1942ನೆಯ ಅಕ್ಟೋಬರ್‌ನಲ್ಲಿ ಶ್ರೀ ಅರಕಲಗೂಡು ಶ್ರೀಕಂಠಯ್ಯನವರು ನಿವೇಶನಗಳನ್ನು ಕೊಟ್ಟರು. ಅಕ್ಕಪಕ್ಕಗಳಲ್ಲಿರುವ ನಿವೇಶನಗಳನ್ನು ಕೊಳ್ಳಬೇಕೆಂದಿರುವಾಗ ಶ್ರೀ ಅರಕಲಗೂಡು ಶ್ರೀಕಂಠಯ್ಯನವರೇ ಮತ್ತೊಂದು ನಿವೇಶನವನ್ನೂ ದಾನವಾಗಿಕೊಟ್ಟರು. ಇದಾದಮೇಲೆ ಉಳಿದ ನಾಲ್ಕು ನಿವೇಶನಗಳನ್ನು ಬೇರೆಬೇರೆಯವರಿಂದ ಮೂಲಬೆಲೆಗೆ ಪಡೆಯಲಾಯಿತು. ಅಂತೂ ನಾಲ್ಕುಕಡೆಯೂ ರಸ್ತೆಗಳಿರುವ ವಿಶಾಲವಾದ ಏಳು ನಿವೇಶನಗಳ ಒಂದು ಬಯಲು ಕಾರ್ಯಾಲಯದ ಸ್ವತ್ತಾಗಿ ಸ್ವಾಧೀನಕ್ಕೆ ಬಂದಿತು.

## ಕಟ್ಟಡಕ್ಕೆ ಸಹಾಯದ್ರವ್ಯಯಾಚನೆ :

ಇನ್ನು ಕಟ್ಟಡಗಳ ನಿರ್ಮಾಣಕ್ಕೆ ಹಣವನ್ನು ಒದಗಿಸುವ ಸಮಸ್ಯೆಯನ್ನು ರಾಯರು ಎದುರಿಸಬೇಕಾಯಿತು. ಬೇರೆಯವರನ್ನು ಸಹಾಯಕೇಳುವ ಮೊದಲು ತಾವು ಅದಕ್ಕೆ ಕೊಂಚಹಣವನ್ನು ಹಾಕುವ ಯೋಚನೆಯನ್ನು ಮಾಡಿದರು. ರಾಯರ ಊರಾದ ಯಲ್ಲಂಬಳಸೆಯಲ್ಲಿ ಪಿತ್ರಾರ್ಜಿತವಾದ ಆಸ್ತಿ ತೋಟ-ಗದ್ದೆಗಳು ಇವರ ಪಾಲಿನದು ಇದ್ದುಕೊಂಡಿತ್ತು. ಅದರಿಂದ ಸರಿಯಾಗಿ ವಾರ್ಷಿಕ ಆದಾಯವು ಬರುತ್ತಿರಲಿಲ್ಲ. ಅದನ್ನು

ಖರೀದಿಗೆ ವಿನಿಯೋಗಮಾಡಿ ಬಂದ ಹಣವನ್ನು ಕಾರ್ಯಾಲಯದ ಕಟ್ಟಡದ ನಿಧಿಗೆ ಮೊದಲನೆಯದಾಗಿ ಕೊಡತಕ್ಕದ್ದೆಂದು ನಿಶ್ಚಯಿಸಿ 1942ನೆಯ ಅಕ್ಟೋಬರ್ ಮಾಹೆಯಲ್ಲಿ 1100ರೂಗಳಿಗೆ ಮಾರಿಬಿಟ್ಟರು. ಖರ್ಚುಕಳೆದು ಉಳಿದ ಹಣ ರೂ. 1041ನ್ನು ಕಾರ್ಯಾಲಯದ ಕಟ್ಟಡದ ನಿಧಿಗೆ ಪ್ರಪ್ರಥಮವಾಗಿ ರಾಯರೇ ದಾನಮಾಡಿಬಿಟ್ಟರು. ಪಿತ್ರಾರ್ಜಿತವಾದ ಆಸ್ತಿಯಾದ್ದರಿಂದ ಇದರ ಮಾರಾಟಕ್ಕೂ ವಿನಿಯೋಗಕ್ಕೂ ಮಗನ ಒಪ್ಪಿಗೆಯನ್ನು ಪಡೆದಿದ್ದರು. ಹೀಗೆ ಸ್ವಂತ ಆಸ್ತಿಯನ್ನು ಮಾರಿ ಸಾರ್ವಜನಿಕ ಕಾರ್ಯಕ್ಕೆ ವಿನಿಯೋಗಿಸುವಂಥ ಉದಾರಾಶಯರಾದ ಮಹನೀಯರೊಳಗೆ ರಾಯರೂ ಒಬ್ಬರಾದರು. ಅನಂತರ ಕಟ್ಟಡದ ನಿರ್ಮಾಣದ ಏರ್ಪಾಡಿಗಾಗಿ ಒಂದು ಕಾರ್ಯನಿರ್ವಾಹಕಸಮಿತಿಯನ್ನು ರಚಿಸಲಾಯಿತು. ಅದಕ್ಕೆ ರಾಯರೇ ಅಧ್ಯಕ್ಷರಾದರು.

ಹೊಳೆನರಸೀಪುರದಲ್ಲಿಯೂ ಪರಸ್ಥಳಗಳಲ್ಲಿಯೂ ಕಟ್ಟಡಕ್ಕೆ ಹಣವನ್ನು ಸಂಗ್ರಹಮಾಡುವದಕ್ಕೆ ಸಮಿತಿಯವರೂ ರಾಯರೂ ಪ್ರಯತ್ನಮಾಡಿದ್ದರ ಫಲವಾಗಿ ತಕ್ಕಮಟ್ಟಿಗೆ ಹಣವು ಒದಗಿತು. ಸಭಾಂಗಣಕ್ಕೆ ನಾಲ್ಕು ಕಬ್ಬಿಣದ ಗರ್ಡರುಗಳನ್ನು ತರಿಸಲಾಯಿತು. ಮೊಟ್ಟಮೊದಲು ಒಂದು ಜಿಂಕುಷೀಟಿನ ಕುಟೀರವನ್ನು ನಿರ್ಮಿಸಲು ಏರ್ಪಾಡು ಮಾಡಲಾಯಿತು. ಕೆಲವು ಸಾಮಾನುಗಳು ದೊರೆಯುವದು ಕಷ್ಟವಾದ್ದರಿಂದಲೂ ಕಟ್ಟಡದ ನಿರ್ಮಾಣದನುಭವವು ಸಾಲದ್ದರಿಂದಲೂ ಸ್ವಲ್ಪ ಹೆಚ್ಚು ಹಣವು ಖರ್ಚಾಗಿ ಅಪೂರ್ಣಸ್ಥಿತಿಯಲ್ಲಿ ಕುಟೀರವು ಸಿದ್ಧವಾಯಿತು. ಅಂತೂ 1944ನೆಯ ನವೆಂಬರ್ ಮಾಹೆಯಲ್ಲಿ ಕೈಗೊಂಡ ಈ ಕುಟೀರನಿರ್ಮಾಣದ ಕಾರ್ಯವು 1945ನೆಯ ಮಾರ್ಚಿವೇಳೆಗೆ ಅರ್ಧಮರ್ಧವಾಗಿ ಸಿದ್ಧವಾಯಿತು.

### ಕಾರ್ಯಾಲಯದಲ್ಲಿ ಪುರಾಣಶ್ರವಣ :

ವಿದ್ಯಾರ್ಥಿಗಳಿಗೆ ಪುರಾಣವನ್ನು ಹೇಳುವ ಶಿಕ್ಷಣವನ್ನು ಕೊಡುವ ಉದ್ದೇಶದಿಂದ ಆರಂಭದಲ್ಲಿ ಅಧ್ಯಾತ್ಮರಾಮಾಯಣವನ್ನು ಪ್ರವಚನಮಾಡಲು ಆರಂಭಿಸಲಾಯಿತು.

≺ ❖ ❖ ❖ ≻

# ೧೫. ಮೈಸೂರು ಶ್ರೀಮನ್ಮಹಾರಾಜರವರ ಕೃಪಾದೃಷ್ಟಿ

**ವ್ಯಕ್ತಾವ್ಯಕ್ತಕಾರ್ಯಾಲಯ :**

ಕಾರ್ಯಾಲಯದ ಹುಟ್ಟು, ಬೆಳವಣಿಗೆ, ಪ್ರೋತ್ಸಾಹ, ಜನರ ಸಹಾಯ ಇವೆಲ್ಲವೂ ಯಾವದೋ ಒಂದು ನಿಯಮವನ್ನು ಅನುಸರಿಸಿ ಆಗಾಗ್ಗೆ ವ್ಯಕ್ತವಾಗುವದು, ಅವ್ಯಕ್ತವಾಗುವದು-ಹೀಗೆಯೇ ನಡೆಯುತ್ತಾ ಬಂದಿವೆ. ಇದುವರೆಗೆ ಕಾರ್ಯಾಲಯವು ಬೆಳೆದುಬಂದ ಪರಿಸ್ಥಿತಿಯನ್ನು ಸ್ವಲ್ಪಮಟ್ಟಿಗೆ ವಿವರಿಸಿರುತ್ತೇನೆ. ಆದರೆ 1944ನೆಯ ಆಗಸ್ಟ್ ಮಾಹೆಯ ವೇಳೆಗೆ ಕಾರ್ಯಾಲಯದ ಕೆಲಸಗಳೆಲ್ಲವೂ ನಿಂತುಹೋಗುತ್ತಾ ಬಂದಂತೆ ತೋರಿತು. ಅಧ್ಯಾತ್ಮಪ್ರಕಾಶಪತ್ರಿಕೆಯೂ ನಿಂತುಹೋಯಿತು. 1944ನೆಯ ಆಗಸ್ಟ್ ಸಂಚಿಕೆಯಲ್ಲಿ ಸಂಪಾದಕರ ಬಿನ್ನಹದಲ್ಲಿ ಈ ರೀತಿ ಬರೆದಿದೆ: "ಪರಮೇಶ್ವರನ ಕೃಪೆಯಿಂದ 15ನೆಯ ಸಂಪುಟವು ಪೂರೈಸಿರುತ್ತದೆ. ಆದರೆ ಹದಿನಾರನೆಯ ಸಂಪುಟವು ಈಗಲೆ ಪ್ರಕಟವಾಗಬಾರದೆಂದು ಈಶ್ವರಚಿತ್ತಕ್ಕೆ ತೋರಿರುತ್ತದೆ. ಪತ್ರಿಕೆಗೆ ಮುದ್ರಣಸಹಾಯವು ಸ್ವಲ್ಪವೂ ಸಾಲದು. ಕಾರ್ಯಾಲಯದ ಕಟ್ಟಡದ ಅಪೂರ್ಣಸ್ಥಿತಿ, ಸಂಪಾದಕರ ದೇಹಾಲಸ್ಯ-ಈ ಕಾರಣಗಳಿಂದ ಈಗ ಪತ್ರಿಕೆಯು ನಿಲ್ಲುತ್ತಿದೆ. ಕಾಲಸ್ಥಿತಿಯು ಮಾರ್ಪಟ್ಟಕೂಡಲೆ ಕಾರ್ಯಾಲಯವು ಏರ್ಪಾಡುಗಳನ್ನು ಮಾಡಿಕೊಂಡು ಪತ್ರಿಕೆಯನ್ನು ಅವಶ್ಯವಾಗಿ ನಡೆಯಿಸುವದು. ಮಹಾಜನರು ಮನ್ನಿಸಬೇಕು" ಎಂದು ತಿಳಿಸಿ ಪತ್ರಿಕೆಯ ಪ್ರಕಟನೆಯನ್ನು ನಿಲ್ಲಿಸಲಾಯಿತು. ಪತ್ರಿಕೆಯೇ ನಿಂತಮೇಲೆ ಗ್ರಂಥಗಳ ಮುದ್ರಣವಾಗಲಿ ಪ್ರಚಾರವಾಗಲಿ ಹೇಗೆ ಸಾಧ್ಯ? ಕಾರ್ಯಾಲಯದ ಚರಿತ್ರೆಯೇ ಪೂರೈಸಿತೆಂದು ಭಾವಿಸಿ ರಾಯರು ಅದರ ಇತಿಹಾಸವನ್ನು ಬರೆದಿಡಲಾರಂಭಿಸಿದರು. ಆದರೆ ಭಗವಂತನ ಸಂಕಲ್ಪವೇ ಬೇರೆಯಾಗಿತ್ತು. ಈ ಮಬ್ಬು ಮುಂದೆ ಉದಯವಾಗಲಿರುವ ಕಾರ್ಯಾಲಯದ ಭಾಗ್ಯಭಾಸ್ಕರನ ಮೊದಲಿನ ಕತ್ತಲೆಯಂತಿತ್ತು. ಈ ಕತ್ತಲೆಯು ಬಹುಬೇಗ ಹರಿದು ಹೇಗೆ ಭಾಗ್ಯಸೂರ್ಯನ ಉದಯವಾಯಿತೆಂಬುದನ್ನು ವಾಚಕರು ಇಷ್ಟರಲ್ಲೇ ಕಾಣಲಿರುವರು.

**ಅನಿರೀಕ್ಷಿತಸಹಾಯ :**

ಕಾರ್ಯಾಲಯದಲ್ಲಿ ಮೊಟ್ಟಮೊದಲನೆಯ ಬಾರಿಗೆ ಶರನ್ನವರಾತ್ರಿಯ ಅನುಷ್ಠಾನವು ತಾ.18.9.44ರಿಂದ ನಡೆದುದನ್ನು ಹಿಂದೆ ತಿಳಿಸಿದೆ. ಅದು ಆದಷ್ಟು ಬೇಗನೆ ಫಲದಾಯಕ ವಾಗಬೇಕೆಂದು ಜಗದಂಬೆಯ ಇಷ್ಟವಾಗಿತ್ತೆಂದು ತೋರುತ್ತದೆ. ಅನುಷ್ಠಾನವು ಪೂರೈಸಿ ಒಂದು ತಿಂಗಳು ಕಳೆಯುವದರೊಳಗೆ ಮೈಸೂರು ಅರಮನೆಯ ಹುಜೂರು ಸೆಕ್ರೆಟರಿಯವರಿಂದ ಕಾರ್ಯಾಲಯದಲ್ಲಿ ಈವರೆಗೆ ಪ್ರಕಟವಾಗಿರುವ ಅಧ್ಯಾತ್ಮಗ್ರಂಥಗಳು ಎಲ್ಲದರ ಒಂದೊಂದು ಪ್ರತಿಯನ್ನು ಅರಮನೆಗೆ ಕಳುಹಿಸಿಕೊಡಬೇಕೆಂದು ಒಂದು ಪತ್ರವು ಬಂದಿತು. ಅದರಂತೆ

ಕಳುಹಿಸಲಾಗಿ ಸಮ್ಮುಖಸಂಭಾಷಣೆಗೆ ಬರಬೇಕೆಂದು ರಾಯರಿಗೆ ಮತ್ತೊಂದು ಕಾಗದವು ಬಂದಿತು. ವೇ|| ಎಸ್. ವಿಠಲಶಾಸ್ತ್ರಿಗಳವರ ಪ್ರಯತ್ನ ಹಾಗೂ ಸಹಕಾರದ ಫಲವಾಗಿ ಮಹಾರಾಜರವರ ಅಪ್ಪಣೆಯಂತೆ ಕಾರ್ಯಾಲಯಕ್ಕೂ ಅರಮನೆಯವರಿಗೂ ಒಂದು ಕರಾರು ಆಯಿತು. ಅದರ ಪ್ರಕಾರ ಶ್ರೀಶಂಕರಾಚಾರ್ಯರ ಗ್ರಂಥರತ್ನಗಳೆಲ್ಲವನ್ನೂ ಸಂಸ್ಕೃತಮೂಲ, ಕನ್ನಡ ಅನುವಾದ, ಟಿಪ್ಪಣಿಸಹಿತ ಪರಿಷ್ಕರಿಸಿ "ಶ್ರೀ ಜಯಚಾಮರಾಜೇಂದ್ರ ಗ್ರಂಥರತ್ನಮಾಲೆ" ಯಲ್ಲಿ 500 ಪುಟಗಳಿಗೆ ಕಡಿಮೆಯಿಲ್ಲದ ಒಂದೊಂದು ಸಂಪುಟವಾಗಿ ಪ್ರಕಟಿಸತಕ್ಕದ್ದು. ಅನುವಾದಕರಿಗೆ ಅನುವಾದಕ್ಕೆ ಸಂಭಾವನೆಯನ್ನು ಕೊಡುವ ಬದಲು ಪ್ರತಿಯೊಂದು ಸಂಪುಟವನ್ನೂ ಒಂದು ಸಾವಿರಪ್ರತಿಗಳನ್ನು ಅಚ್ಚುಮಾಡಿಸಿ ಎರಡು ನೂರು ಪ್ರತಿಗಳನ್ನು ಅರಮನೆಗೆ ಒಪ್ಪಿಸತಕ್ಕದ್ದು; ಉಳಿದ ಎಂಟುನೂರು ಪ್ರತಿಗಳನ್ನು ಕಾರ್ಯಾಲಯದವರೇ ಉಳಿಸಿಕೊಂಡು ಮಾರಾಟಮಾಡಿಕೊಳ್ಳತಕ್ಕದ್ದು. ಒಟ್ಟು ಒಂದುಸಾವಿರ ಪ್ರತಿಗಳ ಮುದ್ರಣಕ್ಕೆ ತಗಲುವ ಖರ್ಚುವೆಚ್ಚಗಳನ್ನೆಲ್ಲ ಅರಮನೆಯವರೇ ವಹಿಸತಕ್ಕದ್ದು. ಪುಸ್ತಕಗಳ ಕಾಪಿರೈಟ್ ಹಕ್ಕು ಕಾರ್ಯಾಲಯಕ್ಕೇ ಇರತಕ್ಕದ್ದು-ಎಂದು ನಿರ್ಣಯವಾಯಿತು. ಗ್ರಂಥಪ್ರಕಟನೆಯನ್ನೇ ಮುಖ್ಯಜೀವವಾಗಿ ಉಳ್ಳ ಕಾರ್ಯಾಲಯದ ಉದ್ದೇಶಕ್ಕೆ ಅಮೃತಸೇಚನದಂಥ ಈ ಅನಿರೀಕ್ಷಿತಸಹಾಯವು ಮಹಾಪ್ರಭುಗಳ ಕೃಪೆಯಿಂದ ದೊರೆತಾಗ ರಾಯರ ಆನಂದಕ್ಕೆ ಪಾರವೇ ಇರಲಿಲ್ಲ. ಶ್ರೀಚಾಮುಂಡಾಂಬೆಯ ಕೃಪಾಕಟಾಕ್ಷದಿಂದಲೂ ಶ್ರೀಶಂಕರಭಗವತ್ಪಾದರ ಪ್ರಸಾದದಿಂದಲೂ ಈ ಮಹಾಕಾರ್ಯವು ನಡೆದುಹೋಗಿದೆ-ಎಂದೇ ರಾಯರು ಭಾವಿಸಿದರು.

## ಮೈಸೂರು ರಾಜಮನೆತನದವರ ಅಸಾಧಾರಣಮಹತ್ತ್ವ :

ಮೈಸೂರು ರಾಜ್ಯದ ಪ್ರಭುಪರಂಪರೆಯಲ್ಲಿ ವಿದ್ವಾಂಸರುಗಳಿಗೆ ಯಾವಾಗಲೂ ಆಶ್ರಯವಿದ್ದೇ ಇತ್ತು. ಆಳಿದ ಶ್ರೀಕೃಷ್ಣರಾಜೇಂದ್ರ ಒಡೆಯರು ಮತತ್ರಯದ ಗುರುಮನೆಗಳವರಿಗೂ ಸಲ್ಲಿಸಿದ ಭಕ್ತಿವಿಶಿಷ್ಟಸೇವೆಯು ಸರ್ವವಿದಿತವಾಗಿದೆ. ಅವರ ತರುವಾಯ ಪಟ್ಟಕ್ಕೆ ಬಂದ ಶ್ರೀಜಯಚಾಮರಾಜೇಂದ್ರ ಒಡೆಯರವರೂ ವಂಶಪರಂಪರೆಯಿಂದ ಪ್ರಾಪ್ತವಾದ ಯಶಃಪತಾಕೆಯನ್ನು ಮೇಲಕ್ಕೆತ್ತುತ್ತಲೇ ಬಂದವರು. ಗ್ರಂಥರಚನೆಯಲ್ಲಿ ನಿಪುಣರಾದ ವಿದ್ವಾಂಸರುಗಳಿಗೂ ಮುದ್ರಾಯಂತ್ರಗಳಿಗೂ ಉದ್ಯೋಗವು ದೊರಕುವ ಸದ್ಯಃಫಲವೇ ಅಲ್ಲದೆ ಪ್ರಜಾಸಾಮಾನ್ಯಕ್ಕೆ ಸಂಸ್ಕೃತವಾಙ್ಮಯದಲ್ಲಿ ಅಡಗಿರುವ ಸನಾತನಾರ್ಯಸಂಸ್ಕೃತಿ ಪ್ರಧಾನವಾದ ಗ್ರಂಥಗಳ ಪರಿಚಯವೂ ದೇಶಭಾಷೆಯಲ್ಲಿ ಆಗಲೆಂದು ಪ್ರಭುಗಳು ಸಂಕಲ್ಪಿಸಿ ಬೇರೆ ಬೇರೆಯ ವಿದ್ವಾಂಸರುಗಳಿಂದ ಅಷ್ಟಾದಶಮಹಾಪುರಾಣಗಳನ್ನೂ ಋಗ್ವೇದಾದಿಗಳನ್ನೂ ಕನ್ನಡದಲ್ಲಿ ಬರೆಯಿಸಿ ಅರಮನೆಯ ಇಲಾಖೆಯಿಂದ ಪ್ರಕಟಿಸುವ ಏರ್ಪಾಡನ್ನು ಆಗ ಮಾಡಿದ್ದರು. ಆ ಕಾಲಕ್ಕೆ ಅರಮನೆಯಲ್ಲಿ ಹುಜೂರು ಸೆಕ್ರೆಟರಿಗಳಾಗಿದ್ದ ಶ್ರೀ ಟಿ. ರಾಮಯ್ಯನವರ

ಮಾವಂದಿರು ರಿ. ಸರ್ಕಲ್ ಇನ್‌ಸ್ಪೆಕಟರ್ ಶ್ರೀ ಡಿ. ವೆಂಕಟರಾಮಯ್ಯನವರು ಪದ್ಮಪಾದವಿರಚಿತ ಪಂಚಪಾದಿಕಾ-ಎಂಬ ಗ್ರಂಥವನ್ನು ಇಂಗ್ಲಿಷಿಗೆ ಪರಿವರ್ತಿಸಿ ಅದರ ಒಂದು ಪ್ರತಿಯನ್ನು ಪ್ರಭುಗಳಿಗೆ ಅರ್ಪಣೆಮಾಡಲಾಗಿ "ಇಂಥ ಪುಸ್ತಕಗಳು ಕನ್ನಡಕ್ಕೂ ಬಂದರೆ ಚೆನ್ನಾಗಿದ್ದೀತು!" ಎಂದರಂತೆ. ಶ್ರೀ ಡಿ. ವೆಂಕಟರಾಮಯ್ಯನವರು ತಮ್ಮ ಅಳಿಯಂದಿರಿಗೆ ಈ ವಿಚಾರವನ್ನು ತಿಳಿಸಿ ಪುರಾಣಗ್ರಂಥಗಳಂತೆ ವೇದಾಂತಭಾಷ್ಯಗ್ರಂಥಗಳನ್ನೂ ಕನ್ನಡಕ್ಕೆ ಅನುವಾದಿಸಿ ಮೂಲಸಹಿತವಾಗಿ ಪ್ರಕಟಿಸಿದರೆ ಜನರಿಗೆ ಬಹಳ ಉಪಕಾರವಾದೀತು-ಈ ವಿಚಾರವನ್ನು ಪ್ರಭುಗಳ ಚಿತ್ತಕ್ಕೆ ತರಬೇಕು-ಎಂದರಂತೆ. ಸೆಕ್ರೆಟರಿಗಳು ಸಮಯೋಚಿತವಾಗಿ ಈ ವಿಚಾರವನ್ನು ಪ್ರಭುಗಳ ಸಮ್ಮುಖದಲ್ಲಿ ಪ್ರಸ್ತಾಪಿಸಲಾಗಿ ಅವರು ಸಂತೋಷದಿಂದ "ಅವಶ್ಯವಾಗಿ ಆಗಲಿ, ಈ ಕೆಲಸಕ್ಕೆ ಕೂಡಲೆ ಏರ್ಪಾಡು ಮಾಡಿರಿ!" ಎಂದು ಅಪ್ಪಣೆ ಕೊಡಿಸಿದರು. ಇದು ಪ್ರಭುಗಳ ವೇದಾಂತಾಸಕ್ತಿಯನ್ನೂ ಜ್ಞಾನದಾಹವನ್ನೂ ಎತ್ತಿತೋರಿಸುತ್ತದೆ.

## ಕಾರ್ಯಾಲಯಕ್ಕೆ ಈ ಸಹಾಯವು ದೊರೆತ ಬಗೆ :

ಮಹಾಪ್ರಭುಗಳ ಅಪ್ಪಣೆಯನ್ನು ಕಾರ್ಯಗತಮಾಡಲು ಹುಜೂರು ಸೆಕ್ರೆಟರಿಗಳು ವೇ|| ಎಸ್. ವಿಠಲಶಾಸ್ತ್ರಿಗಳನ್ನು ಕರೆಯಿಸಿ "ನೀವು ಈ ಅನುವಾದಕಾರ್ಯವನ್ನು ಮಾಡುತ್ತೀರಾ?" ಎಂದು ಕೇಳಲು ವೇ|| ಎಸ್. ವಿಠಲಶಾಸ್ತ್ರಿಗಳು "ನನಗಿಂತ ನಮ್ಮ ಗುರುಗಳಾದ ಶ್ರೀ ವೈ. ಸುಬ್ಬರಾಯರೇ ಈ ಕೆಲಸಕ್ಕೆ ಅರ್ಹರು. ಅವರು ತಮ್ಮ ಜೀವಮಾನವನ್ನೆಲ್ಲ ಶಾಂಕರಭಾಷ್ಯದ ಅಧ್ಯಯನಾನುವಾದಗಳಿಗೇ ಮೀಸಲಾಗಿರಿಸಿರುತ್ತಾರೆ. ಅಂಥ ಪಂಡಿತ ಶ್ರೇಷ್ಠರಿಂದ ಅನುವಾದಿಸಲ್ಪಟ್ಟರೆ ಚೆನ್ನಾಗಿರುತ್ತದೆ" ಎಂದು ಸೂಚಿಸಲು ಹುಜೂರು ಸೆಕ್ರೆಟರಿಗಳು ರಾಯರಿಗೆ ಆಹ್ವಾನವನ್ನು ಕೊಟ್ಟು ಕರೆಯಿಸಿದರು. ಅನಂತರ ವೇ|| ಎಸ್. ವಿಠಲಶಾಸ್ತ್ರಿಗಳೂ ರಾಯರೂ ಸೇರಿ ಈ ಮಹಾಕಾರ್ಯಕ್ಕೆ ತಕ್ಕಂತೆ ಅರಮನೆಯವರೊಡನೆ ಒಪ್ಪಂದವನ್ನು ಮಾಡಿಕೊಂಡು ಕೆಲಸವನ್ನು ಪ್ರಾರಂಭಿಸಿದರು. ಆದರೆ ವೇ|| ಎಸ್. ವಿಠಲಶಾಸ್ತ್ರಿಗಳು ಈ ಯೋಜನೆಯ ಸಂಪೂರ್ಣ ಪ್ರಯೋಜನವು ಕಾರ್ಯಾಲಯಕ್ಕೇ ದೊರಕುವಂತೆ ಔದಾರ್ಯದಿಂದಲೂ ನಿಃಸ್ಪೃಹತೆಯಿಂದಲೂ ಏರ್ಪಾಡು ಮಾಡಿಸಿಕೊಟ್ಟರಲ್ಲದೆ ಈ ಕಾರ್ಯದಲ್ಲಿ ತಾವೂ ಸಹಾಯಕರಾದರು. ವೇ|| ಎಸ್. ವಿಠಲಶಾಸ್ತ್ರಿಗಳ ಗುರುಭಕ್ತಿಯೂ ಉದಾರತೆಯೂ ಅಮೋಘವಾದದ್ದೆಂಬುದನ್ನು ತಿಳಿಸಲು ಇಲ್ಲಿ ಇದನ್ನು ಪ್ರಸ್ತಾಪ ಮಾಡಿರುತ್ತದೆ. ಮಹಾಜನರು ಇದನ್ನು ಅತಿಶಯೋಕ್ತಿಯೆಂದು ಭಾವಿಸಲಾರರು-ಎಂದು ನನ್ನ ಭಾವನೆ.

ಈಗ ರಾಯರಿಗೆ ಕಾರ್ಯಾಲಯದ ಇತಿಹಾಸವನ್ನು ಬರೆದು ಪೂರೈಸಬೇಕೆಂದಿದ್ದು ಈ ರೀತಿ ಪ್ರಾರಂಭದೆಶೆಗೆ ತಿರುಗಿದ್ದನ್ನು ನೋಡಿ ಬಹಳ ಆಶ್ಚರ್ಯವಾಯಿತು. ಸರ್ಕಾರಿ ಉದ್ಯೋಗದಿಂದ ನಿವೃತ್ತರಾಗಿದ್ದರೂ ಅವರ ಉತ್ಸಾಹ, ಶ್ರದ್ಧೆ, ಬುದ್ಧಿಶಕ್ತಿ-ಇವುಗಳಿಗೆ ಯಾವ ಮುಪ್ಪೂ ಬಂದಿರಲಿಲ್ಲ. ಆದ್ದರಿಂದ ಆಚಾರ್ಯಭಗವತ್ಪಾದರನ್ನು ಸ್ಮರಿಸುತ್ತಾ ಶುಭಮುಹೂರ್ತದಲ್ಲಿ

ಈ ಕಾರ್ಯಕ್ಕೆ ಪ್ರಾರಂಭಿಸಿಯೇಬಿಟ್ಟರು. ಇದನ್ನು ಪೂರ್ಣಗೊಳಿಸಲು ತಕ್ಕ ಶಕ್ತಿಯನ್ನೂ ಪ್ರೇರಣೆಯನ್ನೂ ಉಂಟುಮಾಡಬೇಕೆಂದು ಆ ದಯಾಘನನಾದ ಭಗವಂತನನ್ನು ಪ್ರಾರ್ಥಿಸಿಕೊಂಡರು. ರಾಯರಿಗೆ ಒಂದೇಬಾರಿಗೆ ವಿದ್ಯಾನಿಲಯದ ವಿದ್ಯಾರ್ಥಿಗೆ ಪಾಠಹೇಳುವದು, ಪುರಾಣಹೇಳುವದು, ಭಾನುವಾರದ ಉಪನ್ಯಾಸಗಳನ್ನು ನಡೆಯಿಸುವದು, ಕಾರ್ಯಾಲಯದ ಕಟ್ಟಡದ ನಿರ್ಮಾಣಕ್ಕೆ ಏರ್ಪಾಡುಮಾಡುವದು-ಇವುಗಳ ಜೊತೆಗೆ ಶಾಂಕರಭಾಷ್ಯದ ಅನುವಾದಕಾರ್ಯವನ್ನೂ ನಿರ್ವಹಿಸಿ ಕಾಲಕ್ಕೆ ಸರಿಯಾಗಿ ಮುದ್ರಿಸಿ ಅರಮನೆಗೆ ಒಪ್ಪಿಸುವದು- ಇಷ್ಟು ಕಾರ್ಯಗಳನ್ನು ಒಬ್ಬರೇ ನಡೆಯಿಸುವಂಥ ಪರಿಸ್ಥಿತಿಯು ಒದಗಿತು. ಭಗವದನುಗ್ರಹವನ್ನು ಬೇಡಿಕೊಂಡು ಎಲ್ಲ ಕಾರ್ಯಗಳಿಗೂ ಸನ್ನದ್ಧರಾದರು.

### ಅಧ್ಯಾತ್ಮಕುಟೀರ :

1945ನೆಯ ಮಾರ್ಚಿಮಾಹೆಯ ವೇಳೆಗೆ ಸಾಮಾನ್ಯ ರೀತಿಯಿಂದ ಸಿದ್ಧವಾಗಿದ್ದ ಕುಟೀರಕ್ಕೆ ಶ್ರೀಪಾರ್ಥಿವ ಸಂವತ್ಸರದ ಯುಗಾದಿಯ ದಿನ ಪ್ರವೇಶೋತ್ಸವವನ್ನು ನೆರವೇರಿಸಲಾಯಿತು. ಇನ್ನೂ ಕೆಲವು ಕೆಲಸಗಳು ಆಗುವದು ಉಳಿದಿದ್ದವು. ಮುಂದೆ ಎಲ್ಲವೂ ಸಿದ್ಧವಾದ ಬಳಿಕ ವಾಸಕ್ಕೆ ಉಪಯೋಗಿಸುವ ವ್ಯವಸ್ಥೆಯನ್ನು ಮಾಡಲಾಯಿತು.

### ಶ್ರೀ ಜಯಚಾಮರಾಜೇಂದ್ರಗ್ರಂಥರತ್ನಮಾಲೆ :

1945-1946 ಈ ಎರಡು ವರ್ಷಗಳಲ್ಲಿ ಹೊರಕ್ಕೆ ಬಂದ ಮುಖ್ಯಗ್ರಂಥಗಳೆಂದರೆ: (1) ಈಶ, ಕೇನ, ಕಠ- ಈ ಉಪನಿಷತ್ತುಗಳ ಶಾಂಕರಭಾಷ್ಯಗಳು (2) ಐತರೇಯ, ತೈತ್ತಿರೀಯ - ಉಪನಿಷತ್ತುಗಳ ಶಾಂಕರಭಾಷ್ಯಗಳು (ಈ ಉಪನಿಷತ್ತುಗಳು ಪ್ರಪ್ರಥಮವಾಗಿ ಪ್ರಕಟವಾದವು).

### ಈ ಗ್ರಂಥಮಾಲೆಯ ವಿಶೇಷಸೌಕರ್ಯಗಳು :

ರಾಯರು ಮುಖ್ಯವಾಗಿ ಈ ಗ್ರಂಥಮಾಲೆಗೆ ಪುಸ್ತಕಗಳನ್ನು ಸಿದ್ಧಗೊಳಿಸುವದರಲ್ಲಿ ಅನುಸರಿಸಿರುವ ಕೆಲವು ಸೌಕರ್ಯವಿಶೇಷಗಳನ್ನು ಈಗ ತಿಳಿಸಲಾಗುವದು. ಈ ಗ್ರಂಥಮಾಲೆಯಲ್ಲಿ ಸಂಸ್ಕೃತಮೂಲಭಾಷ್ಯಗಳನ್ನು ಪ್ರಘಟ್ಟಗಳಾಗಿ ವಿಂಗಡಿಸಿ ತಲೆಬರಹಗಳನ್ನು ಕೊಟ್ಟು ಭಾಷ್ಯರಚನೆಯ ಅನುಕ್ರಮವು ಸ್ಪಷ್ಟವಾಗಿ ತಿಳಿಯುವಂತೆ ಮಾಡಿರುವದು, ಉಪಲಬ್ಧವಾಗಿರುವ ಮುಖ್ಯ ಪಾಠಭೇದಗಳನ್ನು ಅಡಿಟಿಪ್ಪಣೆಯಲ್ಲಿ ತೋರಿಸಿರುವದು, ಪ್ರಮಾಣವಚನಗಳ ಸ್ಥಾನವನ್ನು ಶೋಧಿಸಿ ಅಲ್ಲಲ್ಲಿಯೇ ಸ್ಥಾನಗಳ ಸಂಖ್ಯೆಯನ್ನು ಕೊಟ್ಟಿರುವದು. ಅನುವಾದ ಮಾಡುವಾಗ ಯಾವದೊಂದು ವ್ಯಾಖ್ಯಾನಕಾರರ ಮತವನ್ನೂ ಅವಲಂಬಿಸದೆ, ಸ್ವತಂತ್ರವಾಗಿ ಸರಳವಾಗಿ ಹೊಂದುವ ಸ್ವಚ್ಛವಾದ ಅನುವಾದವನ್ನು ಕನ್ನಡಭಾಷೆಯ ಮರ್ಯಾದೆಗೆ ಅನುಗುಣವಾಗಿ ರಚಿಸಿರುವದು; ಅಭಿಪ್ರಾಯಪೂರ್ಣತೆಗೆ ಅವಶ್ಯವಾದ ಪದಗಳನ್ನು ಅಲ್ಲಲ್ಲಿ

ಜೋಡಿಸಿಕೊಂಡು ಸಂಸ್ಕೃತಮೂಲದಲ್ಲಿಲ್ಲದಿರುವ ಅಂಥ ಮಾತುಗಳನ್ನು ಸೂಚಿಸಲು ಕಂಸಗಳನ್ನು ಉಪಯೋಗಿಸಿರುವದು. ಇಷ್ಟು ವಿಶೇಷಧರ್ಮಗಳನ್ನು ಒಳಗೊಂಡಿದೆ. ರಾಯರು ಭಾಷ್ಯವಾಕ್ಯಕ್ಕೆ ತಾವು ಕೊಟ್ಟಿರುವ ಅರ್ಥವೇ ಸರಿಯೆಂಬುದನ್ನು ಸಮರ್ಥಿಸಲು ಮತ್ತೊಂದು ಕಡೆಯಲ್ಲಿ ಭಾಷ್ಯಕಾರರು ಸಮಾನಪ್ರಕರಣದ ವಾಕ್ಯಗಳಲ್ಲಿ ತಮ್ಮ ಅಭಿಪ್ರಾಯಗಳನ್ನು ಹೇಗೆ ವಿವರಿಸಿರುತ್ತಾರೆಂಬುದನ್ನು ಟಿಪ್ಪಣಿಗಳಲ್ಲಿ ವಿಶದಗೊಳಿಸಿ ತಿಳಿಸಿರುತ್ತಾರೆ. ಇದರಿಂದ ಭಾಷ್ಯಕಾರರ ಅಭಿಪ್ರಾಯವನ್ನು ಭಾಷ್ಯಕಾರರ ಮಾತುಗಳಿಂದಲೇ ವ್ಯಾಖ್ಯಾನ ಮಾಡಿದಂತಾಗುವದಲ್ಲದೆ ತುಲನಾತ್ಮಕದೃಷ್ಟಿಯಿಂದ ಭಾಷ್ಯವನ್ನು ಪರಿಶೀಲಿಸುವವರಿಗೂ ಸಹಾಯವು ದೊರಕಿದಂತಾಗುತ್ತದೆ. ಮತ್ತು ಅಡಿಯಲ್ಲಿ ಕೊಟ್ಟಿರುವ ಟಿಪ್ಪಣಿಗಳಲ್ಲಿ ಭಾಷ್ಯಕಾರರ ಅಭಿಪ್ರಾಯವನ್ನು ಸ್ವಂತ ಮಾತಿನಲ್ಲಿ ವಿವರಿಸಿರುವದಲ್ಲದೆ ಆನಂದಗಿರಿ, ರತ್ನಪ್ರಭಾ-ಮುಂತಾದ ವ್ಯಾಖ್ಯಾನಕಾರರು ಹೇಗೆ ಭಾಷ್ಯವಾಕ್ಯಗಳನ್ನು ಅನವಶ್ಯವಾಗಿ ತಿರಿಚಿ ಅರ್ಥಮಾಡುವದರ ಮೂಲಕ ತಮ್ಮ ಇಷ್ಟಾರ್ಥ ಸಾಧನೆಗೆ ಪ್ರಯತ್ನಮಾಡಿರುತ್ತಾರೆಂಬುದನ್ನು ತೋರಿಸಿರುತ್ತಾರೆ. ಇದರ ಜೊತೆಗೆ ಆಯಾ ಸಂಪುಟದ ಪ್ರಾರಂಭದ ಪೀಠಿಕೆಗಳಲ್ಲಿ ಮೂಲಭಾಷ್ಯದ ವಿಶೇಷಾಂಶಗಳನ್ನೂ ತಾತ್ಪರ್ಯವನ್ನೂ ಸಂಗ್ರಹವಾಗಿ ತಿಳಿಸುವದಲ್ಲದೆ ವ್ಯಾಖ್ಯಾನಕಾರರುಗಳ ಭಿನ್ನಾಭಿಪ್ರಾಯಗಳನ್ನು ಚರ್ಚಿಸಿ ಯಾವ ಸಂಶಯಕ್ಕೂ ಅವಕಾಶವಿಲ್ಲದಂತೆ ಮೂಲಭಾಷ್ಯಕಾರರ ಅಭಿಪ್ರಾಯವನ್ನು ಸ್ಪಷ್ಟಗೊಳಿಸಿ ಓದುಗರ ಮುಂದೆ ಇಟ್ಟಿರುವದು, ಗ್ರಂಥದ ಕೊನೆಯಲ್ಲಿ ಆಯಾ ಗ್ರಂಥಗಳ ಸಾರ, ಮಂತ್ರಗಳ ಅಥವಾ ಶ್ಲೋಕಗಳ ಅಕ್ಷರಾನುಕ್ರಮಣಿಕೆ, ಶಬ್ದಾನು ಕ್ರಮಣಿಕೆ, ಬ್ರಹ್ಮಸೂತ್ರಭಾಷ್ಯದಲ್ಲಿ ವಿಶೇಷವಾಗಿ ಮುಖ್ಯವಿಷಯಗಳ ಶಬ್ದಾನುಕ್ರಮಣಿಕೆ (Subject Index) ಇವುಗಳನ್ನು ಜೋಡಿಸಿರುವದು. ಮೂಲಮಂತ್ರಗಳು ಅಥವಾ ಶ್ಲೋಕಗಳು, ಭಾಷ್ಯ, ಅನುವಾದ, ಟಿಪ್ಪಣಿ, ತಲೆಬರಹಗಳು- ಮುಂತಾದವು ವಿಂಗಡವಾಗಿ ಕಾಣುವಂತೆ ಬೇರೆಬೇರೆಯ ತರಹ ಅಚ್ಚಿನ ಅಕ್ಷರಗಳನ್ನು ಉಪಯೋಗಿಸಿರುವದು- ಹೀಗೆ ಅನೇಕ ಸೌಕರ್ಯಗಳನ್ನು ಕಲ್ಪಿಸಿ ಈ ಗ್ರಂಥಮಾಲೆಯ ಸಂಪುಟಗಳನ್ನೆಲ್ಲ ರಾಯರು ಸಿದ್ಧಗೊಳಿಸಿರುತ್ತಾರೆ.

ಈ ಪ್ರಕಟನೆಗಳಿಂದ ಉಂಟಾದ ಮತ್ತೊಂದು ಪ್ರಯೋಜನವೇನೆಂದರೆ:ಕಾರ್ಯಾಲಯದ ಮೊಟ್ಟಮೊದಲನೆಯ ಗ್ರಂಥವಾದ "ಮೂಲಾವಿದ್ಯಾನಿರಾಸ"ವು ವಾದಗ್ರಂಥವಾಗಿದ್ದ ಕಾರಣದಿಂದ ರಾಯರು ಸಂಪ್ರದಾಯವಿರುದ್ಧವಾಗಿ ಯಾವದೋ ಹೊಸ ಉಪದೇಶಗಳನ್ನು ಪ್ರಚಾರಕ್ಕೆ ತರುತ್ತಿದ್ದಾರೆ-ಎಂಬ ಅಪಪ್ರಥೆಯು ಬಂದುಬಿಟ್ಟಿತ್ತು. ಆ ಕಾರ್ಮೋಡವು ಚದುರುವದಕ್ಕೆ ಈ ಭಾಷ್ಯ ಪ್ರಕಟನೆಗಳು ಬಿರುಗಾಳಿಯಂತಾದವು. ಒಟ್ಟಿನಲ್ಲಿ ಈವರೆಗೆ ವೇದಾಂತವಾಙ್ಮಯದಲ್ಲಿ ಹಿಂದಿ, ಇಂಗ್ಲಿಷು, ತೆಲುಗು, ಮರಾಠಿ-ಮುಂತಾದ ಭಾಷೆಗಳಲ್ಲಿ ಶಂಕರಭಾಷ್ಯಗಳು ಅನುವಾದಿಸಲ್ಪಟ್ಟು ಪ್ರಚಾರವಾಗಿದ್ದವಾದರೂ ಮೇಲ್ಕಂಡ ಎಲ್ಲಾ ಸೌಕರ್ಯವಿಶೇಷಗಳಿಂದ ಕೂಡಿ ಯಾವ ಭಾಷೆಯಲ್ಲೂ ಈವರೆಗೆ ಆಗಿರಲಿಲ್ಲ. ಉಳಿದ ಭಾಷಾನುವಾದಗಳೆಲ್ಲವೂ ಯಾವದಾದರೊಂದು ಪ್ರಸಿದ್ಧವ್ಯಾಖ್ಯಾನವನ್ನು ಅನುಸರಿಸಿಯೇ ಆಗಿರುತ್ತವೆ. ಆದರೆ

ಪ್ರಪ್ರಥಮವಾಗಿ ಕನ್ನಡಭಾಷೆಯಲ್ಲಿಯೇ ಇಂಥ ಅಪೂರ್ವವಾದ ಭಾಷ್ಯಾನುವಾದಗಳು ಸೌಕರ್ಯವಿಶೇಷಗಳೊಡನೆ ಸುಂದರವಾದ ಆಕಾರದಿಂದ ಸಂಪುಟಗಳ ರೂಪದಲ್ಲಿ ಹೊರಬೀಳಲು ಕಾರ್ಯಾಲಯಕ್ಕೆ ಆಶ್ರಯಕೊಟ್ಟಿದ್ದು ನಮ್ಮ ಮೈಸೂರು ಶ್ರೀಮನ್ಮಹಾರಾಜ ಶ್ರೀ ಜಯಚಾಮರಾಜೇಂದ್ರ ಮಹಾಪ್ರಭುಗಳ ಧವಳಕೀರ್ತಿಯನ್ನು ಸಾರುವ ಯಶಃಪತಾಕೆಯನ್ನು ಎತ್ತಿಹಿಡಿದಂತಾಯಿತು. ಶ್ರೀಮನ್ಮಹಾರಾಜರು ಕರ್ಣಾಟಕ ಸಿಂಹಾಸನಾಧೀಶ್ವರರೆಂಬ ಅನ್ವರ್ಥನಾಮಕ್ಕೂ ಕನ್ನಡಮಾತೆಯಾದ ಭುವನೇಶ್ವರಿಯ ಅನುಗ್ರಹಕ್ಕೂ ಪಾತ್ರರಾದರು.

## ಪತ್ರಿಕೆಯ ಪುನರುತ್ಥಾನ :

1946ನೆಯ ಸೆಪ್ಟೆಂಬರ್ ಮಾಹೆಯಿಂದ "ಅಧ್ಯಾತ್ಮಪ್ರಕಾಶ" ಪತ್ರಿಕೆಯ 16ನೆಯ ಸಂಪುಟವನ್ನು ಮತ್ತೆ ಪ್ರಕಟಿಸಲು ಆರಂಭಿಸಲಾಯಿತು. ಈ ಬಾರಿ ಪತ್ರಿಕೆಗೆ ಚಂದಾದಾರರನ್ನು ಕೂಡಿಸುವದಕ್ಕೆ ಅನೇಕರು ಸಹಕರಿಸಿದರು. ವಾರ್ಷಿಕಚಂದಾ 3 ರೂ.ಗಳನ್ನು ಇಡಲಾಯಿತು.. ಪತ್ರಿಕೆಯಲ್ಲಿ ಸ್ವತಂತ್ರಪುಟಗಳಾಗಿ ಭಗವದ್ಗೀತೆಯ ಉಪನ್ಯಾಸಗಳನ್ನು ಪ್ರಕಟಿಸಲು ಆರಂಭಿಸಲಾಯಿತು.

## ಕಟ್ಟಡಗಳ ಬೆಳವಣಿಗೆ :

ಅಧ್ಯಾತ್ಮಕುಟೀರದ ಜೊತೆಗೆ ಒಂದು ಅಡಿಗೆಮನೆ, ಉಗ್ರಾಣ, ಸ್ನಾನ ಗೃಹ ಇವುಗಳನ್ನು ಒಳಗೊಂಡ ಒಂದು ಮಂಗಳೂರು ಹೆಂಚಿನ ಸಣ್ಣ ಕಟ್ಟಡವೊಂದನ್ನು ಕಟ್ಟಿಸಲಾಯಿತು. 1945ನೆಯ ಡಿಸೆಂಬರ್‌ಮಾಹೆಗೆ ಅದು ಉಪಯೋಗಕ್ಕೆ ಸಿದ್ಧವಾಯಿತು. ಕಟ್ಟಡನಿಧಿಗೆ ಜನರಿಂದ ಸಹಾಯವು ಸಾಮಾನ್ಯವಾಗಿ ಒದಗುತ್ತಿತ್ತು.

## ಭಾವಿ :

ನೀರಿನ ಸೌಕರ್ಯಕ್ಕಾಗಿ ಒಂದು ಭಾವಿಯನ್ನು ತೆಗೆಸಲಾಯಿತು. ಎಡತೊರೆ ತಾ|| ಚಂದಗಾಲುಗ್ರಾಮದ **ಸಾತಿಗ್ರಾಮದ ಸಂಪತ್ತಯ್ಯನವರ ಕುಟುಂಬ ಶ್ರೀಮತಿ ಕಾವೇರಮ್ಮನವರು** ಈ ಭಾವಿಯ ನಿರ್ಮಾಣದ ಖರ್ಚನ್ನು ಪೂರ ವಹಿಸಿಕೊಂಡರು.

## ವಿದ್ಯಾನಿಲಯಕ್ಕೆ ಪಂಡಿತರು :

ಅಧ್ಯಾತ್ಮಕುಟೀರದಲ್ಲಿಯೇ ನಡೆಯುತ್ತಿದ್ದ ವಿದ್ಯಾನಿಲಯಕ್ಕೆ ತಾ. 13.8.45 ರಿಂದ ಸಾಹಿತ್ಯವೇದಾಂತ ವಿದ್ವಾನ್ **ಬ್ರ|| ಶ್ರೀ ಕೊಡೂರು ಕೃಷ್ಣಜೋಯಿಸರೆಂಬ** ವಿದ್ವಾಂಸರನ್ನು ಉಪಾಧ್ಯಾಯರನ್ನಾಗಿ ನೇಮಿಸಿಕೊಳ್ಳಲಾಯಿತು. ಇವರ ಜೊತೆಗೆ ರಾಯರೂ ಬೆಳಗಿನ ಪಾಠಪ್ರವಚನಗಳನ್ನು ನಡೆಯಿಸುತ್ತಿದ್ದರು.

**ಪುರಾಣ :**

ಅಧ್ಯಾತ್ಮರಾಮಾಯಣವನ್ನು ಪೂರೈಸಿ ಶ್ರೀಮದ್ಭಾಗವತಪುರಾಣವನ್ನು ಆರಂಭಿಸಲಾಯಿತು. ಬ್ರ॥ ಶ್ರೀ ಕೃಷ್ಣಜೋಯಿಸರು ಪುರಾಣಶ್ರವಣವನ್ನು ಕೈಗೊಂಡಮೇಲೆ ಊರಿನ ಹಲವರು ಮಹನೀಯರು ಅದರ ಲಾಭವನ್ನು ಪಡೆದುಕೊಳ್ಳಲಾರಂಭಿಸಿದರು.

**ಉಪನ್ಯಾಸಗಳು :**

ಅಧ್ಯಾತ್ಮಕುಟೀರದಲ್ಲಿ ಪ್ರತಿ ಭಾನುವಾರವೂ ಸಂಜೆ 5ರಿಂದ 6ರವರೆಗೆ ಉಪನ್ಯಾಸಗಳು ಏರ್ಪಾಡಾದವು. ಪ್ರಾರಂಭದಲ್ಲಿ ಭಗವದ್ಗೀತೆಯ ಮೇಲೆ ರಾಯರು ಉಪನ್ಯಾಸಗಳನ್ನು ನಡೆಯಿಸುತ್ತಾ ಬಂದರು. ವಿಶೇಷ ಸಂದರ್ಭಗಳಲ್ಲಿ ಆಯಾ ಸಮಯಕ್ಕೆ ತಕ್ಕಂತೆ ಬೇರೆಯವರ ಉಪನ್ಯಾಸಗಳನ್ನು ನಡೆಯಿಸಲು ಆರಂಭಿಸಲಾಯಿತು.

**ಶಂಕರಸಪ್ತಾಹಗಳು :**

**ಶ್ರೀಪಾರ್ಥಿವಸಂವತ್ಸರದ (1945) ಶ್ರೀಶಂಕರಸಪ್ತಾಹ ಮಹೋತ್ಸವವು ಚಿಕ್ಕಮಗಳೂರಿನಲ್ಲಿ** ಓಂಕಾರೇಶ್ವರ ದೇವಸ್ಥಾನದಲ್ಲಿ ನೆರವೇರಿತು. ಕಾಫಿ ಪ್ಲಾಂಟರ್ ಶ್ರೀ ಟಿ. ಮಂಜುನಾಥಯ್ಯರ್‌ರವರೇ ಈ ಉತ್ಸವದ ಮುಖ್ಯ ನೇತೃಗಳಾಗಿದ್ದು ಅದನ್ನು ವಿಜೃಭಣೆಯಿಂದ ನಡೆಯಿಸಿದರು. ಈ ಸಪ್ತಾಹದಲ್ಲಿ ವಿದ್ವಾನ್ ಕೆ.ಪಿ. ಶಂಕರಶಾಸ್ತ್ರಿಗಳು, ವೇ. ಕೇಶವಮೂರ್ತಿ ಘನಪಾಠಿಗಳು, ಶೃಂಗಗಿರಿ ಬಿ. ರಾಮಭಟ್ಟರು-ಮುಂತಾದ ಹೊಸ ವಿದ್ವಾಂಸರುಗಳೂ ಭಾಗವಹಿಸಿದ್ದರು. ಶ್ರೀ ಅಯ್ಯರ್‌ರವರು ಅತಿಥಿಗಳಿಗೆ ಭೋಜನಾದಿಗಳ ವ್ಯವಸ್ಥೆಯನ್ನು ಏರ್ಪಡಿಸಿದ್ದರು. ವಿದ್ವಾಂಸರುಗಳಿಗೆಲ್ಲ ಸಂಭಾವನಾದಿಗಳನ್ನು ಕೊಟ್ಟು ಗೌರವಿಸಿದರು. ಈ ಉತ್ಸವದ ಮತ್ತೊಂದು ವಿಶೇಷವೆಂದರೆ ಸುಪ್ರಸಿದ್ಧ **ಶ್ರೀಪರಮಹಂಸ ಶ್ರೀ ಶ್ರೀಧರಸ್ವಾಮಿಗಳವರು** ಸಂನಿಹಿತರಾಗಿದ್ದು ಉತ್ಸವವನ್ನು ಆಶೀರ್ವದಿಸಿದರು. ಈ ಸಂದರ್ಭದಲ್ಲಿ ಕೆಲವು ಮಹಾಜನರು ಕಾರ್ಯಾಲಯಕ್ಕೂ ಯಥೋಚಿತ ಸಹಾಯದ್ರವ್ಯವನ್ನು ಸಲ್ಲಿಸಿದರು.

**ಶ್ರೀವ್ಯಯಸಂವತ್ಸರದ 1946ನೆಯ ವರ್ಷದ ಶಂಕರಸಪ್ತಾಹವು** ಬೆಂಗಳೂರಿನಲ್ಲಿ ಕರಣೀಕರಪಾಠಶಾಲೆಯಲ್ಲಿ ನಡೆಯಿತು. ಎಂದಿನಂತೆ ಭಾಷ್ಯಪ್ರವಚನ, ಪುರಾಣ, ಉಪನ್ಯಾಸಾದಿಗಳು ನಡೆದವು. ವಿದ್ವಾಂಸರುಗಳು ಸಹಕರಿಸಿದ್ದರು.

**ಅನುಷ್ಠಾನಗಳು :**

ಈ ಅವಧಿಯಲ್ಲಿ ಕಾರ್ಯಾಲಯದಲ್ಲಿ ಶರನ್ನವರಾತ್ರಿ, ಗೀತಾಜಯಂತಿ, ಶ್ರೀಬ್ರಹ್ಮಚೈತನ್ಯಾರಾಧನೆ- ಈ ಅನುಷ್ಠಾನಗಳು ಯಥಾಕ್ರಮವಾಗಿ ನೆರವೇರಿದವು. ಶರನ್ನವರಾತ್ರಿಯ ಅನುಷ್ಠಾನದಲ್ಲಿ ಉಪನ್ಯಾಸಗಳಿಗೆ ಮೈಸೂರಿನಿಂದ ಫಿಲಾಸಫಿ ಪ್ರೊಫೆಸರ್

ಶ್ರೀ ಯಾಮುನಾಚಾರ್ಯರೂ ಆಸ್ಥಾನ ಮಹಾವಿದ್ವಾನ್ ವೈ. ಚಂದ್ರಶೇಖರಶಾಸ್ತ್ರಿಗಳೂ ಬಂದಿದ್ದರು. ಉಳಿದ ಅನುಷ್ಠಾನಗಳಲ್ಲಿ ವಿಶೇಷವಾಗಿ ರಾಯರೇ ಉಪನ್ಯಾಸಗಳನ್ನು ನಿರ್ವಹಿಸುತ್ತಿದ್ದರು.

**ಕೀರ್ತನೆಗಳು :**

ಆಗ್ಗೆ ಹೊಳೆನರಸೀಪುರದಲ್ಲಿಯೇ ನೆಲಸಿದ್ದ ಶ್ರೀ ಡಿ. ಸಿ. ಸಂಜಪ್ಪ ಭಾಗವತರು ಪ್ರತಿ ಏಕಾದಶಿಯಲ್ಲೂ ಹಲವು ಕೀರ್ತನೆಗಳನ್ನು ಮಾಡುತ್ತಿದ್ದರು. ಭಕ್ತಿಪರವಾಗಿರುತ್ತಿದ್ದ ಆ ಕೀರ್ತನೆಗಳು ಶ್ರೋತೃಗಳಿಗೆ ಮೆಚ್ಚಾಗಿದ್ದವು.

**ಪೂಜಾಮಂದಿರ :**

ಈ ಕಾಲದಲ್ಲಿ ಕಾರ್ಯಾಲಯವು ಮತ್ತೊಂದು ಹೆಜ್ಜೆಯನ್ನಿಟ್ಟಿತು. ಶ್ರೀ ಅರಕಲಗೂಡು ಶ್ರೀಕಂಠಯ್ಯನವರು ತಮ್ಮ ಜ್ಯೇಷ್ಠಪತ್ನಿ ಸಾವಿತ್ರಮ್ಮನವರ ಸ್ಮಾರಕವಾಗಿ ರೂ. 250ನ್ನು ಕಾರ್ಯಾಲಯಕ್ಕೆ ಕಳುಹಿಸಿ ಅದನ್ನು ಸೂಕ್ತ ಕಂಡಂತೆ ವಿನಿಯೋಗಿಸಿಕೊಳ್ಳಬೇಕೆಂದು ತಿಳಿಸಿದರು. ಕಾರ್ಯಾಲಯಕ್ಕೆ ಬರುವವರಿಗೆ ಶ್ರೀರಾಮದೇವರ ಪೂಜಾದರ್ಶನಾದಿಗಳ ಲಾಭವಾಗುವಂತೆ ಏರ್ಪಡಿಸಲಿದ್ದ ಪೂಜಾಮಂದರ (ದೇವಸ್ಥಾನ) ನಿಧಿಗೆ ಈ ಹಣವನ್ನು ಮೂಲಧನವಾಗಿ ಉಪಯೋಗಿಸತಕ್ಕದ್ದೆಂದು ನಿಶ್ಚಯವಾಯಿತು.

# ೧೬. ಕಾರ್ಯಾಲಯದ ಪುರೋಭಿವೃದ್ಧಿ
## (1947-48)

**ಪರಿಪಾಲಕರು :**

ಕಾರ್ಯಾಲಯವು ಸ್ವತಂತ್ರವಾದ ಕಟ್ಟಡದಲ್ಲಿ ತನ್ನ ಕೆಲಸವನ್ನು ಪ್ರಾರಂಭಿಸಿದ ಮೇಲೆ ಅದಕ್ಕೆ ಜನರ ಸಹಾಯವೂ ಹೊಣೆಗಾರಿಕೆಯೂ ಹೆಚ್ಚುತ್ತಾ ಬಂದಿತು. ಶ್ರೀಮನ್ಮಹಾರಾಜರವರ ಉದಾರವಾದ ಆಶ್ರಯವು ಗ್ರಂಥಪ್ರಕಟನೆಗೆ ದೊರೆತದ್ದರ ಕೃತಜ್ಞತೆಗಾಗಿ ಮಹಾಪ್ರಭುಗಳನ್ನು ಕಾರ್ಯಾಲಯದ ಪರಿಪಾಲಕರೆಂದು ಸಂಬೋಧಿಸಿಕೊಳ್ಳಲು ಅಪ್ಪಣೆಯನ್ನು ಕೊಡಬೇಕೆಂದು ಪ್ರಾರ್ಥಿಸಲಾಯಿತು. ಅದರಂತೆಯೇ ಮಹಾಸ್ವಾಮಿಗಳು ಸಮ್ಮತಿಸಿ **ಅಧ್ಯಾತ್ಮಪ್ರಕಾಶ ಕಾರ್ಯಾಲಯದ ಪರಿಪಾಲಕರೆಂದು** ಕರೆದುಕೊಳ್ಳಲು ಅಪ್ಪಣೆಯನ್ನು ಕೊಟ್ಟರು. ಇದು ಸಂಸ್ಥೆಯ ಬಗ್ಗೆ ಜನರಲ್ಲಿ ಆದರವೂ ಶ್ರದ್ಧೆಯೂ ಗೌರವವೂ ಉಂಟಾಗಲು ಕಾರಣವಾಯಿತು.

**ರಾಯರು ಆಸ್ಥಾನವಿದ್ವಾಂಸರಾದುದು :**

ಮಹಾಪ್ರಭುಗಳು ಈ ಧಾರ್ಮಿಕಸಂಸ್ಥೆಯು ಊರ್ಜಿತವಾಗುವಂಥ ಉದಾರ ಪ್ರೋತ್ಸಾಹವನ್ನು ನೀಡಿದುದರ ಜೊತೆಗೆ ರಾಯರನ್ನು "ಆಸ್ಥಾನವಿದ್ವಾನ್" ಎಂಬ ಗೌರವದಿಂದ ಸನ್ಮಾನಿಸಿದರು. ರಾಯರು ಎಂದೂ ಇಂಥ ಗೌರವಪದವಿಗೆ ಆಶೆಪಟ್ಟವರಲ್ಲ. ಆದರೆ ವಿದ್ವತ್ತನ್ನು ಮೆಚ್ಚುವ ಸ್ವಭಾವದವರಾದ ಮಹಾಸ್ವಾಮಿಯವರು ತಮ್ಮ ಅಭಿಮಾನ ಸೂಚಕವಾಗಿ ಅವರಾಗಿಯೇ ಈ ಪದವಿಯನ್ನು ದಯಪಾಲಿಸಿದರು. ಆದರೆ ರಾಯರು ವಿದ್ಯೆಯ ಮಹತ್ತ್ವವು ಪದವಿಯ ಕುಂದಣವಿಲ್ಲದೆಯೇ ಪ್ರಕಾಶಿತವಾಗಬೇಕೆಂಬ ವರ್ಗಕ್ಕೆ ಸೇರಿದವರು. ಆದ್ದರಿಂದ ಸ್ವಲ್ಪಕಾಲ ತಮ್ಮ ಈ ಬಿರುದನ್ನು ಪ್ರಕಾಶಪಡಿಸಿಕೊಳ್ಳಲು ಇಷ್ಟಪಡಲಿಲ್ಲ. ಆದರೆ ಈ ಬಹುಮಾನವನ್ನು ರಾಯರು ಅನಾದರದಿಂದ ಕಂಡರೆಂಬ ಭಾವನೆಯು ಪ್ರಭುವರ್ಯರಿಗೆ ಬರದೆ ಇರಲೆಂದು ಯೋಚಿಸಿ ಜಯಚಾಮರಾಜೇಂದ್ರ ಗ್ರಂಥಮಾಲೆಯ ಎರಡು ಸಂಪುಟಗಳಲ್ಲಿ ಮಾತ್ರ ತಮ್ಮ ಹೆಸರಿನ ಜೊತೆಗೆ "ಆಸ್ಥಾನವಿದ್ವಾನ್" ಎಂದು ಪ್ರಕಟಿಸಲು ಸಮ್ಮತಿಸಿದರು. ಮಾಸಪತ್ರಿಕೆಯಲ್ಲಿ ಮಾತ್ರ ಪ್ರಕಟಿಸಲೇ ಇಲ್ಲವಾದ್ದರಿಂದ ಎಷ್ಟೋ ಜನಗಳಿಗೆ ಈ ವಿಚಾರವು ಗೊತ್ತಾಗಲೇ ಇಲ್ಲ. ಶ್ರೀಸುರೇಶ್ವರಾಚಾರ್ಯರು **"ನ ಖ್ಯಾತಿಲಾಭಪೂಜಾರ್ಥಂ ಗ್ರಂಥೋಽಸ್ಮಾಭಿರುದೀರ್ಯತೇ"** ಎಂದಂತೆ ಖ್ಯಾತಿಲಾಭಪೂಜೆಗಳ ಆಶೆಯಿಲ್ಲದೆ ಹೀಗೆ ಎಲೆಮರೆಯ ಕಾಯಿಯಂತೆ ವೇದಾಂತತತ್ತ್ವಪ್ರಚಾರ ಮಾಡುವ ನಿಜವಾದ ವೇದಾಂತಿಗಳಾದ ಕೆಲವೇ ಮಹನೀಯರುಗಳ ಪೈಕಿ ರಾಯರೂ ಒಬ್ಬರಾಗಿದ್ದಾರೆಂದರೆ ಅತಿಶಯೋಕ್ತಿಯಾಗಲಾರದು.

**ವಿದ್ಯಾನಿಲಯಕ್ಕೆ ಹೊಸವಿದ್ಯಾರ್ಥಿ :**

1947ನೆಯ ಮಾರ್ಚಿ ಮಾಹೆಯಲ್ಲಿ ವಿದ್ಯಾನಿಲಯಕ್ಕೆ ಬೇಲೂರು ಸಂಸ್ಕೃತಪಾಠಶಾಲೆಯಲ್ಲಿ ವ್ಯಾಸಂಗಮಾಡುತ್ತಿದ್ದ ಶ್ರೀ ಹೆಚ್.ಎಸ್. ಲಕ್ಷ್ಮೀನರಸಿಂಹಮೂರ್ತಿ ಎಂಬ ವಿದ್ಯಾರ್ಥಿಯು (ಈ ಲೇಖಕನು) ಬಂದು ಸೇರಿದನು. ಈತನು ನಂಜನಗೂಡು

ವೇದಪಾಠಶಾಲೆಯಲ್ಲಿ ಉಪಾಧ್ಯಾಯರಾಗಿದ್ದ ಕೃಷ್ಣ ಯಜುರ್ವೇದ ಸಲಕ್ಷಣಘನಾನ್ತಸ್ಮಾರ್ತ ಪ್ರಯೋಗ ಉಭಯವಿದ್ವಾನ್ ಶೃಂಗೇರಿ ಶ್ರೀಕಂಠಘನಪಾಠಿಗಳ ಸೀಮಂತಪುತ್ರನು. ಬಾಲ್ಯದಲ್ಲಿಯೇ ಉಪನೀತನಾಗಿ ಬೇಲೂರು ಸಂಸ್ಕೃತಪಾಠಶಾಲೆಯಲ್ಲಿ ನಾಟಕಾಂತ ಸಾಹಿತ್ಯದವರೆಗೆ ಸಂಸ್ಕೃತವನ್ನೂ ಹಾಗೂ ಯಜುರ್ವೇದದಲ್ಲಿ ಪೂರ್ವಪ್ರಯೋಗಾಂತವಾಗಿ ಕಾಲೋಚಿತ ವೇದಭಾಗವನ್ನೂ ಅಧ್ಯಯನಮಾಡಿದ್ದ ಈ ವಿದ್ಯಾರ್ಥಿಯನ್ನು ರಾಯರು ಆದರದಿಂದ ಬರಮಾಡಿಕೊಂಡು ತೈತ್ತಿರೀಯ ಉಪನಿಷದ್ಭಾಷ್ಯಪಾಠವನ್ನು ಪ್ರಾರಂಭಿಸಿಯೇ ಬಿಟ್ಟರು. ಆಗ್ಗೆ ರಾಯರ ಹಾಗೂ ಕಾರ್ಯಾಲಯದ ಸೇವೆಗಾಗಿ ಬಾಣಾವರದಿಂದ ಬಂದು ಹೊಳೆನರಸೀಪುರದಲ್ಲಿಯೇ ನೆಲೆಸಿದ್ದ ಅಗ್ರಹಾರದ ಶೇಷಮ್ಮನವರೆಂಬ ಮಹಿಳೆಯ ಪ್ರೋತ್ಸಾಹದಿಂದ ಈ ವಿದ್ಯಾರ್ಥಿಯು ಸಾಹಿತ್ಯ ವೇದಾಂತಗಳಲ್ಲಿ ವಿದ್ವಾಂಸನಾಗುವ ಇಚ್ಛೆಯಿಂದ ಬಂದು ಸೇರಿದನು. ಮುಂದೆ ಸಾಹಿತ್ಯಾಧ್ಯಯನದ ಭಾಗವು ನಿಂತುಹೋಗಿ ವೇದಾಂತವನ್ನು ಮಾತ್ರವೇ ಓದುವ ಭಾಗ್ಯವು ಇವನದಾಯಿತು.

## ಕಟ್ಟಡದ ಅಭಿವೃದ್ಧಿ :

ಕಟ್ಟಡ ನಿರ್ಮಾಣ ಸಮಿತಿಯವರ ಉತ್ಸಾಹದ ಫಲವಾಗಿ ಮತ್ತು ದಿವಾನ್ ಬಹದ್ದೂರ್ ರಾಜಕಾರ್ಯಪ್ರಸಕ್ತ **ಚೊಂಬಾಯಿ ಕೆ. ರಾಮಸ್ವಾಮಿಯವರು** ಕಾರ್ಯಾಲಯದ ಕಟ್ಟಡದ ಸಭಾಂಗಣಕ್ಕೆ 5,000 ರೂಗಳ ಸಹಾಯದ್ರವ್ಯವನ್ನು ಕೊಡುವದಾಗಿ ವಾಗ್ದಾನಮಾಡಿ 250 ರೂಗಳನ್ನು ಕೊಟ್ಟದ್ದರ ಫಲವಾಗಿ ಸಭಾಂಗಣ ನಿರ್ಮಾಣಕ್ಕೆ ತಾ. 23.2.47ರಂದು ಮಹಾಜನರ ಸಮ್ಮುಖದಲ್ಲಿ ಗುದ್ದಲಿಪೂಜೆಯನ್ನು ನೆರವೇರಿಸಿ ಆ ಕೆಲಸವನ್ನು ಪ್ರಾರಂಭಿಸಲಾಯಿತು. 50'X30' ಅಳತೆಯ ಆರ್.ಸಿ.ಸಿ. ರೂಫಿಂಗ್ ಉಳ್ಳ ಸಭಾಂಗಣವೊಂದರ ನಿರ್ಮಾಣಕ್ಕೆ ಪ್ಲಾನುಮಾಡಲಾಗಿತ್ತು. ಅದರಂತೆ ಕೆಲಸವು ಪ್ರಾರಂಭವಾಯಿತು.

## ಕೆಲವು ಮಹಿಳಾಭಕ್ತರುಗಳು :

ಭಾವಿಯ ನಿರ್ಮಾಣಕ್ಕೆ ಸಹಾಯಮಾಡಿದ ಶ್ರೀ ಎಡತೊರೆ ಕಾವೇರಮ್ಮನವರೆಂಬ ಮಹಿಳೆಯು ಬಲುಮಟ್ಟಿಗೆ ಕಾರ್ಯಾಲಯದಲ್ಲಿಯೇ ನಿಂತು ಯಥೋಚಿತ ಸೇವೆಯನ್ನು ಮಾಡಲಾರಂಭಿಸಿದರು. **ಚಿಕ್ಕಮಗಳೂರು ಸುಬ್ಬಮ್ಮನವರೆಂಬುವರು** ಆಗ್ಗೆ ಬಂದು ಸೇರಿದರು. ಚಿಕ್ಕಮಗಳೂರು ಸಪ್ತಾಹವಾದ ಮೇಲೆ **ಅಗ್ರಹಾರದ ಶೇಷಮ್ಮನವರು** ಬಂದು ಸೇರಿದ್ದರು. ಇವರೆಲ್ಲರೂ ರಾಯರಿಗೆ ಬೇರೆ ಬೇರೆ ರೀತಿಯಿಂದ ಕೈಯಲ್ಲಾದ ಸೇವೆಯನ್ನು ಮಾಡುತ್ತಿದ್ದರು.

## ಶಂಕರಸಪ್ತಾಹಗಳು :

1947ನೆಯ ಸರ್ವಜಿತು ಸಂವತ್ಸರದ ಶಂಕರಸಪ್ತಾಹವು ಮಂಡ್ಯದಲ್ಲಿ ಶ್ರೀ ಲಾಯರು ಜಿ. ನಂಜಪ್ಪನವರ ಮನೆಯಲ್ಲಿ ನೆರವೇರಿತು. ಈ ಸಪ್ತಾಹದಲ್ಲಿ ಮಾಮೂಲು ಪಂಡಿತರುಗಳ ಜೊತೆಗೆ ಆಸ್ಥಾನವಿದ್ವಾನ್ **ಹಾನಗಲ್ ಗಣೇಶಶಾಸ್ತ್ರಿಗಳು** ಭಾಗವಹಿಸಿದ್ದರು. 1948ನೆಯ ಸರ್ವಧಾರಿಸಂವತ್ಸರದ ಶಂಕರಸಪ್ತಾಹವು ಮೈಸೂರಿನಲ್ಲಿ ನಡೆಯಿತು. ಎಂದಿನಂತೆಯೇ ಪಂಡಿತರುಗಳು ಭಾಗವಹಿಸಿದ್ದರು. ರಾಯರು ಉಪನ್ಯಾಸಗಳನ್ನು ನಡೆಸಿದರು.

# ೧೭. ರಾಯರ ತುರೀಯಾಶ್ರಮಸ್ವೀಕಾರ

## ಸಂನ್ಯಾಸಿಯಾಗುವ ಇಚ್ಛೆ :

ರಾಯರು ಬಹಳ ಹಿಂದಿನಿಂದಲೂ ಸಂನ್ಯಾಸಿಯಾಗುವ ಇಚ್ಛೆಯುಳ್ಳವರಾಗಿದ್ದರೆಂದು ಹಿಂದೆಯೇ ತಿಳಿಸಿದೆ. ಆವನೀಮಠಕ್ಕೆ ಪೀಠಾಧಿಪತಿಗಳಾಗುವ ಸಂಭವವು ಒದಗಿದ್ದು ತಪ್ಪಿಹೋದಮೇಲೆ ರಾಯರು ಮತ್ತೆ ಈ ವಿಚಾರವನ್ನು ಹೆಚ್ಚಾಗಿ ಮನಸ್ಸಿಗೆ ತಂದುಕೊಂಡಿರಲಿಲ್ಲ. ಆದರೆ ಈಗ ಅದಕ್ಕೆ ಅವಕಾಶವು ಒದಗಿತು. ರಾಯರು ತಮ್ಮ ಇಚ್ಛೆಯನ್ನು ಮಹಾಜನರಲ್ಲಿ ವ್ಯಕ್ತಪಡಿಸಿ ವೇ।। ಮತ್ತೂರು ಸುಬ್ರಾಯಾವಧಾನಿಗಳು ಗೊತ್ತುಪಡಿಸಿದ ಲಗ್ನದಂತೆ **ಶ್ರೀಸರ್ವಧಾರಿಸಂವತ್ಸರದ ಜ್ಯೇಷ್ಠ ಶುಕ್ಲ ತೃತೀಯಾ** (ತಾ. 10.6.48ನೆಯ) **ಸೋಮವಾರದ** ದಿನ ಪರಮಹಂಸಪರಿವ್ರಾಜಕರಾಗಲು ನಿರ್ಧರಿಸಿದರು.

## ಕಾರ್ಯಾಲಯದ ಬಗ್ಗೆ ವ್ಯವಸ್ಥೆ :

ಇದುವರೆಗೂ ತಾವೇ ಅಧ್ಯಕ್ಷರೂ ಕಾರ್ಯದರ್ಶಿಗಳೂ-ಅಷ್ಟೇ ಏಕೆ? ಕಾರ್ಯಾಲಯದ ಸರ್ವಸ್ವವೂ-ಆಗಿದ್ದ ರಾಯರು ಪರಮಹಂಸಪಾರಿವ್ರಾಜ್ಯವನ್ನು ಸ್ವೀಕರಿಸಿದ ಅನಂತರವೂ ಸಂಸ್ಥೆಯು ಎಂದಿನಂತೆ ನಡೆದುಕೊಂಡು ಹೋಗಬೇಕೆಂಬ ಉದ್ದೇಶದಿಂದ ಮುಂದಿನ ವ್ಯವಸ್ಥೆಯ ಬಗ್ಗೆ ಚರ್ಚಿಸಲು 1948ನೆಯ ಮೇ. 9, 10ನೆಯ ತಾರೀಖುಗಳಲ್ಲಿ ಒಂದು ಸಭೆಯನ್ನು ಕರೆದು ಎಲ್ಲಾ ವಿಚಾರಗಳನ್ನೂ ವಿವರಿಸಿದರು. ಕಾರ್ಯಾಲಯದ ಆಡಳಿತದ ಬಗ್ಗೆ ಅನುಸರಿಸಬೇಕಾದ ನಿಯಮ ನಿಬಂಧನೆಗಳನ್ನು ರಚಿಸಿ ಸಭೆಯಲ್ಲಿ ಓದಿ ಅಂಗೀಕಾರವನ್ನು ಪಡೆದರು. ಕಾರ್ಯಾಲಯದ ಆಡಳಿತವನ್ನು ನಿರ್ವಹಿಸಲು ಒಂದು ಕಾರ್ಯಕಾರಿ ಸಮಿತಿಯನ್ನು ರಚಿಸಲಾಯಿತು. ಆ ಸಮಿತಿಯಲ್ಲಿ ಆಗ್ಗೆ 9 ಜನ ಸದಸ್ಯರಿದ್ದರು. ಅವಶ್ಯವೆಂದು ಕಂಡಾಗ ಮೂವರಿಗೆ ಹೆಚ್ಚಿಲ್ಲದಂತೆ ಸದಸ್ಯರನ್ನು ಸೇರಿಸಿಕೊಳ್ಳಲು ಅವಕಾಶವಿಡಲಾಯಿತು. ಸದಸ್ಯರುಗಳೊಳಗೆ ರಾಯರ ಔರಸಪುತ್ರರಾದ ಶ್ರೀ ವೈ. ನರಸಪ್ಪನವರು ಸಮಿತಿಯ ಅಧ್ಯಕ್ಷ (Chairman) ರಾಗಿರತಕ್ಕದ್ದೆಂದೂ ಶ್ರೀ ಅರಕಲಗೂಡು ಶ್ರೀಕಂಠಯ್ಯನವರು ಉಪಾಧ್ಯಕ್ಷ (Vice Chairman) ರಾಗಿರತಕ್ಕದ್ದೆಂದೂ ಶ್ರೀ ನಂಜಪ್ಪಭಾಗವತರು ಕಾರ್ಯದರ್ಶಿ (Secretary) ಗಳಾಗಿರತಕ್ಕದ್ದೆಂದೂ ತೀರ್ಮಾನಿಸಲಾಯಿತು. ವ್ಯವಹಾರದೃಷ್ಟಿಯಿಂದ ರಾಯರು ವಹಿಸಿದ್ದ ಎಲ್ಲಾ ಜವಾಬ್ದಾರಿಯನ್ನೂ ಶ್ರೀ ವೈ. ನರಸಪ್ಪನವರಿಗೆ ವಹಿಸಲಾಯಿತು.

## ವಿಷಣಾತ್ಯಾಗ :

ರಾಯರು ತಮ್ಮ ತೀರ ಚಿಕ್ಕವಯಸ್ಸಿನಿಂದಲೇ ವೇದಾಂತದ ಕಡೆಗೆ ಒಲವು ಉಳ್ಳವರಾಗಿದ್ದು ಸಂಸಾರದಲ್ಲಿದ್ದೂ ವಿರಕ್ತರಾಗಿಯೇ ಇದ್ದರು, ಪತ್ನೀವಿಯೋಗವಾದಬಳಿಕ ಅವರ ವೈರಾಗ್ಯವು

ಮತ್ತಷ್ಟು ದೃಢವಾಯಿತು. ಈಗ ಸಂನ್ಯಾಸಸ್ವೀಕಾರ ವೇಳೆಗೆ ಅವರು ಮನೆಯನ್ನು ಬಿಟ್ಟು ಕಾರ್ಯಾಲಯದ ಸ್ವಂತಕಟ್ಟಡಕ್ಕೆ ಬಂದೇಬಿಟ್ಟಿದ್ದರಾದ್ದರಿಂದ ಎಲ್ಲಾ ವಿಧದಿಂದಲೂ ಸಂನ್ಯಾಸಿಗಳಾಗಿಯೇ ಇದ್ದರು. ಆದರೆ ಬಿಳಿಬಟ್ಟೆಯನ್ನು ಬದಲಾಯಿಸಿ ಕಾಷಾಯವಸ್ತ್ರವನ್ನು ಧರಿಸುವದು ಮಾತ್ರ ಉಳಿದಿತ್ತೆಂದು ಹೇಳಬಹುದು. ಆ ಕಾಲಕ್ಕೆ ರಾಯರು ತಮ್ಮ ಸ್ವಂತ ಧನವನ್ನೆಲ್ಲ ಪುತ್ರನಿಗೆ ಒಪ್ಪಿಸಿದರು. ಹೆಣ್ಣುಮಕ್ಕಳಿಗೂ ಸ್ವಲ್ಪಸ್ವಲ್ಪ ದ್ರವ್ಯವನ್ನು ಕೊಟ್ಟರು. ಕಾರ್ಯಾಲಯದ ಆಸ್ತಿಪಾಸ್ತಿಗಳನ್ನು ಸಮಿತಿಯವರ ವಶಕ್ಕೆ ಒಪ್ಪಿಸಿದರು. ಸಂನ್ಯಾಸಸ್ವೀಕಾರದ ಖರ್ಚಿಗೆಂದು ಸ್ವಲ್ಪ ಹಣವನ್ನು ಇರಿಸಿದರು. ಹೀಗೆ ಎಲ್ಲವೂ ಸಿದ್ಧವಾದ ಮೇಲೆ ಕಡೆಯದಾಗಿ ತಾವು ರುಜುಮಾಡಬೇಕಾಗಿದ್ದ ಕಾಗದಪತ್ರಗಳನ್ನೆಲ್ಲ ಬರೆದು ರುಜು ಮಾಡಿ ಇನ್ನು ಮುಂದೆ ಯಾವ ಕಾಗದಪತ್ರಗಳಿಗೂ ರುಜುವನ್ನೂ ಮಾಡಬಾರದೆಂದು ಸಂಕಲ್ಪಿಸಿ ಸಂನ್ಯಾಸಕ್ಕೆ ಸಿದ್ಧರಾದರು. ತಮ್ಮ ಸ್ವಂತ ಉಪಯೋಗದ ಬಟ್ಟೆ ಬರೆಗಳನ್ನು ಶಿಷ್ಯರಿಗೆ ಹಂಚಿಬಿಟ್ಟರು. ವೇ॥ ಎಸ್. ವಿಠಲಶಾಸ್ತ್ರಿಗಳವರಿಗೆ ತಮ್ಮ ಸುವರ್ಣದ ಪವಿತ್ರದ ಉಂಗುರವನ್ನು ಕೊಟ್ಟು ಕಾರ್ಯಾಲಯದ ಮುಖ್ಯವಾದ ನೈತಿಕ ಹಾಗೂ ಸಾಂಸ್ಕೃತಿಕ ಕಾರ್ಯಭಾರಗಳ ಜವಾಬ್ದಾರಿಯನ್ನು ವಹಿಸಿಬಿಟ್ಟರು.

### ಸಂನ್ಯಾಸದೀಕ್ಷಾವಿಧಿ :

ಗೊತ್ತಾಗಿದ್ದ ಕಾರ್ಯಕ್ರಮದಂತೆ ಮೂರುದಿನಗಳ ಮುಂಚೆಯೇ ಪೂರ್ವಾಂಗವಾದ ಕಾರ್ಯಗಳು ಪ್ರಾರಂಭವಾದವು. ಶಾಸ್ತ್ರೋಕ್ತವಿಧಿಗಳ ನಿರ್ವಹಣೆಗಾಗಿ ಮತ್ತೂರಿನಿಂದ ವೇದಮೂರ್ತಿಗಳೂ ಪುರೋಹಿತರೂ ದಯಮಾಡಿಸಿದ್ದರು. ಮೈಸೂರಿನಿಂದ ಆಸ್ಥಾನ ಮಹಾವಿದ್ವಾನ್ ವೇದರತ್ನಂ ಕೆ. ವೆಂಕಟರಾಮಾವಧಾನಿಗಳೂ ವೇ॥ ಧಾಳಿ ನರಸಿಂಹಭಟ್ಟರೂ ದಯಮಾಡಿಸಿದ್ದರು. ವಿರಜಾಹೋಮ, ಪಿತೃಶ್ರಾದ್ಧಾದಿಗಳು, ಕೃಚ್ಛ್ರಾಚರಣ, ಪ್ರಾಯಶ್ಚಿತ್ತಾದಿಗಳು ಎಲ್ಲವೂ ನೆರವೇರಿದಬಳಿಕ ಜ್ಯೇಷ್ಠ ಶುಕ್ಲ ತೃತೀಯಾದಿನ ಬೆಳಗ್ಗೆ **'ಪ್ರವ್ರಜೇದ್ ಗೃಹಾತ್'** ಎಂಬ ವಿಧಿಯಂತೆ ಊರೊಳಗಿದ್ದ ತಮ್ಮ ಸ್ವಂತಮನೆಗೆ ಹೋಗಿ ಪುತ್ರಾದಿಗಳಿಗೆಲ್ಲ ತಿಳಿಸಿ ಅವರುಗಳ ಸಮ್ಮತಿಯನ್ನು ಪಡೆದು ಮನೆಯಿಂದ ಹೊರಟರು. ಆಗ ರಾಯರ ಕಿರಿಯ ಪುತ್ರಿಯಾದ ಸೌ॥ ಸುಕನ್ಯಮ್ಮನೆಂಬುವಳೂ ರಾಯರ ಪುತ್ರ ಶ್ರೀ ವೈ॥ ನರಸಪ್ಪನವರೂ ಭಾವೋದ್ವೇಗದಿಂದ ದುಃಖಪರವಶರಾದದ್ದು ಎಲ್ಲರನ್ನೂ ಕ್ಷಣಕಾಲ ಮುಗ್ಧರನ್ನಾಗಿ ಮಾಡಿತು. ರಾಯರು ಸ್ಥಿರಚಿತ್ತದಿಂದ ಗೃಹದಿಂದ ಹೊರಟು ಪವಿತ್ರ ಹೇಮಾವತೀ ತೀರವನ್ನು ಸೇರಿದರು. ಶಿಷ್ಯರುಗಳೆಲ್ಲರೂ ಹಿಂಬಾಲಿಸಿದರು. ಜಲಮಧ್ಯದಲ್ಲಿ ಶಿಖಾಯಜ್ಞೋಪವೀತಗಳನ್ನು ವಿಸರ್ಜಿಸಿ ಸರ್ವಭೂತಗಳಿಗೂ ಅಭಯಪ್ರದಾನ ಮಾಡಿದರು. ಅನಂತರ ಪ್ರೈಷೋಚ್ಚಾರಣೆಯನ್ನು ಮಾಡಿ ತಮ್ಮ ನರತ್ವವನ್ನು ಕಳಚಿಕೊಂಡು ನಾರಾಯಣತ್ವವನ್ನು ಪಡೆದು ಇಹಬಂಧನದಿಂದ ಮುಕ್ತರಾದರು. ಶಿಷ್ಯರುಗಳ ಪ್ರಾರ್ಥನೆಯಂತೆ ಲೋಕೋದ್ಧಾರಕ್ಕಾಗಿ ಪ್ರಾರಬ್ಧ

ಕರ್ಮಪರ್ಯಂತವಾಗಿ ಇರುವ ಈ ಶರೀರವನ್ನು ನಿರಭಿಮಾನಿಗಳಾಗಿ ಧರಿಸಿಕೊಂಡಿರಲು ಒಪ್ಪಿ ಕಾಷಾಯವಸ್ತ್ರಾದಿಗಳನ್ನು ಸ್ವೀಕರಿಸಿ ಆಶ್ರಮಕ್ಕೆ ದಯಮಾಡಿಸಿದರು. ಹೀಗೆ ಸಂನ್ಯಾಸ ದೀಕ್ಷೆಯ ವಿಧಿಯು ಪೂರೈಸಿತು.

## ಯೋಗಪಟ್ಟ :

ಆಗ್ಗೆ ಮತ್ತೂರು ಕಡೆಯಿಂದ ದಯಮಾಡಿಸಿದ್ದ ಶ್ರೀಬೋಧಾನಂದೇಂದ್ರ ಸರಸ್ವತೀಸ್ವಾಮಿಗಳವರೆಂಬ ಯತಿವರ್ಯರು ಶ್ರೀಗಳವರಿಗೆ ಮಹಾವಾಕ್ಯೋಪದೇಶಗಳನ್ನು ಮಾಡಿ "ಶ್ರೀಸಚ್ಚಿದಾನಂದೇಂದ್ರಸರಸ್ವತೀ" ಎಂಬ ಯೋಗಪಟ್ಟವನ್ನು ಅನುಗ್ರಹಿಸಿದರು. ಯತಿಧರ್ಮಗಳನ್ನೂ ಆಹ್ನಿಕಾದಿಗಳ ಕ್ರಮವನ್ನೂ ಉಪದೇಶಮಾಡಿ ಶ್ರೀಗಳವರನ್ನು ಶಾಂಕರಸಂಪ್ರದಾಯದ ಪವಿತ್ರಸಂನ್ಯಾಸಾಶ್ರಮಿಗಳನ್ನಾಗಿ ಮಾಡಿ ಕೆಲವು ಕಾಲ ಇದ್ದು ಮುಂದೆ ಸ್ಥಳಾಂತರಕ್ಕೆ ದಯಮಾಡಿಸಿದರು.

## ಶ್ರೀಶ್ರೀಗಳವರ ತಪೋನಿಷ್ಠೆ :

ಮೊದಲಿನಿಂದಲೂ ವೇದಾಂತವಿಚಾರದ ಮನನನಿಧಿಧ್ಯಾಸಗಳಲ್ಲಿಯೇ ತತ್ಪರರಾಗಿದ್ದ ಶ್ರೀಗಳವರು* ಈಗ ಮತ್ತಷ್ಟು ತಮ್ಮ ತಪಸ್ಸನ್ನು ಹೆಚ್ಚಿಸಿಕೊಂಡರು. ಆಚಾರಗಳಲ್ಲಿ ಶ್ರೀಗಳವರಿಗೆ ಬಹು ಪ್ರೀತಿ. ಸ್ನಾನ, ಶೌಚಾಚಮನ, ಆಹಾರಾದಿನಿಯಮಗಳನ್ನು ಬಹುಕಟ್ಟುನಿಟ್ಟಾಗಿ ಪಾಲಿಸುತ್ತಾ ಬಂದರು. ಕೆಲವು ಕಾಲ ಮೌನದಶೆಯಲ್ಲಿ ಇರುತ್ತಿದ್ದರು. ಪ್ರಸ್ಥಾನತ್ರಯಭಾಷ್ಯಗಳ ಆವರ್ತನೆ, ಶಂಕರಾಚಾರ್ಯರು ಉಪದೇಶಿಸಿರುವ ಸಂನ್ಯಾಸದ ಆದರ್ಶವನ್ನು ಸಾಧಿಸುವದು-ಇವುಗಳೇ ಅವರ ಮುಖ್ಯ ಗುರಿಯಾಗಿತ್ತು. ಅನಂತರ ಶಿಷ್ಯರುಗಳ ಪ್ರಾರ್ಥನೆಯಂತೆ ವೇದಾಂತಗ್ರಂಥಪ್ರವಚನ, ಉಪನ್ಯಾಸ, ವೇದಾಂತ ಗ್ರಂಥಗಳ ರಚನೆ (ಬರವಣಿಗೆ) ಇವುಗಳನ್ನು ಕಾರ್ಯಾಲಯದ ಪುರೋಭಿವೃದ್ಧಿಗಾಗಿಯೂ ಮಹಾಜನಗಳ ಕಲ್ಯಾಣಕ್ಕಾಗಿಯೂ ಮಾಡಲು ಕೈಗೊಂಡರು. ಅತ್ಯಗತ್ಯವಾದ ಲೌಕಿಕವಿಚಾರಗಳಲ್ಲಿ ಕಾರ್ಯಾಲಯದ ಸಮಿತಿಯವರಿಗೆ ಸೂಕ್ತ ಸಲಹೆಗಳನ್ನು ಕೊಡಲೂ ಸಮ್ಮತಿಸಿದರು.

## ಮಾಸಪತ್ರಿಕೆ :

ಇದುವರೆಗೂ ರಾಯರ ಹೆಸರಿನಲ್ಲಿ ಪ್ರಕಟವಾಗುತ್ತಿದ್ದ ಮಾಸಪತ್ರಿಕೆಯು ಇನ್ನು ಮುಂದೆ ಕಾರ್ಯಾಲಯದ ಪತ್ರಿಕಾಸಂಪಾದಕಮಂಡಲಿಯವರ ನೇತೃತ್ವದಲ್ಲಿ ಪ್ರಕಟವಾಗಲು ಆರಂಭವಾಯಿತು. ಶ್ರೀ ವೈ।। ನರಸಪ್ಪನವರು ವ್ಯವಸ್ಥಾಪಕ ಸಂಪಾದಕರಾಗಿ ನೇಮಿಸಲ್ಪಟ್ಟರು.

* ಇಲ್ಲಿಂದ ಮುಂದೆ ಶ್ರೀಗಳವರು-ಎಂದೇ ಸಂಬೋಧಿಸಲಾಗುವದು.

**ಅನುಷ್ಠಾನಗಳು :**

ಈ ಅವಧಿಯಲ್ಲಿ ಶಂಕರಸಪ್ತಾಹವೇ ಅಲ್ಲದೆ ಕಾರ್ಯಾಲಯದಲ್ಲಿ ಶರನ್ನವರಾತ್ರಿ, ಗೀತಾಜಯಂತಿ, ಬ್ರಹ್ಮಚೈತನ್ಯಾರಾಧನೆ-ಈ ಅನುಷ್ಠಾನಗಳು ಸಾಂಗವಾಗಿ ನೆರವೇರಿದವು. 1946ನೆಯ ಶ್ರೀವ್ಯಯಸಂವತ್ಸರದ ಚೈತ್ರಮಾಸದಿಂದ **ಶ್ರೀರಾಮವಸಂತನವರಾತ್ರೆಯ** ಅನುಷ್ಠಾನವನ್ನೂ ನಡೆಯಿಸುವ ವ್ಯವಸ್ಥೆಯನ್ನು ಮಾಡಲಾಯಿತು.

**ಪಾಠಪ್ರವಚನಗಳು :**

ವಿದ್ಯಾರ್ಥಿ ಶ್ರೀ ಸಿ.ಎನ್. ಯಜ್ಞನಾರಾಯಣಶಾಸ್ತ್ರಿಗಳು ಹಾಗೂ ಶ್ರೀ ಹೆಚ್.ಎಸ್. ಲಕ್ಷ್ಮೀನರಸಿಂಹಮೂರ್ತಿ ಇವರುಗಳಿಗೆ ಶ್ರೀಗಳವರು ಕ್ರಮವಾಗಿ ಉಪನಿಷದ್ಭಾಷ್ಯಗಳು, ದರ್ಶನಗಳ ಪರಿಚಯ, ಇಂಗ್ಲಿಷು, ಗಣಿತ, ರಾಮಾನುಜಭಾಷ್ಯ, ಮಾಧ್ವಭಾಷ್ಯ-ಮುಂತಾದ ಪಾಠಗಳನ್ನು ನಡೆಯಿಸುತ್ತಾ ಬಂದರು. ನಡುವೆ ವಿದ್ಯಾರ್ಥಿಗಳಿಗೆ ಪುರಾಣ, ಉಪನ್ಯಾಸಗಳನ್ನು ಮಾಡುವ ಕ್ರಮವನ್ನೂ ಅಭ್ಯಾಸಮಾಡಿಸುತ್ತಾ ಬಂದರು. ಆಗ್ಗೆ ಪಂಡಿತರಾಗಿದ್ದ ವೇ|| ಕೊ. ಕೃಷ್ಣಜೋಯಿಸರು ಭಾಗವತಪುರಾಣವನ್ನು ಮುಗಿಸಿ ಮಹಾಭಾರತವನ್ನು ಪ್ರಾರಂಭಿಸಿ ವನಪರ್ವದವರೆಗೆ ಶ್ರವಣಮಾಡಿಸಿದರು. ಮುಂದೆ ವಿರಾಟಪರ್ವವನ್ನು ವಿದ್ಯಾರ್ಥಿ ಶ್ರೀ ಸಿ.ಎನ್. ಯಜ್ಞನಾರಾಯಣಶಾಸ್ತ್ರಿಗಳೇ ಶ್ರವಣಮಾಡಿಸುತ್ತಾ ಬಂದರು. ವೇ. ಕೃಷ್ಣಜೋಯಿಸರು ವಿದ್ಯಾರ್ಥಿಗಳಿಗೆ ಗೀತಾಭಾಷ್ಯ, ವೇದಾಂತ ಪರಿಭಾಷೆ-ಮುಂತಾದ ಪಾಠಗಳನ್ನು ನಡೆಯಿಸುತ್ತಿದ್ದರು.

**ಗ್ರಂಥಪ್ರಕಟನೆ :**

**ಶ್ರೀಜಯರಾಮರಾಜೇಂದ್ರ ಗ್ರಂಥರತ್ನಮಾಲೆಯ ಪ್ರಕಟನ ಕಾರ್ಯವೇ ಈ** ಅವಧಿಯಲ್ಲಿ ಪ್ರಧಾನವಾಗಿ ಮುಂದುವರೆಯಿತು. 1948ರ ಕೊನೆಯುವೇಳೆಗೆ ಉಪನಿಷದ್ಭಾಷ್ಯಗಳು, (ಈಶ, ಕೇನ, ಕಠ) ಸಂಪುಟ-1, ಉಪನಿಷದ್ಭಾಷ್ಯಗಳು (ಐತರೇಯ, ತೈತ್ತಿರೀಯ) ಸಂಪುಟ-2 ಉಪನಿಷದ್ಭಾಷ್ಯಗಳು (ಮುಂಡಕ, ಪ್ರಶ್ನ, ಮಾಂಡೂಕ್ಯ) ಸಂಪುಟ-3, ಶ್ರೀಮದ್ಭಗವದ್ಗೀತಾ ಭಾಷ್ಯ ಎರಡು ಸಂಪುಟಗಳು-ಈ ರೀತಿ ಐದು ಸಂಪುಟಗಳು ಪ್ರಕಟವಾಗಿದ್ದವು.

# ೧೮. ಪುರೋಭಿವೃದ್ಧಿಯ ಹಾದಿಯಲ್ಲಿ
# (1949-54)

## ಕಾರ್ಯಾಲಯಕ್ಕೆ ಸ್ವಂತ ಮುದ್ರಣಾಲಯ :

ಶ್ರೀಜಯಚಾಮರಾಜೇಂದ್ರ ಗ್ರಂಥಮಾಲೆಯ ಪುಸ್ತಕಗಳೂ ಅಧ್ಯಾತ್ಮಪ್ರಕಾಶ ಮಾಸಪತ್ರಿಕೆಯೂ ಈವರೆಗೆ ಮೈಸೂರಿನಲ್ಲಿ ಮುದ್ರಣವಾಗುತ್ತಿದ್ದವು. ರಾಯರು ಸಂನ್ಯಾಸಿಗಳಾದ ಅನಂತರ ಅವರು ಪರಸ್ಥಳಗಳಿಗೆ ಓಡಾಡುವದು ಕಷ್ಟವಾಯಿತು. ಜೊತೆಗೆ ಗ್ರಂಥಕರ್ತರು ಒಂದು ಕಡೆ, ಮುದ್ರಣಾಲಯವು ಒಂದು ಕಡೆ- ಹೀಗೆ ಆಗಿ ಮುದ್ರಣಕಾರ್ಯದಲ್ಲಿ ವಿಳಂಬವೂ ಸ್ಖಾಲಿತ್ಯಗಳೂ ಅನಿವಾರ್ಯವಾಗಿದ್ದವು. ಆದ್ದರಿಂದ ಕಾರ್ಯಾಲಯಕ್ಕೇ ಒಂದು ಸ್ವಂತ ಮುದ್ರಣಾಲಯವಿರತಕ್ಕದ್ದು ಸೂಕ್ತವೆಂದು ಯೋಚಿಸಿ ಶ್ರೀ ವೈ. ನರಸಪ್ಪನವರ ಮುದ್ರಣಾಲಯವನ್ನು ಅಸಲು ಖರೀದಿಗೆ **1948ನೆಯ ಜುಲೈ ಮಾಹೆಯಲ್ಲಿ** ಕಾರ್ಯಾಲಯಕ್ಕೆ ವಹಿಸಿಕೊಳ್ಳಲಾಯಿತು. ಈ ಸಂದರ್ಭದಲ್ಲಿ ಶ್ರೀ ವೈ. ನರಸಪ್ಪನವರು ಎರಡುಸಾವಿರ ರೂಪಾಯಿಗಳನ್ನು ಕಾರ್ಯಾಲಯಕ್ಕೆ ಸೋಡಿಯಾಗಿ ಬಿಟ್ಟುಕೊಟ್ಟರು. ಈ ಮೊಬಲಗನ್ನು ಮುದ್ರಣಾಲಯ ನಿಧಿಗೆ ದಾನವಾಗಿ ಸ್ವೀಕರಿಸಲಾಯಿತು. ಕಾರ್ಯಾಲಯವು ಮುದ್ರಣಯಂತ್ರವನ್ನು ವಹಿಸಿಕೊಂಡಾಗ ಕೈಯಲ್ಲಿ ಹಣವಿರಲಿಲ್ಲ. ಆದರೂ ಹಣವು ಒದಗಿದಾಗ ವಾಪಸು ತೆಗೆದುಕೊಳ್ಳುವ ಷರತ್ತಿನ ಮೇಲೆ ಉದಾರವಾಗಿ ಶ್ರೀ ವೈ. ನರಸಪ್ಪನವರು ಮುದ್ರಣಾಲಯವನ್ನು ಕಾರ್ಯಾಲಯಕ್ಕೆ ಮಾರಿಬಿಟ್ಟರು. ಅಂದಿನಿಂದ ಶ್ರೀ ವೈ. ನರಸಪ್ಪನವರನ್ನು ಕೇವಲ 60 ರೂ. ಮಾಹೆಯಾನ ವೇತನದ ಮೇಲೆ ಪ್ರೆಸ್ ಮ್ಯಾನೇಜರ್‌ರನ್ನಾಗಿ ನಿಯಮಿಸಲಾಯಿತು. ಇನ್ನು ಮುಂದೆ ಕಾರ್ಯಾಲಯದ ಮಾಸಪತ್ರಿಕೆ ಹಾಗೂ ಗ್ರಂಥಗಳು ಸ್ವಂತಮುದ್ರಣಾಲಯದಲ್ಲಿಯೇ ಅಚ್ಚಾಗಲು ಆರಂಭವಾದವು.

## ಕಟ್ಟಡಗಳ ಪ್ರಗತಿ :

ಸಭಾಂಗಣದ ನಿರ್ಮಾಣದ ಕೆಲಸವು ಮುಂದುವರಿಯುತ್ತಿತ್ತು. ನೆಲಗಟ್ಟನ್ನು ನಿರ್ಮಿಸಿ ಉಳಿದ ಸಾಮಾನುಗಳನ್ನು ಸಿದ್ಧಗೊಳಿಸಲಾಗುತ್ತಿತ್ತು. ಈ ನಡುವೆ ಬೆಂಗಳೂರಿನ ಭಕ್ತಮಹಾಶಯರಾದ ಶ್ರೀ **ಅಡ್ವೊಕೇಟ್** ಬಿ. **ನಂಜುಂಡಯ್ಯನವರ ಔದಾರ್ಯದಿಂದ** ಒಂದು ಕೊಠಡಿಯನ್ನೂ ಶ್ರೀ ಬೈರಪ್ಪ ಹನುಮಂತಪ್ಪ ಇವರ ಔದಾರ್ಯದಿಂದ ಒಂದು ಕೊಠಡಿಯನ್ನೂ ಕಟ್ಟಿಸಲಾಯಿತು. ಪೂಜಾಮಂದಿರಕ್ಕೆ ಗರ್ಭಗೃಹವನ್ನು ನಿರ್ಮಾಣ ಮಾಡಿಸಲು ಮೈಸೂರಿನ ಶ್ರೀ ಜಿ. **ಕೃಷ್ಣಸ್ವಾಮಿ** ಅವರ ಪ್ರೋತ್ಸಾಹದಿಂದ ಪ್ರಾರಂಭಿಸಲಾಯಿತು. ಶ್ರೀಮತಿ **ಸಾಲಿಗ್ರಾಮದ ಕಾವೇರಮ್ಮನವರು** ಎಂಬ ಮಹಿಳೆಯ ಔದಾರ್ಯದಿಂದ ಒಂದು ಆಗಂತುಕರ ಕೊಠಡಿಯನ್ನು ಸಹ ನಿರ್ಮಿಸಲಾಯಿತು. ದೊಡ್ಡ ಕಟ್ಟಡಕ್ಕೆ ಧನಸಂಗ್ರಹವನ್ನು ಮಾಡಲಾಗುತ್ತಿತ್ತು.

## ಕಾರ್ಯಾಲಯದ ಆಡಳಿತ :

ಶ್ರೀಶ್ರೀಗಳವರ ಸಂನ್ಯಾಸಸ್ವೀಕಾರದಿಂದೀಚೆಗೆ ಕಾರ್ಯಕಾರಿಸಮಿತಿಯವರು ಸಂಸ್ಥೆಯ ಆಡಳಿತವನ್ನು ವಹಿಸಿಕೊಂಡು ನಡೆಯಿಸಲಾರಂಭಿಸಿದರು. ಪ್ರಾರಂಭದಲ್ಲಿ ಆರು ತಿಂಗಳಕಾಲ ಸುಗಮವಾಗಿ ನಡೆಯಿತು. ಅನಂತರ ಕಾರ್ಯದರ್ಶಿ ಶ್ರೀ ನಂ. ಭಾಗವತರು ಅನಾರೋಗ್ಯ ನಿಮಿತ್ತ ತಮ್ಮ ಸ್ಥಾನಕ್ಕೆ ರಾಜಿನಾಮೆಯಿತ್ತು ಅರಸೀಕೆರೆಗೆ ಹೊರಟುಹೋದರು. ಮುಂದೆ ಅಧ್ಯಕ್ಷರೇ ಎಲ್ಲಾ ಜವಾಬ್ದಾರಿಯನ್ನೂ ನಿರ್ವಹಿಸಲಾರಂಭಿಸಿದರು. ಅವರಿಗೆ ಸಹಾಯಕರಾಗಿ ವಿದ್ಯಾನಿಲಯದ ವಿದ್ಯಾರ್ಥಿಗಳೂ ಕೆಲಸಮಾಡಲಾರಂಭಿಸಿದರು.

## ವಿದ್ವಾನ್ ಕೆ. ಕೃಷ್ಣಜೋಯಿಸರ ನಿರ್ಗಮನ :

ಕಳೆದ ನಾಲ್ಕು ವರ್ಷಗಳಿಂದ ಕಾರ್ಯಾಲಯದಲ್ಲಿ ತೃಪ್ತಿಕರವಾಗಿ ಕೆಲಸಮಾಡಿಕೊಂಡಿದ್ದ ಶ್ರೀ ಕೊ. ಕೃಷ್ಣಜೋಯಿಸರು ಕಾರ್ಯಾಲಯದವರು ಕೊಡುತ್ತಿದ್ದ ಅಲ್ಪವೇತನವು ಸಾಲದೆ ಬೇರೊಂದು ಉದ್ಯೋಗಕ್ಕೆ ಪ್ರಯತ್ನಿಸಲಾರಂಭಿಸಿದರು. ಇದನ್ನು ನೋಡಿ ಕಾರ್ಯಾಲಯದವರು ಅವರಿಗೆ ಸ್ವಲ್ಪ ಹೆಚ್ಚಿನ ಅನುಕೂಲವನ್ನು ಮಾಡಿಕೊಡಲು ಪ್ರಯತ್ನಿಸಿದರಾದರೂ ಅದು ಅವರಿಗೆ ಸಾಕಾಗುವಷ್ಟು ಆಗಲಿಲ್ಲ. ಆ ವೇಳೆಗೆ ಅವರಿಗೆ ಶ್ರೀಶೃಂಗೇರಿ ಜಗದ್ಗುರು ಸಂಸ್ಥಾನದಲ್ಲಿ ಅನುಕೂಲವಾದ ಉದ್ಯೋಗವು ದೊರೆತದ್ದರಿಂದ ಕಾರ್ಯಾಲಯದ ಕೆಲಸದಿಂದ ನಿವೃತ್ತರಾಗಿ ಶೃಂಗೇರಿಗೆ ದಯಮಾಡಿಸಿದರು. ಇದರಿಂದ ತತ್ಕಾಲದಲ್ಲಿ ಪಾಠಪ್ರವಚನಗಳಿಗೆ ತೊಂದರೆ ಯಾಯಿತು. ಆದರೆ ಮುಂದೆ ಒಂದೆರಡು ತಿಂಗಳಲ್ಲೇ ವಿದ್ಯಾರ್ಥಿ ಶ್ರೀ ಸಿ. ಎನ್. ಯಜ್ಞನಾರಾಯಣಶಾಸ್ತ್ರಿಗಳು ತಮ್ಮ ವಿದ್ಯಾಭ್ಯಾಸವನ್ನು ಪೂರೈಸಿಕೊಂಡು ಊರಿಗೆ ಹೊರಟುಹೋದರು. ಉಳಿದ ಒಬ್ಬನೇ ವಿದ್ಯಾರ್ಥಿಗೆ ಶ್ರೀಗಳವರೇ ಪಾಠಗಳನ್ನು ಮುಂದುವರಿಸಿದರು.

## ವಿದ್ವಾನ್ ಚೆನ್ನಕೇಶವಯ್ಯನವರ ಆಗಮನ :

ನಂಜನಗೂಡಿನಿಂದ ದಯಮಾಡಿಸಿದ ಶ್ರೀ ಚೆನ್ನಕೇಶವಯ್ಯನವರೆಂಬ ವಿದ್ವಾಂಸರನ್ನು ಕಾರ್ಯಾಲಯದ ಪಂಡಿತರನ್ನಾಗಿ 1949ನೆಯ ಜುಲೈ ಮಾಹೆಯಲ್ಲಿ ನೇಮಕ ಮಾಡಲಾಯಿತು. ಈ ಮಹಾಶಯರು ವೇದಾಂತಪಾಠಗಳನ್ನು ಹೇಳುವದರ ಜೊತೆಗೆ ಲೆಕ್ಕಪತ್ರವ್ಯವಹಾರಗಳನ್ನೂ ನಿರ್ವಹಿಸಲಾರಂಭಿಸಿದರು. ಇದರಿಂದ ವಿದ್ಯಾನಿಲಯದ ಕೆಲಸಕಾರ್ಯಗಳೂ ಆಫೀಸು ಲೆಕ್ಕಪತ್ರಗಳ ವ್ಯವಹಾರದ ಕೆಲಸವೂ ಸುಗಮವಾಗಿ ನಡೆಯಲಾರಂಭಿಸಿದವು.

## ಪುರಾಣಶ್ರವಣ : ಉಪನ್ಯಾಸಗಳು :

ವಿದ್ಯಾರ್ಥಿ ಶ್ರೀ ಸಿ.ಎನ್. ಯಜ್ಞನಾರಾಯಣಶಾಸ್ತ್ರಿಯು ಹೊರಟುಹೋದ. ಅನಂತರ ಅವರ ಸ್ಥಾನದಲ್ಲಿ ವಿದ್ಯಾರ್ಥಿ ಶ್ರೀ ಹೆಚ್.ಎಸ್. ಲಕ್ಷ್ಮೀನರಸಿಂಹಮೂರ್ತಿಯು ಮಹಾಭಾರತ

ಪುರಾಣವನ್ನು ಉದ್ಯೋಗಪರ್ವದಿಂದ ಮುಂದಕ್ಕೆ ಶ್ರವಣಮಾಡಿಸಲಾರಂಭಿಸಿದನು. 1948ನೆಯ ಶರನ್ನವರಾತ್ರಿಯ ಅನುಷ್ಠಾನಕಾಲದಲ್ಲಿ ಈತನು 'ರಾಮಾನುಜಸಿದ್ಧಾಂತ' ದ ಮೇಲೆ ಮಾಡಿದ ಪ್ರಪ್ರಥಮ ಉಪನ್ಯಾಸವೇ ಸಭಿಕರ ಮೆಚ್ಚುಗೆಯನ್ನು ಗಳಿಸಿತು. ಅಂದಿನಿಂದ ಕಾರ್ಯಾಲಯದ ಅನುಷ್ಠಾನಗಳಲ್ಲಿ ಹಾಗೂ ಶ್ರೀಶ್ರೀಗಳವರ ಪ್ರವಾಸಕಾಲಗಳಲ್ಲಿ ಈತನೇ ಉಪನ್ಯಾಸಗಳನ್ನು ನಡೆಯಿಸುತ್ತಾ ಬಂದಿರುತ್ತಾನೆ. ಶ್ರೀಶ್ರೀಗಳವರು ಈ ಕಾಲದಲ್ಲಿ ಭಗವದ್ಗೀತೆಯ ಮೇಲೆ ಉಪನ್ಯಾಸಗಳನ್ನು ಪ್ರತಿಭಾನುವಾರವೂ ನಡೆಯಿಸುತ್ತಾ ಇದ್ದರು. ಈ ಉಪನ್ಯಾಸಗಳು ಅಧ್ಯಾತ್ಮಪ್ರಕಾಶ ಮಾಸಪತ್ರಿಕೆಯ 16ನೆಯ ಸಂಪುಟದಿಂದ -21ನೆಯ ಸಂಪುಟದವರೆಗಿನ ಸಂಚಿಕೆಗಳಲ್ಲಿ ಸ್ವತಂತ್ರ ಪುಟಗಳಾಗಿ ಪ್ರಕಟವಾದದ್ದಲ್ಲದೆ ಪುಸ್ತಕಗಳ ರೂಪದಲ್ಲೂ ಹೊರಬಿದ್ದು ಜನಾನುರಾಗಕ್ಕೆ ಪಾತ್ರವಾಗಿರುತ್ತವೆ.

## ಕಟ್ಟಡಗಳ ಬೆಳವಣಿಗೆ :

1949ನೆಯ ಅಕ್ಟೋಬರ್ ಮಾಹೆಯ ವೇಳೆಗೆ ಸಭಾಂಗಣದ ಕೆಲಸವೂ ಶ್ರೀರಾಮದೇವರ ಗರ್ಭಗುಡಿಯ ನಿರ್ಮಾಣವೂ ಪೂರೈಸುತ್ತಾ ಬಂದವು. ಈ ಹಿಂದೆ ನಿರ್ಮಾಣವಾಗಿದ್ದ ಕಟ್ಟಡಗಳಿಗೆಲ್ಲ ವಿದ್ಯುದ್ದೀಪಗಳನ್ನು ಇಡಿಸಲಾಯಿತು.

## ಶ್ರೀರಾಮದೇವರ ಸ್ಥಾಪನೆಯ ನಿಶ್ಚಯ :

ಕಾರ್ಯಾಲಯಕ್ಕೆ ಭೂದಾನಮಾಡಿದ್ದ ಶ್ರೀ ಅರಕಲಗೂಡು ಶ್ರೀಕಂಠಯ್ಯನವರು ಪ್ರಪ್ರಥಮವಾಗಿ ಪೂಜಾಮಂದಿರಕ್ಕೆ ಸಹಾಯಧನವನ್ನು ಒದಗಿಸಿದ್ದರು. ಅವರು ಶ್ರೀರಾಮದೇವರ ಭಕ್ತರಾಗಿದ್ದರಲ್ಲದೆ ಕಾಂಗ್ರೆಸ್ ಸಂಸ್ಥೆಯಲ್ಲಿ ನಿಷ್ಠೆಯುಳ್ಳವರಾಗಿದ್ದರು. ಆಗ್ಗೆ ಗಾಂಧಿಜಿಯವರ ರಾಮಭಕ್ತಿಯ ಪ್ರಭಾವವು ಜನರ ಮೇಲೆ ಇನ್ನೂ ಉಳಿದಿತ್ತು. ಸ್ವಾತಂತ್ರ್ಯವು ಬಂದ ತಾರುಣ್ಯವಾದದ್ದರಿಂದ ಜನರೆಲ್ಲರೂ ರಾಮರಾಜ್ಯದ ಕನಸನ್ನು ಕಾಣುತ್ತಿದ್ದರು. ಪ್ರಕೃತ ಶ್ರೀ ಅರಕಲಗೂಡು ಶ್ರೀಕಂಠಯ್ಯನವರು ಈ ಸಂಸ್ಥೆಯ ಉಪಾಧ್ಯಕ್ಷರೂ ಆಗಿದ್ದುದರಿಂದ ಪೂಜಾಮಂದಿರದಲ್ಲಿ ಶ್ರೀರಾಮದೇವರ ಸ್ಥಾಪನೆಮಾಡುವದು ಸೂಕ್ತವೆಂದು ಶ್ರೀಗಳವರಿಗೆ ಕಂಡುಬಂತು. ಇದಕ್ಕಿಂತ ಹೆಚ್ಚಾಗಿ ಶ್ರೀಗಳವರು ಬಾಲ್ಯದಿಂದಲೂ ರಾಮಭಕ್ತಿಯ ರುಚಿಯುಳ್ಳವರಾಗಿದ್ದು ರಾಮೋಪಾಸಕರೂ ಮಾರುತಿಯ ಅವತಾರವೆಂದು ಸುಪ್ರಸಿದ್ಧರೂ ಆಗಿದ್ದ ಶ್ರೀಗೋಂದಾವಳಿ ಬ್ರಹ್ಮಚೈತನ್ಯ ಮಹಾರಾಜರ ಶಿಷ್ಯರಾಗಿದ್ದು ಅವರಿಂದಲೇ ರಾಮಮಂತ್ರೋಪದೇಶವನ್ನು ಪಡೆದವರಾಗಿದ್ದರು. ಮಹಾರಾಜರ ಪಾದುಕೆಗಳೂ ಶ್ರೀಶ್ರೀಗಳವರಲ್ಲಿದ್ದವು. ಈ ಕಾರಣದಿಂದಲೂ ರಾಮಪ್ರತಿಷ್ಠೆಯು ಸೂಕ್ತವಾಗಿತ್ತು. ಜೊತೆಗೆ ಕಾರ್ಯಾಲಯದವರು ಸ್ಥಾಪಿಸಿದ್ದ ಅಧ್ಯಾತ್ಮವಿದ್ಯಾನಿಲಯದಲ್ಲಿ ಪ್ರಧಾನವಾಗಿ ಶಾಂಕರಭಾಷ್ಯ ಗ್ರಂಥಗಳನ್ನೂ ಗುಣಗ್ರಹಣದೃಷ್ಟಿಯಿಂದ ಹಾಗೂ ಜನಸಾಮಾನ್ಯರಿಗೆಲ್ಲ ಹೊಂದುವಂತೆ

ತತ್ತ್ವೋಪದೇಶಮಾಡುವ ದೃಷ್ಟಿಯಿಂದ ರಾಮಾನುಜಮಧ್ವಾದಿ ಭಾಷ್ಯಗ್ರಂಥಗಳನ್ನೂ ವಿದ್ಯಾರ್ಥಿಗಳಿಗೆ ಪಾಠಹೇಳುವ ಏರ್ಪಾಡನ್ನು ಮಾಡಿದ್ದರು. ಮತತ್ರಯದ ವಿದ್ಯಾರ್ಥಿಗಳಿಗೂ ಇಲ್ಲಿ ಶಿಕ್ಷಣಕೊಡಲಾಗುವದೆಂದೂ ಮತತ್ರಯದ ಮೂವರು ಪಂಡಿತರೂ ಕಾರ್ಯಾಲಯದಲ್ಲಿ ಇರಬೇಕೆಂದೂ ಸಂಕಲ್ಪಿಸಲಾಗಿತ್ತು. ಆದ್ದರಿಂದ ಮತತ್ರಯದವರಿಗೂ ಪೂಜ್ಯವಾದ, ಭೇದಭಾವನೆಗೆ ಅವಕಾಶವಿಲ್ಲದ, ದೇವತಾಸ್ಥಾಪನೆಯನ್ನು ಮಾಡಬೇಕೆಂಬ ಉದ್ದೇಶಕ್ಕೂ ಶ್ರೀರಾಮದೇವರನ್ನೇ ಪ್ರತಿಷ್ಠಿಸುವದು ಹೊಂದುವಂತಿತ್ತು. ಅದಕ್ಕೆ ತಕ್ಕಂತೆ ಆಗಿನ ಸಂದರ್ಭದಲ್ಲಿ ಹೈದರಾಬಾದ್ ಸಂಸ್ಥಾನದಲ್ಲಿ ರಜಕಾರರೆಂಬ ಮುಸ್ಲಿಮರ ಹಾವಳಿಯು ಹೆಚ್ಚಾಗಿದ್ದು ಹಿಂದೂಧರ್ಮವನ್ನು ಕಾಪಾಡಿಕೊಳ್ಳಲು ಎಲ್ಲರೂ ಬದ್ಧಕಂಕಣರಾಗಬೇಕೆಂಬ ಸನ್ನಿವೇಶವು ಒದಗಿತ್ತು. ಧರ್ಮೋದ್ಧಾರಕ್ಕೆ ಪ್ರೇರಣೆಯನ್ನು ನೀಡಿ ಚೈತನ್ಯವನ್ನುಂಟುಮಾಡಲು ಶ್ರೀಕೋದಂಡರಾಮನ ಉಪಾಸನೆಯೇ ಆಗ್ಗೆ ಅವಶ್ಯವೂ ಆಗಿತ್ತು ಆದ್ದರಿಂದ ಶ್ರೀಶ್ರೀಗಳವರು **"ಶ್ರೀದಿಗ್ವಿಜಯರಾಮ"** ನೆಂಬ ಹೆಸರಿನಿಂದ ಕೋದಂಡ ಜಟಾಧಾರಿಯಾದ ವನವಾಸಕ್ಕೆ ಹೊರಟಿರುವ ಶ್ರೀರಾಮನನ್ನು ಸೂಚಿಸುವಂಥ ಮೂರ್ತಿಯನ್ನು ಸ್ಥಾಪಿಸಿ ತನ್ಮೂಲಕ ಧರ್ಮಜಾಗ್ರತಿಯನ್ನುಂಟು ಮಾಡಬೇಕೆಂದು ಸಂಕಲ್ಪಿಸಿದರು. ಈ ಎಲ್ಲಾ ಕಾರಣಗಳಿಂದ ರಾಮಪ್ರತಿಷ್ಠೆಗಾಗಿ ತಕ್ಕ ವ್ಯವಸ್ಥೆಗಳನ್ನು ಸಮಿತಿಯವರು ಕೈಗೊಂಡು ರಾಣಿಬೆನ್ನೂರಿನಲ್ಲಿ ಶ್ರೀಪಾಂಡುರಂಗಿ ಹನುಮಂತಾಚಾರ್ಯರೆಂಬ ಬ್ರಾಹ್ಮಣ ಶಿಲ್ಪಿಯಿಂದ ಶ್ರೀರಾಮ, ಸೀತಾ-ಲಕ್ಷ್ಮಣ, ಆಂಜನೇಯ-ಈ ನಾಲ್ಕು ವಿಗ್ರಹಗಳನ್ನು ಕೃಷ್ಣಶಿಲೆಯಲ್ಲಿ ತಯಾರಿಸುವ ಏರ್ಪಾಡುಮಾಡಿದರು.

## ಶ್ರೀ ದಿಗ್ವಿಜಯರಾಮರ ಪ್ರತಿಷ್ಠೆ :

1950ನೆಯ ಫೆಬ್ರವರಿ ಮಾಹೆಯ ವೇಳೆಗೆ ವಿಗ್ರಹಗಳು ಸಿದ್ಧವಾಗಿ ಬಂದವು. **ಶ್ರೀವಿಕೃತಿಸಂವತ್ಸರದ ಚೈತ್ರ ಶುಕ್ಲ ದಶಮೀ ಬುಧವಾರ ತಾ. 29-3-50**ರಂದು ಶ್ರೀ ದಿಗ್ವಿಜಯರಾಮದೇವರ ಪ್ರತಿಷ್ಠೆಯ ಮುಹೂರ್ತವು ನಿಶ್ಚಯಿಸಲ್ಪಟ್ಟಿತು. ಅದೇ ಸಂದರ್ಭದಲ್ಲಿ ಪಾಡ್ಯದಿಂದ ಒಂಭತ್ತು ದಿನಗಳ ಕಾಲ ರಾಮನವರಾತ್ರಿಯ ಉತ್ಸವವನ್ನೂ ಏರ್ಪಡಿಸಲಾಯಿತು. ಪ್ರತಿಷ್ಠೆಯ ವೆಚ್ಚಕ್ಕೆ ಮಹಾಜನರ ಸಹಾಯವನ್ನು ಕೋರಲಾಯಿತು. ಪ್ರಾರಂಭದಲ್ಲಿ ಪ್ರತಿಷ್ಠಾಕಾರ್ಯಕ್ಕೆ 700ರೂಗಳು ಖರ್ಚಾಗಬಹುದೆಂದು ಅಂದಾಜುಮಾಡಿತ್ತು. ಬೆಂಗಳೂರಿನ ಒಬ್ಬ ಭಕ್ತಮಹಾಶಯರು ತಾವೊಬ್ಬರೇ ಈ ಮೊಬಲಗನ್ನು ವಹಿಸಿಕೊಂಡರು. ಮಹಾಜನರು ತಮ್ಮ ತಮ್ಮ ಸಹಾಯದ್ರವ್ಯಗಳನ್ನು ಸಲ್ಲಿಸಿದರು. ಆದ್ದರಿಂದ ಸನ್ನಿವೇಶಕ್ಕೆ ತಕ್ಕಂತೆ ಪ್ರತಿಷ್ಠಾಕಾರ್ಯದ ಅಂಗೋಪಾಂಗಗಳನ್ನು ಹಿಗ್ಗಿಸಲಾಯಿತು. ಸ್ಥಳಪರಸ್ಥಳಗಳಿಂದ ಭಕ್ತರುಗಳು ಬಂದುಸೇರಿದರು. ರಾಮನವರಾತ್ರಿಯ ಅಂಗವಾಗಿ ವಿಶೇಷಪೂಜಾಪಾರಾಯಣ ಜಪಾದಿಗಳಲ್ಲದೆ ಪ್ರತಿಷ್ಠಾಂಗವಾದ ಕಾರ್ಯಕಲಾಪಗಳೂ ವಿಜೃಂಭಣೆಯಿಂದ ಪ್ರಾರಂಭವಾಗಿ ಮುಂದುವರಿದವು. ಶ್ರೀಶ್ರೀಗಳವರ ಅಮೃತಹಸ್ತದಿಂದ ಮೊದಲೇ ಗೊತ್ತಾಗಿದ್ದ ಶುಭಮುಹೂರ್ತದಲ್ಲಿ

ಶ್ರೀರಾಮದೇವರ ಪ್ರತಿಷ್ಠೆಯು ನೆರವೇರಿತು. ಬಂದಿದ್ದ ಭಕ್ತಾದಿಗಳಿಗೂ ಸ್ಥಳೀಯ ಮಹಾಜನರಿಗೂ ಸಂತರ್ಪಣೆಯನ್ನು ನಡೆಯಿಸಲಾಯಿತು. ಅನೇಕ ಭಕ್ತರುಗಳು ದೇವರಿಗೆ ಬೆಳ್ಳಿಯ ಪೂಜಾಸಾಮಗ್ರಿಗಳನ್ನೂ, ವಸ್ತ್ರಾದಿಗಳನ್ನೂ, ಕೆಲವರು ಒಡವೆಗಳನ್ನೂ ಸಹ ಅರ್ಪಿಸಿದರು. ಅನಂತರ ಇದಾದಮೇಲೆ ಉತ್ಸವಕ್ಕೆ ಬಂದಿದ್ದ ಪರಸ್ಥಳದ ವಿದ್ವಾಂಸರುಗಳಿಗೂ ವೈದಿಕರಿಗೂ ಶ್ರೀಶ್ರೀಗಳವರು ಪ್ರಸಾದ ಮಂತ್ರಾಕ್ಷತೆ ಸಂಭಾವನೆಗಳನ್ನು ಅನುಗ್ರಹಿಸಿದರು. ಶ್ರೀರಾಮ ಪ್ರತಿಷ್ಠೆಯ ಮುಹೂರ್ತದ ದಿನವೇ **ಅಧ್ಯಾತ್ಮಪ್ರಕಾಶಕಾರ್ಯಾಲಯದ ನೂತನ ಸಭಾಂಗಣದ ಪ್ರವೇಶೋತ್ಸವವೂ** ನಡೆಯಿತು. ಈ ಎಲ್ಲಾ ಏರ್ಪಾಡುಗಳನ್ನೂ ಸಮಿತಿಯವರು ತೃಪ್ತಿಕರವಾಗಿ ಮಾಡಿದ್ದರು. ಆಗ್ಗೆ ಕಾರ್ಯದರ್ಶಿಗಳೂ ಪಂಡಿತರೂ ಆಗಿದ್ದ ಶ್ರೀ ಚೆನ್ನಕೇಶವಯ್ಯನವರು ವಿಶೇಷಶ್ರಮವನ್ನು ವಹಿಸಿ ಎಲ್ಲಾ ಕಾರ್ಯಗಳೂ ವ್ಯವಸ್ಥಿತವಾಗಿ ನಡೆಯುವಂತೆ ಸಹಕರಿಸಿ ಸೇವೆಯನ್ನು ಮಾಡಿದರು. ಅಂತೂ ಶ್ರೀರಾಮರ ಕೃಪೆಯಿಂದಲೂ ಶ್ರೀಶ್ರೀಗಳವ ಅನುಗ್ರಹದಿಂದಲೂ ಭಕ್ತಮಹಾಜನರ ಔದಾರ್ಯಶ್ರದ್ಧಾಭಕ್ತಿ ಸೇವಾದಿಗಳ ಬಲದಿಂದಲೂ ಈ ಮಹಾಕಾರ್ಯವು ಬಹಳ ಚೆನ್ನಾಗಿ ನೆರವೇರಿತು.

ಪ್ರತಿಷ್ಠಾಮಹೋತ್ಸವದ ಖರ್ಚು ಕಳೆದು ಉಳಿದ ಮೊಬಲಗನ್ನು ಶ್ರೀರಾಮದೇವರ ನಿತ್ಯಪೂಜಾದಿಗಳಿಗೆ ಶಾಶ್ವತವಾದ ನಿಧಿಯನ್ನು ಏರ್ಪಡಿಸುವ ಸದುದ್ದೇಶದಿಂದ **"ಪೂಜಾಮಂದಿರಮೂಲನಿಧಿ"** ಎಂಬ ಹೆಸರಿನಿಂದ ಬ್ಯಾಂಕಿನಲ್ಲಿ ಡಿಪಾಜಿಟ್‌ಮಾಡಲಾಯಿತು. ಈಚೆಗೆ ಈ ನಿಧಿಯು ಮಹಾಜನರ ಔದಾರ್ಯದಿಂದ ಅಭಿವೃದ್ಧಿಯಾಗುತ್ತಿದೆ.

**ಶಂಕರಸಪ್ತಾಹ :**

1949ನೆಯ ಶ್ರೀವಿರೋಧಿನಾಮಸಂವತ್ಸರದ ಶ್ರೀಶಂಕರಸಪ್ತಾಹವು ಹೊಳೆನರಸೀಪುರದಲ್ಲಿ ನಡೆಯಿತು. ಎಂದಿನಂತೆ ಕಾರ್ಯಕ್ರಮಗಳು ಜರುಗಿದವು. 1950ನೆಯ **ಶ್ರೀವಿಕೃತಿಸಂವತ್ಸರದ ಶಂಕರಸಪ್ತಾಹವು ಬೆಂಗಳೂರಿನ ಬಸವನಗುಡಿಯಲ್ಲಿ ಕರಣೀಕರ ಪಾಠಶಾಲೆಯಲ್ಲಿ** ಏರ್ಪಾಡಾಗಿತ್ತು. ಶ್ರೀರಾಮಪ್ರತಿಷ್ಠೆಯಾದಬಳಿಕ ಶ್ರೀಗಳವರು ಪ್ರವಾಸಕ್ಕೆ ಹೊರಟು ಕೃಷ್ಣರಾಜನಗರ, ಮೈಸೂರುಗಳಿಗೆ ದಯಮಾಡಿಸಿದರು. ಅಲ್ಲಲ್ಲಿ ಉಪನ್ಯಾಸಗಳನ್ನು ಅನುಗ್ರಹಿಸಿ ಮುಂದೆ ಬೆಂಗಳೂರಿಗೆ ಪ್ರಯಾಣಮಾಡಿದರು. ಸಪ್ತಾಹದ ಅಂಗವಾದ ಪ್ರವಚನ, ಉಪನ್ಯಾಸಾದಿಗಳು ನಿಯೋಜಿತಕಾರ್ಯಕ್ರಮದಂತೆ ನಡೆದವು. ಸಪ್ತಾಹವಾದ ಬಳಿಕವೂ ಶ್ರೀಶ್ರೀಗಳು ಬೇರೆಬೇರೆ ಸ್ಥಳಗಳಲ್ಲಿ ಕೆಲವು ಉಪನ್ಯಾಸಗಳನ್ನು ನಡೆಯಿಸಿ ಊರಿಗೆ ಹಿಂತಿರುಗಿದರು.

**ಚಾತುರ್ಮಾಸ್ಯಸಂಕಲ್ಪ :**

ಶ್ರೀಶ್ರೀಗಳವರು ಸಂನ್ಯಾಸಸ್ವೀಕಾರವನ್ನು ಮಾಡಿದ ಮೇಲೆ 1948ರಿಂದ 1950ರ ಪೂರ ಚಾತುರ್ಮಾಸ್ಯ ಸಂಕಲ್ಪವನ್ನು ಹೊಳೆನರಸೀಪುರದಲ್ಲಿಯೇ ನೆರವೇರಿಸಿದರು. ಆಗ್ಗೆ ಬರವಣಿಗೆಯ

ಕೆಲಸಗಳನ್ನೂ ವಿದ್ಯಾರ್ಥಿಗೆ ಪಾಠಪ್ರವಚನಗಳನ್ನೂ ಶ್ರೀಗಳವರೇ ನಡೆಸಬೇಕಾಗಿದ್ದುದರಿಂದ ವಿಶೇಷ ಉಪನ್ಯಾಸಗಳನ್ನು ನಡೆಸುತ್ತಿರಲಿಲ್ಲ. ಬೆಳಗಿನ ವೇಳೆಯಲ್ಲಿ ವಿಶೇಷಾನುಷ್ಠಾನ ಜಪಗಳಲ್ಲಿರುತ್ತಿದ್ದರು. ಈ ಅವಧಿಯಲ್ಲಿ "ಶಂಕರವೇದಾಂತಸಾರ" ವೆಂಬ ಗ್ರಂಥವೊಂದನ್ನು ರಚಿಸಿದರು.

## ಸಭಾಂಗಣದ ಉಪಯೋಗ, ಮುದ್ರಣಾಲಯಕ್ಕೆ ಹೊಸ ಸ್ಥಾನ :

ಕಾರ್ಯಾಲಯದ ಹೊಸ ಸಭಾಂಗಣವು ಸಿದ್ಧವಾದ ಅನಂತರ ಕಾರ್ಯಾಲಯದ ಚಟುವಟಿಕೆಗಳನ್ನೆಲ್ಲ ಅಲ್ಲಿಯೇ ನಡೆಯಿಸಲಾರಂಭಿಸಲಾಯಿತು. ಬರುಬರುತ್ತಾ ಸಭಾಂಗಣವೊಂದೇ ಪುರಾಣ, ಪುಸ್ತಕಭಂಡಾರ, ವಾಚನಾಲಯ, ಶ್ರೀಶ್ರೀಗಳವರ ಬರವಣಿಗೆಯ ಸ್ಥಾನ, ವಿದ್ಯಾನಿಲಯದ ಪಾಠಪ್ರವಚನಗಳ ಸ್ಥಾನ, ವಿದ್ಯಾರ್ಥಿಗಳ ವಾಸಕ್ಷೇತ್ರ, ಆಗಂತುಕರ ವಿಶ್ರಾಮಸ್ಥಾನ, ಪುಸ್ತಕಗಳ ಉಗ್ರಾಣ-ಇಷ್ಟೂ ಆಗಿ ಪರಿವರ್ತನೆಗೊಂಡಿತು.

ಈವರೆಗೂ ಕಾರ್ಯಾಲಯದ ಚಟುವಟಿಕೆಗಳು ನಡೆಯುತ್ತಿದ್ದ ಕುಟೀರವನ್ನು ತೆರವುಮಾಡಿ ಹೊಸ ಜಿಂಕುಷೀಟುಗಳನ್ನು ಹೊದಿಸಿ ರಿಪೇರಿಮಾಡಿಸಿ ಮುದ್ರಣಾಲಯವನ್ನು ಅಲ್ಲಿ ಸ್ಥಾಪಿಸಲಾಯಿತು. ಮುದ್ರಣಾಲಯಕ್ಕೆ ಸ್ವಲ್ಪ ಹೆಚ್ಚು ಸ್ಥಳಾವಕಾಶವು ದೊರೆತದ್ದರಿಂದ ಕೆಲವು ಹೊಸ ಸಾಮಾನುಗಳನ್ನೂ ಟೈಪುಗಳನ್ನೂ ಕೊಂಡು ಮುದ್ರಣಾಲಯವನ್ನು ವಿಸ್ತರಿಸಲಾಯಿತು.

## ಗ್ರಂಥಪ್ರಕಟನೆ : ಇತರ ಚಟುವಟಿಕೆಗಳು :

1951ನೆಯ ಮಾರ್ಚಿ ಮಾಹೆಯ ವೇಳೆಗೆ ಬ್ರಹ್ಮಸೂತ್ರಭಾಷ್ಯದ ಒಂದನೆಯ ಸಂಪುಟವು ಸಿದ್ಧವಾಯಿತು. 1949ರಲ್ಲು ಪ್ರಕರಣಗಳು 1ನೆಯ ಸಂಪುಟ - ಎಂಬ ಹೆಸರಿನಿಂದ ಉಪದೇಶಸಾಹಸ್ರಿ ಗದ್ಯ-ಪದ್ಯ ಅಪರೋಕ್ಷಾನುಭೂತಿ- ಅದ್ವೈತಾನುಭೂತಿ- ಇಷ್ಟು ಪ್ರಕರಣಗಳು ಜಯಚಾಮರಾಜೇಂದ್ರ ಗ್ರಂಥಮಾಲೆಯಲ್ಲಿ ಅಚ್ಚಾಗಿದ್ದವು. ಅಲ್ಲಿಂದೀಚೆಗೆ ಬ್ರಹ್ಮಸೂತ್ರಭಾಷ್ಯ ಮುದ್ರಣವು ಮೈಸೂರಿನಲ್ಲಿ ಎರಡು ಪ್ರೆಸ್‌ಗಳಲ್ಲಿ ಕೆಲಸವು ನಡೆದರೂ ಪೂರ್ಣವಾಗಿ ಅಚ್ಚಾಗದೆ ಕೊನೆಗೆ ಕಾರ್ಯಾಲಯದ ಮುದ್ರಣಾಲಯದಲ್ಲಿಯೇ ಅಚ್ಚಾಗಿ ಸಿದ್ಧವಾಯಿತು. 'ರಾಮಹೃದಯ' ಎಂಬ ಚಿಕ್ಕಪುಸ್ತಕವನ್ನೂ ಪುನರ್ಮುದ್ರಿಸಲಾಯಿತು. ಮಾಸಪತ್ರಿಕೆಯು ಎಂದಿನಂತೆ ನಡೆದುಕೊಂಡು ಬಂದಿತ್ತು. ವಿದ್ಯಾನಿಲಯಕ್ಕೆ ಹೊಸ ವಿದ್ಯಾರ್ಥಿಗಳು ಯಾರೂ ಸೇರಿರಲಿಲ್ಲ. ಇದ್ದ ಒಬ್ಬನೇ ವಿದ್ಯಾರ್ಥಿಗೆ ಬ್ರಹ್ಮಸೂತ್ರಭಾಷ್ಯ ಪಾಠವನ್ನು 1950ನೆಯ ಡಿಸೆಂಬರ್ ಮಾಹೆಯಿಂದ ಪ್ರಾರಂಭಿಸಲಾಗಿತ್ತು. ಸಭಾಂಗಣಕ್ಕೂ ದೇವಾಲಯಕ್ಕೂ ವಿದ್ಯುದ್ದೀಪಗಳನ್ನು ಇಡಿಸಲಾಯಿತು. ನಡುನಡುವೆ ಆಯಾ ಅನುಷ್ಠಾನಗಳೂ ವಿಶೇಷಕಾರ್ಯಕ್ರಮಗಳೂ ಎಂದಿನಂತೆ ನಡೆಯುತ್ತಿದ್ದವು.

## ಶ್ರೀ ಚೆನ್ನಕೇಶವಯ್ಯನವರ ಅಕಾಲನಿಧನ :

ಕಾರ್ಯಾಲಯದ ಕಾರ್ಯದರ್ಶಿಗಳ ಹಾಗೂ ವಿದ್ಯಾನಿಲಯದ ಪಂಡಿತರ ಸ್ಥಾನವನ್ನು ಅಲಂಕರಿಸಿ ಒಂದೂವರೆ ವರ್ಷಗಳಿಂದ ಉತ್ತಮವಾದ ಕೆಲಸಮಾಡಿ ಶ್ರೀಶ್ರೀಗಳವರ ಮೆಚ್ಚುಗೆಗೂ ಮಹಾಜನರ ಆದರಕ್ಕೂ ಪಾತ್ರರಾಗಿದ್ದ ಶ್ರೀ ಚನ್ನಕೇಶವಯ್ಯನವರು ಅಕಾಲ ಮರಣಕ್ಕೆ ತುತ್ತಾಗಿ ಪರಗತಿಯನ್ನು ಪಡೆದರು. ಇದರಿಂದ ಕಾರ್ಯಾಲಯದ ಚಟುವಟಿಕೆಗಳೆಲ್ಲವೂ ತತ್ಕಾಲಕ್ಕೆ ಸ್ತಬ್ಧವಾದವು. ಈ ಮಹನೀಯರ ಸಹಕಾರದಿಂದ ಇನ್ನೂ ಕೆಲವು ಸುಧಾರಣೆಗಳನ್ನು ಕೈಗೊಳ್ಳಬೇಕೆಂದಿರುವಷ್ಟರಲ್ಲಿಯೇ ವಿಧಿಯು ಇವರನ್ನು ಇಹಲೋಕದಿಂದ ಬೇರ್ಪಡಿಸಿತು. ಇವರು ಒಳ್ಳೆಯ ಸ್ವಭಾವದವರೂ ವೇದಾಂತಪ್ರಿಯರೂ ಶ್ರೀಗಳವರಲ್ಲಿ ಭಕ್ತಿಯುಳ್ಳವರೂ ವಿನಯವಂತರೂ ಸಚ್ಚರಿತ್ರರೂ ಆಗಿದ್ದರು. ಇಂಥ ಯೋಗ್ಯಸಾಧಕರ ಸಹಾಯವು ಇನ್ನುಮುಂದೆ ಕಾರ್ಯಾಲಯಕ್ಕೆ ಇಲ್ಲವಾಯಿತು. ಇವರ ಸೂಕ್ಷ್ಮಜೀವನ ಚರಿತ್ರೆಯನ್ನು ಅಧ್ಯಾತ್ಮಪ್ರಕಾಶದ 1951ನೆಯ ಜೂನ್ ಸಂಚಿಕೆಯಲ್ಲಿ ಪ್ರಕಟಿಸಿದೆ.

## ಶ್ರೀಶ್ರೀಗಳವರ ಪ್ರವಾಸ :

1951ನೆಯ ಫೆಬ್ರವರಿಯಲ್ಲಿ ದಾವಣಗೆರೆಯ ಶ್ರೀಶಿವಾನಂದತೀರ್ಥಗುರು ಅಧ್ಯಾತ್ಮಮಂದಿರದ ಪ್ರವೇಶೋತ್ಸವಕ್ಕಾಗಿ ಶ್ರೀಶ್ರೀಗಳವರು ನಾಲ್ಕು ದಿನಗಳಕಾಲ ದಾವಣಗೆರೆಗೆ ದಯಮಾಡಿಸಿದ್ದರು. ಅಲ್ಲಿ ಕೆಲವು ಉಪನ್ಯಾಸಗಳನ್ನು ಅನುಗ್ರಹಿಸಿ ಹೊಳೆನರಸೀಪುರಕ್ಕೆ ಹಿಂದಿರುಗಿದರು.

## ಅನುಷ್ಠಾನಗಳು :

ಶ್ರೀಖರಸಂವತ್ಸರದಲ್ಲಿ ಕಾರ್ಯಾಲಯದಲ್ಲಿ ಏರ್ಪಾಡಾಗಿದ್ದ ರಾಮನವರಾತ್ರಿ, ಶಂಕರಸಪ್ತಾಹ, ಚಾತುರ್ಮಾಸ್ಯ ಸಂಕಲ್ಪ, ಶರನ್ನವರಾತ್ರಿ, ಗೀತಾಜಯಂತಿ, ಬ್ರಹ್ಮಚೈತನ್ಯ ಗುರುಮಹಾರಾಜರ ಆರಾಧನೆ-ಈ ಎಲ್ಲಾ ಅನುಷ್ಠಾನಗಳೂ ಹೊಳೆನರಸೀಪುರದಲ್ಲಿಯೇ ಕಾರ್ಯಾಲಯದಲ್ಲಿಯೇ ನೆರವೇರಿದವು. ಸ್ಥಳಪರಸ್ಥಗಳಿಂದ ಮಹಾಜನರೂ ವಿದ್ವಾಂಸರೂ ನೆರೆದಿದ್ದು ಅನುಷ್ಠಾನಗಳು ಯಶಸ್ವಿಯಾಗಿ ನೆರವೇರುವಂತೆ ಸಹಕರಿಸಿದರು.

## ಗ್ರಂಥಪ್ರಕಟನೆ :

1951ರಲ್ಲಿ ಅನುಶಾಂಕರ ವೇದಾಂತ ಗ್ರಂಥಾವಳಿಯಲ್ಲಿ 'ನೈಷ್ಕರ್ಮ್ಯಸಿದ್ಧಿ' ಗ್ರಂಥವನ್ನು ಅನುವಾದ ಟಿಪ್ಪಣಿಗಳೊಡನೆ ಪ್ರಕಟಿಸಲಾಯಿತು. ಈ ಗ್ರಂಥದ ಮುದ್ರಣವೆಚ್ಚಕ್ಕಾಗಿ ಹಿಂದೆ ಶ್ರೀಶ್ರೀಗಳವರಲ್ಲಿ ಇದೇ ಗ್ರಂಥವನ್ನು ಪಾಠ ಹೇಳಿಸಿಕೊಂಡಿದ್ದ **ವೇ|| ಬ್ರ|| ಶ್ರೀ ಮತ್ತೂರು ಸುಬ್ರಾಯಾವಧಾನಿಗಳವರು** ಐದುನೂರು ರೂಪಾಯಿಗಳನ್ನೂ **ಶ್ರೀ ಅರಕಲಗೂಡು ಸೀತಾರಾಮಯ್ಯನವರು, ಅಡ್ವೋಕೇಟ್, ಮೈಸೂರು**-ರವರು ಐದುನೂರು ರೂಗಳನ್ನೂ ಸಹಾಯವಾಗಿ ಸಮರ್ಪಿಸಿದರು.

## ಶ್ರೀಶ್ರೀಗಳವರ ಪ್ರವಾಸ :

1951ನೆಯ ಡಿಸೆಂಬರ್ ತಿಂಗಳಿನಲ್ಲಿ ಶ್ರೀಶ್ರೀಗಳವರಿಗೆ ಸಂಧಿವಾತ, ಚಳಿ, ಜ್ವರ-ಮುಂತಾದ ವ್ಯಾಧಿಗಳಿಂದ ತುಂಬ ತೊಂದರೆಯಾಯಿತು. ಆಗ್ಗೆ ಡಾಕ್ಟರುಗಳೂ ಭಕ್ತರೂ ಮಾಡಿದ ಔಷಧೋಪಚಾರಗಳು ಭಗವದನುಗ್ರಹದಿಂದ ಸಾರ್ಥಕವಾಗಿ ಗುರುಗಳಿಗೆ ಆರೋಗ್ಯವು ಕೂಡಿಬಂದಿತು. ಆಮೇಲೆ ಹವಾಬದಲಾವಣೆಗಾಗಿ ಶ್ರೀಶ್ರೀಗಳವರು ಸುಮಾರು ಒಂದು ತಿಂಗಳಕಾಲ ಚಿತ್ರದುರ್ಗಕ್ಕೆ ದಯಮಾಡಿಸಿ ಶ್ರೀ ಬಂಗ್ಲೆ ಸಿ. ಚೌಡಯ್ಯನವರ ಒಂದು ಪ್ರತ್ಯೇಕ ಮನೆಯಲ್ಲಿ ಬಿಡಾರಮಾಡಿದ್ದರು. ವಿದ್ಯಾರ್ಥಿಗೆ ಅಲ್ಲಿಯೇ ಪಾಠಪ್ರವಚನಗಳು ನಡೆಯುತ್ತಿದ್ದವು. ಶ್ರೀಶ್ರೀಗಳವರ ಸಹಾಯಕ್ಕೆ ಮೈಸೂರು ಕಾವೇರಮ್ಮನವರೆಂಬ ಮಹಿಳೆಯೂ ಜೊತೆಯಲ್ಲಿದ್ದರು. ಆಗ್ಗೆ ನಡುವೆ ಒಂದು ದಿನ ಶ್ರೀಶ್ರೀಗಳವರು ಆ ಸಮಯದಲ್ಲಿ ಅಲ್ಲಿಯೇ ಇದ್ದ ಶ್ರೀಮಜ್ಜಗದ್ಗುರು ಕೂಡ್ಲಿ ಶೃಂಗೇರಿಪೀಠಾಧಿಪರಾದ ಶ್ರೀಸಚ್ಚಿದಾನಂದ ಶಂಕರಭಾರತೀಸ್ವಾಮಿಗಳವರ ದರ್ಶನವನ್ನು ಮಾಡಿಕೊಂಡು ವೇದಾಂತದ ವಿಷಯಕ್ಕೆ ಮಾತುಕತೆಗಳನ್ನು ನಡೆಯಿಸಿದರು. ಚಿತ್ರದುರ್ಗದಲ್ಲಿ ಕೆಲವು ಭಕ್ತರಿಂದ ಸತ್ಕಾರಗಳನ್ನು ಸ್ವೀಕರಿಸಿ ವಾಪಸು ಹೊಳೆನರಸೀಪುರಕ್ಕೆ ದಯಮಾಡಿಸಿದರು.

## ಭಾವಚಿತ್ರಗಳ ಅನಾವರಣೋತ್ಸವ :

ತಾ. 4-4-52ನೆಯ ಶುಕ್ರವಾರ ಸಾಯಂಕಾಲ 5 ಘಂಟೆಗೆ ಕಾರ್ಯಾಲಯದ ಸಭಾಂಗಣದಲ್ಲಿ ಅಧ್ಯಾತ್ಮಪ್ರಕಾಶಕಾರ್ಯಾಲಯದ ಪರಿಪಾಲಕರೂ ನಮ್ಮನ್ನಾಳಿದ ಮಹಾಪ್ರಭುಗಳೂ ಆದ ಶ್ರೀಜಯಚಾಮರಾಜೇಂದ್ರ ಒಡೆಯರ್ ಬಹದ್ದೂರ್‌ರವರ, ಮತ್ತು ರಾಜಕಾರ್ಯಪ್ರಸಕ್ತ ಕೆ. ರಾಮಸ್ವಾಮಿಯವರ ಧರ್ಮಪತ್ನಿ ಶ್ರೀಮತಿ ಪುಟ್ಟಮ್ಮ ರಾಮಸ್ವಾಮಿಯವರ ಭಾವಚಿತ್ರಗಳನ್ನು ಆಗ್ಗೆ ಹೊಳೆನರಸೀಪುರದ ಮುನಸೀಫ್ ಮ್ಯಾಜಿಸ್ಟ್ರೇಟರಾಗಿದ್ದ ಶ್ರೀ ವಿ. ನರಸಿಂಹಮೂರ್ತಿ ಎಂ.ಎ., ಎಲ್.ಎಲ್.ಬಿ., ಇವರು ಅನಾವರಣ ಮಾಡಿದರು. ಆಗ್ಗೆ ಉಪಸ್ಥಿತರಾಗಿದ್ದ ಆಸ್ಥಾನವಿದ್ವಾನ್ ಎಸ್. ವಿಠಲಶಾಸ್ತ್ರಿಗಳು ಕಾರ್ಯಾಲಯದ ಅಭಿವೃದ್ಧಿ, ಗ್ರಂಥಪ್ರಕಟನೆಗಳ ವಿವರವನ್ನು ಮಹಾಜನರಿಗೆ ಪರಿಚಯ ಮಾಡಿಕೊಟ್ಟರು. ಕಟ್ಟಡದ ಸಮಿತಿಯ ಉಪಾಧ್ಯಕ್ಷರಾಗಿದ್ದ ಶ್ರೀ ಪಿ. ಚಿಕ್ಕಣ್ಣಶೆಟ್ಟರು ಎಲ್ಲರನ್ನೂ ಸ್ವಾಗತಿಸಿದರು. ಅಧ್ಯಕ್ಷರು ಅಧ್ಯಾತ್ಮವಿದ್ಯೆಯ ಮಹತ್ತ್ವವನ್ನು ಹೊಗಳಿ ಆಶ್ರಯದಾತರ ಪ್ರಶಂಸೆಯನ್ನು ಮಾಡಿ ಅನಾವರಣಕಾರ್ಯವನ್ನು ನೆರವೇರಿಸಿದರು.

## ವಿದ್ಯಾನಿಲಯ :

ಕಳೆದ ಐದುವರ್ಷಗಳಿಂದಲೂ ವಿದ್ಯಾನಿಲಯದಲ್ಲಿ ಅಭ್ಯಾಸಮಾಡುತ್ತಿದ್ದ ವಿದ್ಯಾರ್ಥಿ ಶ್ರೀ ಹೆಚ್.ಎಸ್. ಲಕ್ಷ್ಮೀನರಸಿಂಹಮೂರ್ತಿಯ ವಿದ್ಯಾಭ್ಯಾಸದ ಅವಧಿಯು 1952ನೆಯ ಮೇ ಮಾಹೆಗೆ ಪೂರೈಸಿತು. ಈ ವೇಳೆಗೆ ಈತನಿಗೆ ಸೂತ್ರಭಾಷ್ಯಪಾಠವು ಪೂರ್ತಿಯಾಗಿದ್ದು

ಪ್ರಸ್ಥಾನತ್ರಯಭಾಷ್ಯಗಳ ಅಧ್ಯಯನವೂ ಇತರ ಪಾಠಗಳೂ ಮುಗಿದಿದ್ದವು. ವಿದ್ಯಾಭ್ಯಾಸದ ಅವಧಿಯಲ್ಲಿ ಒಂದು ಲಿಖಿತಪರೀಕ್ಷೆಯನ್ನೂ ನಡೆಸಲಾಗಿತ್ತು. ಪುರಾಣಪ್ರವಚನ, ಉಪನ್ಯಾಸಗಳನ್ನು ಮಾಡುವದು-ಇವುಗಳಲ್ಲಿಯೂ ಕಾರ್ಯಾಲಯದ ಲೆಕ್ಕಪತ್ರಗಳ ವ್ಯವಹಾರದಲ್ಲಿಯೂ ಮುದ್ರಣಾಲಯದ ಕೆಲಸಗಳಲ್ಲಿಯೂ ಈತನು ಸಾಕಾದಷ್ಟು ಪರಿಶ್ರಮವನ್ನು ಪಡೆದಿದ್ದನು. ಆದ್ದರಿಂದ ಈತನನ್ನು ಕಾರ್ಯಾಲಯದಲ್ಲಿಯೇ ಉಳಿಸಿಕೊಂಡು ವಿದ್ಯಾನಿಲಯದಲ್ಲಿ ಪಂಡಿತನನ್ನಾಗಿ ನಿಯಮಿಸಬೇಕೆಂದು ಶ್ರೀಶ್ರೀಗಳವರು ಸಮಿತಿಯವರಿಗೆ ಸೂಚನೆ ಕೊಟ್ಟರು.

**ಶಂಕರಸಪ್ತಾಹ :**

1952ನೆಯ ಶ್ರೀನಂದನಸಂವತ್ಸರದ ಶಂಕರಸಪ್ತಾಹವು ಮೈಸೂರಿನಲ್ಲಿ ಶ್ರೀ ಪ್ರಸನ್ನ ವಿಶ್ವೇಶ್ವರ ದೇವಾಲಯದಲ್ಲಿ ನಡೆಯಿತು. ಮಹಾಜನರು ಬಹಳ ಉತ್ಸಾಹದಿಂದ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿದ್ದರಲ್ಲದೆ ಕಾರ್ಯಾಲಯದ ಧಾರ್ಮಿಕ ಕೆಲಸಗಳಿಗೆ ಯಥೋಚಿತವಾಗಿ ಕಾಣಿಕೆಗಳನ್ನೂ ನೀಡಿದರು. ಶ್ರೀಗಳವರನ್ನೂ ಆದರಪೂರ್ವಕವಾಗಿ ಸತ್ಕರಿಸಿದರು.

**ಪ್ರಶಸ್ತಿಪ್ರದಾನ : ವಿದ್ಯಾನಿಲಯಕ್ಕೆ ವಿದ್ವಾಂಸರು :**

ಶ್ರೀಶ್ರೀಸಚ್ಚಿದಾನಂದೇಂದ್ರ ಸರಸ್ವತೀಸ್ವಾಮಿಗಳವರ ಆಜ್ಞೆಯಂತೆ ಅಧ್ಯಾತ್ಮ ವಿದ್ಯಾನಿಲಯದಲ್ಲಿ ಐದುವರ್ಷಗಳು ವಿದ್ಯಾಭ್ಯಾಸಮಾಡಿ ಉತ್ತೀರ್ಣನಾಗಿದ್ದ ವಿದ್ಯಾರ್ಥಿಗೆ ಪ್ರಶಸ್ತಿಯನ್ನು ಕೊಡಲು ಸಮಿತಿಯವರು 1952ನೆಯ ಜೂನ್ ಮಾಹೆಯಲ್ಲಿ ಒಂದು ಸಮಾರಂಭವನ್ನು ಏರ್ಪಡಿಸಿದರು. ಆ ಘಟಿಕೋತ್ಸವಕ್ಕೆ ವೇ|| ಬ್ರ|| ಶ್ರೀ ಆಸ್ಥಾನವಿದ್ವಾನ್ ಎಸ್. ವಿಠಲಶಾಸ್ತ್ರಿಗಳು, ಪಂಡಿತಪ್ರವರ, ಸಾಹಿತ್ಯವೇದಾಂತನ್ಯಾಯವಿದ್ವಾನ್ ಶ್ರೀ ಹೆಚ್. ಅನಂತಮೂರ್ತಿಶಾಸ್ತ್ರಿಗಳು, ಆಸ್ಥಾನಮಹಾವಿದ್ವಾನ್ ಶ್ರೀ ವೈ. ಚಂದ್ರಶೇಖರಶಾಸ್ತ್ರಿಗಳು-ಇವರುಗಳು ದಯಮಾಡಿಸಿದ್ದರು. ಶ್ರೀಶ್ರೀಗಳವರ ಅಧ್ಯಕ್ಷತೆಯಲ್ಲಿ ನಡೆದ ಈ ವಿಶೇಷ ಸಮಾರಂಭದಲ್ಲಿ ವಿದ್ಯಾರ್ಥಿ ಹೆಚ್.ಎಸ್. ಲಕ್ಷ್ಮೀನರಸಿಂಹಮೂರ್ತಿಗೆ 'ಅಧ್ಯಾತ್ಮವಿದ್ಯಾಪ್ರವೀಣ' ಎಂಬ ಪ್ರಶಸ್ತಿಯನ್ನು ವಿದ್ವಾಂಸರುಗಳು ದಯಪಾಲಿಸಿ ಈ ಕೆಳಗೆ ಕಂಡಂತೆ ಒಂದು ಯೋಗ್ಯತಾಪತ್ರವನ್ನೂ ಕೊಟ್ಟರು;

"ಶ್ರೀಶ್ರೀಸಚ್ಚಿದಾನಂದೇಂದ್ರ ಸರಸ್ವತೀ ಮಹಾಸ್ವಾಮಿಗಳವರು ಸ್ಥಾಪಿಸಿರುವ 'ಅಧ್ಯಾತ್ಮವಿದ್ಯಾನಿಲಯ'ವೆಂಬ ಈ ಮಹಾಪಾಠಶಾಲೆಯಲ್ಲಿ ಶ್ರೀ ಹೊರಂಟೂರು ಶ್ರೀಕಂಠಘನಪಾಠಿಗಳ ಮಗ ಶ್ರೀ ಹೆಚ್.ಎಸ್. ಲಕ್ಷ್ಮೀನರಸಿಂಹಮೂರ್ತಿ- ಎಂಬ ವಿದ್ಯಾರ್ಥಿಯು ಶ್ರೀನಂದನ ಸಂವತ್ಸರದ ಚೈತ್ರದವರೆಗಿನ ಐದು ವರ್ಷಗಳು ಪೂರ ಅಭ್ಯಾಸಮಾಡಿ ಶಾಂಕರಪ್ರಸ್ಥಾನತ್ರಯಭಾಷ್ಯಗಳ ವಿಶೇಷ ಪರಿಚಯವನ್ನೂ ವ್ಯಾಖ್ಯಾನಪ್ರಸ್ಥಾನಗಳ ಸಾಮಾನ್ಯ

ಪರಿಚಯವನ್ನೂ ದ್ವೈತವಿಶಿಷ್ಟಾದ್ವೈತಸಿದ್ಧಾಂತಗಳ ಪರಿಚಯವನ್ನೂ ಮಾಡಿಕೊಂಡು ಈ ವಿಷಯಗಳಲ್ಲಿ ಪ್ರವಚನಾದಿಗಳನ್ನು ಮಾಡಲು ಸಮರ್ಥನಾಗಿರುತ್ತಾನೆಂದು ನಾವುಗಳು ಈ ಮೂಲಕ ದೃಢಪಡಿಸುತ್ತೇವೆ. ಈತನ ಯೋಗ್ಯತೆಯನ್ನು ಒಪ್ಪಿ 'ಅಧ್ಯಾತ್ಮವಿದ್ಯಾಪ್ರವೀಣ' ಎಂಬ ಪ್ರಶಸ್ತಿಯನ್ನು ಸಭೆಯಲ್ಲಿ ಕೊಟ್ಟಿರುತ್ತೇವೆ".

ಈ ರೀತಿಯಾದ ಯೋಗ್ಯತಾಪತ್ರವನ್ನೂ ಶ್ರೀಜಯಚಾಮರಾಜೇಂದ್ರ ಗ್ರಂಥಮಾಲೆಯಲ್ಲಿ ಪ್ರಕಟವಾಗಿದ್ದ ಒಂದು ಸೆಟ್ ಗ್ರಂಥಗಳನ್ನೂ ವಿದ್ವತ್ ಪಾರಿತೋಷಿಕವಾಗಿ ಕೊಡಲಾಯಿತು. 1952ನೆಯ ಜೂನ್ 1ನೆಯ ತಾರೀಖಿನಿಂದ ಈತನನ್ನು 60-5-100 ರೂಗಳ ಸಂಭಾವನೆಯ ಮೇಲೆ ವಿದ್ಯಾನಿಲಯದ ಪಂಡಿತನನ್ನಾಗಿ ಕಾರ್ಯಕಾರಿಸಮಿತಿಯವರು ನೇಮಿಸಿದರು.

## ಚಾತುರ್ಮಾಸ್ಯ ಸಂಕಲ್ಪ :

1952ನೆಯ ವರ್ಷದಲ್ಲಿ ಶ್ರೀಗಳವರು ಹೊಳೆನರಸೀಪುರದಲ್ಲಿಯೇ ಚಾತುರ್ಮಾಸ್ಯ ಸಂಕಲ್ಪವನ್ನು ನೆರವೇರಿಸಿದರು. ಹೃಷಿಕೇಶದಿಂದ ದಯಮಾಡಿಸಿದ್ದ ಶ್ರೀಶಂಕರಾನಂದ ಸರಸ್ವತೀಸ್ವಾಮಿಗಳು ಈ ಬಾರಿ ಇಲ್ಲಿಯೇ ಚಾತುರ್ಮಾಸ್ಯವನ್ನು ನೆರವೇರಿಸಿದರು. ಶ್ರೀಸ್ವಾಮಿಗಳು ಈ ಅವಧಿಯಲ್ಲಿ ತಮ್ಮ ವಿರಾಮಕಾಲದಲ್ಲಿ ಕಾರ್ಯಾಲಯದ ಲೈಬ್ರರಿ ವಿಭಾಗವನ್ನು ಚೆನ್ನಾಗಿ ವಿಂಗಡಿಸಿ ವ್ಯವಸ್ಥೆಮಾಡಿ ಗ್ರಂಥಗಳ ಪಟ್ಟಿಯೊಂದನ್ನು ಸಹ ಬರೆದುಕೊಟ್ಟು ಉಪಕಾರ ಮಾಡಿದರು.

## ಇತರ ಚಟುವಟಿಕೆಗಳು :

ಈ ಅವಧಿಯಲ್ಲಿ ಸಾಗರದ ಕಡೆಯಿಂದ ಬಂದಿದ್ದ ಶ್ರೀ ಬಿ.ಕೆ. ಮಂಜಯ್ಯ ಎಂಬ ವಿದ್ಯಾನಿಲಯದ ಒಬ್ಬನೇ ವಿದ್ಯಾರ್ಥಿಗೆ ಸಂಸ್ಕೃತಪಾಠಗಳೂ 'ವೇದಾಂತಡಿಂಡಿಮ' ಪಾಠವೂ ನಡೆಯುತ್ತಿದ್ದವು. ವಿಷ್ಣುಪುರಾಣಶ್ರವಣವನ್ನು ಪಂಡಿತರೇ ನಡೆಸುತ್ತಿದ್ದರು. ಶರನ್ನವರಾತ್ರಿಯ ಅನುಷ್ಠಾನವೂ ಚೆನ್ನಾಗಿ ನಡೆಯಿತು. ಹೈಸ್ಕೂಲು ವಿದ್ಯಾರ್ಥಿಗಳಿಗೆ ಪ್ರತಿಭಾನುವಾರವೂ ಸಂಸ್ಕೃತಭಾಷಾಪರಿಚಯ ಹಾಗೂ ಮತನೀತಿಬೋಧಕ ತರಗತಿಗಳನ್ನು ಆರಂಭಿಸಿ ನಡೆಸಲಾಗುತ್ತಿತ್ತು. ಪತ್ರಿಕೆಯ ಮುದ್ರಣವೂ ಗ್ರಂಥಪ್ರಕಟನೆಯೂ ಮುಂದುವರಿದಿತ್ತು.

ಶ್ರೀಶ್ರೀಪ್ರಕಾಶಾನಂದರೆಂಬ ಯತಿಗಳೊಬ್ಬರು ದಯಮಾಡಿಸಿ ಕೆಲವು ಕಾಲ ತಂಗಿದ್ದರು. ಅನಂತರ ಒರಿಸ್ಸಾ ಪ್ರಾಂತದಿಂದ **ಪ್ರೇಮಾನಂದರೆಂಬ ಸಂನ್ಯಾಸಿಗಳೊಬ್ಬರು** ಬಂದರು. ಇವರಿಗೆ ಮುಂದೆ ಕಾಲಕ್ರಮದಲ್ಲಿ ಶ್ರೀಶ್ರೀಗಳವರಿಂದಲೇ ಯಥಾವಿಧಿಯಾಗಿ ಆಶ್ರಮಸ್ವೀಕಾರವು ನೆರವೇರಿಸಲ್ಪಟ್ಟಿತು. ಇವರು ಈಚೆಗೆ 19-4-91ರಂದು ಹೊಳೆನರಸೀಪುರದಲ್ಲಿಯೇ ಬ್ರಹ್ಮೀಭೂತರಾದರು.

### ಶ್ರೀಶ್ರೀಗಳವರ ಪ್ರವಾಸ :

1952ನೆಯ ನವೆಂಬರ್ ಮಾಹೆಯಲ್ಲಿ ಶ್ರೀಶ್ರೀಗಳವರು ಅರಸೀಕೆರೆ, ದಾವಣಗೆರೆ, ಹರಿಹರ, ಗದಗ್, ಬಾಗಲಕೋಟೆ, ಇಳಕಲ್- ಮುಂತಾದ ಊರುಗಳಲ್ಲಿ ಪ್ರವಾಸ ಮಾಡಿಕೊಂಡು ಗೋಕರ್ಣ, ಶಿವಮೊಗ್ಗ ಮಾರ್ಗವಾಗಿ ಹೊಳೆನರಸೀಪುರಕ್ಕೆ ದಯಮಾಡಿಸಿದರು. ಈ ಕಾಲದಲ್ಲಿ ಕಾರ್ಯಾಲಯದಲ್ಲಿ ನಡೆಯಬೇಕಾಗಿದ್ದ ಗೀತಾಜಯಂತಿ, ಬ್ರಹ್ಮಚೈತನ್ಯಾರಾಧನೆ-ಅನುಷ್ಠಾನಗಳನ್ನು ಪಂಡಿತರ ಸಹಾಯದಿಂದ ನಡೆಸಲಾಯಿತು.

### ಕಾರ್ಯಾಲಯಕ್ಕೆ ಸುತ್ತುಗೋಡೆ (ಕಾಂಪೌಂಡು) :

ಕಾರ್ಯಾಲಯದ ಸುತ್ತಲೂ ಕಾಂಪೌಂಡುಗೋಡೆಯನ್ನು ನಿರ್ಮಿಸುವ ಏರ್ಪಾಡನ್ನು ಮಾಡಲಾಯಿತು. ಮಹಾಜನರ ಸಹಾಯದಿಂದ ಈ ಕಾರ್ಯವು ಯಶಸ್ವಿಯಾಗಿ ಮುಂದುವರೆದು ಮುಂದೆ ಸುಮಾರು ಒಂದು ವರ್ಷಕಾಲದಲ್ಲಿ ಪೂರ್ತಿಯಾಯಿತು.

### ವಿದ್ಯಾಇಲಾಖೆಯವರ ಪ್ರೋತ್ಸಾಹ :

ಆಗ್ಗೆ ವಿದ್ಯಾಮಂತ್ರಿಗಳಾಗಿದ್ದ ಶ್ರೀ ಎ.ಜಿ. ರಾಮಚಂದ್ರರಾಯರು ಒಂದುಬಾರಿ ಕಾರ್ಯಾಲಯಕ್ಕೆ ದಯಮಾಡಿಸಿ ಶ್ರೀಶ್ರೀಗಳವರ ಸಂದರ್ಶನವನ್ನು ಪಡೆದು ಸಂಸ್ಥೆಯ ಪುರೋಭಿವೃದ್ಧಿಯನ್ನು ನೋಡಿ ತಮ್ಮ ಸಂತೋಷವನ್ನು ಸೂಚಿಸಿದ್ದರು. ಕಾರ್ಯಾಲಯದವರ ಪ್ರಾರ್ಥನೆಯಂತೆ ಸಂಸ್ಥಾನದ ಎಲ್ಲಾ ಹೈಸ್ಕೂಲು ಮಿಡಲ್‌ಸ್ಕೂಲು ಲೈಬ್ರರಿಗಳಿಗೂ ಶ್ರೀಜಯಚಾಮರಾಜೇಂದ್ರ ಗ್ರಂಥಮಾಲೆಯ ಅಮೋಘಗ್ರಂಥಗಳ ಸೆಟ್ ಒಂದನ್ನು (ಎಂಟು ಗ್ರಂಥಗಳನ್ನು) ಕೊಳ್ಳಬಹುದೆಂದು ವಿದ್ಯಾಇಲಾಖೆಯವರು ಅನುಮತಿಯನ್ನು ನೀಡಿದರು. ಇದರಿಂದ ಗ್ರಂಥಪ್ರಚಾರಕ್ಕೆ ಸ್ವಲ್ಪ ಸಹಾಯವಾಯಿತು.

### ಗ್ರಂಥ ಪ್ರಕಟನೆ :

ಈ ಅವಧಿಯಲ್ಲಿ ಶ್ರೀಜಯಚಾಮರಾಜೇಂದ್ರ ಗ್ರಂಥಮಾಲೆಯ ಬ್ರಹ್ಮಸೂತ್ರಭಾಷ್ಯ-2ನೆಯ ಭಾಗವು ಪ್ರಕಟವಾಯಿತು. ಆತ್ಮಬೋಧ, ಆತ್ಮವಿದ್ಯಾವಿಲಾಸ-ಈ ಗ್ರಂಥಗಳನ್ನು ಮತ್ತೆ ಮುದ್ರಿಸಲಾಯಿತು.

### ಶಂಕರಸಪ್ತಾಹ :

1953ನೆಯ ವರ್ಷದ ಶಂಕರಸಪ್ತಾಹವು ಹೊಳೆನರಸೀಪುರದಲ್ಲಿಯೇ ವಿಜೃಂಭಣೆಯಿಂದ ನಡೆಯಿತು. ಸಪ್ತಾಹಕ್ಕೆ ಮುಂಚೆ ಶ್ರೀಶ್ರೀಗಳವರು ಒಂದುವಾರದ ಕಾಲ **ಹಾನಗಲ್‌ಗೆ** ದಯಮಾಡಿಸಿ ದತ್ತಭಜನೆಯ ಸಪ್ತಾಹಕಾಲದಲ್ಲಿ ಸಾಧನಗಳ ವಿಷಯವಾಗಿ ಉಪದೇಶಗಳನ್ನು

ಅನುಗ್ರಹಿಸಿ ಹಿಂತಿರುಗಿದರು. ಆ ಬಳಿಕ ಮತ್ತೆ ಹಾವೇರಿ ಮಹಾಜನರ ಪ್ರಾರ್ಥನೆಯಂತೆ ಮೂರು ದಿನಗಳ ಕಾಲ ದತ್ತಭಜನಸಪ್ತಾಹದಲ್ಲಿ ಉಪನ್ಯಾಸಗಳನ್ನು ನಡೆಯಿಸಿ ಹಿಂತಿರುಗಿದರು.

## ವಿದ್ಯಾನಿಲಯ :

ವಿದ್ಯಾನಿಲಯಕ್ಕೆ ವೇ|| ಮತ್ತೂರು ಸುಬ್ರಾಯಾವಧಾನಿಗಳ ಪುತ್ರ ಚಿ.ರಾ. ರಾಮಸ್ವಾಮಿ ಎಂಬ ವಿದ್ಯಾರ್ಥಿಯು ಹೊಸದಾಗಿ ಸೇರಿದನು. ಈಗ ಇಬ್ಬರು ವಿದ್ಯಾರ್ಥಿಗಳಿಗೂ ಪಾಠಪ್ರವಚನಗಳನ್ನು ಜೊತೆಯಲ್ಲಿ ಮುಂದುವರೆಸಲಾಯಿತು.

## ಚಾತುರ್ಮಾಸ್ಯ ಸಂಕಲ್ಪ :

ಶ್ರೀಶ್ರೀಗಳವರು ಪರಸ್ಥಳದಲ್ಲಿ ಮೊದಲಬಾರಿಗೆ ಚಾತುರ್ಮಾಸ್ಯ ಸಂಕಲ್ಪವನ್ನು ಹುಬ್ಬಳ್ಳಿಯಲ್ಲಿ ಶ್ರೀಶಿವಾನಂದ ಮಂದಿರದಲ್ಲಿ ನೆರವೇರಿಸಿದರು. ಶ್ರೀಶ್ರೀಗಳು ನೆರವೇರಿಸಿದ ವ್ಯಾಸಪೂಜಾಕಾಲಕ್ಕೆ ಗೋಕರ್ಣದ ಶ್ರೀ ದೇವರಾತಗಜಾನನಶರ್ಮರು ಬಂದಿದ್ದರು. ಜೊತೆಯಲ್ಲಿದ್ದ ಒಬ್ಬ ವಿದ್ಯಾರ್ಥಿಗೆ ಬೆಳಗಿನ ವೇಳೆಯಲ್ಲಿ ಅಲ್ಲಿಯೇ ಪಾಠಗಳನ್ನು ನಡಯಿಸಲಾಗುತ್ತಿತ್ತು. ಸಂಜೆಯವೇಳೆಗಳಲ್ಲಿ ಉಮಾಮಹೇಶ್ವರ ದೇವಾಲಯದಲ್ಲಿ '**ಶ್ರೀ ಶಂಕರಭಗವತ್ಪಾದರ ಸರ್ವಸಮ್ಮತೋಪದೇಶಗಳು**' ಎಂಬ ವಿಷಯದ ಮೇಲೆ ಉಪನ್ಯಾಸಮಾಲೆಯನ್ನು ಶ್ರೀಗಳು ಅನುಗ್ರಹಿಸಿದರು. ಹುಬ್ಬಳ್ಳಿಯ ಮಹಾಜನರೆಲ್ಲರೂ ಅತ್ಯಂತಶ್ರದ್ಧಾಭಕ್ತಿಗಳಿಂದ ಬಂದು ಉಪನ್ಯಾಸಗಳನ್ನು ಕೇಳುತ್ತಿದ್ದರು. ಶ್ರೀಯೋಗೀಶ್ವರ ದತ್ತಮೂರ್ತಿದೀಕ್ಷಿತರೂ, ಹೋರಾಭೂಷಣ ಪಂ. ರಾಮಭಟ್ಟಜ್ಯೋತಿಷಿಯವರೂ ಶ್ರೀಗಳವರ ಸೇವೆಯನ್ನು ಆದರಪೂರ್ವಕವಾಗಿ ನೆರವೇರಿಸಿದರಲ್ಲದೆ ಅನೇಕ ಮಹನೀಯರುಗಳಿಂದ ಪಾದಪೂಜೆ, ಕಾಣಿಕೆ- ಮುಂತಾದ ರೂಪದಲ್ಲಿ ಧನಸಹಾಯವನ್ನೂ ಒದಗಿಸಿಕೊಟ್ಟು ಸಹಾಯಮಾಡಿದರು. ಸೀಮೋಲ್ಲಂಘನದ ದಿನ ಶ್ರೀಶ್ರೀಗಳವರು ಅನುವಾದಮಾಡಿರುವ ಶಾಂಕರಭಾಷ್ಯಗ್ರಂಥಗಳ ಸಮೇತವಾಗಿ ಬ್ಯಾಂಡುವಾದ್ಯಾದಿಗಳಿಂದೊಡಗೂಡಿದ ಮೆರವಣಿಗೆಯಲ್ಲಿ ವಿಶ್ವರೂಪಯಾತ್ರೆಯ ಉತ್ಸವದಿಂದ ಹುಬ್ಬಳ್ಳಿಯ ಪ್ರಮುಖ ಬೀದಿಗಳಲ್ಲಿ ಹೊರಟು ಹಳೆಹುಬ್ಬಳ್ಳಿಯ ಶ್ರೀಕೃಷ್ಣೇಂದ್ರಮಠಕ್ಕೆ ಶ್ರೀಶ್ರೀಗಳವರನ್ನು ಕರೆತಂದರು. ಅಲ್ಲಿ ಶ್ರೀಗಳವರಿಂದ ಉಪಸಂಹಾರಭಾಷಣವೂ ಫಲಮಂತ್ರಾಕ್ಷತೆಗಳ ವಿನಿಯೋಗವೂ ಆದ ಬಳಿಕ ಕಾರ್ಯವು ಸಮಾಪ್ತವಾಯಿತು. ಅಂತೂ ಹುಬ್ಬಳ್ಳಿಯಲ್ಲಿ ನಡೆದ ಚಾತುರ್ಮಾಸ್ಯದ ಉತ್ಸವವು ಸರ್ವರೀತಿಯಿಂದಲೂ ಯಶಸ್ವಿಯಾಯಿತು. ಚಾತುರ್ಮಾಸ್ಯವಾದಮೇಲೆ ಶ್ರೀಗಳವರು ಧಾರವಾಡಕ್ಕೂ ಭೇಟಿಕೊಟ್ಟು ಹೊಳೆನರಸೀಪುರಕ್ಕೆ ದಯಮಾಡಿಸಿದರು.

**ಇತರ ಚಟುವಟಿಕೆಗಳು :**

1953ನೆಯ ವರ್ಷದ ಶರನ್ನವರಾತ್ರಿ, ಗೀತಾಜಯಂತಿ, ಬ್ರಹ್ಮಚೈತನ್ಯರ ಆರಾಧನೆ- ಇವುಗಳು ಎಂದಿನಂತೆ ನಡೆದವು. ಪುರಾಣಶ್ರವಣದಲ್ಲಿ ವಿಷ್ಣುಪುರಾಣವು ಪೂರೈಸಿ ವಾಸಿಷ್ಠರಾಮಾಯಣವು ನಡೆಯುತ್ತಿತ್ತು. ಪಾಠಪ್ರವಚನಗಳು ಇಬ್ಬರು ವಿದ್ಯಾರ್ಥಿಗಳಿಗೂ ಮುಂದುವರೆದು ಉಪನಿಷದ್ಭಾಷ್ಯ ಪಾಠಗಳು ನಡೆಯುತ್ತಿದ್ದವು. ಗೀತೋಪನ್ಯಾಸಗಳು ಮುಗಿದ ಅನಂತರ ಶ್ರೀಗಳವರು ಕಠೋಪನಿಷತ್ತಿನಮೇಲೆ ಪ್ರತಿಭಾನುವಾರವೂ ಉಪನ್ಯಾಸಗಳನ್ನು ನಡೆಯಿಸುತ್ತಿದ್ದರು.

**ಪುಸ್ತಕಪ್ರಕಟನೆ :**

ಶ್ರೀಜಯಚಾಮರಾಜೇಂದ್ರ ಗ್ರಂಥರತ್ನಮಾಲೆಯ **ಬೃಹದಾರಣ್ಯಕೋಪನಿಷದ್ಭಾಷ್ಯ 1ನೆಯ ಸಂಪುಟವು** 1953ನೆಯ ಸೆಪ್ಟೆಂಬರ್ ವೇಳೆಗೆ ಪ್ರಕಟವಾಯಿತು, **ಮುಕುಂದಮಾಲಾ ಸ್ತೋತ್ರ, ಮೋಹಮುದ್ಗರ-** ಈ ಪುಸ್ತಕಗಳನ್ನು ಪುನರ್ಮುದ್ರಣಮಾಡಿಸಲಾಯಿತು.

**ವೇದಾಂತಸಪ್ತಾಹ :**

ಶಂಕರಸಪ್ತಾಹದ ಮಾದರಿಯಲ್ಲಿ ಕರ್ಣಾಟಕದ ಬೇರೆಬೇರೆಯ ಸ್ಥಳಗಳಲ್ಲಿ ಅಧ್ಯಾತ್ಮವಿಚಾರದ ಪ್ರಚಾರಕ್ಕೆ **ವೇದಾಂತಸಪ್ತಾಹವೆಂಬ** ಉತ್ಸವವನ್ನು ಕೈಗೊಳ್ಳಬೇಕೆಂದು ಯೋಚಿಸಿ 1954ನೆಯ ಫೆಬ್ರವರಿ ಮಾಹೆಯಲ್ಲಿ ಬೆಂಗಳೂರಿನಲ್ಲಿ ದೇವಾಂಗಸಂಘ ಸಿಲ್ವರ್‌ಜ್ಯೂಬಿಲಿ ಕಟ್ಟಡದಲ್ಲಿ ಶ್ರೀ ಟಿ.ಹೆಚ್. ಹನುಮಂತಪ್ಪನವರೇ ಮುಂತಾದ ಭಕ್ತಜನರ ಪ್ರೋತ್ಸಾಹದಿಂದ ಒಂದು ಉತ್ಸವವನ್ನು ಏರ್ಪಡಿಸಲಾಯಿತು. ಶಂಕರಸಪ್ತಾಹದಂತೆಯೇ ಬೆಳಗ್ಗೆ ಭಾಷ್ಯಪ್ರವಚನ, ಮಧ್ಯಾಹ್ನ ಪುರಾಣಶ್ರವಣ, ಸಾಯಂಕಾಲ ಉಪನ್ಯಾಸಗಳು- ಹೀಗೆ ಕಾರ್ಯಕ್ರಮಗಳು ನೆರವೇರಿದವು. ಶ್ರೀಶ್ರೀಗಳವರು ಅನುವಾದವನ್ನೂ ಸಂಜೆಯ ಉಪನ್ಯಾಸಗಳನ್ನೂ ನಡೆಯಿಸಿದರು. ಸಪ್ತಾಹವಾದ ಬಳಿಕವೂ ಶ್ರೀಗಳವರು ಶ್ರೀಚಾಮರಾಜೇಂದ್ರ ಸಂಸ್ಕೃತಮಹಾಪಾಠಶಾಲೆಯಲ್ಲಿ ಮೂರು ದಿನಗಳ ಕಾಲ ವೇದಾಂತೋಪನ್ಯಾಸಗಳನ್ನು ಮಾಡಿದರು.

**ಅನುಷ್ಠಾನಗಳು :**

1954ನೆಯ ವರ್ಷದ ರಾಮನವರಾತ್ರಿ ಉತ್ಸವವು ಎಂದಿನಂತೆ ಕಾರ್ಯಾಲಯದಲ್ಲಿಯೇ ನಡೆಯಿತು. **ಶಂಕರಸಪ್ತಾಹವು** ಮೈಸೂರಿನಲ್ಲಿ ಶ್ರೀಪ್ರಸನ್ನ ವಿಶ್ವೇಶ್ವರಸ್ವಾಮಿಯವರ ದೇವಸ್ಥಾನದಲ್ಲಿ ವಿಜೃಂಭಣೆಯಿಂದ ನೆರವೇರಿತು. ಎಲ್ಲಾ ಕಾರ್ಯಕ್ರಮಗಳೂ ತೃಪ್ತಿಕರವಾಗಿ ನಡೆದವು.

## ಶ್ರೀಶ್ರೀಗಳವರ ಪ್ರವಾಸ :

1954ನೆಯ ಜೂನ್ ಮಾಹೆಯಲ್ಲಿ ಶ್ರೀಶ್ರೀಗಳವರು **ಹಾವೇರಿಗೆ** ದತ್ತಭಜನಸಪ್ತಾಹಕ್ಕಾಗಿ ಎರಡನೆಯ ಬಾರಿಗೆ ದಯಮಾಡಿಸಿದ್ದರು. ಒಂದು ವಾರಕಾಲ ಅಲ್ಲಿ ಉಪಾಸನಾಪ್ರಧಾನವಾದ ಉಪನ್ಯಾಸಗಳನ್ನು ಅನುಗ್ರಹಿಸಿದರು. ಬರುವಾಗ ರಾಣಿಬೆನ್ನೂರು, ದಾವಣಗೆರೆಗಳಲ್ಲೂ ಅಧ್ಯಾತ್ಮೋಪದೇಶಗಳನ್ನು ಅನುಗ್ರಹಿಸಿ ಹಿಂತಿರುಗಿದರು.

## ದಿ|| ಕೆ.ಎನ್. ವಿಶ್ವೇಶ್ವರಯ್ಯನವರು :

ಶ್ರೀಶ್ರೀಗಳವರ ಆಪ್ತಶಿಷ್ಯರಲ್ಲಿ ಅರಸೀಕೆರೆ ತಿಮ್ಮಪ್ಪದಾಸರ ಮಕ್ಕಳು ಶ್ರೀ ಕೆ. ನಾರಣಪ್ಪನವರೆಂಬುವರು ಒಬ್ಬರು. ಶ್ರೀ ತಿಮ್ಮಪ್ಪದಾಸರು ಶ್ರೀಗಳವರಿಗೆ ಪೂರ್ವಾಶ್ರಮದಿಂದಲೂ ಚಿರಪರಿಚಿತರಾಗಿದ್ದವರು. ಅವರ ಮಗ ಶ್ರೀ ಕೆ. ನಾರಣಪ್ಪನವರೂ ಸಾಧಾರಣ ಸ್ಕೂಲುಮಾಸ್ತರಾಗಿದ್ದರೂ ಗೋಂದಾವಳಿಯ ಮಹಾರಾಜರ ಭಕ್ತರಾಗಿದ್ದು ರಾಮನಾಮ ಜಪನಿಷ್ಠರಾದ ಒಬ್ಬ ಸತ್ಪುರುಷರು. ಇವರ ಪುತ್ರರೇ ಶ್ರೀ ವಿಶ್ವೇಶ್ವರಯ್ಯನವರು. ಇವರು ಸಂಗೀತವಿದ್ವಾಂಸರಾಗಿದ್ದು ಸರ್ಕಾರಿ ಉದ್ಯೋಗದಲ್ಲಿದ್ದರು. ತಮ್ಮ ಅಜ್ಜನವರಂತೆಯೇ ಹರಿಕಥೆಗಳನ್ನು ಮಾಡುತ್ತಿದ್ದರು. ಕೇವಲ ಹನ್ನೆರಡು ವರ್ಷದ ಬಾಲಕರಾಗಿದ್ದಾಗಲೇ ಇವರು ತಂದೆಯ ಜೊತೆಯಲ್ಲಿ ಶ್ರೀಗಳು ಏರ್ಪಡಿಸುತಿದ್ದ ಶಂಕರಸಪ್ತಾಹದಲ್ಲಿ ಭಾಗವಹಿಸಿ ಹರಿಕಥೆಮಾಡಿದ್ದರು. ಅನಂತರ ಒಂದು ವರ್ಷವೂ ತಪ್ಪದೆ ಸಪ್ತಾಹವು ಯಾವ ಊರಿನಲ್ಲಿಯೇ ನಡೆಯಲಿ, ಅಲ್ಲಿಗೆ ತಂದೆಯವರೊಡನೆ ಬಂದು ಭಜನೆಯಲ್ಲಿ ಭಾಗವನ್ನು ವಹಿಸುತ್ತಿದ್ದರು. ಶ್ರೀಗಳವರು ರಚಿಸಿದ **"ಅಧ್ಯಾತ್ಮಗೀತಾವಳಿ"** ಯ ಹಾಡುಗಳನ್ನು ರಾಗತಾಳಬದ್ಧವಾಗಿ ಸುಶ್ರಾವ್ಯವಾಗಿ ಭಾವಪೂರ್ಣವಾಗಿ ಹಾಡುವದರಲ್ಲಿ ಇವರದು ಎತ್ತಿದ ಕೈ. ಇಂಥ ಮಹನೀಯರು ಇನ್ನೂ ಚಿಕ್ಕವಯಸ್ಸಿನಲ್ಲಿಯೇ ಮಾತಾಪಿತೃಗಳನ್ನೂ ಪತ್ನೀಪುತ್ರರನ್ನೂ ಬಿಟ್ಟು ತಾ. 16.6.52ರಲ್ಲಿ ದೈವಾಧೀನರಾದರು. ಇವರ ವಿಯೋಗದಿಂದ ಇನ್ನು ಮುಂದಿನ ಸಪ್ತಾಹಗಳಲ್ಲಿ ಭಜನೆಯ ಕಳೆಯೇ ಕುಂದಿದಂತಾಯಿತು. ದೈವಗತಿಯು ವಿಚಿತ್ರ!

## ಇತರ ಚಟುವಟಿಕೆಗಳು :

ಈ ವರ್ಷದ ಚಾತುರ್ಮಾಸ್ಯ ಸಂಕಲ್ಪವನ್ನು ಶ್ರೀಗಳು ಹೊಳೆನರಸೀಪುರದಲ್ಲೇ ನೆರವೇರಿಸಿದರು. 1954ನೆಯ ಅಕ್ಟೋಬರ್‌ಮಾಹೆಯ ವೇಳೆಗೆ ಶ್ರೀಜಯಚಾಮರಾಜೇಂದ್ರ ಗ್ರಂಥರತ್ನಮಾಲೆಯಲ್ಲಿ ಬೃಹದಾರಣ್ಯಕೋಪನಿಷದ್ಭಾಷ್ಯದ 2 ನೆಯ ಸಂಪುಟವನ್ನು ಪ್ರಕಟಿಸಲಾಯಿತು. ಬೆಂಗಳೂರಿನಲ್ಲಿ ನಡೆದ ವೇದಾಂತಸಪ್ತಾಹದ ಕೊನೆಯಲ್ಲಿ ಶ್ರೀಗಳು ಮಾಡಿದ ಮೂರು ಉಪನ್ಯಾಸಗಳನ್ನು 'ವೇದಾಂತವೂ ಆಧುನಿಕಜನಜೀವನವೂ' ಎಂಬ ಹೆಸರಿನ ಸಣ್ಣಗ್ರಂಥದ ರೂಪದಲ್ಲಿ ಹೊರತರಲಾಯಿತು. ಹುಬ್ಬಳ್ಳಿಯಲ್ಲಿ ನಡೆದ ಚಾತುರ್ಮಾಸ್ಯದ

ಉಪನ್ಯಾಸಗಳನ್ನು '**ಶಂಕರಭಗವತ್ಪಾದರ ಸರ್ವಸಮ್ಮತೋಪದೇಶಗಳು**' ಎಂಬ ಹೆಸರಿನಿಂದ ಪತ್ರಿಕೆಯಲ್ಲಿ ಸ್ವತಂತ್ರಪುಟಗಳಾಗಿ ಪ್ರಕಟಿಸಿ ಅನಂತರ ಪುಸ್ತಕರೂಪವಾಗಿಯೂ ಪ್ರಕಟಿಸಲಾಯಿತು. ಪತ್ರಿಕೆಯಲ್ಲಿ ಸಣ್ಣ ಸಣ್ಣ ಲೇಖನಗಳನ್ನು ಹೆಚ್ಚಿಸುವ ಉದ್ದೇಶದಿಂದ ಎಂಟು ಪುಟಗಳನ್ನು ಹೆಚ್ಚಿಸಲಾಯಿತು.

## ಶ್ರೀಶೃಂಗೇರಿಜಗದ್ಗುರುಶಾರದಾಪೀಠ :

ಈ ಪೀಠವನ್ನಲಂಕರಿಸಿ ಸುವಿಖ್ಯಾತರಾಗಿದ್ದ ಪೂಜ್ಯತಪಸ್ವಿ **ಶ್ರೀಶ್ರೀ ಚಂದ್ರಶೇಖರಭಾರತೀ ಮಹಾಸ್ವಾಮಿಗಳು** ತಾ. 28.9.1954ರಂದು ಪ್ರಾತಃಕಾಲ ಜಲಸಮಾಧಿಯನ್ನು ಹೊಂದಿ ಬ್ರಹ್ಮೀಭೂತರಾದರೆಂಬ ವಾರ್ತೆಯು ಎಲ್ಲೆಲ್ಲಿಯೂ ಹರಡಿತು. ಇದರಿಂದ ಶಿಷ್ಯಕೋಟಿಯೆಲ್ಲ ದುಃಖಸಾಗರದಲ್ಲಿ ಮುಳುಗಿತು. ಆಗ್ಗೆ ಶ್ರೀಶ್ರೀಗಳವರು ಬ್ರಹ್ಮೀಭುತರಾದ ಜಗದ್ಗುರುಗಳ ಬಗ್ಗೆ ಈ ರೀತಿ ತಿಳಿಸಿದರು: "ಬ್ರಹ್ಮನಿಷ್ಠರಾದ ಮಹನೀಯರು ಶರೀರದಲ್ಲಿರುವಾಗಲೂ ಜ್ಞಾನದೃಷ್ಟಿಯಿಂದ ಅಶರೀರರೇ ಎಂದು ವೇದಾಂತವು ಸಾರುತ್ತಿರುವದು. ಈ ಜಗದ್ಗುರುಗಳು ಅವ್ಯಕ್ತರೂಪದಿಂದ ಅಖಿಲರ ಹೃದಯುದಲ್ಲಿಯೂ ಇದ್ದುಕೊಂಡು ಸನ್ಮಾರ್ಗಕ್ಕೆ ಪ್ರೇರಕರಾಗಿರಲಿ-ಎಂದು ನಾವು ಪ್ರಾರ್ಥಿಸುವೆವು". ಮುಂದೆ ಶ್ರೀಗಳವರ ಕರಕಮಲಸಂಜಾತರಾದ ಶ್ರೀಮದಭಿನವವಿದ್ಯಾತೀರ್ಥಮಹಾಸ್ವಾಮಿಗಳು ತಾ. 16.10.54ರಂದು ಜಗದ್ಗುರು ಪೀಠದಲ್ಲಿ ಪಟ್ಟಾಭಿಷಿಕ್ತರಾದರು. ಇವರು ತಾ. 21.9.89ರಲ್ಲಿ ಬ್ರಹ್ಮೀಭೂತರಾದ ಮೇಲೆ ಈಗ ಶ್ರೀಬಾರತೀತೀರ್ಥಸ್ವಾಮಿಗಳು ಜಗದ್ಗುರುಪೀಠವನ್ನು ಅಲಂಕರಿಸಿದ್ದಾರೆ.

## ವಿದ್ಯಾರ್ಥಿಗಳಿಗೆ ಊಟದ ಏರ್ಪಾಡು :

ಹೊಸದಾಗಿ ಕೊಂಡಿದ್ದ ಗದ್ದೆಯಿಂದ ಭತ್ತವು ಬರಲು ಆರಂಭವಾದೊಡನೆಯೇ ವಿದ್ಯಾರ್ಥಿಗಳಿಗೆ ಕಾರ್ಯಾಲಯದಲ್ಲಿಯೇ ಭೋಜನಸೌಕರ್ಯವನ್ನು ಏರ್ಪಡಿಸಲಾಯಿತು. ಈವರೆಗೂ ಓದುತ್ತಿದ್ದ ವಿದ್ಯಾರ್ಥಿಗಳು ವಾರಮಾಡಿಕೊಂಡೇ ವಿದ್ಯಾಭ್ಯಾಸವನ್ನು ಮಾಡುತ್ತಿದ್ದರು. ಹೊಳೆನರಸೀಪುರದ ಮಹಾಜನರು ವಿದ್ಯಾರ್ಥಿಗಳಿಗೆ ವಾರಗಳನ್ನು ಕೊಟ್ಟು ಉಪಕಾರ ಮಾಡಿದ್ದರು. ಇನ್ನುಮುಂದೆ ವಿದ್ಯಾರ್ಥಿಗಳು ವಾರದ ವ್ಯವಸ್ಥೆಯನ್ನು ಅನುಸರಿಸುವದನ್ನು ಬಿಟ್ಟು ಕಾರ್ಯಾಲಯದಲ್ಲಿಯೇ ಭೋಜನಮಾಡಲಾರಂಭಿಸಿದರು.

## ಅಧ್ಯಾತ್ಮಪ್ರಕಾಶ ಮುದ್ರಣಾಲಯ :

ಮುದ್ರಣಾಲಯಕ್ಕೆ ಸಂಸ್ಕೃತ ದೇವನಾಗರೀ ಟೈಪುಗಳನ್ನು ಕೊಂಡು ಕಂಪೋಜಿಂಗ್ ಶಾಖೆಯನ್ನು ವಿಸ್ತರಿಸಲಾಯಿತು. ಸಂಸ್ಕೃತಭಾಷೆಯಲ್ಲಿ ಶ್ರೀಶ್ರೀಗಳವರು ಬರೆದಿದ್ದ '**ಸುಗಮಾ**' ಎಂಬ ಗ್ರಂಥವನ್ನು ಪ್ರಕಟಿಸಲು ಆರಂಭಿಸಲಾಯಿತು.

ಈವರೆಗಿನ ಕಾರ್ಯಾಲಯದ ಚರಿತ್ರೆಯಿಂದ ತಿಳಿದುಬರುವದೇನೆಂದರೆ: ಸಮಯೋಚಿತವಾಗಿ ಅಪ್ರಾರ್ಥಿತವಾಗಿ ಒದಗಿದಷ್ಟು ಸಹಾಯಸನ್ನಿವೇಶಗಳು, ಜನಗಳ ಉತ್ಸಾಹ-ಇವುಗಳನ್ನೇ ಉಪಯೋಗಿಸಿಕೊಂಡು ಶ್ರೀಶ್ರೀಗಳವರು ಸಂಸ್ಥೆಯನ್ನು ಪುರೋಭಿವೃದ್ಧಿಯ ಹಾದಿಯಲ್ಲಿ ನಡೆಯಿಸಿರುತ್ತಾರೆ. ಕಾರ್ಯಾಲಯವು ಪ್ರಾರಂಭವಾದಂದಿನಿಂದ 1954ರ ಸಮಾಪ್ತಿಯವರೆಗೆ ನಡೆದಿರುವ ಕೆಲಸಗಳ ವಿವರ ಹಾಗೂ ಅಭಿವೃದ್ಧಿಯನ್ನು ತೋರಿಸುವ ಒಂದು ವರದಿಯನ್ನೂ ಸಹ ಈ ವರ್ಷದಲ್ಲಿ (1954) ಪ್ರಕಟಿಸಲಾಯಿತು. ಇನ್ನುಮುಂದೆ ಸಂಸ್ಥೆಯು ಯಾವ ರೀತಿಯಲ್ಲಿ ಮುಂದುವರಿಯಿತೆಂಬುದನ್ನು ತಿಳಿಸುತ್ತಾ ಹೋಗಲಾಗುವದು.

# ೧೯. ಪ್ರಗತಿಯ ಪಥದಲ್ಲಿ
# (1955-60)

**ಶ್ರೀಶ್ರೀಗಳವರ ಪ್ರವಾಸ :**

ಗುಜರಾತ್‌ಪ್ರಾಂತ್ಯದ ವಲಾದ್-ಎಂಬಲ್ಲಿರುವ ವೇದಾಂತಾಶ್ರಮದ **ಶ್ರೀಸ್ವಾಮಿ ಮಾಧವತೀರ್ಥರ** ಆಹ್ವಾನದಂತೆ, ಶ್ರೀಶ್ರೀಗಳವರು ಮಿತಪರಿವಾರದೊಡನೆ ಹೊರಟು ಬೊಂಬಾಯಿ, ನಾಸಿಕ, ತ್ರ್ಯಂಬಕ, ಪಂಡರಾಪುರ, ಕೊಲ್ಲಾಪುರ, ನರಸೋಬವಾಡಿ-ಮುಂತಾದ ಸ್ಥಳಗಳಲ್ಲಿ ಸಂಚರಿಸಿಕೊಂಡು ಬಂದರು. ಬೊಂಬಾಯಿನಲ್ಲಿ ಶ್ರೀಮಾಧವತೀರ್ಥರು ಶ್ರೀಶ್ರೀಗಳವರನ್ನು ಒಂದು ವಾರಕಾಲ ಇರಿಸಿಕೊಂಡು ತಮಗೆ ಪರಿಚಯವಿದ್ದವರಲ್ಲೆಲ್ಲ ಶ್ರೀಗಳವರ ವಿಚಾರವನ್ನು ಹರಡಿದರು. ತಮಗೆ 'ಮೂಲಾವಿದ್ಯಾನಿರಾಸ' ಗ್ರಂಥದಲ್ಲಿ ಸಂಶಯವುಂಟಾಗಿದ್ದ ಸ್ಥಳಗಳಲ್ಲಿ ಶ್ರೀಗಳವರೊಡನೆ ಚರ್ಚಿಸಿ ಅಭಿಪ್ರಾಯ ವಿನಿಮಯ ಮಾಡಿಕೊಂಡರು. ಇದರಿಂದ ಗುಜರಾತ್ ಪ್ರಾಂತ್ಯದಲ್ಲಿ ಶ್ರೀಗಳವರ ಅಭಿಪ್ರಾಯಗಳು ಸ್ವಲ್ಪಮಟ್ಟಿಗೆ ಹರಡಲು ಅವಕಾಶವಾಯಿತು.

**ಶಂಕರಸಪ್ತಾಹ :**

**1955ನೆಯ ವರ್ಷದ ಶಂಕರ ಸಪ್ತಾಹ ಮಹೋತ್ಸವವು ಹೊಸಪೇಟೆಯಲ್ಲಿ** ಬಹಳ ವಿಜೃಂಭಣೆಯಿಂದ ನಡೆಯಿತು. ವೈಶಾಖ ಶುಕ್ಲದಶಮೀ ಅನಂತರ ಉತ್ಸವವು ಪೂರ್ಣಿಮೆಯವರೆಗೆ ಮುಂದುವರೆದು ಅಮರಾವತಿ(ಹೊಸಪೇಟೆಯ ಒಂದು ಬಡಾವಣೆ)ಯಲ್ಲಿರುವ ಶ್ರೀ **ಗೌರೀಪುರಚಿಂತಾಮಣಿ ಮಠದಲ್ಲಿ ಶ್ರೀಶ್ರೀಮದವಿರಲಪರಂಜ್ಯೋತಿಃಸ್ವರೂಪ ಶ್ರೀ ಶ್ರೀನಿವಾಸ ಸದಾನಂದ ಚಿಂತಾಮಣೀಸ್ವಾಮಿಗಳ** ಅಧ್ಯಕ್ಷತೆಯಲ್ಲಿ ನಡೆಯಿತು. ಕಾರ್ಯಾಲಯದವರ ಪದ್ಧತಿಯಂತೆ ದ್ವಾದಶೀದಿನ ಕಾರ್ಯಕ್ರಮಗಳು ಸಮಾಪ್ತವಾದರೂ ನಾರಾಯಣದೇವರಕೆರೆ ಶಂಕರಾಚಾರ್ಯೋತ್ಸವಸಭೆಯವರು ಕೇಳಿಕೊಂಡ ಪ್ರಕಾರ ಶ್ರೀಶ್ರೀಗಳವರೂ ಕೆಲವು ವಿದ್ವಾಂಸರೂ ಪೂರ್ಣಿಮೆಯವರೆಗೂ ನಿಂತು ಪ್ರವಚನಾದಿಗಳನ್ನು ನಡೆಯಿಸಿದರು. ಈ ಉತ್ಸವದಲ್ಲಿ ಗೌರೀಪುರಮಠಾಧೀಶರು ಕಾರ್ಯಾಲಯದ ಪಂಡಿತ ಶ್ರೀ ಲಕ್ಷ್ಮೀನರಸಿಂಹಮೂರ್ತಿಗಳಿಗೆ (ಈ ಲೇಖಕನಿಗೆ) ಅವರ ವಿದ್ವತ್ತನ್ನು ಮೆಚ್ಚಿ ಒಂದು ಶಾಲನ್ನು ಬಹುಮಾನವಾಗಿ ಅನುಗ್ರಹಿಸಿದರು. ಶ್ರೀ ಸ್ವಾಮಿಗಳವರ ಪ್ರೇರಣೆಯಂತೆ ಅವರ ಶಿಷ್ಯರಾದ ಶ್ರೀ ಎ. ವೆಂಕೋಬರಾಯರೆಂಬ ಸದ್‌ಗೃಹಸ್ಥರು ಹೊಸಪೇಟೆಯಲ್ಲಿ ಸುಮಾರು ಒಂದು ಎಕರೆಯಷ್ಟು ತರೀಜಮೀನನ್ನು ಶ್ರೀ ದಿಗ್ವಿಜಯರಾಮದೇವರ ನೈವೇದ್ಯಕ್ಕೆ - ಎಂತ ಉದಾರವಾಗಿ ಕಾರ್ಯಾಲಯಕ್ಕೆ ದಾನವಾಗಿ ಕೊಟ್ಟರು. ಸಪ್ತಾಹವು ಪೂರೈಸಿದ ಬಳಿಕ ಶ್ರೀಶ್ರೀಗಳು ಹೊಳೆನರಸೀಪುರಕ್ಕೆ ದಯಮಾಡಿಸಿದರು.

**ಹೊಸ ಸೈಟು :**

ಕಾರ್ಯಾಲಯದ ನೈರುತ್ಯದಿಕ್ಕಿನಲ್ಲಿದ್ದ ಒಂದು ಸೈಟು ಕಾರ್ಯಾಲಯದ ಸೈಟುಗಳಿಗೆ ಹೊಂದಿಕೊಂಡಿದ್ದು ಈವರೆಗೂ ಆಶ್ರಮಕ್ಕೆ ಸೇರದೆ ಇತ್ತು. ಇದನ್ನು ಈ ಅವಧಿಯಲ್ಲಿ ಮಾಲಿಕರಿಂದ ಕೊಂಡುಕೊಳ್ಳಲಾಯಿತು. ಇದರಿಂದ ಕಾರ್ಯಾಲಯದ ಆವರಣವು ಚೌಕವಾದ ಆಕಾರವನ್ನು ಹೊಂದಿ ನಾಲ್ಕುದಿಕ್ಕುಗಳಲ್ಲಿಯೂ ರಸ್ತೆಯನ್ನು ಹೊಂದಿದಂತಾಯಿತು.

**ಪುಸ್ತಕಪ್ರಕಟನೆ :**

**ವೇದಾಂತಪ್ರವೇಶಿಕೆ, ದೃಗ್‌ದೃಶ್ಯವಿವೇಕ, ಮೋಹಮುದ್ಗರ, ಶಂಕರಮಹಾಮನನ, ಮುಕುಂದಮಾಲಾ, ಸಮುದ್ರಮಥನ**-ಈ ಕನ್ನಡ ಗ್ರಂಥಗಳು ಈ ವೇಳೆಗೆ ಪುನರ್ಮುದ್ರಿತವಾಗಿ ಪ್ರಕಟವಾಗಿದ್ದವು.

**ಅನುಷ್ಠಾನಗಳು :**

1955ನೆಯ ವರ್ಷದ **ರಾಮನವರಾತ್ರಿ, ಶರನ್ನವರಾತ್ರಿ, ಗೀತಾಜಯಂತಿ, ಬ್ರಹ್ಮಚೈತನ್ಯರ ಆರಾಧನೆಗಳು**-ಕಾರ್ಯಾಲಯದಲ್ಲಿ ಎಂದಿನಂತೆ ಸಾಂಗವಾಗಿ ನೆರವೇರಿದವು. ಚಾತುರ್ಮಾಸ್ಯಸಂಕಲ್ಪವು ಮಾತ್ರ ಈ ವರ್ಷ ದಾವಣಗೆರೆಯ ಮಹಾಜನರ ಆಹ್ವಾನದಂತೆ **ದಾವಣಗೆರೆ ಶ್ರೀಶಿವಾನಂದತೀರ್ಥಗುರು ಆಧ್ಯಾತ್ಮಮಂದಿರದಲ್ಲಿ** ನೆರವೇರಿತು. ಅಲ್ಲಿ ಪ್ರತಿ ದಿನವೂ ಸಂಜೆ ಉಪನ್ಯಾಸಗಳು ಶ್ರೀಗಳವರಿಂದ ನೆರವೇರುತ್ತಿದ್ದವು. ಬೆಳಗಿನ ವೇಳೆಯಲ್ಲಿ ಶ್ರೀ **ದೇವರಾಯಕುಲಕರ್ಣಿಯವರಿಂದ** ಪ್ರವಚನವು ನಡೆಯುತ್ತಿತ್ತು. ಚಾತುರ್ಮಾಸ್ಯವ್ರತವು ಪೂರೈಸಿದಮೇಲೆ ಶ್ರೀಗಳವರು ಹೊಳೆನರಸೀಪುರಕ್ಕೆ ದಯಮಾಡಿಸಿದರು.

**ಲೆಕ್ಕಪತ್ರಗಳ ತನಿಖೆ :**

ಕಾರ್ಯಾಲಯವು ಪ್ರಾರಂಭವಾದಾಗಿನಿಂದ 1948ರ ಜೂನ್ ಮಾಹೆಯವರೆಗೆ ಈ ಸಂಸ್ಥೆಗೆ ಶ್ರೀಶ್ರೀಗಳವರೇ ಅಧ್ಯಕ್ಷರಾಗಿದ್ದುದರಿಂದ ಲೆಕ್ಕಪತ್ರಗಳನ್ನೇನೋ ಇಡಲಾಗಿತ್ತಾದರೂ ಯಾವರೀತಿಯಾದ ಪರಿಶೋಧನೆಯಾಗಲಿ ತನಿಖೆಯಾಗಲಿ ಅನವಶ್ಯವೆಂತ ಭಾವಿಸಿ ಆಡಿಟ್ ಮಾಡಿಸಿರಲಿಲ್ಲ. ಆಡಳಿತವು ಕಾರ್ಯಕಾರಿಸಮಿತಿಯವರ ವಶಕ್ಕೆ ಬಂದಮೇಲೆ ಸರಿಯಾದ ಅಕೌಂಟೆಂಟರು ಯಾರೂ ಇಲ್ಲದೆ ಲೆಕ್ಕಗಳೆಲ್ಲ ಅಪೂರ್ಣವಾಗಿದ್ದು ಬಹಳ ಅಸಮಗ್ರಸ್ಥಿತಿಯಲ್ಲಿದ್ದವು. ಶ್ರೀ ಲಕ್ಷ್ಮೀನರಸಿಂಹಮೂರ್ತಿಗಳು ಪಂಡಿತರಾಗಿ ನೇಮಿಸಲ್ಪಟ್ಟ ಮೇಲೆ ಕಾರ್ಯಾಲಯದ ಮುಖ್ಯವಾದ ಕಾಗದಪತ್ರ ವ್ಯವಹಾರಗಳನ್ನೂ ಲೆಕ್ಕಪತ್ರಗಳ ನಿರ್ವಹಣೆಯನ್ನೂ ಸಮಿತಿಯವರು ಇವರಿಗೆ ವಹಿಸಿದರು. ಇವರು ವಿದ್ಯಾರ್ಥಿಯಾಗಿದ್ದಾಗಲೇ ಈ ಕೆಲಸಗಳಲ್ಲಿ ಸಾಕಷ್ಟು ಪರಿಶ್ರಮವನ್ನು ಪಡೆದಿದ್ದರು. ಆಮೇಲೆ ಕಾರ್ಯಾಲಯಕ್ಕೆ ದಯಮಾಡಿಸಿದ್ದ ಶ್ರೀಶ್ರೀಗಳವರ

ಪೂರ್ವಾಶ್ರಮದ ಸ್ನೇಹಿತರಾದ ಶ್ರೀ ಟಿ. ರಾಮಕೃಷ್ಣಯ್ಯನವರು, ಎಂ.ಎ., ಎಂ.ಕಾಮ್., ಆಡಿಟರ್ - ರವರು ಇವರಿಗೆ ಸೂಕ್ತ ಸಲಹೆಗಳನ್ನೂ ಸೂಚನೆಗಳನ್ನೂ ಕೊಟ್ಟು ಲೆಕ್ಕಪತ್ರಗಳನ್ನು ಕ್ರಮವಾಗಿ ಬರೆದು ಬ್ಯಾಲೆನ್ಸ್‌ಷೀಟು ಮಾಡುವ ಕ್ರಮಗಳನ್ನು ತಿಳಿಯಿಸಿಕೊಟ್ಟರು. ಇದರಿಂದ ಕಾರ್ಯಾಲಯದ ಲೆಕ್ಕಗಳೆಲ್ಲ ಒಂದು ನಿಷ್ಕೃಷ್ಟವಾದ ರೂಪಕ್ಕೆ ಬರಲು ಸಾಧ್ಯವಾಯಿತು. 1955ನೆಯ ಆಗಸ್ಟ್ ಮಾಹೆಯವೇಳೆಗೆ ಶ್ರೀ ಲಕ್ಷ್ಮೀನರಸಿಂಹಮೂರ್ತಿಗಳು ಶ್ರಮವನ್ನು ವಹಿಸಿ ಎಲ್ಲಾ ಲೆಕ್ಕಗಳನ್ನೂ ಪರಿಶೀಲಿಸಿ ಕೆಲವನ್ನು ಹೊಸದಾಗಿಯೂ ಬರೆದು ತಯಾರಿಸಿ ಲೋಪದೋಷಗಳನ್ನು ಸರಿಪಡಿಸಿ ಪ್ರಪ್ರಥಮವಾಗಿ ಬ್ಯಾಲೆನ್ಸ್ ಷೀಟನ್ನು ಸಿದ್ಧಗೊಳಿಸಿದರು. ಆ ಬಳಿಕ ತನಿಖೆಗಾಗಿ ಬೆಂಗಳೂರಿಗೆ ಶ್ರೀ ಟಿ. ರಾಮಕೃಷ್ಣಯ್ಯನವರ ಆಫೀಸಿಗೆ ತೆಗೆದುಕೊಂಡುಹೋದರು. ಶ್ರೀ ಟಿ. ರಾಮಕೃಷ್ಣಯ್ಯನವರು ಸುಮಾರು 12 ದಿನಗಳ ಕಾಲ ಆಮೂಲಾಗ್ರವಾಗಿ ಎಲ್ಲಾ ಲೆಕ್ಕಗಳನ್ನೂ ಶೋಧಿಸಿ ಅನಂತರ ಸರ್ಟಿಫೈ ಮಾಡಿದರು. ಅವರು ಆಗ ತಾ. 20-8-55ರಲ್ಲಿ ಶ್ರೀಶ್ರೀಗಳವರಿಗೆ ಬರೆದಿರುವ ಪತ್ರದಲ್ಲಿ ಈ ರೀತಿ ತಿಳಿಸಿದ್ದಾರೆ.

``Revered Swamiji, Just now I have completed the audit of accounts of Adhyatma Prakasha Karyalaya..... satisfied myself, and then certified. Mr. Narasimha Murthy, though a lay-man for this kind of work, has done exceedingly good work and has earned my appreciation. Hope this finds you in good state of health.

It is beyond my scope to say what a grand work you have done and have been doing for the benefit of mankind."

ಈ ಮಹನೀಯರು ಯಾವ ಗೌರವಧನವನ್ನೂ ಸ್ವೀಕರಿಸದೆ ಉಚಿತವಾಗಿ ಕಾರ್ಯಾಲಯದ ಲೆಕ್ಕಗಳೆಲ್ಲವನ್ನೂ ಪರಿಶೀಲಿಸಿ ಸಹಾಯಮಾಡಿದರು. ಆಡಿಟರ್‌ರವರ ಅನುಮತಿಯನ್ನು ಪಡೆದ ಬ್ಯಾಲೆನ್ಸ್‌ಷೀಟಿನ ಅಂಕಿ ಅಂಶಗಳ ಪ್ರಕಾರ ಕಾರ್ಯಾಲಯದ ಒಟ್ಟು ಆಸ್ತಿಯು ಆಗ್ಗೆ **ಒಂದುಲಕ್ಷರೂಪಾಯಿಗಳಿಗೂ ಮೀರಿತ್ತು.**

ವಾಚಕ ಮಹಾಶಯರಿಗೆ ಈ ಸಂದರ್ಭದಲ್ಲಿ ಮತ್ತೊಂದು ವಿಚಾರವನ್ನು ತಿಳಿಸಬೇಕಾಗಿದೆ.: ಶ್ರೀಶ್ರೀಗಳವರ ಮೇಲ್ವಿಚಾರಣೆಯಲ್ಲಿಯೇ ಕಾರ್ಯಾಲಯವು ಸಾಗಿಬಂದಿತ್ತಾದ್ದರಿಂದ ಈವರೆಗೆ ಮಹಾಜನರು ಸಮರ್ಪಿಸಿದ್ದ ಯಾವದೇ ಮೊಬಲಗಿಗಾಗಲಿ ಲುಪ್ತವಾಗುವ ಅವಕಾಶವೇ ಇರಲಿಲ್ಲ ಆದರೆ ಲೆಕ್ಕಪತ್ರಗಳನ್ನು ಇಡುವ ಕ್ರಮವು ಗೊತ್ತಿಲ್ಲದಿರುವದು, ಅನನುಭವಿಗಳಾದ ಒಬ್ಬಿಬ್ಬರು ಗುಮಾಸ್ತರು ಚಿಕ್ಕಚಿಕ್ಕ ಅವಧಿಗಳಲ್ಲಿದ್ದು ಕೆಲಸವನ್ನು ಅಪೂರ್ಣವಾಗಿ ಮಾಡಿ ಕೈಬಿಟ್ಟದ್ದು. ಕೆಲವು ಕಾಲ ಯಾರೂ ಗುಮಾಸ್ತರುಗಳೇ ಇಲ್ಲದೆ ಹೋದದ್ದು-ಇಂಥ ಕಾರಣಗಳಿಂದ ಲೆಕ್ಕಗಳ ಇಡುವಿಕೆಯಲ್ಲಿ ಅಪೂರ್ಣಸ್ಥಿತಿಯು ಇತ್ತೇ ಹೊರತು ಮತ್ತೇನೂ ಲೋಪದೋಷಗಳು ಸಂಭವಿಸಿರಲಿಲ್ಲ. ಇಂಥ ಅಸಮಗ್ರ ಪರಿಸ್ಥಿತಿಯನ್ನೂ ಸಹ ಈ ವೇಳೆಗೆ ಪರಿಹರಿಸಿ

ಕಾರ್ಯಾಲಯದ ಲೆಕ್ಕಗಳನ್ನು ಕನ್ನಡಿಯಂತೆ ಚೊಕ್ಕವಾಗಿ ಅಚ್ಚುಕಟ್ಟಾಗಿ ಇಡುವ ವ್ಯವಸ್ಥೆಯು ಆಚರಣೆಗೆ ಬಂದಿತು. ಇದರಿಂದ ಮಹಾಜನರಿಗೆ ಸಂಸ್ಥೆಯಲ್ಲಿ ಹೆಚ್ಚಿನ ವಿಶ್ವಾಸವೂ ಆದರವೂ ಉಂಟಾಗುವದಕ್ಕೆ ಕಾರಣವಾಯಿತು.

## ಗ್ರಂಥಪ್ರಕಟನೆ :

1955ನೆಯ ಡಿಸೆಂಬರ್ ವೇಳೆಗೆ ಶ್ರೀಶ್ರೀಗಳವರು ಬ್ರಹ್ಮಸೂತ್ರ ಅಧ್ಯಾಸ ಭಾಷ್ಯದಮೇಲೆ ಬರೆದಿದ್ದ 'ಸುಗಮಾ' ಎಂಬ ಸಂಸ್ಕೃತವ್ಯಾಖ್ಯಾನಗ್ರಂಥವು ಪ್ರಕಟವಾಯಿತು. ಶ್ರೀಶ್ರೀಗಳು ದಾವಣಗೆರೆ ಚಾತುರ್ಮಾಸ್ಯ ಕಾಲದಲ್ಲಿ ಬರೆದಿದ್ದ **'ಶಾಂಕರವೇದಾಂತಪ್ರಕ್ರಿಯೆ'** ಎಂಬ ಕನ್ನಡ ಪುಸ್ತಕವೊಂದು ಪತ್ರಿಕೆಯ ಮೂಲಕ ಹೊರಬಿದ್ದಿತು. ಈ ಪುಸ್ತಕದ ಸುಮಾರು 800 ಪ್ರತಿಗಳನ್ನು ಪ್ರಚಾರದೃಷ್ಟಿಯಿಂದ ಮೂಲಬೆಲೆ (Cost Price) ಗೆ ಮಹಾಜನರಿಗೆ ಹಂಚಲಾಯಿತು.

## ಬೇರೆಯ ಚಟುವಟಿಕೆಗಳು :

ಈ ಅವಧಿಯಲ್ಲಿ ವಿದ್ಯಾರ್ಥಿಗಳಿಗೆ ಪಾಠಪ್ರವಚನಗಳು, ಪುರಾಣಶ್ರವಣ, ಭಾನುವಾರದ ಉಪನ್ಯಾಸಗಳು, ಗ್ರಂಥಮುದ್ರಣಾದಿಗಳು, ಪತ್ರಿಕೆಯ ಪ್ರಕಟನೆ ಎಲ್ಲವೂ ನಿರಾತಂಕವಾಗಿ ಸಾಗಿದ್ದವು. ಶ್ರೀಶ್ರೀಗಳವರು **'ಮಾಂಡೂಕ್ಯರಹಸ್ಯವಿವೃತ್ತಿಃ'** ಎಂಬ ಸಂಸ್ಕೃತಭಾಷೆಯ ಗ್ರಂಥವೊಂದನ್ನು ಸಿದ್ಧಗೊಳಿಸಿದರು. ಇದು ಶಂಕರಭಾಷ್ಯಾನುಸಾರವಾಗಿ ಮಾಂಡೂಕ್ಯೋಪನಿಷತ್ತಿನ ಹಾಗೂ ಗೌಡಪಾದಕಾರಿಕೆಗಳ ಅಭಿಪ್ರಾಯವನ್ನು ವಿವರಿಸುವ ವಿಸ್ತಾರವಾದ ಸಂಸ್ಕೃತವ್ಯಾಖ್ಯಾನರೂಪವಾಗಿತ್ತು. ಇದನ್ನು ಮುದ್ರಿಸುವ ಯೋಚನೆಯನ್ನು ಮಾಡಲಾಯಿತು.

## ಶ್ರೀಶ್ರೀಗಳವರ ಪ್ರವಾಸ :

1956ನೆಯ ಜನವರಿಯಲ್ಲಿ ಒಂದು ವಾರಕಾಲ ತಿಪಟೂರಿನಲ್ಲಿ ಶ್ರೀಶ್ರೀಗಳವರು **ವೇದಾಂತಕಾಲಕ್ಷೇಪವನ್ನು** ನೆರವೇರಿಸಿದರು. ಬೆಳಗಿನ ವೇಳೆಯಲ್ಲಿ ವೇ|| ಎಸ್. ವಿಠಲಶಾಸ್ತ್ರಿಗಳು ಭಾಷ್ಯಪ್ರವಚನವನ್ನು ಮಾಡುತ್ತಿದ್ದರು. ಸಂಜೆಯ ಹೊತ್ತು ಶ್ರೀಶ್ರೀಗಳವರು ಉಪನ್ಯಾಸಗಳನ್ನು ಅನುಗ್ರಹಿಸುತ್ತಿದ್ದರು. ತಿಪಟೂರಿನ ಭಕ್ತಮಹಾಜನರು ಶ್ರೀಶ್ರೀಗಳವರನ್ನು ಭಕ್ತಿಶ್ರದ್ಧೆಗಳಿಂದ ಸತ್ಕರಿಸಿದರಲ್ಲದೆ ಕಾರ್ಯಾಲಯಕ್ಕೆ ಯಥೋಚಿತ ದ್ರವ್ಯಸಹಾಯವನ್ನೂ ನೀಡಿದರು.

## ಅನುಷ್ಠಾನಗಳಿಗೆ ಮೂಲನಿಧಿ :

ಕಾರ್ಯಾಲಯದಲ್ಲಿ ನಡೆಯುತ್ತಿರುವ ಬೇರೆಬೇರೆಯ ಅನುಷ್ಠಾನಗಳು ಆಯಾ ಕಾಲಕ್ಕೆ ಮಹಾಜನರು ಕೊಡುವ ಸಹಾಯದ್ರವ್ಯದಿಂದಲೇ ಈವರೆಗೂ ನಡೆಯುತ್ತಾ ಬಂದಿರುತ್ತವೆ. ಇಂಥ ಅನುಷ್ಠಾನಗಳು ಒಂದು ವರ್ಷದಲ್ಲಿ ಆರು ನಡೆಯುತ್ತವೆ. ಇವುಗಳಿಗೆ ಯಾವ

ಶಾಶ್ವತನಿಧಿಯೂ ಇರಲಿಲ್ಲ. ಆದ್ದರಿಂದ ಅನುಷ್ಠಾನಗಳನ್ನು ಶಾಶ್ವತವಾಗಿ ನಡೆಯಿಸಿಕೊಂಡು ಹೋಗಲು ಈ ನಿಧಿಯನ್ನು ಏರ್ಪಾಡುಮಾಡಲಾಯಿತು. ಆಗ್ಗೆ ಕಾರ್ಯಾಲಯದ ಉಪಾಧ್ಯಕ್ಷರಾಗಿದ್ದ ಶ್ರೀ ಅರಕಲಗೂಡು ಶ್ರೀಕಂಠಯ್ಯನವರ ಪ್ರೋತ್ಸಾಹದಿಂದ ಚನ್ನರಾಯಪಟ್ಟಣದ ಸಾಹುಕಾರ್ ವೆಂಕಟರಮಣಯ್ಯನವರು ಶಂಕರಸಪ್ತಾಹದ ಮೂಲನಿಧಿಗೆ ಎಂದು ಎರಡುಸಾವಿರರೂಪಾಯಿಗಳನ್ನು ಉದಾರವಾಗಿ ದಾನಮಾಡಿದರು. ಇದನ್ನು ಮೂಲಧನವಾಗಿಟ್ಟು ಇದರ ಬಡ್ಡಿಯಿಂದ ಶಂಕರಸಪ್ತಾಹ ಉತ್ಸವವನ್ನು ನಡೆಯಿಸುವ ವ್ಯವಸ್ಥೆ ಮಾಡಲಾಯಿತು.

## ಶ್ರೀಶ್ರೀಗಳವರ ಉತ್ತರ-ಪಶ್ಚಿಮ-ಭಾರತಪ್ರವಾಸ :

ಶ್ರೀಶ್ರೀಗಳವರಿಗೆ ತಾವು ಬರೆದಿದ್ದ 'ಮಾಂಡೂಕ್ಯರಹಸ್ಯ ವಿವೃತಿಃ'ಗ್ರಂಥವನ್ನು ಓಂಕಾರೇಶ್ವರ ಕ್ಷೇತ್ರದಲ್ಲಿ ಪಠಿಸಿ ಗೌಡಪಾದಾಚಾರ್ಯರಿಗೆ ಸರ್ಪಿಸಬೇಕೆಂಬ ಆಶೆಯು ಬಹಳವಾಗಿತ್ತು. ಸಾಧ್ಯವಾದರೆ ಕಾಶೀಕ್ಷೇತ್ರಕ್ಕೂ ಹೋಗಿಬರಬೇಕೆಂಬ ಅಭಿಪ್ರಾಯವಿತ್ತು. ಆ ವೇಳೆಗೆ ಭಕ್ತಮಹಾಜನರು ಶ್ರೀಗಳವರ ಸ್ವಂತಖರ್ಚಿಗೆ ಎಂತ ಅರ್ಪಿಸಿದ್ದ ಮೊಬಲಗು ಸ್ವಲ್ಪಮಟ್ಟಿಗೆ ಕೂಡಿದ್ದು ಅದನ್ನು 'ಯಾತ್ರಾನಿಧಿ'ಯೆಂದೇ ಕರೆಯಲಾಗಿತ್ತು. ಅದರ ಸಹಾಯದಿಂದ ಗುರುಗಳು ಮಿತಪರಿವಾರದೊಡನೆ ತಾ. 8-3-56ರಂದು ಹೊಳೆನರಸೀಪುರದಿಂದ ಹೊರಟು ಅರಸೀಕೆರೆ, ಹರಿಹರ, ಹುಬ್ಬಳ್ಳಿ, ಪೂನ-ಮಾರ್ಗವಾಗಿ ಬೊಂಬಾಯಿಗೆ ದಯಮಾಡಿಸಿದರು. ಅಲ್ಲಿ ಶ್ರೀ ಚತುರ್ಭುಜಶಿವಜೀ-ಎಂಬ ಭಕ್ತರ ಸಹಾಯದಿಂದ ಘಾಟ್‌ಕೋಪರ್‌ನಲ್ಲಿ ನಾಲ್ಕುದಿನ ಬಿಡಾರಮಾಡಿದ್ದು ಮುಂದೆ ಓಂಕಾರೇಶ್ವರ ಕ್ಷೇತ್ರಕ್ಕೆ ದಯಮಾಡಿಸಿದರು. ಅಲ್ಲಿ ತಮ್ಮ ಸಂಕಲ್ಪದಂತೆ 'ಮಾಂಡೂಕ್ಯರಹಸ್ಯವಿವೃತಿಃ'ಯನ್ನು ಪಾರಾಯಣಮಾಡಿ ಗೌಡಪಾದಾಚಾರ್ಯರವರಿಗೆ ಅರ್ಪಿಸಿದರು. ಬಳಿಕ ಉಜ್ಜಯನಿ, ಅಲಹಬಾದ್-ಮೂಲಕ ಕಾಶೀಕ್ಷೇತ್ರವನ್ನು ತಲುಪಿದರು. ಅಲ್ಲಿ ಒಂಭತ್ತು ದಿನಗಳು ಇದ್ದು ಮುಂದೆ ದೆಹಲಿನಗರಕ್ಕೆ ದಯಮಾಡಿಸಿದರು. ಅಲ್ಲಿ ಶ್ರೀ ಡಿ.ಎನ್. ಕೃಷ್ಣಮೂರ್ತಿಯವರು (ಇವರು ಶ್ರೀ ಡಿ.ಸಿ. ನಂಜಪ್ಪಭಾಗವತರ ಮಕ್ಕಳು) ಶ್ರೀಶ್ರೀಗಳವರನ್ನು ಕರೆದುಕೊಂಡು ಹೋಗಿ ಸತ್ಕರಿಸಿದರು. ಮುಂದೆ ಕುರುಕ್ಷೇತ್ರವೇ ಮುಂತಾದ ಸ್ಥಳಗಳನ್ನು ನೋಡಿಕೊಂಡು ಮಥುರೆ, ಬೃಂದಾವನ-ಇವುಗಳನ್ನೂ ಸಂದರ್ಶಿಸಿ ಅಹಮ್ಮದಾಬಾದ್ ಮೂಲಕ ಶ್ರೀ ಸ್ವಾಮಿಮಾಧವತೀರ್ಥಜೀರವರ ಆಶ್ರಮವಿರುವ ವಲಾದ್ ಎಂಬಲ್ಲಿಗೆ ದಯಮಾಡಿಸಿದರು. ಅಲ್ಲಿ ಸ್ವಲ್ಪಕಾಲವಿದ್ದು ಮುಂದೆ ದ್ವಾರಕಾಕ್ಷೇತ್ರಕ್ಕೆ ಹೋಗಿ ಆಗ ಅಲ್ಲಿ ಸಂನಿಹಿತರಾಗಿದ್ದ ಶ್ರೀದ್ವಾರಕಾಜಗದ್ಗುರು ಪೀಠಾಧ್ಯಕ್ಷರಾದ ಶ್ರೀಸಚ್ಚಿದಾನಂದತೀರ್ಥ ಸ್ವಾಮಿಗಳನ್ನು ಸಂದರ್ಶಿಸಿದರು. ಶ್ರೀಶ್ರೀಜಗದ್ಗುರುಗಳವರು ಶ್ರೀಗಳು ಬರೆದಿದ್ದ ಮಾಂಡೂಕ್ಯರಹಸ್ಯವಿವೃತಿ ಗ್ರಂಥವನ್ನು ನೋಡಿ ಸಂತೋಷಗೊಂಡು ಅದರ ಪ್ರಕಟನೆಗಾಗಿ ಯಥೋಚಿತ ಸಹಾಯದ್ರವ್ಯವನ್ನು ನೀಡಿದರು. ಮುಂದೆ ಶ್ರೀಗಳವರು ಅಹಮದಾಬಾದ್, ಬೊಂಬಾಯಿ, ಪೂನ-ಮಾರ್ಗವಾಗಿ ತಾ. 13-5-56ರ ವೇಳೆಗೆ

ಹೊಳೆನರಸೀಪುರಕ್ಕೆ ಸುಖವಾಗಿ ಹಿಂತಿರುಗಿದರು. ಶ್ರೀಶ್ರೀಗಳವರು ಹೋಗಿದ್ದ ಸ್ಥಳಗಳಲ್ಲಿ ಯಥಾವಕಾಶವಾಗಿ ಅಧ್ಯಾತ್ಮವಿಚಾರದ ಪ್ರವಚನಗಳನ್ನೂ ಪಂಡಿತರೊಡನೆ ಸಂಭಾಷಣೆಗಳನ್ನೂ ನಡೆಯಿಸಿದರು.

ಈ ಪ್ರವಾಸದಲ್ಲಿ ಶ್ರೀಶ್ರೀಗಳವರು ಕಾಶಿಯಲ್ಲಿ ಬೆನಾರೆಸ್ (ವಾರಣಾಸಿಯ) ಹಿಂದೂ ಯೂನಿವರ್ಸಿಟಿಯ ಪ್ರೊಫೆಸರರಾದ ಶ್ರೀ ಟಿ.ಆರ್.ವಿ.ಮೂರ್ತಿ ಎಂ.ಎ., ಡಿ.ಲಿಟ್, ರವರನ್ನು ಭೇಟಿಮಾಡಿದುದೊಂದು ವಿಶೇಷಸಂದರ್ಭವಾಗಿತ್ತು. ಶ್ರೀ ಮೂರ್ತಿಯವರು ವಿದ್ಯಾವಂತರು. ಸಂಸ್ಕೃತ-ವೇದಾಂತ-ಪಾಶ್ಚಾತ್ಯತತ್ತ್ವಶಾಸ್ತ್ರಗಳನ್ನು ಅಭ್ಯಾಸಮಾಡಿದವರು, ವಿನಯಶೀಲರು. ವೇದಾಂತದ ಶಾಸ್ತ್ರಿಪರೀಕ್ಷೆಯಲ್ಲಿಯೂ ವ್ಯಾಕರಣದ ಆಚಾರ್ಯ ಪರೀಕ್ಷೆಯಲ್ಲಿಯೂ ಪ್ರೌಢಪರೀಕ್ಷೆಯಲ್ಲಿಯೂ ಉತ್ತೀರ್ಣರಾಗಿದ್ದು ಆಕ್ಸ್‌ಫರ್ಡ್ ವಿಶ್ವವಿದ್ಯಾನಿಲಯದಲ್ಲಿ ಭಾಷಣಮಾಡಿದ ಪ್ರೌಢವಿದ್ವಾಂಸರಾಗಿದ್ದರು. ಈ ಮಹನೀಯರು ಬರೆದಿರುವ `The Central Philosophy of Buddhism' ಎಂಬ ಗ್ರಂಥರತ್ನವನ್ನು ಈ ವೇಳೆಗೆ ಶ್ರೀಶ್ರೀಗಳವರು ಓದಿ ಅದರ ವಿಮರ್ಶೆಯನ್ನೂ ಅಧ್ಯಾತ್ಮಪ್ರಕಾಶ ಪತ್ರಿಕೆಯ 1956ನೆಯ ಏಪ್ರಿಲ್ ಸಂಚಿಕೆಯಲ್ಲಿ ಬರೆದಿದ್ದರು. ಈ ಗ್ರಂಥವನ್ನು ಬರೆದಮೇಲೆಯೇ ಶ್ರೀ ಮೂರ್ತಿಗಳಿಗೆ ಡಿ.ಲಿಟ್. ಪದವಿಯು ದೊರಕಿತ್ತು. ಈಗ ಶ್ರೀಗಳು ಇಂಥ ವಿದ್ವಾಂಸರೊಡನೆ ಸಾಕ್ಷಾತ್ತಾಗಿ ಸಂಭಾಷಣೆಯನ್ನು ಮಾಡಿ ಅವರ ಗ್ರಂಥದ ವಿಷಯದಲ್ಲಿ ಅನೇಕ ಪ್ರಶ್ನೋತ್ತರಗಳನ್ನು ನಡೆಯಿಸಿದರು. ವೇದಾಂತ ಮತ್ತು ಬೌದ್ಧಸಿದ್ಧಾಂತಗಳ ತಾರತಮ್ಯದ ವಿಷಯಕ್ಕೆ ಶ್ರೀಗಳು ತಮ್ಮ ಕೃತಿಯಾದ "ಮಾಂಡೂಕ್ಯರಹಸ್ಯನಿವೃತಿ'ಯಲ್ಲಿ ವಿಚಾರಪ್ರಚೋದಕವಾದ ಇಂಗ್ಲಿಷು ಪೀಠಿಕೆಯನ್ನು ಬರೆಯುವದಕ್ಕಾಗಿ ಈ ಪ್ರೊಫೆಸರರೊಡನೆ ಅಭಿಪ್ರಾಯ ವಿನಿಯಮವನ್ನು ನಡೆಯಿಸಿ ಅನೇಕ ವಿಷಯಗಳನ್ನು ಅವರಿಂದ ಸಂಗ್ರಹಿಸಿದರು. ಬಳಿಕ ಶ್ರೀಗಳು ತಮ್ಮ ಸ್ವಂತ ಅಭಿಪ್ರಾಯಗಳನ್ನೂ ಸೇರಿಸಿಕೊಂಡು ಇಂಗ್ಲಿಷು ಪೀಠಿಕೆಯನ್ನು ಸಿದ್ಧಗೊಳಿಸಿದರು. ಇದು ಈಗಲೂ 'ಮಾಂಡೂಕ್ಯ ರಹಸ್ಯ ವಿವೃತ್ತಿಃ' ಗ್ರಂಥದಲ್ಲಿ ಒಂದು ಮುಖ್ಯಭಾಗವಾಗಿ ಪ್ರಕಾಶಿತವಾಗಿದೆ. ಇಂಗ್ಲಿಷು ಬಲ್ಲವರೂ ವೇದಾಂತಬೌದ್ಧಸಿದ್ಧಾಂತ ಪ್ರಕ್ರಿಯೆಗಳ ತಾರತಮ್ಯವನ್ನು ತಿಳಿಯಲು ಇಚ್ಛೆಯುಳ್ಳವರೂ ಅವಶ್ಯವಾಗಿ ಓದಬೇಕಾದ ಗ್ರಂಥಭಾಗವಿದು. ಈಚೆಗೆ ಇದನ್ನು ಆಂಗ್ಲಭಾಷೆಯಲ್ಲಿ `Introduction to Vedanta Texts' ಎಂಬ ಗ್ರಂಥದಲ್ಲಿ ಪ್ರಕಟಿಸಿದೆ.

**ಶಂಕರಸಪ್ತಾಹ :**

1956ನೆಯ ವರ್ಷದ ಶಂಕರಸಪ್ತಾಹವು ಹೊಳೆನರಸೀಪುರದಲ್ಲಿಯೇ ನಡೆಯಿತು. ಭಾಷ್ಯಪ್ರವಚನ, ಪುರಾಣ, ಭಜನೆ-ಇವುಗಳು ಎಂದಿನಂತೆ ನಡೆದವು. ಸಪ್ತಾಹದ ನಡುವೆ ಶ್ರೀಶ್ರೀಗಳವರಿಗೆ ಅನಾರೋಗ್ಯವುಂಟಾದ್ದರಿಂದ ಪಂಡಿತರುಗಳೇ ಉಪನ್ಯಾಸಗಳನ್ನು ನಡೆಯಿಸಿದರು. ಮಂಗಳದ ವೇಳೆಗೆ ಶ್ರೀಶ್ರೀಗಳವರಿಗೆ ಆರೋಗ್ಯವು ಸರಿಯಾಯಿತಾದ್ದರಿಂದ

ಆಚಾರ್ಯರ ಗುಣಕಥನವನ್ನು ಅವರೇ ನೆರವೇರಿಸಿದರು. ಆ ದಿನ ಶ್ರೀಶ್ರೀಗಳು ಕಾಶಿಯಿಂದ ತಂದಿದ್ದ ಪವಿತ್ರ ಗಂಗಾಜಲದಿಂದ ಶ್ರೀರಾಮರಿಗೂ ಶ್ರೀಶಂಕರಾಚಾರ್ಯರಿಗೂ ಅಭಿಷೇಕಾದಿಗಳನ್ನು ನೆರವೇರಿಸಿ ನೆರೆದಿದ್ದ ಭಕ್ತಮಹಾಜನರಿಗೆಲ್ಲ ಶ್ರೀಗಳವರ ಅಮೃತಹಸ್ತದಿಂದಲೇ ಗಂಗಾತೀರ್ಥಪ್ರಾಶನವನ್ನು ಮಾಡಿಸಲಾಯಿತು. ಆಮೇಲೆ ಮಹಾಮಂಗಳಾರತಿಯಾಗಿ ಸಂತರ್ಪಣೆಯಾದ ಮೇಲೆ ಈ ಉತ್ಸವವು ಪೂರೈಸಿತು.

## ಗಣಪತಿವಿಗ್ರಹ ಪ್ರತಿಷ್ಠೆ :

ತಾ. 18-5-56ನೆಯ ಸೋಮವಾರ ಕಾರ್ಯಾಲಯದಲ್ಲಿರುವ ಶ್ರೀದಿಗ್ವಿಜಯರಾಮ ದೇವಸ್ಥಾನದ ಮುಂಭಾಗದ ಬಲಗಡೆಯ ಆವರಣದಲ್ಲಿ ಶ್ರೀವಿಘ್ನೇಶ್ವರ ಸ್ವಾಮಿಯವರ ಪ್ರತಿಷ್ಠಾ ಮಹೋತ್ಸವವನ್ನು ಬೆಂಗಳೂರಿನ ನಿವೃತ್ತ ಸೀನಿಯರ್ ಸರ್ಜನ್ ಡಾ. ಬಿ. ಕೆ. ನಾರಾಯಣರಾಯರ ಕುಟುಂಬ ಶ್ರೀಮತಿ ನಾಚಾರಮ್ಮನವರ ನೆರವಿನಿಂದ ನೆರವೇರಿಸಲಾಯಿತು. ಶ್ರೀಮತಿಯವರು ಶ್ರೀ ವಿಘ್ನೇಶ್ವರ ದೇವರಿಗೆ ಒಂದು ಬೆಳ್ಳಿಯ ಕವಚವನ್ನೂ ಮಾಡಿಸಿಕೊಟ್ಟು ನಿತ್ಯಪೂಜೆಗೆ ಏರ್ಪಾಡುಮಾಡಿರುತ್ತಾರೆ.

## ಕೆಲವು ಚಟುವಟಿಕೆಗಳು :

ಪಾಠಪ್ರವಚನ, ಉಪನ್ಯಾಸಗಳು- ಈ ಅವಧಿಯಲ್ಲಿ ಎಂದಿನಂತೆ ನಡೆಯುತ್ತಿದ್ದವು. ಚಾತುರ್ಮಾಸ್ಯಸಂಕಲ್ಪವನ್ನು ಶ್ರೀಶ್ರೀಗಳವರು ಈ ಬಾರಿ ಹೊಳೆನರಸೀಪುರದಲ್ಲಿಯೇ ನೆರವೇರಿಸಿದರು. ಪುರಾಣಪ್ರವಚನದಲ್ಲಿ **ವಾಸಿಷ್ಠಮಹಾರಾಮಾಯಣವು** ಪೂರೈಸಿ ತಾ.13-8-56ರಂದು ಮಂಗಳವಾಯಿತು. ಮುಂದೆ **ಮತ್ಸ್ಯಪುರಾಣವನ್ನು** ಪ್ರಾರಂಭಿಸಲಾಯಿತು. **ಉಪದೇಶಸಾಹಸ್ರಿ** 18, 19ನೆಯ ಪ್ರಕರಣಗಳ ಭಾಗವನ್ನು ಒಂದು ಗ್ರಂಥರೂಪದಲ್ಲಿ ಪ್ರಕಟಿಸಲಾಯಿತು. **"ಮಾಂಡೂಕ್ಯರಹಸ್ಯವಿವೃತಿ"** ಗ್ರಂಥದ ಮುದ್ರಣವನ್ನು ಆರಂಭಿಸಲಾಯಿತು. ಶ್ರೀ ಎಂ.ವಿ.ಶರ್ಮ-ಎಂಬ ಮಹಾಶಯರ ಪ್ರೋತ್ಸಾಹದಿಂದ **"ಗೀತಾಸಾರ್ಥ"** ಪುಸ್ತಕವನ್ನು ಸಂಸ್ಕರಿಸಿ ಪುನರ್ಮುದ್ರಣಮಾಡಿಸಲಾಯಿತು. ಪುಸ್ತಕಭಂಡಾರಕ್ಕೆ ಕೆಲವು ಅಮೂಲ್ಯ ಗ್ರಂಥಗಳನ್ನೂ ಕೊಳ್ಳಲಾಯಿತು.

## ಶರನ್ನವರಾತ್ರಿಯ ಅನುಷ್ಠಾನ :

ಈ ಅನುಷ್ಠಾನವು ಕಾರ್ಯಕ್ರಮದಂತೆ ವಿಜೃಂಭಣೆಯಿಂದ ನಡೆಯಿತು. ಈ ಸಲದ ವಿಶೇಷವೇನೆಂದರೆ: ಮೈಸೂರು ಶ್ರೀಮನ್ಮಹಾರಾಜರವರ ಅಪ್ಪಣೆಯಂತೆ ಶ್ರೀಜಯಚಾಮರಾಜೇಂದ್ರ ಗ್ರಂಥಮಾಲೆಯಲ್ಲಿ ಪ್ರಕಟವಾಗುತ್ತಿದ್ದ ಪ್ರಸ್ಥಾನತ್ರಯಭಾಷ್ಯಗಳಲ್ಲಿ ಕೊನೆಯ (6ನೆಯ) ಸಂಪುಟವಾದ **ಛಾಂದೋಗ್ಯೋಪನಿಷದ್ಭಾಷ್ಯದ** ಮುದ್ರಣವು ಪೂರ್ಣವಾಯಿತು. ಆ ವೇಳೆಗೆ ಸರಿಯಾಗಿ ಅರಮನೆಯಿಂದ ಬಂದ ನಿರೂಪದಲ್ಲಿ ಇನ್ನು ಮುಂದೆ ಮತ್ತೆ ಆಜ್ಞೆಯನ್ನು ಕೊಡುವವರೆಗೆ ಈ ಗ್ರಂಥಮಾಲೆಗಾಗಿ ಯಾವ ಪುಸ್ತಕವನ್ನೂ

ಸಿದ್ಧಗೊಳಿಸಬೇಕಾದದ್ದಿಲ್ಲವೆಂತ ತಿಳಿಸಲಾಗಿತ್ತು. ಇದರಿಂದ ಪ್ರಕಟನ ಶಾಖೆಗೆ ಇದ್ದ ದೊಡ್ಡಬೆಂಬಲವು ಇನ್ನುಮುಂದೆ ಇಲ್ಲದಂತಾಯಿತು. ಆದರೂ ಮಹಾಜನರ ನೆರವಿನಿಂದ ಉಳಿದ ಪ್ರಕರಣಗ್ರಂಥಗಳನ್ನು ಅಚ್ಚುಮಾಡಿಸುವ ಏರ್ಪಾಡುಮಾಡಬೇಕೆಂದು ಯೋಚಿಸಲಾಯಿತು. ಈವರೆಗೆ ಒಟ್ಟು ಹನ್ನೊಂದು ಸಂಪುಟಗಳಲ್ಲಿ ಶಂಕರಾಚಾರ್ಯರ ಪ್ರಸ್ಥಾನತ್ರಯಭಾಷ್ಯಗಳು ಮತ್ತು ಕೆಲವೇ ಪ್ರಕರಣಗಳು ಸಹ ಅರಮನೆಯವರ ಪ್ರೋತ್ಸಾಹದಿಂದ ಪ್ರಕಟವಾಗಿದ್ದವು. 1944ನೆಯ ಶರನ್ನವರಾತ್ರಿಯಲ್ಲಿ ಪ್ರಾರಂಭವಾದ ಈ ಮಹಾಕಾರ್ಯವು ಹನ್ನೆರಡು ವರ್ಷಕಾಲ ನಡೆದು 1956ನೆಯ ಶರನ್ನವರಾತ್ರಿಯ ಹೊತ್ತಿಗೆ ಒಂದು ಘಟ್ಟಕ್ಕೆ ನಿಂತಿತು. ಇದರ ಸಂತೋಷಕ್ಕಾಗಿ ಈ ಅನುಷ್ಠಾನದ ನಡುವೆ ಸರಸ್ವತೀಪೂಜೆಯ ದಿನ ಪ್ರಸ್ಥಾನತ್ರಯಕನ್ನಡಭಾಷ್ಯಗ್ರಂಥಗಳು ಮತ್ತು ಶ್ರೀಶಂಕರಾಚಾರ್ಯರ ಭಾವಚಿತ್ರದ ಉತ್ಸವವನ್ನು ಏರ್ಪಡಿಸಿ ಹೂವಿನಪಲ್ಲಕ್ಕಿಯಲ್ಲಿ ಗ್ರಂಥಗಳನ್ನಿಟ್ಟು ಅಲಂಕರಿಸಿ ಹೊಳೆನರಸೀಪುರದ ಪ್ರಮುಖ ರಾಜಬೀದಿಗಳಲ್ಲಿ ಓಲಗ, ವೇದಪಾರಾಯಣಗಳೊಡನೆ ಮೆರವಣಿಗೆ ಮಾಡಲಾಯಿತು. ಉಳಿದ ಕಾರ್ಯಕ್ರಮಗಳೆಲ್ಲವೂ ಯಶಸ್ವಿಯಾಗಿ ನೆರವೇರಿ ಈ ಅನುಷ್ಠಾನವು ಪೂರ್ಣಗೊಂಡಿತು.

**ಕಟ್ಟಡ :**

ಈ ವರ್ಷದಲ್ಲಿ ಒಂದು ಅಡಿಗೆ ಮನೆಯನ್ನೂ ಎರಡು ಶೌಚಗೃಹಗಳನ್ನೂ ನಿರ್ಮಿಸಲಾಯಿತು. ಭಜನಮಂದಿರದ ಕಟ್ಟಡಕ್ಕೆ ಎಸ್ಟಿಮೇಟು ಪ್ಲಾನುಗಳನ್ನು ತಯಾರಿಸಿ ಭಜನಮಂದಿರದ ನಿರ್ಮಾಣಕ್ಕೆ ಗುದ್ದಲಿಪೂಜೆಯನ್ನು ತಾ. 7-10-56ರಂದು ನೆರವೇರಿಸಲಾಯಿತು.

**ಅನುಷ್ಠಾನಗಳು :**

1956ನೆಯ ವರ್ಷದ **ಗೀತಾಜಯಂತಿ, ಬ್ರಹ್ಮಚೈತನ್ಯಾರಾಧನೆ**-ಅನುಷ್ಠಾನಗಳು ಎಂದಿನಂತೆ ಸಾಂಗವಾಗಿ ನೆರವೇರಿದವು.

**ಪುಸ್ತಕಪ್ರಕಟನೆ :**

**ಛಾಂದೋಗ್ಯೋಪನಿಷದ್ಭಾಷ್ಯ**- (ಶ್ರೀಜಯಚಾಮರಾಜೇಂದ್ರ ಗ್ರಂಥಮಾಲೆಯದು) ಪ್ರಕಟವಾಗಿ ಮಾರಾಟಕ್ಕೆ ಸಿದ್ಧವಾಯಿತು. **'ರಸನಿಮಿಷಗಳು'**- ಎಂಬ ಚಿಕ್ಕ ಪುಸ್ತಕವೊಂದನ್ನು ಹೊರತರಲಾಯಿತು.

**ಶ್ರೀಶ್ರೀಗಳವರ ಪ್ರವಾಸ :**

1957ನೆಯ ಜನವರಿ ಮಾಹೆಯಲ್ಲಿ ಶ್ರೀಗಳವರು ಬೇಲೂರು, ಹಳೇಬೀಡುಗಳನ್ನು ಸಂದರ್ಶಿಸಿ ಹಿಂತಿರುಗಿದರು. ಆಮೇಲೂ ತಾ. 26-1-57ರಿಂದ 15 ದಿನಗಳ ಕಾಲ ಬೆಂಗಳೂರಿಗೆ ದಯಮಾಡಿಸಿ ವಿಶ್ವೇಶ್ವರಪುರದಲ್ಲಿಯೂ ಸಿಟಿಯ ಬೇರೆಬೇರೆ

ಬಡಾವಣೆಗಳಲ್ಲಿಯೂ ಉಪನ್ಯಾಸಗಳನ್ನು ಅನುಗ್ರಹಿಸಿದರು. ಭಕ್ತರುಗಳಿಂದ ಯಥೋಚಿತ ಸತ್ಕಾರಗಳನ್ನು ಸ್ವೀಕರಿಸಿ ಹಿಂದಿರುಗಿದರು.

**ಅತಿಥಿಗಳು :**

ಕಾರ್ಯಾಲಯದ ಆಹ್ವಾನಮೇಲೆ ಅಹಮ್ಮದಾಬಾದ್ ಪ್ರಾಂತ್ಯದ ವಲಾದ್ ವೇದಾಂತ ಆಶ್ರಮದಿಂದ ಶ್ರೀಸ್ವಾಮಿ ಮಾಧವತೀರ್ಥರು ತಮ್ಮ ಶಿಷ್ಯರುಗಳೊಡನೆ ತಾ. 21-1-57 ರಂದು ಕಾರ್ಯಾಲಯಕ್ಕೆ ದಯಮಾಡಿಸಿ ಮೂರುದಿನಗಳು ತಂಗಿದ್ದರು. ಶ್ರೀಸ್ವಾಮಿಗಳು ಶ್ರೀಮದ್ಭಾಗವತ ಕಥೆಗಳನ್ನು ತೆಗೆದುಕೊಂಡು ಅಧ್ಯಾತ್ಮ ಪರವಾಗಿ ಸಮನ್ವಯಗೊಳಿಸಿ ಇಂಗ್ಲಿಷ್‌ನಲ್ಲಿ ಉಪನ್ಯಾಸಗಳನ್ನು ಮಾಡಿದರು. ಶ್ರೋತೃಗಳು ಕೇಳಿ ಸಂತೋಷಪಟ್ಟರು.

**ವಾಗ್ದೇವೀಪ್ರತಿಷ್ಠೆ :**

ಶ್ರೀರಾಮದೇವಸ್ಥಾನದ ಹೊರಭಾಗದ ಬಲ ಆವರಣದಲ್ಲಿ ವಿಘ್ನೇಶ್ವರ ಪ್ರತಿಷ್ಠೆಯಾದ ಅನಂತರ ಎಡಭಾಗದಲ್ಲಿ ವಾಗ್ದೇವಿಯನ್ನು ಸ್ಥಾಪಿಸಬೇಕೆಂದು ಸಂಕಲ್ಪಿಸಲಾಗಿತ್ತು. ಅದರಂತೆ ಮೈಸೂರಿನಲ್ಲಿ ವಾಗ್ದೇವೀವಿಗ್ರಹವನ್ನು ಆರ್ಡರ್‌ಕೊಟ್ಟು ಸಿದ್ಧಗೊಳಿಸಿ ತರಿಸಲಾಯಿತು. ತಾ. 24-2-57ರಂದು ಈ ವಿಗ್ರಹದ ಪ್ರತಿಷ್ಠಾಪನಾಮಹೋತ್ಸವವು ವಿಜೃಂಭಣೆಯಿಂದ ನೆರವೇರಿತು.

**ಶಂಕರಸಪ್ತಾಹ :**

**1957ನೆಯ ವರ್ಷದ ಶಂಕರಸಪ್ತಾಹವು ಬೆಂಗಳೂರಿನಲ್ಲಿ** ಅಲಸೂರು ಪೇಟೆ ಶ್ರೀಸೀತಾರಾಮಮಂದಿರದಲ್ಲಿ ನಡೆಯಿತು. ಎಂದಿನಂತೆ ಭಾಷ್ಯಪ್ರವಚನ, ಪುರಾಣ, ಉಪನ್ಯಾಸಗಳು ನೆರವೇರಿದವು. ಈ ಬಾರಿಯ ಉಪನ್ಯಾಸಗಳನ್ನು **'ಅನುಭವಪರ್ಯಂತವಾದ ಆತ್ಮವಿಚಾರ'** ಎಂಬ ಹೆಸರಿನ ಗ್ರಂಥರೂಪದಲ್ಲಿ ಪ್ರಕಟಿಸಲಾಯಿತು. ಇದರ ಪೂರ್ಣಖರ್ಚುವೆಚ್ಚಗಳನ್ನು ಶ್ರೀ ಗರಡಿರಾಚಪ್ಪನವರು, ಬೆಂಗಳೂರು-ಇವರು ವಹಿಸಿಕೊಂಡರು.

**ಗ್ರಂಥಪ್ರಕಟನೆ :**

ಅಧ್ಯಾತ್ಮಪ್ರಕಾಶ ಪತ್ರಿಕೆಯ ಪಡಿಯಚ್ಚಾಗಿ, **ವಿವೇಕಚೂಡಾಮಣಿ, ವೇದಾಂತಸಾರ** (ಶ್ರೀರಾಮಾನುಜ ವಿರಚಿತ) **ಪರಿಶುದ್ಧವೇದಾಂತಸಾರ** - ಈ ಗ್ರಂಥಗಳನ್ನು ಪ್ರಕಟಿಸಲಾಯಿತು.

**ಇತರ ಚಟುವಟಿಕೆಗಳು :**

ಈ ಬಾರಿಯ ಚಾತುರ್ಮಾಸ್ಯ ಸಂಕಲ್ಪಕ್ಕೆ ದಾವಣಗೆರೆಗೆ ಮಹಾಜನರು ಆಹ್ವಾನವನ್ನು ನೀಡಿದ್ದರಿಂದ ಶ್ರೀಗಳವರು ದಾವಣಗೆರೆಗೆ ದಯಮಾಡಿಸಿದರು. ಪ್ರತಿದಿನವೂ ಸಂಜೆ ಅಧ್ಯಾತ್ಮ ವಿಚಾರದ ಉಪದೇಶಗಳನ್ನು ಅನುಗ್ರಹಿಸುತ್ತಿದ್ದರು. ಚಾತುರ್ಮಾಸ್ಯವು ಪೂರೈಸಿದ ಅನಂತರ

ಹೊಳೆನರಸೀಪುರಕ್ಕೆ ದಯಮಾಡಿಸಿದರು. 1957ನೆಯ ವರ್ಷದ ಶರನ್ನವರಾತ್ರಿ, ಗೀತಾ ಜಯಂತಿ, ಬ್ರಹ್ಮಚೈತನ್ಯಾರಾಧನೆ-ಈ ಅನುಷ್ಠಾನಗಳು ಎಂದಿನಂತೆ ಜರುಗಿದವು. **ಮತ್ಸ್ಯಪುರಾಣವು** ಮುಗಿದ ಅನಂತರ **ಕೂರ್ಮಪುರಾಣವನ್ನು** ಶ್ರವಣಮಾಡಿಸಿ ತಾ. 11.10.57ರಿಂದ ಲಿಂಗಪುರಾಣ ಪ್ರವಚನವನ್ನು ಪ್ರಾರಂಭಿಸಲಾಯಿತು. ಮುದ್ರಣಾಲಯಕ್ಕೆ ಡೆಮ್ಮಿಸೈಜಿನ Chandler & Price ಎಂಬ ಹೆಸರಿನ ಹೊಸ ಮುದ್ರಣಯಂತ್ರವೊಂದನ್ನು ಸುಮಾರು ಆರುಸಹಸ್ರ ರೂಪಾಯಿಗಳ ಖರ್ಚಿನಿಂದ ಕೊಳ್ಳಲಾಯಿತು.

## ಅನುಷ್ಠಾನದ ಮೂಲನಿಧಿಗೆ ಉದಾರಸಹಾಯ :

1957ನೆಯ ಡಿಸೆಂಬರ್ ಮಾಹೆಯಲ್ಲಿ ಕೋಲಾರದಲ್ಲಿ ಆಗ್ಗೆ ಎಂಜಿನಿಯರಾಗಿದ್ದ (ಈಗ ಈ ಮಹನೀಯರು ಮೈಸೂರಿನಲ್ಲಿರುತ್ತಾರೆ) ಶ್ರೀ ಆರ್.ಎಸ್. ಗೋವಿಂದಪ್ಪಶೆಟ್ಟರು ಕಾರ್ಯಾಲಯದಲ್ಲಿ ಪ್ರತಿವರ್ಷವೂ ನಡೆಯುತ್ತಿರುವ ಗೀತಾಜಯಂತಿಯ ಅನುಷ್ಠಾನದ ಆಚರಣೆಗಾಗಿಯೂ ಗೀತಾಪುಸ್ತಕಗಳನ್ನು ಧರ್ಮಾರ್ಥವಾಗಿ ಯೋಗ್ಯರಿಗೆ ಹಂಚುವ ಸಲುವಾಗಿಯೂ ಒಂದು ಸಾವಿರ ರೂಪಾಯಿಗಳ ಮೂಲಧನವನ್ನು ಉದಾರವಾಗಿ ಅರ್ಪಿಸಿದರು. ಈ ಮಹನೀಯರು ಈಚೆಗೆ ಕುವೆಂಪುನಗರದಲ್ಲಿ ನಿರ್ಮಿಸಿರುವ ರಮಣ ಮಹರ್ಷಿ ಕೇಂದ್ರದಲ್ಲಿ 1996ನೇ ಮಾರ್ಚಿ ಮಾಹೆಯಲ್ಲಿ ವೇದಾಂತಸಪ್ತಾಹವನ್ನು ನಡೆಯಿಸಲಾಯಿತು.

## ಅನುತಾಪ :

ಕಾರ್ಯಾಲಯ ಆವರಣದಲ್ಲಿ ಒಂದು ಆಗಂತುಕಗೃಹವನ್ನು ನಿರ್ಮಿಸಿ ಶ್ರೀಶ್ರೀಗಳವರ ಸೇವಾದಿಗಳಿಗೂ ಮತ್ತು ಕೆಲವು ಚಟುವಟಿಕೆಗಳಿಗೂ ಸಹಾಯಕರಾಗಿದ್ದ ಶ್ರೀಮತಿ ಸಾಲಿಗ್ರಾಮದ ಕಾವೇರಮ್ಮನವರು ತಾ. 13.11.57ರಂದು ದೈವಾಧೀನರಾದರು. ಶ್ರೀಮತಿಯವರು ಅಧ್ಯಾತ್ಮ ವಿಚಾರಪ್ರೇಮವುಳ್ಳವರೂ ಸೇವಾಮನೋಭಾವವುಳ್ಳವರೂ ಆಗಿದ್ದರು.

## ಶ್ರೀಶ್ರೀಗಳವರ ಪ್ರವಾಸ :

ಶ್ರೀಶ್ರೀಗಳವರು ಮಿತಪರಿವಾರದೊಡನೆ ತಾ. 5.2.58ರಿಂದ ಹತ್ತು ದಿನಗಳ ಕಾಲ ಚಿಕ್ಕಮಗಳೂರಿಗೆ ದಯಮಾಡಿಸಿ ಉಪನ್ಯಾಸವೇ ಮುಂತಾದ ಕಾರ್ಯಕ್ರಮಗಳನ್ನು ನಡೆಯಿಸಿದರು. ಆಗ್ಗೆ ಅಲ್ಲಿನ ಶ್ರೀ ಲಾಯರ್ ಕೃಷ್ಣಸ್ವಾಮಿರಾಯರೇ ಮುಂತಾದ ಮಹಾಜನರು ಗುರುಗಳನ್ನು ಸ್ವಾಗತಿಸಿ ಭಕ್ತಿಶ್ರದ್ಧೆಗಳಿಂದ ಸೇವೆಯನ್ನು ಸಲ್ಲಿಸಿದರು. ಕಾರ್ಯಾಲಯಕ್ಕೆ ಯಥೋಚಿತವಾಗಿ ಕಾಣಿಕೆಗಳನ್ನು ಸಲ್ಲಿಸಿ ಉಪಕಾರ ಮಾಡಿದರು.

**ವೇದಾಂತವಿಚಾರಗೋಷ್ಠಿ :**

ವೇದಾಂತವಿಚಾರಗಳನ್ನು ಹೆಚ್ಚಿನ ಮಟ್ಟದಿಂದ ಮತ್ತು ವಿಶಾಲವಾದ ವ್ಯಾಪಕವಾದ ದೃಷ್ಟಿಯಿಂದ ಚರ್ಚಿಸುವ ಉದ್ದೇಶದಿಂದ ವೇದಾಂತವಿಚಾರಗೋಷ್ಠಿಯನ್ನು ಏರ್ಪಡಿಸಬೇಕೆಂಬ ಶ್ರೀಶ್ರೀಗಳವರ ಸೂಚನೆಯಂತೆ 18.2.58 ಮತ್ತು 19.2.58ರಲ್ಲೂ ಕಾರ್ಯಾಲಯದಲ್ಲಿ ಪ್ರಪ್ರಥಮವಾಗಿ ಒಂದು ಗೋಷ್ಠಿಯನ್ನು ಏರ್ಪಡಿಸಲಾಗಿತ್ತು. "ಅಹಂಪ್ರತ್ಯಯಗಮ್ಯನಾದ ಆತ್ಮ" ಎಂಬ ವಿಷಯದಲ್ಲಿ ನೆರೆದಿದ್ದ ಎಲ್ಲಾ ಪಂಡಿತರುಗಳೂ ತಮ್ಮತಮ್ಮ ದೃಷ್ಟಿಕೋನದಿಂದ ಭಾಷಣ ಮಾಡಿದರು. ಗೋಷ್ಠಿಯಲ್ಲಿ ನಾಲ್ಕು ಜನ ಪಂಡಿತರುಗಳು ಮಾತ್ರ ಭಾಗವನ್ನು ವಹಿಸಿದ್ದರು. ವೇದಾಂತದ ಬೇರೆ ಬೇರೆ ವಿಷಯಗಳಲ್ಲೂ ಪಂಡಿತರುಗಳು ಮಾತನಾಡಿದರು. ಈ ಗೋಷ್ಠಿಯಲ್ಲಿ ಸಭಿಕರು ಉಪನ್ಯಾಸಕರಿಗೆ ಪ್ರಶ್ನೆಗಳನ್ನು ಹಾಕಿ ಸಂಶಯಗಳನ್ನು ಪರಿಹಾರಮಾಡಿಕೊಳ್ಳುವ ಏರ್ಪಾಡು ಮಾಡಲಾಗಿತ್ತು. ಶ್ರೀಶ್ರೀಗಳವರು ತಮ್ಮ ಉಪಸಂಹಾರಭಾಷಣದಲ್ಲಿ ಈ ರೀತಿಯಾದ ಗೋಷ್ಠಿಗಳಿಗೆ ಬೇರೆ ಬೇರೆಯ ದರ್ಶನಗಳ ಪರಿಚಯವುಳ್ಳ ಪಂಡಿತರುಗಳು ಬಂದುಸೇರಿ ಸಹಾನುಭೂತಿಯಿಂದ ತತ್ತ್ವನಿರ್ಣಯಕ್ಕಾಗಿಯೇ ವಾದಮಾಡಿ ಸರ್ವಸಮ್ಮತವಾದ ಸಿದ್ಧಾಂತವನ್ನು ಹೊರತಂದು ಜನತೆಗೆ ವೇದಾಂತಶಾಸ್ತ್ರದ ಆವಶ್ಯಕತೆಯನ್ನೂ ಪ್ರಯೋಜನವನ್ನೂ ಮನವರಿಕೆ ಮಾಡಿಕೊಡಬೇಕೆಂದು ಅಪ್ಪಣೆಮಾಡಿದರು. ಪ್ರಪ್ರಥಮವಾಗಿ ನಡೆದ ಈ ಗೋಷ್ಠಿಯು ಹೆಚ್ಚು ವ್ಯಾಪಕವಾಗಿಯೂ ಪ್ರಯೋಜನಕರವಾಗಿಯೂ ನಡೆಯಲು ಸಾಕಷ್ಟು ಅವಕಾಶವಿರಲಿಲ್ಲವಾಗಿ ಸಾಮಾನ್ಯರೀತಿಯಲ್ಲಿ ಜರುಗಿತು.

**ಶ್ರೀಶ್ರೀಗಳವರ ದಕ್ಷಿಣದೇಶಪ್ರವಾಸ :**

ಶ್ರೀಶ್ರೀಗಳವರು ಮಿತಪರಿವಾರದೊಡನೆ ಹೊರಟು ತಾ. 22.2.58ರಿಂದ ಸುಮಾರು ಮೂರುವಾರಗಳ ಕಾಲ ಮದ್ರಾಸ್, ಕಂಚಿ, ತಿರುಪತಿ, ಶ್ರೀರಂಗ, ಮಧುರೆ, ರಾಮೇಶ್ವರ, ಪಳನಿ- ಮುಂತಾದ ಕ್ಷೇತ್ರಗಳನ್ನು ಸಂದರ್ಶಿಸಿಕೊಂಡು ಬಂದರು. ಈ ಪ್ರವಾಸದಲ್ಲಿ ಆಗ್ಗೆ ಮಧುರೆಯಲ್ಲಿ ಬಿಡಾರಮಾಡಿದ್ದ ಶ್ರೀಶೃಂಗೇರಿ ಜಗದ್ಗುರು ಪೀಠಾಧೀಶ್ವರರನ್ನೂ ಕಂಚಿಯಲ್ಲಿ ಶ್ರೀಕಾಮಕೋಟಿ ಜಗದ್ಗುರು ಪೀಠಾಧ್ಯಕ್ಷರನ್ನೂ ಸಂದರ್ಶಿಸಿದ್ದರು. ಆಗ್ಗೆ ಉಭಯಪೀಠಾಧಿಪತಿಗಳಿಗೂ ಶ್ರೀಗಳು ತಾವು ರಚಿಸಿದ್ದ ನೂತನ ಸಂಸ್ಕೃತಗ್ರಂಥವಾದ "ಮಾಂಡೂಕ್ಯರಹಸ್ಯವಿವೃತಿ" ಯನ್ನು ಸಮರ್ಪಿಸಿದರು.

**ಗ್ರಂಥಪ್ರಕಟನೆ :**

ಶ್ರೀಶ್ರೀಗಳವರು ಮಾಂಡೂಕ್ಯೋಪನಿಷತ್ತು-ಗೌಡಪಾದಕಾರಿಕೆಗಳ ಮೇಲೆ ಶ್ರೀಶಂಕರಾಚಾರ್ಯರು ಬರೆದಿರುವ ಅಮೋಘಭಾಷ್ಯವನ್ನು ಅನುಸರಿಸಿ ಸ್ವತಂತ್ರವಾದ ವಿಸ್ತಾರವಾದ ಸಂಸ್ಕೃತವ್ಯಾಖ್ಯಾನವನ್ನು ಬರೆದು ಅದಕ್ಕೆ ಆಂಗ್ಲಭಾಷೆಯಲ್ಲಿ ವಿಮರ್ಶಾತ್ಮಕವಾದ

ಪೀಠಿಕೆಯನ್ನೂ ಬರೆದಿದ್ದರು. **"ಮಾಂಡೂಕ್ಯರಹಸ್ಯವಿವೃತಿಃ"** ಎಂಬ ಹೆಸರಿನ ಈ ಅಮೋಘಗ್ರಂಥವು 1958ನೆಯ ಮಾರ್ಚಿಯಲ್ಲಿ ಪ್ರಕಟವಾಯಿತು. ಮತ್ತು **'ಅಧ್ಯಾತ್ಮವೆಂದರೇನು?', 'ಲಕ್ಷಣಶಾಸ್ತ್ರ ಉರುಫ್ ಹಸೇನ್'**- ಎಂಬ ಎರಡು ಪುಸ್ತಕಗಳನ್ನು ಮತ್ತೆ ಅಚ್ಚುಮಾಡಿಸಿ ಪ್ರಕಟಿಸಲಾಯಿತು. ಡಿಸೆಂಬರ್ ವೇಳೆಗೆ **'ಶಿವಕವಚ'** ವನ್ನು ಮತ್ತೆ ಅಚ್ಚುಮಾಡಿಸಿ ಸಿದ್ಧಗೊಳಿಸಲಾಯಿತು.

### ಶಂಕರಸಪ್ತಾಹ:

1958ನೆಯ ವಿಳಂಬಿಸಂವತ್ಸರದ **ಶಂಕರಸಪ್ತಾಹವು ಹಾಸನದಲ್ಲಿ ಶ್ರೀವಿರೂಪಾಕ್ಷೇಶ್ವರ ಸ್ವಾಮಿಯವರ ದೇವಸ್ಥಾನದಲ್ಲಿ** ನಡೆಯಿತು. ಎಂದಿನಂತೆ ಕಾರ್ಯಕ್ರಮಗಳು ನಡೆದವು. ಸಮಿತಿಯ ಅಧ್ಯರಾಗಿದ್ದ ಶ್ರೀ ಎಂ.ಆರ್. ನಾರಾಯಣರಾಯರು ಎಲ್ಲಾ ವ್ಯವಸ್ಥೆಗಳನ್ನೂ ಮಾಡಿದ್ದರು.

### ಇತರ ಚಟುವಟಿಕೆಗಳು:

1958ನೆಯ ವರ್ಷದ **ರಾಮನವರಾತ್ರಿ ಉತ್ಸವವೂ ಚಾತುರ್ಮಾಸ್ಯ ಸಂಕಲ್ಪವೂ ಹೊಳೆನರಸೀಪುರದಲ್ಲಿಯೇ** ನೆರವೇರಿದವು. ಭಕ್ತಮಹನೀಯರುಗಳು ಎಂದಿನಂತೆ ಭಾಗವಹಿಸಿ ಉತ್ಸವಗಳು ಯಶಸ್ವಿಯಾಗುವಂತೆ ಮಾಡಿದರು. ಈ ಅವಧಿಯಲ್ಲಿ **ಲಿಂಗಮಹಾಪುರಾಣವನ್ನು** ಪೂರೈಸಿ ತಾ. 23.6.58ರಿಂದ ದೇವೀಭಾಗವತವನ್ನು ಪ್ರಾರಂಭಿಸಲಾಯಿತು. ಪಾಠಪ್ರವಚನಗಳೂ ಉಪನ್ಯಾಸಗಳೂ ಎಂದಿನಂತೆ ನಡೆಯುತ್ತಿದ್ದವು. **ಸಂಸ್ಕೃತಭಾಷಾಭ್ಯಾಸ 1ನೆಯ ಭಾಗ**- ಎಂಬ ಗ್ರಂಥವನ್ನು ಪತ್ರಿಕೆಯ ಮೂಲಕ ಪ್ರಕಟಿಸಲಾಯಿತು. ಪೂಜಾಮಂದಿರದಲ್ಲಿದ್ದ ಶ್ರೀಬ್ರಹ್ಮಚೈತನ್ಯ ಗುರುಮಹಾರಾಜರ ಪಾದುಕೆಗಳನ್ನು ಬೆಳ್ಳಿನಕಾಶೆಯ ತಗಡುಗಳಿಂದ ಅಲಂಕರಿಸಲಾಯಿತು. ಶ್ರೀಶ್ರೀಗಳು ಬರೆದಿದ್ದ **ಶಾಂಕರವೇದಾಂತ ಪ್ರಕ್ರಿಯೆ** - ಎಂಬ ಕನ್ನಡ ಗ್ರಂಥದ **ತೆಲುಗು ಅನುವಾದವು** ಗೀತಾಸಾಹಿತ್ಯಸೇವಾಸಮಿತಿ, ಆಳ್ಳಗಡ್ಡ-ಇವರಿಂದ ಪ್ರಕಾಶಿತವಾಯಿತು. ಪೂಜಾಮಂದಿರದ ಭಜನಮಂದಿರದ ಕಟ್ಟಡದ ಕೆಲಸವು ಮುಂದುವರೆದಿತ್ತು.

### ವೇದಾಂತವಿಚಾರಗೋಷ್ಠಿ:

ಎರಡನೆಯ ಬಾರಿಗೆ ವೇದಾಂತಗೋಷ್ಠಿಯು ವೇ।। ಎಸ್. ವಿಠಲಶಾಸ್ತ್ರಿಗಳವರ ಪರಿಶ್ರಮದಿಂದ ಮೈಸೂರಿನಲ್ಲಿ ಅಭಿನವಶಂಕರಾಲಯದಲ್ಲಿ ತಾ. 29.9.58ರಿಂದ ನಾಲ್ಕು ದಿನಗಳಕಾಲ ನಡೆಯಿತು. ಈ ಬಾರಿ ಹೆಚ್ಚು ಪಂಡಿತರುಗಳು ಭಾಗವನ್ನು ವಹಿಸಿದ್ದರು. ಕೆಲವು ಭಾಷಣಗಳು ಆದವು. ಶ್ರೀಶ್ರೀಗಳವರು ತಮ್ಮ ಉಪದೇಶದಲ್ಲಿ ಇಂಥ ಗೋಷ್ಠಿಗಳಲ್ಲಿ ಹೆಚ್ಚು

ಪಂಡಿತರುಗಳು ಭಾಗವಹಿಸಿ ಈಗಿನ ಕಾಲಕ್ಕೆ ವೇದಾಂತವಿಚಾರವು ಹೇಗೆ ಆಗಬೇಕು? ಈಗಿನ ಸಮಸ್ಯೆಗಳಿಗೆ ವೇದಾಂತದಲ್ಲಿ ಉತ್ತರವಿದೆಯೆ?- ಇಂಥ ವಿಚಾರಗಳಲ್ಲಿ ಚರ್ಚಿಸಿ ನಿರ್ಣಯಕ್ಕೆ ಬರುವ ಏರ್ಪಾಡಾಗಬೇಕು. ಇದರಿಂದ ಎಲ್ಲರಿಗೂ ಪ್ರಯೋಜನವುಂಟೆಂದು ತಿಳಿಸಿದರು.

## ಅನುಷ್ಠಾನಗಳು :

ಈ ವರ್ಷದ ಶರನ್ನವರಾತ್ರಿ, ಗೀತಾಜಯಂತಿ, ಬ್ರಹ್ಮಚೈತನ್ಯರ ಆರಾಧನೆ-ಈ ಉತ್ಸವಗಳು ಎಂದಿನಂತೆ ಸಮರ್ಪಕವಾಗಿ ನೆರವೇರಿದವು.

## ಗ್ರಂಥಪ್ರಕಟನೆಗೆ ಸಹಾಯ :

ಶ್ರೀಶ್ರೀಗಳವರು ಶ್ರೀರಾಮಾನುಜಾಚಾರ್ಯರವರ **'ವೇದಾರ್ಥಸಂಗ್ರಹ'** ಎಂಬ ಗ್ರಂಥವನ್ನು ಶಂಕರಭಾಷ್ಯಗಳ ಮಾದರಿಯಲ್ಲಿಯೇ ಮೂಲ, ಅನುವಾದ, ಟಿಪ್ಪಣಿ, ಪೀಠಿಕೆ, ಶಬ್ದಾನುಕ್ರಮಣಿಕೆ-ಇವುಗಳೊಡನೆ ಈ ವೇಳೆಗಾಗಲೇ ಬರೆದುಸಿದ್ಧಪಡಿಸಿದ್ದರು. ಈ ವಿಚಾರವನ್ನು ಶ್ರೀವೈಷ್ಣವಮಹಾಜನರಲ್ಲಿ ಪ್ರಸ್ತಾಪಿಸಲಾಗಿ ಗೊರೂರಿನ ಒಬ್ಬ ಭಕ್ತರು ಈ ಗ್ರಂಥಪ್ರಕಟನೆಯ ವೆಚ್ಚದಲ್ಲಿ ನಾಲ್ಕನೆಯ ಒಂದು ಭಾಗವನ್ನು ಉದಾರ ಮನಸ್ಸಿನಿಂದ ವಹಿಸಿಕೊಂಡರು. ಉಳಿದ ಭಾಗಕ್ಕೆ ಮಹಾಜನರ ಸಹಾಯದಿಂದಲೂ ಕಾರ್ಯಾಲಯದ ಪ್ರಕಟನನಿಧಿಯಿಂದಲೂ ಹಣವನ್ನು ಒದಗಿಸಿಕೊಂಡು ಈ ಅಮೋಘಗ್ರಂಥವನ್ನು ಪ್ರಕಾಶಗೊಳಿಸಲಾಯಿತು. ಶ್ರೀರಾಮಾನುಜಾಚಾರ್ಯರ ಉಳಿದ ಗ್ರಂಥಗಳೂ ಶಂಕರಭಾಷ್ಯಗಳಂತೆಯೇ ಕನ್ನಡದಲ್ಲಿ ಬರಬೇಕಾದ ಅಗತ್ಯವು ಬಹಳವಾಗಿದೆ. ಕಾರ್ಯಾಲಯದವರು **ವೇದಾರ್ಥಸಂಗ್ರಹ, ವೇದಾಂತಸಾರ** (ಬ್ರಹ್ಮಸೂತ್ರ 1ನೆಯ ಅಧ್ಯಾಯದ 2 ಪಾದಗಳು). **ಶ್ರೀಭಾಷ್ಯ** (ಜಿಜ್ಞಾಸಾಧಿಕರಣ) ಈ ಮೂರು ಗ್ರಂಥಗಳನ್ನು ಮಾತ್ರ ಈವರೆಗೆ ಹೊರತಂದಿರುತ್ತಾರೆ.

## ಶ್ರೀಶ್ರೀಗಳವರ ಪ್ರವಾಸ :

ಶ್ರೀಶ್ರೀಗಳವರು ಮಿತಪರಿವಾರದೊಡನೆ ತಾ. 3.12.58 ರಿಂದ ಎರಡು ವಾರಗಳಕಾಲ ತರೀಕೆರೆ, ಭದ್ರಾವತಿ, ಶಿವಮೊಗ್ಗ-ಈ ಪ್ರಾಂತ್ಯಗಳಲ್ಲಿ ಸಂಚರಿಸಿ ಮಹಾಜನರಿಗೆ ಅಧ್ಯಾತ್ಮೋಪದೇಶಗಳನ್ನು ನೀಡಿದರು. ಮಹಾಜನರು ಗುರುಗಳನ್ನು ಯಥೋಚಿತವಾಗಿ ಸತ್ಕರಿಸಿ ಕೃತಾರ್ಥರಾದರು. ಶ್ರೀಗಳು 1959ನೆಯ ಮಾರ್ಚಿಯಲ್ಲಿ ಚಿಕ್ಕಮಗಳೂರು, ಕಳಸ ಪ್ರಾಂತ್ಯಕ್ಕೆ ಹೋಗಿಬಂದರು.

## ಗೋಶಾಲೆ :

1959ನೆಯ ಜನವರಿ ಮಾಹೆಯಲ್ಲಿ ಶ್ರೀ ಕಿಕ್ಕೇರಿ ಗುಂಡಪ್ಪನವರೆಂಬ ಭಕ್ತರು ಕಾರ್ಯಾಲಯದಲ್ಲಿ ಶ್ರೀರಾಮದೇವರಿಗೆ ಅಭಿಷೇಕ ಹಾಗೂ ನೈವೇದ್ಯಾದಿಗಳಿಗೆ ಮತ್ತು

ಶ್ರೀಶ್ರೀಗಳವರ ಸತ್ಕಾರಕ್ಕೆ ಅನುಕೂಲಿಸುವಂತೆ ಒಂದು ಹಸು, ಕರು ಮತ್ತು ಇತರ ಸಲಕರಣೆಗಳನ್ನೂ ದಾನಮಾಡಿದ್ದರು. ಆದ್ದರಿಂದ ಒಂದು ಗೋಶಾಲೆಯನ್ನು ಪ್ರಾರಂಭಿಸಲಾಯಿತು.

## ಅನುಷ್ಠಾನಗಳು :

1959ನೆಯ ವರ್ಷದ ರಾಮನವರಾತ್ರ ಉತ್ಸವವೂ ಶಂಕರಸಪ್ತಾಹ ಮಹೋತ್ಸವವೂ ಹೊಳೆನರಸೀಪುರದಲ್ಲಿಯೇ ನಡೆದವು. ಶಂಕರಸಪ್ತಾಹದಲ್ಲಿ ಎಂದಿನಂತೆ ವಿದ್ವಾಂಸರುಗಳು ಭಾಗವನ್ನು ವಹಿಸಿದ್ದರು. ಭಾಷ್ಯಪ್ರವಚನ, ಪುರಾಣ, ಉಪನ್ಯಾಸಾದಿಗಳು ಕಾರ್ಯಕ್ರಮದಂತೆ ನೆರವೇರಿದವು.

## ಜನರಲ್‌ಬಾಡಿ ಮೀಟಿಂಗ್ :

ಶ್ರೀಶ್ರೀಗಳವರು ಸಂನ್ಯಾಸಸ್ವೀಕಾರಮಾಡಿದ ಬಳಿಕ ಕಾರ್ಯಾಲಯದ ಆಡಳಿತವನ್ನು ಕಾರ್ಯಕಾರಿಸಮಿತಿಯವರು ವಹಿಸಿಕೊಂಡಮೇಲೆ ಮೊದಲನೆಯಬಾರಿಗೆ ಒಂದು ಜನರಲ್‌ಬಾಡಿ ಮೀಟಿಂಗನ್ನು ತಾ. 19.5.59ರಂದು ಮೈಸೂರಿನ ಪ್ರಸಿದ್ಧ ಅಡ್ವೋಕೇಟ್ ಶ್ರೀ ಕೆ.ಪುಟ್ಟೂರಾಯರ ಅಧ್ಯಕ್ಷತೆಯಲ್ಲಿ ನಡೆಯಿಸಲಾಯಿತು. ಶ್ರೀಶ್ರೀಗಳವರ ಸಲಹೆಯಿಂತೆ ಹಿಂದಿನ ನಿಯಮ ನಿಬಂಧನೆಗಳಿಗೆ ಅವಿರೋಧವಾಗಿ ವಿಸ್ತಾರವಾದ ಹಾಗೂ ವ್ಯಾಪಕವಾದ ಹೊಸ ನಿಯಮ ನಿಬಂಧನೆಗಳನ್ನು ರಚಿಸಿ ಈ ಸಭೆಯಲ್ಲಿ ಅನುಮತಿ ಪಡೆದು ಜಾರಿಗೆ ತರಲಾಯಿತು. ಹೊಸ ನಿಯಮನಿಬಂಧನೆಗಳನ್ನು ಅಧ್ಯಾತ್ಮಪ್ರಕಾಶ ಮಾಸಪತ್ರಿಕೆಯಲ್ಲೂ ಪ್ರಕಟಿಸಲಾಯಿತು.

## ಅಧ್ಯಾತ್ಮವಿದ್ಯಾನಿಲಯ :

ಸುಮಾರು ಏಳು ವರ್ಷಗಳಿಂದಲೂ ವಿದ್ಯಾಭ್ಯಾಸಮಾಡಿಕೊಂಡಿದ್ದ ಶ್ರೀ ಮತ್ತೂರು ರಾಮಸ್ವಾಮಿ ಅವಧಾನಿ- ಎಂಬ ವಿದ್ಯಾರ್ಥಿಯು ವಿದ್ಯಾನಿಲಯವನ್ನು ಬಿಟ್ಟು ಊರಿಗೆ ಹೊರಟುಹೋದನು. ಅನಂತರ ಮುಂದೆ 1959ನೆಯ ಸೆಪ್ಟೆಂಬರ್ ವೇಳೆಗೆ ಶ್ರೀ ಬಿ.ಕೆ. ಮಂಜಯ್ಯನೆಂಬ ವಿದ್ಯಾರ್ಥಿಯೂ ತನ್ನ ಎಂಟುವರ್ಷಗಳ ಶಿಕ್ಷಣವನ್ನು ಪೂರೈಸಿಕೊಂಡು ಊರಿಗೆ ಹೊರಟು ಹೋದನು. ಇದರಿಂದ ಕೆಲವುಕಾಲ ವಿದ್ಯಾನಿಲಯವನ್ನು ವಿದ್ಯಾರ್ಥಿಗಳಿಲ್ಲದೆ ಮುಚ್ಚಬೇಕಾಗಿಬಂತು. ಶಿಕ್ಷಣವನ್ನು ಪೂರ್ಣಗೊಳಿಸಿದಮೇಲೆ ಪರೀಕ್ಷೆಗಳನ್ನು ನಡೆಸಿ ವಿದ್ಯಾರ್ಥಿಗಳಿಗೆ ಯೋಗ್ಯತಾಪತ್ರಗಳನ್ನು ಕೊಡಬೇಕೆಂದು ಸಮಿತಿಯವರು ಆಲೋಚಿಸಿದ್ದರು. ಆದರೆ ವಿದ್ಯಾರ್ಥಿಗಳು ಪರೀಕ್ಷೆಗೆ ಕೂರಲಿಲ್ಲವಾಗಿ ಪ್ರಶಸ್ತಿಪತ್ರಪ್ರದಾನ ಸಮಾರಂಭವನ್ನು ನಡೆಯಿಸಲು ಸಾಧ್ಯವಾಗಲಿಲ್ಲ.

## ಶ್ರೀ ಸಂತೇಬಾಚಳ್ಳಿ ಸುಬ್ರಾಯರು :

ಕಾರ್ಯಕಾರಿಸಮಿತಿಯ ಸದಸ್ಯರೂ ಪ್ರಸಿದ್ಧ ಅಡ್ವೊಕೇಟರೂ ಆಗಿದ್ದ ಶ್ರೀ **ಸಂತೇಬಾಚಳ್ಳಿ ಸುಬ್ರಾಯರು** ತಾ. 14-6-59ನೆಯ ಭಾನುವಾರ ನಿಧನರಾದರು. ಶ್ರೀಯುತರು ಬಹಳವರ್ಷಗಳಿಂದ ಕಾರ್ಯಾಲಯದಲ್ಲಿ ನಡೆಯುತ್ತಿದ್ದ ವೇದಾಂತಪಾಠಗಳು, ಉಪನ್ಯಾಸಗಳು, ಅನುಷ್ಠಾನಗಳು, ಭಜನೆ-ಇವುಗಳಲ್ಲಿ ತಪ್ಪದೆ ಭಾಗವನ್ನು ವಹಿಸುತ್ತಿದ್ದರು. ವಿದ್ಯಾನಿಲಯದ ವಿದ್ಯಾರ್ಥಿಗಳಿಗೆ ವಾರಗಳನ್ನು ಕೊಟ್ಟಿದ್ದರು. ಅನುಷ್ಠಾನಕಾಲಗಳಲ್ಲಿ ಕೆಲವು ವೇಳೆ ಅತಿಥಿಗಳ ಭೋಜನಾದಿಗಳಿಗೂ ಏರ್ಪಡಿಸುತ್ತಿದ್ದರು. ಅನೇಕ ತೀರ್ಥಯಾತ್ರೆಗಳನ್ನೂ ದಾನಧರ್ಮಗಳನ್ನೂ ಮಾಡಿದ್ದರು. ಕಾರ್ಯಾಲಯದ ಬೇರೆಬೇರೆಯ ನಿಧಿಗಳಿಗೆ ಯಥೋಚಿತವಾಗಿ ಸಹಾಯದ್ರವ್ಯವನ್ನು ಸಲ್ಲಿಸಿದ್ದರು. ಇಂಥ ಮಹನೀಯರು ನಿಧನರಾಗುವ ದಿನವೂ ಶ್ರೀಶ್ರೀಗಳವರ ಉಪನ್ಯಾಸಶ್ರವಣಕ್ಕಾಗಿ ಕಾರ್ಯಾಲಯಕ್ಕೆ ಬರುತ್ತಾ ದಾರಿಯಲ್ಲಿ ಆಶ್ರಮದ ಹತ್ತಿರವೇ ಕುಸಿದುಬಿದ್ದು ಅಲ್ಲಿಯೇ ಪ್ರಾಣತ್ಯಾಗಮಾಡಿದರು. ರಾಮಾಯಣದ ಜಟಾಯುವಿನಂತೆ ಪ್ರಾಣತ್ಯಾಗಕಾಲದವರೆಗೂ ವೇದಾಂತಶ್ರವಣಮನನ ವಿಚಾರಗಳನ್ನೇ ಮಾಡುತ್ತಾ ದೇಹವನ್ನು ಬಿಟ್ಟ ಈ ಮಹನೀಯರ ಜೀವನವು ಒಂದು ಆದರ್ಶಪ್ರಾಯವಾಗಿತ್ತೆಂದು ಹೇಳಿದರೆ ಹೆಚ್ಚಾಗಲಾರದು.

## ಪುಸ್ತಕಪ್ರಕಟನೆ :

1959ನೆಯ ಸೆಪ್ಟೆಂಬರ್‌ವೇಳೆಗೆ **ಕನ್ನಡದಲ್ಲಿ ಶಂಕರವೇದಾಂತಸಾರ, ಸಂಸ್ಕೃತ ಭಾಷಾಭ್ಯಾಸ 2ನೆಯ ಭಾಗ-** ಈ ಗ್ರಂಥಗಳು ಪತ್ರಿಕೆಯ ಮೂಲಕ ಪ್ರಕಟವಾದವು. **ಸಂಸ್ಕೃತದಲ್ಲಿ ವೇದಾಂತಬಾಲಬೋಧಿನೀ. ಕೇನೋಪನಿಷದ್ಭಾಷ್ಯ** (ಸಟಿಪ್ಪಣಿ) ಇವುಗಳು ಸಿದ್ಧವಾದವು. **ವೇದಾರ್ಥಸಂಗ್ರಹವು** ಸ್ವತಂತ್ರವಾಗಿಯೇ ಪ್ರಕಟವಾಗಿ ಮಾರಾಟಕ್ಕೆ ಸಿದ್ಧವಾಯಿತು.

## ಚಾತುರ್ಮಾಸ್ಯಸಂಕಲ್ಪ :

ಶ್ರೀಶ್ರೀಗಳವರು 1959ನೆಯ ವರ್ಷದ ಚಾತುರ್ಮಾಸ್ಯಸಂಕಲ್ಪವನ್ನು **ಮತ್ತೂರು (ಶಿವಮೊಗ್ಗ ಜಿಲ್ಲೆ) ಅಗ್ರಹಾರದಲ್ಲಿ** ನೆರವೇರಿಸಿದರು. ವೇ॥ ಮತ್ತೂರು ಸುಬ್ರಾಯಾವಧಾನಿಗಳವರ ಸಹಕಾರದಿಂದ ಈ ಕಾರ್ಯಕ್ರಮವು ಚೆನ್ನಾಗಿ ನಡೆಯಿತು. ಮುಂದೆ ಎರಡುತಿಂಗಳ ಕಾಲವೂ ಶ್ರೀಗಳವರು ಅಲ್ಲಿನ ಮಹಾಜನರಿಗೆ ವೇದಾಂತಪಾಠಗಳನ್ನೂ ಉಪದೇಶಗಳನ್ನೂ ಅನುಗ್ರಹಿಸಿದರು. ಚಾತುರ್ಮಾಸ್ಯವು ಪೂರೈಸಿದ ಅನಂತರ ಹೊಳೆನರಸೀಪುರಕ್ಕೆ ದಯಮಾಡಿಸಿದರು.

## ಇತರ ಚಟುವಟಿಕೆಗಳು :

ಕಾರ್ಯಾಲಯದಲ್ಲಿ ನಡೆಯಬೇಕಾಗಿದ್ದ ಶರನ್ನವರಾತ್ರಿ, ಗೀತಾಜಯಂತಿ, ಬ್ರಹ್ಮಚೈತನ್ಯರ ಆರಾಧನೆ-ಅನುಷ್ಠಾನಗಳೆಲ್ಲವೂ ಎಂದಿನಂತೆ ನೆರವೇರಿದವು. ಚಿದಾನಂದರಗಳೆ,

ಶಾಂಕರವೇದಾಂತಪ್ರಕ್ರಿಯೆ-ಇವುಗಳನ್ನು ಪುನರ್ಮುದ್ರಣ ಮಾಡಿಸಲಾಯಿತು. ದೇವೀಭಾಗವತವನ್ನು ಪೂರೈಸಿ ವಿಷ್ಣುಧರ್ಮೋತ್ತರಪುರಾಣವನ್ನು ಆರಂಭಿಸಲಾಯಿತು. 1959ನೆಯ ವರ್ಷದಲ್ಲಿ ಸುಮಾರು ಏಳೆಂಟು ತಿಂಗಳಕಾಲ ವಿದ್ಯಾರ್ಥಿಗಳಾಗಲಿ, ಆಫೀಸುಗುಮಾಸ್ತರಾಗಲಿ ಯಾರೂ ಇರಲಿಲ್ಲ. ಇದರಿಂದ ಪಂಡಿತರೇ ದೇವರಪೂಜೆ, ಲೆಕ್ಕಪ್ರತ್ಯವ್ಯವಹಾರ, ಪತ್ರಿಕೆಪುಸ್ತಕಗಳ ರಚನೆ, ಪ್ರೂಫ್ ನೋಡುವದು ಇತ್ಯಾದಿ ಎಲ್ಲಾ ಕೆಲಸಗಳನ್ನೂ ನಿರ್ವಹಿಸಬೇಕಾಗಿತ್ತು. ಶ್ರೀಶ್ರೀಗಳವರೂ ಪರಸ್ಥಳಗಳಲ್ಲಿದ್ದುದರಿಂದ ಭಾನುವಾರದ ಉಪನ್ಯಾಸಗಳು, ಪುರಾಣಶ್ರವಣ ಇವುಗಳನ್ನೂ ಪಂಡಿತರೊಬ್ಬರೇ ನಡೆಸುತ್ತಿದ್ದರು. ಆದ್ದರಿಂದ ಮತ್ತೇನೂ ವಿಶೇಷ ಚಟುವಟಿಕೆಗಳನ್ನು ನಡೆಸಲು ಸಾಧ್ಯವಾಗಲಿಲ್ಲ. 1958ರಿಂದೀಚೆಗೆ ಆಫೀಸಿಗೆ ಸರಿಯಾದ ಗುಮಾಸ್ತರು ಯಾರೂ ಸಿಕ್ಕದೆ ಸಾಮಾನ್ಯ ಎಸ್.ಎಸ್.ಎಲ್.ಸಿ. ಆಗಿರುವ ಹುಡುಗರು ಒಬ್ಬಿಬ್ಬರನ್ನು ಕೆಲವುಕಾಲ ಇಟ್ಟುಕೊಂಡು ಕೆಲಸವನ್ನು ನಡೆಸಲಾಗುತ್ತಿತ್ತು. ಈ ಪರಿಸ್ಥಿತಿಯು 1963ರವರೆಗೂ ಮುಂದುವರೆದು 1963ನೆಯ ಜನವರಿ ಮಾಹೆಯಲ್ಲಿ ಶ್ರೀ ಡಿ. ವೆಂಕಟೇಶಯ್ಯ ಎಂ.ಎ., ರಿಟೈರ್ಡ್ ಶಿರಸ್ತೇದಾರ್ ಎಂಬ ಮಹನೀಯರನ್ನು ಅಕೌಂಟೆಂಟರಾಗಿ ನೇಮಿಸಲಾಯಿತು. ಇವರು ಬಂದಮೇಲೆ ಆಫೀಸುಕೆಲಸವು ನಿರಾತಂಕವಾಗಿ ಮುಂದುವರಿಯಲು ಸಾಧ್ಯವಾಯಿತು.

### ಶ್ರೀಶ್ರೀಗಳವರ ಪ್ರವಾಸ :

ಶ್ರೀಶ್ರೀಗಳವರು ತಾ. 17.10.59 ರಿಂದ ಸುಮಾರು ಹತ್ತು ತಿಂಗಳು ಬೆಂಗಳೂರಿನಲ್ಲಿಯೇ ನೆಲಸಿದ್ದರು. ನಡುನಡುವೆ ಹೊಳೆನರಸೀಪುರಕ್ಕೆ ಬಂದು ಹೋಗುತ್ತಿದ್ದರು. 1960ನೆಯ ಜನವರಿ ಮಾಹೆಯಲ್ಲಿ ಒಂದುವಾರಕಾಲ ಶ್ರೀಶಂಕರರ ಜನ್ಮಭೂಮಿಯಾದ ಕಾಲಟಿಕ್ಷೇತ್ರಕ್ಕೆ ಪ್ರವಾಸಹೋಗಿಬಂದರು. ಬೆಂಗಳೂರಿನಲ್ಲಿರುವಾಗ **ದಾರ್ಶನಿಕ ಪರಿಷತ್**ನವರ ಆಶ್ರಯದಲ್ಲಿ ಎರಡುಪರ್ಯಾಯಗಳಲ್ಲಿ ಸುಮಾರು ಹದಿನೈದು ದಿನಗಳಂತೆ **ಅಧ್ಯಾತ್ಮೋಪದೇಶ**ಗಳನ್ನು ಅನುಗ್ರಹಿಸಿದರು. 1960ನೆಯ ವರ್ಷದ **ಶಂಕರಸಪ್ತಾಹವೂ ಬೆಂಗಳೂರಿನಲ್ಲಿಯೇ** ನಡೆಯಿತು. ಆಗ್ಗೆ ಎಂದಿನಂತೆ ಕಾರ್ಯಕ್ರಮಗಳು ಜರುಗಿದವು.

### ಶಾಖಾಕಾರ್ಯಾಲಯ :

ಶ್ರೀಶ್ರೀಗಳವರು ಬೆಂಗಳೂರಿನಲ್ಲಿದ್ದಾಗ 1959ನೆಯ ಡಿಸೆಂಬರ್ ತಿಂಗಳಲ್ಲಿ **'ಅಧ್ಯಾತ್ಮಪ್ರಕಾಶಕಾರ್ಯಾಲಯದ ಬೆಂಗಳೂರು ಶಾಖೆ'**ಯು ಪ್ರಾರಂಭವಾಯಿತು. ನರಸಿಂಹರಾಜ ಕಾಲೋನಿಯಲ್ಲಿ ಒಂದು ಬಾಡಿಗೆಮನೆಯಲ್ಲಿ ಸುಮಾರು ಎಂಟುತಿಂಗಳಕಾಲ ನಡೆದ ಈ ಶಾಖೆಯನ್ನು ಶ್ರೀಶ್ರೀಗಳವರೇ ಸ್ವತಃ ತಮ್ಮ ಪಾಠಪ್ರವಚನಗಳಿಂದಲೂ ಸಾನ್ನಿಧ್ಯದಿಂದಲೂ ಪೋಷಿಸಿಕೊಂಡು ಬಂದರು. ಬರುಬರುತ್ತಾ ಮಹಾಜನರ ಉತ್ಸಾಹವು

ಇಳಿಮುಖವಾದ್ದರಿಂದಲೂ ಶ್ರೀಗಳವರು ಮುಂದೆ ಧಾರವಾಡಕ್ಕೆ ಚಾತುರ್ಮಾಸ್ಯಕ್ಕೆ ಹೋಗಬೇಕಾಗಿ ಬಂದಿದ್ದರಿಂದಲೂ ಈ ಶಾಖೆಯು ಸರಿಯಾದ ಸಂಚಾಲಕರಿಲ್ಲದೆ ಮುಚ್ಚಲ್ಪಟ್ಟಿತು.

## ಶ್ರೀಶ್ರೀಗಳವರ ಆಶೀತಿತಮಾಬ್ದ ವಿಶೇಷಮಹೋತ್ಸವ;

1959ನೆಯ ಡಿಸೆಂಬರ್ ತಿಂಗಳಲ್ಲಿ ಶ್ರೀಶ್ರೀಗಳವರಿಗೆ ಎಂಬತ್ತನೆಯ ವರ್ಷವು ಆರಂಭವಾದ್ದರಿಂದ ಒಂದು ವಿಶೇಷಮಹೋತ್ಸವವನ್ನು ಭಕ್ತಮಂಡಳಿಯವರ ಇಚ್ಛೆಯಂತೆ ಏರ್ಪಡಿಸಲಾಯಿತು. ಆಗ್ಗೆ ಶತರುದ್ರೀಯಜಪ, ಅಭಿಷೇಕಪೂಜಾದಿಗಳು, ರುದ್ರಹೋಮ, ಬ್ರಾಹ್ಮಣಸಂತರ್ಪಣೆ-ಇವುಗಳನ್ನು ನಡೆಸಲಾಯಿತು. ಸ್ಥಳಪರಸ್ಥಳಗಳಿಂದ ನೂರಾರು ಜನ ಭಕ್ತಮಹಾಶಯರುಗಳು ನೆರೆದಿದ್ದು ಈ ಉತ್ಸವವು ತುಂಬ ಯಶಸ್ವಿಯಾಗಿ ನೆರವೇರಿತು.

## ವಿದ್ಯಾನಿಲಯ :

ವಿದ್ಯಾನಿಲಯಕ್ಕೆ 1960ನೆಯ ಮೇ ಮಾಹೆಯ ವೇಳೆಗೆ ಶ್ರೀ ಕಿಕ್ಕೇರಿ ಗುಂಡಪ್ಪನವರ ಪುತ್ರರುಗಳಾದ ಚಿ.ರಾ. ಲಕ್ಷ್ಮೀನರಸಿಂಹಯ್ಯ ಮತ್ತು ಚಿ.ರಾ. ಕೆ. ಜಿ. ಸುಬ್ರಾಯಶರ್ಮ- ಎಂಬ ಇಬ್ಬರು ಬಾಲ್ಯಪಾಠದ ವಿದ್ಯಾರ್ಥಿಗಳು ಬಂದು ಸೇರಿದರು. ಇವರುಗಳಿಗೆ ಸಂಧ್ಯಾವಂದನೆಯ ಮಂತ್ರಗಳಿಂದ ಪ್ರಾರಂಭಿಸಿ ಕಾಲೋಚಿತವೇದಪಾಠಗಳು ಮತ್ತು ಸಂಸ್ಕೃತಭಾಷೆಯನ್ನು ಹೇಳಿಕೊಡುವ ಏರ್ಪಾಡು ಮಾಡಲಾಯಿತು.

## ಚಾತುರ್ಮಾಸ್ಯಸಂಕಲ್ಪ :

1960ನೆಯ ವರ್ಷದ ಚಾತುರ್ಮಾಸ್ಯ ಸಂಕಲ್ಪಕ್ಕೆ ಧಾರವಾಡದ ಮಹಾಜನರಿಂದ ಬಂದ ಕರೆಯನ್ನು ಮನ್ನಿಸಿ ಶ್ರೀಶ್ರೀಗಳವರು ಧಾರವಾಡಕ್ಕೆ ದಯಮಾಡಿಸಿ ವ್ಯಾಸಪೂರ್ಣಿಮಾದಿನ ಗುರುಪೂಜಾದಿಗಳನ್ನೂ ಉಪನ್ಯಾಸಕಾರ್ಯಕ್ರಮಗಳನ್ನೂ ನಡೆಸಿದರು. ಮಧ್ಯಾಹ್ನದ ವೇಳೆಯಲ್ಲಿ ಜಿಜ್ಞಾಸುಗಳಿಗೆ ಭೇಟಿಕೊಟ್ಟು ಅವರ ಪ್ರಶ್ನೆಗಳಿಗೆ ಉತ್ತರಗಳನ್ನು ನೀಡುತ್ತಿದ್ದರು. ಆಗ್ಗೆ ಶ್ರೀಶ್ರೀಗಳವರ ವಿದ್ವತ್‌ಪೂರ್ಣವಾದ ಹಾಗೂ ಅನುಭವಪೂರ್ಣವಾದ ಉಪನ್ಯಾಸಗಳಿಗೆ ಧಾರವಾಡ ನಗರದ ಪ್ರತಿಷ್ಠಿತ ವೈದಿಕ ಲೌಕಿಕ ಮಹಾಜನರೂ ಸುಸಂಸ್ಕೃತಸುಶಿಕ್ಷಿತ ಮಹನೀಯರುಗಳೂ ಬರುತ್ತಿದ್ದರು. ಕಾರ್ಯಕ್ರಮವೆಲ್ಲವೂ ಧಾರವಾಡದ ತತ್ತ್ವಾನ್ವೇಷಣಮಂದಿರದಲ್ಲಿಯೇ ನಡೆಯುತ್ತಿತ್ತು. ಶ್ರೀ ಸುರೇಂದ್ರಶಿವರಾವ ದೇಸಾಯಿ ಎಂ.ಎ., ರವರು ಈ ಉತ್ಸವದ ಮುಖ್ಯಚಾಲಕರಾಗಿದ್ದರು. ಚಾತುರ್ಮಾಸ್ಯ ಉತ್ಸವವು ನಡೆದ ಎರಡು ತಿಂಗಳ ಕಾಲವೂ ಶ್ರೀ ದೇಸಾಯಿಯವರು ಶ್ರೀಶ್ರೀಗಳವರಿಂದ ರಚಿತವಾಗಿ ಕಾರ್ಯಾಲಯದ ಮೂಲಕ ಪ್ರಕಾಶಗೊಳಿಸಲ್ಪಟ್ಟಿರುವ ಅಧ್ಯಾತ್ಮಗ್ರಂಥಗಳ ಪ್ರದರ್ಶನವೊಂದನ್ನು ಏರ್ಪಡಿಸಿದ್ದರು. ಅನೇಕರು ಇದರಿಂದ ಲಾಭವನ್ನು ಪಡೆದು ಶ್ರೀಗಳವರ ಗ್ರಂಥಗಳನ್ನು ಕೊಂಡು ಓದಿ ತಮ್ಮ ಜ್ಞಾನವನ್ನು ಅಭಿವೃದ್ಧಿಗೊಳಿಸಿಕೊಂಡರು. ಅಂತೂ ಈ ಉತ್ಸವವು ಬಹಳ ಯಶಸ್ವಿಯಾಗಿ ನೆರವೇರಿತು. ಈ ಉತ್ಸವಸಂದರ್ಭದಲ್ಲಿ ಬೊಂಬಾಯಿನ

ಶ್ರೀ ಎಂ. ವೆಂಕಟರಾಮಯ್ಯನವರೆಂಬ ಮಹನೀಯರ ಔದಾರ್ಯದಿಂದ ಕೆಲವು ಭಗವದ್ಗೀತೆಯ ಪ್ರತಿಗಳನ್ನು ಉಚಿತವಾಗಿ ಮಹಾಜನರಲ್ಲಿ ಹಂಚಲಾಯಿತು.

**ಇತರ ಚಟುವಟಿಕೆಗಳು :**

1960ನೆಯ ವರ್ಷದ ಶರನ್ನವರಾತ್ರಿ, ಗೀತಾಜಯಂತಿ, ಬ್ರಹ್ಮಚೈತನ್ಯಾರಾಧನೆ-ಈ ಅನುಷ್ಠಾನಗಳು ಸಾಂಗವಾಗಿ ನೆರವೇರಿದವು. ಪುರಾಣಪ್ರವಚನದಲ್ಲಿ ವಿಷ್ಣುಧರ್ಮೋತ್ತರ ಪುರಾಣವನ್ನು ಪೂರೈಸಿ 24.8.60ರಂದು ಬ್ರಹ್ಮವೈವರ್ತಪುರಾಣವನ್ನು ಪ್ರಾರಂಭಿಸಲಾಯಿತು. ಮುದ್ರಣಾಲಯದ ಸಂಸ್ಕೃತವಿಭಾಗಕ್ಕೆ ಒಬ್ಬ ಹೊಸ ಕಂಪಾಜಿಟರನ್ನು ನೇಮಿಸಲಾಯಿತು. ಆದರೆ ಗೋರಕ್ಷಣೆಯು ಕಷ್ಟವಾಗಿ ಕಂಡದ್ದರಿಂದ ಹಸುವನ್ನು ಮಾರಿ ಆ ಶಾಲೆಯನ್ನು ಮುಚ್ಚಲಾಯಿತು. ಕಾರ್ಯಾಲಯದ ಆವರಣದಲ್ಲಿ ಶ್ರೀ ಕಿಕ್ಕೇರಿ ಗುಂಡಪ್ಪನವರ ಸಹಾಯದಿಂದ ಹದಿನೈದು ತೆಂಗಿನಸಸಿಗಳನ್ನು ನೆಡಲಾಯಿತು. ವೇ|| ಸಿ.ಎನ್. ಯಜ್ಞನಾರಾಯಣ ಶಾಸ್ತ್ರಿಗಳೆಂಬವರನ್ನು (ಇವರು ಹಿಂದೆ ಕಾರ್ಯಾಲಯದಲ್ಲಿಯೇ ವಿದ್ಯಾರ್ಥಿಗಳಾಗಿದ್ದರು) ಸಹಾಯಕ ಪಂಡಿತರನ್ನಾಗಿ ನೇಮಿಸಿಕೊಳ್ಳಲಾಯಿತು. ಆದರೆ ಶ್ರೀಯುತರು ಅನಿವಾರ್ಯ ತೊಂದರೆಗಳಿಂದ ನಾಲ್ಕು ತಿಂಗಳ ಅನಂತರ ನಿವೃತ್ತರಾದರು.

**ಭಜನಮಂದಿರ :**

1960ನೆಯ ಡಿಸೆಂಬರ್ ತಿಂಗಳವೇಳೆಗೆ ಭಜನಮಂದಿರದ ಆರ್.ಸಿ.ಸಿ. ರೂಫಿಂಗ್ ಕೆಲಸವು ಪೂರೈಸಿ ಗಿಲಾವು ಮುಂತಾದ ಚಿಲ್ಲರೆ ಕೆಲಸಗಳು ಮಾತ್ರ ಉಳಿದವು. ಹಣದ ಅಭಾವದಿಂದ ಈ ಕೆಲಸಗಳನ್ನು ತಾತ್ಕಾಲಿಕವಾಗಿ ನಿಲ್ಲಿಸಲಾಯಿತು. ದಿವಂಗತ ಸಂತೇಬಾಚಳ್ಳಿ ಸುಬ್ಬಾರಾಯರ ಮಕ್ಕಳಾದ ಡಾ. ಸದಾಶಿವರಾವ್ ಮತ್ತು ಸಹೋದರರು ಶ್ರೀರಾಮರ ಗರ್ಭಗುಡಿಯಮೇಲೆ ಒಂದು ಗೋಪುರವನ್ನು ನಿರ್ಮಿಸಲು ಪ್ರಪ್ರಥಮವಾಗಿ ಐದುನೂರು ರೂಪಾಯಿಗಳನ್ನು ಸಹಾಯದ್ರವ್ಯವಾಗಿ ಅರ್ಪಿಸಿದರು. ಈ ಮೊಬಲಗನ್ನು ಗೋಪುರದ ನಿರ್ಮಾಣಕ್ಕಾಗಿಯೇ ಕಾದಿರಿಸಲಾಯಿತು.

ಅಂತೂ 1960ನೆಯ ವರ್ಷವು ಪೂರೈಸುವ ವೇಳೆಗೆ ಕಾರ್ಯಾಲಯವು ಆರ್ಥಿಕವಾಗಿಯೂ ಉಳಿದ ವಿಷಯಗಳಲ್ಲೂ ಪ್ರಗತಿಪರವಾಗಿಯೇ ಹೆಜ್ಜೆಯನ್ನು ಹಾಕಿತ್ತು. ಕೆಲವು ಅನಿವಾರ್ಯ ಕೊರತೆಗಳು ತೋರಿಕೊಂಡಿದ್ದವಾದರೂ ಬುದ್ಧಿವಂತಿಕೆಯಿಂದ ಅವುಗಳನ್ನು ಪರಿಹರಿಸಿ ಪ್ರಗತಿಗೆ ಅಡ್ಡಿಯಾಗದಂತೆ ಏರ್ಪಾಡುಮಾಡಲಾಯಿತು. ಮುಖ್ಯವಾಗಿ ಎಲ್ಲಾ ಸಂದರ್ಭಗಳಲ್ಲೂ ಶ್ರೀಶ್ರೀಗಳವರ ಅಮೋಘವಾದ ಸೂಚನೆಗಳು ಅವರ ಶ್ರಮದಾನ, ತ್ಯಾಗ-ಇವುಗಳ ಫಲವಾಗಿ ಸಂಸ್ಥೆಯು ದೃಢವಾಗಿ ತನ್ನ ಕಾಲುಗಳ ಮೇಲೆ ತಾನು ನಿಲ್ಲುವಂತೆ ಆಯಿತು. ಆದರೂ ಅದನ್ನು ಪೋಷಿಸಿಬೆಳೆಸುವ ಹೊಣೆಗಾರಿಕೆಯು ಶ್ರೀಶ್ರೀಗಳವರಿಗೆ ಇದ್ದೇಇತ್ತು-ಎಂದು ಹೇಳಬಹುದಾಗಿದೆ.

# ೨೦. ವಿಶೇಷಾಭಿವೃದ್ಧಿಯ ಮಾರ್ಗದಲ್ಲಿ

## (1961-67)

**ಶ್ರೀ ಬೊಂಬಾಯಿ ಎಂ. ವೆಂಕಟರಾಮಯ್ಯನವರು:** ಈ ಮಹನೀಯರು ಕಾರ್ಯಾಲಯದೊಡನೆ 1960ನೆಯ ವರ್ಷದಿಂದಲೇ ಸಂಪರ್ಕವನ್ನು ಬೆಳೆಸುತ್ತಾಬಂದರು. ಶ್ರೀಶ್ರೀಗಳವರನ್ನು ಸಂದರ್ಶಿಸಿದಾಗಿನಿಂದ ಕಾರ್ಯಾಲಯದ ಚಟುವಟಿಕೆಗಳಿಗೂ ಕೆಲಸಗಳಿಗೂ ಕಾಲಾನುಗುಣವಾಗಿ ಸಲಹೆಗಳನ್ನೂ ಪ್ರೋತ್ಸಾಹವನ್ನೂ ಕೊಡುತ್ತಲೇಬಂದರು. ಇವರು ಆಯುರ್ವೇದದಲ್ಲಿಯೂ ಪರಿಶ್ರಮವುಳ್ಳವರು. ಬೊಂಬಾಯಿಯಲ್ಲಿ ತಮ್ಮ ಪುತ್ರನೊಡನೆ ವಾಸವಾಗಿದ್ದರು. ಶ್ರೀ ವೆಂಕಟರಾಮಯ್ಯನವರು ಕಾರ್ಯಾಲಯದಲ್ಲಿದ್ದ ಗ್ರಂಥಗಳ ರಾಶಿಯನ್ನು ನೋಡಿ ಇದನ್ನು ಹೇಗಾದರೂ ಜನರಲ್ಲಿ ಪ್ರಚಾರಮಾಡಬೇಕೆಂಬ ಸದಿಚ್ಛೆಯಿಂದ ಬ್ರಹ್ಮವಿದ್ಯಾದಾನ, ಹಬ್ಬಹರಿದಿನಗಳಲ್ಲಿ ಅಧ್ಯಾತ್ಮಗ್ರಂಥಗಳ ಪಾರಿತೋಷಿಕ ಮತ್ತು ವಿಶೇಷವಿನಿಯೋಗ ಎಂಬ ಮೂರು ಯೋಜನೆಗಳನ್ನು ತೆರೆದರು. ಇವುಗಳಿಗೆಲ್ಲ ತಾವೇ ಪ್ರೋತ್ಸಾಹವನ್ನೂ ಕೊಟ್ಟರು. ಸುಮಾರು ನಾಲ್ಕುನೂರು ರೂಪಾಯಿಗಳಷ್ಟು ಅಧ್ಯಾತ್ಮಗ್ರಂಥಗಳನ್ನು ಕೊಂಡು ಯೋಗ್ಯರಲ್ಲಿ ಹಂಚಿದರು. ಮಾತಾಪಿತೃಗಳ ಶ್ರಾದ್ಧಸಮಯದಲ್ಲಿ ಬ್ರಾಹ್ಮಣರಿಗೆ ಒಂದೊಂದು ಅಧ್ಯಾತ್ಮಗ್ರಂಥವನ್ನು ದಾನಮಾಡುವಂತೆ ಏರ್ಪಡಿಸಲು **'ವಿಶೇಷವಿನಿಯೋಗ'** ವೆಂಬ ನಿಧಿಯನ್ನು ಸಲ್ಲಿಸಿ ಇತರರೂ ಹಾಗೆ ಮಾಡಬೇಕೆಂದು ಕೇಳಿಕೊಂಡರು. **ರಾಮನವಮಿ, ಶಂಕರಜಯಂತಿ, ಕೃಷ್ಣಜನ್ಮಾಷ್ಟಮಿ, ಗಣೇಶಚತುರ್ಥಿ** - ಇಂಥ ದಿನಗಳಲ್ಲಿ ಆಯಾ ಸಮಯಕ್ಕೆ ತಕ್ಕಂತೆ ಚಿಕ್ಕ ಪುಸ್ತಕಗಳನ್ನು ಒಟ್ಟಾಗಿ ಕೊಂಡು ಭಕ್ತರಲ್ಲಿ ಹಂಚಿದರು, ಮತ್ತು ಕಾರ್ಯಾಲಯದ ಮೂಲಕವೂ ಹಂಚಿಸುವ ಏರ್ಪಾಡುಮಾಡಿದರು. ಕಾರ್ಯಾಲಯದ ಪಂಡಿತರಿಂದ ತ್ಯಾಗರಾಜರ ಜೀವನಚರಿತ್ರೆಯ ಒಂದು ಗ್ರಂಥವನ್ನು ಬರೆಯಿಸಿ ಮುದ್ರಿಸಿ ಧರ್ಮವಾಗಿ ಹಂಚಿಸಿದರು. ತ್ಯಾಗರಾಜರ ಸಮಾಧಿಯಿರುವ ಸ್ಥಳವಾದ ತಿರುವೈಯಾರ್‌ನಲ್ಲಿ ಕೆಲವು ಉಪಯುಕ್ತ ಯೋಜನೆಗಳನ್ನೂ ಕೈಗೊಂಡರು. ಕಾರ್ಯಾಲಯದಲ್ಲಿ ಶ್ರೀರಾಮರಿಗೆ ವಿಶೇಷಪೂಜೆಗಳು, ಲಕ್ಷ್ಮೀದೇವಿಯ ವಿಗ್ರಹ, ವಸ್ತ್ರಾದಿಗಳ ಸಮರ್ಪಣೆ, ಕೆಲವು ವಿಶೇಷಾನುಷ್ಠಾನಗಳು ಇಂಥವುಗಳನ್ನೂ ನಡೆಯಿಸಿದರು. ಅಂತೂ ಬಹಳ ಉತ್ಸಾಹಶೀಲರೂ ಧರ್ಮಾತ್ಮರೂ ಅಧ್ಯಾತ್ಮವಿಚಾರಪ್ರಚಾರಪ್ರಿಯರೂ ಆಗಿದ್ದರು.

### ಶ್ರೀಶ್ರೀಗಳವರ ಪ್ರವಾಸ :

1961ನೆಯ ಜನವರಿ ಮಾಹೆಯಲ್ಲಿ ಶ್ರೀಶ್ರೀಗಳವರು ದಾವಣಗೆರೆಗೆ ದಯಮಾಡಿಸಿ ಅಲ್ಲಿ ಒಂದು ತಿಂಗಳಕಾಲ ಶ್ರೀಶಿವಾನಂದ ಆಧ್ಯಾತ್ಮಮಂದಿರದಲ್ಲಿ ಉಪನ್ಯಾಸಗಳನ್ನು

ನೆರವೇರಿಸಿದರು. ಆಗ್ಗೆ ದಾವಣಗೆರೆ ಮಹಾಜನರು ಶ್ರೀಶ್ರೀಗಳವರನ್ನು ಆದರಪೂರ್ವಕವಾಗಿ ಸತ್ಕರಿಸಿ ಯಥೋಚಿತ ಕಾಣಿಕೆಗಳನ್ನು ನೀಡಿದರು. ದಾವಣಗೆರೆಯಲ್ಲಿದ್ದಾಗ ನುಲೇನೂರು, ಮಲ್ಲಾಡಿಹಳ್ಳಿ, ಕೊಮಾರನಹಳ್ಳಿ, ರಾಣೆಬೆನ್ನೂರುಗಳಿಗೂ ಭೇಟಿಕೊಟ್ಟಿದ್ದರು.

### ಪುಸ್ತಕಪ್ರಕಟನೆ :

ಕನ್ನಡದಲ್ಲಿ **ಕಾಠಕೋಪನ್ಯಾಸಮಂಜರಿ; ಶ್ರೀಶಂಕರಾಚಾರ್ಯರ ಪ್ರಕರಣಗಳು-** (4ನೆಯ ಸಂಪುಟ), **ಸಂಸ್ಕೃತಭಾಷಾಭ್ಯಾಸ-3ನೆಯ ಭಾಗ-** ಈ ಗ್ರಂಥಗಳನ್ನು ಪತ್ರಿಕೆಯ ಮೂಲಕ ಪ್ರಕಟಿಸಲಾಯಿತು. ಸಂಸ್ಕೃತದಲ್ಲಿ **ತೈತ್ತಿರೀಯೋಪನಿಷತ್** (ಶಿಕ್ಷಾವಲ್ಲೀ) ಭಾಷ್ಯವನ್ನು ಟಿಪ್ಪಣ್ಯಾದಿಗಳೊಡನೆ ಪ್ರಕಟಿಸಲಾಯಿತು.

### ಹರೇರಾಮಮಂತ್ರ ಜಪಾನುಷ್ಠಾನ :

ಕಲಿಯುಗದಲ್ಲಿ ಶಾಸ್ತ್ರದಲ್ಲಿ ಅಶ್ರದ್ಧೆ, ವೇದೋಕ್ತ ಕರ್ಮಾಚರಣೆಯ ಅಭಾವ, ಅನಾಚಾರ, ದುರಾಚಾರ-ಮುಂತಾದವುಗಳ ನಿಮಿತ್ತದಿಂದ ಜನರ ಚಿತ್ತವು ಅತ್ಯಂತ ಕಲುಷಿತವಾಗಿರುವದರಿಂದ ಅವರಿಗೆ ತತ್ತ್ವಜ್ಞಾನದಲ್ಲಿ ಅಭಿರುಚಿಯಾಗಲಿ, ಅಭಿರುಚಿಯಿದ್ದರೂ ಅದರ ಪ್ರಾಪ್ತಿಯಾಗಲಿ ದೊರಕುವದು ಕಡುಕಷ್ಟವಾಗಿರುವದರಿಂದ ಚಿತ್ತಶುದ್ಧಿಗೂ ಇಹಪರಗತಿಗೂ ಸುಲಭವಾದ ಸಾಧನವು ದೊರಕಲೆಂಬ ಉದ್ದೇಶದಿಂದ ಭಗವನ್ನಾಮ ಸ್ಮರಣೆಯೆಂಬ ಸುಲಭೋಪಾಯವನ್ನು ಪ್ರಾಚೀನಋಷಿಗಳು ಉಪದೇಶಿಸಿರುತ್ತಾರೆ. ಈ ಸಾಧನದ ಲಾಭವು ಸರ್ವರಿಗೂ ದೊರಕಲೆಂಬ ಉದ್ದೇಶದಿಂದಲೂ 1962ನೆಯ ಫೆಬ್ರವರಿಯಲ್ಲಿ ಸಂಭವಿಸಲಿದ್ದ ಅಷ್ಟಗ್ರಹಕೂಟದುರ್ಯೋಗದ ಅರಿಷ್ಟ ನಿವಾರಣೆಗಾಗಿಯೂ **ಹರೇರಾಮ ಮಂತ್ರಜಪಾನುಷ್ಠಾನವನ್ನು** 1960ನೆಯ ನವೆಂಬರ್ 29ನೆಯ ದಿನಾಂಕ **ಮಾರ್ಗಶಿರ ಶುಕ್ಲ** ಏಕಾದಶಿಯಿಂದ ಪ್ರಾರಂಭಿಸಲಾಯಿತು; ಮತ್ತು ಈ ಅನುಷ್ಠಾನವನ್ನು ಮಹಾಜನರು ತಮ್ಮ ಊರುಗಳಲ್ಲೇ ತಾವಿರುವ ಸ್ಥಳದಲ್ಲಿಯೇ ಪ್ರಾರಂಭಿಸಿ ವೈಶಾಖ ಶುಕ್ಲ ಏಕಾದಶೀವರೆಗೂ ಅನುಷ್ಠಾನಮಾಡಿ ಜಪಸಂಖ್ಯೆಯನ್ನು ಕಾರ್ಯಾಲಯಕ್ಕೆ ತಿಳಿಯಿಸಬೇಕೆಂದು ಪ್ರಾರ್ಥಿಸ ಲಾಯಿತು. ಪ್ರತಿದಿನವೂ ಶುಚಿರ್ಭೂತರಾಗಿ ನಿಯಮವಾಗಿ ಒಂದು ಮಾಲೆಯನ್ನು ಜಪಿಸಿ ಅನಂತರ ಎಷ್ಟು ಬೇಕಾದರೂ ಜಪಿಸಬಹುದೆಂತ ಕೋರಲಾಯಿತು. ಮುಂದೆ ಜಪದ ಅವಧಿಯನ್ನು ಜ್ಯೇಷ್ಠಶುಕ್ಲ ಪೂರ್ಣಿಮೆಯವರೆಗೂ ವಿಸ್ತರಿಸಲಾಯಿತು. ಹೀಗೆ ಏಳು ತಿಂಗಳು ಐದು ದಿನಗಳ ಕಾಲ ಜಪಗಳನ್ನು ನೆರವೇರಿಸಿ 1.7.61 ಮತ್ತು 2.7.62 ರಂದು ಮಂಗಳವನ್ನು ಆಚರಿಸಲಾಯಿತು. ಮಂಗಳಕಾಲದಲ್ಲಿ ಶ್ರೀದಿಗ್ವಿಜಯರಾಮರ ಸನ್ನಿಧಿಯಲ್ಲಿ ಅಷ್ಟೋತ್ತರ ಶತಪುರುಷಸೂಕ್ತಾಭಿಷೇಕ, ಸಹಸ್ರನಾಮಾರ್ಚನೆ, ಸಾಮೂಹಿಕವಾಗಿ ಹರೇರಾಮ ಮಂತ್ರಕೀರ್ತನೆ-ಇವುಗಳನ್ನೂ ಶ್ರೀಶ್ರೀಗಳವರಿಂದ ಉಪದೇಶವನ್ನೂ ಏರ್ಪಡಿಸಲಾಗಿತ್ತು.

'ಹರೇರಾಮಮಂತ್ರ' ಎಂಬ ಲೇಖನವೊಂದನ್ನು ಪ್ರಕಟಿಸಿ ಧರ್ಮಾರ್ಥವಾಗಿ ಹಂಚಲಾಯಿತು. ಬೇರೆಬೇರೆಯ ಊರುಗಳ ಸುಮಾರು 42 ಕೇಂದ್ರಗಳಲ್ಲಿ ನಡೆದ ಈ ಜಪಯಜ್ಞದಲ್ಲಿ ಒಟ್ಟು 250ಕ್ಕೂ ಮೇಲ್ಪಟ್ಟು ಜನರು ಭಾಗವಹಿಸಿದ್ದರು. ಎರಡು ಕೋಟಿ ಇಪ್ಪತ್ತೈದು ಲಕ್ಷಕ್ಕೂ ಮೀರಿದ ಮಂತ್ರಜಪವು ನಡೆಯಿತು. ಅಂತೂ ಈ ದೀರ್ಘಾವಧಿಯ ವಿಶೇಷಾನುಷ್ಠಾನವು ಯಶಸ್ವಿಯಾಗಿ ನೆರವೇರಿತು.

## ಅನುಷ್ಠಾನಗಳು :

1961ನೆಯ ವರ್ಷದ **ರಾಮನವರಾತ್ರಿ** ಮತ್ತು **ಶಂಕರಸಪ್ತಾಹ ಮಹೋತ್ಸವಗಳು ಹೊಳೆನರಸೀಪುರದಲ್ಲಿಯೇ** ನೆರವೇರಿದವು. ವಿದ್ವಾಂಸರುಗಳು ಎಂದಿನಂತೆ ಭಾಗವನ್ನು ವಹಿಸಿದ್ದರು. ಶ್ರೀಶ್ರೀಗಳವರು ಉಪನ್ಯಾಸಗಳನ್ನು ಮಾಡಿ ಅನುಗ್ರಹಿಸಿದರು.

## ಶ್ರೀಶ್ರೀಗಳವರ ಪ್ರವಾಸ :

ಶ್ರೀಶ್ರೀಗಳವರು 1961ನೆಯ ಮೇ ಮಾಹೆಯಲ್ಲಿ ತಲಕಾವೇರೀಕ್ಷೇತ್ರಕ್ಕೆ ಹೋಗಿ ಕಾವೇರಿಮೂಲವನ್ನು ಸಂದರ್ಶನಮಾಡಿಕೊಂಡು ಬಂದರು. ಅನಂತರ ತಾ. 17.5.61ರಂದು ಹೊಳೆನರಸೀಪುರದಿಂದ ಪ್ರಯಾಣ ಬೆಳೆಸಿ ಗುಂತಕಲ್ ಮಾರ್ಗವಾಗಿ ಶ್ರೀಶೈಲಕ್ಷೇತ್ರವನ್ನು ಸಂದರ್ಶಿಸಿದರು. ಮುಂದೆ ಮದ್ರಾಸ್ ಮಾರ್ಗವಾಗಿ ಕಾರೈಕುಡಿ ಎಂಬಲ್ಲಿಗೆ ಬಂದು ಆಗ್ಗೆ ಅಲ್ಲಿ ಬಿಡಾರಮಾಡಿದ್ದ **ಶ್ರೀ ಕಾಂಚಿಕಾಮಕೋಟಿ ಶ್ರೀಜಗದ್ಗುರು ಶಂಕರಾಚಾರ್ಯ ಮಹಾಸ್ವಾಮಿಗಳವರ** ದರ್ಶನವನ್ನು ಪಡೆದರು. ಆ ಸಂದರ್ಭದಲ್ಲಿ ಜಗದ್ಗುರುಗಳವರು ಶ್ರೀಶ್ರೀಗಳವರ ಜೊತೆಯಲ್ಲಿದ್ದ ವೇ।। ಎಸ್. ವಿಠಲಶಾಸ್ತ್ರಿಗಳನ್ನು ಕುರಿತು "ಶಾಸ್ತ್ರಿಗಳೆ, '**ಆ ಸುಪ್ತೇರಾಮೃತೇಃ ಕಾಲಂ ನಯೇದ್ ವೇದಾನ್ತಚಿನ್ತಯಾ**' ಎಂಬ ಅಭಿಯುಕ್ತೋಕ್ತಿಯ ಅಭಿಪ್ರಾಯವೇನು ?" ಎಂದು ಕೇಳಿದರು ಅದಕ್ಕೆ ಶಾಸ್ತ್ರಿಗಳು "ಮನುಷ್ಯನು ಬೆಳಗ್ಗೆ ಎದ್ದಾಗಿನಿಂದ ಮಲಗುವವರೆಗೂ ಮತ್ತು ಹುಟ್ಟಿದಾಗಿನಿಂದ ಸಾಯುವವರೆಗೂ ವೇದಾಂತಚಿಂತನೆಯಲ್ಲಿಯೇ ಕಾಲವನ್ನು ಕಳೆಯಬೇಕು"- ಎಂದರ್ಥ-ಎಂತ ವಿಜ್ಞಾಪಿಸಿಕೊಂಡರು. ಕೂಡಲೆ ಜಗದ್ಗುರುಗಳು '**ಆ ವಾಕ್ಯಕ್ಕೆ ಜೀವಂತಉದಾಹರಣೆ ಇದೊ, ಈ ನಿಮ್ಮ ಸ್ವಾಮಿಗಳು**' ಎಂದು ನಮ್ಮ ಸ್ವಾಮಿಗಳ ಕಡೆಗೆ ತೋರಿಸಿದರಂತೆ. ಅನಂತರ ಶ್ರೀಗಳವರ ಯೋಗಕ್ಷೇಮವನ್ನು ವಿಚಾರಿಸಿ ಅವರಿಗೆ ಬೇಕಾದ ಸೌಕರ್ಯಗಳೆಲ್ಲವನ್ನೂ ಒದಗಿಸಿಕೊಡುವಂತೆ ಮಠಾಧಿಕಾರಿಗಳಿಗೆ ಅಪ್ಪಣೆಮಾಡಿದರು. ನಾಲ್ಕುದಿನಗಳ ಕಾಲ ಶ್ರೀಗಳವರನ್ನು ನಿಲ್ಲಿಸಿಕೊಂಡಿದ್ದರು. ಇದೇ ಸಂದರ್ಭದಲ್ಲಿ ಶ್ರೀಗಳವರು ಭಾಷ್ಯಪ್ರಸ್ಥಾನಕ್ಕೂ ವ್ಯಾಖ್ಯಾನಪ್ರಸ್ಥಾನಗಳಿಗೂ ಇರುವ ವೈಲಕ್ಷಣ್ಯವನ್ನು ಕುರಿತು ವಿದ್ವಾಂಸರಮುಂದೆ ಸಮಾಲೋಚನೆಗಾಗಿ ಹೊರಡಿಸಿದ್ದ ಪ್ರಶ್ನಾವಳಿಯೊಂದನ್ನು ಅರ್ಪಿಸಿ ಇದನ್ನು ತಮ್ಮ ಪಂಡಿತ ಶಿಷ್ಯವೃಂದದಲ್ಲಿ ಪ್ರಸ್ತಾಪಿಸಿ ಉತ್ತರಗಳನ್ನು ಬರೆಯುವಂತೆ

ಅರ್ಪಣೆಮಾಡಬೇಕೆಂದು ಕೇಳಿಕೊಂಡರು. ಜಗದ್ಗುರುಗಳು ಸಾವಧಾನವಾಗಿ ಎಲ್ಲಾ ವಿಚಾರಗಳನ್ನೂ ಕೇಳಿ ವಿದ್ವಾಂಸರುಗಳ ವಿಳಾಸಗಳನ್ನು ಕೊಡಿಸಿದ್ದಲ್ಲದೆ ಇಂಥ ವಿಚಾರಗಳಲ್ಲಿ ವಿದ್ವದ್‌ಗೋಷ್ಠಿಗಳನ್ನು ನಡೆಯಿಸಿ ತತ್ತ್ವನಿರ್ಣಯಗಳನ್ನು ಮಾಡಬೇಕಾದದ್ದು ಅವಶ್ಯವೆಂದೂ ಅಂಥ ಏರ್ಪಾಡನ್ನು ತಾವು ಸ್ವಾಗತಿಸುವದಾಗಿಯೂ ಸೂಚಿಸಿದರು. ಜಗದ್ಗುರುಗಳ ಆಜ್ಞೆಯಂತೆ 40-50 ಜನ ಪಂಡಿತರುಗಳಿಗೆ ಮೇಲ್ಕಂಡ ಪ್ರಕಟನೆಯನ್ನು ಕಳುಹಿಸಿ ಉತ್ತರವನ್ನು ಬರೆಯಬೇಕೆಂದು ಪ್ರಾರ್ಥಿಸಲಾಯಿತು. ಆದರೆ ಇದಕ್ಕೆ ಸರಿಯಾದ ಪ್ರತಿಫಲವು ಮಾತ್ರ ದೊರೆಯಲಿಲ್ಲ. ಶ್ರೀಶ್ರೀಗಳವರು ಹೊರಡುವಾಗ ಜಗದ್ಗುರುಗಳು ಎರಡೂನೂರು ರೂಪಾಯಿಗಳ ಸಹಾಯದ್ರವ್ಯವನ್ನೂ ಶ್ರೀಶ್ರೀಗಳವರಿಗೆ ಒಂದು ವ್ಯಾಘ್ರಾಜಿನವನ್ನೂ ದಯಪಾಲಿಸಿದರು. ನಮ್ಮ ಶ್ರೀಗಳವರು ರೇಶ್ಮೆಜರತಾರಿ ಬಟ್ಟೆಗಳನ್ನು ಉಪಯೋಗಿಸುವವರಲ್ಲವೆಂಬುದನ್ನು ತಿಳಿದೇ ಜಗದ್ಗುರುಗಳು ಬೆಲೆಬಾಳುವ ಒಂದು ವ್ಯಾಘ್ರಾಜಿನವನ್ನು ಕೊಟ್ಟದ್ದು ಬಹಳ ಸಮಂಜಸವಾಗಿತ್ತು. ಬಳಿಕ ಶ್ರೀಶ್ರೀಗಳವರು ಕೊಯಮತ್ತೂರು, ಚಾಮರಾಜನಗರ ಮಾರ್ಗವಾಗಿ ಹೊಳೆನರಸೀಪುರಕ್ಕೆ ದಯಮಾಡಿಸಿದರು.

## ಅನುತಾಪ :

ಬೆಂಗಳೂರಿನ ಪ್ರಸಿದ್ಧ ವಾಣಿಜ್ಯೋದ್ಯಮಿಗಳೂ ಧರ್ಮತತ್ಪರರೂ ಶ್ರೀಮಂತರೂ ಆಗಿದ್ದ ಶ್ರೀ ಯಾದಾಳಂ ಸುಬ್ಬಯ್ಯಶ್ರೇಷ್ಠಿಯವರು 15.6.61ರಂದು ನಿಧನರಾದರು. ಈ ಮಹನೀಯರು ಶ್ರೀಶ್ರೀಗಳವರಲ್ಲಿ ತುಂಬ ಭಕ್ತಿಯುಳ್ಳವರಾಗಿಯೂ ಕಾರ್ಯಾಲಯದ ವಿಷಯದಲ್ಲಿ ಬಹಳ ಅಭಿಮಾನಿಗಳಾಗಿಯೂ ಇದ್ದರು. ಈ ಮಹನೀಯರು 1947ನೆಯ ಇಸವಿಯಿಂದ ಪ್ರತಿಮಾಹೆಯೂ ವಿದ್ಯಾರ್ಥಿಗಳ ನಿಧಿಗೆ ಹತ್ತು ರೂಪಾಯಿಗಳಂತೆ ಕೆಲವು ಕಾಲ, ಅನಂತರ ಹದಿನೈದು ರೂಪಾಯಿಗಳಂತೆ ಸಹಾಯದ್ರವ್ಯವನ್ನು ಸಮರ್ಪಿಸುತ್ತಿದ್ದರು. ಇವರ ನಿಧನಾನಂತರವೂ ಯಾದಾಳಂ ಟ್ರಸ್ಟ್‌ನವರು ಈಗಲೂ ಕಾರ್ಯಾಲಯಕ್ಕೆ ಮಾಹೆಯಾನ 25 ರೂ. ಗಳ ಸಹಾಯದ್ರವ್ಯವನ್ನು ಕೊಡುತ್ತಿದಾರೆ.

## ಪುಸ್ತಕ ಪ್ರಕಟನೆ :

ಪರಿಪೂರ್ಣದರ್ಶನ- ಎಂಬ ಶ್ರೀಶ್ರೀಗಳವರ ಶಂಕರಸಪ್ತಾಹಕಾಲದ ಉಪನ್ಯಾಸಗಳನ್ನು ಗ್ರಂಥರೂಪವಾಗಿ ಪ್ರಕಟಿಸಲಾಯಿತು.

## ಚಾತುರ್ಮಾಸ್ಯ ಸಂಕಲ್ಪ :

1961ನೆಯ ವರ್ಷದ ಚಾತುರ್ಮಾಸ್ಯಸಂಕಲ್ಪವನ್ನು ಶ್ರೀಶ್ರೀಗಳವರು ಮೈಸೂರಿನಲ್ಲಿ ಶ್ರೀ ಜೆ.ಎಸ್. ತಿಮ್ಮಪ್ಪಯ್ಯನವರ ಮನೆಯಲ್ಲಿ ನೆರವೇರಿಸಿ ವ್ಯಾಸಪೂಜಾದಿಗಳನ್ನು

ಮಾಡಿದರು. ಈ ಸಂದರ್ಭದಲ್ಲಿ ಮೈಸೂರಿನಲ್ಲಿ ಎರಡು ತಿಂಗಳು ಕಾಲವೂ ಬೆಳಗ್ಗೆ ಛಾಂದೋಗ್ಯಭಾಷ್ಯ ಪ್ರವಚನವನ್ನೂ ಸಂಜೆಯ ವೇಳೆ ಶ್ರೀರಾಮದೇವಸ್ಥಾನದಲ್ಲಿ ವೇದಾಂತೋಪನ್ಯಾಸಗಳನ್ನೂ ನಡೆಯಿಸಿದರು.

## ಶ್ರೀರಾಮಮಂತ್ರಜಪಯಜ್ಞ :

ತಾ. 14-9-61 ರಿಂದ 13-4-62ರ ವರೆಗೆ ಸುಮಾರು ಏಳು ತಿಂಗಳ ಕಾಲ ಕರ್ನಾಟಕ ಮುಖ್ಯಸ್ಥಳಗಳಲ್ಲಿ ಸುಮಾರು ಮೂವತ್ತಕ್ಕೂ ಹೆಚ್ಚಿನ ಕೇಂದ್ರಗಳಲ್ಲಿ ನಡೆದ ಈ ಅನುಷ್ಠಾನದಲ್ಲಿ ಎಂಭತ್ತಕ್ಕೂ ಹೆಚ್ಚಿನ ಸ್ತ್ರೀಪುರುಷರು ಭಾಗವಹಿಸಿದ್ದರು. ಈ ಜಪಯಜ್ಞವು ವಿಜೃಂಭಣೆಯಿಂದ ನೆರವೇರಿತು. ಈ ಅವಧಿಯಲ್ಲಿ ನಾಲ್ಕು ಕೋಟಿ ಇಪ್ಪತ್ತು ಲಕ್ಷ ಜಪವು ನಡೆಯಿತು. 45 ಸಾವಿರ ಲಿಖಿತಜಪವೂ ನಡೆಯಿತು. ತಾ. 26.4.62ನೆಯ ಗುರುವಾರ ಮಹಾಮಂಗಳವನ್ನು ಆಚರಿಸಲಾಯಿತು. ಆದಿನ ಶ್ರೀರಾಮದೇವರಿಗೆ ಚತುಃಶತಾವರ್ತನ ಪುರುಷಸೂಕ್ತಾಭಿಷೇಕ, ಸಹಸ್ರನಾಮಾರ್ಚನಪೂಜಾದಿಗಳನ್ನೂ ನೆರವೇರಿಸಲಾಯಿತು. 'ಶ್ರೀರಾಮನಾಮದ ಜಪ' ಎಂಬ ಕರಪತ್ರವನ್ನೂ ಪ್ರಕಟಿಸಿ ಧರ್ಮಾರ್ಥವಾಗಿ ಹಂಚಲಾಯಿತು.

## ಇತರ ಚಟುವಟಿಕೆಗಳು :

1961ನೆಯ ವರ್ಷದ **ಶರನ್ನವರಾತ್ರಿಯ ಅನುಷ್ಠಾನ, ಗೀತಾಜಯಂತಿ, ಬ್ರಹ್ಮಚೈತನ್ಯಾರಾಧನೆ**- ಇವುಗಳು ಸಾಂಗವಾಗಿ ನೆರವೇರಿದವು. ಬಾಲ್ಯಪಾಠದ ವಿದ್ಯಾರ್ಥಿಗಳಿಗೆ ಸಂಸ್ಕೃತಪಾಠವು ನಡೆಯುತ್ತಿತ್ತು. ಬ್ರಹ್ಮವೈವರ್ತಪುರಾಣವು ಪೂರೈಸಿ ತಾ. 30.10.61ರಂದು **ಪದ್ಮಪುರಾಣವನ್ನು** ಪ್ರಾರಂಭಿಸಲಾಯಿತು. **ದಕ್ಷಿಣಾಮೂರ್ತಿಸ್ತೋತ್ರವು** ವಿವರಣೆಯೊಡನೆ ಮಾರಾಟಕ್ಕೆ ಸಿದ್ಧವಾಯಿತು. ಪುಸ್ತಕಭಂಡಾರಕ್ಕೆ ಒಂದು ಬೀರುವನ್ನು ಕೊಳ್ಳಲಾಯಿತು; ಕೆಲವು ಗ್ರಂಥಗಳನ್ನೂ ತರಿಸಲಾಯಿತು.

## ಅಧ್ಯಾತ್ಮಪ್ರಕಾಶಪತ್ರಿಕೆಗೆ ಮಹಾಪೋಷಕರು :

ಪತ್ರಿಕೆಗೆ ಯಾವ ಶಾಶ್ವತನಿಧಿಯೂ ಇಲ್ಲದುದನ್ನು ಮನದಂದುಕೊಂಡು 101 ರೂ.ಗಳು ಮತ್ತು ಅದಕ್ಕಿಂತ ಹೆಚ್ಚಿಗೆ ಅವರ ಇಚ್ಛಾನುಸಾರ ಮೊಬಲಗನ್ನು ಪಾವತಿಮಾಡುವವರನ್ನು **"ಮಹಾಪೋಷಕ"** ರೆಂದು ಪರಿಗಣಿಸಿ ಅವರಿಗೆ ಆಜೀವವಾಗಿ ಪತ್ರಿಕೆಯನ್ನು ಕಳುಹಿಸುವ ಏರ್ಪಾಡುಮಾಡಲಾಗುವದೆಂದೂ ಪತ್ರಿಕೆಯಲ್ಲಿ ಮಹಾಪೋಷಕರ ಹೆಸರನ್ನು ಪ್ರತಿತಿಂಗಳೂ ಪ್ರಕಟಿಸಲಾಗುವದೆಂದೂ ಬಿನ್ನವಿಸಿಕೊಳ್ಳಲಾಯಿತು. ಇದಕ್ಕೆ ಪ್ರತಿಫಲವಾಗಿ 1961ನೆಯ ಡಿಸೆಂಬರ್ ವೇಳೆಗೆ ಐದುಜನ ಮಹಾಪೋಷಕರು ದೊರಕಿದ್ದರು. ಈಚೆಗೆ ಈ ಮಹನೀಯರುಗಳ ಸಂಖ್ಯೆಯು 1750ಕ್ಕೂ ಮೀರಿ ಬೆಳೆಯುತ್ತಿದೆ.

## ಶ್ರೀಶ್ರೀಗಳವರ ಪ್ರವಾಸ :

ತಾ. 2-12-61ರಿಂದ ಒಂದು ವಾರದಕಾಲ ಶ್ರೀಗಳವರು ಬೆಂಗಳೂರಿನ ಪ್ರಸಿದ್ಧ ಆರ್ಕಿಟೆಕ್ಟ್ ಮತ್ತು ಇಂಜಿನಿಯರರಾದ ಶ್ರೀ ವಿ. ರಾಮಮೂರ್ತಿಯವರೊಡನೆ ಮಂಗಳೂರಿನ ಬಳಿಯಿರುವ ರಾಮನಗರದ **ಶ್ರೀರಾಮದಾಸಸ್ವಾಮಿಗಳ ಆಶ್ರಮಕ್ಕೆ** ಹೋಗಿಬಂದರು. ಶ್ರೀರಾಮದಾಸಸ್ವಾಮಿಗಳು ಆಗ್ಗ ಶ್ರೀಗಳವರನ್ನು ಗೌರವದಿಂದ ಬರಮಾಡಿಕೊಂಡು ಬಹಳ ಪ್ರೇಮಪೂರ್ವಕವಾಗಿ ಉಪಚರಿಸಿ ಸತ್ಕರಿಸಿದರು. ಶ್ರೀಗಳವರು ಶ್ರೀರಾಮದಾಸರವರ ಶಾಂತಚಿತ್ತತೆ, ಸಮತೆ, ಸರ್ವಭೂತಪ್ರೇಮಗಳನ್ನೂ ಆಶ್ರಮದ ಶಿಸ್ತು, ಶುಚಿತ್ವವನ್ನೂ ಮೆಚ್ಚಿ ಬಹಳವಾಗಿ ಕೊಂಡಾಡಿದರು.

## ಗ್ರಂಥಪ್ರಕಟನೆಗೆ ಸಹಾಯ :

ಶ್ರೀಶ್ರೀಗಳವರು ಸಂಸ್ಕೃತಭಾಷೆಯಲ್ಲಿ ರಚಿಸಲು ಸಂಕಲ್ಪಿಸಿದ್ದ **'ವೇದಾಂತ ಪ್ರಕ್ರಿಯಾಪ್ರತ್ಯಭಿಜ್ಞಾ'** ಎಂಬ ಗ್ರಂಥದ ಪ್ರಕಟನೆಗೆ ಸಹಾಯವಾಗಿ ಮೈಸೂರಿನಲ್ಲಿರುವ ಕಾಫಿಪ್ಲಾಂಟರ್ ಶ್ರೀ ಟಿ.ಮಂಜುನಾಥಯ್ಯರ್‌ರವರು ಒಂದು ಸಾವಿರರೂಪಾಯಿಗಳನ್ನೂ ಬೆಂಗಳೂರಿನಲ್ಲಿರುವ ಶ್ರೀ ವಿ.ರಾಮಮೂರ್ತಿಯವರು ಒಂದು ಸಾವಿರರೂಪಾಯಿಗಳನ್ನೂ ಉದಾರವಾಗಿ ಸಮರ್ಪಿಸಿದರು. ಇದರಿಂದ ಆ ಮಹಾಗ್ರಂಥವನ್ನು ಮುಂದೆ ಬೆಳಕಿಗೆ ತರಲು ಬಹಳ ಅನುಕೂಲವಾಯಿತು.

## ವಿದ್ಯಾನಿಲಯ :

1962ನೆಯ ಫೆಬ್ರವರಿ ತಿಂಗಳ ವೇಳೆಗೆ ಒಬ್ಬ ವಿದ್ಯಾರ್ಥಿಯು ವಿದ್ಯಾನಿಲಯವನ್ನು ಬಿಟ್ಟುಬಿಟ್ಟನು. ಉಳಿದ ಒಬ್ಬನೇ ವಿದ್ಯಾರ್ಥಿಗೆ ಪಾಠಪ್ರವಚನಗಳನ್ನು ಮುಂದುವರಿಸಲಾಯಿತು.

## ಅನುಷ್ಠಾನಗಳು :

1962ನೆಯ ವರ್ಷದ ಶ್ರೀರಾಮನವರಾತ್ರಿಯ ಉತ್ಸವವು ಎಂದಿನಂತೆ ನಡೆಯಿತು. ಶಂಕರಸಪ್ತಾಹಮಹೋತ್ಸವವು ಮೈಸೂರಿನಲ್ಲಿ ಶ್ರೀಸೀತಾರಾಮದೇವಸ್ಥಾನದಲ್ಲಿ ನೆರವೇರಿತು. ಪಂಡಿತರುಗಳು ಭಾಗವನ್ನು ವಹಿಸಿದ್ದರು. ಈ ಸಂದರ್ಭದಲ್ಲಿ ಮೈಸೂರಿನ ಭಕ್ತಮಹಾಜನರು ಶ್ರೀಶ್ರೀಗಳವರಿಗೆ ಪಾದಪೂಜಾದಿಗಳನ್ನು ನೆರವೇರಿಸಿದರು. ಕಾರ್ಯಾಲಯಕ್ಕೂ ಯಥೋಚಿತವಾಗಿ ಕಾಣಿಕೆಗಳನ್ನು ಸಲ್ಲಿಸಿದರು.

## "ವೇದಾಂತಪ್ರಕ್ರಿಯಾಪ್ರತ್ಯಭಿಜ್ಞಾ" ಗ್ರಂಥರಚನೆ :

ಶ್ರೀಶ್ರೀಗಳವರ ಸಂಸ್ಕೃತಗ್ರಂಥಗಳಲ್ಲಿ ಅನರ್ಘ್ಯವೂ ಅಮೋಘವೂ ಆದ ಈ ಮೇರುಕೃತಿಯ ರಚನೆಯ ಹಿನ್ನೆಲೆಯನ್ನು ವಾಚಕರಿಗೆ ತಿಳಿಸುವದು ಅತ್ಯವಶ್ಯ. ಶ್ರೀಗಳವರು

1961ನೆಯ ವರ್ಷದಲ್ಲಿ ಮೈಸೂರಿನಲ್ಲಿ ಚಾತುರ್ಮಾಸ್ಯಸಂಕಲ್ಪಕ್ಕೆ ಕುಳಿತಿದ್ದಾಗ ಕೆಲವು ವಿದ್ವಾಂಸರು ಶ್ರೀಗಳು ಹೊರಡಿಸಿದ್ದ ಪ್ರಶ್ನಾವಳಿಯ ಸಮಾಲೋಚನೆಯ ವಿಷಯದಲ್ಲಿ ವಾದವು ನಡೆಯಬೇಕೆಂದು ಪತ್ರವ್ಯವಹಾರಮಾಡಿದ್ದರು. ಆದರೆ ಶ್ರೀಗಳವರು-ಬಹಿರಂಗವಾಗಿ ಎಲ್ಲರೂ ಸೇರಿ ವಾದಮಾಡುವಾಗ ರಾಗದ್ವೇಷಗಳಿಗೆ ಅವಕಾಶವಾಗಿ ಯಾವ ನಿರ್ಣಯವೂ ಆಗದೆ ಹೋಗಬಹುದೆಂದೂ ಆದ್ದರಿಂದ ವಿದ್ವಾಂಸರುಗಳು ಹೀಗೆ ಸಭೆಸೇರುವ ಮುಂಚೆ ತಮ್ಮ ಅಭಿಪ್ರಾಯಗಳನ್ನು ಲಿಖಿತಮೂಲಕವಾಗಿ ತಿಳಿಸಿ ಆಮೇಲೆ ಹೆಚ್ಚಿನ ವಿಷಯಗಳಿಗೆ ಮಾತನಾಡಬಹುದೆಂದೂ ಹೀಗೆ ಚರ್ಚಿಸುವಾಗ ಒಬ್ಬೊಬ್ಬರೇ ಮಾತನಾಡಬೇಕೆಂದೂ ಗಡಿಬಿಡಿಗೆ ಅವಕಾಶವಿರಬಾರದೆಂದೂ ಸೂಚಿಸಿದರು. ಬರೆದುಕೊಡಬೇಕೆಂದು ಕೇಳಿದಾಗ ಅದೇಕೊ, ವಿದ್ವಾಂಸರು ಯಾರೂ ಮುಂದೆ ಬರಲಿಲ್ಲ. ಸಭೆಯೂ ನಡೆಯಲಿಲ್ಲ. ನಂಜನಗೂಡಿನಿಂದ ಒಬ್ಬರು ಹೊರಡಿಸಿದ್ದ ಪ್ರಕಟನೆಯೊಂದರಲ್ಲಿ ಶ್ರೀಶ್ರೀಗಳವರನ್ನು ಸಂನ್ಯಾಸಸಂಪ್ರದಾಯ ತಿಳಿಯದವರೆಂದು ದೂಷಿಸಿ ಬರೆದಿದ್ದರು. ವೇದಾಂತಸಿದ್ಧಾಂತ ವಿಷಯದಲ್ಲಿ ನಿರ್ಣಯಿಸಬೇಕಾದ ಕೆಲವು ವಿಚಾರಗಳನ್ನು ಕುರಿತು ``An Appeal to Thoughtful Vedantins" (ವಿದುಷಾಂ ಸವಿಧೇ ಸಮಾಲೋಚನಾರ್ಥಂ ವಿಜ್ಞಪ್ತಿಃ) ಎಂಬ ಆಂಗ್ಲಸಂಸ್ಕೃತಭಾಷಾರೂಪವಾದ ಪ್ರಶ್ನಾವಳಿಯ ಹೊತ್ತಗೆಯನ್ನು ವಿದ್ವಾಂಸರಲ್ಲಿ ಹಂಚಿದಾಗ ಮದ್ರಾಸ್ ಸಕಲವಿದ್ಯಾನಿಲಯದ ಶ್ರೀ ಸುಬ್ರಹ್ಮಣ್ಯಶಾಸ್ತ್ರಿ - ಎಂಬುವರು ಗೀತಾಭಾಷ್ಯದಲ್ಲಿರುವ **"ಅಸಂಪ್ರದಾಯವಿತ್ ಸರ್ವಶಾಸ್ತ್ರವಿದಪಿ ಮೂರ್ಖವದೇವ ಉಪೇಕ್ಷಣೀಯಃ"** ಎಂಬ ವಾಕ್ಯವನ್ನು ಉದಾಹರಿಸಿದ್ದರು. ಶ್ರೀಶ್ರೀಗಳವರಿಗೆ ಆ ಬರಹಗಳನ್ನು ನೋಡಿದಾಗ ಶ್ರೀಮಚ್ಛಂಕರಭಗವತ್ಪಾದರ ವೇದಾಂತಸಂಪ್ರದಾಯವು ನಿಜವಾಗಿ ಯಾವದು ? ಎಂಬುದನ್ನೇ ಸ್ಪಷ್ಟಗೊಳಿಸಿ ಎಲ್ಲಾ ಪಂಡಿತರಿಗೂ ಒಪ್ಪಾಗುವಂತೆ ಒಂದು ಹೊಸ ಗ್ರಂಥವನ್ನೇ ಏಕೆ ಬರೆಯಬಾರದು ? ಎಂಬ ಯೋಚನೆಯು ಮನಸ್ಸಿನಲ್ಲಿ ಅಂಕುರಿಸಿತು. ಕೂಡಲೆ ಶ್ರೀಗಳವರು ಭಗವತ್ಪಾದರ ಸ್ಮರಣಪೂರ್ವಕವಾಗಿ ಗ್ರಂಥಾರಂಭಮಾಡುವ ವೇಳೆಗೆ **"ತಥಾ ಚ ಸಂಪ್ರದಾಯವಿದಾಂ ವಚನಮ್. ಅಧ್ಯಾರೋಪಾಪವಾದಾಭ್ಯಾಂ ನಿಷ್ಪ್ರಪಂಚಂ ಪ್ರಪಂಚ್ಯತೇ"** ಎಂಬ ಆಚಾರ್ಯರ ಗೀತಾಭಾಷ್ಯವಾಕ್ಯವು ಸ್ಫುರಿಸಿತು. ಇದನ್ನೇ ಆಧಾರವಾಗಿಟ್ಟುಕೊಂಡು ಶ್ರೀಶಂಕರಭಗವತ್ಪಾದರ ಭಾಷ್ಯಗಳನ್ನು ಪರಿಶೀಲನೆಮಾಡಿ ಆಚಾರ್ಯರಿಗೆ ಸಮ್ಮತವಾದ ವೇದಾಂತಸಿದ್ಧಾಂತವು ಅನಾದಿಕಾಲದಿಂದಲೂ ಹೇಗೆ ಈ ಅಧ್ಯಾರೋಪಾಪವಾದ ಪ್ರಕ್ರಿಯೆಯನ್ನೇ ಅವಲಂಬಿಸಿ ವಿವರಿಸಲ್ಪಟ್ಟಿದೆ, ಉಳಿದ ಪ್ರಕ್ರಿಯೆಗಳೆಲ್ಲವೂ ಹೇಗೆ ಇದೊಂದೇ ಪ್ರಕ್ರಿಯೆಯಲ್ಲಿ ಅಂತರ್ಗತವಾಗಿವೆ ?' ಇದೇ ಸಂಪ್ರದಾಯಾಗತವಾದ ಪ್ರಕ್ರಿಯೆಯೆಂಬುದು ಹೇಗೆ ? ಇದಕ್ಕೆ ಭಾಷ್ಯಾಧಾರವೇನು ? ಇಂಥ ಸಾಂಪ್ರದಾಯಿಕ ಪ್ರಕ್ರಿಯೆಯ ಆಧಾರವಿಲ್ಲದೆ ಬರಿಯ ತರ್ಕದಿಂದ ವಿಚಾರಮಾಡಿದ್ದರಿಂದ ಹೇಗೆ ವ್ಯಾಖ್ಯಾನಕಾರರೂ ಇತರ ಭಾಷ್ಯಕಾರರೂ ಪರಮಾರ್ಥಜ್ಞಾನನಿರ್ಣಯಮಾರ್ಗವನ್ನು ಬಿಟ್ಟು ಸೀಳುಹಾದಿಯಲ್ಲಿ ಹೊರಟರು ? ಬೀಗದಕ್ಕೆ

ಕಳೆದುಕೊಂಡು ರತ್ನದ ಪೆಟ್ಟಿಗೆಯನ್ನು ತೆರೆಯಲಾರದೆ ಪೇಚಾಡಿದ ನಿರ್ಭಾಗ್ಯನಂತೆ ಆತ್ಮತತ್ತ್ವರಹಸ್ಯವನ್ನು ಅರಿಯದೆ ಈ ಸಂಪ್ರದಾಯರನ್ನು ತಿಳಿಯದೆ ವಾದಿಗಳು ಹೇಗೆ ವಂಚಿತರಾದರು?- ಎಂಬ ವಿಷಯಗಳನ್ನು ಅಧಿಕರಿಸಿ "ವೇದಾಂತಪ್ರಕ್ರಿಯಾಪ್ರತ್ಯಭಿಜ್ಞಾ" ಎಂಬ ಮಹಾಪ್ರಬಂಧ ಗ್ರಂಥವೊಂದನ್ನು ರಚಿಸಿದರು. ಇದರಲ್ಲಿ ಮೊದಲು ವೇದಾಂತಪ್ರಕ್ರಿಯಾ ನಿರ್ಧಾರಣಾವಶ್ಯಕತೆಯನ್ನು ತಿಳಿಸಿ ಅನಂತರ ಆಚಾರ್ಯರ ಭಾಷ್ಯಪರಿಶೀಲನೆಯಿಂದ ಪ್ರಕ್ರಿಯಾನಿರ್ಧಾರಣೆಯನ್ನು ಮಾಡಿ ಮುಂದೆ ಉಳಿದ ಅದ್ವೈತಸಿದ್ಧಾಂತ ವ್ಯಾಖ್ಯಾನಕಾರರುಗಳು ಹೇಗೆ ಎಷ್ಟರಮಟ್ಟಿಗೆ ಒಬ್ಬೊಬ್ಬರೂ ವೇದಾಂತಸಂಪ್ರದಾಯದಿಂದ ದೂರವಾಗಿದ್ದಾರೆ? ಈ ದೃಷ್ಟಿಯಿಂದ ವೇದಾಂತಸಂಪ್ರದಾಯಕ್ಕೆ ನಿಜವಾಗಿ ಹತ್ತಿರವಿರುವವರು ಯಾರು? ಎಂಬುದನ್ನೆಲ್ಲ ವಿವರಿಸಿ ಬರೆದರು. ವ್ಯಾಖ್ಯಾನಕಾರರುಗಳ ಮೂಲಗ್ರಂಥಭಾಗಗಳನ್ನೇ ಪ್ರಮಾಣವಾಗಿ ಉದಾಹರಿಸಿ ಭಾಷ್ಯಪ್ರಕ್ರಿಯೆಗೂ ವ್ಯಾಖ್ಯಾನಗಳಿಗೂ ಇರುವ ವೈಲಕ್ಷಣ್ಯವನ್ನು ಇಲ್ಲಿ ತೋರಿಸಲಾಗಿತ್ತು. ಇಂಥ ಮಹಾಪ್ರಯತ್ನವು ವೇದಾಂತಗ್ರಂಥವಾಙ್ಮಯದಲ್ಲೇ ಈವರೆಗೂ ನಡೆದಿರಲಿಲ್ಲ. ಅಂತೂ ಸುಮಾರು 800 ಪುಟಗಳಷ್ಟು ಕೈಬರವಣಿಗೆಯ ಈ ಮಹಾಗ್ರಂಥವು ಶ್ರೀಶ್ರೀಗಳವರ ಲೇಖನಿಯಿಂದ ಹೊರಬಿದ್ದು 1962ನೆಯ ಮೇ ಮಾಹೆಯ ವೇಳೆಗೆ ಮುದ್ರಣಯೋಗ್ಯವಾಗಿ ಸಿದ್ಧವಾಯಿತು. ಶ್ರೀಶ್ರೀಗಳ ವಿಚಾರಸರಣಿಯ ಮೇಲೆ ವಿಮರ್ಶಕರು ಮಾಡಿದ ದೂಷಣೆಯು ಇಂಥದ್ದೊಂದು ಉದ್‌ಗ್ರಂಥರಚನೆಗೆ ಕಾರಣವಾಗುವಂತೆ ಜೋಡಿಸಿದ ಭಗವಂತನ ಅಘಟಿತಘಟನಾಸಾಮರ್ಥ್ಯವನ್ನು ಏನೆನ್ನಬೇಕು?

## ಶ್ರೀಶೃಂಗೇರಿಜಗದ್ಗುರು ಪೀಠಾಧೀಶ್ವರರ ಭೇಟಿ :

ಶ್ರೀಶೃಂಗೇರಿ ಜಗದ್ಗುರು ಪೀಠಾಧಿಪರಾದ ಪರಮಹಂಸ ಶ್ರೀಶ್ರೀಅಭಿನವ ವಿದ್ಯಾತೀರ್ಥಮಹಾಸ್ವಾಮಿಗಳವರು ಸಂಚಾರಕ್ರಮದಿಂದ ತಾ. 3-5-62ರಂದು ಹೊಳೆನರಸೀಪುರಕ್ಕೆ ದಯಮಾಡಿಸಿದ್ದರು. ಆಗ್ಗೆ ಶ್ರೀಶ್ರೀಗಳವರನ್ನು ಅವರು ತಮ್ಮಲ್ಲಿಗೆ ಬರಮಾಡಿಕೊಂಡು ನಿಕಟಪರಿಚಯವನ್ನು ಮಾಡಿಕೊಂಡರು. ಸುಮಾರು ಒಂದು ಘಂಟೆಯಕಾಲ ಅಧ್ಯಾತ್ಮವಿಚಾರಪ್ರಧಾನವಾದ ಸಂಭಾಷಣೆಗಳನ್ನು ನಡೆಯಿಸಿದರು. ನಮ್ಮ ಶ್ರೀಗಳು ಆಗತಾನೆ ಬರೆದು ಸಿದ್ಧಪಡಿಸಿದ್ದ "ವೇದಾಂತಪ್ರಕ್ರಿಯಾಪ್ರತ್ಯಭಿಜ್ಞಾ" ಗ್ರಂಥದ ಕೆಲವು ವಿಷಯಗಳನ್ನು ಜಗದ್ಗುರುಗಳಿಗೆ ವಿವರಿಸಿ ಹೇಳಿದರು. ಜಗದ್ಗುರುಗಳು ಇಂಥ ಅಪೂರ್ವಸಾಧನೆಯನ್ನು ಮೆಚ್ಚಿ ಬಹಳ ಸಂತೋಷಗೊಂಡು ಆ ಗ್ರಂಥಪ್ರಕಟನೆಗಾಗಿ ರೂ. 250 ಸಹಾಯ ದ್ರವ್ಯವನ್ನೂ ಅನುಗ್ರಹಿಸಿದರು. ಅನಂತರ ಅಧ್ಯಾತ್ಮಪ್ರಕಾಶಕಾರ್ಯಾಲಯಕ್ಕೂ ಭೇಟಿಯಿತ್ತು ಅಲ್ಲಿನ ಚಟುವಟಿಕೆಗಳನ್ನು ವೀಕ್ಷಿಸಿದರು. "ಶಂಕರಸಿದ್ಧಾಂತಪ್ರಚಾರಕ್ಕಾಗಿಯೇ ತಮ್ಮ ಜೀವನವನ್ನು ಮೀಸಲಾಗಿಟ್ಟು ಈ ವಾರ್ಧಕ್ಯದಲ್ಲಿಯೂ ಉತ್ಸಾಹದಿಂದ ಕೆಲಸಮಾಡುತ್ತಿರುವ ನಿಜವಾದ ಶಂಕರಭಕ್ತರು ನೀವು" ಎಂದು ನಮ್ಮ ಶ್ರೀಗಳವರನ್ನು ಹೊಗಳಿದರು. 'ಪ್ರತ್ಯಕ್ಷಸಮಾಗಮದಿಂದ

ನಮ್ಮ ಅನೇಕ ಸಂಶಯಗಳು ಪರಿಹಾರವಾದವು'- ಎಂದೂ ತಿಳಿಸಿದರು. ಹೀಗೆ ಜಗದ್ಗುರುಗಳ ಆಗಮನದಿಂದ ಕಾರ್ಯಾಲಯಕ್ಕೆ ಪ್ರೋತ್ಸಾಹವು ದೊರೆತಂತಾಯಿತು.

## ಗ್ರಂಥಪ್ರಕಟನೆ :

ಶ್ರೀಶ್ರೀಗಳವರು ವಿದ್ವಾಂಸರುಗಳಲ್ಲಿ ಸಮಾಲೋಚನೆಗಾಗಿ ಹೊರಡಿಸಿದ್ದ "ವಿಜ್ಞಪ್ತಿ"ಗೆ ಉತ್ತರರೂಪವಾಗಿ ಬಂದ ಹನ್ನೊಂದು ಜನ ಬೇರೆಬೇರೆಯ ವಿದ್ವಾಂಸರುಗಳ ಲೇಖನಗಳನ್ನು ಕೂಡಿಸಿ ಸ್ವಲ್ಪಮಟ್ಟಿಗೆ ಆಯಾ ಲೇಖನಗಳ ಅಭಿಪ್ರಾಯವನ್ನು ಇಂಗ್ಲಿಷಿನಲ್ಲಿಯೂ ಬರೆದು **ವೇದಾಂತವಿದ್ವದ್‌ಗೋಷ್ಠೀ** ಎಂಬ ಸಂಸ್ಕೃತಪುಸ್ತಕವೊಂದನ್ನು ಪ್ರಕಟಿಸಲಾಯಿತು. ಇದೇ ಸಮಯದಲ್ಲಿ ಶ್ರೀಶ್ರೀಗಳವರು **ತೈತ್ತಿರೀಯೋಪನಿಷತ್ತಿನ** ಆನಂದವಲ್ಲೀ, ಭೃಗುವಲ್ಲಿಗಳ ಮೇಲೆ ಸಂಸ್ಕೃತದಲ್ಲಿ ಬರೆದಿದ್ದ ಭಾಷ್ಯಾರ್ಥವಿಮರ್ಶಿನೀ-ಎಂಬ ವ್ಯಾಖ್ಯಾನ ಸಮೇತವಾದ ಶಾಂಕರಭಾಷ್ಯಸಹಿತವಾದ ತೈತ್ತಿರೀಯೋಪನಿಷತ್ತೂ ಪ್ರಕಟವಾಯಿತು. ಪತ್ರಿಕೆಯ ಮೂಲಕ **ಶಂಕರಭಗವತ್ಪಾದವೃತ್ತಾಂತಸಾರಸರ್ವಸ್ವ** ಎಂಬ ಗ್ರಂಥವನ್ನೂ **ಶಿವಾನಂದಲಹರೀ**-ಎಂಬ ಸ್ತೋತ್ರಗ್ರಂಥವನ್ನೂ ಹೊರತರಲಾಯಿತು. ಶ್ರೀಜಯಚಾಮರಾಜೇಂದ್ರಗ್ರಂಥಮಾಲೆಯಲ್ಲಿ ಪ್ರಕಟವಾಗಿದ್ದ ಗೀತಾಭಾಷ್ಯದ ಪ್ರತಿಗಳು ಮುಗಿದುಹೋಗಿದ್ದುದರಿಂದ ಅದನ್ನು ತಿದ್ದಿಪುನರ್ಮುದ್ರಣ ಮಾಡಿಸಿ ಹೊರತರಲಾಯಿತು. **ಪಂಚಪಾದಿಕಾ**- (ಒಂದನೆಯ ವರ್ಣಕ), **ಸರ್ವವ್ಯವಹಾರಾತೀತವಾದ ಪರಮಾರ್ಥ** - ಎಂಬ ಶ್ರೀಗಳವರ ಶಂಕರಸಪ್ತಾಹಕಾಲದ ಉಪನ್ಯಾಸಗಳು- ಇವುಗಳನ್ನೂ ಬೆಳಕಿಗೆ ತರಲಾಯಿತು. ಶಾಂಕರಭಾಷ್ಯಸಹಿತ ಶ್ರೀಗಳ ಟಿಪ್ಪಣೆಗಳೊಡನೆ **ಕಾಠಕೋಪನಿಷತ್** - ಎಂಬ ಸಂಸ್ಕೃತಗ್ರಂಥವೂ ಪ್ರಕಟವಾಯಿತು.

## ಚಾತುರ್ಮಾಸ್ಯಸಂಕಲ್ಪ :

1962ನೆಯ ವರ್ಷದ ಚಾತುರ್ಮಾಸ್ಯಸಂಕಲ್ಪವನ್ನು **ಬೆಂಗಳೂರು** ಬಸವನಗುಡಿ ಬಡಾವಣೆಯಲ್ಲಿ ಬುಲ್‌ಟೆಂಬಲ್ ರಸ್ತೆಯಲ್ಲಿರುವ ಶ್ರೀ **ಡಾ. ನಾರಾಯಣರಾಯರ** ಮನೆಯಲ್ಲಿ ಶ್ರೀಶ್ರೀಗಳವರು ನೆರವೇರಿಸಿದರು. ಆಗ್ಗೆ ಎರಡು ತಿಂಗಳ ಕಾಲವೂ ಬೆಳಗ್ಗೆ ಭಾಷ್ಯಪ್ರವಚನಾದಿಗಳನ್ನೂ ಸಂಜೆ ಉಪನ್ಯಾಸಗಳನ್ನೂ ಗುರುಗಳು ಅನುಗ್ರಹಿಸಿದರು. ಈ ಸಂದರ್ಭದ ಉಪನ್ಯಾಸಗಳನ್ನೆಲ್ಲ **'ಜೀವಂತವೇದಾಂತ'** ಎಂಬ ಗ್ರಂಥರೂಪದಲ್ಲಿ ಅಧ್ಯಾತ್ಮಪ್ರಕಾಶಪತ್ರಿಕೆಯ ಮೂಲಕ ಪ್ರಕಟಿಸಲಾಯಿತು.

## ಅನುಷ್ಠಾನಗಳು :

1962ನೆಯ ವರ್ಷದ **ಶರನ್ನವರಾತ್ರಿ, ಗೀತಾಜಯಂತಿ, ಬ್ರಹ್ಮಚೈತನ್ಯಾರಾಧನೆ**-ಅನುಷ್ಠಾನಗಳು ಸಾಂಗವಾಗಿ ನೆರವೇರಿದವು. ವಿದ್ವಾಂಸರೂ ಭಕ್ತರೂ ಎಂದಿನಂತೆ ಭಾಗವನ್ನು ವಹಿಸಿದ್ದರು.

**ಹರೇರಾಮಮಂತ್ರಜಪಾನುಷ್ಠಾನ :**

1962ನೆಯ ಅಕ್ಟೋಬರ್ ಮಾಹೆಯಲ್ಲಿ ಚೈನಾದೇಶದವರು ಭಾರತದ ಮೇಲೆ ಪ್ರಾರಂಭಿಸಿದ ಯುದ್ಧದಿಂದ ಉಂಟಾದ ಅಶಾಂತಿಯನ್ನೂ ಜನಗಳ ಕಷ್ಟಕಾರ್ಪಣ್ಯಗಳನ್ನೂ ಪರಿಹಾರಮಾಡುವಂತೆ ಭಗವಂತನನ್ನು ಪ್ರಾರ್ಥಿಸುವ ಉದ್ದೇಶದಿಂದ ತಾ. 7-12-62ರಿಂದ ಮತ್ತೆ ಎರಡನೆಯಬಾರಿಗೆ ಹರೇರಾಮಮಂತ್ರಜಪಾನುಷ್ಠಾನವನ್ನು ಪ್ರಾರಂಭಿಸಲಾಯಿತು. ಆದರೆ ಇದಕ್ಕೆ ಮೊದಲನೆಯ ಬಾರಿಯ ಅನುಷ್ಠಾನದಷ್ಟು ಪ್ರೋತ್ಸಾಹವು ಮಹಾಜನರಿಂದ ದೊರೆಯಲಿಲ್ಲ. ಸುಮಾರು ಹದಿನೆಂಟುಕೇಂದ್ರಗಳಲ್ಲಿ ನಲವತ್ತು ಜನರು ಭಾಗವಹಿಸಿದ್ದು ನಲವತ್ತುನಾಲ್ಕುಸಾವಿರ ಮಾಲೆಗಳ ಜಪವು ಮಾತ್ರ ನಡೆಯಿತು. 2-3-63ರಂದು ಮಂಗಳವನ್ನು ಆಚರಿಸಲಾಯಿತು. "**ಹರೇರಾಮಮಂತ್ರಮಹಿಮೆ**" ಎಂಬ ಕರಪತ್ರವೊಂದನ್ನು ಪ್ರಕಟಿಸಿ ಧರ್ಮಾರ್ಥವಾಗಿ ಹಂಚಲಾಯಿತು.

**ಅನುಷ್ಠಾನಗಳು :**

1963ನೆಯ ವರ್ಷದ **ರಾಮನವರಾತ್ರಿ, ಅನುಷ್ಠಾನವೂ ಶಂಕರಸಪ್ತಾಹ ಉತ್ಸವವೂ ಹೊಳೆನರಸೀಪುರದಲ್ಲಿಯೇ** ನೆರವೇರಿದವು. ಮಹಾಜನರು ಎಂದಿನಂತೆ ಭಾಗವಹಿಸಿದ್ದರು.

**ಪೂಜಾಮಂದಿರ :**

ಶ್ರೀದಿಗ್ವಿಜಯರಾಮದೇವರಿಗೂ ಸೀತಾಂಬೆಯವರಿಗೂ ಒಂದೊಂದು ಬೆಳ್ಳಿಯ ಕಿರೀಟವನ್ನು ಹೊಳೆನರಸೀಪುರದ ಶ್ರೀ ಕೆ.ಆರ್. ವೆಂಕಟಕೃಷ್ಣಶೆಟ್ಟರೆಂಬ ಭಕ್ತರು ಮಾಡಿಸಿ 1962ನೆಯ ಅಕ್ಟೋಬರ್ ಮಾಹೆಯಲ್ಲಿ ಸಮರ್ಪಿಸಿದರು. ಅನಂತರ ಇದೇ ಮಹನೀಯರು ಸಮರ್ಪಿಸಿದ್ದ ಸ್ವಲ್ಪ ಬೆಳ್ಳಿಯನ್ನು ಸ್ವೀಕರಿಸಿ 1963ನೆಯ ಏಪ್ರಿಲ್ ತಿಂಗಳಲ್ಲಿ ಮೈಸೂರಿನ ಶ್ರೀ ಆರ್. ರಂಗರಾಯರು-ಎಂಬ ಮಹನೀಯರ ಸಹಾಯದಿಂದ ಲಕ್ಷ್ಮಣದೇವರಿಗೂ ಹನುಮಂತದೇವರಿಗೂ ಬೆಳ್ಳಿಯ ಕಿರೀಟಗಳನ್ನು ಮಾಡಿಸಲಾಯಿತು. ಇದರಿಂದ ದೇವರ ಅಲಂಕಾರಕ್ಕೆ ಅನುಕೂಲವಾಯಿತು.

**ಅನುತಾಪ :**

ಕಾರ್ಯಾಲಯದ ಕಾರ್ಯಕಾರಿಸಮಿತಿಯ ಉಪಾಧ್ಯಕ್ಷರೂ ಕಾರ್ಯಾಲಯದ ಕಟ್ಟಡಗಳಿಗೆ ಭೂದಾನಮಾಡಿದವರೂ ಆಗಿದ್ದ ಪ್ಲೀಡರ್ ಶ್ರೀ ಅರಕಲಗೂಡು ಶ್ರೀಕಂಠಯ್ಯನವರು 1963ನೆಯ ಫೆಬ್ರವರಿ ಮಾಹೆಯಲ್ಲಿ ನಿಧನರಾದರು. ಶ್ರೀಯುತರು ಕಾರ್ಯಾಲಯದ ಚಟುವಟಿಕೆಗಳಲ್ಲಿ ತುಂಬ ಆಸಕ್ತಿಯನ್ನು ವಹಿಸುತ್ತಿದ್ದರು. ಕಾರ್ಯಾಲಯದ ಪುರೋಭಿವೃದ್ಧಿಯ ವಿಷಯದಲ್ಲಿ ಬಹಳ ಶ್ರದ್ಧೆಯಿಟ್ಟು ಕೆಲಸಮಾಡುವ ನಿಷ್ಠಾವಂತಕಾರ್ಯಕರ್ತರಾಗಿದ್ದರು.

ಇವರ ನಿಧನದಿಂದ ಸಂಸ್ಥೆಗೆ ದೊಡ್ಡನಷ್ಟವೇ ಆದಂತಾಯಿತು. ಮುಂದೆ ಇವರ ಸ್ಥಾನದಲ್ಲಿ ಕಾರ್ಯಕಾರಿಸಮಿತಿಯ ಸದಸ್ಯರಾಗಿದ್ದ ಶ್ರೀ ಆರ್.ರಾಮಸ್ವಾಮಯ್ಯನವರನ್ನು ಉಪಾಧ್ಯಕ್ಷರನ್ನಾಗಿ ನೇಮಕಮಾಡಲಾಯಿತು.

## ಚಾತುರ್ಮಾಸ್ಯಸಂಕಲ್ಪ :

1963ನೆಯ ಚಾತುರ್ಮಾಸ್ಯಸಂಕಲ್ಪವನ್ನು ಶ್ರೀಶ್ರೀಗಳವರು ಹೊಳೆನರಸೀಪುರದಲ್ಲಿಯೇ ನೆರವೇರಿಸಿದರು. ಆಗ್ಗೆ ಪ್ರತಿ ಗುರುಶನಿಭಾನುವಾರಗಳಲ್ಲಿ ಮಾತ್ರ ವಿಶೇಷ ಉಪನ್ಯಾಸಗಳನ್ನು ನಡೆಸುತ್ತಿದ್ದರು.

## ಇನ್ನೂ ಕೆಲವು ಚಟುವಟಿಕೆಗಳು :

1963ನೆಯ ವರ್ಷದಲ್ಲಿ ಮುದ್ರಣಾಲಯಕ್ಕೆ ಅಗತ್ಯವಾದ ಕೆಲವು ಸಾಮಾನುಗಳನ್ನು ಕೊಳ್ಳಲಾಯಿತು. ಪುಸ್ತಕಗಳ ಉಗ್ರಾಣಕ್ಕೆ ಕಬ್ಬಿಣದ ರ್‍ಯಾಕುಗಳನ್ನು ತರಿಸಲಾಯಿತು. ಶ್ರೀ ಡಿ.ವೆಂಕಟೇಶಯ್ಯ ಎಂ.ಎ. ರಿ। ತಾಲ್ಲೂಕು ಶಿರಸ್ತೇದಾರ್- ಎಂಬವರನ್ನು ಅಕೌಂಟೆಂಟರನ್ನಾಗಿ ನೇಮಿಸಿಕೊಂಡು ಲೆಕ್ಕಗಳನ್ನೆಲ್ಲ ಆಡಿಟ್‌ಗೆ ಸಿದ್ಧಗೊಳಿಸಲಾಯಿತು. ಅನಂತರ ಬೆಂಗಳೂರಿನಲ್ಲಿರುವ ಚಾರ್ಟರ್ಡ್ ಅಕೌಂಟೆಂಟ್ ಶ್ರೀ ಸೀತಾರಾಮಯ್ಯನವರಿಂದ 1963ನೆಯ ನವೆಂಬರ್ ಮಾಹೆಯಲ್ಲಿ 1957-58ರಿಂದ 62-63ರವರೆಗಿನ ಐದು ವರ್ಷಗಳ ಲೆಕ್ಕಗಳನ್ನೆಲ್ಲ ಆಡಿಟ್‌ಮಾಡಿಸಿ ಸರ್ಟಿಫಿಕೇಟು ಪಡೆಯಲಾಯಿತು.

## ಶ್ರೀಮತಿ ಮತ್ತೂರು ಲಕ್ಷ್ಮೀದೇವಮ್ಮನವರು :

1953ನೆಯ ವರ್ಷದಲ್ಲಿ ಹುಬ್ಬಳ್ಳಿಯಲ್ಲಿ ನಡೆದ ಚಾತುರ್ಮಾಸ್ಯ ಉತ್ಸವಕಾಲದಿಂದಲೂ ಈ ಭಕ್ತಮಹಿಳೆಯು ಕಾರ್ಯಾಲಯದ ಸೇವೆಗೆ ಅನುವಾಗುತ್ತಾ ಬಂದರು. ವಿಶೇಷವಾಗಿ ಶ್ರೀಶ್ರೀಗಳವರ ಸೇವೆಗೆ ಇವರು ಬದ್ಧಕಂಕಣರಾಗಿದ್ದರು. ಇವರು ಶಿವಮೊಗ್ಗ ಜಿಲ್ಲೆ ಮತ್ತೂರು ಅಗ್ರಹಾರದ ವೇ. ಚೆನ್ನಕೇಶವಶಾಸ್ತ್ರಿಗಳ ಪುತ್ರಿ. ಬಾಲ್ಯದಲ್ಲೇ ವೈಧವ್ಯವನ್ನು ಹೊಂದಿದರೂ ತಂದೆಯವರ ಸಹವಾಸದಲ್ಲಿ ಬೆಳೆದು ಸಂಸ್ಕೃತಚಂಪೂನಾಟಕದವರೆಗೆ ವಿದ್ಯಾಭ್ಯಾಸವನ್ನು ಮಾಡಿದರು. ಸಂಗೀತದಲ್ಲಿಯೂ ಶಿಕ್ಷಣವನ್ನು ಪಡೆದರು. ತಂದೆತಾಯಿಗಳು, ತಮ್ಮಂದಿರು, ತಂಗಿಯರಿಂದ ತುಂಬಿರುವ ಕುಟುಂಬದಲ್ಲಿ ಅನುಕೂಲಕರವಾದ ವಾತಾವರಣದಲ್ಲಿದ್ದರು. ಶ್ರೀಶ್ರೀಗಳವರ ದರ್ಶನವನ್ನು ಪಡೆದಮೇಲೆ ಗುರುಗಳ ಬ್ರಹ್ಮವಿದ್ಯೋಪದೇಶ, ಸಾಧನಗಳು ಸದಾಚಾರ-ಇವುಗಳಿಂದ ಆಕರ್ಷಿತರಾಗಿ ಮಾತಾಪಿತೃಗಳ ಅನುಮತಿಯನ್ನು ಪಡೆದು ಗುರುಸಾನ್ನಿಧ್ಯವನ್ನೇ ದೃಢವಾಗಿ ಆಶ್ರಯಿಸಿದರು. ಶ್ರೀಶ್ರೀಗಳವರಿಗೆ ಇನ್ನೂ ಕೆಲವು ಮಹಿಳಾಭಕ್ತರುಗಳೂ ಸುಮಾರು 1962ರವರೆಗೆ ಸೇವೆಯನ್ನು ಸಲ್ಲಿಸುತ್ತಿದ್ದರಾದರೂ ಇವರು

ಆಗಾಗ್ಗೆ ಬಂದು ಸೇವೆಯನ್ನು ಸಲ್ಲಿಸುತ್ತಲೇ ಇದ್ದರು. ಅನಂತರ ಸಂಪೂರ್ಣವಾಗಿ ತಮ್ಮ ತನುಮನಧನಗಳನ್ನೆಲ್ಲ ಗುರುಸೇವೆಗೇ ಮೀಸಲಾಗಿರಿಸಿ ದುಡಿಯುತ್ತಿದ್ದರು. ಶ್ರೀಶ್ರೀಗಳವರ ಪ್ರವಾಸಕಾಲಗಳಲ್ಲಿ, ಅನಾರೋಗ್ಯಕಾಲಗಳಲ್ಲಿ, ಉಳಿದ ಸಾಮಾನ್ಯಕಾಲಗಳಲ್ಲಿ-ಹೀಗೆ ಎಲ್ಲಾ ಪರಿಸ್ಥಿತಿಯಲ್ಲೂ ಇವರು ತಾಯಿಯು ಮಗುವನ್ನು ಸಾಕುವಂತೆ ಗುರುಗಳನ್ನು ಸೇವೆಮಾಡುತ್ತಾ ಗುರುಗಳ ಸಂಪೂರ್ಣಕೃಪೆಗೆ ಪಾತ್ರರಾಗಿದ್ದರು. ಕಾರ್ಯಾಲಯದ ಕೆಲವು ಸಂಸ್ಕೃತಪ್ರಕಟನೆಗಳಿಗೆ ಯಥಾಶಕ್ತಿ ಧನಸಹಾಯವನ್ನೂ ಮಾಡಿದ್ದರು. ಗುರುಗಳ ಸನ್ನಿಧಿಯಲ್ಲಿ ನಡೆಯುತ್ತಿರುವ ಪಾಠಪ್ರವಚನಗಳು, ಉಪನ್ಯಾಸಗಳು, ಚರ್ಚೆಗಳು-ಮುಂತಾದವುಗಳಿಂದ ತಮ್ಮ ತಿಳಿವಳಿಕೆಯನ್ನು ಹೆಚ್ಚಿಸಿಕೊಂಡು ಸಾಧನತತ್ಪರರಾಗಿದ್ದರು. ಈಗಿನ ಕಾಲಕ್ಕೆ ಇಂಥ ಸೇವಾಮನೋಭಾವದ ಸ್ತ್ರೀಯರು ತುಂಬ ವಿರಳರೇ ಸರಿ. ಶ್ರೀಮತಿಯವರ ಉಪಚಾರ, ಸೇವೆ, ಆರೈಕೆಗಳಿಂದಲೇ ಗುರುಗಳು ದೀರ್ಘಕಾಲ ಬದುಕಿದ್ದು ಬರವಣಿಗೆ ಮುಂತಾದ ಕಾರ್ಯಗಳನ್ನು ನೆರವೇರಿಸಲು ಶಕ್ತರಾಗಿದ್ದರು ಎಂದರೆ ಅತಿಶಯೋಕ್ತಿಯಾಗಲಾರದು. ಇದರ ಜೊತೆಗೆ ಗುರುಗಳ ದರ್ಶನಕ್ಕಾಗಿ ಬರುವ ಎಲ್ಲಾ ಭಕ್ತರಿಗೂ ಆಶ್ರಮಕ್ಕೆ ಬರುವ ಅತಿಥಿಗಳಿಗೂ ನಿಯತವಾಗಿ ಇದ್ದುಕೊಂಡಿರುವ ವಿದ್ಯಾರ್ಥಿಗಳಿಗೂ ಇವರು ಮಾತೃಸಮಾನವಾದ ಹೃದಯದಿಂದ ಸತ್ಕಾರಸೇವಾದಿಗಳನ್ನು ನಡೆಸುತ್ತಾ ಎಲ್ಲರ ಪ್ರೀತಿಗೂ ಪಾತ್ರರಾಗಿದ್ದರು. ಇಂಥ ಮಹಿಳೆಯು ಕಾರ್ಯಾಲಯಕ್ಕೆ ದೊರಕಿದ್ದು ಪುಣ್ಯವೇ ಎನ್ನಬಹುದು.

### ಶ್ರೀಶ್ರೀಗಳವರ ಪ್ರವಾಸ :

1963ನೆಯ ನವೆಂಬರ್ ಮಾಹೆಯಲ್ಲಿ ಶ್ರೀಶ್ರೀಗಳವರು ಮಿತಪರಿವಾರದೊಡನೆ ಸುಮಾರು 40 ದಿನಗಳಕಾಲ ಆಂಧ್ರದೇಶದಲ್ಲಿ ಪ್ರವಾಸಮಾಡಿ ಮದ್ರಾಸು, ವಿಜಯವಾಡ, ಗುಂಟೂರು, ಪೆನುಗೊಂಡ, ಪೀಠಾಪುರ, ವಿಶಾಖಪಟ್ಟಣ, ವಿಜಯನಗರ, ಕಾಕಿನಾಡ, ಅನಕಾಪಲ್ಲಿ-ಮುಂತಾದ ಸ್ಥಳಗಳಿಗೆ ಭೇಟಿಕೊಟ್ಟಿದ್ದರು. ಜೊತೆಯಲ್ಲಿ ಶ್ರೀ ದೇವರಾಯ ಕುಲಕರ್ಣಿಯವರೂ ಇದ್ದರು. ಈ ಪ್ರವಾಸದ ವಿಸ್ತಾರವಾದ ವಾರ್ತೆಯನ್ನು ಶ್ರೀ ದೇವರಾಯ ಕುಲಕರ್ಣಿಯವರು ತಮ್ಮದೇ ಆದ ವಿಶಿಷ್ಟಮನೋಹರಶೈಲಿಯಿಂದ ಅಧ್ಯಾತ್ಮಪ್ರಕಾಶಪತ್ರಿಕೆಯ 1964ನೆಯ ಜನವರಿಯಿಂದ ಡಿಸೆಂಬರ್‌ವರೆಗಿನ ಸಂಚಿಕೆಗಳಲ್ಲಿ ವರ್ಣಿಸಿರುತ್ತಾರೆ. ಶ್ರೀಶ್ರೀಗಳವರು ಹೋದೆಡೆಯಲ್ಲೆಲ್ಲಾ ಸ್ವಾಗತಗಳೂ ಪೂಜಾದಿಗಳೂ ಗುರುಗಳಿಂದ ಉಪದೇಶಾದಿಗಳೂ ನಡೆದವು. ವಿಶೇಷವಾಗಿ ಸ್ಮರಿಸಬೇಕಾದ ಸ್ಥಳವೆಂದರೆ ವಿಜಯವಾಡದ ವೃತ್ತಾಂತವು. ಈ ಊರು ಸುಪ್ರಸಿದ್ಧ ವಿದ್ವಾಂಸರುಗಳಿಂದ ತುಂಬಿದ್ದು ವಿದ್ಯಾಸ್ಥಾನವಾಗಿದೆ. ಇಲ್ಲಿ ಶ್ರೀಶ್ರೀಗಳವರಿಗೂ ಉಳಿದ ಪಂಡಿತರಿಗೂ "ಮೂಲಾವಿದ್ಯಾವಾದ" ದ ವಿಷಯದಲ್ಲಿ ಭಿನ್ನಾಭಿಪ್ರಾಯಗಳುಂಟಾಗಿ ಚರ್ಚೆಗಳು ನಡೆದವು. ಶ್ರೀಗಳು ಸಾವಧಾನವಾಗಿ "ಪಂಡಿತರುಗಳು ಶಂಕರಭಾಷ್ಯ ಮೂಲಗ್ರಂಥವನ್ನೂ ಭಾಮತ್ಯಾದಿ ವ್ಯಾಖ್ಯಾನಗಳನ್ನೂ ಪ್ರತ್ಯೇಕವಾಗಿ ಓದಿನೋಡಿ

ಪ್ರಸ್ಥಾನಭೇದವಿರುವದು ನಿಜವೆ?" - ಎಂಬುದನ್ನು ಪರಿಶೀಲಿಸಬೇಕೆಂದು ತಿಳಿಸಿದರು. ಮತ್ತು ಪಂಡಿತರುಗಳು ಪೂರ್ವಾಗ್ರಹವಿಲ್ಲದೆ ನಿಷ್ಪಕ್ಷಪಾತವಾಗಿ ತತ್ತ್ವನಿರ್ಧಾರಣಾ ದೃಷ್ಟಿಯಿಂದಲೇ ವಿಚಾರಮಾಡಬೇಕೆಂದೂ ತಿಳಿಸಿದರು. ಆದರೆ ಪಂಡಿತರುಗಳ ಹೃದಯವು ಇಂಥ ವಿಚಾರಸರಣಿಗೆ ಇನ್ನೂ ಪಕ್ವವಾಗಿರಲಿಲ್ಲವಾಗಿ ಚರ್ಚೆಯಲ್ಲಿ ಮಾತ್ರವೇ ಈ ಪ್ರಸಂಗವು ಮುಕ್ತಾಯವಾಯಿತು. ಶ್ರೀಗಳವರಿಗೆ ಕೊಂಚಕಾಲ ಅದೇ ಊರಿನಲ್ಲಿ ನಿಂತು ಪಂಡಿತರುಗಳನ್ನು ಮನವೊಲಿಸುವಷ್ಟು ಕಾಲ ವ್ಯವಧಾನವೂ ಇರಲಿಲ್ಲವಾದ್ದರಿಂದ ಈ ಭೇಟಿಯಿಂದ ನಿರೀಕ್ಷಿಸಿದಷ್ಟು ಪ್ರಯೋಜನವಾಗಲಿಲ್ಲ. ಆದರೂ ಆ ಊರಿನ ಸುಪ್ರಸಿದ್ಧವಿದ್ವಾಂಸರಾದ ವೇ. ಮುದಿಗೊಂಡ ವೆಂಕಟರಾಮಾಶಾಸ್ತ್ರಿಗಳೆಂಬವರ ಪರಿಚಯವೂ ಅವರ ಮೂಲಕ ಅನೇಕ ವಿದ್ವಾಂಸರುಗಳ ಪರಿಚಯಲಾಭವೂ ಶ್ರೀಗಳವರಿಗೆ ದೊರೆಯಿತು. ಆ ಊರಿನ ಪಂಡಿತರುಗಳಿಗೆ ಶಾಂಕರಪ್ರಸ್ಥಾನಕ್ಕೂ ವ್ಯಾಖ್ಯಾನಪ್ರಸ್ಥಾನಕ್ಕೂ ವೈಲಕ್ಷಣ್ಯವಿದೆಯೆಂಬ ಹೊಸ ವಿಚಾರಸರಣಿಯೊಂದು ತಿಳಿದಂತೆ ಆಯಿತು. ಮುಂದೆ ಅವರುಗಳು ಶ್ರೀಗಳವರು ಸಂಸ್ಕೃತದಲ್ಲಿ ರಚಿಸಿರುವ ಗ್ರಂಥಗಳನ್ನು ನೋಡಬೇಕೆಂಬ ಕುತೂಹಲವುಳ್ಳವರಾದರು. ಅಂತೂ ಅಲ್ಪಕಾಲದ ವಿಜಯವಾಡದ ಸಂದರ್ಶನದಿಂದ ಸಾಕಷ್ಟು ಪ್ರಚಾರಲಾಭವಾಯಿತೆಂದೇ ಹೇಳಬಹುದು.

ಈ ಪ್ರವಾಸದ ಅನಂತರ ಶ್ರೀಗಳವರು ತಾ. 12-1-64ರಿಂದ ನಾಲ್ಕು ದಿನಗಳ ಕಾಲ ಉಡುಪಿ, ಧರ್ಮಸ್ಥಳ, ಸುಬ್ರಹ್ಮಣ್ಯ - ಮುಂತಾದ ಸ್ಥಳಗಳಲ್ಲೂ ಸಂಚಾರ ಮಾಡಿಕೊಂಡು ಬಂದರು.

## ಅನುಷ್ಠಾನಗಳು :

1963ನೆಯ ವರ್ಷದ **ಶರನ್ನವರಾತ್ರಿ, ಗೀತಾಜಯಂತಿ, ಬ್ರಹ್ಮಚೈತನ್ಯಾರಾಧನೆ**- ಮುಂತಾದ ಅನುಷ್ಠಾನಗಳು ಸಾಂಗವಾಗಿ ನೆರವೇರಿದವು. ಭಕ್ತರುಗಳು ಎಂದಿನಂತೆ ಭಾಗವಹಿಸಿದ್ದರು.

## ಗ್ರಂಥಪ್ರಕಟನೆ :

ಈ ವರ್ಷದಲ್ಲಿ ಬ್ರಹ್ಮವಿದ್ಯೆ (ಶ್ರೀಶ್ರೀಗಳವರ ಉಪನ್ಯಾಸಗಳು) **ಪ್ರಶ್ನೋಪನ್ಯಾಸ ಮಂಜರಿ**- ಎಂಬ ಎರಡು ಹೊಸ ಗ್ರಂಥಗಳನ್ನು ಪ್ರಕಟಿಸಲಾಯಿತು. **ಪರಿಶುದ್ಧವೇದಾಂತಸಾರ**- ಎಂಬ ಗ್ರಂಥವನ್ನು ಪುನರ್ಮುದ್ರಣಮಾಡಿಸಲಾಯಿತು.

## ಇತರ ಚಟುವಟಿಕೆಗಳು :

ಪದ್ಮಪುರಾಣಶ್ರವಣವು ಪೂರೈಸಿದ್ದರಿಂದ ತಾ. 10-3-64ರಿಂದ ಶಿವಮಹಾಪುರಾಣವನ್ನು ಪ್ರಾರಂಭಿಸಲಾಯಿತು. ಉಳಿದ ಚಟುವಟಿಕೆಗಳೆಲ್ಲವೂ ಎಂದಿನಂತೆ ನಡೆಯುತ್ತಿದ್ದವು.

**ಅನುಷ್ಠಾನಗಳು :**

1964ನೆಯ ವರ್ಷದ ಶ್ರೀರಾಮನವರಾತ್ರೆಯ ಉತ್ಸವವು ವಿಜೃಂಭಣೆಯಿಂದ ನೆರವೇರಿತು. ಈ ವರ್ಷದ ಶ್ರೀಶಂಕರಸಪ್ತಾಹ ಮಹೋತ್ಸವವು ಮಧುಗಿರಿಯಲ್ಲಿ ಬಹಳ ವೈಭವದಿಂದ ನಡೆಯಿತು. ಮಧುಗಿರಿಯ ಶ್ರೀಶಂಕರ ಸೇವಾಸಂಘದವರು ಏರ್ಪಾಡುಗಳನ್ನೆಲ್ಲ ಸಮರ್ಪಕವಾಗಿ ಮಾಡಿದ್ದರು. ಭಾಷ್ಯಪ್ರವಚನ, ಪುರಾಣಶ್ರವಣಗಳಿಗೆ ಬಹಳ ಜನರು ಸೇರುತ್ತಿದ್ದರು. ಈ ಉತ್ಸವಕ್ಕೆ ಪರಸ್ಥಳಗಳಿಂದ ಹೆಚ್ಚು ಜನ ಪಂಡಿತರು ಬರಲಿಲ್ಲ. ಶ್ರೀಶ್ರೀಗಳವರು ಪ್ರತಿಯೊಂದು ಕಾರ್ಯಕ್ರಮದ ಕೊನೆಯಲ್ಲೂ ಅನುವಾದ ಮಾಡುತ್ತಿದ್ದರಲ್ಲದೆ ಉಪನ್ಯಾಸಗಳನ್ನು ಅವರೇ ನಡೆಯಿಸಿದರು. ಕೊನೆಯದಿನ ಊರಿನವರು ದೊಡ್ಡ ಸಂತರ್ಪಣೆಯನ್ನು ಏರ್ಪಡಿಸಿದ್ದರು. ಅಂತೂ ಉತ್ಸಾಹದಿಂದ ಕಾರ್ಯವು ನಡೆಯಿತು. ಶ್ರೀಗಳವರು ಹಿಂದಿರುಗಿ ಬರುವಾಗ ತುಮಕೂರಿನಲ್ಲಿಯೂ ತಿಪಟೂರಿನಲ್ಲಿಯೂ ನಿಂತು ಭಕ್ತರುಗಳಿಗೆ ಉಪದೇಶಗಳನ್ನು ಅನುಗ್ರಹಿಸಿ ಹೊಳೆನರಸೀಪುರಕ್ಕೆ ದಯಮಾಡಿಸಿದರು. ಈ ವರ್ಷದ ಚಾತುರ್ಮಾಸ್ಯ ಸಂಕಲ್ಪವು ಹೊಳೆನರಸೀಪುರದಲ್ಲಿಯೇ ನೆರವೇರಿತು. ಆಗ್ಗೆ ಪ್ರತಿ ಗುರುಶನಿಭಾನುವಾರಗಳಲ್ಲಿ ಶ್ರೀಶ್ರೀಗಳವರು ವಿಶೇಷ ಉಪನ್ಯಾಸಗಳನ್ನು ಅನುಗ್ರಹಿಸುತ್ತಿದ್ದರು. ಈ ಉಪನ್ಯಾಸಗಳನ್ನೆಲ್ಲ ಸೇರಿಸಿ **"ಅಧ್ಯಾತ್ಮವಿದ್ಯೆ"** ಎಂಬ ಹೆಸರಿನ ಕನ್ನಡಗ್ರಂಥರೂಪವಾಗಿ ಪ್ರಕಟಿಸಲಾಯಿತು.

**ಗ್ರಂಥಪ್ರಕಟನೆ :**

1964ನೆಯ ವರ್ಷದಲ್ಲಿ ಶ್ರೀಶ್ರೀಗಳವರ ಮೇರುಕೃತಿಯಾದ **ವೇದಾಂತ ಪ್ರಕ್ರಿಯಾಪ್ರತ್ಯಭಿಜ್ಞಾ**- ಎಂಬ ಸಂಸ್ಕೃತಗ್ರಂಥವೂ, `How to Recognize the Method of Vedanta' ಎಂಬ ಇಂಗ್ಲಿಷು ಗ್ರಂಥವೂ ಪ್ರಕಟವಾದವು. ಇವುಗಳಲ್ಲದೆ, ಶುದ್ಧಶಾಂಕರಪ್ರಕ್ರಿಯಾಭಾಸ್ಕರದ ಮೂರು ಭಾಗಗಳು. ಸೂತ್ರಭಾಷ್ಯಾರ್ಥತತ್ತ್ವವಿವೇಚನೀ, ಜಿಜ್ಞಾಸಾಧಿಕರಣ- ಎಂಬ ಸಂಸ್ಕೃತಗ್ರಂಥಗಳೂ, ಅಧ್ಯಾಸಭಾಷ್ಯಾರ್ಥವಿಮರ್ಶೆ ಎಂಬ ಕನ್ನಡಗ್ರಂಥವೂ ಹೊರಕ್ಕೆ ಬಂದವು. ವಾಗ್ದೇವೀಸ್ತೋತ್ರ, ತತ್ತ್ವಸಮಾಸ-ಇವುಗಳನ್ನು ತಿದ್ದಿ ಪುನರ್ಮುದ್ರಣಮಾಡಿಸಿ ಪ್ರಕಟಿಸಲಾಯಿತು.

**ಪೂಜಾಮಂದಿರ :**

ಬೆಂಗಳೂರಿನ ಇಬ್ಬರು ಭಕ್ತಮಹಾಶಯರ ಸಹಕಾರದಿಂದ ಶ್ರೀದಿಗ್ವಿಜಯ ರಾಮದೇವರಿಗೆ ಹಿತ್ತಾಳೆಯ ಉತ್ತಮನಕಾಶೆಯಿಂದ ಕೂಡಿದ ಪ್ರಭಾವಳಿಯೊಂದನ್ನು ಮಾಡಿಸಲಾಯಿತು. ನಾಗಮಂಗಲದ ಶಿಲ್ಪಿ ಶ್ರೀ ಎನ್.ಸಿ. ವೆಂಕಟಾಚಾರ್ಯರು ಇದನ್ನು ಸುಂದರವಾಗಿ ತಯಾರಿಸಿಕೊಟ್ಟರು. ಇದರಿಂದ ದೇವಾಲಯಕ್ಕೆ ಒಂದು ವಿಶೇಷಕಳೆಯು ಬಂದಂತೆ ಆಯಿತು.

## `Science of Reality' ಗ್ರಂಥದ ಪ್ರಕಟನೆ :

ಶ್ರೀಶ್ರೀಗಳವರ ಪೂರ್ವಾಶ್ರಮದಲ್ಲಿ ಪೂಜ್ಯರೂ ಗುರುಸ್ಥಾನೀಯರೂ ಆಗಿದ್ದ ದಿ. ಕೆ.ಎ. ಕೃಷ್ಣಸ್ವಾಮಿ ಅಯ್ಯರ್‌ರವರ ಈ ಇಂಗ್ಲಿಷ್ ಗ್ರಂಥದ ಪ್ರತಿಗಳೆಲ್ಲ ಬಹಳ ಹಿಂದೆಯೇ ಮಾರಾಟವಾಗಿ ಮುಗಿದಿದ್ದು ವೇದಾಂತವಿಚಾರ ರಸಿಕರನೇಕರಿಗೆ ಈ ಪುಸ್ತಕವು ದುರ್ಲಭವಾಗಿತ್ತು. ಈ ವೇಳೆಗೆ ಶ್ರೀ ಎಸ್.ವಿ. ಗಣಪತಿ, (ದಿ. ಅಯ್ಯರರ ಅಳಿಯಂದಿರು) ಮದ್ರಾಸ್-ಎಂಬವರು ಈ ಪುಸ್ತಕವನ್ನು ಶೋಧಿಸಿ ಸಂಸ್ಕರಿಸಿ ಪುನರ್ಮುದ್ರಣಕ್ಕೆ ಏರ್ಪಾಡುಮಾಡಬೇಕೆಂದು ಶ್ರೀಶ್ರೀಗಳವರನ್ನು ಕೇಳಿಕೊಂಡಿದ್ದರು. ಜೊತೆಗೆ ದಿ. ಅಯ್ಯರರ ಮಕ್ಕಳಿಂದ ಈ ಗ್ರಂಥದ ವಿಶಿಷ್ಟ ಹಕ್ಕುಬಾಧ್ಯತೆಗಳನ್ನೂ ಯಾವ ಪ್ರತಿಫಲವೂ ಇಲ್ಲದೆ ಕಾರ್ಯಾಲಯಕ್ಕೆ ಒಪ್ಪಿಸಿ ಬರೆದುಕೊಂಡಿದ್ದ ಪ್ರತಿಜ್ಞಾಪತ್ರವನ್ನೂ ಕಳುಹಿಸಿಕೊಟ್ಟಿದ್ದರು. ಇದರಿಂದ ಪ್ರೇರಿತರಾದ ಶ್ರೀಶ್ರೀಗಳವರು ಈ ದೊಡ್ಡಗ್ರಂಥದ ಪ್ರಕಟನೆಯನ್ನು ಕಾರ್ಯಾಲಯದವರು ಕೈಗೊಳ್ಳಬೇಕೆಂದು ಆಜ್ಞೆಮಾಡಿದರು. ತಾವೇ ಗ್ರಂಥವನ್ನೆಲ್ಲ ಶೋಧಿಸಿ ಸಂಸ್ಕರಿಸಿ ಪುನರ್ಮುದ್ರಣಕ್ಕೆ ಸಿದ್ಧಪಡಿಸಿಕೊಟ್ಟರು. ಆಗ್ಗೆ ಕಾರ್ಯಾಲಯದ ಕಾರ್ಯಕಾರಿಸಮಿತಿಯವರು ಈ ಮಹಾಗ್ರಂಥಪ್ರಕಟನೆಗೆ ಅಗತ್ಯವಾದ ಧನಸಹಾಯಕ್ಕಾಗಿ ಮಹಾಜನರಲ್ಲಿ ಪ್ರಾರ್ಥಿಸಿಕೊಂಡು ಇದರ ಪ್ರಕಟನೆಗೆ ಬೇಕಾಗಿದ್ದ ಟೈಪುಗಳು, ಕಾಗದ-ಇವನ್ನು ಕೊಂಡು ಕೆಲಸವನ್ನು ಪ್ರಾರಂಭಿಸಿದರು. ದೈವಾನುಗ್ರಹದಿಂದ ಬೆಂಗಳೂರಿನ ಭಕ್ತಮಹಾಜನರು ಶ್ರೀಶ್ರೀಗಳವರನ್ನು ತಮ್ಮಲ್ಲಿಗೆ ಬರಮಾಡಿಕೊಂಡು ಈ ಗ್ರಂಥದ ಬಗ್ಗೆ ಗುರುಗಳಿಂದ ಉಪನ್ಯಾಸಗಳನ್ನು ಏರ್ಪಡಿಸಿ ಶ್ರವಣಮಾಡಿ ಸಂತೋಷಗೊಂಡು ಮುದ್ರಣಕ್ಕೆ ಅಗತ್ಯವಾದ ಧನಸಹಾಯವನ್ನು ಒದಗಿಸಿಕೊಟ್ಟರು. ಹೀಗೆ ಈ ಕಾರ್ಯವು ಉತ್ಸಾಹದಿಂದ ಮುಂದುವರೆದು ಗ್ರಂಥವು ಪೂರ್ಣವಾಗಿ ಅಚ್ಚಾಗಿ 1965ನೆಯ ಜೂನ್ ತಿಂಗಳವೇಳೆಗೆ ಮಾರಾಟಕ್ಕೆ ಸಿದ್ಧವಾಯಿತು.

## ಇತರ ಚಟುವಟಿಕೆಗಳು :

1964ನೆಯ ವರ್ಷದ ಶರನ್ನವರಾತ್ರಿ, ಗೀತಾಜಯಂತಿ, ಶ್ರೀಬ್ರಹ್ಮಚೈತನ್ಯಾರಾಧನೆ- ಈ ಅನುಷ್ಠಾನಗಳು ಸಾಂಗವಾಗಿ ನಡೆದವು. 1963-64ನೆಯ ವರ್ಷದ ಲೆಕ್ಕಗಳನ್ನು ಆಡಿಟ್‌ಮಾಡಿಸಿ ಸರ್ಟಿಫಿಕೇಟ್ ಪಡೆಯಲಾಯಿತು.

## ಅಧ್ಯಾತ್ಮವಿದ್ಯಾನಿಲಯ :

1962ರಿಂದೀಚೆಗೆ ಹೊಸ ವಿದ್ಯಾರ್ಥಿಗಳು ಯಾರೂ ಸೇರದೆ ಇದ್ದರೂ ಒಬ್ಬನೇ ವಿದ್ಯಾರ್ಥಿಯಾದ ಚಿ. ಕೆ.ಜಿ. ಸುಬ್ರಾಯನಿಗೆ ಶ್ರೀಶ್ರೀಗಳವರೂ ಕಾರ್ಯಾಲಯದ ಪಂಡಿತರೂ ಪಾಠಗಳನ್ನು ನಡೆಸುತ್ತಲೇಇದ್ದರು. ಪಂಡಿತರು ಅಗತ್ಯವಾದ ವೇದಭಾಗಪ್ರಯೋಗಭಾಗಗಳ ಪಾಠವನ್ನು ಹಾಗೂ ಸಾಹಿತ್ಯಪಾಠಗಳನ್ನೂ ನಡೆಸಿ ವಿದ್ಯಾರ್ಥಿಯ ಭಾಷಾಭಿವೃದ್ಧಿಗೆ ನೆರವಾದರು.

ಶ್ರೀಶ್ರೀಗಳವರು ವೇದಾಂತಪಾಠಗಳೇ ಅಲ್ಲದೆ ಇಂಗ್ಲಿಷು, ಗಣಿತ-ಮುಂತಾದ ಪಾಠಗಳನ್ನೂ ಹೇಳುತ್ತಿದ್ದರು. 1964ರ ಕೊನೆಯವೇಳೆಗೆ ಗೀತಾಭಾಷ್ಯ ಪೂರ್ತಿ ಮುಗಿದು ತೈತ್ತಿರೀಯಭಾಷ್ಯ (ಆನಂದವಲ್ಲೀ ಭಾಷ್ಯಾರ್ಥವಿಮರ್ಶಿನೀ ಸಹಿತ) ಪಾಠವು ನಡೆಯುತ್ತಿತ್ತು.

## ಪ್ರೈವೇಟ್ ಟ್ರಸ್ಟ್ :

ಅಧ್ಯಾತ್ಮಪ್ರಕಾಶಕಾರ್ಯಾಲಯವು ಶ್ರೀಶ್ರೀಗಳವರ ಪೂರ್ವಾಶ್ರಮದಲ್ಲಿ ಅವರ ಅಧ್ಯಕ್ಷತೆಯಲ್ಲಿಯೇ ಕೆಲಸಮಾಡುತ್ತಿತ್ತು. 1948ರಲ್ಲಿ ಶ್ರೀಶ್ರೀಗಳವರು ಸಂನ್ಯಾಸವನ್ನು ಸ್ವೀಕರಿಸಿದ ನಂತರ ಅವರೇ ರಚಿಸಿದ ಕಾರ್ಯಕಾರಿಸಮಿತಿಯು ಆಡಳಿತಕ್ಕೆ ಒಳಪಟ್ಟು ಕೆಲಸಮಾಡಿಕೊಂಡುಬಂದಿತು. 1965ನೆಯ ವರ್ಷದ ವೇಳೆಗೆ ಸಂಸ್ಥೆಯ ಆಸ್ತಿಗಳೂ ಜವಾಬ್ದಾರಿಯೂ ಕೆಲಸಗಳೂ ಸರ್ವತೋಮುಖವಾಗಿ ಅಭಿವೃದ್ಧಿಯಾದುದರಿಂದ ಇದರ ರಕ್ಷಣೆಗೆ ಕಾರ್ಯಕಾರಿಸಮಿತಿಗೆ ಮೇಲ್ಪಟ್ಟು ಒಂದು ಟ್ರಸ್ಟ್ ಇರುವದು ಅವಶ್ಯವೆಂದು ಕಂಡುಬಂದಿತು. ಕಾರ್ಯಾಲಯದ ಕೆಲವು ಅಭಿಮಾನಿಗಳು ಈ ವಿಷಯವನ್ನು ಶ್ರೀಶ್ರೀಗಳವರಲ್ಲಿ ವಿಜ್ಞಾಪಿಸಿದರು. ಅದರಂತೆ ಶ್ರೀಶ್ರೀಗಳವರು ಸಧ್ಯಕ್ಕೆ ಏಳು ಜನ ಟ್ರಸ್ಟಿಗಳುಳ್ಳ ಒಂದು ಮಂಡಳಿಯನ್ನು ನಿರ್ಮಿಸಿ ಕಾರ್ಯಾಲಯದ ವಿಶಿಷ್ಟ ಆಡಳಿತವೂ ಸಮಸ್ತ ಹಕ್ಕುಬಾಧ್ಯತೆಗಳು, ಆಸ್ತಿಜವಾಬ್ದಾರಿಗಳ ಸಮೇತ ಪ್ರೈವೇಟ್‌ಟ್ರಸ್ಟ್ ಸಮಿತಿಯ ಅಧೀನದಲ್ಲಿರತಕ್ಕದ್ದೆಂದೂ ಈಗಿನ ಕಾರ್ಯಾಕಾರಿಸಮಿತಿಯು ಅಸ್ತಿತ್ವದಲ್ಲಿದ್ದುಕೊಂಡು ಟ್ರಸ್ಟ್‌ಗೆ ಅಧೀನವಾಗಿ ಕೆಲಸಮಾಡತಕ್ಕದ್ದೆಂದೂ ಘೋಷಿಸಿದರು. ಅದರಂತೆ Trust Deed (ನ್ಯಾಸಪತ್ರ) ವನ್ನು ಬರೆದು ತಾ. 17-2-65ರಂದು ರಿಜಿಸ್ಟರು ಮಾಡಿಸಲಾಯಿತು. ಅನಂತರ ತಾ. 21-3-65ಮತ್ತು 10-7-65ರಲ್ಲಿ ನಡೆದ ಟ್ರಸ್ಟಿಗಳ ಮೀಟಿಂಗ್‌ನಲ್ಲಿ ಟ್ರಸ್ಟ್‌ಕಮಿಟಿಯವರು ತಮ್ಮ ಕೆಲಸಕಾರ್ಯಗಳನ್ನು ನಡೆಸಲು ಸಹಾಯಕವಾದ ನಿಯಮನಿಬಂಧನೆಗಳನ್ನು ಏರ್ಪಡಿಸಿಕೊಂಡು ಕಾರ್ಯಕಾರಿಸಮಿತಿಯವರಿಂದ ವಿಶಿಷ್ಟ ಅಧಿಕಾರವನ್ನೂ ವಹಿಸಿಕೊಂಡರು; ಮತ್ತೆ ಕಾರ್ಯಕಾರಿಸಮಿತಿಯವರಿಗೇ ಆಡಳಿತವನ್ನು ಮುಂದುವರಿಸುವ ಅಧಿಕಾರವನ್ನು ಕೊಟ್ಟರು. ಟ್ರಸ್ಟ್ ಕಮಿಟಿಗೆ ವೇ. ವೇದಾಂತಶಿರೋಮಣಿ ಎಸ್. ವಿಠಲಶಾಸ್ತ್ರಿಗಳು ಅಧ್ಯಕ್ಷರಾಗಿಯೂ ಅಡ್ವೊಕೇಟ್ ಎ. ವೆಂಕಟೇಶಯ್ಯ, ಮೈಸೂರು ಇವರು ಉಪಾಧ್ಯಕ್ಷರಾಗಿಯೂ ಶ್ರೀ ಡಾಕ್ಟರ್ ಎಸ್. ಸದಾಶಿವರಾವ್, ಹೊಳೆನರಸೀಪುರ- ಇವರು ಕನ್‌ವೀನರಾಗಿಯೂ ಚುನಾಯಿತರಾದರು. ಈಚೆಗೆ 23.9.90 ರಿಂದ ಪಬ್ಲಿಕ್ ಛಾರಿಟಬಲ್ ಟ್ರಸ್ಟ್ ಆಗಿ ಕೆಲಸ ಕಾರ್ಯಗಳನ್ನು ನಿರ್ವಹಿಸುತ್ತಿದೆ.

## ಅನುಷ್ಠಾನಗಳು :

1965ನೆಯ ವರ್ಷದ ರಾಮನವರಾತ್ರಿಯ ಅನುಷ್ಠಾನವು ಹೊಳೆನರಸೀಪುರದಲ್ಲಿಯೇ ಸಾಂಗವಾಗಿ ನೆರವೇರಿತು. ಶ್ರೀಶಂಕರಸಪ್ತಾಹಮಹೋತ್ಸವವು ಮಾತ್ರ ಮೊದಲು

ಹೊಳೆನರಸೀಪುರದಲ್ಲೇ ನಡೆಯಲು ನಿಶ್ಚಯವಾಗಿದ್ದು ಅನಂತರ ಕೇವಲ ಒಂದು ವಾರದ ಅವಧಿಯಲ್ಲಿ ಕಾರ್ಯಕ್ರಮವು ಬದಲಾವಣೆಯಾಗಿ **ಬೆಂಗಳೂರಿನಲ್ಲಿ ಗವೀಪುರಂ ಬಡಾವಣೆಯಲ್ಲಿರುವ** ಶ್ರೀ ದೇವರಾಯಕುಲಕರ್ಣಿಯವರ ಮನೆಯ ಮುಂಭಾಗದಲ್ಲಿ ನೆರವೇರಿತು. ಬೆಂಗಳೂರಿನ ಪ್ರಸಿದ್ಧ ವಿದ್ವಾಂಸರುಗಳು ಭಾಷ್ಯಪ್ರವಚನಪುರಾಣಶ್ರವಣಗಳಲ್ಲಿ ಭಾಗವನ್ನು ವಹಿಸಿದ್ದರು. ಶ್ರೀಶ್ರೀಗಳವರು ಎಂದಿನಂತೆ ಉಪನ್ಯಾಸ, ಅನುವಾದಗಳನ್ನು ನಡೆಸಿದರು. ಶ್ರೀ ದೇವರಾಯ ಕುಲಕರ್ಣಿಯವರಿಂದ ಕೀರ್ತನೆಯೂ, ಸಂಗೀತ ವಿದ್ವಾಂಸರುಗಳಿಂದ ವೀಣಾವಾದನ, ವೇಣುವಾದನಗಳೂ ಬೇರೆಬೇರೆಯ ದಿನಗಳಲ್ಲಿ ನಡೆದವು. ಕಾರ್ಯಾಲಯದಿಂದ ಪ್ರಕಟವಾಗಿರುವ ಗ್ರಂಥಗಳ ಪ್ರದರ್ಶನ (ಎಗ್ಸಿಬಿಷನ್) ವೊಂದನ್ನು ಉತ್ಸವಸಮಿತಿಯವರು ಏರ್ಪಡಿಸಿದ್ದರು. ಭಕ್ತಮಹಾಜನರು ಧನಧಾನ್ಯರೂಪವಾದ ಸಹಾಯವನ್ನು ಒದಗಿಸಿದರು. ಅಂತೂ ಈ ಉತ್ಸವವು ಯಶಸ್ವಿಯಾಗಿ ನಡೆಯಿತು.

### ಚಾತುರ್ಮಾಸ್ಯಸಂಕಲ್ಪ :

1965ನೆಯ ವರ್ಷದ ಚಾತುರ್ಮಾಸ್ಯಸಂಕಲ್ಪವನ್ನು ಶ್ರೀಶ್ರೀಗಳವರು ಮೈಸೂರು ಭಕ್ತಮಹಾಜನರ ಅಪೇಕ್ಷೆಯಂತೆ ಮೈಸೂರು ನಗರದಲ್ಲಿ ನಾರಾಯಣಶಾಸ್ತ್ರಿ ರಸ್ತೆಯಲ್ಲಿರುವ 'ಅನಾಥಾಲಯ'ದಲ್ಲಿ ನೆರವೇರಿಸಿದರು. ಎರಡು ತಿಂಗಳಕಾಲವೂ ಅಲ್ಲಿ ಬೆಳಗ್ಗೆ ಬ್ರಹ್ಮಸೂತ್ರಭಾಷ್ಯಪಾಠವನ್ನೂ ಸಂಜೆವೇಳೆಯಲ್ಲಿ ಉಪದೇಶಗಳನ್ನೂ ಅನುಗ್ರಹಿಸುತ್ತಿದ್ದರು. ಭಕ್ತಮಹಾಜನರು ಶ್ರೀಶ್ರೀಗಳವರಿಗೆ ಭಿಕ್ಷೆ, ಹಾಗೂ ಪಾದಪೂಜೆಗಳನ್ನು ಏರ್ಪಡಿಸಿದ್ದರು. ಶ್ರೀಶ್ರೀಗಳವರು ಬರೆದ ಗ್ರಂಥಗಳ ಪ್ರದರ್ಶನವೊಂದನ್ನು ಸಹ ಏರ್ಪಡಿಸಲಾಗಿತ್ತು. ಈ ಅವಧಿಯಲ್ಲಿ ಸುಪ್ರಸಿದ್ಧ ವೇದಾಂತಪ್ರಚಾರಕರೂ ದೇಶವಿದೇಶಗಳಲ್ಲಿ ಸಂಚರಿಸಿ ಜನಪ್ರಿಯರಾದ ಅಧ್ಯಾತ್ಮೋಪದೇಶಕರೂ ಆದ **ಶ್ರೀಚಿನ್ಮಯಾನಂದಸ್ವಾಮಿಗಳೂ** ಬೊಂಬಾಯಿನ ಶ್ರೀ ಎಂ. ವರದರಾಜನ್‌ರವರೂ ಶ್ರೀ ತಿಲಕ್ ಮಹಾರಾಜರೂ ಶ್ರೀಶ್ರೀಗಳವರನ್ನು ಭೇಟಿಮಾಡಿದ್ದರು.

### ಗ್ರಂಥಪ್ರಕಟನೆ :

1965ನೆಯ ವರ್ಷದಲ್ಲಿ **ಸೂತ್ರಭಾಷ್ಯಾರ್ಥತತ್ತ್ವವಿವೇಚನೀ ತತ್ರ ಜನ್ಮಾದ್ಯಧಿಕರಣಮ್**- ಎಂಬ ಸಂಸ್ಕೃತಗ್ರಂಥವೂ `Suddha Sankara Prakriya Bhaskara, I part' ಎಂಬ ಇಂಗ್ಲಿಷು ಪುಸ್ತಕವೂ, **ಈಶಾವಾಸ್ಯೋಪನಿಷತ್ತು** (ಶಾಂಕರಭಾಷ್ಯಮೂಲ ಅನುವಾದ ಸಹಿತ) ಎಂಬ ಕನ್ನಡಪುಸ್ತಕವೂ ಪ್ರಕಟವಾದವು.

### ಇತರ ಚಟುವಟಿಕೆಗಳು :

ಈ ವರ್ಷದ ಶರನ್ನವರಾತ್ರಿ, ಗೀತಾಜಯಂತಿ, ಬ್ರಹ್ಮಚೈತನ್ಯಾರಾಧನೆ-ಈ ಅನುಷ್ಠಾನಗಳು ಸಾಂಗವಾಗಿ ನೆರವೇರಿದವು. ಪುರಾಣ, ಉಪನ್ಯಾಸಗಳು, ಪಾಠಪ್ರವಚನಗಳು-ಎಂದಿನಂತೆ ನಡೆಯುತ್ತಿದ್ದವು.

**ಶ್ರೀಶ್ರೀಗಳವರ ಪ್ರವಾಸ :**

ಶ್ರೀಶ್ರೀಗಳವರು ತಾ 10-11-65 ರಿಂದ 15 ದಿನಗಳ ಕಾಲ ಬೆಂಗಳೂರು, ಮದ್ರಾಸ್ ಪ್ರಾಂತ್ಯದಲ್ಲಿರುವ ತಪೋವನಂ ಎಂಬ ಕ್ಷೇತ್ರ, ಚಿದಂಬರ, ಕುಂಭಕೋಣ, ತಂಜಾವೂರು, ಮಹಾದಾನಪುರ, ಮಧುರೆ, ಕನ್ಯಾಕುಮಾರಿ, ತ್ರಿವೇಂಡ್ರಂ, ಕೊಟ್ಟಾಯಂ, ಕೊಯಮತ್ತೂರು, ಮೈಸೂರು- ಈ ಪ್ರಾಂತಗಳಲ್ಲಿ ಸಂಚಾರಮಾಡಿದರು. ಈ ಪ್ರವಾಸಕ್ಕೆ ಪೂರ್ತಿಯಾಗಿ ಬೆಂಗಳೂರಿನ ಒಬ್ಬ ಭಕ್ತರು ಒಂದು ಕಾರನ್ನು ಶ್ರೀಗಳವರಿಗೆ ಏರ್ಪಡಿಸಿಕೊಟ್ಟಿದ್ದರು. ವೇ॥ ಬ್ರ॥ ಶ್ರೀ ಎಸ್. ವಿಠಲಶಾಸ್ತ್ರಿಗಳೂ ಜೊತೆಯಲ್ಲಿದ್ದರು.

**ಪೂಜಾಮಂದಿರ :**

ಶ್ರೀರಾಮದೇವಸ್ಥಾನದ ಮುಂಭಾಗದಲ್ಲಿ ಮೈಸೂರಿನ ಒಬ್ಬ ಮಹಿಳಾ ಭಕ್ತರ ಸಹಾಯದಿಂದ ತುಳಸೀಬೃಂದಾವನವೊಂದನ್ನು ನಿರ್ಮಿಸಲಾಯಿತು. 21 ಅಡಿಗಳ ಎತ್ತರದ ವಿಮಾನ (ಶ್ರೀ ದಿಗ್ವಿಜಯಾರಾಮದೇವರ ಗರ್ಭಗುಡಿ ಮೇಲಿನ ಗೋಪುರ) ನಿರ್ಮಾಣಕಾರ್ಯವನ್ನು ಮೂರು ಸಾವಿರ ರೂಪಾಯಿಗಳ ಕಂಟ್ರಾಕ್ಟ್‌ಗೆ ಮೈಸೂರಿನ ಸುಪ್ರಸಿದ್ಧ ಶಿಲ್ಪಿಗಳಾದ ಶ್ರೀ ಎಂ. ಪುಟ್ಟಯ್ಯ ಎಂಬವರಿಗೆ ವಹಿಸಲಾಯಿತು. ಈ ಕೆಲಸವು 1966ನೆಯ ಜುಲೈ ತಿಂಗಳು ವೇಳೆಗೆ ಪೂರ್ಣಗೊಂಡಿತು. ಇದರಿಂದ ದೇವಸ್ಥಾನಕ್ಕೆ ಒಂದು ವಿಶೇಷ ಕಳೆಯು ಬಂದಿತು.

**ಗ್ರಂಥಪ್ರಕಟನೆ :**

1966ನೆಯ ವರ್ಷದಲ್ಲಿ **ಗೀತಾಶಾಸ್ತ್ರಾರ್ಥವಿವೇಕಃ ಮತ್ತು ಪಂಚಪಾದಿಕಾಪ್ರಸ್ಥಾನಮ್** ಎಂಬ ಸಂಸ್ಕೃತಗ್ರಂಥಗಳೂ **ಸವಾರ್ತಿಕ ಪಂಚೀಕರಣ, ಪರಮಾರ್ಥಚಿಂತಾಮಣಿ, ಸಂಸ್ಕೃತಭಾಷಾಭ್ಯಾಸ-** 1ನೆಯ ಭಾಗ- ಈ ಕನ್ನಡ ಗ್ರಂಥಗಳ ಹೊಸ ಸಂಸ್ಕರಣಗಳೂ ಸಿದ್ಧವಾಗಿ ಹೊರಕ್ಕೆ ಬಂದವು.

**ಅನುಷ್ಠಾನಗಳು :**

1966ನೆಯ ವರ್ಷದ ರಾಮನವರಾತ್ರಿಯ ಉತ್ಸವವು ಎಂದಿನಂತೆ ವಿಜೃಂಭಣೆಯಿಂದ ನೆರವೇರಿತು. ಶಂಕರಸಪ್ತಾಹ ಮಹೋತ್ಸವಕ್ಕೆ ದಾವಣಗೆರೆಯಿಂದ ಆಹ್ವಾನವು ಬಂದಿತ್ತು. ಅದರಂತೆ ಆ ಊರಿನ ಶ್ರೀಶಿವಾನಂದ ಅಧ್ಯಾತ್ಮಮಂದಿರದಲ್ಲಿ ಸಪ್ತಾಹಮಹೋತ್ಸವವು ಬಹಳ ಚೆನ್ನಾಗಿ ನಡೆಯಿತು. ದಾವಣಗೆರೆಯ ಪ್ರಮುಖವರ್ತಕರಲ್ಲೊಬ್ಬರಾದ ಶ್ರೀ ಮುದಗಲ್ ಚಿಕ್ಕಣ್ಣಶೆಟ್ಟರು ಹೆಚ್ಚಿನ ಉತ್ಸಾಹದಿಂದ ಕೂಡಿ ಉತ್ಸವದ ಸಕಲ ಏರ್ಪಾಡುಗಳನ್ನೂ ಮಾಡಿಸಿದ್ದರು. ಈ ಉತ್ಸವದ ವ್ಯವಸ್ಥೆಗಾಗಿಯೇ ಶ್ರೀ ದೇವರಾಯ ಕುಲಕರ್ಣಿಯವರು

ಬೆಂಗಳೂರಿನಿಂದ ಬಂದು ದಾವಣಗೆರೆಯಲ್ಲಿ ಉಳಿದುಕೊಂಡಿದ್ದರು. ಶ್ರೀಶ್ರೀಗಳವರು ಅಲ್ಲಿನ ಭಕ್ತರ ಕೋರಿಕೆಯಂತೆ ಉತ್ಸವಕ್ಕೆ ಹದಿನೈದು ದಿನಗಳ ಮುಂಚಿತವಾಗಿಯೇ ದಯಮಾಡಿಸಿ ಕೆಲವು ಉಪನ್ಯಾಸಗಳನ್ನು ಅನುಗ್ರಹಿಸಿದರು. ಅನಂತರ ಸಪ್ತಾಹಮಹೋತ್ಸವವು ಸಕಾಲದಲ್ಲಿ ಕಾರ್ಯಕ್ರಮದಂತೆ ಪ್ರಾರಂಭವಾಯಿತು. ಪರಸ್ಥಳಗಳಿಂದ ಅಧಿಕಸಂಖ್ಯೆಯಲ್ಲಿ ಭಕ್ತರು ಬಂದು ಸೇರಿದ್ದರು. ವಿದ್ವಾಂಸರುಗಳು ಎಂದಿನಂತೆ ಭಾಷ್ಯಪ್ರವಚನ ಪುರಾಣ ಶ್ರವಣಗಳಲ್ಲಿ ಭಾಗವಹಿಸಿದ್ದರು. ಶ್ರೀಶ್ರೀಗಳವರು ಪ್ರತಿಕಾರ್ಯಕ್ರಮದ ಕೊನೆಯಲ್ಲಿಯೂ ಅನುವಾದ ಮಾಡುತ್ತಿದ್ದರು. ಉಪನ್ಯಾಸಗಳು ಅವರಿಂದಲೇ ನೆರವೇರಿದವು. ಭಕ್ತಮಹಾಜನರು ಶ್ರೀಶ್ರೀಗಳವರನ್ನು ಆದರಪೂರ್ವಕವಾಗಿ ಸತ್ಕರಿಸಿ ಯಥೋಚಿತಕಾಣಿಕೆಗಳನ್ನು ಸಮರ್ಪಿಸಿದರು. ಕಾರ್ಯಾಲಯಕ್ಕೂ ಧನಸಹಾಯವನ್ನು ನೀಡಿದರು. ಈ ಸಂದರ್ಭದಲ್ಲಿ ಶ್ರೀಶ್ರೀಗಳವರು ಅನುಗ್ರಹಿಸಿದ ಉಪನ್ಯಾಸಗಳನ್ನು **"ಶಾಂಕರವೇದಾಂತದ ಮೂಲತತ್ತ್ವಗಳು"** ಎಂಬ ಹೆಸರಿನಿಂದ ಕನ್ನಡಗ್ರಂಥರೂಪವಾಗಿ ಪ್ರಕಟಿಸಲಾಯಿತು.

**ಇತರ ಚಟುವಟಿಕೆಗಳು :**

(ಅ) ಶಿವಮಹಾಪುರಾಣವು ಪೂರೈಸಿ 28-3-66ರಿಂದ ಬ್ರಹ್ಮಾಂಡಪುರಾಣವನ್ನು ಆರಂಭಿಸಲಾಯಿತು. (ಆ) ಕೇರಳದ ಪರ್ಲಿಕಾಡ್ ಜ್ಞಾನಾಶ್ರಮದ ಶ್ರೀ ಪೂರ್ಣಾನಂದತೀರ್ಥಜೀರವರೂ ಬೆಂಗಳೂರಿನಲ್ಲಿರುವ ರಿಟೈರ್ಡ್ ಹೈಕೋರ್ಟ್ ಜಸ್ಟಿಸ್ ಟಿ.ಎನ್. ಮಲ್ಲಪ್ಪನವರೂ ಶ್ರೀಶ್ರೀಗಳವರ ಸಂದರ್ಶನವನ್ನು ಪಡೆದರು. (ಇ) ಶ್ರೀ ಕುಪ್ಪಳ್ಳಿ ಮಂಜೇಗೌಡರೆಂಬ ಭಕ್ತಮಹಾಶಯರು ತಾ. 1-6-66 ಮತ್ತು 2-6-66ರಂದು ಶ್ರೀರಾಮದೇವರ ಸನ್ನಿಧಿಯಲ್ಲಿ ಲಕ್ಷಾರ್ಚನೆ, ಸೀತಾಕಲ್ಯಾಣಮಹೋತ್ಸವ, ರಾಮತಾರಕಮಂತ್ರಹವನ- ಮುಂತಾದ ಸೇವೆಗಳನ್ನು ನಡೆಯಿಸಿದರು. (ಈ) ಪುಸ್ತಕಗಳ ಉಗ್ರಾಣಕ್ಕೆ ಕೆಲವು ಕಬ್ಬಿಣದ ರ್‍ಯಾಕುಗಳನ್ನು ಕೊಳ್ಳಲಾಯಿತು. (ಉ) ಬೆಂಗಳೂರು ವಿಶ್ವೇಶ್ವರಪುರದ ಪರಮಾರ್ಥವಿಚಾರಸಂಘದ ಸದಸ್ಯರುಗಳು 24-7-66ರಂದು ಕಾರ್ಯಾಲಯಕ್ಕೆ ಶ್ರೀ ದೇವರಾಯ ಕುಲಕರ್ಣಿಯವರೊಡನೆ ದಯಮಾಡಿಸಿದ್ದರು. ಬ್ರಹ್ಮಜ್ಞಕವಿ ಶ್ರೀ ದೇವರಾಯರು ತಮ್ಮ ಕೃತಿಯಾದ 'ಶಂಕರದರ್ಶನ' ಗ್ರಂಥವನ್ನು ಕಾರ್ಯಾಲಯಕ್ಕೆ ವಿಶಿಷ್ಟಹಕ್ಕುಬಾಧ್ಯತೆಗಳ ಸಮೇತ ಅರ್ಪಿಸಿದರು. ಸಂಘದ ಸದಸ್ಯರುಗಳು ಆ ಗ್ರಂಥದ ಮುದ್ರಣವೆಚ್ಚಕ್ಕಾಗಿ ಯಥೋಚಿತಧನಸಹಾಯವನ್ನೂ ನೀಡಿದರು. ಮುಂದೆ ಆ ಗ್ರಂಥವನ್ನು ಅಧ್ಯಾತ್ಮಪ್ರಕಾಶ ಪತ್ರಿಕೆಯ ಮೂಲಕ ಪ್ರಕಾಶಗೊಳಿಸುವ ವ್ಯವಸ್ಥೆಮಾಡಲಾಯಿತು.

**ಚಾತುರ್ಮಾಸ್ಯಸಂಕಲ್ಪ :**

1966ನೆಯ ವರ್ಷದ ಚಾತುರ್ಮಾಸ್ಯಸಂಕಲ್ಪವನ್ನು ಶ್ರೀಶ್ರೀಗಳವರು ಹೊಳೆನರಸೀಪುರ ದಲ್ಲಿಯೇ ನೆರವೇರಿಸಿದರು. ಈ ಸಂದರ್ಭದಲ್ಲಿ ವಿಶೇಷ ಉಪನ್ಯಾಸಗಳ ಏರ್ಪಾಡು

ಇರಲಿಲ್ಲ. ಶ್ರೀಶ್ರೀಗಳವರು ಸೀಮೋಲ್ಲಂಘನದ ದಿನ ಹೊಳೆನರಸೀಪುರದಿಂದ ಹೊರಟು ವಿಶ್ವಭಾರತಪ್ರವಾಸಮಾಡುವ ಇಷ್ಟವುಳ್ಳವರಾಗಿದ್ದರು. ಅದಕ್ಕೆ ತಕ್ಕ ಸಿದ್ಧತೆಗಳನ್ನೂ ಮಾಡಿಕೊಳ್ಳುತ್ತಿದ್ದರು. ಈ ಸಂದರ್ಭದಲ್ಲಿ ವೇದಾಂತಶ್ರವಣಕ್ಕಾಗಿ ಶ್ರೀಭಗವತ್ಪಾದರು, ಶ್ರೀಕೃಷ್ಣಪಾದರು-ಎಂಬ ಇಬ್ಬರು ಸಂನ್ಯಾಸಿಗಳು ಕಾರ್ಯಾಲಯದಲ್ಲಿ ತಂಗಿದ್ದರು. ಅನಂತರ ತಮ್ಮ ಸ್ಥಳಗಳಿಗೆ ದಯಮಾಡಿಸಿದರು.

## ಶ್ರೀಶ್ರೀಗಳವರ ವಿಶ್ವಭಾರತಪ್ರವಾಸ :

ಶ್ರೀಶ್ರೀಗಳವರು ಆಗ್ಗೆ ಹೊಸದಾಗಿ ಬರೆದು ಕಾರ್ಯಾಲಯದ ಮೂಲಕ ಪ್ರಕಟಿಸಿದ್ದ 'ಪಂಚಪಾದಿಕಾಪ್ರಸ್ಥಾನಮ್' ಎಂಬ ಸಂಸ್ಕೃತಗ್ರಂಥವನ್ನು ವಿದ್ವಾಂಸರುಗಳ ಮುಂದಿಟ್ಟು ಅಭಿಪ್ರಾಯಗಳನ್ನು ಸಂಗ್ರಹಿಸಬೇಕೆಂಬ ಉದ್ದೇಶವುಳ್ಳವರಾಗಿದ್ದರು. ವಿಶೇಷವಾಗಿ ಈ ಗ್ರಂಥದಲ್ಲಿ 'ಪಂಚಪಾದಿಕೆ'ಯೆಂಬ ವ್ಯಾಖ್ಯಾನವನ್ನು ಶಂಕರಾಚಾರ್ಯರ ಭಾಷ್ಯಾಭಿಪ್ರಾಯಗಳಿಗೆ ವಿರುದ್ಧವಾಗಿ ಯಾರೋ ಬರೆದು ಪದ್ಮಪಾದರ ಹೆಸರಿನಲ್ಲಿ ಪ್ರಚಾರಮಾಡಿರಬೇಕು,ಅಥವಾ ಈ ಗ್ರಂಥವೇ ಪ್ರಮಾಣವೆಂದೂ ಇದನ್ನು ಪದ್ಮಪಾದರೇ ಬರೆದರೆಂದೂ ಸಾಂಪ್ರದಾಯಿಕವಾದ ಕಥೆಗಳ ಆಧಾರದಿಂದ ನಂಬುವದಾದರೆ ಪದ್ಮಪಾದನು ಆಚಾರ್ಯರ ಸಾಕ್ಷಾತ್‌ಶಿಷ್ಯನಂತೂ ಆಗಿರಲಾರನು; ಹಾಗಿದ್ದರೆ ಅವನು ಶಂಕರಾಚಾರ್ಯರಿಗೆ ವಿರುದ್ಧವಾಗಿ ಬರೆಯುತ್ತಿರಲಿಲ್ಲ- ಎಂಬ ಅಭಿಪ್ರಾಯ ಪ್ರಕಟವಾಗಿತ್ತು. ಆದ್ದರಿಂದ ಈ ಶೋಧನೆಯನ್ನು ಪಂಡಿತರುಗಳ ಅವಗಾಹನೆಗೆ ತಂದು ಭಾಷ್ಯಪ್ರಸ್ಥಾನಕ್ಕೂ ವ್ಯಾಖ್ಯಾನಪ್ರಸ್ಥಾನಗಳಿಗೂ ವೈಲಕ್ಷಣ್ಯವಿರುವದರಿಂದ ಸಂಸ್ಕೃತಕಾಲೇಜುಗಳಲ್ಲಿಯೂ ಯೂನಿವರ್ಸಿಟಿಗಳಲ್ಲಿಯೂ ಶಾಂಕರವೇದಾಂತವನ್ನು ಬೋಧಿಸುವಾಗ ವಿದ್ಯಾರ್ಥಿಗಳಿಗೆ ಭಾಷ್ಯಪ್ರಸ್ಥಾನವನ್ನೂ ವ್ಯಾಖ್ಯಾನಪ್ರಸ್ಥಾನವನ್ನೂ ಬೇರೆಬೇರೆಯಾಗಿಯೇ ಬೋಧಿಸುವ ವ್ಯವಸ್ಥೆಮಾಡುವಂತೆ ಅಲ್ಲಲ್ಲಿ ಪ್ರೊಫೆಸರುಗಳನ್ನೂ ಪಂಡಿತರುಗಳನ್ನೂ ಭೇಟಿಮಾಡಿ ವಿಷಯುವನ್ನು ತಿಳಿಸತಕ್ಕದ್ದು- ಹೀಗೆಯೇ ಶುದ್ಧಶಾಂಕರವೇದಾಂತವನ್ನೇ ಹೇಳುತ್ತಾ, ಬರೆಯುತ್ತಾ, ಪ್ರಚಾರಮಾಡುತ್ತಾ ದೇಹಪಾತವಾದರೂ ಆಗಲಿ, ಶ್ರೀಕಾಶೀಕ್ಷೇತ್ರದವರೆಗೂ ಕೊನೆಯಬಾರಿಗೆ ಹೋಗಿಬರಬೇಕು- ಎಂದು ಶ್ರೀಗಳು ದೃಢಸಂಕಲ್ಪಮಾಡಿ ಸೀಮೋಲ್ಲಂಘನದ ದಿನ ಹಾಸನದ ಮಾರ್ಗವಾಗಿ ಬೆಂಗಳೂರಿಗೆ ಪ್ರಯಾಣಬೆಳೆಸಿದರು. ವೇ।।ಬ್ರ।। ಎಸ್. ವಿಠಲಶಾಸ್ತ್ರಿಗಳೂ ಶ್ರೀಮತಿ ಮತ್ತೂರು ಲಕ್ಷ್ಮೀದೇವಮ್ಮನವರೂ ಜೊತೆಯಲ್ಲಿ ಹೊರಟರು. ಹೊಳೆನರಸೀಪುರದಿಂದ ಹೊರಡುವಾಗ ಮಹಾಜನರೆಲ್ಲರೂ ಗುರುಗಳು ಇಂಥ ವಾರ್ಧಕ್ಯದಲ್ಲಿ ಉತ್ತರಭಾರತದವರೆಗೂ ಹೋಗಿಬರುವದು ಸಾಧ್ಯವೆ? ರೈಲುಪ್ರಯಾಣವು ಇವರಿಗೆ ಕಷ್ಟಕರವಾದೀತಲ್ಲವೆ? ಹೇಗೋ ದೊಡ್ಡವರು! ಸತ್ಯಸಂಕಲ್ಪವುಳ್ಳವರು. ಈ ಪ್ರವಾಸವನ್ನು ಸುಖವಾಗಿ ಪೂರೈಸಿಕೊಂಡು ಶ್ರೀಗಳು ಹಿಂದಿರುಗುವಂತೆ ದೇವರು ಅನುಗ್ರಹಿಸಲಿ! ಎಂದು ಪ್ರಾರ್ಥಿಸಿಕೊಂಡರು. ಅನಂತರ

ಹಾಸನಕ್ಕೆ ತಾ. 29-9-66ರಂದು ಸಂಜೆ ದಯಮಾಡಿಸಿ ಅಲ್ಲಿ ಮೂರು ದಿನಗಳಿದ್ದು ಮುಂದೆ ಬೆಂಗಳೂರಿಗೆ ದಯಮಾಡಿಸಿದರು.

ಬೆಂಗಳೂರುನಗರದಲ್ಲಿ ಶ್ರೀಅನಂತಸ್ವಾಮಿ ಆಶ್ರಮದಲ್ಲಿ ಭಕ್ತರ ಅಪೇಕ್ಷೆಯಂತೆ ಒಂದು ವಾರಕಾಲ ತಂಗಿದ್ದು ವೇದಾಂತೋಪದೇಶಗಳನ್ನು ಅನುಗ್ರಹಿಸಿದರು. ಆ ಸಂದರ್ಭದಲ್ಲಿ ಬೆಂಗಳೂರಿನ ಉದಾರಬುದ್ಧಿಯ ಭಕ್ತಮಹಾಶಯರೊಬ್ಬರು ಶ್ರೀಶ್ರೀಗಳವರಿಗೆ ಇಳಿವಯಸ್ಸಿನಲ್ಲಿ ಬೇರೆಬೇರೆಯ ಸ್ಥಳಗಳಲ್ಲಿ ಹತ್ತುವದು, ಇಳಿಯುವದು- ಮುಂತಾದ ಕಾರಣದಿಂದ ರೈಲುಪ್ರಯಾಣವು ಬಹಳ ಕಷ್ಟಕರವೆಂತ ಭಾವಿಸಿ ಪ್ರವಾಸಕ್ಕೆಲ್ಲ ಅನುಕೂಲವಾಗುವಂತೆ ಮೂರು ತಿಂಗಳ ಅವಧಿಗೆ ಒಂದು ಕಾರನ್ನು (Car) ಗೊತ್ತುಮಾಡಿಕೊಟ್ಟರು. ದೈವಾನುಗ್ರಹದಿಂದ ಒದಗಿದ ಈ ಸೌಕರ್ಯವನ್ನು ಉಪಯೋಗಿಸಿಕೊಂಡು ತಾ 12-10-66ರಂದು ಬೆಂಗಳೂರಿನಿಂದ ಶ್ರೀಶ್ರೀಗಳವರು ಹೊರಟರು. ಆಗ್ಗೆ ಶ್ರೀನಿಖಿಲಾನಂದಗುಪ್ತ ದಂಪತಿಗಳು ಇಡೀ ಪ್ರವಾಸ ಪೂರ್ತಿ ಶ್ರೀಗಳೊಡನೆ ಇರಲು ಒಪ್ಪಿ ಹೊರಟರು. ಗುರುಗಳು ಅರಸೀಕೆರೆ, ಬುಕ್ಕಾಂಬುಧಿ, ತರೀಕೆರೆ, ಶಿವಮೊಗ್ಗ, ಸಾಗರ, ಶಿರಸಿ, ಗೋಕರ್ಣ, ಹುಬ್ಬಳ್ಳಿ, ಧಾರವಾಡ, ಗದಗ್, ಬಾಗಲಕೋಟೆ, ಬಿಜಾಪುರ, ಗುಲ್ಬರ್ಗ, ನರಸೋಬವಾಡಿ, ಮಿರಜ್, ಪೂನಾಮಾರ್ಗವಾಗಿ ಬೊಂಬಾಯಿಗೆ ದಯಮಾಡಿಸಿದರು. ಹುಬ್ಬಳ್ಳಿಯಿಂದ ಬೊಂಬಾಯಿವರೆಗಿನ ಪ್ರವಾಸದಲ್ಲಿ ಶ್ರೀ ದೇವರಾಯರೂ ಶ್ರೀಗಳೊಡನೆ ಇದ್ದರು. ಅಲ್ಲಿಂದ ಮುಂದೆ ನಾಸಿಕಮಾರ್ಗವಾಗಿ ಭೋಪಾಲ್‌ಗೆ ದಯಮಾಡಿಸಿದರು. ಅಲ್ಲಿಂದ ಮುಂದೆ ಶ್ರೀಕಾಶೀಕ್ಷೇತ್ರವನ್ನು ತಲುಪಿ ಅಲ್ಲಿ ಒಂದು ವಾರಕಾಲ ತಂಗಿದ್ದರು. ಅನಂತರ ಕಲ್ಕತ್ತಕ್ಕೆ ಪ್ರಯಾಣಬೆಳೆಸಿದರು. ಮುಂದೆ ಆಂಧ್ರಪ್ರದೇಶವನ್ನು ಪ್ರವೇಶಿಸಿ ವಿಜಯನಗರ, ವಿಶಾಖಪಟ್ಟಣ, ಅನಕಾಪಲ್ಲಿ ಮುಂತಾದ ಸ್ಥಳಗಳನ್ನು ಸಂದರ್ಶಿಸಿ ಕೋಲಾರಮಾರ್ಗವಾಗಿ ಬೆಂಗಳೂರಿಗೆ ಬಂದು ತಾ. 12-1-67ನೆಯ ಗುರುವಾರ ಹೊಳೆನರಸೀಪುರಕ್ಕೆ ದಯಮಾಡಿಸಿದರು. ಊರಿನ ಮಹಾಜನರು ಆ ದಿನ ಗುರುಗಳನ್ನು ಭಕ್ತಿಶ್ರದ್ಧೆಗಳಿಂದ ಬರಮಾಡಿಕೊಂಡು ಉತ್ಸವದ ಮೂಲಕ ಕಾರ್ಯಾಲಯಕ್ಕೆ ಕರೆದುಕೊಂಡು ಬಂದರು. ಮಾರನೆಯದಿನ ಶ್ರೀದಿಗ್ವಿಜಯರಾಮರಿಗೆ ಗಂಗಾಭಿಷೇಕಮಹಾಪೂಜಾದಿಗಳನ್ನೂ ಗಂಗಾಸಮಾರಾಧನೆಯನ್ನೂ ನೆರವೇರಿಸಲಾಯಿತು.

ವಿಶೇಷವಾಗಿ ಈ ಪ್ರವಾಸದಲ್ಲಿ ಶ್ರೀಶ್ರೀಗಳವರು ಪೂನಾ, ಬೊಂಬಾಯಿ ಕಾಶೀ, ಕಲ್ಕತ್ತ ನಗರಗಳಲ್ಲಿ ಕೆಲವು ವಿದ್ವಾಂಸರುಗಳನ್ನೂ ಪ್ರೊಫೆಸರುಗಳನ್ನೂ ಭೇಟಿಮಾಡಿ 'ಪಂಚಪಾದಿಕಾ' ಗ್ರಂಥದ ವಿಚಾರವಾಗಿಯೂ ಭಾಷ್ಯವ್ಯಾಖ್ಯಾನಪ್ರಸ್ಥಾನಗಳ ವೈಲಕ್ಷಣ್ಯವಿಚಾರವಾಗಿಯೂ ಚರ್ಚೆಗಳನ್ನು ನಡೆಯಿಸಿದರು. ಕೆಲವರು ಈ ವೈಲಕ್ಷಣ್ಯವನ್ನು ಕುರಿತು ಇನ್ನೂ ವಿಮರ್ಶಿಸಬೇಕಾಗಿದೆ- ಎಂದರು. ಕೆಲವರು ಈ ಅಭಿಪ್ರಾಯ ಸರಿಯಲ್ಲವೆಂದೇ ಹಠದಿಂದ ವಾದಿಸಿದರು. ಹೇಗೇ ಆಗಲಿ, ಅದ್ವೈತವೇದಾಂತವನ್ನು ಅದರಲ್ಲೂ ಶಂಕರಭಾಷ್ಯವನ್ನು ಶಾಸ್ತ್ರೀಯವಾಗಿ ಅಭ್ಯಾಸಮಾಡಿರುವ ಪಂಡಿತರ ಸಂಖ್ಯೆ ಬಹಳ ಕಡಮೆಯಾಗಿದ್ದುದರಿಂದಲೂ

ಕಾಲಸಂಕೋಚದಿಂದ ಕೆಲವು ಪಂಡಿತರುಗಳ ಭೇಟಿಯು ಶ್ರೀಗಳವರಿಗೆ ಆಗಲಿಲ್ಲ ವಾದುದರಿಂದಲೂ ಶ್ರೀಗಳವರು ನಿರೀಕ್ಷಿಸಿದಷ್ಟು ಫಲವಾಗಲಿಲ್ಲವಾದರೂ ಇಡೀ ಭಾರತದಲ್ಲೆಲ್ಲ ಮುಖ್ಯಸ್ಥಳಗಳಲ್ಲಿ ಈ ವಿಷಯದ ಪ್ರಚಾರವಾಯಿತು. ಒಂದೆರಡು ವಿಶ್ವವಿದ್ಯಾಲಯಗಳವರು ಶಾಂಕರಭಾಷ್ಯವನ್ನೂ ವ್ಯಾಖ್ಯಾನಗಳನ್ನೂ ಬೇರೆಬೇರೆಯಾಗಿಯೇ ಬೋಧಿಸುವ ಯೋಜನೆಯನ್ನು ಜಾರಿಗೆ ತರುವದಾಗಿ ಭರವಸೆ ನೀಡಿದರು. ಕಾರ್ಯಾಲಯದ ಆರ್ಥಿಕ ದೃಷ್ಟಿಯಿಂದ ಹೇಳುವದಾದರೆ ಶ್ರೀಶ್ರೀಗಳವರು ಹೋದಕಡೆಗಳಲ್ಲೆಲ್ಲ ಭಕ್ತಮಹಾಜನರು ಆದರಪೂರ್ವಕವಾಗಿ ಸತ್ಕರಿಸಿ ಯಥೋಚಿತ ಕಾಣಿಕೆಗಳನ್ನು ನೀಡಿದರು. ಇದರಿಂದ ಸಂಸ್ಥೆಗೆ ತಕ್ಕಮಟ್ಟಿನ ಧನಸಹಾಯವು ಒದಗಿತು. ಗ್ರಂಥಗಳ ಹಾಗೂ ನಮ್ಮ ಮಾಸಪತ್ರಿಕೆಯ ಪ್ರಚಾರವೂ ಆಯಿತು. ಒಟ್ಟಿನಲ್ಲಿ ಶ್ರೀಶ್ರೀಗಳವರ ಈವರೆಗಿನ ಎಲ್ಲಾ ಪ್ರವಾಸಗಳಿಗಿಂತಲೂ ಈ ಪ್ರವಾಸವು ಎಲ್ಲಾ ಮಟ್ಟದಲ್ಲಿಯೂ ಅತ್ಯುತ್ತಮ ಫಲವನ್ನೇ ಕೊಟ್ಟಿತು- ಎಂದು ಧಾರಾಳವಾಗಿ ಹೇಳಬಹುದು.

## ಭಾರತಸರಕಾರದವರ ಪ್ರೋತ್ಸಾಹ :

ಶ್ರೀಶ್ರೀಗಳವರು ವಿಶ್ವಭಾರತಪ್ರವಾಸದಿಂದ ಹಿಂತಿರುಗಿದ ಬಳಿಕ ಭಾರತ ಸರ್ಕಾರದವರಿಂದ ಒಂದು ಪತ್ರವು ಬಂದಿತ್ತು. ಅದರಲ್ಲಿ ಶ್ರೀಗಳವರ ಮೇರುಕೃತಿಯಾದ 'ವೇದಾಂತಪ್ರಕ್ರಿಯಾಪ್ರತ್ಯಭಿಜ್ಞಾ' ಗ್ರಂಥವನ್ನು ದೇಶದ ಮುಖ್ಯಭಾಗಗಳಲ್ಲಿರುವ ಕೆಲವು ವಿದ್ಯಾಸಂಸ್ಥೆಗಳಿಗೆ ಕೊಳ್ಳಲು ಒಪ್ಪಿರುವದಾಗಿಯೂ ಒಂದುನೂರು ಪ್ರತಿಗಳನ್ನು ಸಿದ್ಧಗೊಳಿಸಿ ಬೇರೆಬೇರೆ ಸಂಸ್ಥೆಗಳ ಲೈಬ್ರರಿಗಳಿಗೆ ಪಟ್ಟಿಯಲ್ಲಿರುವ ವಿವರದಂತೆ ಕಳುಹಿಸಿಕೊಟ್ಟು ಒಟ್ಟು ಬಿಲ್‌ನ್ನು ಸರ್ಕಾರಕ್ಕೆ ರವಾನಿಸಬೇಕೆಂದೂ ತಿಳಿಸಲಾಗಿತ್ತು. ಅದರಂತೆಯೇ ಎಲ್ಲಾ ಸ್ಥಳಗಳಿಗೂ ಗ್ರಂಥವನ್ನು ರವಾನಿಸಿ ಬಿಲ್‌ನ್ನು ಕಳುಹಿಸಲಾಗಿ ಹಣವು ಪಾವತಿಯಾಯಿತು. ಇದರಿಂದ ಶ್ರೀಗಳ ಅಭಿಪ್ರಾಯವು ಭಾರತದೇಶದ ಮೂಲೆಮೂಲೆಗಳಿಗೂ ತಲುಪಲು ಹೆಚ್ಚಿನ ಸಹಾಯವಾಯಿತು.

## ಅನುಷ್ಠಾನಗಳು, ಇತರ ಚಟುವಟಿಕೆಗಳು :

ಶ್ರೀಶ್ರೀಗಳವರ ಗೈರುಹಾಜರಿಯಲ್ಲೂ 1966ನೆಯ ವರ್ಷದ ಶರನ್ನವರಾತ್ರಿ, ಗೀತಾಜಯಂತಿ, ಬ್ರಹ್ಮಚೈತನ್ಯಾರಾಧನೆ- ಈ ಉತ್ಸವಗಳು ಕಾರ್ಯಾಲಯದಲ್ಲಿ ಸಾಂಗವಾಗಿ ನೆರವೇರಿದವು. ಪಂಡಿತರು ಎಲ್ಲಾ ಸಂದರ್ಭದಲ್ಲೂ ಉಪನ್ಯಾಸಪ್ರವಚನಾದಿಗಳನ್ನೂ ಪೂಜಾಪಾರಾಯಣಾದಿಗಳನ್ನೂ ಮಹಾಜನರ ಸಹಕಾರದಿಂದ ನಡೆಸಿದರು. ನವೆಂಬರ್ ತಿಂಗಳಿನಲ್ಲಿ ಕಾರ್ಯಾಲಯದ ಪಂಡಿತರು ಬೆಂಗಳೂರಿನಲ್ಲಿ 'ಗೀತಾಶಾಸ್ತ್ರಾರ್ಥವಿವೇಕ' ಗ್ರಂಥದಮೇಲೂ ಅಧ್ಯಾತ್ಮರಾಮಾಯಣದಮೇಲೂ ಹದಿನೈದು ದಿನಗಳಕಾಲ ಪ್ರವಚನಗಳನ್ನು

ನಡೆಯಿಸಿದರು. ಮಾಸಪತ್ರಿಕೆಯ ಪ್ರಕಟನೆ, ಪಾಠಪ್ರವಚನಗಳು, ಪುರಾಣ ಎಲ್ಲವೂ ಎಂದಿನಂತೆ ನಡೆಯುತ್ತಿದ್ದವು.

1967ನೆಯ ವರ್ಷದ ಶ್ರೀರಾಮನವರಾತ್ರಿಯ ಉತ್ಸವವೂ ಎಂದಿನಂತೆ ವೈಭವದಿಂದ ನಡೆಯಿತು. ಶಂಕರಸಪ್ತಾಹಕ್ಕೆ ಬೆಂಗಳೂರಿನಿಂದ ಶ್ರೀ ಅನಂತಸ್ವಾಮಿ ಆಶ್ರಮದ ಭಕ್ತವೃಂದದವರಿಂದ ಆಹ್ವಾನವು ಬಂದಿತ್ತು. ಶ್ರೀಗಳವರು ಅಂಗೀಕರಿಸಿದರು. ಮೇ 11ನೆಯ ತಾರೀಖಿನಂದು ಶಂಕರಸಪ್ತಾಹ ಉತ್ಸವಕ್ಕಾಗಿ ಬೆಂಗಳೂರಿಗೆ ಪ್ರಯಾಣಮಾಡಿದರು.

## ಶ್ರೀಶಂಕರ ಚಲಪ್ರತಿಷ್ಠಾಮಹೋತ್ಸವ :

ಶ್ರೀಶ್ರೀಗಳವರ ವಿಶ್ವಭಾರತ ಪ್ರವಾಸಕಾಲದಲ್ಲಿ ಬೆಂಗಳೂರಿನ ಶ್ರೀ ನಿಖಿಲಾನಂದಗುಪ್ತರೆಂಬ ಭಕ್ತರೊಬ್ಬರು ಶ್ರೀಶಂಕರರ ಅಮೃತಶಿಲಾಮೂರ್ತಿಯೊಂದನ್ನು (ಬಹಳ ಚಿಕ್ಕದು) ಕೊಂಡು ಶ್ರೀಶ್ರೀಗಳವರಿಗೆ ಅರ್ಪಿಸಿದರು. ಅದನ್ನು ಹೊಳೆನರಸೀಪುರಕ್ಕೆ ತಂದಮೇಲೆ ತಾ. 17-4-1967ರಂದು ಶ್ರೀರಾಮದೇವಸ್ಥಾನದ ಆವರಣದಲ್ಲಿಯೇ ಚಲಪ್ರತಿಷ್ಠೆಯನ್ನು ನೆರವೇರಿಸಲಾಯಿತು. ಅಂದಿನಿಂದ ಶ್ರೀಶಂಕರರ ಪೂಜೆಯು ಈವರೆಗೂ ನಡೆಯುತ್ತಾಬಂದಿದೆ.

## ಶ್ರೀಶ್ರೀಗಳವರ ಅನಾರೋಗ್ಯ ಪರಿಹಾರ :

ಬೆಂಗಳೂರಿಗೆ ಶಂಕರಸಪ್ತಾಹ ಉತ್ಸವಕ್ಕಾಗಿ ದಯಮಾಡಿಸಿದ್ದ ಶ್ರೀಗಳವರಿಗೆ ಉತ್ಸವದ ಆರಂಭದ ದಿನವೇ ಮೂತ್ರವಿಸರ್ಜನೆಯಲ್ಲಿ ಅಡಚಣೆಯುಂಟಾಗಿ ಡಾಕ್ಟರುಗಳು ಚಿಕಿತ್ಸೆಮಾಡಿದರು. ಆದರೂ ಪ್ರಯೋಜನವಾಗಲಿಲ್ಲವಾಗಿ ಆಸ್ಪತ್ರೆಗೇ ಸೇರಿಸಿದ್ದಾಯಿತು. ಒಂದು ಸಣ್ಣ ಆಪರೇಷನ್ ಸಹ ಆಯಿತು. ಆಮೇಲೆ ಸುಮಾರು ಒಂದು ತಿಂಗಳಕಾಲ ಕಳೆದರೂ ಆರೋಗ್ಯವು ಸರಿಯಾಗಲಿಲ್ಲವಾಗಿ ಮತ್ತೊಂದು ಪ್ರಧಾನವಾದ ಶಸ್ತ್ರಚಿಕಿತ್ಸೆಯನ್ನೇ ಶ್ರೀಗಳು ಎದುರಿಸಬೇಕಾಗಿಬಂದಿತು. ಡಾಕ್ಟರುಗಳ ಸಾಹಸ ಹಾಗೂ ಒಬ್ಬ ಭಕ್ತಮಹನೀಯರ ಔದಾರ್ಯವಿಶಿಷ್ಟವಾದ ಸೇವೆಯಿಂದ ಸುಮಾರು ಜುಲೈ 20ರ ವೇಳೆಗೆ ಶ್ರೀಗಳು ಗುಣಮುಖರಾದರು. ಈ ಪರ್ವಕಾಲದಲ್ಲಿ ಶ್ರೀಶ್ರೀಗಳ ದೇಹಸ್ಥಿತಿಯು ತುಂಬ ಆತಂಕಕ್ಕೇ ಕಾರಣವಾಗಿತ್ತು. ಭಗವದನುಗ್ರಹದಿಂದ ಅಂಥ ಅಪಾಯಗಳೆಲ್ಲ ಪರಿಹಾರವಾಗಿ ಶ್ರೀಗಳು ಆರೋಗ್ಯವಂತರಾದರು. ಇದರಿಂದ ಭಕ್ತಜನರೆಲ್ಲರೂ ಹರ್ಷಿತರಾದರು.

## ಶಂಕರಸಪ್ತಾಹ :

1967ನೆಯ ವರ್ಷದ ಸಪ್ತಾಹದಲ್ಲಿ ಶ್ರೀಗಳವರು ಭಾಗವಹಿಸಲು ಸಾಧ್ಯವಾಗದೆ ಹೋದರೂ ಕಾರ್ಯಕ್ರಮದಂತೆ ಶ್ರೀಸದ್ಗುರು ಅನಂತಸ್ವಾಮಿ ಆಶ್ರಮದಲ್ಲಿ ಈ ಉತ್ಸವವು ವಿಜೃಂಭಣೆಯಿಂದ ನೆರವೇರಿತು. ಸ್ಥಳಪರಸ್ಥಳಗಳಿಂದ ಭಕ್ತರುಗಳು ಬಂದು ನೆರೆದಿದ್ದರು.

ಶ್ರೀಗಳವರ ಅಪ್ಪಣೆಯಂತೆ ವೇ.ಎಸ್. ವಿಠಲಶಾಸ್ತ್ರಿಗಳೇ ಉಪನ್ಯಾಸಗಳನ್ನು ನಡೆಸಿದರು. ಭಾಷ್ಯಪ್ರವಚನ ಪುರಾಣಗಳಲ್ಲಿ ಪಂಡಿತರುಗಳು ಎಂದಿನಂತೆ ಭಾಗವನ್ನು ವಹಿಸಿದ್ದರು. ಭಕ್ತಮಂಡಲಿಯವರು ಎಲ್ಲಾ ವ್ಯವಸ್ಥೆಗಳನ್ನೂ ಚೆನ್ನಾಗಿ ಮಾಡಿದ್ದರು. ಅಂತೂ ಉತ್ಸವವು ಸಾಂಗವಾಗಿ ನೆರವೇರಿತು.

## ಚಾತುರ್ಮಾಸ್ಯಸಂಕಲ್ಪ :

1967ನೆಯ ವರ್ಷದ ಚಾತುರ್ಮಾಸ್ಯಸಂಕಲ್ಪವನ್ನು ಶ್ರೀಗಳವರು ಬೆಂಗಳೂರು ಬಸವನಗುಡಿಯಲ್ಲಿರುವ 'ಲಕ್ಷ್ಮೀವಾಸಂ' ಎಂಬ ಕಟ್ಟಡದಲ್ಲಿ ನೆರವೇರಿಸಿದರು. ಈ ಚಾತುರ್ಮಾಸ್ಯದ ಅವಧಿಯಲ್ಲಿ ಯಾವ ಪ್ರವಚನಾದಿಗಳನ್ನೂ ನಡೆಯಿಸಲಿಲ್ಲ. ಆರೋಗ್ಯಸುಧಾರಣೆಯ ದೃಷ್ಟಿಯಿಂದ ಅವರು ವಿಶ್ರಾಂತಿಯಲ್ಲಿಯೇ ಇದ್ದರು. ಆಮೇಲೆ ಹೊಳೆನರಸೀಪುರಕ್ಕೆ ದಯಮಾಡಿಸಿದರು.

# ೨೧. ಮುನ್ನಡೆಯ ಹಾದಿಯಲ್ಲಿ

## (1967-1972)

### ಗುರುಗಳ ಆರೋಗ್ಯ :

ಹೊಳೆನರಸೀಪುರಕ್ಕೆ ದಯಮಾಡಿಸಿದಮೇಲೆ ಗುರುಗಳ ಆರೋಗ್ಯವು ಚೆನ್ನಾಗಿ ಸುಧಾರಿಸುತ್ತಾ ಬಂದಿತು. ಎಂದಿನಂತೆ ಬರವಣಿಗೆ, ಪಾಠಪ್ರವಚನಗಳು, ಉಪನ್ಯಾಸಗಳು-ಇವುಗಳನ್ನು ಒಂದೊಂದಾಗಿ ಆರಂಭಿಸಿದರು. ಸಮೀಪದಲ್ಲಿಯೇ ಇದ್ದ ಒಬ್ಬ ವಿದ್ಯಾರ್ಥಿಗೆ ಬ್ರಹ್ಮಸೂತ್ರಭಾಷ್ಯಪಾಠವು ನಡೆಯುತ್ತಿತ್ತು. 1967ನೆಯ ವರ್ಷದ ಶರನ್ನವರಾತ್ರಿಯ ಉತ್ಸವವೂ ಸಾಂಗವಾಗಿ ನಡೆಯಿತು. ಶ್ರೀಶ್ರೀಗಳವರೂ ಉಪನ್ಯಾಸಗಳಲ್ಲಿ ಭಾಗವನ್ನು ವಹಿಸಿದ್ದರು. ಅಂತೂ ಶ್ರೀಗಳವರ ಜೀವಮಾನದಲ್ಲೇ ಇಂಥ ದೀರ್ಘವ್ಯಾಧಿಯುಂಟಾಗಿರಲಿಲ್ಲ. ದೇವರ ದಯೆಯಿಂದ ಗುರುಗಳು ಎಲ್ಲ ಸಂಕಟಗಳನ್ನೂ ದಾಟಿ ಗುಣಮುಖರಾಗಿ ಎಂದಿನಂತೆ ಶಿಷ್ಯೋದ್ಧಾರಕ್ಕೆ ಸಿದ್ಧರಾದರು.

### ಅಭಿನಂದನೆ :

1967ನೆಯ ಮೇ ತಿಂಗಳಿನಿಂದ ಅಕ್ಟೋಬರ್ ತಿಂಗಳವರೆಗಿನ ಆರು ತಿಂಗಳ ಕಾಲ ಶ್ರೀಶ್ರೀಗಳವರು ರುಗ್ಣಾವಸ್ಥೆಯಲ್ಲಿ ಬೆಂಗಳೂರಿನಲ್ಲಿದ್ದಾಗ, ಮತ್ತು ಅವರು ಗುಣಮುಖರಾದಮೇಲೆ ಸಹ ಚಾತುರ್ಮಾಸ್ಯದ ಅವಧಿಯಲ್ಲಿ ಬೆಂಗಳೂರು ಭಕ್ತಮಹಾಜನರು ಬಹಳವಾಗಿ ಸಹಕರಿಸಿ ಶ್ರೀಶ್ರೀಗಳವರ ಸೇವೆಯನ್ನು ಮಾಡಿದರು. ಆಪತ್ಕಾಲದಲ್ಲಿ ಅನೇಕಭಕ್ತರು ಪರಸ್ಥಳಗಳಿಂದಲೂ ಬಂದು ಶ್ರೀಶ್ರೀಗಳವರನ್ನು ವಿಚಾರಿಸಿಕೊಂಡು ಹೋಗುತ್ತಿದ್ದರಲ್ಲದೆ ಧನಸಹಾಯವನ್ನೂ ನೀಡುತ್ತಿದ್ದರು. ಶ್ರೀಶ್ರೀಗಳವರು ಚಿಕಿತ್ಸೆಗಾಗಿ ಸೇರಿದ್ದ "ಬೆಂಗಳೂರು ನರ್ಸಿಂಗ್ ಹೋಮ್" ಎಂಬ ಚಿಕಿತ್ಸಾಲಯದ ಎಲ್ಲಾ ಡಾಕ್ಟರುಗಳೂ ಸಹಚರರೂ ಗುರುಗಳನ್ನು ಬಹಳ ಶ್ರದ್ಧೆಯಿಂದ ನೋಡಿಕೊಂಡು ಉಪಚರಿಸಿ ಚಿಕಿತ್ಸೆ ಮುಂತಾದವುಗಳನ್ನು ಮಾಡಿದರು. ಒಬ್ಬ ಭಕ್ತಮಹಾಶಯರು ಶ್ರೀಶ್ರೀಗಳವರ ಔಷಧೋಪಚಾರ, ಆಪರೇಷನ್ ಮುಂತಾದ ಆಸ್ಪತ್ರೆಯ ಎಲ್ಲಾ ಖರ್ಚುವೆಚ್ಚಗಳನ್ನೂ (ಆ ಕಾಲಕ್ಕೆ ಸುಮಾರು ರೂ. 5,000 ಗಳಾಗಿರಬೇಕು) ತಾವೊಬ್ಬರೇ ವಹಿಸಿಕೊಂಡು ಸೇವೆಯನ್ನು ಸಲ್ಲಿಸಿದರು. ಶ್ರೀಶ್ರೀಗಳವರನ್ನು ಬದುಕಿಸಿದ ಮಹಾಪುಣ್ಯವೇ ಅವರದ್ದಾಯಿತೆಂದರೆ ಅತಿಶಯೋಕ್ತಿಯಾಗಲಾರದು. ಇಂಥ ಮಹನೀಯರು ಎಷ್ಟು ಜನರಿದ್ದಾರು ? ಹೀಗೆ ಸರ್ವಭಕ್ತರ ಸಹಕಾರದಿಂದ ಗುರುಗಳ ಆರೋಗ್ಯವು ಚೆನ್ನಾಗಿ ಸುಧಾರಿಸಿತು. ಆಪತ್ಕಾಲದಲ್ಲಿ ಸಹಾಯಮಾಡಿದ ಈ ಎಲ್ಲಾ ಮಹನೀಯರಿಗೂ ಕಾರ್ಯಾಲಯದ ಅಭಿನಂದನೆಗಳು ಸಲ್ಲುತ್ತವೆ.

**ಇತರ ಚಟುವಟಿಕೆಗಳು :**

1967ರಲ್ಲಿ (1) **ಕೇನೋಪನಿಷದ್ಭಾಷ್ಯ, ಭಗವದ್ಗೀತೆಯ ಪ್ರಧಾನೋಪದೇಶಗಳು, ಶಾಂಕರವೇದಾಂತದ ಮೂಲತತ್ತ್ವಗಳು, ಅಪರೋಕ್ಷಾನುಭೂತಿ**- ಎಂಬ ಕನ್ನಡಗ್ರಂಥಗಳು, Suddha Shankara Prakriya Bhaskara Part II ಮತ್ತು Salient Features of Shankara Vedanta ಎಂಬ ಎರಡು ಇಂಗ್ಲಿಷು ಗ್ರಂಥಗಳು ಪ್ರಕಟವಾದವು. (1) ಗೀತಾಜಯಂತಿ, ಬ್ರಹ್ಮಚೈತನ್ಯಾರಾಧನೆ-ಈ ಅನುಷ್ಠಾನಗಳು ಎಂದಿನಂತೆ ನೇರವೇರಿದವು. (3) ಭಂಡಾರಕ್ಕೆ ಕನ್ನಡರಾಮಾಯಣ-ಬೃಹದನುವಾದಚಂದ್ರಿಕಾ-ಮುಂತಾದ ಕೆಲವು ಗ್ರಂಥಗಳನ್ನು ಕೊಳ್ಳಲಾಯಿತು. ಅರಸೀಕೆರೆ ತಾ. ಗೊಲ್ಲರಹಳ್ಳಿಯ ಶ್ರೀ ರಾಮಸ್ವಾಮಿ ಎಂಬವರು "ಶಬ್ದಕಲ್ಪದ್ರುಮ" ಎಂಬ ಮಹಾಗ್ರಂಥದ ಐದು ಸಂಪುಟಗಳನ್ನು ಕಾಣಿಕೆಯಾಗಿ ಒಪ್ಪಿಸಿದರು. (4) ಕಾರ್ಯಾಲಯಕ್ಕೆ ಈಚೆಗೆ ಸೇರಿದ್ದ ನೈಋತ್ಯಭಾಗದ ಹೊಸ ಸೈಟನ್ನೂ ಸೇರಿಸಿಕೊಂಡು ಎತ್ತರವಾದ ಕಲ್ಲಿನ ಕಾಂಪೌಂಡನ್ನು ಹಾಕಿಸಿ ಆವರಣವನ್ನೆಲ್ಲ ಭದ್ರಗೊಳಿಸಲಾಯಿತು. (5) ಬ್ರಹ್ಮಾಂಡಪುರಾಣವು ಪೂರೈಸಿದ ಮೇಲೆ ತಾ. 8-11-67ರಿಂದ ಸ್ಕಾಂದಮಹಾಪುರಾಣವನ್ನು ಆರಂಭಿಸಲಾಯಿತು. (6) ಮೈಸೂರಿನ ಮಹಿಳಾಭಕ್ತರೊಬ್ಬರು ಕಾರ್ಯಾಲಯಕ್ಕೆ ಒಂದು ಕರೆಯುವ ಹಸುವನ್ನು ಸಮರ್ಪಿಸಿದರು.

**ಸಂನ್ಯಾಸಸ್ವೀಕಾರ :**

ಸುಮಾರು ಒಂದುವರ್ಷ ಕಾಲದಿಂದ ಕಾರ್ಯಾಲಯದಲ್ಲಿಯೇ ಇದ್ದುಕೊಂಡು ಅಧ್ಯಾತ್ಮಸಾಧನತತ್ಪರರಾಗಿದ್ದ ಶ್ರೀ ವಿ.ಎನ್. ಕೇಶಮೂರ್ತಿ ಎಂಬುವರು ಶ್ರೀಶ್ರೀಗಳವರಲ್ಲಿ ಆಶ್ರಮಸ್ವೀಕಾರಕ್ಕಾಗಿ ಪ್ರಾರ್ಥಿಸಿಕೊಂಡಿದ್ದರು. ಶ್ರೀಯುತರು ಮಂಡ್ಯಜಿಲ್ಲೆಯ, ಅಕ್ಕಿಹೆಬ್ಬಾಳು ಸಮೀಪದ ವಿಠಲಾಪುರ ಎಂಬ ಗ್ರಾಮದ ವೇ. ನಾರಾಯಣಾವಧಾನಿಗಳ ಪುತ್ರರು. ಬ್ರಾಹ್ಮಣರಲ್ಲಿ ಕೌಶಿಕ ಸಂಕೇತಿಗಳ ಪಂಗಡಕ್ಕೆ ಸೇರಿದವರು. ಶ್ರೀಯುತರು ಎಂ.ಎ.ನಲ್ಲಿ ರ್‍ಯಾಂಕ್ ಪದವೀದರರಾಗಿದ್ದು ಕರ್ನಾಟಸಂಗೀತದಲ್ಲಿಯೂ ಅಪಾರವಾದ ವಿದ್ವತ್ತನ್ನು ಸಂಪಾದಿಸಿದವರು. ಕೇಂದ್ರಸರ್ಕಾರದ ಉನ್ನತಹುದ್ದೆಯೊಂದರಲ್ಲಿದ್ದು ಕೆಲವು ಕಾಲಸೇವೆಮಾಡಿ ಆಮೇಲೆ ವೈರಾಗ್ಯದಿಂದ ಕೆಲಸವನ್ನು ಬಿಟ್ಟುಬಂದಿದ್ದರು. ಶ್ರೀಶ್ರೀಗಳವರು ಇವರ ಪೂರ್ವೋತ್ತರಗಳನ್ನೆಲ್ಲ ವಿಚಾರಿಸಿ ಕೆಲವು ಕಾಲ ಪರೀಕ್ಷಿಸಿ ಇವರ ಧರ್ಮಪತ್ನಿಯವರಿಂದ ಅನುಮತಿಯನ್ನು ಸಹ ಪಡೆದುಕೊಂಡುಬಂದಮೇಲೆಯೇ ಸಂನ್ಯಾಸದೀಕ್ಷೆಯನ್ನು ಕೊಡುವ ಭರವಸೆಯನ್ನು ನೀಡಿದರು. ಆದ್ದರಿಂದ ಶ್ರೀಯುತರು ವೇದಮೂರ್ತಿಗಳಿಂದ ಶುಭಮುಹೂರ್ತವನ್ನು ಗೊತ್ತುಪಡಿಸಿಕೊಂಡು ಸಂನ್ಯಾಸಾಂಗವಾದ ಪೂರ್ವವಿಧಿಗಳೆಲ್ಲ ಪೂರೈಸಿದ ಮೇಲೆ ತಾ. 14.2.68 ನೆಯ ಪ್ಲವಂಗಸಂವತ್ಸರದ ಮಾಘಶುಕ್ಲ ಪೂರ್ಣಿಮಾ ಬುಧವಾರ ಪವಿತ್ರಹೇಮಾವತೀ ತೀರದಲ್ಲಿ ಬ್ರಾಹ್ಮಣಸಮ್ಮುಖದಲ್ಲಿ ಪರಮಹಂಸ

ಪಾರಿವ್ರಾಜ್ಯವನ್ನು ಸ್ವೀಕರಿಸಿದರು. ಬಳಿಕ ಕಾರ್ಯಾಲಯಕ್ಕೆ ದಯಮಾಡಿಸಿ ಪೂಜ್ಯಗುರುವರ್ಯ ಶ್ರೀಶ್ರೀಪರಮಹಂಸ ಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳವರಿಂದ ಉಪದೇಶವನ್ನೂ ಯೋಗಪಟ್ಟವನ್ನೂ ಪಡೆದು ಶ್ರೀಬ್ರಹ್ಮಾನಂದೇಂದ್ರ ಸರಸ್ವತೀ ಎಂಬ ಹೆಸರಿನಿಂದ ವಿರಾಜಮಾನರಾದರು. ಮುಂದೆ ಇವರು ಕೆಲವು ಕಾಲ ಶ್ರೀಶ್ರೀಗಳವರೊಡನೆಯೇ ಇದ್ದು ಗುರುಗಳು ಬೆಂಗಳೂರಿಗೆ ದಯಮಾಡಿಸಿದಮೇಲೆ ಹೊಳೆನರಸೀಪುರದ ಕಾರ್ಯಾಲಯದಲ್ಲಿಯೇ ಇದ್ದರು. ಈಚೆಗೆ ಶಿವಮೊಗ್ಗ ಜಿಲ್ಲೆ, ಸಾಗರ ತಾ|| ಮತ್ತಿಕೊಪ್ಪ ಎಂಬಲ್ಲಿ ನೆಲೆಸಿದ್ದಾರೆ.

**ಅನುತಾಪ :**

ಈ ಅವಧಿಯಲ್ಲಿ (1) ಶ್ರೀಶ್ರೀಗಳವರ ವೇದಾಂತಜೀವನದಲ್ಲಿ ಹೆಚ್ಚಿನ ಪರಿಣಾಮವನ್ನು ಬೀರಿದ್ದ ಹಾಗೂ ಕರವೀರಪೀಠಾಧಿಪರಾಗಿದ್ದ ಶ್ರೀ ಜಗದ್ಗುರು ಶಂಕರಾಚಾರ್ಯಮಹಾಸ್ವಾಮಿಗಳು (ಡಾ. ಕುರ್ತಕೋಟಿ) ತಾ. 29-8-67 ರಂದು ನಾಸಿಕದಲ್ಲಿ ಬ್ರಹ್ಮೀಭೂತರಾದರು. ಶ್ರೀಗಳವರು ಈ ವೃತ್ತಾಂತವನ್ನು ತಿಳಿದು ಬಹಳ ಪಶ್ಚಾತ್ತಾಪಪಟ್ಟರು. ಜಗದ್ಗುರು ಶ್ರೀ ಕರವೀರ ಪೀಠಶಂಕರಾಚಾರ್ಯರ ಬಗ್ಗೆ ಒಂದು ಚರಮಲೇಖನವನ್ನು ಬರೆದು ಅಧ್ಯಾತ್ಮಪ್ರಕಾಶಪತ್ರಿಕೆಯ 1968 ನೆಯ ಫೆಬ್ರವರಿ ಸಂಚಿಕೆಯಲ್ಲಿ ಪ್ರಕಟಿಸಿದರು.

**ಅನುಷ್ಠಾನಗಳು :**

(1) ಕಾರ್ಯಾಲಯದಲ್ಲಿ 1968ನೆಯ ಕೀಲಕಸಂವತ್ಸರದ ರಾಮನವರಾತ್ರಿಯ ಅನುಷ್ಠಾನವು ಎಂದಿನಂತೆ ವಿಜೃಂಭಣೆಯಿಂದ ನಡೆಯಿತು. ಈ ಅನುಷ್ಠಾನದಲ್ಲಿ ಒಂದು ದಿನ ಬೆಂಗಳೂರಿನ ಶ್ರೀ ಕೆ.ಸಿ. ಅಶ್ವತ್ಥನಾರಾಯಣ (ಇವರು ಶ್ರೀಶ್ರೀಗಳವರ ಪೂರ್ವಾಶ್ರಮದ ಮೊಮ್ಮಕ್ಕಳು) ರವರಿಂದ ವೇಣುವಾದನ ಕಚೇರಿಯನ್ನು ಏರ್ಪಡಿಸಲಾಗಿತ್ತು. (2) ಈ ಸಂವತ್ಸರದ ಶ್ರೀಶಂಕರಸಪ್ತಾಹ ಮಹೋತ್ಸವವು ತರೀಕೆರೆಯಲ್ಲಿ ಬಹಳ ಚೆನ್ನಾಗಿ ನಡೆಯಿತು. ಎಂದಿನಂತೆ ಸ್ಥಳಪರಸ್ಥಳಗಳಿಂದ ಭಕ್ತಮಹಾಜನರೂ ವಿದ್ವಾಂಸರುಗಳೂ ದಯಮಾಡಿಸಿ ಉತ್ಸವದಲ್ಲಿ ಭಾಗವನ್ನು ವಹಿಸಿದ್ದರು. ಶ್ರೀಶ್ರೀಗಳವರು ಬೃಹದಾರಣ್ಯಕಮೈತ್ರೇಯಿಬ್ರಾಹ್ಮಣದ ಸಾರವನ್ನು ಅಧಿಕರಿಸಿ ಉಪನ್ಯಾಸಗಳನ್ನು ಅನುಗ್ರಹಿಸುತ್ತಿದ್ದರು. ಅಲ್ಲಿಯ ಶ್ಯಾನುಭೋಗರಾದ ಶ್ರೀ ಕೆ. ಶ್ರೀನಿವಾಸಯ್ಯನವರು ಮಹಾಜನರ ಸಹಕಾರದಿಂದ ಉತ್ಸವದ ಸಕಲ ಏರ್ಪಾಡುಗಳನ್ನೂ ವ್ಯವಸ್ಥಿತವಾಗಿ ಮಾಡಿದ್ದರು.

**ಪುರಾಣಶ್ರವಣ :**

ಸ್ಕಾಂದಮಹಾಪುರಾಣದ ಬ್ರಾಹ್ಮಖಂಡವು ಪೂರೈಸಿದ ಅನಂತರ ತಾ. 3-4-68ರಿಂದ ವಿದ್ಯಾರ್ಥಿ ಶ್ರೀ ಕೆ. ಜಿ. ಸುಬ್ರಾಯಶರ್ಮನು ಪುರಾಣಪ್ರವಚನವನ್ನು ಆರಂಭಿಸಿದನು.

ಬಹಳಬೇಗ ಈತನು ಪುರಾಣವನ್ನು ಹೇಳುವ ಕಲೆಯನ್ನು ಅವಳಡಿಸಿಕೊಂಡು ಚೆನ್ನಾಗಿ ಪ್ರವಚನಗಳನ್ನು ನಡೆಯಿಸುತ್ತಿದ್ದನು. ಆದರೆ ಈತನು ಶ್ರೀಶ್ರೀಗಳವರೊಡನೆ ಇರಬೇಕಾಗಿ ಬಂದದ್ದರಿಂದ ಹೆಚ್ಚು ಕಾಲ ಪ್ರವಚನಗಳನ್ನು ನಡೆಸಲಾಗಲಿಲ್ಲ. ಎಂದಿನಂತೆಯೇ ಕಾರ್ಯಾಲಯದ ಪಂಡಿತರೇ ಪುರಾಣಗಳ ಪ್ರವಚನವನ್ನು ಮುಂದುವರೆಸಿದರು.

## ಚಾತುರ್ಮಾಸ್ಯ ಸಂಕಲ್ಪ :

1968ನೆಯ ಕೀಲಕಸಂವತ್ಸರದ ಶ್ರೀಗಳ ಚಾತುರ್ಮಾಸ್ಯಸಂಕಲ್ಪವು ಬೆಂಗಳೂರು ನಗರದಲ್ಲಿ ನೆರವೇರಿತು. ಅದಕ್ಕೆ ಸ್ವಲ್ಪ ಮುಂಚೆ ಬೆಂಗಳೂರು ಬಸವನಗುಡಿ ವಾಸವೀ ಧರ್ಮಶಾಲಾ ಹಿಂಭಾಗದಲ್ಲಿ ನೂತನವಾಗಿ ನಿರ್ಮಿತವಾಗಿದ್ದ **"ಶ್ರೀ ಜಟಂಗಿ ವೆಂಗನ್ನಶ್ರೇಷ್ಠಿ ರಾಮಲಕ್ಷಮ್ಮನವರ ಅಧ್ಯಾತ್ಮ ಮಂದಿರ"**ದ ಪ್ರಾರಂಭೋತ್ಸವವನ್ನು ತಾ. 23-6-68 ರಂದು ಗುರುಗಳು ನೆರವೇರಿಸಿದರು. ಈ ಸಂದರ್ಭದಲ್ಲಿ ಭಕ್ತಮಂಡಳಿಯವರು ಗುರುಗಳಿಗೆ ಬಿನ್ನವತ್ತಳೆಯನ್ನು ಸಮರ್ಪಿಸಿ ಚಾತುರ್ಮಾಸ್ಯ ಉತ್ಸವಕ್ಕೆ ಆಹ್ವಾನಿಸಿದ್ದರು. ಆದರಂತೆ ಶ್ರೀಶ್ರೀಗಳವರು ಬೆಂಗಳೂರಿಗೆ ದಯಮಾಡಿಸಿ ತಾ. 10-7-68ನೆಯ ಪೂರ್ಣಿಮಾ ಬುಧವಾರ ಚಾತುರ್ಮಾಸ್ಯ ಸಂಕಲ್ಪ ತದಂಗ ವ್ಯಾಸಪೂಜಾದಿಗಳನ್ನು ನೆರವೇರಿಸಿದರು. ತಾ. 6-9-68 ರವರೆಗೂ ಶ್ರೀಶ್ರೀಗಳವರು ಅಧ್ಯಾತ್ಮ ಮಂದಿರದಲ್ಲಿಯೇ ತಂಗಿದ್ದು ಪ್ರತಿದಿನವೂ ಬೆಳಗಿನ ವೇಳೆಯಲ್ಲಿ "ಬ್ರಹ್ಮಾತ್ಮವಿದ್ಯೆ" ಎಂಬ ವಿಷಯದಲ್ಲಿ ಉಪನ್ಯಾಸಗಳನ್ನು ಅನುಗ್ರಹಿಸುತ್ತಿದ್ದರು.

## ಆಗಂತುಕರ ಗೃಹ :

ಶ್ರೀಶ್ರೀಗಳವರು ಚಾತುರ್ಮಾಸ್ಯಕಾಲದಲ್ಲಿ ಬೆಂಗಳೂರಿನಲ್ಲಿ ತಂಗಿದ್ದಾಗ ಶ್ರೀ ಎ.ವಿ. ಕೃಷ್ಣಸ್ವಾಮಿ - ಎಂಬ ಭಕ್ತಮಹಾಶಯರೊಬ್ಬರು ಬಂದು ತಾವು ಉದ್ಯೋಗದಿಂದ ನಿವೃತ್ತಿಯಾದಮೇಲೆ ಕಾರ್ಯಾಲಯದಲ್ಲಿಯೇ ಸತ್ಕಾಲಕ್ಷೇಪವನ್ನು ಮಾಡುತ್ತಾ ವಾಸಮಾಡುವ ಸಂಕಲ್ಪವನ್ನು ಮಾಡಿಕೊಂಡಿರುವದಾಗಿಯೂ ಕಾರ್ಯಾಲಯದ ಆವರಣದಲ್ಲಿ ಒಂದು ಆಗುಂತಕರ ಗೃಹವನ್ನು ಕಟ್ಟಿಸುವದಾಗಿಯೂ ವಿಜ್ಞಾಪಿಸಿಕೊಂಡರು. ಗುರುಗಳು ಸಂತೋಷದಿಂದ ಒಪ್ಪಿ ಅವರ ಉದ್ದೇಶವನ್ನು ಶ್ಲಾಘಿಸಿದರು. ಶ್ರೀಯುತರು ಕಾರ್ಯಾಲಯದ ಸಮಿತಿಯವರಿಗೂ ತಮ್ಮ ಉದ್ದೇಶವನ್ನು ವಿವರಿಸಿ ಅಪ್ಪಣೆಪಡೆದು ರೂ. 5,000ಗಳನ್ನು ಕಟ್ಟಡಕ್ಕಾಗಿ ಸಮರ್ಪಿಸಿಯೇಬಿಟ್ಟರು. ಕೂಡಲೆ ಕಾರ್ಯಾಲಯದವರು ಕಂಟ್ರಾಕ್ಟರ ಮೂಲಕ ಗೃಹನಿರ್ಮಾಣಕ್ಕೆ ಏರ್ಪಡಿಸಿ 1969ನೆಯ ಸೆಪ್ಟೆಂಬರ್ ವೇಳೆಗೆ ಕಟ್ಟಡವನ್ನು ಸಿದ್ಧಗೊಳಿಸಿ ಶ್ರೀಯುತರಿಗೆ ತಿಳಿಸಿದರು. ಆಮೇಲೆ ತಾ. 23-10-69ರಂದು ಹೊಸಕಟ್ಟಡದ ಪ್ರವೇಶೋತ್ಸವವು ಶ್ರೀಶ್ರೀಗಳವರ ಅಮೃತಹಸ್ತದಿಂದ ನೆರವೇರಿತು. ಆದರೆ ದಾನಿಗಳು ಮಾತ್ರ ಒಮ್ಮೆಯೂ ಇಲ್ಲಿ ವಾಸಮಾಡಲಿಲ್ಲ. ಬೇರೆ ಬೇರೆಯ ಜಿಜ್ಞಾಸುಗಳಿಗೆ ಇದು ಉಪಯೋಗವಾಗುತ್ತಿದೆ.

**ಗ್ರಂಥಪ್ರಕಟನೆ :**

1968ನೆಯ ವರ್ಷವು ಪೂರೈಸುವ ವೇಳೆಗೆ (1) **ಗೌಡಪಾದಹೃದಯ** (2) **ಕಾಠಕೋಪನಿಷತ್ತು, ಶಾಂಕರಭಾಷ್ಯಸಮೇತ** (ಪುನರ್ಮುದ್ರಣ) (3) Suddha Shankara Prakriya Bhaskara III Part (4) **ವಿಶುದ್ಧ ವೇದಾಂತಸಾರಃ** (5) **ನೈಷ್ಕರ್ಮ್ಯಸಿದ್ಧಿಃ ಕ್ಲೇಶಾಪಹಾರಿಣೀಸಹಿತ** ಎಂಬ ಐದು ಗ್ರಂಥಗಳು ಕನ್ನಡ, ಇಂಗ್ಲಿಷು, ಸಂಸ್ಕೃತಭಾಷೆಗಳಲ್ಲಿ ಪ್ರಕಟವಾದವು. ಈ ಪೈಕಿ ಕ್ಲೇಶಾಪಹಾರಿಣೀಸಹಿತ ನೈಷ್ಕರ್ಮ್ಯಸಿದ್ಧಿಃ- ಎಂಬ ಮಹಾಗ್ರಂಥವು ಸಂಸ್ಕೃತಭಾಷೆಯಲ್ಲಿ ಪ್ರಕಟವಾಗಿದ್ದು ಶ್ರೀಶಂಕರಭಗವತ್ಪಾದರ ಸಾಕ್ಷಾತ್ ಶಿಷ್ಯರಾದ ಶ್ರೀಸುರೇಶ್ವರಾಚಾರ್ಯರ ಅಮೋಘಗ್ರಂಥವಾಗಿದ್ದು ಇದಕ್ಕೆ ಶ್ರೀಶ್ರೀಗಳವರು ತಮ್ಮ ವಿದ್ವತ್ಪೂರ್ಣವಾದ ವ್ಯಾಖ್ಯಾನವನ್ನು ಬರೆದು ಜಿಜ್ಞಾಸುಗಳಿಗೆ ದೊಡ್ಡ ಉಪಕಾರವನ್ನು ಮಾಡಿದ್ದಾರೆ.

**ಶ್ರೀ ಎನ್.ಎಸ್. ರಂಗಸ್ವಾಮಿಯವರು :**

1969ನೆಯ ಏಪ್ರಿಲ್ ಮಾಹೆಯ ಸುಮಾರಿನಲ್ಲಿ ಶ್ರೀ ಎನ್.ಎಸ್. ರಂಗಸ್ವಾಮಿ ಎಂಬ ಸಾಧಕರೊಬ್ಬರು ಕಾರ್ಯಾಲಯಕ್ಕೆ ದಯಮಾಡಿಸಿ ಶ್ರೀಶ್ರೀಗಳವರ ಸನ್ನಿಧಿಯಲ್ಲಿ ಅಧ್ಯಾತ್ಮವಿಚಾರಶ್ರವಣ, ಸತ್ಕಾಲಕ್ಷೇಪ, ಜ್ಞಾನಸಾಧನಗಳನ್ನು ಮಾಡುತ್ತಾ ತಂಗಿದ್ದರು.

ಶ್ರೀಯುತರು ಬೆಂಗಳೂರು ನಗರದಲ್ಲಿರುವ ಶ್ರೀ ಎನ್.ಡಿ. ಸುಬ್ಬರಾಯರ ಮೂರನೆಯ ಮಕ್ಕಳು. ಮೈಸೂರು ವಿಶ್ವವಿದ್ಯಾನಿಲಯದಿಂದ ರಸಾಯನಶಾಸ್ತ್ರದಲ್ಲಿ ಎಂ.ಎಸ್.ಸಿ. ಪದವಿಯನ್ನು ಪಡೆದು ಕೆಲಕಾಲ ಪ್ರೌಢಶಾಲೆಯಲ್ಲಿ ಅಧ್ಯಾಪಕರಾಗಿ ಆಮೇಲೆ ಬೆಳಗೊಳದಲ್ಲಿರುವ ಕಾರ್ಖಾನೆಯೊಂದರಲ್ಲಿ ಪರಿಶೋಧನೆಯಲ್ಲಿ ತೊಡಗಿದ್ದರು. 1948-49 ನೆಯ ವರ್ಷದಲ್ಲಿ ನಡೆದ ಕೇಂದ್ರ ಸ್ಪರ್ಧಾಪರೀಕ್ಷೆಯಲ್ಲಿ (I.A.S) ತೇರ್ಗಡೆಹೊಂದಿ 1950 ರಿಂದ 1968 ನೆಯ ಅಕ್ಟೋಬರ್ ಮಾಹೆಯವರೆಗೆ ಕೇಂದ್ರಸರ್ಕಾರದ ಅಧೀನದಲ್ಲಿ ಕೆಲಸಮಾಡಿ ಆ ತಿಂಗಳಲ್ಲಿ ಕೆಲಸಕ್ಕೆ ರಾಜಿನಾಮೆಕೊಟ್ಟು ಅಧ್ಯಾತ್ಮಮಾರ್ಗಕ್ಕೆ ತಿರುಗಿದರು.

ಮುಂದೆ ಶ್ರೀಶ್ರೀಗಳವರು ಶಾಖಾಕಾರ್ಯಾಲಯದ ಸ್ಥಾಪನೆಯ ಪ್ರಯತ್ನಕ್ಕಾಗಿ ಬೆಂಗಳೂರಿಗೆ ಬಿಜಯಮಾಡಿಸಿದಾಗ ಶ್ರೀಯುತರನ್ನೂ ತಮ್ಮ ಜೊತೆಯಲ್ಲಿ ಕರೆದೊಯ್ದರು. ಕಾರ್ಯಾಲಯದಲ್ಲಿದ್ದಷ್ಟು ಕಾಲವೂ ಶ್ರೀಯುತರು ಕಾರ್ಯಾಲದ ಚಟುವಟಿಕೆಗಳಲ್ಲಿ ಸಹಾಯಮಾಡಿದರು. 1970ನೆಯ ಮಾರ್ಚಿ ಮಾಹೆಯ ಕೊನೆಯಲ್ಲಿ ಇವರು ಏಕಾಂತಸಾಧನೆಗಾಗಿ ಉತ್ತರಕಾಶಿಗೆ ಹೊದರು. 1972ನೆಯ ಫೆಬ್ರವರಿ ತಿಂಗಳಲ್ಲಿ ಮತ್ತೆ ಶ್ರೀಶ್ರೀಗಳವರ ಸನ್ನಿಧಿಯನ್ನು ಸೇರಿ ಸಂನ್ಯಾಸಾಶ್ರಮವನ್ನು ದಯಪಾಲಿಸಲು ಶ್ರೀಶ್ರೀಗಳವರನ್ನು ಪ್ರಾರ್ಥಿಸಿಕೊಂಡಮೇಲೆ ಶ್ರೀಶ್ರೀಗಳವರು ಅನುಗ್ರಹಮಾಡಿದ್ದರಿಂದ 1972ನೆಯ ಏಪ್ರಿಲ್

8ನೆಯ ತಾರೀಖು ಶನಿವಾರದ ದಿನ ಪವಿತ್ರ ತುಂಗಾತೀರದ ಮತ್ತೂರು ಅಗ್ರಹಾರದಲ್ಲಿ ದೊಡ್ಡ ಶ್ರೋತ್ರಿಯ ಮಂಡಲಿಯ ಸಮ್ಮುಖದಲ್ಲಿ ಸಂನ್ಯಾಸಾಶ್ರಮವನ್ನು ಹೊಂದಿದರು. ಮಾರನೆಯ ದಿನ (9-4-1972 ನೆಯ ಭಾನುವಾರ) ಶ್ರೀಶ್ರೀ ಸಚ್ಚಿದಾನಂದೇಂದ್ರ ಸರಸ್ವತೀಸ್ವಾಮಿಗಳವರು ಇವರಿಗೆ ಉಪದೇಶವನ್ನೂ ಸಂಪ್ರದಾಯ ರೀತಿಯಿಂದ ಆತ್ಮಾನಂದೇಂದ್ರ ಸರಸ್ವತೀ ಎಂಬ ಹೆಸರನ್ನೂ ದಯಪಾಲಿಸಿದರು. ಇವರು ಪುನಃ ಉತ್ತರ ಕಾಶಿಗೆ ಹಿಂದಿರುಗಿದರು. 1995ರಿಂದ ಈಚೆಗೆ ಇವರು ಉತ್ತರ ಕಾಶಿಯಿಂದ ಹಿಂದಿರುಗಿ ಮೈಸೂರಿನ ಹೊರವಲಯದ ಹಲಗಯ್ಯನ ಹುಂಡಿ ಎಂಬಲ್ಲಿ ಆಶ್ರಮವನ್ನು ನಿರ್ಮಿಸಿಕೊಂಡು ಇದ್ದಾರೆ.

## ಅನುಷ್ಠಾನಗಳು :

1969ನೆಯ ವರ್ಷದ ರಾಮನವರಾತ್ರಿಯ ಉತ್ಸವವು ಎಂದಿನಂತೆ ನೆರವೇರಿತು. ಶಂಕರಸಪ್ತಾಹಮಹೋತ್ಸವವು ಮೈಸೂರಿನಲ್ಲಿ ವೇ॥ ಬ್ರ॥ ಶ್ರೀ ಎಸ್. ವಿಠಲಶಾಸ್ತ್ರಿಗಳವರ ನೂತನಗೃಹದ ಆವರಣದಲ್ಲಿಯೇ ನೆರವೇರಿತು. ಈ ಉತ್ಸವದಲ್ಲಿ ಶ್ರೀಶ್ರೀಗಳವರು **"ಶ್ರೀಶಂಕರಭಗವತ್ಪಾದರವರ ಮತದಂತೆ ವೇದಾಂತದ ಮುಖ್ಯಪ್ರಮೇಯಗಳು"** ಎಂಬ ವಿಷಯವನ್ನು ಕುರಿತು ಉಪದೇಶಗಳನ್ನು ಅನುಗ್ರಹಿಸುತ್ತಿದ್ದರು. ಎಂದಿನಂತೆ ಪಂಡಿತರುಗಳು ಭಾಷ್ಯಪ್ರವಚನ ಪುರಾಣಾದಿಗಳಲ್ಲಿ ಭಾಗವನ್ನು ವಹಿಸಿದ್ದರು. ಮೈಸೂರು ಅಧ್ಯಾತ್ಮವಿಚಾರ ಸಂಘದವರು ಎಲ್ಲಾ ಏರ್ಪಾಡುಗಳನ್ನೂ ವ್ಯವಸ್ಥಿತವಾಗಿ ಮಾಡಿದ್ದರು. ಕೆಲವು ಭಕ್ತಮಹನೀಯರು ಶ್ರೀಶ್ರೀಗಳವರಿಗೆ ಪಾದಪೂಜಾಭಿಕ್ಷಾದಿಗಳನ್ನು ನಡೆಯಿಸಿದರು. ಅಂತೂ ಉತ್ಸವವು ವಿಜೃಂಭಣೆಯಿಂದ ನೆರವೇರಿತು. ಅನಂತರ ಈ ಉತ್ಸವದಲ್ಲಿ ಶ್ರೀಶ್ರೀಗಳವರು ಅನುಗ್ರಹಿಸಿದ್ದ ಉಪನ್ಯಾಸಗಳನ್ನು ಇಂಗ್ಲಿಷ್ ಭಾಷೆಯಲ್ಲಿ ``Shankara's Clarification of Certain Vedantic Concepts" ಎಂಬ ಹೆಸರಿನ ಗ್ರಂಥವಾಗಿ ಪ್ರಕಟಿಸಲಾಯಿತು.

## ಶ್ರೀಶ್ರೀಗಳವರ ಪ್ರವಾಸ :

1969ನೆಯ ಜೂನ್ ಮಾಹೆಯಲ್ಲಿ ಶ್ರೀಶ್ರೀಗಳವರು ಶಾಖಾಕಾರ್ಯಾಲಯ ಸ್ಥಾಪನೆಯ ಉದ್ದೇಶದಿಂದ ಬೆಂಗಳೂರಿಗೆ ದಯಮಾಡಿಸಿ ಕೆಲವುಕಾಲ ಜಯನಗರದಲ್ಲಿ ಒಂದು ಬಂಗಲೆಯಲ್ಲಿ ತಂಗಿದ್ದರು. ಈ ಅವಧಿಯಲ್ಲಿ ಹೊಸಪೇಟೆಗೆ ದಯಮಾಡಿಸಿ ಅಲ್ಲಿಯ ಗೌರೀಪುರ ಮಠಾಧೀಶರನ್ನು ಸಂದರ್ಶಿಸಿದರು ಅನಂತರ ವಾಪಸು ಬೆಂಗಳೂರಿಗೆ ಬಂದಿದ್ದು ಚಾತುರ್ಮಾಸ್ಯ ಸಂಕಲ್ಪದ ವೇಳೆಗೆ ಬಸವನಗುಡಿ ಅಧ್ಯಾತ್ಮಮಂದಿರದಲ್ಲಿ ನೆಲಸಿದರು. ಅಲ್ಲಿಯೇ ಚಾತುರ್ಮಾಸ್ಯ ಸಂಕಲ್ಪವನ್ನು ನೆರವೇರಿಸಿ ತಾ. 29-7-69 ರಿಂದ ಪ್ರತಿದಿನ ಬೆಳಗ್ಗೆ ಉಪದೇಶಗಳನ್ನು ಅನುಗ್ರಹಿಸುತ್ತಿದ್ದರು.

**ಶಾಖಾಕಾರ್ಯಾಲಯಸ್ಥಾಪನೆಗೆ ಪ್ರಯತ್ನ :**

ಶ್ರೀಗಳವರು ಭಕ್ತಮಹಾಜನರ ಇಚ್ಛೆಯಂತೆ ಕಾರ್ಯಾಲಯದ ಒಂದು ಶಾಖೆಯನ್ನು ಬೆಂಗಳೂರು ನಗರದಲ್ಲಿ ಸ್ಥಾಪಿಸುವ ಉದ್ದೇಶದಿಂದ ತಾ. 15-12-69 ರಂದು ಹೊಳೆನರಸೀಪುರದಿಂದ ದಯಮಾಡಿಸಿ ಬೆಂಗಳೂರು ಬಸವನಗುಡಿ ಶ್ರೀಕೃಷ್ಣರಾಜೇಂದ್ರ ರಸ್ತೆಯಲ್ಲಿರುವ 'ಲಕ್ಷ್ಮೀವಾಸಂ' ಎಂಬ ಕಟ್ಟಡದಲ್ಲಿ ಬಿಡಾರಮಾಡಿದರು. ಅನಂತರ ತಾ. 30-12-69ರಂದು ಶಾಖಾಕಾರ್ಯಾಲಯದ ಕಟ್ಟಡನಿರ್ಮಾಣಕ್ಕಾಗಿ ಬೆಂಗಳೂರು ತಾತಾಸಿಲ್ಕ್‌ಫಾರಂನಲ್ಲಿ 388 ಚ.ಗಜ ವಿಸ್ತಾರವುಳ್ಳ ಸೈಟನ್ನು ಹತ್ತುಸಾವಿರ ರೂಪಾಯಿಗಳಿಗೆ ಸಂಸ್ಥೆಯ ಟ್ರಸ್ಟ್‌ಕಮಿಟಿ ಅಧ್ಯಕ್ಷರ ಹೆಸರಿನಲ್ಲಿ ಕೊಳ್ಳಲಾಯಿತು. ಗುರುಗಳು ತಾವಿದ್ದ ಸ್ಥಳದಲ್ಲೇ ಕೆಲವು ಚಟುವಟಿಕೆಗಳನ್ನು ಪ್ರಾರಂಭಿಸಿ ಮಹಾಜನರನ್ನು ಪ್ರೋತ್ಸಾಹಿಸಿದರು. ಹೀಗೆ ಶಾಖಾಕಾರ್ಯಾಲಯಕ್ಕೆ ಬೀಜಾವಾಪವಾಯಿತು.

**ಗ್ರಂಥಪ್ರಕಟನೆ :**

1969ನೆಯ ವರ್ಷವು ಪೂರೈಸುವ ವೇಳೆಗೆ ಕನ್ನಡದಲ್ಲಿ 'ಸರ್ವವೇದಾಂತ ಸಿದ್ಧಾಂತಸಾರಸಂಗ್ರಹ'ವೆಂಬ ಒಂದು ಪ್ರಕರಣಗ್ರಂಥವೂ ಸಂಸ್ಕೃತದಲ್ಲಿ ಶ್ರೀಶ್ರೀಗಳವರ ಕೃತಿಯಾದ 'ವಿಶುದ್ಧವೇದಾಂತಪರಿಭಾಷಾ' ಎಂಬ ಗ್ರಂಥವೂ ಇಂಗ್ಲಿಷ್‌ನಲ್ಲಿ `Collected Works of Sri K.A. Krishnaswamy Iyer' ಎಂಬ ಗ್ರಂಥವೂ ಪ್ರಕಟವಾದವು.

**ಶ್ರೀ ಕೆ. ಜಿ. ಸುಬ್ಬರಾಯಶರ್ಮಾ :**

ಕಳೆದ ಹತ್ತುವರ್ಷಗಳಿಂದಲೂ ಶ್ರೀಶ್ರೀಗಳವರ ಸನ್ನಿಧಿಯಲ್ಲಿ ವ್ಯಾಸಂಗಮಾಡುತ್ತಿದ್ದ ಕಿಕ್ಕೇರಿಯ ಶ್ರೀ ಕೆ.ಎನ್. ಗುಂಡಪ್ಪನವರ ಪುತ್ರನಾದ ಈ ವಿದ್ಯಾರ್ಥಿಯು ತನ್ನ ವಿದ್ಯಾಭ್ಯಾಸವನ್ನು ಪೂರೈಸಿದನಾದ್ದರಿಂದ ಈತನ ಯೋಗ್ಯತೆಯನ್ನು ಮೆಚ್ಚಿ ಶ್ರೀಶ್ರೀಗಳವರ ಸೂಚನೆಯಂತೆ ಸಮಿತಿಯವರು ಇವನನ್ನು ತಾ. 1-12-69ರಿಂದ ರೂ. 50-5-75ರ ಗ್ರೇಡಿನ ಮೇಲೆ ಶ್ರೀಶ್ರೀಗಳವರ ಆಪ್ತಕಾರ್ಯದರ್ಶಿಯನ್ನಾಗಿ ನೇಮಕಮಾಡಿದರು. ಶ್ರೀಗಳವರ ಕಾಲಾನಂತರ ಈತನೇ ಶಾಖಾಕಾರ್ಯಾಲಯದ ಪಂಡಿತನೂ ಕಾರ್ಯದರ್ಶಿಯೂ ಆಗಿ ಮುಂದುವರೆದಿದ್ದಾನೆ.

**ವೇದಾಂತಸಪ್ತಾಹ :**

ಶಾಖಾಕಾರ್ಯಾಲಯದ ಕಟ್ಟಡನಿಧಿಗೆ ಸಹಾಯವನ್ನು ಕೋರಿದ್ದ ಸಂದರ್ಭದಲ್ಲಿ ತಿಪಟೂರು ಭಕ್ತಮಹಾಜನರು ತಾ. 25-1-70 ರಿಂದ ಒಂದು ವಾರಕಾಲ ಶ್ರೀಶ್ರೀಗಳವರನ್ನು ಬರಮಾಡಿಕೊಂಡು "ವೇದಾಂತಸಪ್ತಾಹ" ವನ್ನು ನೆರವೇರಿಸಿ ಯಥೋಚಿತ ಕಾಣಿಕೆಗಳನ್ನು ನೀಡಿದರು. ಇದರಿಂದ ಕಟ್ಟಡದ ಕೆಲಸಗಳಿಗೆ ಸಹಾಯವಾಯಿತು.

**ಅನುಷ್ಠಾನಗಳು :**

1970ನೆಯ ವರ್ಷದ ರಾಮನವರಾತ್ರಿ ಅನುಷ್ಠಾನವು ಎಂದಿನಂತೆ ನೆರವೇರಿತು. ಶಂಕರಸಪ್ತಾಹ ಮಹೋತ್ಸವವು ಈ ವರ್ಷ ಚಿಕ್ಕಮಗಳೂರಿನಲ್ಲಿ ಬಸವನಹಳ್ಳಿ ಶ್ರೀ ರಂಗಣ್ಣನವರ ಛತ್ರದಲ್ಲಿ ವಿಜೃಂಭಣೆಯಿಂದ ನೆರವೇರಿತು. ಊರಿನ ಮಹಾಜನರು ಶ್ರದ್ಧಾಭಕ್ತಿಗಳಿಂದ ಉತ್ಸವದಲ್ಲಿ ಭಾಗವನ್ನು ವಹಿಸಿದ್ದರು. ವಿದ್ವಾಂಸರುಗಳಿಂದ ಪ್ರವಚನಗಳೂ ಶ್ರೀಶ್ರೀಗಳವರಿಂದ ಶಂಕರರ ಅಸಾಧಾರಣೋಪದೇಶಗಳನ್ನು ಕುರಿತ ಉಪನ್ಯಾಸಗಳೂ ನಡೆದವು. ಸ್ಥಳೀಯ ಕಾಫಿ ಪ್ಲಾಂಟರ್ ಶ್ರೀ ಎಸ್. ರಾಮಚಂದ್ರರಾಯರು ಎಲ್ಲ ವ್ಯವಸ್ಥೆಗಳನ್ನೂ ಸಮರ್ಪಕವಾಗಿ ಏರ್ಪಡಿಸಿದ್ದರು. ಊರಿನ ಮಹಾಜನರು ಗುರುಗಳಿಗೆ ಯಥೋಚಿತ ಕಾಣಿಕೆಗಳನ್ನೂ ಅರ್ಪಿಸಿದರು. ಉತ್ಸವಸಂದರ್ಭದಲ್ಲಿ ಕಾರ್ಯಾಲಯದಲ್ಲಿ ಪ್ರಕಟವಾಗಿರುವ ಗ್ರಂಥಗಳ ಪ್ರದರ್ಶನವೊಂದನ್ನು ಏರ್ಪಡಿಸಲಾಗಿತ್ತು. ಅಂತೂ ಈ ಉತ್ಸವವು ಚೆನ್ನಾಗಿ ನಡೆಯಿತು.

**ಶಾಖಾಕಾರ್ಯಾಲಯದ ಕಟ್ಟಡ :**

ತಾತಾ ಸಿಲ್ಕ್‌ಫಾರಂನಲ್ಲಿ (ಸುಬ್ಬರಾಮಚೆಟ್ಟಿ ಲೇ.ಔಟ್) ನಲ್ಲಿ ಹೊಸದಾಗಿ ಕೊಂಡಿದ್ದ ನಿವೇಶದಲ್ಲಿ ಶ್ರೀಶ್ರೀಗಳವರ ವಸತಿಗೆ ಅಗತ್ಯವಾದಷ್ಟು ಕಟ್ಟಡದ ಭಾಗದ ನಿರ್ಮಾಣಕ್ಕೆ ಪ್ರಪ್ರಥಮವಾಗಿ ತಾ. 10-5-70 ರಂದು ಗುದ್ದಲಿಪೂಜೆಯನ್ನು ಮಾಡಿ ಪ್ರಾರಂಭಿಸಲಾಯಿತು. ಬೆಂಗಳೂರಿನ ಭಕ್ತಮಹಾಜನಗಳ ಸಹಕಾರದಿಂದ ಈ ಕಟ್ಟಡನಿರ್ಮಾಣಕಾರ್ಯವು ತ್ವರಿತವಾಗಿ ಮುಂದುವರಿಯುತ್ತಾ ಬಂದು 1971ನೆಯ ಜನವರಿ ಕೊನೆಯವೇಳೆಗೆ ಸಿದ್ಧವಾಯಿತು.

**ಅನುಷ್ಠಾನಗಳು :**

1970ನೆಯ ವರ್ಷದ ಚಾತುರ್ಮಾಸ್ಯಾನುಷ್ಠಾನ - ಭಗವದ್ಗೀತಾಜಯಂತೀ ಬ್ರಹ್ಮಚೈತನ್ಯಮಹಾರಾಜರ ಆರಾಧನೋತ್ಸವಗಳು ಪ್ರಪ್ರಥಮವಾಗಿ ಶಾಖಾಕಾರ್ಯಾಲಯ ದಲ್ಲಿಯೇ ಶ್ರೀಶ್ರೀಗಳವರು ಬಿಡಾರಮಾಡಿದ್ದ 'ಲಕ್ಷ್ಮೀವಾಸಂ' ನಿಲಯದಲ್ಲಿ ಯಶಸ್ವಿಯಾಗಿ ನೆರವೇರಿದವು. ಪ್ರಧಾನಕಾರ್ಯಾಲಯದಲ್ಲಿಯೂ ಮೇಲ್ಕಂಡ ಅನುಷ್ಠಾನಗಳು ಪ್ರತ್ಯೇಕವಾಗಿ ನಡೆದವು. ಶರನ್ನವರಾತ್ರಿ ಉತ್ಸವವು ಮಾತ್ರ ಪ್ರಧಾನಕಾರ್ಯಾಲಯದಲ್ಲಿಯೇ ಶ್ರೀಶ್ರೀಗಳವರ ಸಮ್ಮುಖದಲ್ಲಿ ನಡೆಯಿತು.

**ಗ್ರಂಥಪ್ರಕಟನೆ :**

1970ನೆಯ ವರ್ಷವು ಪೂರೈಸುವ ವೇಳೆಗೆ ಕನ್ನಡದಲ್ಲಿ ಶ್ರೀಭಾಷ್ಯ (ಜಿಜ್ಞಾಸಾಧಿಕರಣ), ಭಾಗವತಸಂಪ್ರದಾಯ, ಶಂಕರದರ್ಶನ, ಶಂಕರ ಸಂಸ್ಮರಣವೆಂಬ ಚಿಕ್ಕಪುಸ್ತಕ - ಇವುಗಳು

ಪ್ರಕಟವಾದವು. ಮತ್ತು ಸಂಸ್ಕೃತಭಾಷೆಯಲ್ಲಿ ಸೂತ್ರಭಾಷ್ಯಾರ್ಥತತ್ತ್ವವಿವೇಚನೀ 3ನೆಯ ಭಾಗ ಈ ಗ್ರಂಥವೂ ಪ್ರಕಟವಾಯಿತು. ಇಂಗ್ಲಿಷಿನಲ್ಲಿ `Vision of Atman' ಎಂಬ ಗ್ರಂಥವೂ ಹೊರಬಂದಿತು.

## ಅಧ್ಯಾತ್ಮವಿದ್ಯಾಪ್ರಚಾರ :

ಶ್ರೀಶ್ರೀಗಳವರ .ಶಿಷ್ಯರಲ್ಲೊಬ್ಬರಾದ ಶ್ರೀ ದೇವರಾಯ ಕುಲಕರ್ಣಿಯವರು ಚಿಕ್ಕಮಗಳೂರು, ಶಿವಮೊಗ್ಗ, ಬೊಂಬಾಯಿ- ಈ ಸ್ಥಳಗಳಲ್ಲಿ ಉಪನ್ಯಾಸಗಳ ಮೂಲಕ ವೇದಾಂತಪ್ರಚಾರವನ್ನು ಮಾಡಿದರು. ಶ್ರೀಯುತರು ವಿಶೇಷವಾಗಿ ಬೊಂಬಾಯಿಯಲ್ಲಿ ಶ್ರೀಚಿತ್ರಾಪುರಮಠದ ಆಶ್ರಮದಲ್ಲಿ ಮರಾಠಿ ಭಾಷೆಯಲ್ಲಿಯೇ ಉಪನ್ಯಾಸಗಳನ್ನು ನಡೆಯಿಸಿ ಕಾರ್ಯಾಲಯದ ಮಾಸಪತ್ರಿಕೆ ಹಾಗೂ ಗ್ರಂಥಗಳ ಪ್ರಚಾರಕ್ಕೆ ತುಂಬ ನೆರವಾದರು. ಕಾರ್ಯಾಲಯದ ಪಂಡಿತರಾದ ಶ್ರೀ ಹೆಚ್.ಎಸ್. ಲಕ್ಷ್ಮೀನರಸಿಂಹಮೂರ್ತಿಗಳೂ ಚಿಕ್ಕಮಗಳೂರಿನಲ್ಲಿ ಗೀತಾಸಪ್ತಾಹವನ್ನು 1970ನೆಯ ನವೆಂಬರ್‌ನಲ್ಲಿ ನಡೆಸಿ ವೇದಾಂತ ಪ್ರಚಾರಕ್ಕೆ ನೆರವಾದರು.

## ಶಾಖಾಕಾರ್ಯಾಲಯದ ಗೃಹಪ್ರವೇಶೋತ್ಸವ :

ಅಧ್ಯಾತ್ಮಪ್ರಕಾಶಕಾರ್ಯಾಲಯದ ಬೆಂಗಳೂರು ಶಾಖೆಯು ಸ್ಥಾಪಿತವಾದ ಕೇವಲ ಒಂದುವರ್ಷದ ಅವಧಿಯೊಳಗಾಗಿ ಮಹಾಜನರ ಸಹಕಾರದಿಂದ ತನ್ನ ಸ್ವಂತಕಟ್ಟಡವನ್ನು ಹೊಂದುವ ಸುಯೋಗವನ್ನು ಪಡೆಯಿತು. ಶ್ರೀಶ್ರೀಗಳವರ ನಿವಾಸಕ್ಕೆ ಸಿದ್ಧಗೊಳಿಸಲ್ಪಟ್ಟ ಈ ಕಟ್ಟಡದ ಭಾಗಕ್ಕೆ ಮಹಡಿಯನ್ನೂ ನಿರ್ಮಿಸಲಾಯಿತು. ಹೀಗೆ ಸಿದ್ಧವಾದ ಕಟ್ಟಡದ ಪ್ರವೇಶೋತ್ಸವವು ತಾ. 5-2-71ರಂದು ಶ್ರೀಶ್ರೀಗಳವರ ಅಮೃತಹಸ್ತದಿಂದಲೇ ನೆರವೇರಿತು. ಆ ದಿನ ನಡೆದ ಸಭೆಯಲ್ಲಿ ಶ್ರೀಶ್ರೀಗಳವರು ಕಾರ್ಯಾಲಯವು ತನ್ನ ಶಾಖೆಯನ್ನು ಬೆಂಗಳೂರಿನಲ್ಲಿ ಸ್ಥಾಪಿಸಿದ್ದರ ಉದ್ದೇಶವನ್ನೂ ಆವಶ್ಯಕತೆಯನ್ನೂ ವಿವರಿಸಿ ಈ ಶಾಖೆಯು ಚೆನ್ನಾಗಿ ಪುರೋಭಿವೃದ್ಧಿಯನ್ನು ಹೊಂದಿ ಚಿರಕಾಲ ಬಾಳಲೆಂದು ಹರಸಿದರು. ಶ್ರೀಶ್ರೀಗಳವರು ಶಾಖಾಕಾರ್ಯಾಲಯದ ಈ ಸ್ವಂತಕಟ್ಟಡದಲ್ಲಿಯೇ ನೆಲಸಿದ್ದು ತಮ್ಮ ಬರವಣಿಗೆ, ಪಾಠಪ್ರವಚನಗಳು, ಉಪನ್ಯಾಸಗಳು- ಭಜನೆ ಮುಂತಾದ ಚಟುವಟಿಕೆಗಳನ್ನು ಅಲ್ಲಿಯೇ ಮುಂದುವರೆಸಿದರು.

## ಅನುಷ್ಠಾನಗಳು :

1971ನೆಯ ವರ್ಷದ ರಾಮನವರಾತ್ರಿಯ ಅನುಷ್ಠಾನವನ್ನು ಪ್ರಪ್ರಥಮವಾಗಿ ಶಾಖಾಕಾರ್ಯಾಲಯದ ಸ್ವಂತಕಟ್ಟಡದಲ್ಲಿ ನಡೆಯಿಸಲಾಯಿತು. ಪ್ರಧಾನಕಾರ್ಯಾಲಯದಲ್ಲೂ

ಈ ಅನುಷ್ಠಾನವು ಎಂದಿನಂತೆ ನೆರವೇರಿತು. ಈ ವರ್ಷದ **ಶಂಕರಸಪ್ತಾಹಮಹೋತ್ಸವವು ಅರಕಲಗೂಡಿನಲ್ಲಿ** ವೈಭವದಿಂದ ನಡೆಯಿತು. ಎಂದಿನಂತೆ ವಿದ್ವಾಂಸರುಗಳು ಪ್ರವಚನಾದಿಗಳಲ್ಲಿ ಭಾಗವನ್ನು ವಹಿಸಿದ್ದರು. ಪರಸ್ಥಳಗಳಿಂದ ಉತ್ಸವಕ್ಕಾಗಿ ಬಂದಿದ್ದ ಭಕ್ತರುಗಳಿಗೆ ಸ್ಥಳೀಯ ಬ್ರಾಹ್ಮಣಸಮಾಜದವರು ಒಂದೊಂದುದಿನ ಒಬ್ಬೊಬ್ಬರ ಮನೆಯಲ್ಲಿ ಆತಿಥ್ಯವನ್ನು ಏರ್ಪಡಿಸಿದ್ದರು. ಶ್ರೀಶ್ರೀಗಳವರಿಗೆ ಅನೇಕ ಭಕ್ತರು ಪಾದಪೂಜಾದಿಗಳನ್ನು ನಡೆಯಿಸಿ ಕಾಣಿಕೆಗಳನ್ನು ಅರ್ಪಿಸಿದರು. ಉತ್ಸವವು ಪೂರೈಸಿದಮೇಲೆ ಗುರುಗಳು ಹೊಳೆನರಸೀಪುರದ ಮಾರ್ಗವಾಗಿ ಬೆಂಗಳೂರಿಗೆ ಪ್ರಯಾಣವನ್ನು ಬೆಳೆಸಿದರು.

## ಚಾತುರ್ಮಾಸ್ಯಸಂಕಲ್ಪ :

1971ನೆಯ ವರ್ಷದ ಚಾತುರ್ಮಾಸ್ಯಸಂಕಲ್ಪವನ್ನೂ ಶ್ರೀಶ್ರೀಗಳವರು ಬೆಂಗಳೂರು ಶಾಖಾಕಾರ್ಯಾಲಯದಲ್ಲಿಯೇ ನೆರವೇರಿಸಿದರು. ಈ ಸಂದರ್ಭದಲ್ಲಿ ವಿಶೇಷಪ್ರವಚನಾದಿಗಳ ಏರ್ಪಾಡಿರಲಿಲ್ಲವಾದರೂ ಪ್ರತಿ ಗುರುವಾರ ಭಾನುವಾರಗಳಲ್ಲಿ ಉಪನ್ಯಾಸಗಳನ್ನು ಅನುಗ್ರಹಿಸುತ್ತಿದ್ದರು.

## ನೂತನ ವಿದ್ಯಾರ್ಥಿ :

ಬೆಂಗಳೂರು ಶಾಖಾಕಾರ್ಯಾಲಯದಲ್ಲಿ ಪ್ರಾರಂಭಿಸಿದ ನೂತನ ವಿದ್ಯಾನಿಲಯಕ್ಕೆ ಕಲ್ಕತ್ತ ನಗರದಿಂದ ಒಬ್ಬ ವಿದ್ಯಾರ್ಥಿಯು ಬಂದು ಸೇರಿದರು. ಇವರು ದಕ್ಷಿಣದೇಶದ ಮದ್ರಾಸ್ ಪ್ರಾಂತದವರೇ ಆಗಿದ್ದರು. ಇಂಗ್ಲೀಷ್ ವಿದ್ಯೆಯಲ್ಲಿ ಎಂ.ಕಾಂ, ಎಲ್ಎಲ್.ಬಿ. ಪ್ಯಾಸ್ಮಾಡಿರುವ ಶ್ರೀ ರಾಜಗೋಪಾಲ್ ಎಂಬ ಈ ಜಿಜ್ಞಾಸುವು ಅಧ್ಯಾತ್ಮವಿದ್ಯೆಯನ್ನು ಕಲಿಯುವ ಉದ್ದೇಶದಿಂದ ಗುರುಗಳ ಸನ್ನಿಧಿಯನ್ನು ಬಂದುಸೇರಿ ವಿದ್ಯಾಭ್ಯಾಸವನ್ನು ಮಾಡಿದರು. ಈಗ ಸ್ವತಂತ್ರರಾಗಿ ಬೆಂಗಳೂರಿನಲ್ಲೇ ಇದ್ದಾರೆ.

## ಅಧ್ಯಾತ್ಮವಿದ್ಯಾಪ್ರಚಾರ :

1971ನೆಯ ಜೂನ್ ಮಾಹೆಯಲ್ಲಿ ಕಾರ್ಯಾಲಯದ ಪಂಡಿತ ಶ್ರೀ ಹೆಚ್.ಎಸ್. ಲಕ್ಷ್ಮೀನರಸಿಂಹಮೂರ್ತಿಗಳು ಚಿಕ್ಕಮಗಳೂರಿನಲ್ಲಿ ಒಂದು ವಾರಕಾಲ ಬೆಳಗಿನ ವೇಳೆಯಲ್ಲಿ ಬೃಹದಾರಣ್ಯಕೋಪನಿಷತ್ತಿನ ಮೇಲೂ ಸಂಜೆವೇಳೆಯಲ್ಲಿ 'ಗೀತೋಕ್ತಭಕ್ತಿ' ಎಂಬ ವಿಷಯವಾಗಿಯೂ ಪ್ರವಚನಗಳನ್ನು ನಡೆಯಿಸಿದರು. ಈ ಸಂದರ್ಭದಲ್ಲಿ ಶ್ರೀಯುತರು ಬರೆದಿದ್ದ 'ಆತ್ಮಪ್ರತಿಬೋಧ' ಪುಸ್ತಕವನ್ನೂ ಪ್ರಕಟಿಸಿ ಬಿಡುಗಡೆ ಮಾಡಲಾಯಿತು. ಪ್ರಕಾಶಕರಾದ ಶ್ರೀ ಎಂ.ಜೆ. ಕೋದಂಡರಾಮಶೆಟ್ಟರು ಈ ಗ್ರಂಥದ 500 ಪ್ರತಿಗಳನ್ನು ಕಾರ್ಯಾಲಯಕ್ಕೆ ಉದಾನವಾಗಿ ಸಮರ್ಪಿಸಿದರು.

**ಅನುಷ್ಠಾನ :**

1971ನೆಯ ವರ್ಷದ ಶರನ್ನವರಾತ್ರಿಯ ಅನುಷ್ಠಾನವು ಶ್ರೀಶ್ರೀಗಳವರ ಸನ್ನಿಧಿಯಲ್ಲಿ ಹೊಳೆನರಸೀಪುರದಲ್ಲಿಯೇ ನಡೆಯಿತು. ಪಂಡಿತರುಗಳು ಎಂದಿನಂತೆ ಭಾಗವಹಿಸಿದ್ದರು. ಉತ್ಸವವು ಪೂರೈಸಿದನಂತರ ಗುರುಗಳು ಬೆಂಗಳೂರಿಗೆ ದಯಮಾಡಿಸಿದರು. ಮುಂದೆ ಗೀತಾಜಯಂತೀ, ಬ್ರಹ್ಮಚೈತನ್ಯಾರಾಧನೆ- ಈ ಎರಡು ಅನುಷ್ಠಾನಗಳೂ ಶಾಖಾ ಕಾರ್ಯಾಲಯದಲ್ಲೂ ಪ್ರಧಾನಕಾರ್ಯಾಲಯದಲ್ಲೂ ಬೇರೆಬೇರೆಯಾಗಿ ನೆರವೇರಿದವು. ಪ್ರಧಾನ ಕಾರ್ಯಾಲಯದ ಮುಖ್ಯಚಟುವಟಿಕೆಗಳನ್ನೆಲ್ಲ ಶಾಖಾಕಾರ್ಯಾಲಯಕ್ಕೂ ವಿಸ್ತರಿಸಿ ಶಾಖೆಯನ್ನು ಪುರೋಭಿವೃದ್ಧಿಯ ಮಾರ್ಗದಲ್ಲಿ ಒಯ್ಯಲಾಯಿತು.

**ಗ್ರಂಥಪ್ರಕಟನೆ :**

1971ನೆಯ ವರ್ಷವು ಪೂರೈಸುವವೇಳೆಗೆ ಕನ್ನಡದಲ್ಲಿ (1) **ಅನುಭವಗಮ್ಯವೇದಾಂತ** (ಶ್ರೀಶ್ರೀಗಳವರ ಉಪನ್ಯಾಸಮಾಲೆ) ಇಂಗ್ಲಿಷಿನಲ್ಲಿ (2) **Essays on Vedanta; ಮರಾಠಿಭಾಷೆಯಲ್ಲಿ** (3) **ಶಾಂಕರ ವೇದಾಂತಪ್ರಕ್ರಿಯೆ** (ಶ್ರೀಶ್ರೀಗಳವರ ಕನ್ನಡಗ್ರಂಥದ ಅನುವಾದ)- ಈ ಗ್ರಂಥಗಳನ್ನು ಮುದ್ರಿಸಿ ಪ್ರಕಾಶಗೊಳಿಸಲಾಯಿತು.

**ಶ್ರೀಶ್ರೀಗಳವರ ಪ್ರವಾಸ :**

1971ನೆಯ. ನವೆಂಬರ್ ತಿಂಗಳಿನಲ್ಲಿ ಶ್ರೀಶ್ರೀಗಳವರು ಕೊಳ್ಳೇಗಾಲದ ಮಹಾಜನರ ಆಹ್ವಾನವನ್ನು ಅಂಗೀಕರಿಸಿ ಶಿಷ್ಯಪರಿವಾರ ಸಮೇತರಾಗಿ ಮೂರು ದಿನಗಳ ಕಾಲ **ಕೊಳ್ಳೇಗಾಲದಲ್ಲಿ** ಬಿಡಾರಮಾಡಿ ಶ್ರೀಕನ್ಯಕಾಪರಮೇಶ್ವರಿ ದೇವಾಲಯದ ಛತ್ರದಲ್ಲಿ ಭಕ್ತಮಹಾಜನರಿಗೆ ಪ್ರವಚನೋಪದೇಶಾದಿಗಳನ್ನು ಅನುಗ್ರಹಿಸಿದರು. ಈ ಸಂದರ್ಭದಲ್ಲಿ ಶ್ರೀ ದೇವರಾಯ ಕುಲಕರ್ಣಿಯವರು, ಕಾರ್ಯಾಲಯದ ಪಂಡಿತರೂ, ಶ್ರೀ ನಿಖಿಲಾನಂದಗುಪ್ತ ದಂಪತಿಗಳೂ ಉಪಸ್ಥಿತರಾಗಿದ್ದರು. ಶ್ರೀಶ್ರೀಗಳವರು ಬರೆದಿರುವ **ಗ್ರಂಥಗಳ ಪ್ರದರ್ಶನವನ್ನು** ಏರ್ಪಡಿಸಲಾಗಿತ್ತು. ಮಹಾಜನರು ಗುರುಗಳಿಗೆ ಯಥೋಚಿತ ಪಾದಪೂಜಾಸತ್ಕಾರಾದಿಗಳನ್ನು ನಡೆಯಿಸಿದರು. ಗ್ರಂಥಗಳನ್ನೂ ಮಾಸಪತ್ರಿಕೆಯನ್ನೂ ಕೊಂಡು ಪ್ರೋತ್ಸಾಹಿಸಿದರು.

ಪುನಃ ಶ್ರೀಶ್ರೀಗಳವರು ತುಮಕೂರು ಭಕ್ತಮಹಾಜನರ ಅಪೇಕ್ಷೆಯಂತೆ 1972ನೆಯ ಜನವರಿ ಮಾಹೆಯಲ್ಲಿ ತಮ್ಮ ಪರಿವಾರ ಹಾಗೂ ಸಹಾಯಕ ಪಂಡಿತರುಗಳೊಡನೆ ತುಮಕೂರಿಗೆ ದಯಮಾಡಿಸಿ ಶ್ರೀಮತಿ ಸಾವಿತ್ರಮ್ಮನವರ ಕಲ್ಯಾಣಮಂದಿರದಲ್ಲಿ ಬಿಡಾರಮಾಡಿ ಒಂದು ವಾರಕಾಲ '**ವೇದಾಂತ ಸಪ್ತಾಹ**'ದ ಅಂಗವಾಗಿ ಭಾಷ್ಯಪ್ರವಚನ ಉಪನ್ಯಾಸಾದಿಗಳನ್ನು ನಡೆಯಿಸಿದರು. ಇಲ್ಲಿಯೂ ಶ್ರೀಗಳವರು ಬರೆದಿರುವ ಗ್ರಂಥಗಳ ಪ್ರದರ್ಶನವನ್ನು ಏರ್ಪಡಿಸಲಾಗಿತ್ತು. ಪುರಪ್ರಮುಖರಾದ ಶ್ರೀ ಟಿ. ಅನಂತರಾಮಶೆಟ್ಟರು, ವೇ॥ ಶೃಂಗೇರಿ

ಸೀತಾರಾಮಭಟ್ಟರು, ವೇ. ಸಿ.ಎನ್. ಯಜ್ಞನಾರಾಯಣಶಾಸ್ತ್ರಿಗಳು- ಮುಂತಾದವರು ಬಹಳ ಉತ್ಸಾಹದಿಂದ ಜನರನ್ನು ಕೂಡಿಸಿ ಕಾರ್ಯಕ್ರಮಗಳೆಲ್ಲ ಬಹುಯಶಸ್ವಿಯಾಗುವಂತೆ ಮಾಡಿದರು. ಮಹಾಜನರು ಗುರುಗಳಿಗೆ ವಿಶೇಷ ಪಾದಪೂಜಾದಿಗಳನ್ನು ನೆರವೇರಿಸಿದರಲ್ಲದೆ ಶಾಖಾಕಾರ್ಯಾಲಯದ ಕಟ್ಟಡಕ್ಕೂ ಧನಸಹಾಯವನ್ನು ನೀಡಿ ಪ್ರೋತ್ಸಾಹಿಸಿದರು.

## ಭಾಗವತಸಪ್ತಾಹ :

ಶ್ರೀಶ್ರೀಗಳವರ ಭಕ್ತರಲ್ಲೊಬ್ಬರಾದ ಶ್ರೀ ಕುಪ್ಪಳ್ಳಿ ಮಂಜೇಗೌಡರೆಂಬ ಮಹನೀಯರು 1972ನೆಯ ಜನವರಿ ಕೊನೆಯವಾರದಲ್ಲಿ ಹೊಳೆನರಸೀಪುರದ ಪ್ರಧಾನಕಾರ್ಯಾಲಯದಲ್ಲಿಯೇ "ಭಾಗವತಸಪ್ತಾಹ" ವೆಂಬ ಉತ್ಸವವನ್ನು ಏರ್ಪಡಿಸಿ ಗುರುಗಳನ್ನು ಆಹ್ವಾನಿಸಿದರು. ಶ್ರೀಗಳವರು ಸಪರಿವಾರರಾಗಿ ದಯಮಾಡಿಸಿ ಉತ್ಸವದಲ್ಲಿ ಭಾಗವನ್ನು ವಹಿಸಿದ್ದರು. ಈ ಸಪ್ತಾಹದ ಅಂಗವಾಗಿ ಶ್ರೀಮದ್ಭಾಗವತಪಾರಾಯಣ, ಶ್ರೀರಾಮದೇವರಿಗೆ ವಿಶೇಷಾಭಿಷೇಕ ಪೂಜಾದಿಗಳು, ಪ್ರತಿದಿನವೂ ಹೋಮ-ಮಧ್ಯಾಹ್ನದ ವೇಳೆಯಲ್ಲಿ ಭಾಗವತಕಥಾನುವಾದ, ಅನಂತರ ಭಜನೆ- ಹೀಗೆ ಕಾರ್ಯಕ್ರಮಗಳು ಯಶಸ್ವಿಯಾಗಿ ನೆರವೇರಿದವು. ಕೊನೆಯದಿನ ವಿಶೇಷಹೋಮ, ಪೂರ್ಣಾಹುತಿಗಳಾದನಂತರ ಮಹಾಮಂಗಳಾರತಿ, ಬ್ರಾಹ್ಮಣಪೂಜೆ, ದಾನಧರ್ಮ, ಸಂತರ್ಪಣೆಗಳೊಡನೆ ಕಾರ್ಯಕ್ರಮವು ಮುಕ್ತಾಯವಾಯಿತು. ಈ ಮಹೋತ್ಸವದಲ್ಲಿ ವೇ॥ ಎಸ್. ವಿಠಲಶಾಸ್ತ್ರಿಗಳೇ ಮುಂತಾದ ಪಂಡಿತರುಗಳೂ ಪರಸ್ಥಳದ ಅನೇಕ ಭಕ್ತಮಹಾಜನರೂ ಭಾಗವನ್ನು ವಹಿಸಿದ್ದರು. ಶ್ರೀ ಮಂಜೇಗೌಡರು ತಮ್ಮ ಪುತ್ರಕಳತ್ರ ಬಂಧುವರ್ಗಸಮೇತರಾಗಿ ಉತ್ಸವದಲ್ಲಿ ಭಾಗವನ್ನು ವಹಿಸಿದ್ದು ಈ ಅನುಷ್ಠಾನದ ಸಂಪೂರ್ಣ ಖರ್ಚುವೆಚ್ಚಗಳನ್ನು ವಹಿಸಿಕೊಂಡರು. ಕಾರ್ಯಾಲಯದಲ್ಲಿ ಈ ವಿಜೃಂಭಣೆಯ ಅನುಷ್ಠಾನವು ನಡೆದು ಎಲ್ಲರೂ ಸಂತೋಷಪಟ್ಟರು. ಗುರುಗಳು ಹಿಂತಿರುಗಿ ಬೆಂಗಳೂರಿಗೆ ದಯಮಾಡಿಸಿದರು.

## ಶಾಖಾಕಾರ್ಯಾಲಯದ ಮುನ್ನಡೆ :

1969ನೆಯ ನವೆಂಬರ್ ಮಾಹೆಯಲ್ಲಿ ಪ್ರಾರಂಭಿಸಲ್ಪಟ್ಟ ಶಾಖಾಕಾರ್ಯಾಲಯವು 1972ನೆಯ ಜನವರಿ ಮಾಹೆಯ ವೇಳೆಗೆ ಬಹುತೃಪ್ತಿಕರವಾಗಿ ಮುಂದುವರೆದು ಪುರೋಭಿವೃದ್ಧಿಯನ್ನು ಪಡೆಯಿತು. ಬೆಂಗಳೂರಿನಂಥ ದಿವ್ಯನಗರದಲ್ಲಿ ಶಾಖೆಯು ತನ್ನದೇ ಆದ ಸುಮಾರು ಎಪ್ಪತ್ತು ಸಾವಿರ ರೂಪಾಯಿಗಳಷ್ಟು ಬೆಲೆಬಾಳುವ ಸ್ವಂತಕಟ್ಟಡಗಳನ್ನು ನಿರ್ಮಿಸಿಕೊಂಡಿತು. ಕಟ್ಟಡಕ್ಕೆ ಬೇಕಾದ ಸಮಸ್ತಸಲಕರಣೆಗಳ ಸಮೇತ ಪಟ್ಟಣವಾಸದ ಆವಶ್ಯಕತೆಗಳಿಗೆ ತಕ್ಕ ಎಲ್ಲಾ ಸಾಮಗ್ರಿಗಳಿಂದಲೂ ಅದನ್ನು ಸಜ್ಜುಗೊಳಿಸಿ ಪರಿಪೂರ್ಣವಾಗಿ ಮಾಡಲಾಯಿತು. ಪಾಠಪ್ರವಚನಗಳು, ಉಪನ್ಯಾಸಗಳು, ಗ್ರಂಥಭಂಡಾರ, ಅನುಷ್ಠಾನಗಳು, ಭಜನೆ, ಆಡಳಿತಕಚೇರಿ - ಮುಂತಾದ ಚಟುವಟಿಕೆಗಳಿಂದ ಜನರನ್ನು ಆಕರ್ಷಿಸಲಾಯಿತು.

ಕಟ್ಟಡದ ಬಡಾವಣೆ ಪುರೋಭಿವೃದ್ಧಿಗಳಿಗಾಗಿ ಮಹಾಜನರಿಂದ ಧನಸಹಾಯವನ್ನು ಪ್ರಾರ್ಥಿಸಿ ಕಟ್ಟಡದ ನಿಧಿಯನ್ನು ಬೆಳೆಸಲಾಯಿತು. ಎಲ್ಲವೂ ವ್ಯವಸ್ಥಿತವಾದನಂತರ 1971ನೆಯ ಅಕ್ಟೋಬರ್ ಮಾಹೆಯಲ್ಲಿ ಈ ಶಾಖೆಯ ಆಡಳಿತ ನಿರ್ವಹಣೆಗಾಗಿ ಒಂದು ಕಾರ್ಯಕಾರಿಸಮಿತಿಯನ್ನು ರಚಿಸಿ ಅಸ್ತಿತ್ವಕ್ಕೆ ತರಲಾಯಿತು. ಪ್ರಧಾನಕಾರ್ಯಾಲಯಕ್ಕೂ ಶಾಖಾಕಾರ್ಯಾಲಯಕ್ಕೂ ಇರಬೇಕಾದ ಸಂಬಂಧರೀತಿನೀತಿಗಳನ್ನು ಪರಿಷ್ಕರಿಸಿ ಘೋಷಿಸಲಾಯಿತು.

# ೨೨. ಉಪಸಂಹಾರ

ಕಾರ್ಯಾಲಯದ ಇತಿಹಾಸವನ್ನು 1972ನೇ ಜನವರಿ ಮಾಹೆಯವರೆಗಿನ ಭಾಗವನ್ನು ಈಗಾಗಲೆ ಪ್ರಸ್ತಾಪಿಸಿದ್ದಾಗಿದೆ. ಈಗ ಅಲ್ಲಿಂದ ಮುಂದಿನ ಭಾಗವನ್ನು ಮಹಾಜನರ ಮುಂದಿಡಲಾಗುವುದು. 1969ರಲ್ಲಿ ಶ್ರೀಶ್ರೀಗಳವರು ಶಾಖಾಕಾರ್ಯಾಲಯದ ಸ್ಥಾಪನೆಗಾಗಿ ಬೆಂಗಳೂರಿಗೆ ದಯಮಾಡಿಸಿದ ಅನಂತರ 1972ರಲ್ಲಿ ನಡೆದ ಭಾಗವತ ಸಪ್ತಾಹಕ್ಕೆ ದಯಮಾಡಿಸಿದ್ದೇ ಕಡೆಯ ಭೇಟಿಯಾಗಿತ್ತು. ಅನಂತರ ಅವರು ಹೊಳೆನರಸೀಪುರಕ್ಕೆ ಬರಲಾಗಲಿಲ್ಲ. ಆದ್ದರಿಂದ ಹೊಳೆನರಸೀಪುರದ ಕಾರ್ಯಾಲಯದ ವಿಶಿಷ್ಟ ಜವಾಬ್ದಾರಿಗಳನ್ನೂ **ಶ್ರೀ ವೈ. ನರಸಪ್ಪನವರು** ಮತ್ತು ಪಂಡಿತ **ಶ್ರೀ ಲಕ್ಷ್ಮೀನರಸಿಂಹಮೂರ್ತಿಗಳೇ** ನಿರ್ವಹಿಸಬೇಕಾಯಿತು. ಅದರಂತೆಯೇ ಚಟುವಟಿಕೆಗಳು ಮುಂದುವರೆದವು. ಶ್ರೀನರಸಪ್ಪನವರು ಮುದ್ರಣಾಲಯದ ಸಂಪೂರ್ಣ ಜವಾಬ್ದಾರಿಯನ್ನೂ ಶ್ರೀ ಲಕ್ಷ್ಮೀನರಸಿಂಹಮೂರ್ತಿಗಳು ಸಂಸ್ಥೆಯ ಆಡಳಿತ ಜವಾಬ್ದಾರಿಯನ್ನೂ ನಿರ್ವಹಿಸಲಾರಂಭಿಸಿದರು.

1972ನೇ ಜನವರಿಯಿಂದ ಡಿಸೆಂಬರ್ ಪೂರ ಒಂದುವರ್ಷಕಾಲದಲ್ಲಿ ಹೊಳೆನರಸೀಪುರದ ಕಾರ್ಯಾಲಯವು ಈ ಕೆಳಗೆ ಕಂಡಂತೆ ಪುರೋಭಿವೃದ್ಧಿಯನ್ನು ಪಡೆಯಿತು. ಅಧ್ಯಾತ್ಮಪ್ರಕಾಶಮಾಸ ಪತ್ರಿಕೆಯ 41ನೆಯ ಸಂಪುಟವು ಮುಂದುವರೆಯಿತು. ಈ ಸಂಪುಟವು ಪೂರೈಸುವ ವೇಳೆಗೆ ಮಹಾಪೋಷಕರ ಸಂಖ್ಯೆ 167ಕ್ಕೆ ಏರಿತ್ತು. ಈ ವರ್ಷದ **ಶಂಕರ ಸಪ್ತಾಹ ಮಹೋತ್ಸವವು ಬೆಂಗಳೂರು ಶಾಖಾಕಾರ್ಯಾಲಯದಲ್ಲಿಯೇ** ನೆರವೇರಿತು. ಅನಂತರ ವೈಶಾಖ ಮಾಸವು ಅಧಿಕ ಮಾಸವಾಗಿ ಬಂದದ್ದರಿಂದ ನಿಜವೈಶಾಖ ಮಾಸದ ಸಪ್ತಾಹ ಮಹೋತ್ಸವವು ಮೈಸೂರಿನಲ್ಲಿ ನೆರವೇರಿತು. **ಸ್ತುತಿಪುಷ್ಪಾಂಜಲಿ, ಸಂಸ್ಕೃತ ಭಾಷಾಭ್ಯಾಸ 3ನೇ ಭಾಗ, ಭಕ್ತಿ ಚಂದ್ರಿಕೆ, ಈಶಾವಾಸ್ಯೋಪನಿಷದ್‌ಭಾಷ್ಯ** (ಇಂಗ್ಲಿಷ್ ಅನುವಾದದೊಡನೆ) ಇವು ಪ್ರಕಟವಾದವು.

1972ನೇ ಏಪ್ರಿಲ್ ಮಾಹೆಯ ವೇಳೆಗೆ ಬೆಂಗಳೂರು ಶಾಖಾಕಾರ್ಯಲಯದವರು ತ್ಯಾಗರಾಜನಗರದಲ್ಲಿ ಕೊಂಡಿದ್ದ ಸ್ಥಳದಲ್ಲಿ ಸ್ವಂತ ಕಟ್ಟಡವನ್ನು ನಿರ್ಮಿಸಲಾಯಿತು. ಶ್ರೀಶ್ರೀಗಳವರ ನಿವಾಸವು ಇಲ್ಲಿ ನೆಲೆಸಿತು. ಈ ವರ್ಷದ **ಶಂಕರಸಪ್ತಾಹ** ಮಹೋತ್ಸವವೂ ಇಲ್ಲಿಯೇ ನಡೆಯಿತು. ಈ ನಡುವೆ ಶ್ರೀಶ್ರೀಗಳವರು ಕೊಳ್ಳೆಗಾಲ ಹಾಗೂ ತುಮಕೂರುಗಳಲ್ಲಿ ಪ್ರವಾಸಮಾಡಿ ವೇದಾಂತಪ್ರವಚನಗಳನ್ನು ನಡೆಯಿಸಿದರು. ಅವರೊಡನೆ ಪಂಡಿತರೂ ಭಾಗವಹಿಸಿದ್ದರು. 1972ನೇ ಏಪ್ರಿಲ್ 7ರಂದು ಆಗಿನ ಕೇಂದ್ರಸರ್ಕಾರದ ರೈಲ್ವೆಮಂತ್ರಿಗಳಾಗಿದ್ದ ಶ್ರೀಕೆಂಗಲ್ ಹನುಮಂತಯ್ಯನವರು ಶ್ರೀಶ್ರೀಗಳವರನ್ನು ಭೇಟಿಮಾಡಿ ಪ್ರಸಾದ ಮಂತ್ರಾಕ್ಷತೆಗಳನ್ನು ಸ್ವೀಕರಿಸಿದರು. ಈ ಅವಧಿಯಲ್ಲಿ **ಭಕ್ತಿಚಂದ್ರಿಕೆ, ಈಶಾವಾಸ್ಯೋಪನಿಷತ್** (Eng.Translation)

ಎಂಬ ಎರಡು ಗ್ರಂಥಗಳು ಪ್ರಕಟವಾದವು. ಈ ಬಾರಿಯ (1972) ಚಾತುರ್ಮಾಸ್ಯ ವ್ರತವನ್ನು ಶ್ರೀಗಳು ಬೆಂಗಳೂರಿನಲ್ಲಿಯೇ ನೆರವೇರಿಸಿದರು. ಕೆಲವು ವಿದೇಶೀಯಜಿಜ್ಞಾಸುಗಳು ಗುರುಗಳ ಸನ್ನಿಧಿಗೆ ಬಂದು ಕೆಲವು ದಿನಗಳ ಕಾಲ ಸಂಭಾಷಣೆ, ಪ್ರಶ್ನೋತ್ತರಗಳ ಮೂಲಕ ವೇದಾಂತ ವಿಚಾರಗಳನ್ನು ವಿನಿಮಯಮಾಡಿಕೊಂಡರು.

1973ನೇ ಜನವರಿ ವೇಳೆಗೆ **ಅಧ್ಯಾತ್ಮಪ್ರಕಾಶಕಾರ್ಯಾಲಯದ ಇತಿಹಾಸ**-ಎಂಬ ಗ್ರಂಥವೂ Intuition of Reality ಎಂಬ ಪುಸ್ತಕವೂ ಪ್ರಕಟವಾದವು. **ತೈತ್ತಿರೀಯೋಪನಿಷತ್ ಭಾಷ್ಯ, ಮಾನಸೋಲ್ಲಾಸ** - ಎಂಬ ಗ್ರಂಥಗಳು ಏಪ್ರಿಲ್ ತಿಂಗಳಲ್ಲಿ ಪ್ರಕಟವಾದವು. 8-2-73ರಂದು ಬೆಂಗಳೂರು ಕಾರ್ಯಾಲಯದ ಉಪನ್ಯಾಸಮಂದಿರದ ನಿರ್ಮಾಣಕ್ಕೆ ಗುದ್ದಲಿಪೂಜೆ ನೆರವೇರಿತು. ಅನಂತರ ಅಧ್ಯಾತ್ಮ ಪ್ರಕಾಶಕಾರ್ಯಾಲಯವು ಜನ್ಮವನ್ನು ತಾಳಿ ಐವತ್ತು ವರ್ಷಗಳು ಪೂರೈಸಿದ ನೆನಪಿಗಾಗಿ ಬೆಂಗಳೂರು ಕಾರ್ಯಾಲಯದಲ್ಲಿ ಮೇ 13 ರಿಂದ ಮೂರು ದಿನಗಳ ಕಾಲ ಸುವರ್ಣ ಮಹೋತ್ಸವವನ್ನು ವಿಜೃಂಭಣೆಯಿಂದ ನೆರವೇರಿಸಲಾಯಿತು. ಈ ಸಂದರ್ಭದಲ್ಲಿ ವಿಶೇಷ ಸಂಸ್ಮರಣ ಸಂಚಿಕೆಯನ್ನೂ ಬಿಡುಗಡೆ ಮಾಡಲಾಯಿತು.

ತಾ. 30-7-73 ರಂದು ಅಧ್ಯಾತ್ಮಪ್ರಕಾಶ ಕಾರ್ಯಾಲಯದ ಮಹಾಶ್ರಯದಾತರೂ ಉದಾರದಾನಿಗಳೂ ಗುರುಭಕ್ತರೂ ಆಗಿದ್ದ ಶ್ರೀ **ಖೋಡೆ** ಲಕ್ಷ್ಮಣಸಾ ರವರು ನಿಧನರಾದರು. ಬೆಂಗಳೂರುಶಾಖಾಕಾರ್ಯಾಲಯದ ಸ್ಥಾಪನೆಗೂ ಬೆಳವಣಿಗೆಗೂ ಇವರು ಮುಖ್ಯ ಕಾರಣರಾಗಿದ್ದರು. ಇವರ ನಿಧನವು ಸಂಸ್ಥೆಗೆ ತುಂಬಲಾರದ ನಷ್ಟವಾಯಿತು.

ಬೆಂಗಳೂರು ಕಾರ್ಯಾಲಯದವರು 1973ನೇ ಸೆಪ್ಟೆಂಬರ್‌ನಿಂದ ಉಪನ್ಯಾಸಮಂದಿರ ಕಟ್ಟಡದ ನಿರ್ಮಾಣವನ್ನು ಕೈಗೊಂಡರು. ದಿ|| ಲಕ್ಷ್ಮಣಸಾರವರ ಪುತ್ರರುಗಳು ಈ ಮಹಾಕಾರ್ಯಕ್ಕೆ ಉದಾರವಾದ ಸಹಾಯವನ್ನು ನೀಡಿ ಪ್ರೋತ್ಸಾಹಿಸಿದರು. **ಪೂಜ್ಯಶ್ರೀ ನೂಲೇನೂರು ಶ್ರೀನಿವಾಸಮೂರ್ತಿ**ಗಳವರೂ ಗುರುಭಕ್ತಿ ಪ್ರೇರಿತರಾಗಿ ವಾಕ್ಸಹಾಯವನ್ನು ಮಾಡಿ ದಾನಿಗಳನ್ನು ಪ್ರೋತ್ಸಾಹಿಸಿದ್ದರ ಫಲವಾಗಿ ಕಟ್ಟಡನಿರ್ಮಾಣಕಾರ್ಯವು ಸುಲಭವಾಯಿತು.

ಈ ಅವಧಿಯಲ್ಲಿ ವಿಷ್ಣುಸಹಸ್ರನಾಮಭಾಷ್ಯ, ಸಂಸ್ಕೃತ ಭಾಷಾಭ್ಯಾಸ, **Upanishaic approach to Reality** ಎಂಬ ಗ್ರಂಥಗಳು ಪ್ರಕಟವಾದವು. ಬೆಂಗಳೂರು ನರಸಿಂಹರಾಜಾ ಕಾಲೋನಿ ಶ್ರೀರಾಮಮಂದಿರದ ಕಾರ್ಯದರ್ಶಿ ಶ್ರೀ ಡಿ. ಸಿ. ಅನಂತರಾಮಯ್ಯನವರು **ಶ್ರೀಶ್ರೀಗಳ ಭಗವದ್ಗೀತೋಪನ್ಯಾಸಗಳು** ಎಂಬ ಗ್ರಂಥವನ್ನು ಸಂಕ್ಷಿಪ್ತಗೊಳಿಸಿ ಎರಡು ಸಂಪುಟಗಳಲ್ಲಿ ಪ್ರಕಾಶಗೊಳಿಸಿದರು.

1968ರಲ್ಲಿ ಶ್ರೀಶ್ರೀಗಳವರಿಂದ ಸಂನ್ಯಾಸದೀಕ್ಷೆಯನ್ನು ಸ್ವೀಕರಿಸಿ ಸುಮಾರು ಆರು ವರ್ಷಗಳು ಕಾರ್ಯಾಲಯದಲ್ಲಿ ನೆಲೆಸಿದ್ದ ಶ್ರೀ **ಬ್ರಹ್ಮಾನಂದೇಂದ್ರ ಸರಸ್ವತೀಸ್ವಾಮಿಗಳು** ತಾ. 14-4-74ರಂದು ಕಾರ್ಯಾಲಯವನ್ನು ತ್ಯಜಿಸಿ ಶಿವಮೊಗ್ಗ ಜಿಲ್ಲೆ ಸಾಗರದ ಕಡೆಗೆ ದಯಮಾಡಿಸಿದರು. ಈಚೆಗೆ ಅವರು ಕಾರ್ಯಾಲಯದೊಡನೆ ಸಂಪರ್ಕವನ್ನು ಇಟ್ಟುಕೊಂಡಿಲ್ಲ.

1974ನೇ ಜೂನ್‌ವೇಳೆಗೆ 'ವಿಷ್ಣುಸಹಸ್ರನಾಮಭಾಷ್ಯ'ವು ಪ್ರಕಟವಾಯಿತು. ಡಿಸೆಂಬರ್ ಮಾಹೆಯಲ್ಲಿ ಇಂಗ್ಲಿಷ್ ಮತ್ತು ಸಂಸ್ಕೃತ ಭಾಷಾಮಯವಾದ **ಶಾಂಕರ ವೇದಾಂತ ಮೀಮಾಂಸಾ ಭಾಷ್ಯಂ**- ಎಂಬ ಗ್ರಂಥವು ಪ್ರಕಟವಾಯಿತು. ಈವರ್ಷದ ಚಾತುರ್ಮಾಸ್ಯವ್ರತವನ್ನು ಶ್ರೀಶ್ರೀಗಳವರು ಬೆಂಗಳೂರು ಕಾರ್ಯಾಲಯದಲ್ಲಿಯೇ ನೆರವೇರಿಸಿದರು.

ಅಧ್ಯಾತ್ಮಪ್ರಕಾಶ ಕಾರ್ಯಾಲಯದ '**ಪರಿಪಾಲಕ**'ರೆನಿಸಿ ಶಂಕರಭಾಗವತ್ಪಾದರ ಪ್ರಸ್ಥಾನತ್ರಯಭಾಷ್ಯಗಳನ್ನೆಲ್ಲ ಕನ್ನಡಾನುವಾದದೊಡನೆ ಪ್ರಕಟಿಸಲು ಸಂಪೂರ್ಣ ಧನಸಹಾಯವನ್ನು ನೀಡಿದ್ದ ಕರ್ನಾಟಕ ಸಿಂಹಾಸನಾಧೀಶ್ವರರೆನಿಸಿದ್ದ **ಶ್ರೀ ಜಯಚಾಮ ರಾಜೇಂದ್ರಒಡೆಯರ್‌ಬಹದ್ದೂರ್**ರವರು ತಾ. 23-9-74ರಲ್ಲಿ ದೈವಾಧೀನರಾದರು. ಇವರ ಆತ್ಮಕ್ಕೆ ಚಿರಶಾಂತಿಯನ್ನು ಕೋರಿ ಸಂತಾಪವನ್ನು ಸೂಚಿಸಲಾಯಿತು.

ತಾ. 18-12-74ನೇ ಬುಧವಾರದಂದು ಬೆಂಗಳೂರು ಶಾಖಾಕಾರ್ಯಾಲಯದವರು ನೂತನವಾಗಿ ನಿರ್ಮಿಸಿದ '**ಉಪನ್ಯಾಸಮಂದಿರ**'ದ ಪ್ರವೇಶೋತ್ಸವವು ಪೂಜ್ಯ ಶ್ರೀ ಶ್ರೀಗಳವರ ಅಮೃತಹಸ್ತದಿಂದ ನೆರವೇರಿಸಲ್ಪಟ್ಟಿತು. ಅನುಗ್ರಹ ಭಾಷಣದಲ್ಲಿ ಶ್ರೀಶ್ರೀಗಳವರು ಹೀಗೆ ಅಪ್ಪಣೆ ಕೊಡಿಸಿದರು'. "ಈ ಭವ್ಯಭವನವು ನನ್ನ ನಿಮಿತ್ತವಾಗಿ ನಿರ್ಮಾಣ ಮಾಡಲ್ಪಟ್ಟಿದೆ ಯಾದರೂ ಇದು ನನಗೊಬ್ಬನಿಗೇ ಮೀಸಲಲ್ಲ. ಇದು ಮಾನವ ಜನಾಂಗದ ಸರ್ವಸಮ್ಮತ್ರವಾದ ತತ್ತ್ವಗಳ ಸಮನ್ವಯದ ದೇವಾಲಯವಾಗಿದೆ. ಇಲ್ಲಿ ಸದಾಕಾಲವೂ **ಅಧ್ಯಾತ್ಮವಿಚಾರ, ಚಿಂತನ, ಪ್ರವಚನಾದಿಗಳು** ನಡೆಯುತ್ತಿರಬೇಕು. ಹೀಗೆ ಅಧ್ಯಾತ್ಮಸಾಹಿತ್ಯ ಸೇವೆಯನ್ನು ಮಾಡುತ್ತಾ ಈ ಸಂಸ್ಥೆಯು ಚಿರಕಾಲ ಬಾಳಲಿ" ಎಂದು ಹರಸಿದರು. ಆ ಮಹನೀಯರ ಕೃಪಾಶೀರ್ವಾದಗಳಿಂದ ಈವರೆಗೂ ಬೆಂಗಳೂರು ಶಾಖಾಕಾರ್ಯಾಲಯವು ಶುಕ್ಲಪಕ್ಷದ ಚಂದ್ರನಂತೆ ಪುರೋಭಿವೃದ್ಧಿಯನ್ನು ಹೊಂದುತ್ತಿದೆ. ಇಲ್ಲಿ ಪ್ರತಿದಿನವೂ ವೇದಾಂತಪ್ರವಚನಗಳೂ ವಿಚಾರಗೋಷ್ಠಿಯೂ ನಡೆಯುತ್ತಿದೆ. ಕಾಲಕಾಲಕ್ಕೆ ದತ್ತಿ ಉಪನ್ಯಾಸಗಳು ನಡೆಯುತ್ತಿವೆ. 1987ರಿಂದ 'ಶಂಕರಭಾಸ್ಕರ' ಎಂಬ ತ್ರೈಮಾಸಿಕ ಪತ್ರಿಕೆ ಪ್ರಕಟವಾಗುತ್ತಿದ್ದು ದೇಶ ವಿದೇಶಗಳಲೆಲ್ಲ ಹೆಸರುವಾಸಿಯಾಗಿದೆ. ಇದಕ್ಕೆ ಹದಿನೈದು ಸಾವಿರ ಜನ ಗ್ರಾಹಕರಿದ್ದಾರೆ. ವರ್ಷದಲ್ಲಿ **ರಾಮನವರಾತ್ರ, ಶಂಕರಜಯಂತಿ, ಶ್ರೀಶ್ರೀಗಳವರ ಆರಾಧನೆ, ಶರನ್ನವರಾತ್ರಿ ಶ್ರೀಶ್ರೀಗಳವರ ಜಯಂತಿ, ಗೀತಾಜಯಂತಿ** ಮುಂತಾದ ವಿಶೇಷಾನುಷ್ಠಾನಗಳೂ ನಡೆಯುತ್ತಿವೆ. ಮಹಾಜನರು

ಕಿಕ್ಕಿರಿದು ಸೇರಿ ಈ ಅನುಷ್ಠಾನಗಳ ಲಾಭವನ್ನು ಪಡೆಯುತ್ತಿದ್ದಾರೆ. ಹೀಗೆ ಬೆಂಗಳೂರು ನಗರದಲ್ಲಿ ಈ ಕಾರ್ಯಾಲಯವು ಪ್ರಮುಖ ಆಧ್ಯಾತ್ಮಿಕ ಕೇಂದ್ರವಾಗಿದೆ. ಕಳೆದ ಇಪ್ಪತ್ತು ವರ್ಷಗಳಿಂದಲೂ ಈ ಸಂಸ್ಥೆಯನ್ನು ಪುರೋಭಿವೃದ್ಧಿಯ ಮಾರ್ಗದಲ್ಲಿ ನಡೆಸುತ್ತಿರುವ ಶ್ರೀಶ್ರೀಸದ್ಗುರುಗಳ ಸಾಕ್ಷಾತ್ ಶಿಷ್ಯರಾದ **ಆಧ್ಯಾತ್ಮವಿದ್ಯಾಪ್ರವೀಣ, ವೇದವಿದ್ಯಾಭೂಷಣ. ವೇ|| ಕೆ. ಜಿ ಸುಬ್ರಾಯಶರ್ಮ**ರು ಆಶ್ರಮದ ಜೀವಾಳವಾಗಿದ್ದಾರೆ. ಈ ಅಭ್ಯುದಯವೆಲ್ಲಕ್ಕೂ ಶ್ರೀಶ್ರೀಗಳವರ ಕೃಪಾನುಗ್ರಹವೇ ಕಾರಣವಾಗಿದೆ ಎಂದು ತಿಳಿಸಲು ಸಂತೋಷವಾಗುತ್ತದೆ.

## ಶ್ರೀಶ್ರೀಗಳವರ ಮಹಾನಿರ್ಯಾಣ :

ಪೂಜ್ಯಶ್ರೀಗಳವರು 1975ನೇ ಜನವರಿ ಮಾಹೆಯಿಂದ ಸಂಪೂರ್ಣವಾಗಿ ದೇಹಾಲಸ್ಯಕ್ಕೆ ಒಳಗಾಗಿ ಪಾಠಪ್ರವಚನಗಳು, ಬರವಣಿಗೆ, ಉಪನ್ಯಾಸಾದಿಗಳು ಮುಂತಾಗಿ ಎಲ್ಲಾ ಚಟುವಟಿಕೆಗಳನ್ನೂ ನಿಲ್ಲಿಸಿದರು. ಶ್ರೀಮತಿ ಮತ್ತೂರು ಲಕ್ಷ್ಮೀದೇವಮ್ಮನವರು ಗುರುಗಳ ಬಳಿಯಲ್ಲಿಯೇ ಇದ್ದುಕೊಂಡು ಸಂಪೂರ್ಣ ಸೇವಾಕಾರ್ಯಗಳನ್ನು ನಿರ್ವಹಿಸುತ್ತಿದ್ದರು. 'ಅಧ್ಯಾತ್ಮಪ್ರಕಾಶ' ಪತ್ರಿಕೆಯ ಲೇಖನಗಳ ಸಿದ್ಧತೆ, ಪ್ರಕಟನೆಯ ಜವಾಬ್ದಾರಿಯನ್ನೆಲ್ಲ ಹೊಳೆನರಸೀಪುರದ ಪ್ರಧಾನಕಾರ್ಯಾಲಯದ ಪಂಡಿತರಾದ **ವೇ|| ಲಕ್ಷ್ಮೀನರಸಿಂಹ ಮೂರ್ತಿ**ಗಳಿಗೇ ವಹಿಸಿಬಿಟ್ಟರು. ಬೆಂಗಳೂರು ಕಾರ್ಯಾಲಯಕ್ಕೆ ಕಳೆದ ಹದಿನೈದು ವರ್ಷಗಳಿಂದಲೂ ತಮ್ಮಲ್ಲಿಯೇ ವಿದ್ಯಾಭ್ಯಾಸಮಾಡಿ ಸಂಸ್ಥೆಯ ಜವಾಬ್ದಾರಿಗಳನ್ನೆಲ್ಲ ಅರಿತಿದ್ದ **ಶ್ರೀ ಕೆ. ಜಿ. ಸುಬ್ರಾಯಶರ್ಮ**ರನ್ನು ತಾ. 1-4-75ರಿಂದ ಪೂರ್ಣಕಾಲದ ಪಂಡಿತರನ್ನಾಗಿ ನೇಮಿಸಿ ಸಂಸ್ಥೆಯ ಆಡಳಿತ ಜವಾಬ್ದಾರಿಯನ್ನೂ ಅವರಿಗೆ ವಹಿಸಿದರು. ಅವರ ಸಹಾಯಕ್ಕಾಗಿ ಒಂದು ಕಾರ್ಯಕಾರಿಸಮಿತಿಯನ್ನೂ ನೇಮಿಸಿದರು.

ಸುಮಾರು ಎರಡು ವರ್ಷಗಳಿಂದಲೂ ತಮ್ಮ ಸನ್ನಿಧಿಯಲ್ಲಿದ್ದು ವಿರಕ್ತರಾಗಿ ಸಂನ್ಯಾಸವನ್ನು ಬಯಸಿದ್ದ **ಶ್ರೀ ಬಿ.ಕೆ. ಲಕ್ಷ್ಮೀನಾರಾಯಣ** ಎಂಬವರಿಗೆ ತಾ. 10-3-75ರಂದು ಶ್ರೀಶ್ರೀಗಳವರು ಸಂನ್ಯಾಸದೀಕ್ಷೆಯನ್ನು ನೀಡಿ 'ಶ್ರೀನಿತ್ಯಾನಂದೇಂದ್ರ ಸರಸ್ವತೀ' ಎಂಬ ಯೋಗಪಟ್ಟವನ್ನು ಅನುಗ್ರಹಿಸಿದರು. ಈ ಮಹನೀಯರು ಶ್ರೀಶ್ರೀಗಳವರ ಸನ್ನಿಧಿಯಲ್ಲಿಯೇ ಉಳಿದುಕೊಂಡರು.

1975ನೇ ವರ್ಷದ ಶಂಕರ ಸಪ್ತಾಹ ಮಹೋತ್ಸವವೂ ಬೆಂಗಳೂರಿನಲ್ಲಿಯೇ ಶ್ರೀಶ್ರೀಗಳವರ ಸನ್ನಿಧಿಯಲ್ಲಿಯೇ ನಡೆಯಿತು. ಆದರೆ ದೈಹಿಕ ಅಶಕ್ತತೆಯಿಂದ ಉತ್ಸವದಲ್ಲಿ ಶ್ರೀಗಳವರು ಭಾಗವಹಿಸಲಿಲ್ಲ. ಬರುಬರುತ್ತಾ ಶ್ರೀಗಳವರ ದೇಹಸ್ಥಿತಿಯು ಕುಗ್ಗುತ್ತಾ ಬಂದಿತು. ವೈದ್ಯರುಗಳು ಏನೂ ಪರಿಹಾರವನ್ನು ಕಂಡುಕೊಳ್ಳಲಾಗಲಿಲ್ಲ. ಯಾರನ್ನೂ ಗುರುತು ಹಿಡಿಯಲೂ

ಶ್ರೀಗಳಿಗೆ ಸಾಧ್ಯವಾಗುತ್ತಿರಲಿಲ್ಲ. ಸಂಪೂರ್ಣವಿಶ್ರಾಂತಿಯಲ್ಲಿರುತ್ತಿದ್ದರು. ಶ್ರೀಮತಿ ಲಕ್ಷ್ಮೀದೇವಮ್ಮನವರು ಹಗಲು-ರಾತ್ರೆಗಳಲ್ಲಿ ನಿಷ್ಠೆಯಿಂದ ಸೇವೆಯನ್ನು ಸಲ್ಲಿಸುತ್ತಿದ್ದರು.

**ಶ್ರೀರಾಕ್ಷಸನಾಮಸಂವತ್ಸರದ ಆಷಾಢಬಹುಳ ತ್ರಯೋದಶೀ ಮಂಗಳವಾರ** (5.8.1975) ಬೆಳಗ್ಗೆ 10-05ಕ್ಕೆ ಬೆಂಗಳೂರು ಕಾರ್ಯಾಲಯದಲ್ಲಿ ಪೂಜ್ಯಗುರುಗಳು ತಮ್ಮ ಭೌತಿಕದೇಹವನ್ನು ತ್ಯಜಿಸಿ ಅಖಂಡಜ್ಯೋತಿಯಲ್ಲಿ ಲೀನವಾದರು. ಆವೇಳೆಗೆ ಸುಮಾರು ಮೂವತ್ತು ದಿನಗಳಿಂದಲೂ ಕೇವಲ ಒಂದು ಲೋಟದಷ್ಟು ಹಾಲಿನಿಂದ ಪ್ರಾಣಧಾರಣೆಮಾಡಿ ಕೊಂಡಿದ್ದರು. ಶ್ರೀಗಳವರು ಬ್ರಹ್ಮೀಭೂತರಾದ ಕೂಡಲೆ ಮುಖ್ಯಸ್ಥರಿಗೆಲ್ಲ ವರ್ತಮಾನವನ್ನು ತಿಳಿಸಲಾಯಿತು. ಅಂತ್ಯದರ್ಶನಕ್ಕಾಗಿ ಭಕ್ತಾದಿಗಳು ಗುಂಪುಗುಂಪಾಗಿ ನೆರೆದರು. ಸಂಜೆ 5 ಘಂಟೆಯವರೆಗೂ ಭಕ್ತರುಗಳು ಬರುತ್ತಲೇ ಇದ್ದರು. ಅನಂತರ ಪೂರ್ವನಿಯೋಜಿತ ಕಾರ್ಯಕ್ರಮದಂತೆ ಶ್ರೀಶ್ರೀಗಳವರ ಪಾರ್ಥಿವಶರೀರವನ್ನು ಹೊಳೆನರಸೀಪುರದಲ್ಲಿರುವ ಪ್ರಧಾನ ಕಾರ್ಯಾಲಯದಲ್ಲಿ ಶ್ರೀದಿಗ್ವಿಜಯರಾಮ ದೇವಾಲಯದ ಎಡಭಾಗದಲ್ಲಿ ಮಹಾಸಮಾಧಿ ಮಾಡಲು ಬೆಂಗಳೂರಿನಿಂದ ಹೊಳೆನರಸೀಪುರಕ್ಕೆ ಒಯ್ಯಲು ಪುಷ್ಪಗಳಿಂದ ಅಲಂಕೃತವಾದ ಜೀಪಿನಲ್ಲಿ ಪದ್ಮಾಸನದಲ್ಲಿ ಕೂಡಿಸಲಾಯಿತು. ಬೆಂಗಳೂರು ಭಕ್ತರಿಂದ ಬೀಳ್ಕೊಟ್ಟನಂತರ ಭಕ್ತರಿಂದ ಕೂಡಿದ ವಿಶೇಷ ಬಸ್ಸುಗಳು, ಕಾರುಗಳಿಂದ ಹಿಂಬಾಲಿಸಲ್ಪಟ್ಟವಾಹನವು ರಾತ್ರಿ 11-30ರ ವೇಳೆಗೆ ಹೊಳೆನರಸೀಪುರದ ಪವಿತ್ರ ಹೇಮಾವತೀ ತೀರವನ್ನು ತಲುಪಿತು. ಅಲ್ಲಿ ನೆರೆದಿದ್ದ ಭಕ್ತವೃಂದವೆಲ್ಲವೂ ಜಯಘೋಷ ಮಾಡುತ್ತಾ ಭಜನವೃಂದ ಸಮೇತ ಊರಿನ ಪ್ರಮುಖ ಬೀದಿಗಳಲ್ಲಿ ಮೆರವಣಿಗೆಯಾಗಿ ಬಂದಿತು. ಅನೇಕಭಕ್ತರು ಅಂತ್ಯದರ್ಶನವನ್ನು ಪಡೆದರು. ಸುಮಂಗಲಿಯರು ಆರತಿಯನ್ನು ಬೆಳಗಿದರು. ಪುಷ್ಪವೃಷ್ಟಿಯನ್ನು ಕರೆದರು. ಶ್ರೀಶ್ರೀಗಳವರ ಶರೀರವನ್ನು ಕುಳ್ಳಿರಿಸಿದ್ದ ಭಂಗಿಯಂತೂ ಅವರು ಉಪನ್ಯಾಸ ಮಾಡುತ್ತಾ ಜೀವಂತವಾಗಿ ಕುಳಿತಿರುವಂತೆಯೇ ಕಾಣುತ್ತಿತ್ತು. ಹೀಗೆ ಸಾಗಿದ ಮೆರವಣಿಗೆಯು ಮಧ್ಯರಾತ್ರಿಯ ಅನಂತರ ಕಾರ್ಯಾಲಯವನ್ನು ತಲುಪಿತು. ಕಾರ್ಯಾಲಯದ ಮುಖ್ಯಸಭಾಂಗಣದ ವರಾಂಡದಲ್ಲಿ ಬೆಳಗಿನವರೆಗೂ ಶರೀರವನ್ನು ಅಂತ್ಯದರ್ಶನಕ್ಕಾಗಿ ಇಡಲಾಗಿತ್ತು. ರಾತ್ರೆಯೆಲ್ಲ ಭಜನೆಯಾಯಿತು. ಪ್ರಾತಃಕಾಲ ಶ್ರೀಗಳವರ ಪೂರ್ವಾಶ್ರಮದ ಪುತ್ರರಾದ ವೈ. ನರಸಪ್ಪನವರು ದೀಕ್ಷಾವಿಸರ್ಜನ ಪೂರ್ವಕ ನದೀಸ್ನಾನವನ್ನು ಮಾಡಿಕೊಂಡು ಬ್ರಾಹ್ಮಣರೊಡಗೂಡಿ ಗಂಗೆಯನ್ನು ತಂದರು. ಅನಂತರ ಮಂತ್ರಪಠನ ಪೂರ್ವಕ ಸಾಲಗ್ರಾಮ-ಶಿವಲಿಂಗಗಳನ್ನು ಸಮೀಪದಲ್ಲಿಟ್ಟು ಪೂಜೆಯನ್ನು ನೆರವೇರಿಸಲಾಯಿತು. ಸಮಾಧಿಸ್ಥಳವನ್ನು ಮುಂದಾಗಿಯೇ ಗೊತ್ತುಮಾಡಲಾಗಿತ್ತು. ಶಾಸ್ತ್ರೋಕ್ತ ರೀತಿಯಿಂದ ಬ್ರಾಹ್ಮಣರು ಗರ್ತ(ಗುಂಡಿ)ವನ್ನು ಸಂಸ್ಕರಿಸುತ್ತಿದ್ದಂತೆಯೇ ಅಲ್ಲಿ ಜಲೋದ್ಭವವಾಯಿತು. ಇದೊಂದು ಆಶ್ಚರ್ಯದ ಸಂಗತಿಯಾಗಿತ್ತು. ವಿಧಿಗಳು ಮುಗಿದ ಅನಂತರ ಪಾರ್ಥಿವ ಶರೀರವನ್ನು ಗುಂಡಿಯೊಳಕ್ಕೆ ಇಳಿಸಲಾಯಿತು. ತಲೆಯಮೇಲೆ ತೆಂಗಿನ ಕಾಯಿಯನ್ನು ಒಡೆಯಲಾಯಿತು.

ಕರ್ಪೂರ, ಸುಗಂಧ ದ್ರವ್ಯಗಳು, ಉಪ್ಪು ಮುಂತಾದವುಗಳನ್ನು ಶರೀರದ ಸುತ್ತಲೂ ತುಂಬಿ 6ನೇ ತಾರೀಖು ಬೆಳಗ್ಗೆ 10 ಘಂಟೆಗೆ ಸರಿಯಾಗಿ ಮಹಾಸಮಾಧಿಯನ್ನು ಮಾಡಲಾಯಿತು. ಅನಂತರ ಮಂಗಳಾರತಿಯನ್ನು ಮಾಡಿ ಭಕ್ತರನ್ನೆಲ್ಲ ಬೀಳ್ಕೊಡಲಾಯಿತು.

7ನೇ ತಾ. ಗುರುವಾರದಿಂದ ಪ್ರತಿದಿನವೂ ಬೆಳಗ್ಗೆ ಮಹಾಸಮಾಧಿಯ ಸನ್ನಿಧಿಯಲ್ಲಿ ಋತ್ವಿಜರುಗಳಿಂದ ವೇದಪಾರಾಯಣ, ಶಂಕರಭಾಷ್ಯಪಾರಾಯಣ, ಗೀತಾವಿಷ್ಣುಸಹಸ್ರನಾಮ ಪಠನ, ಭಜನೆ, ಜಪಾದಿಗಳನ್ನು ನಡೆಸಲಾಯಿತು. ಸಮಾಧಿಯ ಮೇಲೆ ಸಾಲಗ್ರಾಮಾದಿಗಳನ್ನಿರಿಸಿ ಪಂಚಾಮೃತಾಭಿಷೇಕ, ರುದ್ರಾಭಿಷೇಕ ಪೂಜಾರಾಧನೆಗಳನ್ನು ನಡೆಸಲಾಗುತ್ತಿತ್ತು. ಈ ನಡುವೆ 9ನೇ ತಾ. ಶ್ರೀ ದಿಗ್ವಿಜಯ ರಾಮದೇವರಿಗೂ ಮಹಾಭಿಷೇಕ, ಪೂಜಾದಿಗಳನ್ನು ನಡೆಸಲಾಯಿತು.

15ನೇ ತಾ. ಶುಕ್ರವಾರದಿಂದ ವಿಶೇಷ ಆರಾಧನಾ ಕಾರ್ಯಗಳು ಆರಂಭವಾದವು. ಆ ದಿನ ಶ್ರೀನರಸಪ್ಪನವರು ತಮ್ಮ ಬ್ರಹ್ಮೀಭೂತ ಪೂಜ್ಯಪಿತೃಗಳಿಗೆ ನಡೆಯಿಸಬೇಕಾದ ಶ್ರಾದ್ಧಕರ್ಮವನ್ನು ಶಾಸ್ತ್ರೋಕ್ತ ರೀತಿಯಿಂದ ನಡೆಯಿಸಿದರು. ಮಾರನೆಯ ದಿನ ಹದಿಮೂರು ಜನ ಬ್ರಾಹ್ಮಣರನ್ನು ಆಹ್ವಾನಿಸಿ ನಾರಾಯಣಬಲಿ ಎಂಬ ಕರ್ಮವನ್ನು ವಿಧಿವತ್ತಾಗಿ ನಡೆಸಲಾಯಿತು. 17ನೇ ತಾ. ಭಾನುವಾರ ಸಹಸ್ರನಾಮಾರ್ಚನ - ಗಾಯತ್ರೀಹೋಮಗಳನ್ನೂ ನಡೆಸಲಾಯಿತು. ಮಹಾಸಮಾಧಿಯನ್ನು ಚಪ್ಪರ, ತಳಿರುತೋರಣಗಳಿಂದ ಅಲಂಕರಿಸಲಾಗಿತ್ತು.

18ನೇ ತಾ. ಸೋಮವಾರ ಮುಖ್ಯಾರಾಧನಾಕಾರ್ಯಕ್ರಮಗಳು ಬೆಳಗಿನಿಂದ ಆರಂಭವಾದವು. ಈವೇಳೆಗೆ ಪರಸ್ಥಳದ ಗುರುಭಕ್ತರುಗಳಿಗೆಲ್ಲ ಆಹ್ವಾನವನ್ನು ನೀಡಲಾಗಿತ್ತು. ಶ್ರೀಶ್ರೀಗಳವರ ಪೂರ್ವಾಶ್ರಮದ ಬಂಧುವರ್ಗದವರನ್ನೂ ಕಾರ್ಯಾಲಯದ ಅಭಿಮಾನಿಗಳನ್ನೂ ಹಾಗೂ ದಾನಿಗಳನ್ನೂ ಆಹ್ವಾನಿಸಲಾಗಿತ್ತು. ವಿಶೇಷವಾಗಿ ಬೆಂಗಳೂರಿನ ಖೋಡೆ ಕುಟುಂಬವರ್ಗದವರನ್ನೂ, ಪೂಜ್ಯಶ್ರೀ ನೂಲೇನೂರು ಶ್ರೀನಿವಾಸಮೂರ್ತಿಗಳನ್ನೂ ಆಹ್ವಾನಿಸಲಾಗಿತ್ತು. ಗುರುಭಕ್ತರಾದ **ಶ್ರೀಖೋಡೆ ರಾಮಚಂದ್ರಸಾರವರು ಮತ್ತು ಅವರ ಸೋದರರು** ಈ ದಿನದ ಸಂತರ್ಪಣೆ, ಅನ್ನದಾನ, ಆರಾಧನಾದಿಗಳು ಎಲ್ಲಾ ಖರ್ಚುಗಳನ್ನೂ ವಹಿಸಿಕೊಂಡು ಉತ್ತಮ ವ್ಯವಸ್ಥೆಗಳನ್ನು ಮಾಡಿದ್ದರು. ಬೆಳಗ್ಗೆ 9 ಘಂಟೆಯಿಂದ ವೈದಿಕರುಗಳು ವೇದಪಾರಾಯಣಾದಿಗಳನ್ನು ಆರಂಭಿಸಿ ಆರಾಧನೆಯ ಕಾರ್ಯವು ಪೂರೈಸುವವರೆಗೂ ಭಾಗವಹಿಸಿದ್ದರು. ಪುರೋಹಿತರ ನೇತೃತ್ವದಲ್ಲಿ ಆಹ್ವಾನಿತರಾಗಿದ್ದ 16ಜನ ಬ್ರಾಹ್ಮಣರನ್ನು ಕುಳ್ಳಿರಿಸಿ ಶಾಸ್ತ್ರೋಕ್ತವಾಗಿ ವೈದಿಕಾರಾಧನೆಯನ್ನು ನೆರವೇರಿಸಿ ದಾನಧರ್ಮಗಳನ್ನೂ ನಡೆಸಲಾಯಿತು. ಅನಂತರ ಮಹಾಮಂಗಲಾರತಿಯಾಗಿ ತೀರ್ಥವನ್ನು ಕೊಡಲಾಯಿತು. ಮಧ್ಯಾಹ್ನ 11-30ರಿಂದ ಆರಂಭವಾದ ಅನ್ನದಾನವು ನಿರಂತರವಾಗಿ ಸಂಜೆ 5 ಘಂಟೆಯವರೆಗೂ ನಡೆಯಿತು. ಸುಮಾರು ಹನ್ನೆರಡು ಸಹಸ್ರಜನರು ಜಾತಿಮತಭೇದವಿಲ್ಲದೆ ನೆರೆದಿದ್ದು

ಗುರುಪ್ರಸಾದವನ್ನು ಸ್ವೀಕರಿಸಿದರು. ಹೀಗೆ ಈ ಮಹಾತ್ಕಾರ್ಯವು ಗುರುಗಳ ಕೃಪಾಕಟಾಕ್ಷದಿಂದ ಸಾಂಗವಾಗಿ ನೆರವೇರಿತು.

ಶ್ರೀಶ್ರೀಗಳವರು ಬ್ರಹ್ಮೀಭೂತರಾದ ಅನಂತರ ಮಹಾಸಮಾಧಿಯ ಸ್ಥಳದಲ್ಲಿ ಒಂದು ವರ್ಷದ ಅವಧಿಯಲ್ಲಿಯೇ ಒಂದು **'ಗುರುಮಂದಿರ'**ವನ್ನು ನಿರ್ಮಾಣಮಾಡಲಾಯಿತು. ಅಲ್ಲಿ ಶ್ರೀಶ್ರೀಗಳವರ ಲೈಫ್ ಸೈಜಿನ ಒಂದು ಭಾವಚಿತ್ರವನ್ನು ಸ್ಥಾಪಿಸಲಾಯಿತು. ಮುಂದೆ ಭಕ್ತರುಗಳ ನೆರವಿನಿಂದ ಒಂದು ಜಿಂಕುಷೀಟಿನ ಬಯಲು ಉಪನ್ಯಾಸಮಂದಿರವನ್ನೂ ನಿರ್ಮಿಸಲಾಯಿತು. ಪ್ರತಿದಿನವೂ, ಶ್ರೀದಿಗ್ವಿಜಯ ರಾಮದೇವರ ಪೂಜಾಕಾಲಕ್ಕೆ ಶ್ರೀಶ್ರೀಮಹಾಸಮಾಧಿ ಪೂಜಾದಿಗಳು ನೆರವೇರುತ್ತಲಿವೆ. ಪ್ರತಿವರ್ಷವೂ ಆಷಾಢಬಹುಳ ತ್ರಯೋದಶಿಯಂದು ಶ್ರೀಶ್ರೀಗಳವರ ವಾರ್ಷಿಕಾರಾಧನೆಯು ವಿಜೃಂಭಣೆಯಿಂದ ನಡೆಯುತ್ತಿದೆ. ಆ ದಿನ ಅನ್ನದಾನವನ್ನೂ ನಡೆಯಿಸಲಾಗುತ್ತಿದೆ. ವಾರ್ಷಿಕವಾಗಿ ನಡೆಯುವ ವೇದಾಂತ ಸಪ್ತಾಹಗಳು ಗುರುಗಳ ಮಹಾಸಮಾಧಿಯ ಸಮ್ಮುಖದಲ್ಲಿಯೇ ನಡೆಯುತ್ತವೆ. ಆಗಾಗ್ಗೆ ಭಕ್ತರುಗಳು ದಯಮಾಡಿಸಿ ಗುರುಪಾದಪೂಜೆಗಳನ್ನು ನಡೆಸುತ್ತಾರೆ. ಗುರುಗಳು ಜೀವಂತರಾಗಿದ್ದಾಗ ದಯಪಾಲಿಸಿದ ಅಪ್ಪಣೆಯಂತೆ **ಶಂಕರಭಾಷ್ಯ ಪಾಠಪ್ರವಚನಗಳನ್ನೂ** ನಡೆಸಲಾಗುತ್ತಿದೆ. ಹೀಗೆ ಯಥಾಶಕ್ತಿಯಾಗಿ ಗುರುಸೇವೆಯನ್ನು ಈವರೆಗೂ ನಡೆಯಿಸಿಕೊಂಡು ಬರಲಾಗುತ್ತಿದೆ.

ಸದ್ಗುರುಗಳ ಚರಿತ್ರೆಯನ್ನು ಈಗ ಮುಕ್ತಾಯಮಾಡಲಾಗುವದು. ಈ ಮಹನೀಯರ ತಪಃಫಲವಾಗಿ 1920ರಲ್ಲಿ ಸ್ಥಾಪಿತವಾಗಿ ಈವರೆಗೂ ಪುರೋಭಿವೃದ್ಧಿ ಮಾರ್ಗದಲ್ಲಿ ನಡೆದು ಬರುತ್ತಿರುವ ಅಧ್ಯಾತ್ಮ ಪ್ರಕಾಶಕಾರ್ಯಾಲಯವು ಈಚೆಗೆ ಬೆಂಗಳೂರಿನ ಶಾಖೆಯಂತೆಯೇ ಮೈಸೂರು ಹಾಗೂ ಶಿವಮೊಗ್ಗ ಜಿಲ್ಲೆ ಮತ್ತೂರುಗಳಲ್ಲಿಯೂ ತನ್ನ ಶಾಖೆಗಳನ್ನು ಸ್ಥಾಪಿಸಿ ನಡೆಯಿಸುತ್ತಿದೆ. ಮಹಾಜನರು ಈ ಸಂಸ್ಥೆಗೆ ದಯಮಾಡಿಸಿ ಇಲ್ಲಿನ ಕೆಲಸಕಾರ್ಯಗಳನ್ನು ವೀಕ್ಷಿಸಿ ಪ್ರೋತ್ಸಾಹಿಸಬೇಕೆಂದು ಬೇಡಲಾಗಿದೆ.

ಈ ಗುರುಚರಿತಾಮೃತ ಗ್ರಂಥವನ್ನು ಭಕ್ತಿಪೂರ್ವಕವಾಗಿ ಗುರುಚರಣಾರವಿಂದಗಳಲ್ಲಿಯೇ ಸಮರ್ಪಿಸಲಾಗಿದೆ.

॥ ಹರಿಃ ಓಮ್ ॥

**ಅನುಭವಗಮ್ಯ ವೇದಾಂತ** (ಅಧ್ಯಾತ್ಮವಿದ್ಯೆಯನ್ನು ಅನುಷ್ಠಾನದಿಂದ - ಮನಗಾಣಬೇಕೆಂದು ತಿಳಿಸುವ ೫೫ ಉಪನ್ಯಾಸಗಳು) ೪೦ರೂ.

**ಜೀವಂತವೇದಾಂತ** (ವೇದಾಂತವು ಜೀವಂತದರ್ಶನವೆಂಬ ಉಪದೇಶಗಳು) ೪೦ರೂ.

**ಶಂಕರತತ್ತ್ವ** (ಶಂಕರಭಾಷ್ಯಗಳಿಂದ ಆರಿಸಿದ ವಚನಗಳ ವಿವರಣೆ) ೧೫ರೂ.

**ಭಕ್ತಿಚಂದ್ರಿಕೆ** (ನಾರದ ಭಕ್ತಿಸೂತ್ರಗಳ ವಿಸ್ತಾರವಾದ ವ್ಯಾಖ್ಯಾನ) ೩೦ರೂ.

**ಭಗವದ್ಗೀತೆಯ ಉ/ಗಳು** (೨೦೦ ಉಪನ್ಯಾಸಗಳ ರೂಪವಾದ ಗೀತೆಯವಿವರಣೆ) ೧೫೦ರೂ.

**ಭಗವದ್ಗೀತಾರ್ಥಸರ್ವಸ್ವ** (ವಿಮರ್ಶಾತ್ಮಕವಾದ ಗೀತೆಯ ಮಹಾಪ್ರಬಂಧ) ೬೦ರೂ.

**ಪರಮಾರ್ಥಚಿಂತಾಮಣಿ** (ಅವಸ್ಥಾತ್ರಯದ ಮೂಲಕ ವಿಶ್ವದ ತಿರುಳನ್ನು-ಗೊತ್ತುಪಡಿಸುವ ಕ್ರಮ) ೨೫ರೂ.

**ಶಂಕರಸಿದ್ಧಾಂತ** (ಮೂಲಾವಿದ್ಯಾ ವಿಮರ್ಶೆ) ೧೦ರೂ.

**ಶ್ರೀಶಂಕರಭಗವತ್ಪಾದವೃತ್ತಾಂತಸಾರಸರ್ವಸ್ವ** (ಜೀವನಚರಿತ್ರೆ-ಉಪದೇಶಗಳು) ೧೦೦ರೂ.

**ವೇದಾಂತದರ್ಶನ** (ಮೂವರು ಆಚಾರ್ಯರ ಮತದಂತೆ ಬ್ರಹ್ಮಸೂತ್ರಗಳ ಪರಿಚಯ) ೫ರೂ.

**ಶಂಕರವೇದಾಂತಪ್ರಕ್ರಿಯೆ** (ಶಂಕರವೇದಾಂತಕ್ಕೆ ಮಾರ್ಗದರ್ಶಿನಿ) ೧೦ರೂ.

**ಶಂಕರವೇದಾಂತಸಾರ** (೨೮ ಪಾಠಗಳ ರೂಪದಲ್ಲಿ ಶಂಕರಭಾಷ್ಯ ವಾಕ್ಯಗಳ-ಮೂಲಕ ವೇದಾಂತಸಾರವನ್ನು ಹಿಂಡಿಟ್ಟಿದೆ) ೩೫ರೂ.

**ಉಪನಿಷತ್ ಮಂಜರಿಗಳು** (ಈಶ, ಕೇನ, ಕಠ, ಪ್ರಶ್ನ, ಮುಂಡಕ ಮತ್ತು ಮಾಂಡೂಕ್ಯ ತಾತ್ಪರ್ಯರೂಪದ ವಿವರಣೆ) -

**ಗೌಡಪಾದಹೃದಯ** (ಮಾಂಡೂಕ್ಯಕಾರಿಕೆಗಳ ವ್ಯಾಖ್ಯಾನ) ೧೦೦ರೂ.

**ವೇದಾಂತಾರ್ಥಸಾರಸಂಗ್ರಹ** (ಪ್ರಶ್ನೋತ್ತರರೂಪದ-ಬ್ರಹ್ಮಸೂತ್ರ ಭಾಷ್ಯದ ಕೈಪಿಡಿ) ೧೫ರೂ.

**ಅಧ್ಯಸ್ಮ ಭಾಷ್ಯಾರ್ಥ ವಿಮರ್ಶೆ** (ಪ್ರಶ್ನೋತ್ತರ ರೂಪ) ೧೫ರೂ.

**ಅಧ್ಯಾತ್ಮಗೀತಾವಳಿ** (ಶ್ರೀಶ್ರೀಗಳವರು ರಚಿಸಿದ ಹಾಡುಗಳು) ೨೦ರೂ.

**ಸಂಸ್ಕೃತಪ್ರಥಮಪುಸ್ತಕಮ್** (ಸ್ವಯಂಭೋಧಿನೀ, ಕನ್ನಡ ಲಿಪಿ) ೧೫ರೂ.

**ಸಂಸ್ಕೃತಭಾಷಾಭ್ಯಾಸ** (ಭಾಗ ೧,೨,೩, ಸಂಸ್ಕೃತವನ್ನು ಕಲಿಯುವವರಿಗೆ ಪಠ್ಯಪುಸ್ತಕ ೬೫ರೂ.

**ಶ್ರೀಭಾಷ್ಯ ಮತ್ತು ವೇದಾರ್ಥಸಂಗ್ರಹ** (ಶ್ರೀರಾಮಾನುಜರು ಉಪನಿಷತ್ತುಗಳಿಗೆ ೨೫ರೂ.
ಸಂಗ್ರಹವಾಗಿ ಬರೆದಿರುವ ವ್ಯಾಖ್ಯಾನ- ಕನ್ನಡಾನುವಾದದೊಡನೆ) ೨೦ರೂ.

**ತತ್ತ್ವಸಮಾಸ** (ಸಾಂಖ್ಯ ಸೂತ್ರಗಳ ವಿವರಣೆ) ೫ರೂ.

**ಧಮ್ಮಪದ** (ಬೌದ್ಧದರ್ಶನದ ವಿಮರ್ಶೆ-ಶ್ಲೋಕ, ಅನುವಾದ) (ಮುದ್ರಣದಲ್ಲಿದೆ)

(ಮುಂದುವರೆದಿದೆ)

## ಸಂಸ್ಕೃತ ಗ್ರಂಥಗಳು

| | |
|---|---|
| ವೇದಾಂತಬಾಲಬೋಧಿನೀ | ೫ರೂ. |
| ಶುದ್ಧಶಾಂಕರಪ್ರಕ್ರಿಯಾಭಾಸ್ಕರಃ ಭಾಗ ೧,೨,೩, | ೧೫ರೂ. |
| ಪಂಚಪಾದಿಕಾಪ್ರಸ್ಥಾನಮ್ (ಪ್ರಥಮ ಭಾಗ) | ೧೦ರೂ. |
| ವೇದಾಂತವಿದ್ವದ್ಗೋಷ್ಠೀ (ಸಂಸ್ಕೃತ ಮತ್ತು ಇಂಗ್ಲಿಷ್) | ೧೦ರೂ. |
| ತೈತ್ತಿರೀಯೋಪನಿಷದ್ಭಾಷ್ಯಮ್ (ಭಾಗ ೧,೨,೩) | ೪೦ರೂ. |
| ಗೀತಾಶಾಸ್ತ್ರಾರ್ಥವಿವೇಕಃ | ೧೦ರೂ. |
| ಸುಗಮಾ | ೮ರೂ. |
| ಸೂತ್ರಭಾಷ್ಯಾರ್ಥತತ್ತ್ವವಿವೇಚನೀ (ಭಾಗ ೧,೨,೩) | ೪೦ರೂ |
| ವೇದಾಂತಪ್ರಕ್ರಿಯಾಪ್ರತ್ಯಭಿಜ್ಞಾ | ೧೦೦ರೂ. |
| ಮಾಂಡೂಕ್ಯರಹಸ್ಯವಿವೃತಿಃ | - |
| ಕ್ಲೇಶಾಪಹಾರಿಣೀ | - |
| ಪಾರಮಹಂಸ್ಯಮೀಮಾಂಸಾ | ೪೦ರೂ. |

## ಇಂಗ್ಲೀಷ್ ಪುಸ್ತಕಗಳು

| | |
|---|---|
| **NARADA'S APHORISMS ON BHAKTI *** | Rs. 10 |
| **SHANKARA'S CLARIFICATION OF VEDANTIC CONCEPTS** | Rs. 25 |
| **AVASTHATRAYA** Or The Unique Method of Vedanta | Rs. 05 |
| **SALIENT FEATURES OF SHANKARA VEDAANTA** | Rs. 25 |
| **MISCONCEPTIONS ABOUT SHANKARA VEDAANTA*** | - |
| **THE VISION OF ATMAN** | Rs. 15 |
| **THE INTUITION OF REALITY** | Rs. 20 |
| **UPANISHADIC APPROACH TO REALITY *** | - |
| **THE SCIENCE OF BEING** | Rs. 10 |
| **ESSAYS ON VEDAANTA** | Rs. 25 |
| **SUDDHA SHAANKARA PRAKRIYA BHAASKARA** (Part I,II,III) | Rs. 15 |
| **ISAAVAASYOPANISHAD*** | - |
| **SHANKARA'S SUTRA-BHASHYA** (Self Explained Sanskrit & English) | Rs. 15 |

(* Under Printing)